REGISTERED No. M. 2266 || ಶೇಷಗಿರಿಪುರ ಪಂಚಾಂಗಾಯಾರ್ಯ: ಪ್ರಸೀದಂತು || REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೇಶ್ವರ ॥
ಪಂಚಾಚಾರಾನಿಯಾಮಕರ್ ಪರಿಲಸತ್ಕಾರ್ತೀರ್ಥೋದ್ಧಾರಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ ೧೧ ಆಣೆ ಪ್ರತಿ ಪ್ರತಿಗೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೩] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಜನವರಿ ೧೯೪೦ [ಸಂಚಿಕೆ ೩೬

೨೪ ನೆಯ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಅಧ್ಯಕ್ಷರಾದ ಶ್ರೀ॥ ಮುದವೇಡ ಕೃಷ್ಣರಾಯರು ಮಾಡಿದ ಭಾಷಣದ ಒಂದು ಭಾಗ

ಈಗ ೨೫-೩೦ ವರ್ಷಗಳ ಹಿಂದಿನ ಮಾತು ಬೇರೆ ಯಾತ್ತು ಆಗ ಸುಶಿಕ್ಷಿತರು ಸಹ 'ಕನ್ನಡವಲ್ಲೇನಿದೆ? ಹಳೆಯು ಹುಣೇಹಣ್ಣು!' ಎಂದು ಹೀಗಳೆಯುತ್ತಿದ್ದರು ಈಗ ಕಾಲ ಬದಲಾವಣೆಯಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಗಮೇಲೆ ಕನ್ನಡ ನಾಡಿನ ಸುಶಿಕ್ಷಿತ ವರ್ಗವು ತನ್ನ ಸಾಹಿತ್ಯ ಸಂಪತ್ತನ್ನು ಕಂಡು ಯು ಸಂತಸಗೊಂಡು ಕೈಲಾದಮಟ್ಟಿಗ ಒನ್ನು ಅಭಿವೃದ್ಧಿಗೊಳಿಸಲು ಹಾತೊರೆಯುತ್ತಿದೆ ಕನ್ನಡ ಸಂಸ್ಕೃತಿಯು, ಸಾಹಿತ್ಯದ ವೈಶಾಲ್ಯವನ್ನು ನೋಡಿದರೆ ಕ್ರಿಸ್ತಶಕಕ್ಕಿಂತ ಮೊದಲೇ ಕನ್ನಡ ಜನಾಂಗವು ತನ್ನ ದಂದು ಸರ್ವಾನ್ಯಾಪ್ತಿಯಾದ ಸಾಹಿತ್ಯವನ್ನು ನಿರ್ಮಿಸಿ ಎಂದನ್ನು ಹಬ್ಬಿಸುತ್ತ ಬಂದಿರಬೇಕೆಂದು ಗೊತ್ತಾಗುತ್ತದೆ ಇ ತಕ ಸಾಹಿತ್ಯ ವೃಕ್ಷವು ಆನೇಕ ಶತಮಾನಗಳ ವರೆಗೆ ತನ್ನ ವಿವಿಧೋಪಶಾಖೆಗಳನ್ನು ವಿಸ್ತಾರವಾಗಿ ಹಬ್ಬಿಸುತ್ತ ಸುಮಾರು ಹದಿನಾರು ಶತಕಗಳ ವರೆಗೆ ಪೆಂಪನ್ನೂ ನಾಂಪನ್ನೂ, ಕಂಪನ್ನೂ ಎಲ್ಲಕಡೆಗೆ ಬೀರುತ್ತ ಅತ್ಯಂತ ವೈಭವದಿಂದ ತಲೆಯೆತ್ತಿ ನಿಂತಿತೆಂಬುದು ಎಲ್ಲರಿಗೂ ಗೊತ್ತಿದೆ. ಕನ್ನಡ ಸಾಹಿತ್ಯವು, ಸಂಸ್ಕೃತಿಯು ಇಡೀ ಹಿಂದೂಸ್ಥಾನಕ್ಕೆ ಒಂದು ಬಗೆಯ ಸೌಭಾಗ್ಯವೆನ್ನು ಉಂಟುಮಾಡಿರುವುದು ನಿರ್ವಿವಾದವಾಗಿ ಕನ್ನಡಕ್ಕೆ ಬರುತ್ತಿದೆ

ಸಾವಿರ ಹದಿನೈದುನೂರು ವರ್ಷಗಳ ವರೆಗೆ ಹೀಗೆ ಬೆಳೆಯುತ್ತ ಬಂದಿದ್ದ ಕನ್ನಡ ಸಾಹಿತ್ಯಕ್ಕೆ ಕನ್ನಡಿಗರ ಸಾಮ್ರಾಜ್ಯವಾದ ವಿಜಯನಗರದ ವಿನಾಶದೊಂದಿಗೆ ಪ್ರತ್ಯಕ್ಷ ತಿಳಿಗಾಲವೇ ಪ್ರಾಪ್ತವಾಯಿತು ದೇಶದಲ್ಲಿ ಅನಾಯಕತ್ವವುಂಟಾಯಿತು ಇಂತಹ ವಿಪತ್ಸಾವಸ್ಥೆಯಲ್ಲಿ ಕೂಡ ತಲೆಯೆತ್ತಿ ನಿಂತ ಕನ್ನಡರಾಜ್ಯಗಳಾದ ಮೈಸೂರು, ಸುರಪುರ, ಕೆಳದಿ, ಬದನೂರು ಮೊದಲಾದ ಪ್ರಭುಗಳಲ್ಲಿ ಕನ್ನಡ ಸಾಹಿತ್ಯಕ್ಕೂ ಸಂಸ್ಕೃತಿಗೂ ತಮ್ಮನ್ನಾಗಿ ಆಶ್ರಯ ದೊರಕಿತು ಆದರೆ ಮುಂದೆ ಪರಕೀಯ ಬ್ರಿಟಿಷರ ದಾಳಿಯು ನಡೆದಂತೆಲ್ಲ ಕನ್ನಡ ಭಾಷಣ ಸಾಹಿತ್ಯಕ್ಕೂ ಪ್ರತ್ಯಕ್ಷ ಆಳಿಗಾಲವೇ ಬಂದು ಬಿಟ್ಟಿತು ಕನ್ನಡನಾಡು ಹರಿದು ಹತ್ತಿಪ್ಪತ್ತು ಬೇರೆಬೇರೆ ಪರಭಾಷೆಯ ರಾಜಪತ್ತೆಗಳಿಗೆ ಒಳಗಾಗಿ ಒಂದು ಬಗೆಯ ಸುಧಾರಿಸಿದ ಗುಲಾಮಗಿರಿಗೆ ಸಿಕ್ಕಿ ಕಟು ಅನುಭವವನ್ನು ಕಂಡಿತು. ಇಂಗ್ಲೀಷು ಭಾಷೆಯ ಶಿಕ್ಷಣ ಪೆಚ್ಚಾದಂತೆಲ್ಲ ಕನ್ನಡ ಆಳಿಯುತ್ತ ಒಂತು

ಸೈಸೂರಿನಲ್ಲಿ 'ಕಮಿಷನ್' ಆಡಳಿತ ಸ್ಥಾಪಿತವಾದಮೇಲೆ ಇಂಗ್ಲೀಷಿಗೆ ಪ್ರಧಾನಪಟ್ಟ ದೊರಕಿತು ತಮಿಳು ತೆಲುಗರಿಗೆ ಸಹ ಪುರಸ್ಕಾರವಿತ್ತು ಆದರೆ ಕನ್ನಡವು ನೂಲಳಿಗೆ ಬಿತ್ತು 'ಕಮಿಷನ್' ಆಡಳಿತ ಮುಗಿದಮೇಲೆ ಶ್ರೀಜ ವರಾಜೇಂದ್ರ ಒಡೆಯರವರಿಗೆ ಮತ್ತೆ ರಾಜ್ಯಾಧಿಪತ್ಯವಾಯಿತು ಅದರೂ ಪರಭಾಷೆಯ ಪ್ರಭಾವ ಕಡಿಮೆ ಯಾಗಿಲ್ಲ ಆಮೇಲೆ ಸರ್ ಎಂ ವಿಶ್ವೇಶ್ವರಯ್ಯನವರು ದಿವಾನರಾದರು ಕೂಡಲೆ ಬ್ರಿಟಿಷ್ ಬದಲಾವಣೆಗಳಾದವು ಆದರೂ 'ಸೈಸೂರಿನ ಭಾಷೆ ವೈಸೂರಿನಲ್ಲಿ' ಎಂಬ ಅವಶ್ಯಕ ಪರಿವರ್ತನೆಯಾಗಿ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಿ ೨೪ ವರ್ಷಗಳಾದವು ಮಹಾರಾಜರಿಂದ, ರಾಜಪರಿವಾರದಿಂದ ಪ್ರಭುತ್ವವಿಂದ ಪರಿತ್ಯಾಗ ಹೊಂದಿಯೇ ಆಶ್ರಯ ದೊರೆಯುತ್ತಿದೆ ವಿದ್ಯಾಸೀರಿದಲ್ಲಿ, ವಿದ್ಯಾಗಂಗೆ ವಿವಾಗದಲ್ಲಿ ಕನ್ನಡದ ಆಶ್ರಯವಿಲ್ಲ ಸ್ಥಾನವೂ ದೊರೆತಿದೆ ಆದರೆ ರಾಜ್ಯ ವ್ಯವಹಾರದಲ್ಲಿ ಇಂಗ್ಲೀಷೇ ಅರಸುತನಸ ಗದ್ದುಗೆಯನ್ನೇರಿ ತನ್ನ 'ಆತ್ತೆ' ತನದ ಅಧಿಕಾರ ನಡೆಸುತ್ತಿದೆ! ನಿಜಾಮರ ರಾಜ್ಯದಲ್ಲಿ ಉರ್ದುವು 'ರಾಜ್ಯಾಂಗ ವ್ಯವಹಾರದ ಬಾಷೆಯಾಗಿದೆ, ವಿದ್ಯಾಸೀರಿದ ಭಾಷೆಯಾಗಿದೆ ಸೈಸೂರಿನ ಸುಹಾರಾಜರ ಹಾಗೂ ಶ್ರೀಜೆಗಳ ತಾಯಿನುಡಿ ಕನ್ನಡಕ್ಕೆ ಮೈಸೂರಿನ ರಾಜ್ಯದಲ್ಲಿ ಈ ಮನ್ನಣೆಯಾತ್ತೆ ಇರಬಾರದು?

ರಾಜರೂ ಪ್ರಜೆಗಳೂ ಕನ್ನಡಿಗರೇ ಆಗಿರುವ ಮೈಸೂರಿನಲ್ಲಿಯೇ ಈ ಮರಣಸ್ಥಿತಿಯಾದ ಬಳಿಕ ಮಿಕ್ಕ ಪರಭಾಷೆಯ ರಾಜರ ಅಧೀನದಲ್ಲಿರುವ ಕನ್ನಡನಾಡು ಭಾಗಗಳ ಅವಸ್ಥೆಯಂತೂ ವರ್ಣಿಸಲಸಳವಾಗಿದೆ ೧೬ ಚಿಕ್ಕ ದೊಡ್ಡ ರಾಜ್ಯಗಳಲ್ಲಿ ಕನ್ನಡನಾಡು ಹರಿದಿದೆ ಎಲ್ಲಿಲ್ಲಿ ಎಷ್ಟೆಷ್ಟು ಮಂದಿ ಕನ್ನಡಿಗರಿದ್ದಾರೆ ನೋಡಿ

ಸಂಸ್ಥಾನ	ಕನ್ನಡಿಗರು
ಆಂಕಲಕೋಟೆ	೫೦,೦೦೦
ಜಿಂಧ್	೬,೫೪೭
ಕುರ ಂದವಾಡ [ಸೀನಿಯರ್]	೧೬,೭೩೨
,, [ಜೂನಿಯರ್]	೧೫,೯೪೯
ಕೊಲ್ಹಾಪುರ	೧,೪೭,೨೧೪
ಜಮಖಂಡಿ	೪೫,೭೧೬
ಜತ್ತಿ	೩೫,೪೯೪
ಮಿರಜ್ [ಸೀನಿಯರ್]	೨೪,೦೬೨
, [ಜೂನಿಯರ್]	೧೩,೩೭೦
ಮೆ ಘೋಳ	೫೫,೮೦೯
ರಾಮದುರ್ಗ	೩೧,೫೧೫
ಸವಣೂರು	೧೭,೧೭೬
ಸಾಂಗಲಿ	೯೪,೭೫೭
ಸೊಂಡೂರು	೬,೫೧೧
ಪುದುಕೋಟೆ	೫,೧೧೪
ಪೈದರಾಬಾದ	೩೨,೦೨೩೫೯

ಈ ಯಾವ ಸಂಸ್ಥಾನದಲ್ಲೂ ಕನ್ನಡಕ್ಕೆ ಶಕ್ಯ ಮಾನ್ಯತೆಯಿಲ್ಲ ಎನ್ನೋಣಕಿಲ್ಲ ಕನ್ನಡ ಶಾಲೆಗಳೇ ಇಲ್ಲ. ಕೆಲವೆಡೆ ಇದ್ದರೂ ಅವುಗಳಿಗೆ ಬೆಲೆಯಿಲ್ಲ ಮುಸಲ್ಮಾನ ಪ್ರಜೆಗಳ ಸಂಖ್ಯೆಯು ಕನ್ನಡ ಪ್ರಜೆಗಳಿಗಿಂತ ಎಷ್ಟೋ ಕಡಿಮೆ ಇದ್ದಲ್ಲಿಯೂ ಅವರಿಗೆ ಉರ್ದುಶಾಲೆಗಳವೆ ಈಗ ಸಂಸ್ಥಾನಗಳಲ್ಲಿ ಜನಜಾಗೃತಿಯುಂಟಾಗಿರುವುದರಿಂದ ಪರಿಸ್ಥಿತಿ ಕೊಂಚ ಸುಧಾರಿಸುತ್ತ ಬಂದಿದೆ. ಸಾಂಗಲಿ ಪ್ರಭುಗಳು ಬಹಳ ಪ್ರಗತಿಪರರು ಶಿರಹಟ್ಟಿಯ ಪಹಿಷಿ ಅಶ್ವತ್ಥರಾಯರನ್ನು ಮಂತ್ರಿಮಂಡಲಕ್ಕೆ ಸೇರಿಸಿ ಕೂಡಿದ್ದಾರೆ ಅವರು ಅಲ್ಲಿ ಶಿಕ್ಷಣ ಸಚಿವರು ಇದ್ದಂತೆ ಶಿರಹಟ್ಟಿಯ ರಾಜ್ಯ ವ್ಯವಹಾರ ಭಾಷೆ ಕನ್ನಡವೇ ಆಗಬೇಕೆಂದು ಅಪ್ಪಣೆಮಾಡಿದ್ದಾರೆ ಇತರ ಸಂಸ್ಥಾನಗಳ ಕನ್ನಡಿಗರೂ ಸಹ ತಮ್ಮ ಬೇಡಿಕೆಗಳನ್ನು ತಮ್ಮ ಪ್ರಭುಗಳ ಅವಗಾಹನೆಗೆ ತಂದು ಸಂಘಾವಿಸಿಕೊಳ್ಳಲು ಯತ್ನಿಸಬೇಕು

ಇನ್ನು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಸೇರಿರುವ ಕನ್ನಡ ಪ್ರದೇಶಗಳನ್ನು ಕೊಂಚ ನೋಡೋಣ ಅವು ಮುಂಬೈ, ಮದರಾಸು ಪ್ರಾಂತ್ಯಕ್ಕೂ ಮತ್ತು ಮೈಸೂರಿನ ರೆಸಿಡೆಂಟ್ ಆಡಳಿತಕ್ಕೂ ಸೇರಿವೆ ಒಟ್ಟಿನಲ್ಲಿ ನೋಡಿದರೆ ಬ್ರಿಟಿಷ್ ಕರ್ನಾಟಕವೆಂದು ಒಂದು ಒಗೆಯಂತೆ ಕರೆಯಲಾಗುತ್ತಿರುವ ಕನ್ನಡನಾಡಿನಲ್ಲಿ ಇಂದಿಗೂ ಸುಮಾರು ೧೨ ಲಕ್ಷ ಕನ್ನಡಿಗರಿಗೆ ತಾಯಿನುಡಿಯ ಶಿಕ್ಷಣವಿಲ್ಲ

ಇಂಗ್ಲೀಷಿನ ಮಿಜಾರ ಹೇಳಿಯಾಯಿತಷ್ಟೆ ಇದಕ್ಷಿಣದ ಇತರ ನೆರೆನುಡಿಗಳು ಸಹ ಕನ್ನಡದ ಬೆಳವಣಿಗೆಗೆ ಕಂಟಕ ಪ್ರಾಯವಾಗಿವೆ ಪುರಾರಿಯು ನಮ್ಮ ಕನ್ನಡಕ್ಕೆ ಕಾಲ್ತೊಡಕಾಗಿ ಕುಳಿತಿದೆ ಮರಾಠ ಅಧಿಕಾರಿಗಳು ಅವರ ಜನರಿಗೆ ಹೆಚ್ಚು ಹೆಚ್ಚಿನ ಕಾಲೆಗಳನ್ನು ತೆರೆಯುತ್ತ ಬಂದರು. ಮುಂಬೈ ಕರ್ನಾಟಕದಲ್ಲಿ ಕನ್ನಡವನ್ನು ತುಳಿದು ಮರಾಠಿ ಬೆಳೆದಂತೆ ಬಳ್ಳಾರಿ ಜಿಲ್ಲೆಯಲ್ಲಿ ತೆಲುಗು ಹಬ್ಬಿತು. ಕನ್ನಡದ ಪ್ರಚಾರಕ್ಕಾಗಿ ಧರ್ಮಾವರಂ ಕೃಷ್ಣಮಾಚಾರ್ಯರು ಬಹಳವಾಗಿ ದುಡಿದರು

ಭಾಷೆಗೆ ಹೆಚ್ಚಳಕೊಟ್ಟು ಹುಯಲು ಎಬ್ಬಿಸಬೇಡಿ— ಎಂದು ಅನೇಕರು ನಮಗೆ ಬೋಧಿಸುತ್ತಾರೆ ಕರ್ನಾಟಕದ ಭಾಷೆ ಕನ್ನಡವೆಂದು ಕಾಂಗ್ರೆಸ್ಸು ಒಪ್ಪಿದ್ದರೂ ಕಾಂಗ್ರೆಸ್ಸಿನ ಸಾರ್ವಜನಿಕ ಕಾರ್ಯಗಳಲ್ಲಿ ಮರಾಠಿ, ತೆಲುಗುಗಳ ಪ್ರಭಾವ ಹೆಚ್ಚಾದುದುಂಟು, ಇನ್ನೂ ಆಗುವ ಹುದು "ನಾಡು ಹೆಚ್ಚಿಸಲು! ಅವರು ಮುಂದೆ ಮಡಿಯಲಿ ಪಾದೇನು!" ಎನ್ನುವವರಿಗೆ ಜೋಡಿಸಿ ಕರಸೆನ್ನದೆ

[೬ ನೆಯ ಪುಟವನ್ನು ನೋಡಿ]

ಶ್ರೀ ಜಗದ್ಗುರು ಪೆಂಡಿತಾರಾಧ್ಯ ವ್ಯಾಯಾಮಮಂದಿರ ಭೋದ್ಘಾಟನೆ

ತಾ॥ ೧೦ ೧೨ ೩೯ ನೇ ಸದರಿ ಗ್ರಾಮದ ಜಟ್ಟಿಗಳು ತಮ್ಮ ವ್ಯಾಯಾಮದ ಅಭಿವೃದ್ಧಿಗೆ ಹೋಬಳಿಗೇ ಶ್ರೀಗಳವರನ್ನು ಬರಮಾಡಿಕೊಂಡಿದ್ದರು ಆಗ ಶ್ರೀಗಳು ಜಟ್ಟಿಗಳಿಗೆ "ಬ್ರಹ್ಮಚರ್ಯ" ವಿಷಯಕವಾಗಿ ೧ ಘಂಟೆಯ ವರೆಗೆ ಉಪದೇಶಿಸಿದರು

ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಂ ದಯಾ ಕ್ಷಮಾ ।
ದಾನಂ ಪೂಜಾ ಜಪೋ ಧ್ಯಾನಮಿತಿ ದಶ್ಯಕ ಸಂಗ್ರಹಃ ॥

ಎಂಬ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಆಜ್ಞಾನುಸಾರವಾಗಿ ಧರ್ಮಸಂಸ್ಥಾಪನೆಯ ಬಗ್ಗೆ ಒಂದು ಮುಖ್ಯಾಂಶವಾಗಿದೆ

ನ ತಪಸ್ಸಿನ ಇಂದ್ರಿಯನಿಗ್ರಹಕ್ಕೆ ಸಮಂ ಕಲ್ಪ
ಊರ್ಧ್ವರೇತಸಾಂ ಬ್ರಹ್ಮಚರ್ಯಕ್ಕೆ ಸಮಂ ಸಾಧನ

ಪೋರಿತಪಸ್ಸಿಗಿ ತಲಗಿ ಒಬ್ಬ ಸತ್ಯವ್ರತ ಶ್ರೀಪ ತಪಸ್ಸು ಊರ್ಧ್ವರೇತಸ್ಸನ್ಯಾಸಿಯ ಪ್ರತಿಕ್ಷ ತಿಪಸ್ಸು ಹೆಗಿರತ ಮರುಸ್ಯಾಕ್ಕಲ್ಲ

ಧೃಢಬಲ ಕ್ಷತ್ರಿಯಃಬು ಬ್ರಹ್ಮತೇಜೂ ಬಲ ಬಲಂ

ಕ್ಷತ್ರಿಯಬಲಕ್ಕೆ ದಿಕ್ಕಾರವಿರಲಿ ಬ್ರಹ್ಮತೇಜಸ್ಸಿನ ಬಲವೇ ಬಲವು ಎಂಬ ವಿಷಯವನ್ನೂ, 'ಒಂದೇ ಮಾರ್ಗದಿ ದ್ವಂದ್ವವು ಬರುವುದು ಒಂದು ಬಿಟ್ಟೊಂದು ತಡೆದರೆ ಇಂದುಧರ ತಾ ಮುಂದೆ ಒಂದಕ್ಕು ಸರ್ವಜ್ಞ' ರೀತೋಮೊತ್ತಗಳೆರಡೂ ಒಂದೇಮಾರ್ಗದಿ ಬರುವುವು ಮೊತ್ತವನ್ನು ಚಿಟ್ಟಿ ಕೇತಸ್ಸನ್ನು ತಡೆದರೆ ಶ್ರೀ ಶಿವನು ಪ್ರಸನ್ನನಾಗುವನು, ಎಂಬುದನ್ನೂದಾಹರಿಸಿ, ರಾಮ ಪತ್ನಿಯನ್ನು ಶೋಧಿಸುವ ಸಾಹಸವು ಅನೇಕ ಬಲಿಷ್ಠ ವಾನರರಿಂದಾಗಲಿಲ್ಲ, ಬ್ರಹ್ಮಚರ್ಯಗರಿಷ್ಠನಾದ ಹನುಮಂತನೇ ವಿಶಾಲವಾದ ಸಮುದ್ರವನ್ನು ನೆಗೆದು ಶೋಧಿಸಿದನು ಲಕ್ಷ್ಮಣನು ವರಿಷ್ಠಾಹತಿಯಾದಾಗ್ಗೆ ಸಂಜೀವನವನ್ನು ಈ ಹನುಮಂತನ ತಂದು ಲಕ್ಷ್ಮಣನನ್ನು ಬದುಕಿಸಿದನು ಭೀಷ್ಮನು ಸರ್ವರಲ್ಲಿಯೂ ಬಲಿಷ್ಠನಾಗಲು ಬ್ರಹ್ಮಚರ್ಯವೇ ಕಾರಣವು ಶುಕಮುನಿಯು ಸರ್ವಜ್ಞನಾಗಲು ಬ್ರಹ್ಮಚರ್ಯವೇ ಮೂಲವಾಗಿದೆ ಪರಶೇಶವಪ್ಪ ಹೇಗಿ ನನ್ನ ಹಿಂದೂ ಧರ್ಮದ ಬೀಜವನ್ನು ಬಿತ್ತಿ ಬರುವಂದಕ್ಕೆ ವಿವೇಕಾನಂದಗಳ್ದಿದ್ದ ಬ್ರಹ್ಮಚರ್ಯವೇ ಮುಖ್ಯವು ನಮ್ಮ ಮತಾಚಾರ್ಯರೆಲ್ಲರೂ ಬ್ರಹ್ಮಚಾರಿಗಳೇ ಆಗಿದ್ದಾರೆ ಆಚಾರ್ಯರ ದಿವ್ಯ ಶಕ್ತಿಪ್ರಸ್ಫುಲ್ಲ ಭೂಮಿಂಡಲದಲ್ಲಿ ಹರಡಲಿಕ್ಕೆ ಕಾರಣರಾದ ಪೂ॥ ಶ್ರೀ ಕಾಶೀನಾಥಶಾಸ್ತ್ರಿಗಳವರೂ ಸಹ ಬ್ರಹ್ಮಚಾರಿಗಳೇ ಆಗಿದ್ದಾರೆ ಬ್ರಹ್ಮಚರ್ಯದಿಂದ ಸರ್ವವೂ ಸಾಧ್ಯವಾಗುವದು ಜಗತ್ತಿನಲ್ಲಿ ಸುಪ್ರಸಿದ್ಧ ವಿಲ್ಲ ಯಿದ್ದಾಗ್ಯಗ್ಯಾರಾದ, ಗಾಮಾ ನೊದಲಾದವರು ಕೂಡ ಬ್ರಹ್ಮಚರ್ಯದಿಂದಲೇ ಪ್ರಸಿದ್ಧ ಪುರುಷರಾಗಿದ್ದಾರೆ. ಕೆಂಚಿತ್ ಬಲ ಬಂದಾಕ್ಷಣವೇ ದೀನಜನರನ್ನು ಗೋಳಾಡಿಸುವದು ವಿಹಿತವಲ್ಲ ಆ ಬಲವನ್ನು ಸಮಾಜಹಿತಕ್ಕೋಸ್ಕರ ಸ್ವತ ನ್ಯಯವನ್ನಡಿಪೆರು ಕಾಪ್ಪುಸ್ಸನ್ನು ಆಡುವಾಗ್ಗೆ, ವೀರಶೈವ ಜಟ್ಟಿಗಳು ಲಿಂಗವನ್ನೆಂಬಂ ತಿಗೆಯುಕೊಡದು ನಿನ್ನ ಶಕ್ತಿಗೆ ಶ್ರೀ ಶಿವಲಿಂಗಮೂರ್ತಿಯ ಶಕ್ತಿಯೂ ಬಲವನ್ನೀಯುವುದು ಯಾರಾದರೂ ಮಂತ್ರಿಸಿಕೊಟ್ಟ ಪದಕಗಳನ್ನು ನೀವು ಎಂದೂ ತಿಗೆಯುವುದಿಲ್ಲ ಅವೇ ಪ್ರಕಾರ ಶ್ರೀ ಶಿವಾವತಾರಿಗಳಾದ ಶ್ರೀ ಗುರುಮೂರ್ತಿಗಳಿಂದ ಮಂತ್ರಸಿದ್ಧಾನಾದಿಗಳಿಂದ ಧರಿಸಲ್ಪಟ್ಟ ಶ್ರೀ ಲಿಂಗಮೂರ್ತಿಯನ್ನೆಂದೂ ತಿಗೆಯಬಾರದು ಇತ್ಯಾದಿ ಅನೇಕ ಲೌಕಿಕ ಮತ್ತು ಶಾಸ್ತ್ರೀಯ ಉದಾಹರಣೆಗಳಿಂದ ಸರ್ವಜಟ್ಟಿಗಳೂ ತಲೆದೂಗುವ ಹಾಗೆ ಉಪದೇಶಿಸಿದರು ಕಡೆಗೆ ಸದರೀ ವ್ಯಾಯಾಮಮಂದಿರಕ್ಕೆ "ಶ್ರೀಜಗದ್ಗುರು ಪಂಡಿತಾರಾಧ್ಯ ವ್ಯಾಯಾಮಮಂದಿರ" ವೆಂಬ ನಾಮಕರಣವನ್ನು ಮಾಡಲಾಯಿತು ಶ್ರೀ ಜಗದಾಚಾರ್ಯರ ಮಂಗಳ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ವೀರವೈಷವಪಾಮೋನ್ನತಿಸಂಘದ ಸೇಕ್ರೆಟರಿ,
ಪಿ ಎಂ ಪ್ಯೆತ್ರೆ ಭೋರಾಮಣಿ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಅನುಷ್ಠಾನ ಮತ್ತು ಶಿವಮಹಾಪುರಾಣ ಪ್ರವಚನ ಸುಲ್ತಾನಪುರ

ಮಿರಜ ತಾಲೂಕಾ ಲಕ್ಷ್ಮೇಶ್ವರ ತಾ॥ ಸುಲ್ತಾನಪುರ ಗ್ರಾಮದ ಸಮಸ್ತ ದೈವ ಮಂಡಳಿಯವರ ಪ್ರಾರ್ಥನೆಯ ಮೇರೆಗೆ ಭಕ್ತರ ಸತ್ಸಂಕಲ್ಪವನ್ನು ನೆರವೇರಿಸಲು ಸಮರ್ಥರೂ, ಶಿವಯೋಗ ದುರೀಣರೂ, ವೈರಾಗ್ಯಶೀಲರೂ ಆಗಿರುವ ಒಂಗಳೂರು ಮಹಾಂತಿನ ಮಹಾಧ್ಯಕ್ಷ ಶ್ರೀ ಪ॥ ಬ್ರ॥ ಗಂಗಾಧರಶಿವಾಚಾರ್ಯರವರು ಸದರಿ ಗ್ರಾಮಕ್ಕೆ ಆಗಮಿಸಿರುವರು ಶ್ರೀಗಳವರ ಶಿವಪೂಜಾನುಷ್ಠಾನವು ನಿತ್ಯದಲ್ಲಿಯೂ ನಡೆಯುತ್ತಿರುವುದು ಶ್ರೀಗಳವರ ಸನ್ನಿಧಿಯಲ್ಲಿ ತಾ॥ ೩೦ ೧೧ ೩೯ ರಿಂದ ಪ್ರತಿ ನಿತ್ಯ ಸಾಯಂಕಾಲ ೬ ಘಂಟೆಯಿಂದ ೯ ಘಂಟೆ ರುವರೆಗೆ 'ಆಸ್ತಾಸಿದ್ಧಾನ್ತ ಸುರಾಣರತ್ನಂ' ಸೂಕ್ತಾಕ್ಷರ ಬಿದರೆ ಆರಾಧ್ಯ ಮರದ ವೇ॥ ಪಂ॥ ವೃಷಭಲಿಂಗಶಾಸ್ತ್ರಿಗಳವರು ಶಿವಮಹಾಪುರಾಣವನ್ನು ತಮ್ಮ ಅಸ್ಖಲಿತವಾಣಿಯಿಂದ ಬೋಧಿಸುತ್ತಿರುವರು ನಿತ್ಯವೂ ಶ್ರೀಗಳವರ ಪ್ರವಚನವೂ ಸಹ ನಡೆಯುತ್ತಿರುವದು ಈ ಸಮಯದಲ್ಲಿ ಆಕಸ್ಮಾತ್ ಸೊಲ್ಲಾಪುರದ ಮಾ॥ ಸೌ॥ ಭಾಗೀರಥಿಬಾಯಿ ಕಟಾಪ ಇವರು ಆಗಮಿಸಿ ತಾ॥ ೧೬ ಮತ್ತು ೧೭ ನೇ ದಿವಸ 'ಗುರುಭಕ್ತಿ' ಮತ್ತು "ಸ್ವಧರ್ಮ ಎಂಬ ವಿಷಯಗಳ ಮೇಲೆ ಬಹು ಮನೋಹರವಾಗಿ ಉಪನ್ಯಾಸ ಮಾಡಿದರು ಜೀವಿತ ಸಾಫಲ್ಯಕ್ಕೆ ಸಾಧನವಾಗಿರುವ ಇಂತಹ ಅನುಷ್ಠಾ ಸಿದ್ಧಿಯು ಸುಸಂಧಿಯನ್ನು ಸೇವಿಸುವದಕ್ಕೆ ಸ್ಥಳ ಹಾಗೂ ಪರಸ್ಥಳಗಳಿಂದ ಮಹಾಜನಗಳು ಆಗಮಿಸತಾಗಿ ಬಂದು ಸೇರುತ್ತಿರುವುದು ಶ್ರೀಗಳವರ ತಪಃ ಪ್ರಭಾವವೆಂದು ಬೇರೆ ಹೇಳಬೇಕಾದುದಿಲ್ಲ

ಇಂತಹ ಸುಸಮಯವನ್ನು ಕಂಡೊದೆಗಿಸಿ ಧರ್ಮೋದ್ಧಾರದ ಕೀರ್ತಿಗೆ ಪಾತ್ರರಾದ ಸುಲ್ತಾನಪುರದ ಗ್ರಾಮದ ಸಮಸ್ತ ದೈವ ಮಂಡಳಿಯವರೇ ಧನ್ಯರು! ಪ್ರತಿಯೊಂದು ಗ್ರಾಮವೂ ಸದರೀ ಸುಲ್ತಾನಪುರ ಗ್ರಾಮದ ಮಹಾ ಜನಗಳಂತೆ ತಮ್ಮ ಗ್ರಾಮದಲ್ಲಿಯೂ ಇಂತಹ ಧರ್ಮದ ಸುಗ್ಗಿಯನ್ನು ನೆರವೇರಿಸಿ ಜನ್ಮಸಾಫಲ್ಯಮಾಡಿಕೊಳ್ಳಬೇಕು ಧರ್ಮೋದ್ಧಾರಕ ಗುರುವರ್ಯವು ಸ್ವಕರ್ತವ್ಯವನ್ನು ಮುಂದುವರಿಸಿದರೆ ಶ್ರೀಜಗದ್ಗುರು ಪಂಚಾಚಾರ್ಯರ ಸಾಮ್ರಾಜ್ಯದ ಸೊಬಗನ್ನು ವರ್ಣಿಸುವವರಾರು? ಅಂತಹ ಸುಸಮಯವನ್ನು ಭಗವತ್ಪಾದರು ಕರುಣಿಸಲೆಂದು ಪ್ರಾರ್ಥಿಸುವ

ವೀರಭದ್ರಯ್ಯ ಹೊಸಮಠ
ಅಧ್ಯಕ್ಷ ಜಿ॥ ಆ॥ ರೇ॥ ವಾಚನಾಲಯ,
ಮುಳುಗುಂದ

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಗುರುವೇ ಮೋಕ್ಷಮಾರ್ಗದರ್ಶಕನು.

ವೀರಶೈವ ಮಹಾಶಯರೇ! ಮನುಷ್ಯಜನ್ಮವು ಎಲ್ಲ ಪ್ರಾಣಿಗಳಿಗಿಂತಲೂ ಶ್ರೇಷ್ಠವಾದುದರಿಂದ ಮಹಾತ್ಮರು "ದುರ್ಲಭಂ ಮಾನುಷಜನ್ಮ" ಎಂದು ಹೇಳುವರು ಮನುಷ್ಯನು ಜನ್ಮವನ್ನು ತಾಳಿದಮೇಲೆ ಮೊದಲು ಆತ್ಮೋದ್ಧಾರವನ್ನು ಮಾಡಿಕೊಳ್ಳಬೇಕು. ಆತ್ಮೋದ್ಧಾರಾಭಿಲಾಷಿಯಾದ ಮಾನವನು ಮೊದಲು ಸದ್ಗುರುವನ್ನು ಆಶ್ರಯಿಸಬೇಕು ಆದುದರಿಂದ ಮಹಾತ್ಮರು "ಆತ್ಮೋದ್ಧಾರಾಭಿಜಿಜ್ಞಾಸುಃ ಸದ್ಗುರುಂ ಚಾಶ್ರಯೇದ್ಭದ್ರಂ" ಎಂದು ಹೇಳಿರುವರು ಇದರಿಂದ ಪ್ರತಿಯೊಬ್ಬನೂ ಗುರುವನ್ನು ಆಶ್ರಯಿಸಲೇಬೇಕೆಂಯ ಸಿದ್ಧವಾಗುತ್ತದೆ ಗುರುವೆಂದರೆ ಸಾಮಾನ್ಯನಲ್ಲ! ಮಾಂಸಪಿಂಡವನ್ನು ಆಳಿದು ಮಂತ್ರಪಿಂಡವನ್ನಾಗಿ ಮಾಡುವ ಶಕ್ತಿಯು ಅವನಲ್ಲಿರುತ್ತದೆ ಗುರುವಿನ ಉಪದೇಶವಿಲ್ಲದೆ ಮೋಕ್ಷವು ದೊರೆಯುವುದಿಲ್ಲ ಕುರುಡನ ಕೈಯಲ್ಲಿ ಕನ್ನಡಿಯನ್ನು ಕೊಟ್ಟರೆ ಆ ಕುರುಡನು ತನ್ನ ಸ್ವರೂಪವನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ಸದ್ಗುರುವಿನ ಅನುಪೇಕ್ಷವಿಲ್ಲದೆ ಮೋಕ್ಷವು ಸಿಕ್ಕುವುದಿಲ್ಲ ಆದುದರಿಂದ ಶ್ರುತಿಗಳೂ ಕೂಡ "ನಗುರೋರಧಿಕಂ ನಗುರೋರಧಿಕಂ" ಎಂದು ಸಾರುತ್ತವೆ ಮೋಕ್ಷಕ್ಕೆ ಕಾರಣೀಭೂತನಾದ ಗುರುವನ್ನೂ ಸಹ ಕಲ ಜನ ಅಜ್ಞಾನಿಗಳು ನಿಂದಿಸುವರು ಗುರುನಿಂದೆಯು ಪಾಪಾಪಕರವಾದುದು ಕೆಲವರು ಅಲ್ಪವಿದ್ಯೆಯಿಂದ ಗರ್ವಿಷ್ಠರಾಗಿ ಗುರುವನ್ನು ಅಜ್ಞಾನಿಯೆಂತಲೂ, ಮತ್ತೆ ಕೆಲವರು ಜ್ಞಾನವೈರಾಗ್ಯಾದಿ ಗುಣವಿಗಿಂತಲೂ ತಾವೇ ಅಧಿಕವಾದ ಜ್ಞಾನವೈರಾಗ್ಯವುಳ್ಳವರೆಂತಲೂ ಮನಬಂದಂತೆ ನಿಂದಿಸುವರು ಶಾಂತಂ ಪಾಪಂ! ಭೋ ನಿಂದಕರೇ! ಕರ್ಣಾಮೃತ ಕ್ಷತ್ರಿಯನಾಗಿದ್ದರೂ ಕೂಡ ಬ್ರಾಹ್ಮಣನೆಂದು ಗುರುವಿಗೆ ಸುಳ್ಳು ಹೇಳಿದುದರಿಂದ ಯುದ್ಧದಲ್ಲಿ ಅಸ್ತ್ರಗಳ ಮಂತ್ರವನ್ನು ತಿಳಿಯದೆ ಗುರು ಶಾಪದಿಂದ ಮರಣಕ್ಕೀಡಾದನು. ಈ ಕಲಿಯುಗದಲ್ಲಿ ಗುರುಮಹತ್ವವನ್ನು ತಿಳಿಯದ ಅಜ್ಞಾನಿಗಳು ಗುರುವನ್ನು ಮನಬಂದಂತೆ ನಿಂದಿಸುವುದನ್ನು ನೋಡಿದರೆ ಈ ನಿಂದಕರು ಮುಂದಿನ ಜನ್ಮದಲ್ಲಿ ಕ್ರಿಮಿಕೀಟಗಳಾಗಿ ಹುಟ್ಟುವರೆಂಬುದನ್ನು ಸೆರಗಿನಲ್ಲಿ ಗಂಟುಹಾಕಿಕೊಳ್ಳಲಿ

ಮನಸಾ ಕರ್ಮಣಾ ವಾಚಾ ಗುರೋಃ ಕ್ರೋಧಂ ನಕಾರಯೇತ್ ।
ತಸ್ಯ ಕ್ರೋಧೇನ ಸಕ್ಯಂತಿ ಆಯುಃಶ್ರೀಜ್ಞಾನಸಕ್ಕೃಯಾಃ ॥

ಸದ್ಗುರುವಿಗೆ ಮನಸ್ಸಿನಿಂದಾಗಲಿ, ಕಾರ್ಯದಿಂದಾಗಲಿ, ಮಾತಿನಿಂದಾಗಲಿ ಕ್ರೋಧವನ್ನುಂಟುಮಾಡುವರು ಒಂದು ಪಕ್ಷ ಕ್ರೋಧವನ್ನುಂಟುಮಾಡಿದರೆ ಆ ಮನುಷ್ಯನ ಆಯುಷ್ಯ, ಸಂಪತ್ತು, ಜ್ಞಾನ, ಸತ್ಕ್ರಿಯೆ ಇವೆಲ್ಲವೂ ನಾಶವಾಗುತ್ತವೆ ಓ ನಿಂದಕಮಹಾಶಯರೇ! ನಿಮ್ಮ ನಿಂದೆಯಿಂದ ಗುರುವಿನ ಕೀರ್ತಿಯು ಕಡಿಮೆಯಾಗದೆ ಇನ್ನೂ ಹೆಚ್ಚುತ್ತದೆಂಬುದನ್ನು ಮರೆಯಬೇಡಿರಿ ಗುರುವೇ ಸಕಲಸಂಪತ್ತು, ಗುರುವೇ ಮೋಕ್ಷ ಮಾರ್ಗದರ್ಶಕ, ಗುರುವೇ ತಂದೆತಾಯಿಯೆಂದು ತಿಳಿದವನಲ್ಲಿ ಅನನ್ಯ ಸಾಧಾರಣ ಭಕ್ತಿಯುಂಟಾದಾಗ ಭೈರಿ ಇಲ್ಲಿಯವರೆಗೂ ಮಾಡಿದ ಅಪರಾಧವನ್ನು ಕ್ಷಮಿಸೆಂದು ಗುರುವಿನಲ್ಲಿ ನೊರೆಯಿಡಿರಿ. ಗುರುವು ಶಾಂತಿ ಸಾಗರನೂ, ಶಿಷ್ಯವತ್ಸಲನೂ, ಕರುಣಾಮಯನೂ ಆಗಿರುವನು

ಉದಂಕನೆಂಬವನು ಗೌತಮ ಮಹರ್ಷಿಯ ಸೇವೆಯಲ್ಲಿ ನಿರತನಾಗಿ ಅಧ್ಯಯನ ಮಾಡುತ್ತಿದ್ದನು. ಅವನು ಚಿಕ್ಕವನಿರುವಾಗಲೇ ಗುರುವಿನಲ್ಲಿಗೆ ಬಂದಿದ್ದನು ಆಗ ಅವನಿಗೆ ೬೦ ವರ್ಷಗಳಾಗಿವೆ ಆದರೆ ಮಷ್ಯನ ಪರಿಜ್ಞಾನವೇ ಇಲ್ಲ ಒಂದು ದಿನ ಕಟ್ಟಿಗೆಯ ಹೊರೆಯನ್ನು ಹೊತ್ತು ತಂದು ಆಶ್ರಮದ ಹತ್ತಿರ ಹಾಕಲು ಆ ಕಟ್ಟಿಗೆಯಲ್ಲಿ ಬೆಲ್ಲಗಿರುವ ತನ್ನ ತಲೆಯು ಕೂದಲನ್ನು ನೋಡಿ ಅಳಹತ್ತಿದನು ಆಗ ಗೌತಮಮು ಬಂದು ವಿಚಾರಿಸಲು—ಗುರುದೇವಾ, ನಾನು ಇಷ್ಟು ವೃದ್ಧನಾಗುವವರೆಗೂ 'ನಿನ್ನ ಸೇವೆ ಮಾತಿದರೂ ನಿನ್ನ ಕರುಣೆಯು ಮಾತ್ರ ಅಗಲಿಲ್ಲವೆಂದು ಅಳಹತ್ತಿದನು ಆಗ ಮುನಿಯು ಉದಂಕಾ, ನಿನ್ನ ಸೇವೆಗೆ ಮೆಚ್ಚಿರುವೆನು. ನಿನ್ನ ವೃದ್ಧತ್ವವು ಹೋಗಿ ಯೌವನವು ಬರಲೆಂದು ಆಶೀರ್ವದಿಸಿದನು. ಗುರುವಿನ ಆಶೀರ್ವಾದದಂತೆ ಅವನಿಗೆ ಯೌವನವು ಬಂದಿತು. ಆದುದರಿಂದಲೇ ಮಹಾತ್ಮರು ಗುರುವನ್ನು ಕಲ್ಪವೃಕ್ಷವೆಂದು ಹೇಳುವರು. ಕಲ್ಪವೃಕ್ಷ ಸದೃಶ

ನಾದ ಗು.ರು.ಮೂರ್ತಿಯನ್ನು ಸರ್ವರೂ ಆಶ್ರಯಿಸಿ ಧನ್ಯರಾಗಬೇಕೆಂದು ಹಾರೈಕೆಯವ.

ವಿಜಗೂಡಾಸ್ವಾವಿ, ಹೊಸಪೇಟೆ
ವಾರದ ಸಂಸ್ಕೃತಪಾಠಶಾಲ,
ಸೊಲ್ಲಾಪುರ

ಶ್ರೀ ಜಗದ್ಗುರು ರೇವಣ ಸಿದ್ಧೇಶ್ವರ ಔಷಧಾಲಯ ಲಿಂಬಿ ಚಿಂಚೋಳಿ

ಸೊಲ್ಲಾಪುರ ತಾಲೂಕ ಪೈಕಿ ಲಿಂಬೀ ಚಿಂಚೋಳಿ ಗ್ರಾಮದಲ್ಲಿ ಶ್ರೀ ವೇ|| ರೇವಣಸಿದ್ಧಯ್ಯ ಎಂಬ ಮಾತೇಶ್ವರ ಮೂರ್ತಿಗಳಿದ್ದಾರೆ ಇವರ ಆ ಸ್ಥಾನದ ಹಿರಿಯ ಪರಂಪರೆಯವರು ಒಳ್ಳೇ ಗುರುಭಕ್ತರಾಗಿರುವರು ಇವರ ತಮ್ಮಂದಿರಾದ ವೇ|| ವೀರಯ್ಯ ಸಂಬಸಪ್ಪ ಶಿಲಾಮಾಸ್ತರರು, ಶ್ರೀ ಜಗದಾಚಾರ್ಯ ಕರ್ತೃತ್ವಸ್ಥ ರಕರು ಆಗಿದ್ದಾರೆ ಈ ಬಂಧುಗಳೇವರೂ ಸರೋಪಕಾರಿಗಳಾಗಿದ್ದಾರೆ. ಇವರಿಗೆ ವೀರಭದ್ರರು-ವೀರಭದ್ರೇಶ್ವರ ದೇವತೆಗಳಾಗಾಗಲಿ, ಭೂತಪಿಶಾಚಿ ನಿವಾರಣೆಗೆ ಇತರ ಜಾತೀಯ ಸಾಧು, ಮುಂತಾದವರಲ್ಲಿ ಹೋಗುವದು ಕಾಣಸವದಿಲ್ಲ ಆ ಕಾಲದಲ್ಲಿ ಶ್ರೀ ರೇವಣಸಿದ್ಧಯ್ಯ ಎಂಬವರು ಧರ್ಮಾಧಿಷ್ಠಾನದ ಆದೇಶದಲ್ಲಿ ಜೀರಾಡುವ ಕಾಲಕ್ಕೆ ಅನೇಕರು ಭೂಮಿಯಿಂದ ಧರ್ಮಾಂತರದವರಾಗಿ ಲಿಪ್ತವ್ಯ ಭಕ್ತಿಯನ್ನು ಬಿಟ್ಟು ಇವರ ಹತ್ತಿರ ಬರಲು ಆಗ್ಗೆ ಇವರು ಈ ಊರ ಗ್ರಾಮದೇವತೆಯಾದ ಶ್ರೀ|| ಜಿ|| ರೇವಣಸಿದ್ಧೇಶ್ವರ ನಾಮದಿಂದ ಸರ್ವರ ಮುಖಗಳನ್ನು ದೂರಮಾಡಿದರು ಈಗಲೂ ಮಾಡುತ್ತಲಿರುವರು ಇದರಿಂದ ಈ ಗ್ರಾಮದಲ್ಲಿ ಸರ್ವರ ಭಕ್ತಿಯು ಶ್ರೀ|| ರೇವಣಸಿದ್ಧೇಶ್ವರಲ್ಲಿ ನೆಲೆಗೊಂಡಿದೆ ಇಷ್ಟೇ ಅಲ್ಲ, ಮಹಮ್ಮದೀಯರೂ ಕೂಡ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಸೋಮವಾರಕ್ಕೊಮ್ಮೆ ಉಪವಾಸವನ್ನು ಮಾಡಿ, ಸೀದಾ ಸಾಮಗ್ರಿಗಳನ್ನು ಈಗಲೂ ಕೊಡುತ್ತಿರುವರು. ಶ್ರೀ ಜಗದ್ಗುರು ರೇಣುಕರ ಕೃಪೆಯಾದೀತೆಲೆ ಕೇಳುವದೇನು? "ಮಗಕಂ ಕರೋತಿ ವಾಜಾಲಂ, ಪಂಗುಂ ಲಂಘಯತೇ ಗಿರಿಂ ಎಂಬಂತೆ ಶ್ರೀ ಜಗದಾಚಾರ್ಯರ ಕೃಪೆಯಿಂದ ಈಗ ಸದರೀ ರೇಣಸಿದ್ಧಯ್ಯನವರು ಔಷಧವನ್ನು ಕೂಡು ತ್ತಿರುವರು ಇದರಿಂದ ಎಷ್ಟೋ ರೋಗಿಗಳು ನಿರೋಗಿಗಳಾಗಿದ್ದಾರೆ ಅಲ್ಲದೆ ಪ್ರಸಿದ್ಧ ವೈದ್ಯರೂ, ಡಾಕ್ಟರರೂ ಸದರೀ ರೇವಣಸಿದ್ಧಯ್ಯನವರ ಕಡೆಗೆ ಬರುತ್ತಿರುವರು

ರೇವಣಸಿದ್ಧಯ್ಯನವರು ಮೊದಲು ಒಂದು ಕಾಸನ್ನೂ ಸ್ವೀಕರಿಸುವದಿಲ್ಲ. ಗುಣಹೊಂದಿದಮೇಲೆ ಹಣವನ್ನು ಕೊಡಬೇಕಾಗುವದು. ಆ ಹಣದೊಳಗಿನ ಅರ್ಧಭಾಗವು ಶ್ರೀ|| ಜಿ|| ರೇವಣಸಿದ್ಧೇಶ್ವರ ಹೆಸರಿನಿಂದ ತೆಗೆಯಲ್ಪಡುವದು. ಈ ಕೆಳಗೆ ಕಂಡ ರೋಗಗಳಿಗೆ ದಿವ್ಯವಾದ ಔಷಧವನ್ನು ಕೊಡುವರು. ಗರ್ಮಿ, ಪರಮಾ ಮೂಲ ವ್ಯಾಧಿ, ಭಗೆಂದ್ರಿಯ, ನಾಸರು, ಗಂಡಮಾಲೆ, ಉದರ ಶೂಲೆ ಜಲರೋಗ, ಕ್ಷಯ, ಪಾಂಡು, ಗುಲ್ಮ, ಮುಂತಾದ ರೋಗಗಳಿಗೆ ರಾಮಬಾಣ ಔಷಧವು

ಶ್ರೀ ರೇವಣಸಿದ್ಧಯ್ಯನವರು ತಾ|| ೧೨ ೧೨ ೯೯ ಕೈ ಹೋಟಗಿ ಶ್ರೀಗಳ ದರ್ಶನಕ್ಕೆ ಹೋಗಿ ತಮ್ಮ ಔಷಧಾಲಯಕ್ಕೆ ಯಾವ ಹೆಸರಿಟ್ಟಿಡಬೇಕೆಂದು ಪ್ರಾರ್ಥಿಸಿ ಕೊಳ್ಳಲಾಗಿ ಶ್ರೀಗಳು "ಶ್ರೀ ಜಗದ್ಗುರು ರೇವಣ ಸಿದ್ಧೇಶ್ವರ ಔಷಧಾಲಯ" ನೆಂಬ ಶಿವಪವಿತ್ರನಾಮವನ್ನು ಇಡಬೇಕೆಂದು ಅಪ್ಪಣೆಮಾಡಿದರು ಆ ನಾಮ ದಿಂದಲೇ ಔಷಧಾಲಯವು ಉತ್ತಮ ರೀತಿಯಿಂದ ನಡೆದಿದೆ. ಪತ್ರವ್ಯವಹಾರ ಮಾಡುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

"ಶ್ರೀಜಗದ್ಗುರು ರೇವಣಸಿದ್ಧೇಶ್ವರ ಔಷಧಾಲಯ'
ಲಿಂಬಿ ಚಿಂಚೋಳಿ, ಪೋಷ್ಟ ವಳಸಂಗ ಡಿ|| ಸೊಲ್ಲಾಪುರ
ಲೇ --ಸುತ್ತಗಟ್ಟಿ ಶ್ರೀಗಳು

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯನಮಃ ॥

ಸೀಮಂತೋತ್ಸವ ಸಮಾರಂಭ, ಪೈನಾಪುರ

ತಾ|| ೫ ೧೨ ೧೯೬೯ ಸೋಮವಾರ ದಿವಸ ಶ್ರೀಮಂತ ರಾಶೀಬಾಯಿ ಭ್ರಾತಾರಸಂಗಪ್ಪ ಸವಾಯಿ ದೇಸಾಯಿ ಇವರು ವಿಜಾಪುರದಿಂದ ೨೫ ೩೦ ಜನರೊಡನೆ ತಮ್ಮ ಅಜ್ಜಾ ಗುರುಸಿದ್ಧಪ್ಪ ದೇಸಾಯಿ ಸೊನ್ನ ಇವರ ಚಿ|| ಕುಲಿ ಸೌ|| ಭಾಗೀರಥಿಬಾಯಿ ದೇಸಾಯಿ ಸೀಸ್ಥಾನ ಜೈನಾಪುರ ಇವರ ಮಂಗಲಕಾರ್ಯಾರ್ಥವಾಗಿ ಬಂದರು ಶ್ರೀಯುತ ವಯೋವೃದ್ಧರಾದ ಮೊಡ್ಡಪ್ಪ ದೇಸಾಯಿ ಇವರ ಪುತ್ರ ಚಿ|| ಸಂಗಪ್ಪ ದೇಸಾಯಿ ಜೈನಾಪುರ ಇವರ ಧರ್ಮಪತ್ನಿ ಕುಲಿ ಸೌ|| ಭಾಗೀರಥಿಬಾಯಿ ದೇಸಾಯಿ ಇವರ ಸೀಮಂತೋತ್ಸವಕಾರ್ಯವು ತಾ|| ೬-೧೨ ೬೯ ನೆಯ ಬುಧವಾರದಿವಸ ನೆರವೇರಿತು ಪೂರ್ವಪದ್ಧತಿಯಂತೆ ಮರಠಶ್ರೀಯನ್ನ, ಬರಮಾಡಿಕೊಂಡು ಶಿಷ್ಯರಾಜಸಂಗಪ್ಪ ಮೊಡ್ಡಪ್ಪ ದೇಸಾಯಿ ಇವರು ಗುರು ಗಳ ವರಕ್ಕೆ ಹೋಗಿ ಬಿನ್ನಹವನ್ನು ಮಾಡಿದರು ಜೈನಾಪುರದಲ್ಲಿರ ವಎಲ್ಲಾ ಮಾತದವರೂ ಆಮಂತ್ರಣವನ್ನ ಕೊಟ್ಟರು ನಂತ್ಯಾನವ ಪದ್ಧತಿಯ ಪ್ರಕಾರ ಅನ್ನಸಂತರ್ಪಣೆಯು ನೆರವೇರಿತು ಅನಂತರ ಸತಿಪತಿಯನ್ನು ಉಚ್ಚಾಸನದ ಮೇಲೆ ಕುಳ್ಳರಿಸಿ ಮಾತೃಶ್ರೀಯವರು ಕೆಳಹುಸಿಪ ಕುಂಕುಮ, ಶಾಲು, ಹಾರ, ತುರಾಯಿ, ಫಲಪುಷ್ಪಾ ದಿಗಳನ್ನೂ ಅನಂದದಿಂದ ಅರ್ಪಿಸಿದರು ಇದಾದಮೇಲೆ ಮುತ್ತೈದೆಯರು ಸತಿಪತಿಗಳಿಗೆ ಆರತಿಯನ್ನೆತ್ತಿ ಮಂಗಲವನ್ನು ಹಾಡಿದರು ಬಳಿಕ ಸರ್ವರಿಗೂ ತಾಂಬೂಲ ವಿಸ್ತಯೋಗವಾಗಿ ಕಾರ್ಯವು ಪೂರ್ತಿಗೊಂಡಿತು ದಂಪತಿಗಳಿಗೆ ಜಗದ್ಗುರು ಪಂಚಾಚಾರ್ಯರು ನಿತ್ಯಸುಖವನ್ನು ಕೊಡತಂದೆಯು ಪ್ರಾರ್ಥಿಸುತ್ತೇನೆ ಈ ವರ್ಷಕ್ಕೆವದಲ್ಲಿ ಗುರುಗಳ ಆಜ್ಞಾನುಸಾರವಾಗಿ ಪ್ರಭಾಪೋಷಣಕ್ಕೆ ೨೫ ರೂಪಾಯಿಗಳು ಸಮರ್ಪಿಸಲ್ಪಟ್ಟವು

ಬಸಪ್ಪ ಲಕ್ಷ್ಮಣಪ್ಪ ಬಿ| ದೇಸಾಯಿ,
ಪೈನಾಪುರ

॥ ಶ್ರೀ ಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

" ಪುರಾಣ ಸಮಾಪ್ತಿ "

ನವಲಗುಂದ ತಾ|| ಬೆಳಗಟ್ಟಿ ಗ್ರಾಮದಲ್ಲಿ ಸಮಸ್ತ ಭಕ್ತರ ಆಗ್ರಹದ ಮೇರೆಗೆ ಶೀ|| ಹಿ|| ಬ್ರ|| ಗುರುದೇವ ಶಿವಾಚಾರ್ಯ ಸ್ವಾಮಿಗಳು ಹಿರೇಮಠ ಚಿಕ್ಕಮಣ್ಣೂರ ಇವರಿಂದ ಪ್ರಾರಂಭವಾದ ಪುರಾಣವು ಮಾರ್ಗಶೀರ್ಷ ಶು|| ೫ ತಾರೀಖು ೧೫ ೧೨ ೬೯ನೇ ಶುಕ್ರವಾರ ಸಮಾಪ್ತಿಗೊಂಡಿತು ಪ್ರಾತಃಕಾಲ ಏಕಾದಶ ರುದ್ರಾಭಿಷೇಕವಾದ ನಂತರ ಮಹಾಗಣ ಕೃಪ್ತಿಯಾಯಿತು ಅದೇ ದಿವಸ ಅನೇಕ ಬಡ ಜನರಿಗೆ ಅನ್ನದಾನವೂ ನಡೆಯಿತು ಸಾಯಂಕಾಲ ೬ ಘಂಟೆಗೆ ಪುರಾಣ ಸಮಾಪ್ತಿಯಾದ ನಂತರ ವೇ|| ಪಂ|| ಬಸವರಾಜಶಾಸ್ತ್ರಿಗಳ ಶಿವರೋಚಕನವು ಜರಗಿತು ಬಳಿಕ ಅನೇಕ ಜನರು ಸನಾತನ ಧರ್ಮದ ಪರವಾಗಿ ಉಘನ್ನಾಸಗಳನ್ನು ಮಾಡಿದರು ರಾತ್ರಿ ೧೦ ಘಂಟೆಗೆ ಪುರಾಣದ ಉತ್ಸವವು ಆಚಾರ್ಯರ ಭಜನೆಯಿಂದಲೂ, ವಿದ್ಯಾರ್ಥಿಗಳ ವೇದಘೋಷದಿಂದಲೂ, ನಾನಾ ವಿಧ ಕರಡಿ, ನಳಿಗೆ, ದುಂದುಭಿ ಇವೇ ಮೊದಲಾದ ವಾದ್ಯಗಳಿಂದಲೂ ಮುಖ್ಯ ಬೀದಿಗಳಲ್ಲಿ ಹೊರಟಿತು ಮುತ್ತೈದೆಯರು ಫಲ ಪುಷ್ಪಸಹಿತವಾದ ತಟ್ಟೆಯಲ್ಲಿ ಆರತಿಯನ್ನಿಟ್ಟು ತಮ್ಮ ಮಂಜುಳವಾದ ವಾಣಿಯಿಂದ ಜಗದಾಚಾರ್ಯರ ಮಂಗಲಗಳನ್ನು ಪಾಡುತ್ತ ಅತೀವಾನಂದವನ್ನು ತೆಗೆದುಕೊಳ್ಳುತ್ತಿದ್ದರು. ಇದೇ ಪ್ರಕಾರವಾಗಿ ಉತ್ಸವವು ಒಳ್ಳೇ ವೈಭವದೊಡನೆ ತಿರುಗಿ ಮರಳಿ ತಲ್ಪಿತು ಮರುದಿವಸ ಸಾಯಂಕಾಲ ೬ ಘಂಟೆಗೆ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು ಇಲ್ಲಿಯ ಬಾಲ ಸಂಗೀತ ನಾಟಕ ಮಂಡಳಿಯವರು 'ಯೋಗೀಶ್ವರ' ಎಂಬ ನಾಟಕವನ್ನು ಮನೋಹರವಾಗಿ ಆಡಿ ತೋರಿಸಿದರು. ತರುವಾಯ ಶ್ರೀಗಳವರ ಸಮ್ಮೋಧೆಯ ಸ್ನೇಹ ಕೇಳಿ ಸಂತುಷ್ಟರಾದ ಭಕ್ತರು ಶ್ರೀ ಸ್ವಾಮಿಗಳವರಿಗೆ ಭಕ್ತಿಯಿಂದ ಸನ್ಮಾನ ಪತ್ರಿಕೆಯನ್ನು ಅರ್ಪಿಸಿದರು ತರುವಾಯ ಜಗದಾಚಾರ್ಯರ ಮಂಗಲ ದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತ

ಕಾಬಸವಾರ್ಯ, ಹಿರೇಮಠ.
ಸೆಕ್ರೆಟರಿ
ಜಿ|| ಆ|| ರೇ|| ವಾಚನಾಲಯ.

ಪೈವಲೀಲೆ

ಸೊಲ್ಲಾಪುರ ಕಸಾಪೇಟೆಯಲ್ಲಿ ತಾ|| ೩೦ ೧೧ ೬೯ ಗುರುವಾರ ಹಗಲು ೧೦|| ಘಂಟೆಗೆ ಸಂಗಪ್ಪಾಮಸತಿ ಇವರ ಮನೆಯಲ್ಲಿ ಗೌರವ್ವ ಹಿಂಯ ಅಡಕವನ್ನು ಹೆತ್ತಿತು ಅದಕ್ಕೆ ಎರಡು ಮುಖಗಳೂ, ನಾಲ್ಕು ಕಿವಿಗಳೂ, ನಾಲ್ಕು ನೇತ್ರಗಳೂ ಬೇರೆಬೇರೆ ಇದ್ದವು ಕಂಠದ ಕೆಳಗಿನ ಅವಯವವು ಒಂದೇ ಆಗಿತ್ತು. ಹುಟ್ಟಿದ ೫ ನಿಮಿಷ ಗಳ ತರುವಾಯ ವೃತ್ತಿಯನ್ನು ಹೊಂದಿತು ಪೈವ ಲೀಲೆಯು ವಿಚಿತ್ರವಾದುದು

ಪಂಚಾಚಾರ್ಯಪ್ರಭಾ.

೧೯೪೦ ನೆಯ ಜನವರಿ ತಾ|| ೧೫ ನೆಯ ಸೋಮವಾರ

ಶಿವಾಚಾರ.

ಈ ಹಿಂದಿನ ಸಂಚಿಕೆಗಳಲ್ಲಿ ಸದಾಚಾರ ಮತ್ತು ಲಿಂಗಾಚಾರಗಳ ಸ್ವರೂಪವು ಪ್ರತಿಪಾದಿಸಲ್ಪಟ್ಟಿರುವು ದಷ್ಟೆ! ಸದ್ಯಃ ಶಿವಾಚಾರದ ಸ್ವರೂಪವು ಪ್ರತಿಪಾದಿಸ ಲ್ಪಡುವುದು.

ದ್ರವ್ಯಕ್ಷೇತ್ರಸ್ವಭಾವಾನಾಂ ಸೋಚಿತಾನಾಂ ನಿರೀಕ್ಷಣಂ।
ಶಿವಪೂಜೋಕ್ತಮಾರ್ಗೇಣ ಶಿವಾಚಾರ ಇತಿ ಸ್ಮೃತಃ ॥೭೨॥
(ಬಂಧ್ವಜ್ಞಾನ ಪಟಲ ೯)

ಶಿವಶಾಸ್ತ್ರೋಕ್ತಮಾರ್ಗೇಣ ಸಾಂಘಾಗಿ ದ್ರವ್ಯ ಕ್ಷೇತ್ರ ಗೃಹ-ಭಾಂಡ-ತ್ಯಜ ಕಾಪ್ಯ ರಾಂಒಂಲಿ ಪಾಕ ರವ ಭವ-ಭೂತ-ಭಾವ ಮಾರ್ಗ-ಕಾಲ ವಾ ಜನ ಈ ಹನಿನಾರು ಪದಾರ್ಥಗಳ ಶುದ್ಧಿಯನ್ನು ಮಾಡುವುದೇ ಶಿವಾಚಾರ ವೆಂದು ಹೇಳಿಸಿಕೊಳ್ಳುವುದು ಆ ತರುತ್ತನು ಬೃಹ ಸ್ಪತಿಗೆ ಉಸುವೇಶಿಸಿದ್ದಾನೆ ಈ ಪೆನಿನ ರ ಉದ್ದ ರ್ಗಳ ಶುದ್ಧಿಯ ವಿಷಯವ ಈ ತೆಂಗೆ ಉಲ್ಲೇಖಿಸಿರು ವೆಂತೆ ಉಪದೇಶಿಸಲ್ಪಟ್ಟಿರುವುದು.

ಭಕ್ತ ಹಸ್ತಗತಂ ನಾಮ ಭಕ್ತ್ಯಾ ವಾ ವಿಧಿನೋದಿತಾ।
ಫಲಮೂಲಾದಿಕಂ ದ್ರವ್ಯಂ ದ್ರವ್ಯಶುದ್ಧಿರಿಯಂ ಮತಾ ॥೭೩॥

ಸಲ ಮೂಲಾದಿಗಳು ಶಿವಭಕ್ತರ ಹಸ್ತದಿಂದ ಬಂದು ವಾದರೂ ಅವುಗಳನ್ನು ಬಸ್ಮದಿಂದ ರುದ್ದಿಮಾಡಿ ಸ್ವೀಕ ರಿಸಬೇಕು ಇದೇ ದ್ರವ್ಯಶುದ್ಧಿಯೆನಿಸಿಕೊಳ್ಳುವುದು.

ನಂದಿಮುದ್ರಾಂಕಿತೋದ್ಯಾನಾ ದಿಪರಿಕೋಷಿತಂ।
ಕ್ಷೇತ್ರಂ ಭಕ್ತೆರ್ಪಣಾತ್ಮಾಂ ಕ್ಷೇತ್ರಶುದ್ಧಿಃ ಪ್ರಕೀರ್ತಿತಾ ॥೭೪॥

ಶಿವಭಕ್ತರು ನಂದಿಮುದ್ರೆಯಿಂದ ಕೂಡಿದ ಶಿಲೆ ಯಿಂದಾಗಿ ಆವರಣ ಗೋಪ್ಯ ಗೆಯಿಂದ ಗಲಿ ಪರಿಕೋಷಿತ ವಾದ ಭೂವಿ ಯನ್ನು ಸ್ವೀಕರಿಸಬೇಕು ಇದೇ ಕ್ಷೇತ್ರ ಶುದ್ಧಿಯೆನಿಸುವುದು (ಶಿವಭಕ್ತರ ಭೂಮಿಯೆಲ್ಲ ನಂದಿ ಮುದ್ರಾಂಕಿತವಾದ ಶಿಲೆಯನ್ನು ಸ್ಥಾಪಿಸಬೇಕೆಂಬು ಭಾವ)

ಭಕ್ತೈಸ್ತು ವಿಧಿವತ್ತಂ ನಮಃ ಶಿವಲಿಂಗಾಂಕಿತಂ ಶು ಭಾ।
ವೇತ್ಯ ಭಕ್ತ್ಯೈ ಪರಿಗ್ರಹ್ಯಂ ಗೃಹಪದ್ಧಿ ಸಮಾಸಾಕ್ತಾ ॥೭೫॥

ಮನೆಯು ಶಿವಭಕ್ತರಿಂದ ಕಟ್ಟಲ್ಪಟ್ಟಿರೂ, ಅದು ಶಿವಲಿಂಗಮುದ್ರೆಯಿಂದ ಕೂಡಿರಬೇಕು ಇಂತಹ ಮನೆ ಯಲ್ಲಿಯೇ ವಾಸಮಾಡಬೇಕು ಇದೇ ಗೃಹಶುದ್ಧಿ ಯೆನಿಸುವುದು.

ಭಕ್ತೈಸ್ತು ವಿಧಿವತ್ತಾತಂ ಭಕ್ತ್ಯಾ ಸಂಕ್ಲೃತಂ ತು ವಾ।
ಕೃತ್ಸಾದಿಕಂ ಪರಿಗ್ರಾಹ್ಯಂ ಕೃತಶುದ್ಧಿರಿಯಂ ॥೭೭॥

ದನಗಳಿಗೆ ಹಾಕತಕ್ಕ ಹುಲ್ಲು ಮೊದಲಾದವುಗಳು ಶಿವಭಕ್ತರಿಂದಲೇ ತರಲ್ಪಟ್ಟುವುಗಳಾಗಿದ್ದು ಭಸ್ಮದಿಂದ ರುದ್ಧಿಗೊಂಡಿರಬೇಕು. ಇಂತಹ ಹುಲ್ಲನ್ನೇ ಉಪ ಯೋಗಿಸಬೇಕು ಇದೇ ತೃಣಶುದ್ಧಿಯೆನಿಸುವುದು.

ಭಕ್ತೆರ್ಯತ್ನಸಮಾನೀತಂ ವಿಧಿವತ್ಕಾ ಸಂಸ್ಕೃತಂ ತು ವಾ।
ಕಾಷ್ಠಂ ವೃಕ್ಷೈಃ ಸಂಗ್ರಾಹ್ಯಂ ಕಾಷ್ಠಶುದ್ಧಿಃ ಸಮಾಸಾಕ್ತಾ ॥೭೮॥

ಶಿವಭಕ್ತರಿಂದ ತರಲ್ಪಟ್ಟುದಾಗಿಯೂ, ಭಸ್ಮದಿಂದ ಸಂಸ್ಕೃತವಾಗಿಯೂ ಇರುವ ಕಟ್ಟಿಗೆಯನ್ನೇ ಶಿವವೃತಿ ಗಳು ಪಾಕಾದಿಗಳಿಗಾಗಿ ಸಂಗ್ರಹಿಸಬೇಕು ಇದೇ ಕಾಷ್ಠ ಶುದ್ಧಿಯೆನಿಸುವುದು

ಭಕ್ತಾರಾಮೇ ಸಮುತ್ಪನ್ನೈರ್ಭಸ್ಮನಾ ಸಂಸ್ಕೃತೈಸ್ತು ವಾ।
ಭಕ್ತೈಸ್ತು ಸಾಧಿತೈರಾಪಿ ವಿಧಾತ್ಯಾ ಸಂಸ್ಕೃತೈಸ್ತ ವಾ ॥೭೯॥

ನಾಗವಲ್ಲೀದಲೈಃ ಪೂಗೈಸ್ತೂಣಕೇಸ ಚ ಸಮ್ಮತಾಂ।
ಗ್ರಾಹ್ಯಂ ಭಕ್ತೈರ್ಹಿ ತಾಂಬೂಲಂ ವೀಟಿಕಾಶುದ್ಧಿರೀರಿತಾ ॥೮೦॥

ಶಿವಭಕ್ತರ ತೋಟದಲ್ಲಿ ಬೆಳೆದ ಮತ್ತು ಭಸ್ಮದಿಂದ ಶುದ್ಧಿಗೊಂಡ ಎಲೆ-ಅಡಿಕೆಗಳೆಂದಲೂ, ಭಕ್ತರಿಂದ ಸಿದ್ಧ ವಾದ ಮತ್ತು ಭಸ್ಮದಿಂದ ಶುದ್ಧಿಗೊಂಡ ಸುಣ್ಣದಿಂದಲೂ ಯುಕ್ತವಾದ ತಾಂಬೂಲವನ್ನೇ ಸ್ವೀಕರಿಸಬೇಕು. ಇದೇ ವೀಟಿಕಾಶುದ್ಧಿಯೆನಿಸುವುದು.

ಶಿವದೀಕ್ಷಾನ್ವಿತೈಃ ಪಕ್ವಮುಭಕ್ತಾನವಲೋಕಿತಂ।
ಭೋಜ್ಯಂ ಭಕ್ತೈಃ ಪರಾಗ್ರಾಹ್ಯಂ ಪಾಕಶುದ್ಧಿರಿಯಂ ಮತಾ॥೮೧॥

ಶಿವದೀಕ್ಷಾಸಂಸ್ಕಾರದಿಂದ ಬೇಯಿಸಲ್ಪಟ್ಟಿದ್ದೂ, ಶಿವ ಭಕ್ತರಲ್ಲದ ಕರಿಂದ ನೋಡಲ್ಪಡದಿದ್ದುದೂ ಆದ ಆಹಾ ರವನ್ನೇ ಸ್ವೀಕರಿಸಬೇಕು. ಇದೇ ಪಾಕಶುದ್ಧಿಯೆನಿಸು ವುದು

ಶೃಂಗ ಪಥಿ ಪಶುಸ್ಪರ್ಶಂ ಪೂತಿಹೀನ ಚಾನಿಲಂ ತ್ಯಜೇತ್ ।
ಸರ್ವಂ ಚ ಸರ್ವದಾ ಗ್ರಾಹ್ಯಂ ರಸಶುದ್ಧಿರಿಯಂ ಮತಾ ॥೮೨॥

ಶಿವಭಕ್ತರು ಎಮ್ಮೆಯ ಮತ್ತು ಆಡಿನ ಹಾಲು-ಮೊಸರು-ತುಪ್ಪ-ಮಜ್ಜಿಗೆಗಳನ್ನು ಸೇವಿಸಬಾರದು ಯಾವಾಗಲೂ ಆಕಳ ಹಾಲು-ಮೊಸರು-ತುಪ್ಪ-ಮಜ್ಜಿಗೆ ಗಳನ್ನೇ ಸೇವಿಸಬೇಕು ಇದೇ ರಸಶುದ್ಧಿಯೆನಿಸಿಕೊಳ್ಳು ವುದು

ಪುನರ್ಭವನಿದಾನೋಕ್ತ ಕಾಮ್ಯಕರ್ಮವಿವರ್ಜನಾತ್ ।
ಜನ್ಮಾದಿಮೃತ್ಯುಸಂಶಾಕ್ತಿ ಭವಶುದ್ಧಿರಿಗದ್ಯತೇ ॥೮೩॥

ಪುನರ್ಜನ್ಮಕ್ಕೆ ಕಾರಣವಾದ ಜ್ಯೋತಿಷ್ಟೋಮಾದಿ ಕಾಮ್ಯಕರ್ಮಗಳ ಬಿಡುವಿಕೆಯಿಂದ, ಪುನರ್ಜನ್ಮರಹಿತ ವಾದ ಯಾವ ಸಂಪತ್ತುಂಟೋ, ಅದೇ ಭವಶುದ್ಧಿ ಯೆನಿಸಿಕೊಳ್ಳುವುದು

ಸರ್ವಭೂತಾದಿಯಾಳುತ್ವಂ ಶಾಂಭಿಭಾವಿತಸಂಸ್ಕೃತಿಃ ।
ಭೋಜ್ಯವರ್ಪಣಾರ ಹಿತ್ವಂ ಭೂತಶುದ್ಧಿಃ ಸವಿಸ್ತರಾ ॥೮೪॥

ಸಮಸ್ತ ಪ್ರಾಣಿಗಳಲ್ಲಿ ದಯೆಯನ್ನಿಡುವುದು, ತನ್ನ ಶರೀರದಲ್ಲಿರುವ ಸೃಧಿವ್ಯಾದಿಪಂಚಭೂತಗಳನ್ನು ಶುದ್ಧಿ ಗೊಳಿಸಿಕೊಳ್ಳುವುದು, ಪ್ರಾಣಿದೂಷಣವನ್ನು ಮಾಡ ದಿರುವುದು ಇದೇ ಭೂತಶುದ್ಧಿಯೆನಿಸುವುದು.

ಸರ್ವಕಾಮಾನ್ ಸಮುಜ್ಜೃತ್ಯ ಶಿವಭಾವಾನುಭಾವನಂ।
ಚೇತಸಾ ಯತ್ಪವರ್ತನಕಾಲಂ ಭೂಪಶುದ್ಧಿಃ ಸವಾಸಿತಾ ॥೮೫॥

ಸಮಸ್ತ ಇಚ್ಛೆಗಳನ್ನು ದೂರೀಕರಿಸಿ ಯಾವಾಗಲೂ ಮನಸ್ಸಿನಿಂದ ಶಿವಭಾವವನ್ನು ಚಿಂತಿಸುವುದೇ ಭಾವ ಶುದ್ಧಿಯೆನಿಸುವುದು.

ಪಶ್ಚಾದ್ಯಂ ವಿಸೀಲಿಕಾನೀನಾಂ ನೆ ಯಥಾ ಹಿಂಸನಂ ಭವೇತ್ ।
ಗಮನಂ ಹಿ ಪರಿಗ್ರಾಹ್ಯಂ ಮಾರ್ಗಶುದ್ಧಿರಿಯಂ ಮತಾ ॥೮೬॥

ದಾರಿಯಲ್ಲಿ ನಡೆಯುವ ಕಾಲಲ್ಲಿ ಇರುವೆ ಮೊದಲಾ ದವುಗಳಿಗೆ ಹಿಂಸೆಯಾಗದಂತೆ ನಡೆಯುವುದೇ ಮಾರ್ಗ ಶುದ್ಧಿಯೆನಿಸುವುದು.

ಕಾಸ್ತ್ರಸಂಚೋದಿತೇ ಕಾಲೇ ನಿಶ್ಚಿತ್ತೇ ಚ ಹಿತೋದಿತೇ ।
ಶಿವಲಿಂಗಾರಾಧನಂ ಯತ್ಕಾಲಶುದ್ಧಿರಿಹೋದಿತಾ ॥೮೭॥

ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ ನಿಶ್ಚಿತವಾದ ಕಾಲ ದಲ್ಲಿ ಶಿವಲಿಂಗಪೂಜೆಯನ್ನು ಮಾಡುವುದೇ ಕಾಲಶುದ್ಧಿ ಯೆನಿಸುವುದು.

ಅನ್ಯತಂ ಪರುಷಂ ಕುತ್ಸಂ ವೀಭತ್ಸಂ ದಾಂಭಿಕಂ ಚ ಯತ್ ।
ವಿಸರ್ಜನಂ ತತ್ಪಶಸ್ಯೋ ವಾಕ್ಶುದ್ಧಿರಿಹ ಕತ್ಥಿತಾ ॥೮೮॥

ಅಪಶ್ಯವಾದ, ಕಠಿನವಾದ, ನಿಂದ್ಯವಾದ, ಹೇಯ ವಾದ, ದಾಂಭಿಕವಾದ ಮಾತುಗಳನ್ನು ಆಡದಿರುವುದೇ ವಾಕ್ಶುದ್ಧಿಯೆನಿಸುವುದು.

ಆಸನೇ ಶಯನೇ ಯಾನೇ ಗೋಷ್ಠ್ಯಾಂ ಸರ್ವತ್ರ ಸರ್ವದಾ ।
ಸತ್ಪಕೃಜನಸಾಂಗತ್ಯಂ ಜನಶುದ್ಧಿಃ ಸಮಾಸತಾ ॥೮೯॥

ಕುಳಿತುಕೊಳ್ಳುವಾಗಲೂ, ಮಲಗುವಾಗಲೂ, ಸಭೆ ಯಲ್ಲೂ, ಯಾವಾಗಲೂ, ಎಲ್ಲಕಾಲಗಳಲ್ಲಿಯೂ ಸತ್ಪಕೃತ್ಯ ಜನರೊಡನೆ ಇರುವಿಕೆಯೇ ಜನಶುದ್ಧಿಯೆನಿಸುವುದು.

ಸಿದ್ಧನ್ನಯಂ ಶಿವಾಚಾರಃ ಸರ್ವಪಾಪೈಃ ಪಮುಕ್ತತಾ ।
ಏತಿಯಚರಣಾತ್ಕರ್ತ್ಯಃ ಶಿವಸಾಯುಜ್ಯಮಶ್ನುತೇ ॥೯೦॥

ಎಲ್ಲೆ ಬ್ಯಹಸ್ಪತಿಯೇ ಈ ಶಿವಾಚಾರವು ಸರ್ವಪಾಪ್ಯ ಗಳಲ್ಲಿ ರಹಸ್ಯವಾದುದು. ಈ ವಿಧವಾದ ಆಚರಣೆಯಿಂದ ಮನುಷ್ಯನು ಶಿವಸಾಯುಜ್ಯವನ್ನು ಹೊಂದುವನು. ಎಂದು ಆನಂಕರುದ್ರನು ಶಿವಾಚಾರ ಸ್ವರೂಪವನ್ನು ಉಪದೇಶಿಸಿರುವುದರಿಂದ, ವೀರಶೈವರು ಇದರಂತೆ ಆಚ ರಿಸಿ ಶಿವಕೃಪೆಗೆ ಪಾತ್ರರಾಗಬೇಕು.

ಯುದ್ಧವಾರ್ತೆ.

ರಷ್ಯನ್ ವಿಮಾನಗಳ ನಾಶ

ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಫಿನ್‌ಲೆಂಡಿನವರು ರಷ್ಯನ್ನರ ಸುಮಾರು 40 ವಿಮಾನಗಳನ್ನು ಹೊಡೆದು ರುಳಿಸಿದರೆಂದು ತಿಳಿಯುತ್ತದೆ.

ಫಿನ್‌ಲೆಂಡಿಗೆ ಇಟಲಿಯ ಸ್ವಯಂಸೇವಕರು

ಫಿನ್‌ಲೆಂಡ್ ಪ್ರದೇಶಕೊಡನೆ ಸೇರಿ ರಷ್ಯನ್ನರನ್ನೆರಸೀಲೆ ಹೋರಾಡಲು ರೋಂ ನಗರದಲ್ಲಿ 7000 ಸ್ವಯಂ ಸೇವ ಕರು ಸಿದ್ಧರಾಗಿರುವರೆಂದು ವರ್ತಮಾನವಿದೆ

ಜರ್ಮನಿ ಯುದ್ಧ ನೌಕೆಯು ಅಮೆರಿಕಾ ಬಂದರಿನೆ ಆಶ್ರಯ ಹೊಂದಿತು

ಜರ್ಮನಿಗೆ ಸೇರಿದ ಟ್ಯಾಂಕರ್ ಜಾತಿಯ ಯುದ್ಧ ನೌಕೆಯಾದ 'ಆರೂಕಾ' ಎಂಬುದು ಬ್ರಿಟಿಷ್ ಯುದ್ಧ ನೌಕೆಯಿಂದ ತಪ್ಪಿಸಿಕೊಳ್ಳಲು ವ್ಲಾರಡ್ ಪನಿಂಸುಲೆಯಲ್ಲಿ ರುವ ಎವರ್‌ಗ್ಲೇಡ್ಸ್ ಬಂದರಿಗೆ ಬಂದಿತೆಂದು ಅಮೆರಿ ಕೆಯ ನೌಕಾ ಶಾಖೆಯವರು ಪ್ರಕಟಿಸಿರುತ್ತಾರೆ

ದೇವಾಲಯಪ್ರವೇಶಕಾಸನವು ರದ್ದಾಗಬೇಕು

ಮದ್ರಾಸ ದೇವಾಲಯ ಪ್ರವೇಶ ಶಾಸನವನ್ನು ರದ್ದು ಗೊಳಿಸುವಂತೆ ಕೇಳಿಕೊಳ್ಳಲು ಗವರ್ನರ ಬಳಿಗೂ ಮತ್ತು ಸೈಸರಾಯರ ಬಳಿಗೂ ನಿಯೋಗಗೋಷ್ಯಿಯನ್ನು ಕಳುಹ ಬೇಕೆಂದು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯಸಂಘ ದವರು ಮದ್ರಾಧರೆಯಲ್ಲಿಸಭೆಸೇರಿ ನಿಶ್ಚಯಿಸಿರುತ್ತಾರೆ.

ಬ್ರಿಟಿಷ್ ನೌಕೆಯ ನಾಶ

"ಸ್ಪಾನ್‌ಹೋಂ" ಎಂಬ ಬ್ರಿಟಿಷ್ ಹಡಗನ್ನು ಜರ್ಮನಿಯ 'ಯು-ಬೋಟ್' ಮುಳುಗಿಸಿತು. ಮುಳು ಗಿಸುವದಕ್ಕಿಂತ ಮೊದಲು ಎಚ್ಚರಿಕೆ ಕೊಡಲಿಲ್ಲ. ಇದ ರಿಂದ 14 ಜನರು ಸತ್ತರು. 10 ಜನರನ್ನು ರಕ್ಷಿಸಲಾ ಯಿತು ಅವರಿಗೂ ಗಾಯಗಳಾಗಿರುವದಾಗಿ ತಿಳಿದು ಬರುತ್ತದೆ.

ಯುದ್ಧಬಿಟ್ಟು ಬೆಂಕಾಯಿಸಿಕೊಳ್ಳಿ ಹಿಟ್ಲರ್ ಕ್ಯಾರೆ

ರಕ್ಷಣ ಸೈನಿಕರು ಯುದ್ಧಮಾಡುವದಕ್ಕಿಂತ ಬೆಂಕಿ ಕಾಯಿಸುವದರಲ್ಲಿ ನಿರತರಾಗಿರುವರೆಂದು ತಿಳಿದುಬರು ತ್ತದೆ. ಲಡೋಗ ಸರೋವರದ ಹತ್ತರ ಫಿನ್‌ಲೆಂಡ್ ಸೈನಿಕರು ರಷ್ಯನರೆದ್ದ ಸ್ಥಳಕ್ಕೆ ನುಗ್ಗಿ ಬೆಂಕಿಯನ್ನು ಹತ್ತಿಸಿದರು. ರಷ್ಯನ್ ಸೈನಿಕರು ತಮ್ಮ ವಾಸಸ್ಥಳಕ್ಕೆ ಬಿದ್ದ ಬೆಂಕಿಯನ್ನು ಆರಿಸುವ ಬದಲು ಮಂಜಿನಿಂದ ಶೆಟೆದುಕೊಂಡಿದ್ದ ತಮ್ಮ ಮೈ ಕೈಗಳನ್ನು ಕಾಯಿಸಿ ಕೊಳ್ಳುವದರಲ್ಲೇ ನಿರತರಾದರಂತೆ! ಅವರುಗಳಿಗೆ ಶತ್ರುಗಳಿಗಿಂತ ಚಳಿಯೇ ಮೆಚ್ಚಿನ ವೈರಿಯಾಗಿ ಪರಿ ಣಮಿಸಿದೆ.

ಆಸ್ಟ್ರೇಲಿಯಾ ಸೈನಾಪತಿಗಳು ಬ್ರಿಟ್ಟಿನಿಗೆ ಬಂದರು

ಈಗಿನ ಯುದ್ಧದಲ್ಲಿ ಭಾಗವಹಿಸಲು ಆಸ್ಟ್ರೇಲಿಯಾದ ವಿಮಾನ ಪಡೆಯ ಮೊದಲನೆಯ ಭಾಗವು ಕಳೆದ 26 ನೆಯು ತಾರೀಖಿನ ದಿವಸ ಬ್ರಿಟ್ಟಿನಿಗೆ ತಲಪಿತು. ಆದ ಕ್ಷಲ್ಲರುವವರೆಲ್ಲರೂ ಚೆನ್ನಾಗಿ ಶಿಕ್ಷಣ ಪಡೆದವರು. ಆರ್. ಎ ಎಫ್ ಪಡೆಯೊಂದಿಗೆ ಸೇರಿ ತರ್ಶಕ್ಷಣ ಹೊಡೆದಾಟ ದಲ್ಲಿ ಭಾಗವಹಿಸುವವರಾಗಿದ್ದಾರೆ

ಭಾರತದ ಪ್ರಥಮ ಸೈನ್ಯ ಪಡೆಯು ರಣರಂಗಕ್ಕೆ ತಲಪಿತು

ಕಳೆದ 28 ನೆಯು ತಾರೀಖಿನ ದಿವಸ ಭಾರತದ ಪ್ರಥಮ ಪಡೆಯು ಯೂರೋಪಿನ ಮಹಾ ಸಂಗ್ರಾಮದಲ್ಲಿ ಭಾಗವಹಿಸಲು ಫ್ರಾನ್ಸಿನ ಬಂದರಿನಲ್ಲಿ ಇಳಿಯಿತು. ಆ ಸೈನ್ಯ ಪಡೆಯಲ್ಲಿರುವವರೆಲ್ಲರೂ ಭಾರತದ ಮುಸ್ಲಿಮರು ಇವರುಗಳೆಲ್ಲರನ್ನೂ ಶಿಕ್ಷಿಸಿ ನಾಗಿ ಬ್ರಿಟ್ಟಿನ್ನಿನ ಸೈನಿಕರು ಇರುವ ಪ್ರದೇಶಕ್ಕೆ ಕಳಿದೊಯ್ಯಲು ತಕ್ಕ ಏರ್ಪಾಡು ಮಾಡಲಾಗುತ್ತಿದೆ.

ತುರ್ಕಿಯಲ್ಲಿ ಭಯಂಕರ ಭೂಕಂಪ

ತುರ್ಕಿಯ ಅಟೋಲಿಯ ಪ್ರಾಂತ್ಯದಲ್ಲಿ ಅನೇಕ ಕಡೆ ಗಳಲ್ಲಿ ಭಯಂಕರ ಭೂಕಂಪವಾದುದರಿಂದ ಸಹಸ್ರಾರು ಮಂದಿ ಪ್ರಾಣ ಕಳೆದುಕೊಂಡಿರುವುದಾಗಿ ತಿಳಿದು ಬರು ತ್ತದೆ. ಇಲ್ಲಿಯ ವರೆಗೂ 25 ಸಾವಿರ ಮಂದಿ ಪತ್ತಿರುವರು 90000 ಜನಸಂಖ್ಯೆಯ ಒಂದೇ ಒಂದು ಜಿಲ್ಲೆಯಲ್ಲಿ 42000 ಮಂದಿ ಸತ್ತರು. ಮತ್ತು ಗಾಯಗೊಂಡರು ಅದರಲ್ಲಿ ಸತ್ತವರೇ ಹೆಚ್ಚು. 15 ಪಟ್ಟಣಗಳಲ್ಲಂತೂ 90 ಹಳ್ಳಿಗಳೂ ಪೂರ್ಣ ನಾಶವಾಗಿವೆ ಚಳಿಯ ದೆಸೆಯಿಂದ ಜನರಿಗೆ ತೊಂದರೆಯು ಹೆಚ್ಚಾಗಿದೆ

ಬಹುದಿನಗಳಿಂದಿದ್ದ ಮನಸ್ತಾಪವು ಮಾಯವಾಯಿತು

ಕೆಥೊಲಿಕ್ಕೈಸ್ತಮಂಗಡಿ ಗುರುಗಳಾದ ಪೋಪರು ಕಳೆದ 28 ನೆಯ ತಾರೀಖಿನ ಪ್ರಾತಃಕಾಲ ತಮ್ಮ ಮಂ ದಿರದಿಂದ ಇಟಲಿಯ ರಾಜವಂಶಪತಿಗಳನ್ನು ಕಾಣುವವ ರ್ಕ್ಕಾಗಿ ಹೋಗಿದ್ದರು. ಈಗ 60 ವರ್ಷಗಳಿಂದ ಪೋಪರು ದೂರಗಳನ್ನು ಕಂಡಿರಲಿಲ್ಲ. ಈಗ ನಡೆದ ಪರಸ್ಪರ ವರ್ತ ನೆಯಿಂದ ಇಟಲಿ ಸರ್ಕಾರಕ್ಕೂ ಮತ್ತು ಪೋಪರಿಗೂ ಇದ್ದ ಮನಸ್ತಾಪವು ಮಾಯವಾಗಿ ಸ್ನೇಹವು ಬೆಳೆಯಲಾಗಿದೆ. ಪೋಪರು ದೀರ್ಘಕಾಲ ರಾಜವಂಶಸ್ಥರೊಡನೆ ಸಂಧಾಷಣೆಮಾಡಿ ತಮ್ಮ ಮಂದಿರಕ್ಕೆ ಹಿಂದಿರಿಗಿದರು

ಚಕ್ರವರ್ತಿಗಳ ಸಂದೇಶ.

ಬ್ರಿಟಿಷ್ ಚಕ್ರವರ್ತಿಗಳು ಕ್ರಿಸ್‌ಮಸ್ ನಿಮಿತ್ತವಾಗಿ ತಮ್ಮ ಪ್ರಜೆಗಳಿಗಾಲ್ಲಾ ಸಂದೇಶವನ್ನು ಕಳುಹಿಸುತ್ತ — "ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಾಸವಾಗಿರುವೆಲ್ಲರೂ ಸ್ವಾ ತಂತ್ರ್ಯಕ್ಕ ಪಾಲಿನೆಗಾಗಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧರಾಗಿರುವರೆಂದೂ, ಅವರೆಲ್ಲರೂ ಒಂದೇ ಕುಟುಂಬ ಕ್ಕೆ ಸೇರಿದವರೆಂದೂ, ಬ್ರಿಟಿಷ್ ಸಾಮ್ರಾಜ್ಯ ವೇಶಗಳು, ಭಾರತದ ಮತ್ತು ಪ್ರತಿಯೊಂದು ಕಾಲೋನಿಯ ಪ್ರಜೆ ಗಳಲ್ಲಿಯವ ಭಾವನೆಯು ಆ ರೀತಿ ಇರುವೆಂದೂ, ಈ ಉದ್ದೇಶಸಾಧನೆಗಾಗಿ ಈಗ ನೆಲಸಿರುವಷ್ಟು ವಿಶ್ವಸು ತ್ವವು ಹಿಂದೆಂದೂ ಇರಲಿಲ್ಲವೆಂದೂ, ಇನ್ನೂ ವಿಷಮ ಸನ್ನಿವೇಶಗಳು ಬರಲಿರುವುದರಿಂದ ಶಾಂತಿಗಾಗಿ ಎಲ್ಲರೂ ಪ್ರಾರ್ಥಿಸಬೇಕೆಂದೂ, ಹೊಸ ವರ್ಷದಲ್ಲಿ ಶಾಂತಿಯ ಲಭ್ಯವಾದರೆ ಎಲ್ಲರೂ ಕೃತಜ್ಞರಾಗಿರಬಹುದೆಂದೂ ಹೇಳಿ ರುವುದಲ್ಲದೆ ಮುಂದೊತ್ತಬೇಕಾದರೆ ಹೆದರಕೂಡದೆಂದೂ, ದೇವರು ನನಗೆ ಸೂರ್ಯನನ್ನು ತೋರಿಸುವುದರ ನೂಲಕ ಕಾಪಾಡಲೆಂದೂ ಕೋರಿದರು

ಜರ್ಮನಿಯು ರಷ್ಯಕ್ಕೆ ಸಹಾಯಮಾಡಿ ತೊಟ್ಟಿಲ್ಲ

ಫಿನ್‌ಲೆಂಡಿನಲ್ಲಿ ರಷ್ಯವು ನಡೆಯಿಸುತ್ತಿರುವ ಯುದ್ಧ ದಲ್ಲಿ ನೆರವಾಗಬೇಕೆಂದೂ, ಫಿನ್‌ಲೆಂಡನ್ನು ಸುತ್ತುಗಟ್ಟಿ ಅದಕ್ಕೆ ಹೊರಗಿನಿಂದ ಯಾವ ವಿಧವಾದ ಸಹಾಯವೂ ಬರದಂತೆ ಮಾಡಲು ನಾಲ್ಕು ಜರ್ಮನಿಯ ನೌಕೆಗಳನ್ನು ಕೊಡಬೇಕೆಂದೂ ಸ್ವಾಲಿನ್ನನು ಕೇಳಿದ್ದಕ್ಕೆ ಜರ್ಮನಿಯ ನೌಕಾಧಿಕಾರಿಗಳು ಆಗುವದಿಲ್ಲವೆಂದು ನಿರಾಕರಿಸಿದರಂತೆ!

ರಷ್ಯಾ-ಜರ್ಮನಿ ವಾಣಿಜ್ಯವೃದ್ಧಿ ಬಹು ಭದ್ರವಾದುದು.

ಜರ್ಮನಿ-ಇಂಡ್ಯಾಗಳಿಗೆ ಆಂತರ್ಯದಲ್ಲಿ ಸ್ನೇಹಭಾವವಿ ಪ್ಪಿನೆಂಬ ವಿಷಯವು ಆಗ್ಗೆ ಕಂಡುಬರುತ್ತಿದ್ದರೂ, ಜರ್ಮನಿಯ ವಿದೇಶಾಂಗ ಸಚಿವರಾದ ಹರ್ ರಾನ್ ಟ್ರಿಬ್ಬನ್‌ಟ್ರಾಪ್‌ರವರು, ಸ್ವಾಲಿನ್ನರ 60 ನೆಯ ವರ್ಷ ವರ್ಧಂತಿಯ ಕಾಲದಲ್ಲಿ ಕಳುಹಿಸಿದ ತಂತಿಗೆ ಸ್ವಾಲಿನ್ನರು ಉತ್ತರ ಕೊಡತ್ತ ' ಜರ್ಮನಿ ಪ್ರಜೆಗಳ ಮತ್ತು ರಷ್ಯಾ ಪ್ರಜೆಗಳ ನೈತ್ರಿಯು ರಕ್ತದಿಂದ ಬೆಸೆದಿದೆಯೆಂದೂ, ಅದು ಬಹುಕಾಲದ ವರೆಗೆ ದೃಢವಾಗಿರುವದೆಂದೂ" ತಿಳುಹಿಸಿರುತ್ತಾರೆ

ರಷ್ಯಾ ಸೈನಿಕರು ಆಯುಧಗಳನ್ನೊಪ್ಪಿಸಿದರು

ಫಿನಿಷ್ ವಿಮಾನಗಳು ರಷ್ಯಾ ಸೈನ್ಯ ದಳಗಳ ಮೇಲೆ ಹಾರಿ, ಕೈಸಿಕ್ಕುವ ಶಸ್ತ್ರಗಳಿಗೆ ಹಿಂಜೆ ಕೊಡುವುದಿಲ್ಲ ವೆಂದೂ, ಸಂಗ್ರಾಮ ಸಾಧನಗಳನ್ನೂ ವಿಮಾನಗಳನ್ನೂ ಯೆನ್ನೂ ಯೆನ್ನಂದು ಬ್ಯಾಂಕುಗಳನ್ನೂ ಕೆಡಿಸದೆ ಒಪ್ಪಿಸಿದ ವರಿಗೆ ಹೆಚ್ಚು ಪ್ರತಿಭಲ ಕೊಡಲಾಗುವದೆಂದೂ ಸೂಚಿ ಸುವ ಹತ್ತು ಪತ್ರಿಕೆಗಳನ್ನು ಚಲ್ಲಿದರು. ಇದನ್ನು ನೋಡಿ ಅನೇಕ ರಷ್ಯ ಸೈನಿಕರು ಫಿನ್ನಿಷರಿಗೆ ತಮ್ಮಲ್ಲಿದ್ದ ಸಂಗ್ರಾ ಮಸಾಧನಗಳನ್ನು ಒಪ್ಪಿಸಿರುವರು 10 ಬಾಂಬು ಹಾಕುವ ವಿಮಾನಗಳೂ ಒಂದು ಸಂಪೂರ್ಣ ಟ್ಯಾಂಕ್ ಪಡೆಯೂ ಫಿನ್ನಿಷರ ವಶವಾಗಿದೆ ಟ್ಯಾಂಕು ಪಡೆಯ ನಾಯಕರೂ ಫಿನ್ನಿಷರ ಕಡೆ ಸೇರಿ ಅವರಿಗೆ ಶಿಕ್ಷಣ ಕೊಡುತ್ತಿದ್ದಾರೆ

ರಷ್ಯಾಕ್ಕೆ ಫಿರ್‌ಲೆಂಡಿನಲ್ಲಿ ಆಗುತ್ತಿರುವ ನಷ್ಟ!

ಕೇರೆಲಿಯ ಇಸ್ತ್‌ಮಸ್ ಪ್ರದೇಶದಲ್ಲಿ ಎಲ್ಲ ಕಡೆ ಯಿಂದಲೂ ರಷ್ಯನ್ನರು ಟ್ಯಾಂಕುಗಳು ಫಿರಂಗಿಗಳು ವಿಮಾ ನಗಳಿಂತೆನೆ ವೀಕ್ಷಣೆಯಿಂದಲೂ ಅಶ್ರಯ ಣಕಾರ್ಯವನ್ನು ಭರ ಎಂದೆ ಮುಂದುವರಿಸಿದರೂ ಫಿನ್ನಿಷರು ಆವರನ್ನು ಎಲ್ಲ ಕಡೆಗಳಿಂದಲೂ ಹಿಂದಕ್ಕೆಟ್ಟದರು ಇವರಿಂದ ರಷ್ಯನ್ನರಿಗೆ ಅಪಾರ ನಷ್ಟವಾಯಿತು 5 ಫಿರಂಗಿಗಳೂ 60 ಮಿಸನ್ ಬಂಧೂಕಗಳೂ ಶಸ್ತ್ರಗಳ ಕೈಸೇರಿದ್ದಲ್ಲದೆ, 60 ಸೈನಿಕರು ಫಿನ್ನಿಷರಿಂದ ಹಿಡಿಯಲ್ಪಟ್ಟರು ರಷ್ಯನ್ನರು ಮಂಜಿನ ಗಡ್ಡೆಗಳಿಂದ ತುಂಬಿದ್ದ ಸುವೆಂಟೋ ಸರೋವರದಲ್ಲಿ ವೃತರಾದ 700 ಸೈನಿಕರ ದೇಹಗಳನ್ನು ಅಲ್ಲಿಯೇ ಬಿಟ್ಟು ಹಿಂದಕ್ಕೋಡಿದರು ಫಿರಲೆಂಡ್ ಕೊಲ್ಲಿಯ ತೀರದ ಫಿರಂಗಿಗಳು 5 ರಷ್ಯವಿಮಾನಗಳನ್ನು ಹೊಡೆದುರುಳಿಸಿ ದವು. ಲಡೋಗಸರೋವರದ ಬಳಿ 4 ರಷ್ಯವಿಮಾನಗಳು ನಾಶಮಾಡಲ್ಪಟ್ಟಿವೆ.

ಕೊಲಂಬಸ್ ನೌಕೆಯು ಸಮಾಧಿ.

ಜರ್ಮನಿಯ ನೌಕೆಯಾದ 'ಕೊಲಂಬಸ್' ಎಂಬುದು ಅಮೇರಿಕೆಯಿಂದ ಹೊರಟು ಬರ್ಮಾಕ್ಕೆ 400 ಮೈಲಿಗಳ ದೂರದಲ್ಲಿ ಹೋಗುತ್ತಿದ್ದಾಗ ಬ್ರಿಟಿಷ್ ಹಡಗುಗಳ ಕಣ್ಣಿಗೆ ಬಿದ್ದಿತು. ಇವೆಂದರೆ ಭೀತರಾದ ಜರ್ಮನಿ ನಾವಿಕರು ಅವಕ್ಕೆ ಬೆಂಕಿಯಿಟ್ಟು ಸುಟ್ಟುಬಿಟ್ಟರೆಂದು ತಿಳಿಯುತ್ತಿದೆ ಅದು ಪ್ರಯಾಣಿಕರನ್ನು ಸಾಗಿಸುವ ಹಡಗಾಗಿತ್ತು ಅವರಲ್ಲಿದ್ದ ೪ ಮಾರು 400 ಜನಗಳನ್ನು "ಟೆಸ್ಕಲೂಸ್" ಎಂಬ ನೌಕೆಯು ಸೆರೆಹಿಡಿಸಿದೆಂದೂ, ಅವರುಗಳನ್ನು ನ್ಯೂಯಾರ್ಕ್ ಪಟ್ಟಣಕ್ಕೆ ಕರೆದುಕೊಂಡು ಬರುವರೆಂದೂ ತಿಳಿದುಬರುತ್ತದೆ.

ಸ್ವೀಕಾರ.

ವಿಜಾಪುರ ತಾ॥ ಜೈನಾಪುರದಲ್ಲಿರುವ ಮಾ॥ ರಾ॥ ಸಂಗಪ್ಪ ದೇಸಾಯಿ ಇವರ ಧರ್ಮಪತ್ನಿ ಉಜಿ॥ ಸೌ॥ ಭಾಗೀರಥಿಬಾಯಿಯವರ ಸೀಮಂತೋತ್ಸವ ಸಮಯದಲ್ಲಿ ಗುರುಗಳ ಆಜ್ಞೆಯಂ ಮೇರೆಗೆ ಪ್ರಥಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಮತ್ತು ಮಿ॥ ರಾ॥ ಸಿದ್ದರಾಮಪ್ಪ ತಿನಪ್ಪ ದೇಸಾಯಿ ಇವರು ತಿವದೀಕ್ಷಾಸಂಪನ್ನರಾದ ಸಮಯದಲ್ಲಿ ತೆಗೆಯಿಸಿದ 1 ರೂ. ಮತ್ತು ಇವರ ಮನೆಯಲ್ಲಿ ಗೌರೀಪೂಜೆಯು ನೆರವೇರಿದ ಸಮಯದಲ್ಲಿ ತೆಗೆಯಿಸಿದ 1 ರೂ. ಒಟ್ಟು 4 ರೂ. ಗಳು ಮಿ॥ ರಾ॥ ಸಂಗಪ್ಪ ದೊಡ್ಡಪ್ಪ ಪಾಟೀಲ ದೇಸಾಯಿ ಇವರ ದ್ವಾರಾ ತಲ್ಪಿರುತ್ತವೆ

ಸೊಲ್ಲಾಪುರ ತಾ॥ ದರ್ಗನಹಳ್ಳಿ ಗ್ರಾಮದ ನಿವಾಸಿ ಗಳಾದ ಮಿ॥ ರಾ॥ ಬಿರಾಜದಾರ ರಾಮಪ್ಪನವರು ತಮ್ಮ ಇಬ್ಬರು ಸೊಸೆಯರಿಗೆ ತಮ್ಮ ವಂಶಗುರುಗಳಾದ ಹೋ ಟಗಿ ಶ್ರೀಗಳವಂದ ತಿವದೀಕ್ಷೆಯನ್ನು ಮಾಡಿಸಿದ ಸಮ ಯದಲ್ಲಿ ಪ್ರಥಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ. ಮತ್ತು ಲಿಂಬಿಜಂಡೋಳ ಗ್ರಾಮದಲ್ಲಿ ಶ್ರೀ ರೇವಣಸಿದ್ದೇ ಶ್ವರ ಔಷಧಾಲಯವು ಸ್ಥಾಪಿತವಾದ ಸಮಯದಲ್ಲಿ ತೆಗೆ ಯಿಸಿದ 1 ರೂ ಒಟ್ಟು 2 ರೂ. ಗಳು ಹೋಟಗಿ ಶ್ರೀಗ ಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ತಾ॥ ಹೂವಿನ ಹಡಗಲಿ ಕೈ॥ ವೇ॥ ಚರಂತಿ ಮಾ॥ ರ ಕಾದಯ್ಯನವರ ಪುತ್ರ ಚಿ॥ಸೌ॥ ನೀಲಮ್ಮನವ್ವನ ಹರಪನಹಳ್ಳಿ ತಾಲೂಕು ಶಿವಲಿಂಗನಹಳ್ಳಿ, ಮಾನಹಳ್ಳಿ ಮರೆದ ವೇ॥ ಬಸವಯ್ಯನವರು ಹೊಸಪೇಟೆ ಮುನ್ಸಿ ಪಲ್ ಎಲೆಮೆಂಟರಿ ಸ್ಕೂಲುಮಾಸ್ಟರ್ ಇವರಿಗೆ ಕೊಟ್ಟು ವಿವಾಹಕಾರ್ಯವನ್ನು ಸದರಿ ಶಿವಲಿಂಗನಹಳ್ಳಿಯಲ್ಲಿ ನೆರ ವೇರಿಸಿದ ಸಮಯದಲ್ಲಿ, ವೇ॥ ಹಂಚಿನಾಳು ಹಿರೇಮಠದ ರುದ್ರಯ್ಯನವರ ಹೆಳಿಕೆಯ ಪ್ರಕಾರ ಪ್ರಥಾಪೋಷಣ ಕ್ಕೋಸ್ಕರ ನರಸ ಕಡೆಯವರಿಂದ ತೆಗೆಯಿಸಿದ 2 ರೂ. ಗಳು ಹೂವಿನಹಡಗಲಿ ಗುರುಸೇವಾಕೇಂಕರ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ತಾ॥ ಗುಳೇದಗುಡ್ಡ ಗ್ರಾಮದಲ್ಲಿರುವ ಮಾ॥ ರಾ॥ ರಾಜಾಸಾಬ ದಾನಪ್ಪನವರ ಮೇಲೆ ಬಂದಿದ್ದ ಅರೋಪವು ಬೊಂಬಾಯಿ ಹೈಕೋರ್ಟಿನಲ್ಲಿ ದೂರವಾದ ಸಂತೋಷಕ್ಕೋಸ್ಕರ ಅವರ ಪುತ್ರರಾದ ಮಾ॥ ರಾ॥ ಮುರಿಗಪ್ಪನವರು 1 ರೂ ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ವಿಮರ್ಶೆ

ಮುಕ್ತಿಮಂದಿರ—ಈ ಗ್ರಂಥವನ್ನು ಹೋಟಗಿ ಶ್ರೀಗಳವರು ರಚಿಸಿರುವರು ಹೆಸರಿಗೆ ತಕ್ಕಂತೆ ಈ ಗ್ರಂಥದಲ್ಲಿ ಮೋಕ್ಷ ವಿಚಾರವು ಬಹು ಚೆನ್ನಾಗಿ ಪ್ರತಿ ಪಾದಿಸಲ್ಪಟ್ಟಿರುವುದು ಮೋಕ್ಷಮಂದಿರವನ್ನು ಸೇರಲು ಗಿಲ ಸೋಪಾನಗಳು ರಚಿಸಲ್ಪಟ್ಟಿರುವವು. ಈ ಮಂದಿ ರವು ಮುಖ್ಯವಾಗಿ ಸಿದ್ಧಾಂತಶಿಖಾಮಣಿಯ ಆಧಾರವ ಮೇಲೆ ಕಟ್ಟಲ್ಪಟ್ಟಿರುವುದು. ಗ್ರಂಥವು ಗಾತ್ರ ಪುಟ ಗಳಿಂದ ಕೂಡಿದ್ದು ಸರ್ವಸಂಗ್ರಾಹ್ಯವಾಗಿದೆ ಬೆಲೆ ೪ ಆಣೆ. ಮೊರೆಯುವ ಸ್ಥಳ—

ವೀರಶೈವ ಆಫೀಸ್
ಪುರಾಣಶೇಷಾಚಾರ್ಲೈನ್ ಬೆಂಗಳೂರುಸಿಟಿ.

ಖಿದಿರಿಮಠದವರ ಧರ್ಮವಿಜಯ

ಪಂ॥ ಖಿದಿರಿಮಠದ ವೀರಭದ್ರಶಾಸ್ತ್ರಿಗಳ ಪೂರ್ವಿಕರಿಂದ ಬೆಜವಾಡ ನಗರದಲ್ಲಿ ಸಂಪಾದಿಸಲ್ಪಟ್ಟಿ ಇನಾಂ ಭೂಮಿಯೂ ಮನೆಯೂ ಮೊದಲಾದ ಆಸ್ತಿಗಳಿಗೆ ಹಕ್ಕು ದಾರರು ಯಾರೂ ಇಲ್ಲವೆಂತಲೂ ಅವು ಸಾರ್ವಜನಿಕ ವೆಂತಲೂ ಆ ದ್ರಾಸು ಹಿಂದೂ ರಿಲಿಜಸ್ ಎಂಡೋಮೆಂಟ್ ಬೋರ್ಡಿನವರು ಅದನ್ನು ಆಕ್ರಮಿಸುತ್ತಿರಲಾಗಿ ಪಂ॥ ಜೆ ಮ ವೀರಭದ್ರಶಾಸ್ತ್ರಿಗಳು ತಾವೇ ಸರಿಯಾದ ಹಕ್ಕು ದಾರರೆಂದು ಅನೇಕ ಬಲವತ್ತರವಾದ ಕಾಗದ ಪತ್ರಗಳೂ ಹಿನೆ ದಾವೆ ಹಾಕಿದರು ಅದು ಹತ್ತು ವರ್ಷಗಳಿಂದಲೂ ಕೂಲಂಕಷವಾಗಿ ವಿಚಾರಕ್ಕೆ ಬಂದಿತು ಡಿ ಮುನ್ಸೀಫರಾದ ಮೆ॥ ರಾ॥ ಶ್ರೀ ಪಿ ವೆಂಕಟ್ಯಮಹಾಶಯರು ನಿಷ್ಪಕ್ಷಪಾತವಾಗಿ ವಿಚಾರಿಸಿ ದೇವಿಕರ್ಮಾರ್ತಿಗಳ ಪ ಸದರೀ ಶಾಸ್ತ್ರಿಗಳೇ ಇದಕ್ಕೆ ಹಕ್ಕುದಾರರೆಂತಲೂ ಇನಾ ಭೂಮಿಯು ಅವರ ಸ್ವಂತ ಆಸ್ತಿಯೆಂತಲೂ ೨೧ ೧೨ ೧೯೩೯ ದಿನ ನಿರ್ಣಯಿಸಿ ದೆವ ವಿಜಯ ಮಾಡಿದ್ದಾ ರೆಂಬುವುದರಲ್ಲಿ ಸಂದೇಹವಿಲ್ಲ ಬೋರ್ಡಿನವರೊಡನೆ ವಿರೋಧವಾಗಿ ವುದೆಂದರೆ ತು ಬಾ ಕೊಂದರೆಯ ಕೆಲಸ ವಾಗಿದೆ ಶಾಸ್ತ್ರಿಗಳ ಶಿಷ್ಯ ಸಮೂಹವೂ ಆಂಧ್ರ ವೀರ ಕೈವರೂ ಈ ಪವಾರ್ತೆಯಿಂದ ಶ್ರೀಮಾ ನ್ಯಾಯಾಧಿ ಪತಿಗಳಿಗೂ ಈ ಕಾರ್ಯಿನಲ್ಲಿ ಸಹಾಯ ಮಾಡಿದ ಎಲ್ಲ ಮಹಶೀಯರಿಗೂ ಈ ಮೂಲಕ ಕೃತಜ್ಞತೆಯನ್ನರ್ಪಿಸು ತ್ತಾರೆ

ಮ ಕುಮಾರಸ್ವಾಮಿ, ಬೆಜವಾಡ

ದರ್ಗನಹಳ್ಳಿಯ ಸಮಾಚಾರ

ತಾ॥ ೧೩-೧೨-೩೯ ಕ್ಕೆ ಶ್ರೀಯುತ ರಾಮಪ್ಪ ರುದ್ರಪ್ಪ ಬಿರಾಜದಾರ ಇವರು ತಮ್ಮ ಅರ್ಧ ಸೂಸಾ ವರಿಗೆ, ತಮ್ಮ ಕುಲಗುರುಗಳಾದ ಹೋಟಗೀ ಶ್ರೀಗಳಿಂದ ತಿವದೀಕ್ಷೆಯನ್ನು ಮಾಡಿಸಿದರು ಆ ಸಮಯದಲ್ಲಿ ಶ್ರೀ ಪ್ರಭುಗೆ ೧೧ ರೂಪಾಯಿ ಆರ್ಪಿಸಲಾಯಿತು ಮಧ್ಯಾಹ್ನ ೩ ಘಂಟೆಗೆ 'ಶ್ರೀ ಮಹಾದೇವ ದೇವಾಲಯದಲ್ಲಿ ಸಭೆ ಸೇರಿತು ಅಕಸ್ಮಾತ್ತಾಗಿ ಇಲ್ಲಿಗೆ ದಯಮಾಡಿಸಿದ, " ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿ ' ಅರ್ಚಕರಿಂದ ವೇ॥ ಬಸಯ್ಯನವರು ಶ್ರೀಶೈಲಿಮಹತ್ತ್ವವನ್ನೂ ವೀರಶೈವರಿಗೂ ಶ್ರೀಶೈಲಕ್ಕೂ ಇರುವ ನಿಕಟಸಂಬಂಧವನ್ನೂ, ಶ್ರೀಶೈಲ ದಲ್ಲಿರುವ ಶ್ರೀಜಗದ್ಗುರು ಪಂಡಿತಾರಾಧ್ಯಪೀಠದ ಪರಂಪರೆ ಯನ್ನೂ ಈಗಿನ ಸಮಯದ ಸನ್ಯಾಸಿಗಳ ಸ್ಥೂರೂಪವನ್ನೂ ಚೆನ್ನಾಗಿ ಪ್ರತಿಪಾದಿಸಿದರು ಶ್ರೀ ಗಂಗಾಧರಶರ್ಮಾ ಹೊನ್ನಗೌಡಂತ ಇವರ ಶಿವನ ಶಕ್ತಿಯನ್ನೂ, ಧರ್ಮವೀರ ವೀರಪ್ಪ ಶ್ಯೆಶ್ರೀ, ಬೋರಾಮಣಿಯವರು ಸತ್ಯುರುಷರ ಸ್ವಭಾವವನ್ನೂ, ಹೋಟಗೀ ಶ್ರೀಗಳ ' ಶ್ರೀಕ್ಷೇತ್ರ ಮಹತ್ತ್ವ ' ವನ್ನೂ ಕುರಿತು ಭಾಷಣಮಾಡಿದರು ಶ್ರೀ ಜಗದಾಚಾರ್ಯರ ಜಂ' ಮಂಗಲದೊಡನೆ ಸಭೆಯ ಕಾರ್ಯವು ಪೂರ್ತಿಸಿತು

" ಶ್ರೀ ಜಗದ್ಗುರು ಸಿದ್ಧಲಿಂಗಸೇವಾಸಂಘ "
ಸೆಕ್ರೆಟರಿ, ವಿಶ್ವಾರಾಧ್ಯ ಹೊನಮುರಗೀಕರ,
ದರ್ಗನಹಳ್ಳಿ

ಸಂತೋಷವಾರ್ತೆ

ವಿಜಾಪುರ ಡಿ॥ ಗುಳೇದಗುಡ್ಡ ಗ್ರಾಮದಲ್ಲಿ ಮೆ॥ ರಾ॥ ದಾನಪ್ಪನವರ ರಿಜಿಸ್ಟಾರ ಎಂಬವರು ಕೇವಲ ಗುರು ಭಕ್ತರೂ ಧರ್ಮನಿಷ್ಠರೂ ಆಗಿದ್ದು ಸಾರ್ವಜನಿಕ ಕಾರ್ಯ ಗಳಲ್ಲಿ ಬಹಳ ಮುಂದಾಳುಗಳಾಗಿರುವರು ಇವರು ಇಲ್ಲಿ ಯ ದಿ ಇಂಡಸ್ಟ್ರಿಯಲ್ ಕೋ ಆಪರೇಟಿವ್ಸ್ ಬ್ಯಾಂಕ್ ಲಿಮಿಟೆಡ್ ಇದಕ್ಕೆ ೨೩ ವರ್ಷಗಳವರೆಗೆ ಚೇರ್‌ಮನ್ನ ರಾಗಿದ್ದರು ಮತ್ತು ಇಪ್ಪತ್ತು ವರ್ಷಗಳವರೆಗೆ ಆನರರಿ ಬೆಂಚ್ ಮ್ಯಾಜಿಸ್ಟ್ರೇಟರೂ, ಮ್ಯೂನಿಸಿಪಲ್ ಕೌನ್ಸಿಲರರೂ ಆಗಿದ್ದರು ಇಂತಹವರಿಗೆ ಗೃಹಚಾರವಶದಿಂದ ದುರ್ಘ ಟನೆಯು ಪ್ರಾಪ್ತವಾಗಿತ್ತು ಆದರೂ ಅದು ತಾ॥ ೨೩-೧೧ ೩೯ನೇ ಇಸ್ವಿದಿವಸ ಬೋಂಬಾಯಿ ಹೈಕೋರ್ಟಿನಲ್ಲಿ ಇವರಂತೆ ಆಯಿತು ಈ ಧರ್ಮಾತ್ಮರನ್ನು ಧರ್ಮವೇ ಕಾಪಾಡಿತು ಈ ಸಂತೋಷಕ್ಕಾಗಿ ಅವರ ಪುತ್ರರಾದ ಚಿ॥ ಮುರಿಗಪ್ಪನವರು ಪ್ರಭುಪೋಷಣಕ್ಕೋಸ್ಕರ ೧೧ರೂ ಯನ್ನು ಸಮರ್ಪಿಸಿದರು ಸತ್ಯಕ್ಕೆ ಸಾವಿಲ್ಲ ಧರ್ಮಕ್ಕೆ ಜ್ಯತಿಯಿಲ್ಲ ಎಂಬ ಮಹನೀಯರ ಉಕ್ತಿಯು ಯಥಾರ್ಥವಾದುದು

ಮುರಘಾರ್ಯ ಕಟ್ಟಿಮನಿ,
ಗುಳೇದಗುಡ್ಡ

ಗೌರೀಮಹೋತ್ಸವ, ಜೈನಾಪುರ

ವಿಜಾಪುರ ಡಿ॥ ಜೈನಾಪುರ ಗ್ರಾಮವಾಸಿಗಳಾದ ಶ್ರೀಯುತ ಸಿದ್ಧರಾಮಪ್ಪ ಶಿವಪ್ಪ ದೇಸಾಯಿ, ಇವರು ತಮ್ಮ ಗೃಹದಲ್ಲಿ ಗೌರೀಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು ಆ ಸಮಯಕ್ಕೆ ತಮ್ಮ ಗುರುಗಳಾದ ಗುರುಸ್ವಾಮಿ ಹಿರೇಮಠದ ಶ್ರೀ॥ ಚರವರ್ಯಮಹಾಲಿಂಗ ಸ್ವಾಮಿಗಳನ್ನೂ ದೇಶಿಕ ಉಮಾಪತಿಸ್ವಾಮಿಗಳನ್ನೂ ವಾದ್ಯವೈಭವದಿಂದ ಬರಮಾಡಿಕೊಂಡರು ಬಳಕ ಗುರು ಪಾದಪೂಜೆಯು ನೆರವೇರಿ ಅನ್ನ ಸಂತರ್ಪಣೆಯು ಜರಗಿತು ಸಾಯಂಕಾಲ ೧ ಘಂಟೆಗೆ ಗುರುಗಳ ಸನ್ನಿಧಿಯಲ್ಲಿ ಗೌರೀ ಪೂಜೆಯು ವಿಧಿವತ್ತಾಗಿ ನೆರವೇರಿತು ಸೌ॥ ಕಾಶೀ ಬಾಯಿ ದಳವಾಯಿ ಇವರು ಗೌರೀಸ್ತೋತ್ರಗಳನ್ನು ಪಾಡಿ ಸರ್ವರಿಗೂ ಆನಂದವನ್ನುಂಟುಮಾಡಿದರು ಒಳಿಕ ಸೌ॥ ಶಾಂತಾಬಾಯಿಯವರು ಅಲ್ಲಿ ನೆರೆದಿದ್ದ ಮುತ್ತೈದೆ ಯರೆಲ್ಲರಿಗೂ ಮಂಗಲದ್ರವ್ಯಗಳನ್ನು ಕೊಟ್ಟರು ಒಳಿಕ ಚಿಕ್ಕ ಬಾಲಕರು ಶ್ರೀಜಗದ್ಗುರು ಪಂಚಾಚಾರ್ಯರ ಸ್ತೋತ್ರ ಗಳನ್ನು ಪಾಡಿ ಸರ್ವರನ್ನೂ ಸಂತೋಷಪಡಿಸಿದರು ಮರುದಿವಸ ಗುರುಗಳ ಆಜ್ಞೆಯ ಪ್ರಕಾರವಾಗಿ ಶ್ರೀಯುತ ಸಿದ್ಧರಾಮಪ್ಪ ದೇಸಾಯಿ ಮತ್ತು ಅವರ ಧರ್ಮಪತ್ನಿ ಯವರು ಮೆ॥ ರಾ॥ ವೀರಪ್ಪ ದೇಸಾ ಯಿ ಕೆರಕಲಮಟ್ಟಿ ಇವರೇ ಮೊದಲಾದವರು ಶಿವದೀಕ್ಷೆಯನ್ನು ಹೊಂದಿದರು ಈ ಸಮಯದಲ್ಲಿ ಪ್ರಭುಪೋಷಣಕ್ಕೋಸ್ಕರ ೨ ರೂಪಾ ಯಿಗಳು ಸಮರ್ಪಿಸಲ್ಪಟ್ಟವು ಕಾರ್ಯಕರ್ತರಿಗೆ ಶ್ರೀ ಜಗದಾಚಾರ್ಯರು ಸಮಸ್ತ ಸನ್ಮಂಗಲಗಳನ್ನೀಯಲೆಂಬು ಹಾಪ್ಕೆಸುಸ,

ವೀರಪ್ಪ ದೇಸಾಯಿ,
ಕೆರಕಲಮಟ್ಟಿ

[ಗತೆಯ ಪುಟದಿಂದ ಮುಂದುವರಿದುದು]

ಬೇರೆ ಉಪಾಯವಿಲ್ಲ ನಾಡು ಜನಾಂಗದ ಸಾಶ್ವತಿಕ ಸ್ವರೂಪ ಮಾತ್ರ ನುಡಿಯೇ ಅದರ ಜೀವ, ಅತ್ಮ, ಅಂತರಾತ್ಮ ನುಡಿಯಿಲ್ಲದ ನಾಡು ನಾಡಲ್ಲ, ಕಾಡು ನುಡಿಯಿಂದಲೇ ನಾಡು— ಎಂದು ತಿಲಕರು ಹೇಳಲಿಲ್ಲವೇ ' ಜಗತ್ತಿನೊಳಗೇ ಯಾವ ದೃಷ್ಟಾಂತವನ್ನೇ ನೋಡಿದರೂ ನಾಡಿಗೂ ನುಡಿಗೂ ಇರುವ ದೇಹ ಜೀವ ಗಳ ಅನ್ಯೋನ್ಯ ಸಂಬಂಧವು ಶಾಶ್ವತವಾಗಿ ಸತ್ಯವಾಗಿ ಕಾಣುವುದು ಆದ್ದರಿಂದ ಕನ್ನಡದ ಪ್ರಚಾರಕ್ಕೆ ಮಾಡುವ ಕಾರ್ಯಗಳಲ್ಲಿ ತಪ್ಪಿಲ್ಲ ಕನ್ನಡಿಗರಿಗೆ ಯಾವ ಭಾಷೆಯ ಮೇಲೂ ದ್ವೇಷವಿಲ್ಲ, ಅಸೂಯೆ ಇಲ್ಲ, ತಿರಸ್ಕಾರವಿಲ್ಲ ಅದರೆ ಕನ್ನಡನಾಡಿನಲ್ಲಿ ಕನ್ನಡ ಮೆರೆಯ ಬೇಕು ಅದಕ್ಕೆ ಯಾರೂ ತಡೆಮಾಡಲಾಗದು

೫೦ ವರ್ಷಗಳ ಹಿಂದೆ ಕನ್ನಡಿಗರು ಕನ್ನಡದ ಅವ ಸ್ಥೆಯನ್ನು ಅರಿತರು ಅಲ್ಲಿಂದ ಸ್ವವಸಾಯಕ್ಕೆ ಅರಂಭಿಸಿ ದರು. ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪನೆಯಾಯಿತು. ಮೈಸೂರಿನಲ್ಲಿ ಕೇ ಶಿ ರಾಮಾನುಜಯ್ಯಂಗಾರ್, ಎಸ್ ಜಿ ನರಸಿಂಹಾಚಾರ್ ರುಗಳು, ಆರ್ ನರಸಿಂಹಾಚಾರ್ಯರು ಕಾರ್ಯಾರಂಭ ಮಾಡಿದರು ಮಂಗಳೂರು ಕಡೆ ಕರೋಡಿ ಪುಟ್ಟರಾಯ ರೇ ಮುಂತಾದವರು ಮುಡಿದರು ಧಾರವಾಡದ ವಿದ್ಯಾ ವರ್ಧಕ ಸಂಘಕ್ಕೆ ವೈಸಂಸರಿಸಿ ಮಹಾರಾಜರೂ ಸ್ಕಾರ್ ದವರೂ ಸಹಾಯ ಮಾಡುತ್ತಿದ್ದರು ಅಧರೂ ಫಲಕಾ ಯವಾದ ಕೆಲಸವಾಗಲಿಲ್ಲ ಅನಂತರ ಶ್ರೀ ಬೆನಗಲ್ ರಾಮರಾವ್ ರು ಕರ್ನಾಟಕ ಏಕೀಕರಣದ ಆಲೋಚನೆ ಯನ್ನು ಮುಂದಿಟ್ಟರು ನಾಲ್ವಾರು ವರ್ಷಗಳ ಸತತ ಪ್ರಯತ್ನದಿಂದ ೧೯೧೨ ರಲ್ಲಿ ಬೆಂಗಳೂರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾಯಿತು ಅಂದಿನಿ ದಲೇ ಕನ್ನಡದ ಪುನರುದ್ಧಾರ ಕಾರ್ಯಕ್ಕೆ, ಅಂದರೆ ಕರ್ನಾಟಕದ ಏಕೀಕರಣ ಕಾರ್ಯಕ್ಕೆ ನಿಜವಾಗಿ ಆರಂಭ ವಾಯಿತು

ಇಂದು ಕನ್ನಡ ಮಡಿ ತನ್ನ 'ಬಾವುಟ' ವನ್ನು ಎತ್ತಿ ಹಾರಿಸುತ್ತ ನಿಂತಿದೆ. ಮೈಸೂರು ಸೀಮೆಯಲ್ಲಿ ಕನ್ನಡವು ಮುನ್ನುಗ್ಗುತ್ತಿರುವುದನ್ನು ನಾವೀಂದು ನೋಡುತ್ತಿದ್ದೇವೆ ಕನ್ನಡವೇ ಅಧ್ಯಯನ ಭಾಷೆಯಾಗಬೇಕೆಂಬ ವಿಚಾರವು ಪ್ರಚಾರದಲ್ಲಿ ಒರತೊಡಗಿ, ಕೆಲವಿಟ್ಟೆಗೆ ಅಜಾರಕ್ಯವು ಆಪ್ಪದವಾಗಿದೆ ವಿದ್ಯಾಸಿಕೆದವರು ಪುರಾತನ ಕನ್ನಡ ಗ್ರಂಥಗಳ ಪ್ರಕಟನೆಯಲ್ಲಿ ತೊಡಗಿದ್ದಾರೆ ಉಳಿದ ಸಂ ಸ್ಥಾನಗಳ ಪಠ್ಯಕ್ರಮ ಕೂಡ ಉತ್ತಮವಾಗುತ್ತಿದೆ ಕನ್ನ ಡಿಗರಲ್ಲಿ 'ಕನ್ನಡತನ' ದ ದಿವ್ಯಜ್ಯೋತಿಯು ಒಡಮೂ ಡಿದೆ ಇಂದು ಕನ್ನಡ ನಾಡಿನಲ್ಲಿ ಉಟ್ಟಾಗಿರುವ ಅದ್ಭುತ ಕ್ರಾಂತಿಯನ್ನು ಕಂಡು ಹಿಗ್ಗದವರಾರು? ಕರ್ನಾಟಕ ಸಾಹಿತ್ಯ ಪರಿಷತ್ತು ಇಂದು ಕನ್ನಡಿಗರಲ್ಲೆಲ್ಲ ಸ್ಫೂರ್ತಿ ಕೇಂದ್ರವಾಗಿದೆ

ಕನ್ನಡ ನುಡಿಯೆಂದು ಬೆಳಕಿಗೆ ಬರುತ್ತಿದೆ ಕವಿಗಳು, ಗ್ರಂಥಕಾರರು, ಕತೆಗಾರರು, ಲೇಖಕರು, ಪತ್ರಿಕಾ ಕರ್ತರು, ವಿಮರ್ಶಕರು ಕನ್ನಡ ಸರಸ್ವತಿಯ ಸೇವೆಗೆ ಸಜ್ಜಾಗಿ ಮುಂದೆ ಬಂದಿದ್ದಾರೆ ಕನ್ನಡದ ಸಾಹಿತ್ಯವು ರಾಶಿಯಾಗಿ ಬಿದ್ದಿದೆ. ಭರದಿಂದ ನಡೆದಿರುವ ಇಂದಿನ ಸಾಹಿತ್ಯವು ಒಂದು ಬಗೆಯ ನಿಸರ್ಗಸೃಷ್ಟಿಯ ಸ್ಫೋಚ್ಛ ಪ್ರವೃತ್ತಿಯನ್ನನುಕರಿಸುತ್ತಿರುವುದೆಂದು ಹೇಳ ದರೆ ತಪ್ಪಾಗಲಾರದು ನಿಸರ್ಗಾಯ ನಿರಾಕೃತ ನಿಸರ್ಗ ನಿರ್ವಿಗ್ನ ಪರಿಸ್ಥಿತಿಯೆಂದ ನಮ್ಮ ಜನಾಂಗ ವನ್ನು ಎತ್ತಿ ಅದನ್ನು ಎಲ್ಲ ಬಗೆಯಿಂದಲೂ ವೀರ್ಯ ಸಂಪನ್ನ ಮಾಡುವಂತಹ ಸಾಹಿತ್ಯವನ್ನು ನಾವು ಅವರ ಕೈಗೆ ಕೊಡಬೇಕಾಗಿದೆಯೆಂಬುದು ನನ್ನ ನಿಶ್ಚಿತಾಭಿಪ್ರಾ ಯವಾಗಿದೆ

ಹಿಂದೀಯ ವಿಚಾರವಾಗಿ ನಾಲ್ಕು ಮಾತು ಹಿಂದೂ ಸ್ಥಾನದ ರಾಷ್ಟ್ರೀಯಕ್ಕದ ಸಿದ್ಧಿಗಾಗಿ ಹಿಂದೀ ಭಾಷೆಯೇ ಹಿಂದೂಸ್ಥಾನದ ಭಾಷೆಯಾಗಬೇಕು ನಾಗರಿಯೇ ಅದಕ್ಕೆ ಲಿಪಿಯಾಗಬೇಕು ಎಂಬ ಪ್ರಚಾರ ನಡೆದಿದೆ ಒಂದೇ ಭಾಷೆ ಒಂದು ಧರ್ಮ ಮೊದಲಾದ ಕಲ್ಪುಗಳ ಲ್ಲಿದೆ ರಾಷ್ಟ್ರೀಯತ್ವಸಿದ್ಧಿಯಾಗಲಾರದೆಂಬ ವಾದದಲ್ಲಿ ತುರುಳಿಲ್ಲ. ಸ್ವಟ್ಜರ್‌ಲ್ಯಂಡ್‌ನಲ್ಲಿ ನಾನಾ ಭಾಷೆಗಳವೆ ಕೆನ ಡಾದಲ್ಲಿ ನಾನಾ ನುಡಿ ಅಲ್ಲಿನ ರಾಷ್ಟ್ರೀಯತ್ವ ಏನಾಗಿದೆ? ಹಿಂದೂಸ್ಥಾನವು ಅನಾದಿ ಕಾಲದಿಂದ ನಾನಾ ಭಾಷೆ ಗಳಿಗೆ ಸಂಸ್ಪೃತಿಗಳಿಗೆ ಆಗರವಾಗಿದೆ ಹಿಂದೂಸ್ಥಾನ ಕ್ಕೆಲ್ಲ ಹಿಂದಿಯೊಂದೇ ಭಾಷೆಯಾಗಬೇಕೆಂಬ ಹುಚ್ಚು ಲಹರಿಯಲ್ಲಿ ಬಿದ್ದು ಎಲ್ಲೆಲ್ಲಿಯೂ ಹಿಂದೀ ಭಾಷೆಯನ್ನು ಹಬ್ಬಿಸಲು ಹವಣಿಸುತ್ತಿರುವ ನಮ್ಮ ಬಾಂಧವರ ಉತ್ಸಾ ಹದ ಅಧಿದೇವರು ಆನಾವಶ್ಯಕವಾದ ದೇಯ ನಾವು ಸ್ಪಷ್ಟವಾಗಿ ಹೇಳುತ್ತೇನೆ ಇಂಗ್ಲೀಷಿನ ಸ್ಥಾನದಲ್ಲಿ ಹಿಂದೂಸ್ಥಾನ ಬಂದು ನಿಲ್ಲಬೇಕು ನಿಜ ಆದರೆ ಯಾವ ಮಟ್ಟಿದವರೆಗೆ ಹಿಂದಿಯಮ್ಮ ಕಲಿಸಬೇಕೆಂದು ನಾಯ ಕರು ಬಯಸುವರೋ ಅದನ್ನು ಮರೆತು ಸಾಮಾನ್ಯ ಜನರೆಲ್ಲ ಹಿಂದೂಸ್ಥಾನಿಯನ್ನು ಕಲಿತೇತರಬೇಕೆಂದು

ಒತ್ತಾಯಪಡಿಸುವುದು ನ್ಯಾಯವಲ್ಲ. ವ್ಯವಹಾರದ ಮಟ್ಟಿಗೆ ಹಿಂದೀ ಭಾಷೆ ತಿಳಿದರೆ ಸಾಕೆಂದು ಮಹಾತ್ಮರೇ ತಿಳಿಸಿದ್ದಾರೆ. ಹೀಗಿರುವಲ್ಲಿ ಹಿಂದೀ ಕಲಿಕೆ ತೀರಬೇಕೆಂದು ಒತ್ತಾಯಪಡಿಸುವುದು ಖಂಡಿತ ಸರಿಯಲ್ಲ. ಮದ್ರಾಸಿನ ಕಾಂಗ್ರೆಸ್ ಸರ್ಕಾರವು ಕನ್ನಡವನ್ನು ಗಮನಿಸದೆ ಹಿಂದಿಯನ್ನು ನಿರ್ಬಂಧವಾಗಿ ಕನ್ನಡಿಗರಿಗೆ ಕಲಿಸಲು ಪ್ರಯತ್ನಿಸಿದ್ದು ಹೇದದೆ ವಿಚಾರವೇ ಸರಿ. ಕನ್ನಡಕ್ಕೆ ಅಷ್ಟಿಯಾಗದಂತೆ ಹಿಂದಿಯನ್ನು ಬೇಕಿಸುವುದನ್ನು ಕನ್ನಡಿಗಾರರೂ ವಿರೋಧಿಸಲಾರರು.

ಕನ್ನಡಿಗರಿಗೆ ಈಗ ಒದಗಿರುವ ಗಂಡಾಂತರವನ್ನು ನೀಗಿ, ಕರ್ನಾಟಕವು ತನ್ನ ಉನ್ನತಿಯನ್ನು ಸ್ಥಾಪಿಸಿಕೊಳ್ಳಬೇಕಾದರೆ ಕರ್ನಾಟಕವು ತನ್ನನ್ನು ತಾನೇ ಆಡಿಕೊಳ್ಳಬೇಕಾದರೆ ಶಕ್ತವಾಗಿರಬೇಕು. ಇದೇ ಕರ್ನಾಟಕ ಏಕೀಕರಣದ ಗುರಿಯ ಸುತ್ತಮತ್ತಲಿನವರು ನಮ್ಮ ಈ ಕಾರ್ಯಕ್ಕೆ ಅಡ್ಡಿ ಪಡಿಸುತ್ತಿದ್ದಾರೆ. ಶ್ರೀ ಸಿ. ರಾಜಗೋಪಾಲಾಚಾರ್ಯರೇ " ಕನ್ನಡನಾಡು ಎಂದಾಗುವಷ್ಟಲ್ಲಿ ಸಾಯಿಲ್ಲ " ಎಂದರಲ್ಲವೇ? ಈಗ ನೆರೆಹೊರೆಯ ರಾಜ್ಯಗಳಿಗಿರುವ ಸ್ವಾಮ್ಯಗಳನ್ನು ತಮ್ಮೊಳಗೇ ಸೇರಿಸಲು ಪ್ರಯತ್ನದಲ್ಲಿದ್ದಾರೆ ಇದನ್ನು ತಡೆಯಬೇಕು. ೧೯೪೬ರ ರಲ್ಲಿ ಹೊಸ ಒಪ್ಪಂದಗಣತಿಯಾಗತಕ್ಕದ್ದಿದೆ. ಆಗ ಗಡಿನಾಡಿನ ಕನ್ನಡಿಗರಲ್ಲರೂ " ನಾವು ಕನ್ನಡಿಗರೇ ನಮ್ಮ ತಾಯಿ ನುಡಿ ಕನ್ನಡ " ಎಂದು ಹೇಳುವಂತೆ ಪ್ರಚಾರ ನಡೆಸಬೇಕು. ಬಂಗಾಳವು ಬ್ರಿಟಿಷ್ ಜನಾಂಗವನ್ನು ನಡುಗಿಸಿಬಿಟ್ಟಿತು. ಬಂಗಾಳವನ್ನು ಎರಡು ಭಾಗ ಮಾಡಿದುದನ್ನು ಜಪ್ಪಿಯವರು ಕೊಹಿನೂರಿಗಿಂದರು. ಬಂಗಾಳದ ಇತಿಹಾಸವು ನಮಗೆ ಸ್ಫೂರ್ತಿಯಾಗಲಾರದೆ? ನಮ್ಮನ್ನು ಒಂದು ಗಬೇಕು. ನಮ್ಮ ಜನಾಂಗ ಸ್ವಕಂತ್ರವಾಗಬೇಕ ನಮ್ಮ ಭಾಷೆ, ಸಾಹಿತ್ಯ, ಮಾಧ್ಯಮ, ಸಂಸ್ಕೃತಿ ಬಾಳಬೇಕು. ತಳೆಯಲ್ಲಿಲ್ಲ ಕಳೆಗೊಂಡು ಮೆರೆಯಬೇಕು. ಸಕಲ ವಿಶ್ವವ್ಯಾಪ ಸಂಪತ್ತಿಯಾಗಿ ಹಿಂದೂಮ್ಮೆ ಎಲ್ಲರನ್ನು ಮುಗ್ಧಗೊಳಿಸಿದ್ದ ಕನ್ನಡ ತಾಯಿಗೆ ಅವಳ ಪೂರ್ವ ವೈಭವವನ್ನೆಲ್ಲ ಮತ್ತೆ ದೊರಕಿಸಿಕೊಟ್ಟು, ಅವಳನ್ನು ಅಭಿವೃದ್ಧಿಯಾದ ಅರಸು ತನದ ಗುದ್ದಿಗೆಯಲ್ಲಿಟ್ಟು, ಅವ ಲಂಬಕಾಶ್ರಿತವಾದ ಉತ್ಕೃಷ್ಟದ ಹರಕೆಗಳನ್ನು ನಾವು ಒಡಿಯಬೇಕು. ಆ ಆಸೆ ನಮಗಿದ್ದರೆ ನಾವು ಆಕೆಯ ನೆಲೆಯಲ್ಲಿ ಆತ್ಮಾರ್ಪಣೆಗೆ ಸಿದ್ಧರಾಗಿರಬೇಕು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಯರ ಮನೆಗೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದವು ಆ ವರ್ಷ ದಿಗೆ ಏಮಸರ್ಕ್ಕೊಂ ಹತ್ತುವರ್ಷಕ್ಕೊಂ ಎಂದಾದರೂ ಹೋಗಿ ಶಿಷ್ಯರ ಒಬ್ಬ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವದು ಅವರು ತಮ್ಮ ಕರ್ತವ್ಯಕ್ಕೆ ಅಸಾಧ್ಯ ಶಿಷ್ಯರು ಯಾವತ್ತೂ ವಿಷಯ ಗಳನ್ನು ಬರೆದುಕೊಳ್ಳಲಿ ಕಾಣಿಕೆಯನ್ನು ಮಾತ್ರ ತೆಗೆದುಕೊಳ್ಳಲಿ ಇದು ಹೋಗಿದಿಹುದು. ಈ ಅವ್ಯವಸ್ಥೆಯಿಂದ ಅನೇಕ ಗುರುವರ್ಯರು ತಮ್ಮ ಶಿಷ್ಯರ ಮನೆಗಳೇ ಗುರುತ್ತಿಲ್ಲದೆ ಹೊಸ ಗಳನ್ನು ಮಾಡುವುದಕ್ಕೊಳ್ಳರ ಮೇಲ್ಕಂಡ ಪುಸ್ತಕವನ್ನು ಹೊಂದಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಒಬ್ಬರ ವಿಳಾಸವನ್ನು ಮತ್ತೊಬ್ಬರು ಕಾಣಿಕೆಯನ್ನು ಬರೆದುಕೊಳ್ಳಲು ಅವಕಾಶವಿದೆ. ಪ್ರತಿಯೊಬ್ಬ ಗುರುವರ್ಯರೂ ಕಂಡುಕೊಂಡು ಅವರಿದ್ದಿಂತೆ ವಿಳಾಸವನ್ನಾ ಬರೆಯಿಸಿ ಅವರಿಂದ ಕಾಣಿಕೆಯನ್ನು ಅಂದ ತಮ್ಮ ಶಿಷ್ಯರನ್ನು ಕಾಣಾಕ್ಕಳ್ಳಲೇಕು ಇದಕ್ಕಾಗಿ ಎಂದೂ ಶಿಷಂಪ್ರ ಕಾಗದಗಳನ್ನು ಸಹಿಗೊಳಿಸುವಲ್ಲಿದೆ ಸೂಚನಾ ಮತ್ತು ಭವ್ಯವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇಗ ಪಂಗಿ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಾಗಲಿ, ಶ್ರೀರುದ್ರಾಧ್ಯಾಯ-ಪುರುಷಾಧ್ಯಾಯ ಪುರುಷಸೂಕ್ತಗಳಾಗಲಿ ವೈದಿಕಸ್ವರಗಳಾಗಲಿ ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಗ್ರಾಜ ಸುವಿಶಾಲವಾದ ವೈದಿಕವಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವನ್ನು ಕುರಿತು ಬರೆಯುವ ಅಲ್ಲದೆ ಈ ಪೂಜಾವಿಧಿಯ ಅಂಕ್ಯದಲ್ಲಿ—ಶಿವಪಹತ್ರಸಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವಿನಾಮಾವಳಿ, ಷಣ್ಮುಖಸ್ತವನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರು ಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲಾಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೫ ಆಣೆ ಏ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ತಿಪಾರಕ್ಕದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕುಕ್ಕಿರದೇಕದ ಸ್ವಸ್ಥಧಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥವಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನರಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಪೆಡೆಕಾಸನ್ನಿಗೆ ಅಪ್ಪಣೆಯ ನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನೂ ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ೫ ಗೆ ದೊರೆಯುವುದು ಏ ಪಿ ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

॥ ಶ್ರೀ ಗಣೇಶಾಯನಮಃ ॥

ಶ್ರೀ ಪೂವಲ್ಲೀ ಪಂಚವರ್ಣೆಗಿ ಶ್ರೀ ಚಿಕ್ಕನಂಜಾ
ಜಾರ್ಯರಿಂದ ವಿರಚಿತನಾದ

ಶ್ರೀ ಜಗದ್ಗುರು ವಿಶ್ವಕರ್ಣವಿಜಯ

ನಕ್ಷತ್ರಮಾಲಿಕಾ

ಸತ್ಯಸ್ವರೂಪಾಯ ಚಿದಾತ್ಮಕಾಯ ಆನಂದಕಂದಾಯ ಜ
ಕಾಶ್ರಯಾಯ । ವಿಶ್ವಕರ್ಮಣೇ ಯ ಶಿವದಾಯ ಶ್ರೀವಿ
ಯೋಗಾಯ ನಮಃ ಶಿವ ಚು ೧॥

ಜಿಜ್ಞಾಸುಶಿಷ್ಯಯೋಗೀಂದ್ರಪ್ರೇರ್ತ್ರಂ ಸತ್ಕೃರ್ವಾಲಂ
ಶ್ರೀವಿಶ್ವಕರ್ಣವಿಜಯಂ ವ್ಯಾಖ್ಯಾಸ್ಯಾಮಿ ಕಿಂಚನ ॥

ಶ್ರೀ ಚಿಕ್ಕನಂಜಾಚಾರ್ಯನು ಸಂಸ್ಕೃತದಲ್ಲಿ ಶ್ರೀ ಜಗ
ದ್ಗುರು ವಿಶ್ವಕರ್ಣಾ ವಿಜಯವೆಂಬ ಲಕ್ಷಣ ವ್ಯಾಕರಣ
ನಕ್ಷತ್ರಜ್ಯೋತಿಸ್ಸಾಮುದ್ರಿಕಾದಿ ಶಾಸ್ತ್ರಗಳಲ್ಲಿ ಪರಿಣತರಾದ ರಚಿಪುಸಂಧಿ
ವನಾಗಿ 'ಸಮಾಪ್ತಿಕಾರಿಣೀಮನುಷ್ಯಚರೇತ್' ಎಂಬ ಶಿಷ್ಟಾಚಾರ ಪರಿಪಾಲನ ತರ್ಪಿತಿಯ ಕ್ರಮಾನುಸಾರವಾಗಿ ತಮ್ಮ ಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗುವುದಕ್ಕಾಗಿ ಪ್ರಾರ್ಥನೆಯನ್ನು ಹೊಂದಲೆಂಬಿಕ್ಕಾಯಿ ಸಪ್ರಗ್ರಂಥದ ಪ್ರಾರಂಭದಲ್ಲಿ ಸತ್ಯಸ್ವರೂಪಾಯ' ಎಂಬ ಶ್ರೀ ಸರಿಪಾಸ ನಮಸ್ಕಾರರೂಪಕವಾದ ಮಂಗಲವನ್ನು ಆಚರಿಸುತ್ತಾನೆ

ನ್ಯಾಖ್ಯಾನೆ—ಸತ್ಯಸ್ವರೂಪನೂ ಚಿನ್ಮಯ ನೂ ಬ್ರಹ್ಮಾನಂದವೆಂಬ ವೈಶಿಷ್ಟ್ಯಕ್ಕೆ ಮೂಲಾಧಾರಸ್ವರೂಪನೂ ಶಾಶ್ವತನೂ ಚಿದಾಚಿದ್ರೂಪಕ್ಕೆ ಮೂಲಕಾರಣನೂ ಸರ್ವ ಮಂಗಲೆಯ ವಲ್ಲಭನೂ ಶ್ರೀ ಲಿಂಗಮೂರ್ತಿಸ್ವರೂಪನೂ ಆಗಿರುವ ಶ್ರೀ ಪರಶಿವನಿಗೆ ನಮಸ್ಕಾರವು

ಈ ಮಂಗಲಶ್ಲೋಕದಲ್ಲಿ ಶ್ರೀ ಪಂಚಾಕ್ಷರೀಮಹಾ ಮಂತ್ರವು ಉಕ್ತನಾಗಿರುವದರಿಂದ ಗ್ರಂಥಕರ್ತನಿಗೂ ಓದುಗರಿಗೂ ಕೇಳುವವರಿಗೂ ಸರ್ವಪಾಪಕ್ಷಯದ್ವಾರಾ ಇಷ್ಟಾರ್ಥಗಳು ಲಭಿಸುವವೆಂಬ ಭಾವವು ॥೧॥

ಸೋಮಾಂಶುಸಂಶೋಭಿತಪಾರಿಜಾಂ ವಾಸನಾಸಮಾರೋಪಿತ ವಾಸುಭೂಂ । ಪ್ರಾಪುಪ್ರಧಾರಂಚತಕಂಒಕಂಠಂ ಶ್ರೀಮಾಧ್ಯ ರಾಮಂ ಪ್ರಣಮಾಮಿ ಶಂಭುಂ ॥೨॥

ಚಂದ್ರನೆ ಕಿರಣಗಳಿಂದ ಶೋಭಾಯಮಾನವಾದ ಜಡಗಳಿಂದ ವಿರಾಜಮಾನನೂ, ಲೋಕೋತ್ತರ ಸುಂದರಿಯಾದ ಸರ್ವಮಂಗಲೆಯಿಂದ ಸಮಾವಿಷ್ಟವಾದ ದೇಹದ ವಾಮಭಾಗವುಳ್ಳವನೂ, ನೀಲಮಯವಾದ ಪ್ರಭೆಯಿಂದ ರಂಜಿಸುವ ಕಂಬುಕಂಠವುಳ್ಳವನೂ, ಪರಿತಿಶಯ ಪ್ರೇಮ ದಿಂದ ಪರಿಶೋಭಿಸುವನನ್ನೂ ಆದ ಶ್ರೀ ಶಂಭುವನ್ನು ನಮಸ್ಕರಿಸುವೆನು

ಮೊದಲನೆಯ ಶ್ಲೋಕದಲ್ಲಿ ನಿರಾಕಾರವಾದ ಶ್ರೀ ಲಿಂಗಮೂರ್ತಿಸ್ವರೂಪಪರಶಿವನ ಸ್ತುತಿಯೂ, ಎರಡನೆಯ ಶ್ಲೋಕದಲ್ಲಿ ಸಾಕಾರವಾದ ಅರ್ಧನಾರೀಶ್ವರ ಸ್ವರೂಪ ಸದಾಶಿವನ ಸ್ತುತಿಯೂ ಮಾಡಲ್ಪಟ್ಟಿದ್ದು ಎರಡೂ ಶ್ಲೋಕಗಳಲ್ಲಿ ಸಂಬಪಟ್ಟಿರುವ ಶಕ್ತಿತ್ರಿತಿಶ್ಚಯವು ಸ್ಪಷ್ಟವಾಗಿ ಹೇಳಲ್ಪಟ್ಟಿರುವದು ಮೂರನೆಯ ಶ್ಲೋಕದಲ್ಲಿ ಪರಶಿವನ ಆದಿಶಕ್ತಿಯನ್ನು ವರ್ಣಿಸುವನು ॥೩॥

ಶಂಭೋಃ ಸದಾಸಾಧಿತಸಾಮಭೇದಾಂ ಭಕ್ತಪ್ರಪಾನೋಚಿತ ಸಿದ್ಧಿದಾಂ । ವಿಜ್ಞಾಪಿಚಿಚಿತ್ತಕಲಸ್ವರೂಪಾಂ ತಾಮಾದಿಶಕ್ತಿಂ ವಸಸಾ ಸ್ಮರಾಮಿ ॥

ಶ್ರೀ ಪರಶಿವನ ಶ್ರೇಯಾಭಿಕಾಂಕ್ಷಿಯಿಂದ ಸಾಧಿಸಲ್ಪಟ್ಟ ವಾಮದೇಹವುಳ್ಳವಳೂ, ಭಕ್ತರಿಗೆ ಕೊಡಲಿಕ್ಕೆ ಯೋಗ್ಯ ವಾದ ಸಿದ್ಧಿಗಳಿಗೆ ಆಲಯಸ್ವರೂಪಳೂ, ವಿಶ್ವನೇ ಆದಿಯಾದ ಸಕಲ ಶಕ್ತಿ ಸ್ವರೂಪಳೂ, ಪರಶಿವನಲ್ಲಿ ಅನಿಶಾ ಭಾವನೆಂಬ ಬಂಧದಿಂದಿರ ವನಲೂ ಆದಿ ಆದಿಶಕ್ತಿಯೆನ್ನು ಮನಸ್ಸಿನಿಂದ ಸ್ಮರಿಸುವೆನು ॥೩॥

ವಿಶ್ವೇಶಲಿಂಗ-ಜಿಗಜನ್ಮಭಾಜಂ ಲಿಂಗಾಂತಕಸ್ತೋಷ ಜಟಾ ವಿರಾಜಂ । ವಂದೇ ಸ್ವಭಕ್ತೇಚ್ಛಿತಕಲ್ಪ ಭೂಮಾ ಶ್ರೀನಿಕ್ಕರ್ಣ ಗುರುರಾಜರಾಜಂ ॥೪॥

ಶ್ರೀ ಕಾಶೀವಿಶ್ವೇಶ್ವರಲಿಂಗದಿಂದ ಸಂಪಾದಿತವಾದ ಅಪಾಖ್ಯತೇಜಸ್ಸನ್ನು ಹೊಂದಿದವನೂ, ಶಿವಲಿಂಗದಿಂದ ಅಂಕಿತವಾದ ಸ್ವರ್ಣಮಯ ಜಡಗಳಿಂದ ವಿರಾಜಿಸುವ ವನೂ ತನ್ನ ಭಕ್ತರಿಗೆ ಇಷ್ಟಾರ್ಥವನ್ನು ಕೊಡುವವರಲ್ಲಿ ಕಲ್ಪವೃಕ್ಷಸ್ವರೂಪನೂ, ಗುರುಸಮೂಹಕ್ಕೆ ಸಾರ್ವಭೌ ಮನೂ ಆದ ಶ್ರೀ ವಿಶ್ವಕರ್ಣಗಣಾಧೀತನನ್ನು ವಂದಿ ಸುತ್ತೇನೆ ॥೪॥

ಸ್ವಾಮ್ಯಜಲೇಶಂ ಶ್ರಿತಕಲ್ಪವೃಕ್ಷಂ ಭಕ್ತ್ಯಾಲಿಸಂರಕ್ಷಣದೃಷ್ಟಿ ದೀಕ್ಷಂ । ಪ್ರಣಾಮ್ಯಮಂ ನಿರ್ಜಿತಪೂರ್ವಪಕ್ಷಂ ಶ್ರೀಶಿಷ್ಯಶಂಜೇಶ್ವರ ಮನ್ಮಾನಸ್ಥಂ ॥೫॥

ಸಿದ್ಧಾಚಲಸ್ಥೆ ಅಧೀಶ್ವರನೂ, ತನ್ನನ್ನು ಆಶ್ರಯಿಸಿದ ವರಿಗೆ ಕಲ್ಪವೃಕ್ಷಸನಾನನೂ, ಭಕ್ತಸಮೂಹವನ್ನು ಸಂ ರಕ್ಷಣಮಾಡುವ ವಿಷಯ ವಲ್ಲಿ ಬದ್ಧದೀಕ್ಷನೂ, ಚೆನ್ನಾಗಿ ಜಯಿಸಲ್ಪಟ್ಟ ಪರಸಿದ್ಧಾಂತವೆಂಬ ಪೂರ್ವಪಕ್ಷವುಳ್ಳವನೂ ಪರಮಾಪ್ತಳ್ಳನಸದ್ಗನೂ ಆದ ಶ್ರೀ ಪಂಚವರ್ಣೆಗಿ ಸಿದ್ಧನಂಜೇಶನಿಂಬ ನನ್ನ ಸಮ್ಮಗುರುವನ್ನು ನಮಸ್ಕರಿ ಸುತ್ತೇನೆ ॥೫॥

ಶ್ರೀಚನ್ನಮಂತ್ರಾಂಶಿಯಾ ಗ್ರಬುದ್ಧಸ್ಫೂರ್ತ್ಯೇತ್ಪರೇ ಶ್ರೀಗುರು ಬೋಧತೀ ಯಜ್ಞ । ಕಾಪಾಶ್ರಸಂಗೇ ಗುರುವಿಶ್ವಕರ್ಣಾಚಾರ್ಯಕೃ ವಾಕ್ಯಂ ನಮಾಹಂ ಪ್ರಸಕ್ಷೈ ॥೬॥

ಶ್ರಬುದ್ಧವಾದ ಪ್ರಯೋತ್ಸರೆವುಳ್ಳ ಶ್ರೀ ಸಿದ್ಧನಂ ಜೇಶ ಗುರುವಿನಿಂದ ಉಪದೇಶಿಸಲ್ಪಟ್ಟ ಕಥಾಪ್ರಸಂಗ ವಲ್ಲಿ, ಶ್ರೀ ಚಿಕ್ಕವೀರಾಂಬಿಕೆಯಿಂದ ಕೇಳಲ್ಪಟ್ಟ ಯಾವ ವಿಶ್ವಕರ್ಣಚರಿತ್ರವಿದೆಯೋ ಅದನ್ನು ನಾನು ಸಾದ್ಯಂತ ವಾಗಿ ಸಂಕ್ಷೇಪದಿಂದ ಹೇಳುತ್ತೇನೆ ॥೬॥

ಶ್ರೀಪಾರ್ವತೀಕರ್ಣಾಮೃಗನೇತ್ರಿರಸ್ಯ ಚಾರಿತ್ರ್ಯಮೇಕುರು ಬೋಧಪೂರ್ಣಾಂ । ದಿವ್ಯಾಗಮೋಕ್ತೈರುಚಿತೈಃ ಸ್ವಮೋಕ್ಷೇ ಶ್ರೀಚಿಕ್ಕನಂಜೇಶಕವಿರ್ಭವತ್ತೇ ॥೭॥

ಶ್ರೀ ಸದ್ಗುರುವಾದ ಸಿದ್ಧನಂಜೇಶನ ಸದ್ಬೋಧ ಪರಿ ಪೂರ್ಣವಾದ ಶ್ರೀ ವಿಶ್ವಕರ್ಣಗಣಾಧೀಶನ ಚರಿತ್ರವನ್ನು ದಿವ್ಯಾಗಮಗಳಲ್ಲಿ ಉಕ್ತವಾದ ಮತ್ತು ಇಷ್ಟನ್ನೆಂದ ಪ್ರಮಾ ಣಗಳಿಂದ ಶ್ರೀ ಚಿಕ್ಕನಂಜೇಶನೆಂಬ ಸಂಡಿತನು ರಚಿಸು ತ್ತಾನೆ " **ನಾಸ್ತಿಪ್ರಮಾಣಂ ಪ್ರಯುಂಜೇತ** " ಅಂದರೆ ಅಪ್ರಮಾಣವಾದುದನ್ನು ಪ್ರಯೋಗಮಾಡಕೂಡದೆಂಬ ನಾನ್ಯುಡಿಯಂತೆ ಈ ಚರಿತ್ರವನ್ನು ದಿವ್ಯಾಗಮಾದಿಸಬಲ ಪ್ರಮಾಣಗಳಿಂದಲೇ ರಚಿಸುತ್ತೇನೆಂಬಭಿಪ್ರಾಯವು ॥೭॥

॥ ಚರಿತ್ರಸ್ಯಾರಂಭಃ ॥

ಕೈಲಾಸೈಲೇ ಶಶಿಖಂಡಮೌಳೇಃ ಪಾದಾರವಿಂದಂ ಪರಿಚೇತ್ಯ ನಾದಾಃ । ದೇವಾಸ ಸುಸ್ಥಾ । ಪರಿತುಷ್ಟಿಮಾಯುಃ ಪೂರ್ವಂ ಪ್ರಸಾದಾತ್ ಪರಮೇಶಪಾದಾಃ ॥೮॥

ಪೂರ್ವಕಾಲದಲ್ಲಿ ಕೈಲಾಸಪರ್ವತದಲ್ಲಿ ಚಂದ್ರಮೌ ಲಿಯಾದ ಶ್ರೀ ಪರಮೇಶ್ವರನ ಪಾದಾರವಿಂದವನ್ನು ಪರಿ ಸೇವಿಸುವಂಥ ಬ್ರಹ್ಮವಿಷ್ಣ್ವಾದಿದೇವತೆಗಳು ಆ ಪರ ಶಿವನ ಪ್ರಸಾದದಿಂದ ಪರಿಪೋಷಿಸಲ್ಪಟ್ಟವರಾಗಿ ಅತ್ಯಂತ ಸಂತುಷ್ಟಿಯನ್ನು ಪಡೆದಿದ್ದರು " **ಶಿವಸೇವಾಸಮಾನ ಸೌಖ್ಯಃ ಸುಖಂ ಸರ್ವಂ ಸಮಾಪ್ನೋಯಾತ್** " ಅಂದರೆ ಶಿವನ ಸೇವೆಯಲ್ಲಿ ಅಸಕ್ತನಾದವನು ಸರ್ವಸುಖವನ್ನು ಹೊಂದುತ್ತಾನೆಂಬ ಭಾವವು ॥೮॥

ಪ್ರಸಿದ್ಧದಾನಾವಸರೇ ಪ್ರಸಾದಂ ಪ್ರದಾಯ ಪೂರ್ವಂ ಶ್ರುತ ದೇವನ್ನು ಕೊಳ್ಳಿ ಅವನೆಸ್ಸು ಹೆತ್ತರ ಕರೆನು ಶಿವಭಕ್ತ ವೃದ್ಧಿಯಿಂದ ಜಗತ್ತಿನಲ್ಲಿ ಪ್ರಚಾರಮಾಡಿದನು ॥೧೬॥
ಪ್ರಸನ್ನ ಹೃದಯನಾದ ಪರಶಿವನು ಪ್ರಸಾದವನ್ನು ಕೊಡುವ ಅವಸರದಲ್ಲಿ ಮೊದಲು ವಿಶ್ವಕರ್ಣನಿಗೆ ಪ್ರಸಾ ದವನ್ನು ಕೊಳ್ಳಿ ಅವನೆಸ್ಸು ಹೆತ್ತರ ಕರೆನು ಶಿವಭಕ್ತ ವೃದ್ಧಿಯಿಂದ ಜಗತ್ತಿನಲ್ಲಿ ಪ್ರಚಾರಮಾಡಿದನು ॥೧೬॥

ಅಥ ಪ್ರಸನ್ನೋದ್ಯಾನ್ಮಹಾದೇವಸ್ಯೋಮಾಭಾರ್ಯಾವಯುಗಸ ಹಿತ ವಿಶ್ವಕರ್ಣಾ । ಅಕಾತಮರ್ಣಾದವತೀರ್ಯ ಶೀಘ್ರಂ ಆಗಾಮ ಮೆರ್ವಾಸಹಿತೋವನಾಂತ ॥೧೭॥

ಅನಂತರ ಆಚಾರ್ಯವರ್ಯನಾದ ವಿಶ್ವಕರ್ಣಗಣಾ ಧೀಶನು ಪ್ರಸನ್ನೋದ್ಯ ದಿಂದ ಕೂಡಿದ ಮನಸ್ಸಿನಿಂದ

ಎಳ್ಳೆ ವಿಶ್ವಕರ್ಣಗಣೇಶನೇ, ನೀನು ಕಾಶೀಕ್ಷೇತ್ರದಲ್ಲಿ ಶ್ರೀ ವಿಶ್ವೇಶ್ವರ ಮಹಾಲಿಂಗದಿಂದ ಅವತರಿಸಿ ವಿಶ್ವವನ್ನು ಧ್ವನ್ನೂ, ಶಿವಾಗಮಗಳ ಸಿದ್ಧಾಂತಶಸ್ತ್ರರೂಪವನ್ನೂ, ಅತ್ಯಂತ ಶ್ರೇಷ್ಠವನ್ನೂ ಆದ ವೀರಶೈವಮತವನ್ನು ಭೂಲೋಕದಲ್ಲಿ ಸ್ಥಾಪಿಸು ಎಂದು ಆಜ್ಞಾಪಿಸಿದನು ॥೧೦॥

ತದಾ ತದಾಜ್ಞಾ ವಶಗೋ ಮಹಾತ್ಮಾ ಶ್ರೀವಿಶ್ವಕರ್ಣೋಯಂ ಮತೀವ ಹರ್ಷಾತ್ । ವಿಶ್ವೇಶಲಿಂಗಾದವತೀರ್ಯ ಶಾಕ್ಯಾಂ ಪ್ರವೀರಧರ್ಯಮಾಸ ಸಜಾತ್ಯವೃತ್ತಂ ॥೧೦॥

ಆಗ ಆ ಮಹಾತ್ಮನಾದ ಶ್ರೀ ವಿಶ್ವಕರ್ಣಗಣೇಶನು ಪರಮೇಶ್ವರನ ಆಜ್ಞಾನುಸಾರವಾಗಿ ಅತ್ಯಂತ ಸಂತೋಷ ದಿಂದ ಶ್ರೀ ವಿಶ್ವೇಶ್ವರಮಹಾಲಿಂಗದಿಂದ ಕಾಶೀಕ್ಷೇತ್ರದಲ್ಲಿ ಅವತರಿಸಿ ಅಲ್ಲಿಯ ಸಜ್ಜಕ್ತರಿಗೆ ನಿಜವಾದ ತನ್ನ ನೈತ್ಯಾ ತವನ್ನು ಉಪದೇಶಿಸಿದನು ॥೧೧॥

ಥವಂ ಪ್ರಗಿತಂ ಶ್ರುತ್ವಾನಪೇಣ ಶ್ರೀದೇವದಾಸೋ ನೃಪಪುಂಗವಶ್ಚ । ನಿತ್ಯಂ ಸಪ್ಪಕ್ತಿಭಯಾಮ್ಬುರುಂ ತು ಸಂಪ್ರಾರ್ಥಯಾಮಾಸ ಗೃಹಾಗಮಾಯ ॥೧೨॥

ಪ್ರಸಿದ್ಧನಾದ ನಾರದನಿಂದ ಮೊದಲು ಹೇಳಲ್ಪಟ್ಟ ಶ್ರೀ ವಿಶ್ವಕರ್ಣಗಣಾಧೀಶನ ನಿಜಚರಿತ್ರವನ್ನು ಪುನಃ ಸ್ವಪಶ್ರೇಷ್ಠನಾದ ಶ್ರೀ ದೇವದಾಸನೆಂಬ ಕಾಶೀ ಮಹಾರಾಜನು ಕೇಳಿ ಭಕ್ತಿಭಯದಿಂದ ಆ ಗುರುವನ್ನು ತನ್ನ ಆರಮನೆಗೆ ಆಗಮಿಸುವದಕ್ಕಾಗಿ ಪ್ರಾರ್ಥನೆಮಾಡಿ ಕೊಂಡನು ॥೧೨॥

ತಚ್ಛ್ರುತ್ವಾಪೂರ್ಣಂ ವಚನಂ ಪ್ರಶಮ್ಯ ಶ್ರೀವಿಶ್ವಕರ್ಣಾ ಕರುಣಾಪ್ರಪೂರ್ಣಾ । ಸಸಂಶ್ರಮಂ ರಾಜಮಹೇಕ್ಷಣೇನ ಸಮಾಸಸಾದ ಭುಕ್ತಧಾನಂ ॥೧೩॥

ಶ್ರೀ ವಿಶ್ವಕರ್ಣ ಗಣಾಧೀಶನು ದೇವದಾಸಮಹಾ ರಾಜನ ಭಕ್ತಿಪೂರ್ಣವಾದ ವಚನವನ್ನು ಕೇಳಿ, ದಯಾ ಪೂರಿತನಾಗಿ ರಾಜಮರ್ಯಾದೆಯಿಂದ ಕೂಡಿದ ಸಮಸ್ತ ಬಿರುದಾವಳಿ ಸಹಿತವಾದ ಮಹೇಕ್ಷಣವನ್ನಿಂದ ಒಳ್ಳೇ ಸಂಭ್ರಮದೊಡನೆ ಪ್ರಸಿದ್ಧನಾದ ರಾಜಧಾನಿಯನ್ನು ಪ್ರವೇಶಿಸಿದನು ॥೧೩॥

ತದಾಗತಂ ಶ್ರೀಗುರುಸಾರ್ವಭೌಮಂ ಸಾರ್ವಜಗತ್ಕಾಂಚನ ಸಿಂಹಪೀಠೇ । ನಮನ್ಯಾಸಾಶ್ಚಿತ್ಯ ಪದಾರವಿಂದೇ ಪ್ರಪೂಜಯಾಮಾಸ ನೃಪಃ ಸಜಾತ್ಯಾ ॥೧೪॥

ದೇವದಾಸಮಹಾರಾಜನು ರಾಜಧಾನಿಗೆ ದಯ ಮಾಡಿಸಿದ ಆ ಗುರುಸಾರ್ವಭೌಮನನ್ನು ಸುವರ್ಣಮಯ ವಾದ ರತ್ನಖಚಿತ ಸಿಂಹಾಸನದಲ್ಲಿ ಕುಳ್ಳಿರಿಸಿ ಅವನ ಪಾದಾರವಿಂದಗಳನ್ನು ನಮಸ್ಕರಿಸಿ ತಾಸ್ತ್ರೀತ್ಯರ್ಥವಾಗಿ ಪೂಜಿಸಿದನು ॥೧೪॥

ತತ್ಪೂಜನಾಂತೇ ಹುಸ್ಸುಮಾ ಗುರುಸ್ತಂ ತಸ್ಮೈ ಶಕ್ತಿಪಾತಾ ಸುಸ ಮಾಕ್ಷ್ಯ ನರ್ವಾ । ಸಂಭೋಜಯನ್ ಶ್ರೀತಿಪಾಸೀಕ್ಷಯಾತ್ಮೈ ಲಿಂಗಾಂಗತತ್ತ್ವಂ ಸಮುಪಾದಿದೇಶ ॥೧೫॥

ಮಹಾರಾಜನು ಮಾಡಿದ ಪೂಜೆಯಿಂದ ಸಂತುಷ್ಟ ಮನಸ್ಸುಳ್ಳ ಆ ಗುರುವರನು ಅವನಲ್ಲಿ ಸರ್ವಪ್ರಕಾರ ವಾಗಿ ನಿರ್ದಿಷ್ಟವಾದ ಶಕ್ತಿಪಾತವನ್ನು ಚೆನ್ನಾಗಿ ಸರಿ ಶೀಲಿಸಿ ಅವನನ್ನು ಶಿವವೀರ್ಯೆಯಲ್ಲಿ ಯೋಜಿಸುವಂಥ ನಾಗಿ ಅವನಿಗೆ ಲಿಂಗಾಂಗಸಾಮರಸ್ಯ ತತ್ತ್ವವನ್ನು ಉಪದೇಶಿಸಿದನು ॥೧೫॥

ತತೋ ಪ್ರಸಾದಕೋ ಮುದಿತಾಂತರಾತ್ಮಾ ಶ್ರುತ್ವಾ ಗುರೂಕ್ತಿಂ ಸುನಿ ದೇವದಾಸಃ । ಶ್ರೀವೀರಶೈವಸ್ಯಮಗಮ್ಯತತ್ತ್ವಂ ಪ್ರಚಾರಯಾಮಾಸ ವಿಚಾರಪೂರ್ವಾ ॥೧೬॥

ಸ್ಯಶಾಂತನೂ, ಸಂತುಷ್ಟವಾದ ಅಂತರಾತ್ಮವುಳ್ಳವ ನೂ, ಆದ ಆ ದೇವದಾಸನು ಗುರುಬೋಧವನ್ನು ಕೇಳಿ, ಅಗಮ್ಯತತ್ತ್ವವುಳ್ಳ ಶ್ರೀವೀರಶೈವಸಿದ್ಧಾಂತವನ್ನು ವಿಚಾರ ದೃಷ್ಟಿಯಿಂದ ಜಗತ್ತಿನಲ್ಲಿ ಪ್ರಚಾರಮಾಡಿದನು ॥೧೬॥

ಆಕಾಶಮಾರ್ಗದಿಂದಿಳಿದು ಶೀಘ್ರವಾಗಿ ಶ್ರೀ ದುರ್ವಾಸ ಮುನಿಗಳ ತಪೋನಷ್ಠಾಂತವನ್ನು ಕುರಿತು ಪ್ರಯಾಣ ಮಾಡಿದನು ॥೧೭॥

ತ್ರಿಯಂಬಕೇತಿ ಶ್ರೀಚರುಸಂಬಿರಾಜೀ ಮನ್ ಸಬಲ್ಯಾಸ್ರಯ ಮಧ್ಯಭಾಗೇ ! ಪ್ರಭಾತಕಾಲೇ ದಿತಿ ಕಂಕರಸ್ಯಂ ಪರ್ಣರ್ ದುರ್ವಾಸಮುಪಾ ಸುತೇಜಾ ॥೧೮॥

ಸರ್ವತೋಭಾಸಂಪತ್ತಿಗೆ ಆಶ್ರಯವಾದ ಬಿಲ್ವವೃಕ್ಷ ಗಳಿಂದ ವಿರಾಜಮಾನವಾದ ಬಿಲ್ವಾಶ್ರಮದ ಮಧ್ಯಭಾಗ ದಲ್ಲಿ ವಾಸಮಾಡುತ್ತಿರುವ ದುರ್ವಾಸಮುನಿಯು ಉಷಾಸ್ನಾನದಿಕ್ರಿಯೆಗಳಿಗಾಗಿ ಪ್ರಾತಃಕಾಲಸಮಯದಲ್ಲಿ ಒಂದು ತೇಜಸ್ಸನ್ನು ಕಂಡನು ॥೧೯॥

ತೇಜಸ್ತತಂ ವೀಕ್ಷ್ಯ ಮುನೀಶ್ವರೋಸ್ಯಂ ಮುಖಪ್ರಜಜ್ಞಾ ಸುಜಸ್ಯಯೇನ | ವಿಚಿಂತಯಾಮಾಸುರನನ್ಯಚಿತ್ತಾ : ಕಿಮೇತ ದಿತ್ಯೇವ ಸಶಂಕಿತೇ ಚ ॥೨೧॥

ದುರ್ವಾಸಮುನೀಂದ್ರನೂ ಮುನಿಗಳ ಪರಮಾಪ್ತನೂ ಆ ತೇಜಃಪುಂಜವನ್ನು ನೋಡಿ ಚಕಿತರಾಗಿ ವಿಕಾಗ್ರ ಚಿತ್ತದಿಂದ ಆಲೋಚಿಸಿದರಲ್ಲದೆ, ಇನು ಏನಾಗಿ ಬಹುದು ? ಎಂದು ಸಂಶಯವಿಪ್ಪರಾದರ ॥೨೧॥

ತದೈವ ದೈವಾರ್ಚಿತಸ್ತಲಾ ಕಠಿಮಿಶ್ರ ವಿಜ್ಞಾಪ್ಯವಾಲ ಮುನೀಂದ್ರಃ ! ಶ್ರೀನಿಜಕರ್ಮೋಯಮಿತಿಪ್ರಶಾಂತ ಉವಾಚ ಸಮ್ಯಕ್ ಪುರತೋ ಮುನೀಷಾ ॥೨೦॥

ಆ ಕೃಷ್ಣನೇ ದುರ್ವಾಸಮುನೀಂದ್ರನು ಜ್ಞಾನ ದೃಷ್ಟಿಯಿಂದ ವಿವೇಚಿಸಿ ಅವು ಸುದೈವದಿಂದ ಪ್ರಾಪ್ತವಾದ ಸತ್ಫಲವಾಗಿದ್ದು, ಈ ತೇಜೋಮೂರ್ತಿಯು ಸಾಕ್ಷಾತ್ ವಿಶ್ವಕರ್ಣಗರ್ಭಾಧೀಕನೆಂದು ಶಾಂತಮುನಿಸ್ಸಿನಿಂದ ಆ ಮುನಿಗಳಿಗೆ ಚನ್ನಾಗಿ ವಿವರಿಸಿದನು ॥೨೦॥

ತಸ್ಮಿನ್ ಕ್ಷಣೇ ಸ್ವರ್ಣಜಟಾಧರೋಜೀ ಲಿಂಗಾತ್ಮಕೋ ಬ್ಯಕ್ತಫಲಪ್ರಿಯೇಶ್ವರಃ | ಶ್ರೀವಲ್ಲಭಂದಂಡಿ ಸಕಮಂಡಲಕ್ಷ ಪುರಾತನ ಋಷೀಶ್ವರವತನಾ ಸ ವ್ಯಕ್ತಃ ॥೨೧॥

ಆ ಕ್ಷಣದಲ್ಲಿ ಸುವರ್ಣದಂಠೊಪ್ಪುವ ಜಡೆಗಳಿಂದ ವಿರಾಜಮಾನನೂ, ಪೃಥ್ವಿಕವಪ್ಪ ಲಿಂಗಧಾರಣಮಾಡಿ ದವನೂ, ಫಣಿಯಲ್ಲಿ ಶ್ರೀಪುಂಡ್ರವಪ್ಪ ಧರಿಸಿದವನೂ, ಶ್ರೀಕ್ಷೇತ್ರಗಳಂದೊಪ್ಪುವವನೂ, ಒಂದು ಕೈಯಲ್ಲಿ ಶೋಭಾಯಮಾನವಾದ ಬಿಲ್ವದಂಡವುಳ್ಳವನೂ, ಮತ್ತೊಂದು ಕೈಯಲ್ಲಿ ಸುವರ್ಣ ಕಮಂಡಲುವನ್ನು ಧರಿಸಿದವನೂ, ಕೂರಲ್ಲಿ ರುದ್ರಾಕ್ಷಿಮಾಲಾಲಂಕೃತನೂ ಆದ ಕೆಳಗೆ ಇಳಿದು ಬರುತ್ತಿರುವ ಆ ವಿಶ್ವಕರ್ಣಗಣಾಧಿಪನಿ ಕಾಣಲ್ಪಟ್ಟನು ॥೨೧॥

ಪ್ರಣಮ್ಯ ಭೂಮೌ ಪುರತಃ ಸ್ಥಿತಂ ತಂ ಶ್ರೀಸಿದ್ಧಕರ್ಣಾ ವಿವರೂಪಭಾಜಾ ! ಸಮಿಷ್ಟ್ಯ ಸರ್ವಾನಮುನೀಪ್ಪೆ ಸರ್ವ ಸಂಪ್ರಾರ್ಥಯಾಮಾಸುರನನ್ಯಚಿತ್ತಾ ॥೨೩॥

ಶಿವರೂಪವನ್ನು ಧರಿಸಿದವನೂ, ಸರ್ವರಿಂ ಮುಂಭಾಗದಲ್ಲಿ ಪ್ರಸನ್ನನಾದವನೂ, ಆದ ಆ ಶ್ರೀ ವಿಶ್ವಕರ್ಣಗಣಾಧೀಶನನ್ನು ನೋಡಿ ದುರ್ವಾಸಮುನಿಯೂ ಮತ್ತು ಸರ್ವ ಮುನೀಶ್ವರರೂ ಅನನ್ಯಭಕ್ತಿಯಿಂದ ನಮಸ್ಕಾರ ಮಾಡಿ ಪ್ರಾರ್ಥಿಸಿಕೊಂಡರು ॥೨೩॥

ಧನ್ಯಾ ವಯಂ ಧನ್ಯಮಿದಂ ನಮಂ ಯತ್ ಧನ್ಯಂ ಕುಲೋ ಧನ್ಯಮಿದಂ ಚ ಜನ್ಮ ! ಧನ್ಯೋ ಜನಿಃ ಧನ್ಯಮಿದಂ ಕುಲಂ ತತ್ ಇತಿ ಪ್ರಾಹುರನನ್ಯಭಾವಂ ॥೨೪॥

ತಮ್ಮ ಪಾದಸಂಪರ್ಕನದಿಂದ ನಾವೇ ಧನ್ಯರು, ಈ ನಮ್ಮ ತಪೋವನವೇ ಧನ್ಯವು ಯಾವ ನಮ್ಮ ತಪಸ್ಸಿ ದೇಯೋ ಅದು ಧನ್ಯವು ಮತ್ತು ಈ ನಮ್ಮ ಜನ್ಮವಾ ದರೂ ಧನ್ಯವು. ನಮ್ಮ ಮಹಾಮಂತ್ರಜಸವೂ ಧನ್ಯವು ನಮ್ಮ ಪವಿತ್ರವಾದ ತಾಪಸಕುಲವೂ ಧನ್ಯವು ಹೀಗೆಂದು ಅಗಮ್ಯಭಾವನೆಯಿಂದ ಕೂಡಿದ ವಿಶ್ವಕರ್ಣಗಣಾಧೀಶ ನನ್ನು ಪ್ರಾರ್ಥಿಸಿದರು ॥೨೩॥

ಅಥ ಪ್ರಣಂತಂ ಗುರುಮರ್ಷಯಸ್ತಂ ತಂ ಸಮಸ್ತ ಪ್ರಾವಿಶ್ಯ ಸುಭದ್ರಪೀಠೇ ! ಅವಾಪ ದುರ್ವಾಸಮುಖಃ ಸ್ವತಂತ್ರಂ ಸಿದ್ಧಾಂತ ತಂತ್ರಂ ಋಷಿ ಯೋಧಮೇತಾ ॥೨೪॥

ಅನಂತರ ದುರ್ವಾಸಮುನಿಯು ಪ್ರಕಾಂತಪಾದ ಗುರುವರನನ್ನು ಮಂಗಳಾಸನದಲ್ಲಿ ಸೂರ್ತನಾಡಿಸಿ ಪೂಜಿಸುವಂಥವನಾಗಿ, ಸರ್ವತ್ರಂತ್ರಸ್ವತಂತ್ರವೂ ಸಿದ್ಧಾಂತ ತಸ್ಸರೂಪವೂ ಆದ ದಿವ್ಯಾಗಮಮಾರ್ಗವನ್ನು ನೆನಿಗೆ ಬೋಧಿಸಿಂದು ಕೇಳಕೊಂಡನು ॥೨೪॥

ತತಾ ಕಾರುಣ್ಯ ಸ ವಿಶ್ವಕರ್ಣಾ ಪ್ರಬೋಧಯಾಮಾಸ ಸುಶಾಂತಚಿತ್ತಾ ! ವೇದಾಗಮೇಷು ಬ್ರುತಿಂಗಳಶ್ಚಿಯಿಂದ್ಯಾಂತ ಸ್ತ್ರಂ ಪರಧರ್ಮಕರ್ತ್ರಂ ॥೨೫॥

ಆಗ ವಿಶ್ವಕರ್ಣಗಣಾಧೀಶನು ದುರ್ವಾಸಮುನಿಯ ಕೋರಿಕೆಯನ್ನು ಕೇಳಿ ಪರಧರ್ಮಗಳಿಗೆ ಪ್ರತ್ಯಸನವೆನಿಸುವ, ವೇದಾಗಮಗಳಲ್ಲಿ ಪ್ರಸಿದ್ಧವಾದುದೂ ಆದ ವೀರಶೈವ ಸಿದ್ಧಾಂತರಹಸ್ಯವನ್ನು ಶಾಂತವಾದ ವಚನದಿಂದ ಉಪದೇಶಿಸಿದನು ॥೨೫॥

ಶ್ರುತ್ವಾ ಶಿವಾದ್ವೈತಮತಿಪ್ರಶಸ್ತಿಂ ಸಿದ್ಧಾಂತಶಾಸ್ತ್ರಂ ಗುರು ನಕ್ತಿಲಬ್ಧಂ ! ಶ್ರೀಸರ್ವಜನ್ಯಾ ಸ ಮುನೀಶ್ವರೋವ ಗ್ರಹಾರ ಯೋಮಾಸ ಋಷಿ ಪ್ರಣಾಮಂ ॥೨೬॥

ದುರ್ವಾಸ ಮುನಿಯು ಶ್ರೀಗ ರುವಿಶ್ವಕರ್ಣಗಣಾಧಿಕ ತನ ಮುಖಾರವಿಂದದಿಂದಲೂ ಆತನಿಗಿಷ್ಟವಾದ ಶಿವಾದ್ವೈತ ಸಿದ್ಧಾಂತರಾಸ್ತ್ರವನ್ನು ಕೇಳಿ ಕೃತಾರ್ಥನಾದನೆಂದು ಪರಮ ಪ್ರಮೋದವನ್ನು ಪಟ್ಟು ಆನಂತ್ಯ ಜನ್ಮಸಲ್ಲಿ ವಿಶೇಷವಾಗಿ ಪ್ರಚಾರ ಪಡಿಸಿದನು ಸಂಹಿತಾ ನೊದಲಾದ ಗ್ರಂಥಗಳಂದಪ್ರಚಾರ ಪಡಿಸಿದನೆಂಬ ಭಾವವು ॥೨೬॥

ಅಥ ಸ್ವಧರ್ಮಾನ್ವಿತ ಪೂರ್ವ ಸೃಷ್ಟಿಂ ಕಾಶ್ಯಮುಪಾವಿಶ್ಯ ಚ ಸಿಂಹಪೀಠೇ ! ವಿಶಾಸನಗುರ್ಮಸ್ಯ ಸ ವಿಶ್ವಜಾಧಿಂಗೇ ವಿಲೀಯೋತ್ಪ ಭವಪಂಚಕಾರ್ಯಾ ॥೨೭॥

ಆನಂತರ ಮಹಾಸ್ವಾಮಿಯಾದ ಶ್ರೀ ವಿಶ್ವಕರ್ಣ ಗಣಾಧೀಶನು ಕಾಶಿಯಲ್ಲಿ ವೀರಶೈವಧರ್ಮಸಿಂಹಾಸನ ವನ್ನು ಸ್ಥಾಪಿಸಿ ಶ್ರೀ ಸಿಂಹಾಸನವೇರಿ ತಮ್ಮ ಶಿಷ್ಯ ನಾದ ವಿಶ್ವಮುನೀಂದ್ರನನ್ನು ಕುಳ್ಳಿರಿಸಿ, ತಾನು ಅನೇಕ ಶಿಷ್ಯಕೋಟಿಯನ್ನು ಆನ ಗ್ರಹದಿಂದ ಉದ್ಧರಿಸಿ ಶ್ರೀವಿಶ್ವ ನಾಥ ಮಹಾಲಿಂಗವಲ್ಲಿ ಐಕ್ಯತಾದಂಧವನಾಗಿ ಅಂತರಾ ತ್ಮನ ಸ್ವರೂಪವನ್ನು ಹೊಂದಿದನು ಆ ಧರ್ಮಸಿಂಹಾ ಸನವು ಉಗಲೂ ಶ್ರೀ ಜಗಗುವಾಚಿಕಾನುರದಲ್ಲಿ ಕಾಶೀ ಕ್ಷೇತ್ರವನ್ನು ವಿರಾಜಿಸುತ್ತಿರುವದು ॥೨೭॥

ಇತಿ ಶ್ರೀ ಪೂಜ್ಯಶ್ರೀಪಂಚವರ್ಣಿಗಿ ನಿವೃತ್ತನಂಜಾಚಾರ್ಯವಿರಚಿತ ಶ್ರೀ ಚಕ್ರನಂಜಾಚಾರ್ಯಕವಿಸ ನಿರಚಿತಾ ಶ್ರೀ ವಿಶ್ವಕರ್ಣಾ ವಿಜಯೋನ್ನತ್ತರ್ಯಾಸಾರಿಕಾ ಸಮಾಪ್ತಾ

ಇಂತೀಪ್ರೀಪೂರ್ವಪ್ರಣಿಸಂಚವರ್ಣಿಗಿ ನಿವೃತ್ತನಂಜಾಚಾರ್ಯರ ಶಿಷ್ಯಶ್ರೇಷ್ಠರಾದ ಸಂಸ್ಕೃತಕರ್ನಾಟಕೋಭಯ ಕವಿಶಾರದರೆರೂ ರಾಭಿಮಾಂಕಿತರೂ ಆದ ಶ್ರೀ ಚಿಕ್ಕನಂಜಾಚಾರ್ಯ ಕವಿ ವರದಿಂದ ವಿರಚಿತವಾದ ಶ್ರೀ ಜಗದ್ಗುರು ವಿಶ್ವಕರ್ಣಾ ವಿಜಯ ನಕ್ಷತ್ರಮಾಲಿಕಾ ಎಂಬ ಚಿಕ್ಕ ಕಾವ್ಯವು ಪರಿ ಸಮಾಪ್ತವಾಯಿತು

ಮಾನಸನು ತನ್ನ ಜೀವಿತಕಾಲದಲ್ಲಿ ಮುಖ್ಯವಾಗಿ ಯೋಚಿಸಿ, ತೀರ್ಮಾನಿಸಬೇಕಾಗಿರುವ ತರತಕ್ಕ ಭಾಗಗಳಾವುವು?

ಲೇ ಕೆಸ್ಸಪಥಸಿ, ಅಸ್ಸಾನವಿಸ್ಸಾಸಾ, ಅನಸಟ್ಠಕಮಹಾಯಸು

ಜೀವಿತಕಾಲವನ್ನು ಅನ್ಯಾಯವಾಗಿ ಹರಣಮಾಡು ತ್ತಿರುವ ಕೆಲವರನ್ನು ನೋಡಿದರೆ ಬಹಳ ವ್ಯಸನವಾಗುವು ದು ಇವರು ತಮ್ಮ ಅಮೂಲ್ಯವಾದ ಕಾಲದಲ್ಲಿ ಪ್ರಯೋ ಜನವನ್ನು ಪಡೆಯದೆ ಅಸ್ಯರು ಹಾಳಾಗಿಹೋಗುತ್ತಿರುವ ದನ್ನು ತಪ್ಪಿಸಿ, ಅವರನ್ನೆ ಅಭಿವೃದ್ಧಿಗೆ ತರಬಹುದಾಗಿ ರುವುದಿಲ್ಲವೆ? ಮನುಷ್ಯನ ಚಿತ್ತಸ್ವಾಸ್ಥ್ಯವು ಸುಖಕ್ಕೆ ಕಾರಣವೇ ಹೊರತು, ಅವನ ಸುತ್ತಮುತ್ತಿನ ಅಭಕರಣ ಸಾಮಗ್ರಿಗಳು ಕಾರಣವಾಗಲಾರವು ಈ ಸ್ಥಿತಿಗೆ ಎಷ್ಟು ಬೆಲೆಯೆಂದು ಹೇಳಬಹುದು? ಮನುಷ್ಯನು ಸುಖವನ್ನು ಹೊಂದಲು ಸನ್ಮಾರ್ಗದಲ್ಲಿ ಪ್ರಯತ್ನ ಪಟ್ಟುಪಾದರೆ ಅಮೇ ಯವಾದ ಸೌಖ್ಯವನ್ನೇ ಹೊಂದವನು ಆದರೆ ಕೆಲವು ವಿಧವಾದ ಸುಖಗಳು ಆ ಸಮಯದಲ್ಲಿಯೂ ನಮಗೆ ಪ್ರಾಪ್ತವಾಗುವುದುಂಟು ಈ ಪ್ರಪಂಚದಲ್ಲಿ ಸಾವು ಕೈ ಕೊಂಡ ಕಾರ್ಯದಲ್ಲಿ ವಿಮುಖರಾಗಿ ಅಂತರ್ಮುಖರಾಗಿ ಅಭಿಮುಖರಾಗಿ ಆದುದರಿಂದ ಅನುಸರಿಯೋಗನೆಂದು ಭಾವಿಸಿರುವ ವಿಷ ಯದಲ್ಲಿ ಧೈರ್ಯವಾಗಿ ನೊದಲು ಪ್ರಯತ್ನ ಪಟ್ಟು, ಕೊನೆಗೆ ಉತ್ತೃಷ್ಟವಾದ ಫಲವನ್ನು ಸುಭವಿಸಲು ಹೋರಾ ಡುವುದು ಸರ್ವೋತ್ತಮವು

ಮನುಷ್ಯಮಾತ್ರವಪ್ಪವನಿಗುಂಟಾಗುವ ಸುಖವು ಸಹಜ ವಾದುದೇ ಹೊರತು ಊಹಿಯಿಂದು ತಿಳಿಯಬಾರದು. ನಾವು ಈ ಕಾರ್ಯವು ಸುಖಕರವಾಮದೆಂದು ತಿಳಿದು ಅನೇಕ ಪ್ರಯತ್ನಗಳನ್ನು ಮಾಡುತ್ತೇವೆ ಅದು ಸಿದ್ಧಿ ಸುತ್ತೇವೆ ನಮ್ಮ ಕಾರ್ಯದಿಂದ ಸುಖವನ್ನನುಭವಿಸಬೇ ಕೆಂದು ಆಶಿಸುವೆದಕ್ಕಿಂತ ಅಂಥಹ ಕಾರ್ಯವನ್ನು ಕೈ ಕೊಳ್ಳುವ ಅಭಿಲಾಷೆಯಲ್ಲದಂತೆ ಮೊದಲು ಪ್ರಯತ್ನ ಪಡಬೇಕು ಸುಖಾಭಿಲಾಷೆಯಲ್ಲಿರುವ ಈ ಶರೀರಕ್ಕೆ ಸೌಖ್ಯವನ್ನನ ಧನಿಸಬೇಕೆಂಬು ಆಶೆಯಿಂದ ಮಾನವನು ಇಲ್ಲಿನ ಕೊಂದರೆಗಳಿಗೆ ದೇಹವನ್ನು ಎಡೆಮಾಡುತ್ತಾ ಇರುವನೇ ಹೊರತು ಮತ್ತೆ ಬೇರೆಯಿಲ್ಲ ನಿಮ್ಮ ಋಣ ವಿಮ್ಮೆಯಿಂದ ನಾವು ಸೌಖ್ಯವನ್ನು ಅರ್ಥಪಾಲಿಸ್ಯಾದರೂ ಹೊಂದುವಂತಿಲ್ಲ ಶಾಸ್ತ್ರವನ್ನು ಶ್ಲಾಘಿಸುವುದರಲ್ಲಿ ಅಭಿ ರುಚಿಯೊಂದಿರ ವ ಹಾಗೆ ನಾವು ಕಾರ್ಯದಲ್ಲಿ ಪ್ರಯ ತ್ನಮಾಡುತ್ತಿರುವುದಿಲ್ಲ ನಾವು ವಾಸಿಸುತ್ತಿರುವ ಈ ಪ್ರಪಂಚವನ್ನಾಗಲಿ ಅಥವ ಅಮೇಯವಾದ ಆಕಾಶದ ವಿಸಯವನ್ನಾಗಲಿ ನೋಡಿ ಆದರದಲ್ಲಿ ಕಾಣಬರುವ ವಿಚಿತ್ರವಾದ ವಿಸಯಗಳನ್ನು ಗುರಿತು ಯೋಚಿಸಿ ಸಂ ತೋಷಪಡುತ್ತಿರುವುದಿಲ್ಲ ಮನುಷ್ಯನು ಪದಾರ್ಥಗಳ ಗುಣವಿಮರ್ಶಶಕ್ತಿಯನ್ನು ಹೊಂದಿದ್ದಾನೆ ಇತರ ಪ್ರಾಣಿಗಳಾದರೋ, ದೇವರಿಂದ ಕೊಡಲ್ಪಟ್ಟ ಒಂದು ವಿವಾದ ಸ್ವಜೀವಶಕ್ತಿಯನ್ನು ಮಾತ್ರ ಹೊಂದಿವೆ ಹೀಗಿದ್ದರೂ ನಮ್ಮಿಂದ ಇತರರಿಗೆ ಎಷ್ಟೊರಮಟ್ಟಿಗೆ ಸುಖ ವುಂಟಾಗಬಹುದು? ನೆಮ್ಮನ್ನು ನಾವೇ ತೊಂದರೆಗೆ ಗುರಿ ಯಾಗುವಂತೆ ಮಾಡಿಕೊಳ್ಳುವುದಕ್ಕೆ ನಮ್ಮ ಮನಸ್ಸಿನ ಸ್ಥಿತಿಯೇ ಕಾರಣಭೂತವಾಗಿರುತ್ತದೆ ಆವರೆ ಇತರ ಪ್ರಾಣಿಗಳಿಗಾದರೋ, ಹಾಗಿಲ್ಲ ಇದಕ್ಕೆ ಒಟ್ಟು ವಿದ್ಯಾಂ ಸನು ಹೇಳುವುದೇನೆಂದರೆ— "ಮನುಷ್ಯನು ಸುಖವೆಂಬ ತರುವನ್ನಾಶ್ರಯಿಸಿರುವ ಚಿಂಚಲವಾದ ಫಲಾಪೇಕ್ಷೆ ಯನ್ನೇ ಹೊಂದಿಕೊಂಡು ನಡೆಯುತ್ತಾ, ಕೊನೆಗೆ ನಾಶ ವಾದಮೇಲೆ ಮೌನದಿಂದಿರುವನು" ಎಂಬುದಾಗಿ ಹೇಳಿ ದ್ದಾನೆ ನಮ್ಮ ಜೀವಿತಕಾಲದಲ್ಲಿ ಪ್ರಾಪ್ತವಾಗುವ ತೊಂ ದರೆಗಳೆಲ್ಲಾ ನಮ್ಮ ಅಜ್ಞಾನದಿಂದ ಉಂಟಾಗುತ್ತಿರು ವುವು ಇದಕ್ಕಾಗಿ ಕೈಕೊಂಡ ಕಾರ್ಯದಲ್ಲಿ ಸಂದೇಹಪಡು ವುದೂ, ಹೆದರಿಕೊಳ್ಳುವುದೂ ಇವುಗಳಿಂದ ಮನಸ್ಸಿನ ಸಂಕಲ್ಪಗಳೆಲ್ಲಾ ವೈಕಲ್ಯಹೊಂದಿ ಕೊನೆಗೆ ನಮ್ಮನ್ನು ನಾವೇ ವಿಶೇಷ ತೊಂದರೆಗೆ ಗುರಿಪಡಿಸಿಕೊಳ್ಳುತ್ತಿರು ವೆವು ಮನುಷ್ಯನ ಬುದ್ಧಿಗೆ ಆಗೋಚರವಾದ ಒಂದು ಶಕ್ತಿಯು ಅವನ ಸುತ್ತಲೂ ಅವರಿಸಿಕೊಂಡಿರುವುದು ಹೀಗಿದ್ದರೂ ನಾವು ಸುಮ್ಮನೆ ಕಪ್ಪವನ್ನೂ ಅನುಭವಿಸಿ ಕೊಂಡು ಕಾಲಹರಣಮಾಡುತ್ತಿರಬಾರದು

ನಾವು ವಿಶೇಷ ದುರಾಲೆಯನ್ನೂ ಹೊಂದದೆ ಕ್ಷೇಮ ಚಿಂತನೆಯಲ್ಲಿಯೇ ಇರದೇಕಲ್ಲದೆ, ಏನೋ ಮನೋ ವಿನೋದಕ್ಕಾಗಿ ಅಲ್ಪದೃಷ್ಟಿಗಿದೆಯಾಗಬಹುದಾದ ಸಂಭ ವದಲ್ಲಿಯೂ ಬಹಳ ಜಾಗರೂಕತೆಯುಳ್ಳವರಾಗಿರಬೇಕು ನಾವು ಸಮ್ಮಣ ತಿಲಕಾಗುವದಕ್ಕೆ ಎಷ್ಟು ಪ್ರಯತ್ನ ಪಡುತ್ತೇವೆಯೋ, ಅಷ್ಟೂ ದುರ್ಜಡತೆಯುಳ್ಳವರಾ ದಿರುವುದಕ್ಕೆ ಯೋಚಿಸಿ ನಡೆವುದೇ ಮತ್ತರವಾಗಿರುವುದು. ದುರ್ಜಡತೆಯನ್ನು ನೋಡುತ್ತುದೇ ಅಸಮಾಧಾನವೂ

[೬ ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೦ ನೆಯ ಜನವರಿ ತಾ॥ ೮ ನೆಯ ಸೋಮವಾರ.

ಪಂಚಾಚಾರ್ಯರ ಜಗದ್ಗುರುತ್ವ

ಅಖಿಲಬ್ರಹ್ಮಾಂಡನಾಯಕನಾದ ಪರಶಿವನ ಪಂಚ ಮುಖಗಳಿಂದ ಜಗದಾದಿಯಲ್ಲಿ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಅವತರಿಸಿ ಕೈಲಾಸದಲ್ಲಿ ನಾನುದೇವತೆಗಳಿಗೂ, ಪ್ರಮಥಪುಂಗವರಿಗೂ ಗುರುವಾಗಿ ಅವರಿಗೆ ಮೋಕ್ಷಮಾರ್ಗವನ್ನು ತೋರಿಸಿರುವ ವಿಷಯವು ಪಾಶುಪತಾದ್ಯಾಗಮಗಳಲ್ಲಿ ವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವುದು. ಸಾಕಾರಸೃಷ್ಟಿಯಾದನಂತರ ಶ್ರೀರೇಣುಕಾದಿಪಂಚಾಚಾರ್ಯರು ಭೂಲೋಕದಲ್ಲಿ ಪರಶಿವನ ಆಪ್ತಕಿಯ ಮೇರೆಗೆ ದಿವ್ಯಾವೇಶಧಾರಿಗಳಾಗಿ ಶ್ರೀ ಸೋಮನಾಥಾದಿ ಪಂಚಲಿಂಗಗಳಿಂದಾವಿರ್ಭವಿಸಿ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ಸ್ಥಾಪಿಸಿರುವ ವಿಷಯವು ಶಿವಾಗಮಗಳಲ್ಲಿಯೂ ಸಹಸ್ರಾರು ಮತಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಹೇಳಲ್ಪಟ್ಟಿರುವುದು. ಈ ಆಚಾರ್ಯರು ಭೂಲೋಕದಲ್ಲಿ ಅತ್ಯಂತ ಕೀರ್ತಿಯನ್ನು ಹೊಂದಿ ಮಹರ್ಷಿಪುಂಗವರಿಸಿಕೊಂಡ ಅಗಸ್ತ್ಯ, ದಧೀಚಿ, ವ್ಯಾಸ, ಜಾನಂದ, ದುರ್ವಾಸ, ನಾಮದೇವ, ಹರಿಕರ ಮೊದಲಾದ ಮಹರ್ಷಿಗಳಿಗೂ, ವಿಭೀಷಣ, ಫೀಲಗಲ ವಿಕ್ರಮಭೂಪಾಲ, ಸೌತಮೇಂದ್ರ, ದೇವನಂದನ ಮೊದಲಾದ ಚಿಕ್ರವರ್ತಿಗಳಿಗೂ ಆಯಾ ಯುಗದಲ್ಲಿ ಶಿವಸಿದ್ಧಾಂತವನ್ನು ಬೋಧಿಸಿ, ಈ ಮತದ ರಕ್ಷಣಾದಿಗಳ ಬಗ್ಗೆ ರಂಭಾಪುರಿ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿದರು ಪ್ರತಿಯೊಂದು ಯುಗದಲ್ಲಿಯೂ ಆಚಾರ್ಯಭಗವತ್ಪಾದರು ತಮ್ಮ ಮಹಿಮಾಪ್ರಭಾವದಿಂದ ಅನೇಕ ಜನ ಚಿಕ್ರವರ್ತಿಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ಆ ಕಾಲದ ರಾಜರು ಈ ಮತಾಚಾರ್ಯರಲ್ಲಿ ಅನಾಧಾರಣವಾದ ಪ್ರತ್ಯಯನ್ನಿಟ್ಟು ವರ್ತಿಸುತ್ತಿದ್ದರೆಂಬುದಕ್ಕೆ ಈಗಲೂ ಕಾಶೀ-ಕೇದಾರಪೀಠಗಳಲ್ಲಿ ದೊರೆಯತಕ್ಕ ದಾನಶಾಸನಗಳೇ ಬಲವಾದ ಸಾಕ್ಷಿಗಳಾಗಿವೆ.

ಪೂರ್ವಕಾಲದಲ್ಲಿ ಈ ಮತಾಚಾರ್ಯರ ಗುರುತ್ವವು ಎಲ್ಲ ಮತದವರ ಮೇಲೆಯೂ ನಡೆಯುತ್ತಿತ್ತೆಂಬುದಕ್ಕೆ ಈಗಲೂ ಕೇದಾರಪೀಠಾಧಿಪತಿಗಳು ಆ ಪ್ರಾಂತದಲ್ಲಿರುವ ಚತುರ್ವರ್ಣದವರ ಮೇಲೂ ತಮ್ಮ ಗುರುತ್ವವನ್ನು ನಡೆಯಿಸುತ್ತಿರುವುದೇ ಸಾಕ್ಷ್ಯವಾಗಿದೆ ಅದರಿಂದಲೇ ಈ ಮತಾಚಾರ್ಯರಿಗೆ "ಜಗದ್ಗುರು" ಎಂಬ ಮಹಾಪದವಿಯು ಜಗದಾದಿಯಿಂದಲೂ ಪ್ರಾಪ್ತವಾಗಿದೆ. ಶಿವಾಗಮಗಳಂತೂ ಈ ಭಗವತ್ಪಾದರಲ್ಲಿ ಸ್ವಾಭಾವಿಕವಾಗಿರುವ ಜಗದ್ಗುರುತ್ವವನ್ನು ಮುಕ್ತಕಂಠವಾಗಿ ಹೊಗಳಿರುವವು.

ಸುಪ್ರಭೇದಾಗಮದಲ್ಲಿ—

ಮೌಕ್ಯಂಪದಸೋದ್ಭೂತಾಃ ಸರ್ವವಿದ ಗುರೂತ್ತಮಾಃ ।
ತತ್ಸ್ಪಾನಾಂ ಚ ಸರ್ವೇಷಾಂ ತತ್ಪಾದಾಬ್ಜಂ ಶಕುಂಭವೇತ್ ॥
ಲೋಕೇ ಸರ್ವಶರಂಗಾನಾಂ ಪತ್ತಿತ್ವಂ ವರ್ತತೇತ್ಪಗಜೇ ।
ಖತಾವತಾ ಸಿಗಜತೇ ಸರ್ವಾನಾ ಕರಿಣಾ ನೆಂ ॥
ಲೋಕೇ ಸರ್ವಶಿಲಾನಾಂ ಚ ಶಿರಾತ್ವಂ ವರ್ತತೇತ್ಸಿಂಧಿರೇ ।
ಚಿಂತಾಮಣೇಃ ಶಿಲಾನಾಂಚಶಿವಸ್ಯಂ ನ ಸಮಾಜನ ॥
ಸರ್ವೇಷಾಂ ಭೂರುಹಾಣಾಂ ಚ ವೃಕ್ಷತ್ವಂ ವರ್ತತೇತ್ಕಗಜೇ ।
ಕಪಾಸಿ ಕಲ್ಪವೃಕ್ಷಸ್ಯ ಬರ್ಬಾರಂಸ್ತು ಸಮಾ ನೆಂ ॥
ತಥೈವ ಚ ಗುರೂಣಾಂ ಚ ಪ್ರಭಾಶಕ್ತಿಸ್ವರೂಪತಾಃ ।
ನಕರಾಚಾರ್ಯಯಾ ದೃಷ್ಟಃ ನ ಭ್ರುತಶ್ಚಿತ್ಕಲಂಕನೃತೇ ॥
ತಸ್ಮಾತ್ತ್ವಂಪಿಥಿವಾಚಾರ್ಯಾ ಪಂಚಪೀಠಾಧಿಪೇವರಾಃ ।
ಪಂಚಸೌಖಾಸನಾಧೀಶಾ ಜಗದ್ಗುರುತಮಾಶ್ಚತೇ ॥

ಪಂಚಪೀಠಾಧಿಪೇವಾನಾಂ ಮೇಜಾನಂತಿ ಸಮಾಸೆತಾಂ ।
ತೇ ಗರ್ವಭಾಶ್ಚ ಸಂಪ್ರೋಕ್ತಾ ಜ್ಞಾನಕರ್ಮತ್ರತಾಃ ಶಿವೇ ॥
ತಸ್ಮಾತ್ಪಶ್ಚಾತ್ಸಿದ್ಧೇ ಗಿರಿಜೇ ಪಂಚಾನನೆ ಸಮುದ್ಭವಾಃ ।
ವಂದಾದಿಸರ್ವಲೋಕಾನಾಂ ಜಗದ್ಗುರುವರೋತ್ತಮಾಃ ॥

ಹೇ ಪಾರ್ವತೀದೇವಿಯೇ, ಸಾಕ್ಷಾತ್ ನನ್ನ ಮುಖದಿಂದ ಅವತರಿಸಿ ಗುರುತ್ವಮರೆದಿಸಿಕೊಂಡಿರುವ ಪಂಚಾಚಾರ್ಯರ ಸಾಮರ್ಥ್ಯವು ಈ ಆಚಾರ್ಯರಿಂದ ಸೃಷ್ಟಿಸಲ್ಪಟ್ಟ ಉಳಿದವರಿಗೆ ಹೇಗೆ ಒಂದೀತು? ಲೋಕವಲ್ಲಿರುವ ಪಕ್ಷಿಗಳಲ್ಲೆಲ್ಲ ಪಕ್ಷಿತ್ವಧರ್ಮವಿದ್ದರೂ ಕಾಗೆಗಳು ಹೇಗೆ ಗರುಡನಿಗೆ ಸಮಾನವಾಗಿಲಾರವೋ, ಲೋಕವಲ್ಲಿರುವ ಕಲ್ಲುಗಳಲ್ಲೆಲ್ಲ ಕಲ್ಲಿನ ಸ್ವಭಾವವಿದ್ದರೂ ಕಾಡುಗಲ್ಲುಗಳು ಹೇಗೆ ಚಿಂತಾಮಣಿಗೆ ಸಮಾನವಾಗಲಾರವೋ, ಲೋಕವಲ್ಲಿರುವ ಪುರಗಳಲ್ಲೆಲ್ಲ ಪುರಗಳ ಸ್ವಭಾವವಿದ್ದರೂ ಕೂಡ ಬೂರುಗದಮರವು ಹೇಗೆ ಕಲ್ಪವೃಕ್ಷಕ್ಕೆ ಸಮಾನವಾಗಲಾರದೋ, ಹಾಗೆಯೇ ಸಾಕ್ಷಾತ್ತಾಗಿ ನನ್ನ ಸದ್ಯೋಜಾತಾದಿ ಮುಖಗಳಿಂದ ಅವತರಿಸಿದ ರೇವಣಾದ್ಯಾದಿಮೂಲಸಂಚಾಚಾರ್ಯರಿಗೆ ಇವರಿಂದ ಸೃಜಿಸಲ್ಪಟ್ಟವರು ಎಂದೂ ಸಮಾನರಾಗಲಾರರು ಕಲಿಯುಗದಲ್ಲಿ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬ ಹೆಸರಿನಿಂದ ಅವತರಿಸಿದ ಈ ಪಂಚಾಚಾರ್ಯರೇ ವೀರಾದಿ ಪಂಚಪೀಠಾದಿಪತಿಗಳಾಗಿರುವುದರಿಂದ ಜಗದ್ಗುರುಗಳೆಂದು ಹೇಳಿಸಿಕೊಳ್ಳುವರು. ಅದುದರಿಂದ ಗಿರಿಜೆಯೇ, ಲೋಕವಲ್ಲಿ ಇಂತಹ ಅಸಾಧಾರಣಮಹಿಮಾನ್ವಿತರಾದ ಜಗದ್ಗುರು ಪಂಚಾಚಾರ್ಯರನ್ನು ಯಾರು ಆಜ್ಞಾನದಿಂದ ತಮಗೆ ಸಮಾನರನ್ನಾಗಿ ತಿಳಿಯುತ್ತಾರೆಯೋ ಅಂತಹ ಮೂಢಾತ್ಮರು ಕತ್ತೆಗಳಿಗೆ ಸಮಾನರಾಗುವರು ಆದುದರಿಂದಲೇ ಈ ಪಂಚಾಚಾರ್ಯರು ನನ್ನ ಲೋಕಕ್ಕೂ ಅಲ್ಲದೆ ಸಿಖಿಲಲೋಕಗಳಿಗೂ ಜಗದ್ಗುರುಗಳಾಗಿರುವರೆಂದು ತಿಳಿ ಎಂದು ಉಪದೇಶಿಸಿರುವನು

ಅಲ್ಲದೆ ಇದೇ ಆಗಮದಲ್ಲಿ—

ವೀರಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚಯಃ ।
ರೇವಣಾರಾಧ್ಯನಸ್ತ್ವಮಾ ಜಗದ್ಗುರುತಮಶ್ಚಸಃ ॥
ನಂದಿಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚಯಃ ।
ಮರುಳಾರಾಧ್ಯನಸ್ತಾಮ ಜಗದ್ಗುರುತಮಶ್ಚಸಃ ॥
ಭೃಂಗಿಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚಯಃ ।
ಏಕೋರಾಮಾರ್ಯಗಸ್ತ್ವಮಾ ಜಗದ್ಗುರುತಮಶ್ಚಸಃ ॥
ವೃಷಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚಯಃ ।
ಪಂಡಿತಾರಾಧ್ಯನಸ್ತಾಮ ಜಗದ್ಗುರುತಮಶ್ಚಸಃ ॥
ಸ್ಕಂದಗೋತ್ರಾಧಿನಾಥಶ್ಚ ಮಹಾಸಿಂಹಾಸನಾಗ್ರಣೀಃ ।
ವಿಶ್ವಾರಾಧ್ಯ ಇತಿಖ್ಯಾತೋ ಜಗದ್ಗುರುತಮಶ್ಚಸಃ ॥

ಯಾವನು ವೀರಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀ ರೇವಣಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ನಂದಿಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀಮರುಳಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ಭೃಂಗಿಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀ ಏಕೋರಾಮಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ವೃಷಭಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀ ಪಂಡಿತಾರಾಧ್ಯನೇ ಜಗದ್ಗುರುವಾಗಿರುವನು. ಸ್ಕಂದಗೋತ್ರಕ್ಕೆ ಅಧಿನಾಥನೂ, ಮಹಾಸಿಂಹಾಸನಾಗ್ರಣಿಯೂ ಆದ ವಿಶ್ವಾರಾಧ್ಯನೇ ಜಗದ್ಗುರುವಾಗಿರುವನು.

ಈ ರೀತಿಯಾಗಿ ಶಿವಾಗಮಗಳು ಈ ಮಹಾಕ್ಷರಲ್ಲಿ ಜಗದ್ಗುರುತ್ವವನ್ನು ಮುಕ್ತಕಂಠದಿಂದ ಪ್ರತಿಪಾದಿಸಿರುವುದರಿಂದ, ಸರ್ವರೂ ಈ ಮಹಾಕ್ಷರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಮುಕ್ತಿಫಲವನ್ನು ಪಡೆದು ಧನ್ಯರಾಗಬೇಕೆಂದು ಹಾರೈಸುತ್ತೇನೆ.

ಯುದ್ಧವಾರ್ತೆ.

ತುರ್ಕದೇಶದ ಭೂಕಂಪಕ್ಕೆ ಕಾರಣ.

ಈಚೆಗೆ ತುರ್ಕಿಯಲ್ಲಿ ನಡೆದ ಭಯಂಕರ ಭೂಕಂಪಕ್ಕೆ ಇಟಲಿಯು ಉತ್ತರಕ್ಕಿರುವ ಆಲ್ಪ್ಸ್‌ಪರ್ವತಪಲ್ಲಿ ಬಿಂಟಾಗಿರುವ ಚಲನವೇ ಕಾರಣವೆಂದು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ

ಜರ್ಮನ್ ನೌಕೆಯ ಬಂಧನ.

ಕಾಫಿ ಮತ್ತು ಲೋಹದ ಅದಿರುಗಳನ್ನು ತುಂಬಿಕೊಂಡು ಜರ್ಮನಿಗೆ ಹೊರಟಿದ್ದ "ಬಹಿಯಾಬ್ಲಾಂಕಾ" ಎಂಬ ಜರ್ಮನ್ ಹಡಗನ್ನು ಬ್ರಿಟಿಷರು ಬಂಧಿಸಿದಾರೆ

ಬ್ರಿಟಿಷ್ ವಿಮಾನಗಳು ಜರ್ಮನಿಯ ಮೇಲೆ ಹಾರಾಡಿದವು.

ಕಳೆದ 1ನೆಯ ತಾರೀಖಿನ ದಿವಸ ಆರ್. ಎ. ಎಫ್. ವಿಮಾನಗಳು ಮಾಯವ್ಯ ಜರ್ಮನಿಯ ಮೇಲೆ ಪರೀಕ್ಷಾ ಧ್ಯಾನಾರ್ಥವಾಗಿ ಹಾರಾಡಿ ಅಪಾಯವಿಲ್ಲದೆ ಸುರಕ್ಷಿತವಾಗಿ ಹಿಂದಿರುಗಿ ಬಂದವು

ಜರ್ಮನ್ನರು ರಷ್ಯಾಕ್ಕೆ ಸಹಾಯ ಮಾಡುವರೇ?

ಹೆರ್ ವಾನ್ ರಿಬ್ಬನ್‌ಟ್ರಾಪರಿಗೂ ಮತ್ತು ಮಾರ್ಷಲ್ ಗೊರಿಂಗ್‌ರವರಿಗೂ ಬಹಳ ಬಿಣ್ಣಾಭಿಪ್ರಾಯವುಂಟಾಗಿದೆ ರಿಬ್ಬನ್‌ಟ್ರಾಪರು ರಷ್ಯಕ್ಕೆ ಏಲಿಟರಿ ಸಹಾಯ ಕೊಡಬೇಕೆಂದು ಹೇಳಿದರೆ, ಗೊಯರಿಂಗ್‌ರವರು ಆದನ್ನು ವಿರೋಧಿಸುತ್ತಿರುವರಂತೆ!

ಚಕ್ರವರ್ತಿಗಳ ಆಜ್ಞೆ.

ಬ್ರಿಟನ್ನಿನಲ್ಲಿ 19 ರಿಂದ 28 ವಯಸ್ಸಿನೊಳಗಿರುವವರೆಲ್ಲರೂ ಯುದ್ಧಕ್ಕೆ ಸಿದ್ಧರಾಗಬೇಕೆಂದು ಚಕ್ರವರ್ತಿಗಳು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದರಿಂದ ಸುಮಾರು 20 ಲಕ್ಷ ಜನರು ಯುದ್ಧಕ್ಕೆ ಸಿದ್ಧರಾದಂತಾಗುವರು. ಒತ್ತಾಯವಾಗಿ ಯುದ್ಧಕ್ಕೆ ಕರೆಯಲ್ಪಟ್ಟಿರುವವರ ಸಂಖ್ಯೆ ಇದುವರೆಗೆ ೨೬॥ ಲಕ್ಷವೆಂದು ಪ್ರಕಟವಾಗಿದೆ.

ಅಮೆರಿಕೆಯ ರಕ್ಷಣೆಗಾಗಿ ಖರ್ಚು.

ಅಮೆರಿಕೆಯ ರಕ್ಷಣಾಶಕ್ತಿಯನ್ನು ಬಲಪಡಿಸುವುದಕ್ಕೂ ತಾಟಸ್ಥ್ಯ ನೀತಿಯನ್ನು ಕಾಪಾಡಿಕೊಂಡು ಬರುವದಕ್ಕೂ 27,19,09,523 ಡಾಲರುಗಳ ವೆಚ್ಚವನ್ನು ತಕ್ಷಣ ಮಂಜೂರು ಮಾಡಿಕೊಡಬೇಕೆಂಬ ಅಧ್ಯಕ್ಷರಾದ ರೂಜ್‌ವೆಲ್ಟರು ಕಾಂಗ್ರೆಸ್ ಕಾನನ ಸಭೆಯನ್ನು ಕೇಳಿದ್ದಾರೆ.

ರಷ್ಯ ಸೈನಿಕರು ಹಿಂದಕ್ಕೆಟ್ಟಿಲ್ಲಿಟ್ಟಿತು.

ಫಿಲೆಂಡಿನ ಟೈಪಾಲ್ ನದಿಯ ಹತ್ತರ ರಷ್ಯದ ಕಾಲಾಳು ಸೈನಿಕರು ಫಿರಂಗಿ ಸೈನ್ಯದ ಸಹಾಯಪಡೆದು ಭಯಂಕರ ಹೊಡೆದಾಟ ಮಾಡಿದರು. ಆವರೂ ಕಡೆಗೆ ಸೋತು ಹಿಮ್ಮೆಟ್ಟಿದರು. ಇದರಿಂದ ರಷ್ಯದಕಡೆಗೆ ಬಹಳ ನಷ್ಟವಾಯಿತು. ಏಟುಹೊಡೆಕೆ ಎಂಬಲ್ಲಿ ರಷ್ಯ ಸೈನಿಕರು ಬಂದೂಕುಗಳ ಸಹಾಯದಿಂದ ಹೋರಾಟ ನಡೆಸಿದರು. ಆಲ್ಲಿ ಒಂದು ರಷ್ಯ ಪಡೆಯು ಸಂಪೂರ್ಣವಾಗಿ ಫಿರಂಗಿಂದ ನಾಶಮಾಡಲ್ಪಟ್ಟಿತು. ರಷ್ಯದ ೮ ಟ್ಯಾಂಕುಗಳಲ್ಲನ್ನೂ 2 ಆರ್‌ಮರ್ಡ್‌ಕಾರುಗಳನ್ನೂ ಫಿರಂಗಿನವರು ನಾಶಮಾಡಿದರು.

ಜರ್ಮನಿ ತೊರಿಕು ಭವಿಷ್ಯ.

1940 ರಲ್ಲಿ ಜರ್ಮನಿಯಲ್ಲಿ ಆನೇಕ ಕೊಲೆಗಳಾಗುವ ವೆಂದೂ, ಹರ್‌ವಾ ರಿಬ್ಬಟ್ರಾಪ್‌ರು ಕೊಲೆಮಾಡಲ್ಪ ಡುವರೆಂದೂ, ನಾಜಿ ಸರ್ಕಾರಕ್ಕೆ ಸ್ತ್ರೀಯರಿಂದಲೂ ಮತ್ತು ಧೈರ್ಯದಿಂದಲೂ ಉಗ್ರ ಪ್ರತಿಭಟನೆಯುಂಟಾಗುವು ದೆಂದೂ ಮಿಸ್ ಡೊಮೋಧಿ ಥಾರ್‌ಪ್ಸನ್ನರು ಭವಿಷ್ಯ ನುಡಿದಿರುವರು.

ರಷ್ಯದಲ್ಲಿ ದಂಗೆಗಾರಂಭವಾಗಿದೆ

ಕೈಗೆಸಿಕ್ಕುವಂತಿದ್ದ ಆಹಾರ ಸಾಮಗ್ರಿಗಳನ್ನೆಲ್ಲ ಸೈನಿಕರ ಉಪಯೋಗಕ್ಕಾಗಿ ಕಳುಹಿಸಿಕೊಟ್ಟಿದುವರಿಂದ ಸಾರ್ವಜನಿಕರಿಗೆ ಆಹಾರಪದಾರ್ಥಗಳ ಕೊರತೆಯುಂಟಾ ಗಿರುವ ರಷ್ಯದ ಮುಖ್ಯಪಟ್ಟಣವಾದ ಲೆನಿನ್‌ಗ್ರಾಡ್ ನಲ್ಲಿ ಉಗ್ರ ದಂಗೆಯು ಆರಂಭವಾಗಿರುವದೆಂದು ತಿಳಿದು ಬರುತ್ತದೆ. ಮಾಸ್ಕೋ ನಗರದಲ್ಲಿಯೂ ದಂಗೆಗಳಾರಂಭ ವಾಗಿವೆಯಂತೆ !

ಅತಕ್ಕ ಕೈದಿಗಳ ಬಂಧವಿಮೋಚನ ಪ್ರಯತ್ನ

ನಿರ್ಬಂಧದಲ್ಲಿರುವ ಮುದುಕರು, ಹೆಂಗಸರು ಮತ್ತು ಮಕ್ಕಳನ್ನು ಬಿಡುಗಡೆ ಮಾಡುವಂತೆ ಬ್ರಿಟಿಷರು ಜರ್ಮನಿಯನ್ನು ಕೇಳಿದ್ದಾರೆ. ಆವರೆಲ್ಲರೂ ಸಾಮಾನ್ಯ ಪ್ರಜೆ ಗಳಾಗಿದ್ದು ಜರ್ಮನಿಯ ನಿರ್ಬಂಧಕ್ಕೆ ಒಳಗಾಗಿರುವರು. ಇವಕ್ಕೆ ಪ್ರತಿಯಾಗಿ ಬ್ರಿಟಿಷರೂ ಸಹ ತಮ್ಮಲ್ಲಿರುವ ಜರ್ಮನ್ ಕೈದಿಗಳನ್ನು ಬಿಡುವರು ಇದೇ ರೀತಿ ಫ್ರಾನ್ಸ್ ಮತ್ತು ಜರ್ಮನಿಗಳ ನಡುವೆಯೂ ವ್ಯವಸ್ಥೆ ಯಾಗಬಹುದಾಗಿದೆ.

ಯುದ್ಧಸಾಮಗ್ರಿಯ ಕಳುವು

ಡಬ್ಲಿನ್ನಿನ ಫಿನಿಕ್ಸ್ ಪಾರ್ಕಿನಲ್ಲಿ ಮದ್ದುಗುಂಡುಗಳ ಉಗ್ರಾಣ ದಿಂದ ಯುದ್ಧೋಪಕರಣಗಳು ಕಳವಾಗಿದ್ದು ಆವರಲ್ಲಿ 3 ಟ್ರಿನ್ನಿತ್ರೊ ಮದ್ದುಗುಂಡುಗಳು ಪತ್ತೆಯಾಗಿವೆ ಈ ಸಂಬಂಧದಲ್ಲಿ ಪೋಲೀಸರು 30 ಜನರನ್ನು ದಸ್ತಗಿರಿ ಮಾಡಿರುತ್ತಾರೆ. ಅಲ್ಲದೆ ಕಳವಾಗಿರುವ ಸಾಮಗ್ರಿಗಳ ನಿಷಯವಾಗಿ ತಿಳಿವಳಿಕೆ ಕೊಡುವವರಿಗೆ ಒಂದು ಸಾವಿರ ಪೌಂಡುಗಳ ಬಹುಮಾನಕೊಡುವುದಾಗಿ ಪ್ರಕಟಿಸಿದ್ದಾರೆ

ಜರ್ಮನ್ ಮುಖಂಡರಲ್ಲಿ ಭಿನ್ನಾಭಿಪ್ರಾಯವೇ ?

ಜನರಲ್ ಗೊಯಿಂಗರು ಕ್ರಿಸ್‌ಮಸ್ ಹಬ್ಬದ ಕೂಟಗಳೊಂದರಲ್ಲೂ ಭಾಗವಹಿಸದೆ ದೂರವಿದ್ದುದಕ್ಕೆ ಕಾರಣವೇನೆಂಬುದೂ ಅವರು ಇತರ ಎಲ್ಲ ವಿಷಯಗಳ ಲ್ಲೂ ಮೌನವನ್ನವಲಂಬಿಸಿರುವದೂ ಯಾರಿಗೂ ತಿಳಿಯ ದಾಗಿದೆ. ಅವರು ಯುದ್ಧರಂಗದ ಬಳಿಗೆ ಹೋಗಿ ಇತರ ಮುಖಂಡರಂತೆ 'ಛಾಪಣವನ್ನು ಕೂಡ ನೂಡಲಿಲ್ಲ ಸೊಯರಿಂಗರು ಹಿಟ್ಲರರ ಕೂಡ ಮನಸ್ತಾಪಮಾಡಿ ಕೊಂಡಿರಬಹುದೆಂದು ಕೆಲವರು ಊಹಿಸುತ್ತಾರೆ.

ರಷ್ಯಾ ರೈಲ್ವೆಯ ನಾಶ.

ಮಾರ್ ಮೂನ್ಸ್ಕ್ ಪ್ರದೇಶದಲ್ಲಿ ಫಿನ್ನಿಷ್ ವಿಮಾನ ಗಳು ರಷ್ಯದ ಪೆಟ್ರೋಲ್ ಸಂಗ್ರಹವನ್ನು ನಾಶಮಾಡಿ ದವು ರಷ್ಯನ್ ಸೈನ್ಯ ವ್ಯೂಹದ ಹಿಂದಿರುವ ರೈಲ್ವೆಮಾ ರ್ಗಗಳು ಜಂಕ್ಷನ್‌ಗಳು, ಗುಡ್ಸ್‌ಯಾರ್ಡ್‌ಗಳ ಮೇಲೆಲ್ಲ ಫಿನ್ನಿಷ್ ವೈಮಾನಿಕರು ಮುತ್ತಿಗೆ ಹಾಕಿ ವಿಶೇಷ ನಷ್ಟ ಪಡಿಸಿರುವರು. ಸೌಮಸಾಲ್ಮಿ ಯುದ್ಧದಲ್ಲಿ ಫಿನ್ನಿಷರು ಸಿರಂಗಿಗಳ ಸಹಾಯವಿಲ್ಲದೆ ಜಯಪಡೆದರು. ಮೊದಲು ಸೈನಿಕರ ಆಶಿಗೆ ಮನೆಗಳನ್ನೂ ಆನಂತರ ಆಹಾರವನ್ನು ಗಳನ್ನು ತರುವ ವಾಹನಾದಿಗಳನ್ನೂ, ಧ್ವಂಸಮಾಡಿ, ಹೊಟ್ಟೆಗಿಲ್ಲದೆ ನರಳುತ್ತಿದ್ದ ರಷ್ಯನರ ಮೇಲೆ ಬಿದ್ದು ಧ್ವಂಸಮಾಡಿದರು.

ಫಿನ್‌ಲೆಂಡಿಗೆ ರಷ್ಯದ ಮುಷ್ಕಿ ಸೈನ್ಯವು ಬಂಡಿದೆ.

ಇಲ್ಲಿಯವರೆಗೂ ರಷ್ಯವು ಫಿನ್‌ಲೆಂಡಿಗೆ ತನ್ನ ಸಾಮಾನ್ಯ ಸೈನಿಕರನ್ನು ಕಳುಹಿಸಿತ್ತು. ಈಗ ಕೇಂದ್ರ ರಷ್ಯದಿಂದ ಬಲಯುತವಾದ ಪ್ರಥಮವರ್ಗದ ಕೆಂಪು ಸೈನಿಕರು ಕಳುಹಿಸಲ್ಪಟ್ಟಿರುತ್ತಾರೆ. ಆವರು " ಮ್ಯಾನರ್ ಹೀಂ ಲೈನ್ " ರಕ್ಷಣದುರ್ಗದ ಎದುರು ನಿಂತಿದ್ದಾರೆ. ಆವರುಗಳೆಲ್ಲರೂ ಯೋಗ್ಯ ಯುದ್ಧೋಪಕರಣಗಳನ್ನು ಹೊಂದಿದ್ದಾರೆ ಜರ್ಮನ್ ಮಾದರಿಯ ವಿಷಮಯು ನಿವಾರಕ ಮುಖವಾಡಗಳನ್ನು ಇವರಿಗೆ ಕೊಡಲಾಗಿದೆ.

ರಷ್ಯ ಸೈನಿಕರ ಮರಣಕ್ಕೆ !

ಫಿನ್‌ಲೆಂಡಿನ ರಣಕ್ಷೇತ್ರದಲ್ಲಿ ಘೋರಯುದ್ಧವು ನಡೆ ಯುತ್ತಿದೆ ಎಲ್ಲಿರುವೆ ರಷ್ಯನರನ್ನು ಫಿನ್ನಿಷರು ಸುತ್ತು ಗಟ್ಟಿದ್ದಾರೆ ಫಿನ್ನಿಷರು ಎಲ್ಲಿಯೂ ಒಮ್ಮೆಟ್ಟಿಲ್ಲ ಹಲ ವುಕಡೆ ರಷ್ಯನಿಗಳನ್ನು ಹಿಂದಕ್ಕಟ್ಟಿದ್ದಾರೆ ಲಡೋಗ ಸರೋವರದ ಉತ್ತರದಲ್ಲೂ ಕ್ಯೂರ ಹೊಡಿದಾಟವಾಗು ತ್ತಿದೆ. ಫಿನ್‌ಲೆಂಡಿನ ರಕ್ಷಣಮರ್ಗಾದ " ಮ್ಯಾನರ್ ಹೀಂರ್ಲೈನ್ " ಬಳಿ 100000 ರಸ್ಯ ಸೈನಿಕರು ಕೂಡಿದ್ದಾ ರೆ ಲಡೋಗಾ ಸರೋವರದ ಉತ್ತರದಲ್ಲಿ 75 ಸಾವಿರ ರಷ್ಯಾ ಸೈನಿಕರು ಹೊಟ್ಟೆಗಿಲ್ಲದೆ ಸಾಯುವಸ್ಥಿತಿ ಬಂದಿ ದೆ ಅವರುಗಳಿಗೆ ರಷ್ಯದಿಂದ ಆಹಾರಪದಾರ್ಥಗಳು ಬಾರದಂತೆ ತಡೆಮಾಡಲ್ಪಟ್ಟಿವೆ

ಫ್ರಾನ್ಸು ಫಿನ್‌ಲೆಂಡಿಗೆ ಸೈನ್ಯ ಕಳುಹಿಸುವದೇ ?

ಫ್ರಾನ್ಸು ಫಿನ್‌ಲೆಂಡಿಗೆ 10 ಸಾವಿರ ಸೈನಿಕರನ್ನು ಕಳುಹಿಸಲಿರುವದೆಂಬ ಸುದ್ದಿಯು ಹೊರಬಿದ್ದ ಕೂಡಲೆ ಜರ್ಮನಿಯು " ಹಾಗಾದರೆ ಫಿನ್‌ಲೆಂಡಿನ ಯುದ್ಧದಲ್ಲಿ ನಾವೂ ಕೈಹಾಕಬೇಕಾಗುತ್ತದೆ " ಎಂದಿತು ಇಂಗ್ಲೆಂಡು ಉತ್ತರದೇಶಗಳಲ್ಲಿ ವಿಮಾನ ಮತ್ತು ನೌಕಾಮೂಲ ಗಳನ್ನು ಸ್ಥಾಪಿಸಿ ಅಲ್ಲಿಂದ ರಷ್ಯ ಮತ್ತು ಜರ್ಮನಿಗಳ ಮೇಲೆ ಯುದ್ಧಮಾಡಲು ಹವಣಿಸುತ್ತಿರುವದಾಗಿ ಜರ್ಮ ನರು ಪಾಪಿಸುತ್ತಾರೆ ಫಿನ್‌ಲೆಂಡಿಗೆ ಸಹಾಯಮಾಡುವ ವಿಚಾರದಲ್ಲಿ ಫ್ರಾನ್ಸಿನಲ್ಲಿ ಭಿನ್ನಾಭಿಪ್ರಾಯಗಳವೆ ಸಂಗ್ರಾಮ ವಸ್ತುಗಳನ್ನು ಕಳುಹಿಸುವ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ ಸೈನ್ಯ ಕಳುಹಿಸುವ ವಿಚಾರದಲ್ಲಿ ಮಾತ್ರ ಕೆಲವರು "ಈಗ ಆರಂಭಿಸಿರುವ ಒಂದು ಯುದ್ಧ ಸಾಕು " ಎಂದು ಹೇಳುತ್ತಿದ್ದಾರೆ.

ಜರ್ಮನಿಯಲ್ಲಿ ಹಣದ ಕೊರತೆ.

ಜರ್ಮನಿ ಸರ್ಕಾರವಲ್ಲಿ ದುಡ್ಡಿನ ಕೊರತೆಯುಂಟಾಗಿ ರುವುದರಿಂದ ಯುದ್ಧವನ್ನು ಮುಂದುವರಿಸಲು ಬೇಕಾದ ಹಣಕ್ಕಾಗಿ ಪ್ರಜೆಗಳಿಂದ ಬಲವಂತವಾಗಿ ಸಾಲವೆತ್ತುವ ಗತಿ ಬಂದಿದೆ ಸರಕಾರದ ವರಮಾನವನ್ನು ಹೆಚ್ಚಿಸಲು ಕಳೆದ ಸಪ್ಟೆಂಬರಿನಲ್ಲಿ ಆದಾಯ ತೆರಿಗೆಯನ್ನು ತೀಕಡಾ 50 ರಷ್ಟು ಹೆಚ್ಚಿಸಲಾಯಿತು. ಇದರಿಂದ ಬಂದ ಹಣವು ಕೆಲವು ತಿಂಗಳುಗಳಲ್ಲೇ ಮುಗಿಯಿತು. ಈಗ ತಿರುಗಿ ಹೊಸ ಅಭಾವವುಂಟಾಗಿದೆ ಅದಕ್ಕೆ ಈಗ ಸರ್ಕಾರದ ವರು ಇನ್ನೊಂದು ಹಂಚಿಕೆ ಮಾಡಿದ್ದಾರೆ. ಜನರು ಹೆಚ್ಚಾಗಿ ಪದಾರ್ಥಗಳನ್ನು ಉಪಯೋಗಿಸದಂತೆ ಕಟ್ಟು ನಾಡಿಬಿಟ್ಟಿರೆ ಅವರಲ್ಲಿ ಹಣವು ಉಳಿಯುವದೆಂದೂ, ಹಾಗೆ ಉಳಿದ ಹಣವನ್ನು ಬಲಾತ್ಕಾರದಿಂದ ಸರ್ಕಾರವು ಸಾಲವಾಗಿ ತೆಗೆದುಕೊಳ್ಳಬೇಕೆಂದೂ ನಿರ್ಧರಿಸಿರುವರಂತೆ.

ತುರ್ಕಿಯಲ್ಲಿ ಭಯಂಕರ ಅನಾಹುತ !

ತುರ್ಕಿಯಲ್ಲಿ ಸಂಭವಿಸಿದ ಭೂಕಂಪದಲ್ಲಿ ಸುಮಾರು 25 ಸಾವಿರ ಜನರು ಮೃತರಾಗಿರಬಹುದೆಂದು ಅಂಕಿಸ ಲಾಗಿತ್ತು. ಈಗಿನ ತಿಳುಬಂದಿರುವುದರಲ್ಲಿ 50 ಸಾವಿರ ಮಂದಿಗೆ ಮೇಲ್ಪಟ್ಟು ಮೃತರಾಗಿರುವರೆಂದೂ, 45 ಸಾವಿರ ಜನರಿಗಿಂತ ಹೆಚ್ಚು ಗಾಯಗೊಂಡಿರುವರೆಂದೂ ಗೊತ್ತಾ ಗಿದೆ. ಭೂಕಂಪಕ್ಕೆ ಸಿಕ್ಕಿದೆ ತಪ್ಪಿಸಿಕೊಂಡ ಪ್ರದೇಶಗಳು ಈಗ ಪ್ಲವಾಹದ ಅನಾಹುತಕ್ಕೊಳಗಾಗಿವೆ. ಸ್ಮರ್ನಾ, ಬೂರಾ ಮತ್ತು ಎಡ್ರಿಯಾನೋಪಲ್ ಜಿಲ್ಲೆಗಳಲ್ಲಿ ನದಿ ಗಳು ಮೇರೆದಪ್ಪಿ ಹರಿದುದರಿಂದ ಆನೇಕ ಜನರು ಮೃತ ರಾಗಿರುವರು ಪಶ್ಚಿಮ ಅನಟೋಲಿಯದಲ್ಲಿ ನದಿ ಆಣೆ ಕಟ್ಟುಗಳೊಡೆದು ಏಳರು ಗ್ರಾಮಗಳ ಮೇಲೆ ನುಗ್ಗಿದುದ ರಿಂದ 700 ಜನಗಳಿಗಿಂತ ಹೆಚ್ಚು ಮಂದಿ ಏಳರುಪಾಲಾ ದರು. 400 ಮನೆಗಳು ನೆಲಸಮವಾದವು. ಸತ್ತವರ ಸಂಖ್ಯೆಯನ್ನು ಸರಿಯಾಗಿ ಗೊತ್ತುಹಚ್ಚುವುದೇ ಕಷ್ಟ ವಾಗಿದೆ. ಇಸ್ತಂಬೂಲಿನ ದಕ್ಷಿಣದಲ್ಲಿರುವ ನೈದಾನ ಪ್ರದೇಶದಲ್ಲಿ ಪ್ರವಾಹವು ಇನ್ನೂ ವಿಪರೀತ ಅನಾಹುತ ವನ್ನುಂಟುಮಾಡುತ್ತಲಿದೆ.

ಒಳದೇಶದ ವೃತ್ತಾಂತಗಳು.

ಬೆಂಗಳೂರಿನಲ್ಲಿ ಮುಂದಿನ ಜುಲೈ ತಿಂಗಳಿನಿಂದ " ಆ " ಕಾಲೇಜನ್ನು ಸ್ಥಾಪಿಸಬೇಕೆಂದು ಸರ್ಕಾರದವರು ನಿರ್ಧರಿಸಿದ್ದಾರೆ. ಈ ಕಾಲೇಜು ಮೈಸೂರು ವಿಶ್ವವಿದ್ಯಾ ನಿಲಯದ ಅಂಗವಾಗಿರುವದು

ಯೂರೋಪಿನಿಂದ ಹೊರಟ ಶ್ರೀಮದ್ಯುವರಾಜರವರು ಕಳೆದ 3 ನೆಯ ತಾರೀಖಿನ ದಿವಸ ಮೋಂಬಾಯಿಗೆ ತಲಪಿ ದರು ಅಲ್ಲಿ ಕೆಲವು ದಿನಗಳವರೆಗೆ ಇದ್ದು ವಿಶ್ರಾಂತಿ ಪಡೆದು ಆನಂತರ ರಾಜಧಾನಿಗೆ ದಯಮಾಡಿಸುವವ ರಾಗಿದ್ದಾರೆ

ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಎಸ್ ನೆಂಕಟರಂಗ ಅಯ್ಯಂಗಾರ್ಯರಿಗೆ ಜನವರಿ 31ನೆಯ ತಾರೀಖಿ ನಿಂದ 15 ದಿನಗಳ ರಜಾ ಕೊಡಲಾಗಿದೆ. 16ನೆಯ ತಾರೀಖಿನಿಂದ ಹೈಕೋರ್ಟಿಗೆ ಇನ್ನೊಬ್ಬರು ನೂತನ ನ್ಯಾಯಾಧೀಶರನ್ನು ನಿಯಮಿಸಲಾಗುವದೆಂದು ತಿಳಿದು ಬರುತ್ತದೆ.

ಮೈಸೂರು ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಅಧಿವೇಶನವು ಬೆಂಗಳೂರಿನಲ್ಲಿ ಜನವರಿ 22 ನೆಯ ತಾರೀ ಖಿನಿಂದ ಪ್ರಾರಂಭವಾಗಲಿದೆ. ಈ ಸಭೆಗೆ ಪ್ರೇಕ್ಷಕರಾಗಿ ಹೋಗಲಿಚ್ಛವುಳ್ಳವರು ಈ ಸಭೆಯ ಸದಸ್ಯರೊಬ್ಬರ ಮೂಲಕ ನ್ಯಾಯವಿಧಾಯಕಸಭೆಯ ಕಾರ್ಯದರ್ಶಿಗಳಿಗೆ ಎರಡು ದಿನಗಳ ಮುಂಚೆ ಅರ್ಜಿಯನ್ನು ಬರೆದುಕೊಂಡು ಪ್ರವೇಶಪತ್ರವನ್ನು ಪಡೆಯಬೇಕೆಂದು ತಿಳಿಯುತ್ತದೆ.

ಮೈಸೂರು ಸಂಸ್ಥಾನದ ದ್ವಿತೀಯ ಪಟ್ಟಿವರಾದ ರಾಜಮಂತ್ರಪ್ರವೀಣ ಕೆ ವಿ. ಆನಂತರಾಮಯ್ಯನವರು ಈ ತಿಂಗಳು 4ನೆಯ ತಾರೀಖಿನ ದಿವಸ ತುಮಕೂರು ಡಿಟ್ರಿ ಕ್ಟಿಗಳು ಟವನ್ನಿಗೆ ಎಲೆಕ್ಟ್ರಿಕ್ ಡಿಸ್ಪೋಷ್ಟವನ್ನು ನೆರವೇರಿಸುವುದಕ್ಕೆ ಪ್ರಯಾಣ ಮಾಡಿದ ಸಮಯದಲ್ಲಿ, ಸಚ್ಚಿ ಅಲ್ಲಿಯೇ ನೋಕ್ಕಾಂ ವಾಸಮಿರುವ ಶ್ರೀರಂಛಾಪುರೀ ಜಗದ್ಗುರುಗಳವರ ಸನ್ನಿಧಿಗೆ ಹೋಗಿ ದರ್ಶನ ಮಾಡಿ ಕೊಂಡು ಕುಶಲಾದಿಗಳನ್ನು ವಿಚಾರಿಸಿ ಬೆಂಗಳೂರಿಗೆ ಪ್ರಯಾಣ ಮಾಡಿದರೆಂದು ತಿಳಿದು ಬರುತ್ತದೆ

ಸ್ವೀಕಾರ.

ಮದ್ದೂರು ತಾಲೂ ಬೆಸಗರಹಳ್ಳಿಯಲ್ಲಿ ನೆರವೇರಿದ ಚಿಂಪಕಾಪುರಿತಿಮ್ಮಾಜಮ್ಮಣಿಮಠದ ನೂತನ ಪಟ್ಟಾಧಿಕಾರಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಹೆಚ್ಚಾ. ಸಿ ಗುರುವೀರಾರಾಧ್ಯರ ದ್ವಾರಾ ತಲ್ಪಿರುತ್ತವೆ

ಈ ನೇಮ್ಲಂಡ ಮಹಾಕಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

[೩ ನೆಯ ಪುಟದಿಂದ ಮುಂದುವರೆದುದು]

ಟಾಗಿ ಮರ್ಯಾದೆಯನ್ನು ಕೆಡಿಸಿಬಹುದು ಸದ್ಗುಣ ವೆಂಬ ಕವಚವನ್ನು ತೊಟ್ಟುಕೊಳ್ಳದಿದ್ದರೆ ದುರ್ಜನತೆಯ ನವ್ಯಾನ್ನು ಭೇದಿಸಿ ನಾಶಪಡಿಸ ವುದರಲ್ಲಿ ಸಂಶಯವೇ ಇಲ್ಲ ಒಳ್ಳೆಯ ಗುಣಗಳನ್ನು ಹೊಂದಿದ್ದರೂ ಧೈರ್ಯ ಹೀನರಾಗಿಯೂ, ದಯಾಶೂನ್ಯರಾಗಿಯೂ ಇರುವ ಅನೇಕರನ್ನು ನಾವು ನೋಡುತ್ತಿರುವೆವು ಮನುಷ್ಯನು ಸ್ವಭಾವಜನ್ಯವಾದ ಸದ್ಗುಣಗಳಿಂದ ಕೂಡಿದವನಾಗಿದ್ದರೆ, ಕ್ರಮೇಣ ದುರ್ಗುಣ ಜಾಲಕ್ಕೆ ತನ್ನ ಮನಸ್ಸನ್ನು ಲೀನಗೊಳಿಸಿಕೊಳ್ಳು ವುದು ಸುತ್ತಮುತ್ತಲಿನ ಸಾದನಾ ಸಾಮಗ್ರಿಗಳ ಸಹ ಸಹಿಸದಿಂದಲೇ ಅಲ್ಲದೆ ಮತ್ತೆ ಬೇರೆ ಅಲ್ಲ ನಾವು ಕೆಟ್ಟು ಹೋಗಬೇಕಾಗಿದ್ದರೆ ಅದು ಸಾಧನೆ ಯಿಂಮಂಟಾಗದೇ ಹೊರತು ಒಂದು ದಿನದಲ್ಲಿಯೇ ನಡೆಯತಕ್ಕ ಕಾರ್ಯವಲ್ಲ ಈ ವಿಷಯದಲ್ಲಿ—'ಪ್ರಪಂಚ' ದಲ್ಲಿ ಮನುಷ್ಯರಾದ ನಾವು ಅಪಾರವಾದ ಆದ್ಯಶ್ಯವಾದ ಸಜಲವೆಂಬ ಸಮುದ್ರವು ನಮ್ಮ ಮುಂದೆ ವಿಶಾಲವಾಗಿ ಹರಡಿರುವಾಗ್ಗೆ, ದೊಡ್ಡವರಾದ ನಾವು ಇನ್ನೂ ಚಿಕ್ಕ ಮಕ್ಕಳಂತೆ ಆಕಾ ಸಮುದ್ರದ ದಡದಮೇಲೆ ನಿಂತು ಆಟ ವಾಡುತ್ತಾ, ಅಲ್ಲಲ್ಲಿ ಕಾಣಬರುವ ಅನುಸಯೋಗವಾದ ವಸ್ತುವೆಂಬ ಸಣ್ಣ ಸಣ್ಣ ಕಪ್ಪೆಚಿಪ್ಪುಗಳನ್ನು ಆಥವಾ ಅದ ಕ್ಕಿಂತ ಕ್ಷಣಭಂಗುರವಾದ ಫೇಣವನ್ನೇ ಆರಿಸಿ ಒಟ್ಟು ಗೂಡಿಸಿಕೊಳ್ಳುತ್ತಾ ತೃಪ್ತಿಪಡುತ್ತಿರುವೆವು ಎಂದು ಒಬ್ಬ ಪಂಡಿತನು ಹೇಳಿರುವನು ನಾವು ನೋಡುವ ವಸ್ತುಗಳಲ್ಲಿರುವ ಸಮ್ಮೋಹನ ಪದಾರ್ಥಗಳೂ, ಸ್ವಭಾವ ದಲ್ಲಿನ ಶಕ್ತಿಯೂ ಅವುವೆಂಬುದನ್ನು ನಾವು ಸರಿಯಾಗಿ ತಿಳಿದುಕೊಂಡೆ ನಮ್ಮ ಬುದ್ಧಿಗೂ, ಶರೀರಕ್ಕೂ ಅವು ಸಹಕಾರಿಯಾಗಿರ ವುದಕ್ಕೂ ಜ್ಞಾನಾಭಿವೃದ್ಧಿಗೂ ಬೇಕಾಗಿರುವ ವಸ್ತುಗಳನ್ನು ಹೊಂದುವುದಕ್ಕೆ ಕಾಲವು ಸಹಾಯ ಮಾಡಿಕೊಡ ತ್ತದೆ ಎಂಬುದಕ್ಕೆ ಶೈಲುಗಾಡಿಯೂ, ವಿದ್ಯುಚ್ಛಕ್ತಿಯೂ ಇವುಗಳನ್ನು ಕಂಡುಹಿಡಿದಿರುವುದೇ ದೃಷ್ಟಾಂತವಾಗಿದೆ

ಮನುಷ್ಯನಾಗಿ ಮಾನವನು ಸುಖವಾಗಿರಬೇಕಾಗಿದ್ದರೆ ಈ ರೀತಿಯಲ್ಲಿ ನಡೆಯಬೇಕೆಂದು ಒಬ್ಬ ಪಂಡಿತನು ಹೇಳಿರುವನು—

(1) ಮನುಷ್ಯನು ತನ್ನ ಮಾತಾಪುಗುಣವಾಗಿ ಹೇಳಿ ಕುಪ್ಪ ಕಟ್ಟುಪಾಡುಗಳನ್ನು ಸುರಿಸಿಕೊಂಡು ನಡೆದುಕೊಳ್ಳುತ್ತಾ ಮಾತಾಭಿಮಾನಿಯಾಗಿರಬೇಕು (2) ತಾನು ಯೋಗ್ಯ ನೆಂದು ತಿಳಿದಿರುವ ಕಾರ್ಯಗಳನ್ನು ಅಲಕ್ಷ್ಯಮಾಡದೆ ತಕ್ಷಣವೇ ಅವುಗಳನ್ನು ಆಚರಣೆಗೆ ತರುತ್ತಾ, ಅವುಗಳ ಫಲಕ್ಕಾಗಿ ನಿರೀಕ್ಷಿಸುತ್ತಿರಬಾರದು (3) ಮನೋಗತ ವಾದ ಆಕಾಶಾಗಣದ ಎಲ್ಲೆಯನ್ನು ಮೀರಿ ನಡೆಯದೆ, ಆಕಾಶ್ಯಕ್ಕೆ ಬಾಸಾಗಬಾರದು ಮನುಷ್ಯನು ಈ ವಿಷ ಯಗಳನ್ನು ತನ್ನ ಜೀವಿತಕಾಲದಲ್ಲಿ ಮುಖ್ಯವಾಗಿ ಯೋಚಿಸಿ ತಿಳಿದು, ಆಚರಣೆಗೆ ತರುವುದಾದರೆ ಎಲ್ಲೆ ಯೊಂದಿ ವಿಜ್ಞಾತಿಯನ್ನು ಪಡೆದು ಸುಖವಾಗಿರುವನು

ಗೃಹಲಕ್ಷ್ಮಿ

(ಲೇಖಕ ಗುರುಸೀತಾಕಿಂಕರ, ಹೊಸಹಳಗಲ)

ನಮ್ಮಾ ರ್ಯಮಪವಿತ್ರವಾದ ಭರತಭೂಮಿಯಲ್ಲಿ ಎಷ್ಟೋ ಜನ ಗೃಹಲಕ್ಷ್ಮಿಯರು ಆಜ ಪ್ರಾತಃಸ್ಮರಣಾರ್ಹವಾದ ಕೀರ್ತಿಯನ್ನು ಪಡಮು ಹೋಗಿದ್ದಾರೆ ಈಗಲಾದರೂ ಇರುವಂಥಾಬುದಕ್ಕೆ ಯಾವ ಸಂಶಯವೂ ಇಲ್ಲ ಆದರೆ ಅಂಧವಿಶ್ವಾಸ ಕಾಣುವುದು ಮಾತ್ರ ಪರಮ ದುರ್ಲಭ ವಾಗಿರುತ್ತದೆ ಗೃಹಲಕ್ಷ್ಮಿ ಎಂದರೆ ಮನೆಯ ಐಶ್ವರ್ಯ ಎಂದರ್ಥ ಇವರು ಪತಿಯ ಮನೆಗೆ ಬಂದು, ಮನೆ ತನದ ಸರ್ವಕಾರ್ಯಗಳನ್ನೂ ಸುವ್ಯವಸ್ಥೆಯಿಂದ ಮಾಡುತ್ತ, ಕ್ಷಾಂತಿ, ದಾಂತಿ, ಪರೋಪಕಾರ ಮೊದಲಾದ ಸದ್ಗುಣಗಣ ಮಂಡಿತೆಯರಾಗಿ, ಪತಿಯೇ ಪರದೈವ ವೆಂದೂ, ಪತಿಸೇವೆಯೇ ದೈವಸೇವೆಯೆಂದೂ ನೆರೆನಂಬಿ, ಸದಾಚಾರ ಸಂಪನ್ನೆಯರಾದಲ್ಲಿ ಆ ಮನೆಯು ಸಕಲೈ ಶ್ವರ್ಯದಿಂದ ಕೂಡಿದುದೆಂದು ಹೇಳಬಹುದು ಇಂತಹ ಸತಿಯರಿಗೆ ಮನೆಯ ಐಶ್ವರ್ಯ ಆದಾಯ ಗೃಹಲಕ್ಷ್ಮಿ ಎಂದು ಹೆಸರು ಕೀರ್ತಿ ತರುವವರೂಆಪಕೀರ್ತಿ ತರುವವರೂ ಸಕಿಂರೇ ಆಗಿರುವುದರಿಂದ, ಮನೆತನದ ಕೀರ್ತ್ಯಪಕೀರ್ತಿಗಳು ಇವರನ್ನೇ ಅವಲಂಬಿಸಿರುತ್ತ ವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ ಇವ ರಿಂದ ಹುಟ್ಟುವ ಮನೆಯೂ ಸಂರಿದ ಮನಯೂ ಕೀರ್ತಿ ಪಡೆಯುವುದರಿಂದ ಇನೆರಿಗೆ ಗೃಹಲಕ್ಷ್ಮಿ ಎಂಬ ನಾಮವು ಪ್ರಾಪ್ತವಾಗಿದೆ ಈಗಿನ ಕಾಲದಲ್ಲಿ ಸುಧಾರಕರು ಹೆಚ್ಚಾಗಿ, ಸ್ತ್ರೀಯರಿಗೆ ಸ್ವಾತಂತ್ರ್ಯಬೇಕೆಂದು ಮನ ಬಂದಂತೆ ವರ್ತಿಸುತ್ತಿರುವರು ಇವರು ಪತಿಸೇವಾ ಪಾರಾಯಣೆಯರಾಗುವುದಿರಲಿ, ಪತಿಯನ್ನು ಕಣ್ಣೆತ್ತಿ ಕೂಡ ನೋಡುವುದಿಲ್ಲ ಪತಿಯ ಬಟ್ಟೆಬರೆಗಳು ಉಡಿಗೆ ತೊಡಿಗೆಗಳು ಭೂಷಣವಾಗಿರುವುದಿಲ್ಲವೆಂತಲೂ, ಪಾಸಣೆ ಯಿಂದ ಕೂಡಿದವುಗಳಾಗಿರುವುದೆಂತಲೂ ಅವರನ್ನು ಈ ನವೀನ ಸತಿಯರು ಮುಟ್ಟುವುದು ಸಹ ಇಲ್ಲ ಈ ನವೀನ ಸತಿಯರು ಆಧುನಿಕ ಪದ್ಧತಿಕಾರ ತಲೆಯು ಕೂದಲುಗಳನ್ನು ಎರು ಬಾಚಿಕೊಂಡು ಎಡಕ್ಕೆ ಬೈತಲೆ ತೆಗೆದುಕೊಂಡು ತಲೆಯ ಕೂದಲುಗಳಲ್ಲಿ ವಿಶೇಷಾಯ ನವೀನ 'ಹೇರ್‌ಪಿನ್' ಗಳನ್ನು ಇಟ್ಟುಕೊಂಡು ಬರ ವಲೆಯಿಂದ ತಿರುಗುವರು ಇನ್ನು ಇವರ ಉಡಿಗೆತೊಡಿಗೆ ಗಳನ್ನಿಮ್ಮು ವಿಚಾರಿಸೂಣ—ಇವುಗಳಲ್ಲಿ ನಾನಾ ನಮೂನೆಯ ಉಡಿಗೆಗಳು ವು ಕೆಳಗೆ ನಡುವಿನವರೆಗೆ ರಬ್ಬರ್ ಶಿಲ್ಕ್‌ನಿಂದ ಸಿದ್ಧಿಸಿದ ಪರಿಕಾರವನ್ನುಟ್ಟು, ಮೇಲೆ ಪೂಲ್ಕು (ವಿದೇಶೀಯರ ವಿಚಿತ್ರ ಕಪ್ಪಸ) ವನ್ನು ತೊಟ್ಟು, ಆಪರ ಮೇಲೆ ಶುದ್ಧ ಬಿಳಿ ಆರವಿಯ ತೀರ ಯನ್ನುಟ್ಟು, ಸರಗನ್ನು ನಡುವಿಗೆ ಒಕ್ಕಿಸಿಕೊಂಡಿರ ತ್ತಾರೆ ಇನ್ನು ಕೆಲವರು ಪೂರ್ತಿ ಸೀರಿಯಿಂದ ಕೆಳಗಿನ ನವೆಗೆ 'ಸಾನ' ನ್ನು ಪರಿಸಿರುತ್ತಾರೆ ಇದಕ್ಕೆ ತಕ್ಕಂ ತೆಯೇ ತಲೆಯ ಕೂದಲುಗಳನ್ನೂ ಕತ್ತರಿಸಿರುತ್ತಾರೆ ಕೈಯೊಳಗೆ ನಿಚಿತ್ರ ಗಾಜಿನ ಆಥವಾ ಕಪ್ಪೂರ ಬಳೆ ಗಳನ್ನಿಟ್ಟು ಎಡ ಮುಂಗೈಗೆ ಚಿಕ್ಕ ಗಡಿಯಾರವನ್ನು ಕಟ್ಟಿಕೊಂಡಿರುತ್ತಾರೆ ಕಾಲುಗಳಿಗೆ ಪೂರ್ತಿಯಾಗಿ ಕಾಲುಚೀಲಗಳ ನ್ಯೂನತೆಯ ಹೆಚ್ಚಿಕೆಯ ಚೀಲಗಳನ್ನು ಹಾಕಿಕೊಂಡು ಚಪ್ಪಲಿಗಳನ್ನೂ ಧರಿಸಿರುತ್ತಾರೆ ಇನ್ನು ಇವುಗಳಲ್ಲಿಯೇ ಉಡಿಗೆಗಳನ್ನು ಸೂರ್ಯಡಿಸಿ ದಿನಕ್ಕೆ ಮೂರುಸಾರೆ ಉಡುಪುಗಳನ್ನು ಬದಲಾಯಿಸುತ್ತಾರೆ ಇವರ ಅಂತೆಗಳು ತಲೆಯ ಕೂದಲುಗಳೂ ಅನೇಕ ತರಹದ ಸೆಂಟ್ಸುಗಳಿಂದ ಯಾವಾಗಲೂ ಘಮಘಮಿಸುತ್ತವೆ ಹೀಗೆ ತರತರದ ಉಡಿಗೆಗಳನ್ನು ಧರಿಸುವ ಇವರಿಗೆ ಪತಿಯ ಸಾಧಾರಣ ಉಡಿಗೆಗಳು ಹೇಗೆ ತಾನೆ ಸರಿಬೀಳಬೇಕು? ಇರಲಿ ಇವರು ಈ ಪರಿಯ ಉಡಿಗೆಗಳಿಂದ ಕೂಡಿದವರಾಗಿ ಪರಪುರುಷರೊಡಗೂಡಿ ವಾಯುಸೇವನಾರ್ಥವಾಗಿ ಬೈಲು ಪ್ರದೇಶಕ್ಕೆ ಹೊರಡವರು ಹೀಗೆ ಮನಬಂದಂತೆ ತಿರುಗುತ್ತಿರುವಲ್ಲಿ ಮನೆಗೆಲಸಗಳಲ್ಲಿ ಆಸಕ್ತೆಯರಾಗುವು ದೆಂತೂ ದೂರ ಉಳಿಯುತ್ತಿಲ್ಲವೆ? ಇನ್ನು ಕೆಲವರು ಮನೆಗೆ ಬಂದ ಆತಿಥಿಗಳಿಗೆ ಉಪಚಾರ ವಂತೆ ಪತಿಯು ಆಜ್ಞೆ ಮಾಡಿದರೆ, ಸರ್ರನೆ ಸೆಟೆದು ಮುಖವನ್ನು ಉದಿಸುತ್ತ, ಕಣ್ಣಾನಗಳನ್ನು ಕೆಂಪಗಮಾಡಿ ಮುಸುಗುಟ್ಟುತ್ತ ಬಂದ ಆತಿಥಿಗಳಿಗೆ ಅಸಮಾಧಾನಕರವಾಗಿ ವರ್ತಿಸುತ್ತ ಆತಿಥಿ ಗಳು ಏನು ತಿಳಿದುಕೊಳ್ಳುವರೆಂಬುವುದನ್ನೂ ಕೂಡ ಗಣನೆಗೆ ತರದೆ ತಮ್ಮ ಸಿಟ್ಟಿನ ಒಲವನ್ನೇ ತೋರಿಸುವ ರು ಸ್ತ್ರೀಯರು ತಮ್ಮ ಸ್ವಾತಂತ್ರ್ಯವು ಹೇಗಿರಬೇಕೆಂಬು ದನ್ನು ಲಕ್ಷಿಸಿಪೆ, ತಾವು ಸ್ವತಂತ್ರರಾಗಿರಬೇಕೆಂಬ ದುರಭಿ ಪ್ರಾಯದಿಂದ ಜನಸಂದಣಿಗಳಲ್ಲಿಯೂ, ಸಿನಿಮಾ ನಾಟಕ ವೀಂದಿಗಳಲ್ಲಿಯೂ, ಹೋಟೆಲ್‌ಗಳಲ್ಲಿಯೂ ತಾವೇ ತಾವಾಗಿರುತ್ತಾರೆ ಇಂತಹ ನವೀನ ಸತಿಯರಿಗೆ ಗೃಹಲಕ್ಷ್ಮಿ ಎನ್ನುವ ಬಗೆಹೇಗೆ? ಈ ನವ ಸತಿಯರಿಗೆ ಗೃಹಲಕ್ಷ್ಮಿ ಎನ್ನುವುದಕ್ಕೆ ಪ್ರತಿಯಾಗಿ ಗುರುಸೇವಾ ಕಿಂಕರನು (ಗೃಹಲಕ್ಷ್ಮಿ) ಎಂಬ ನೂತನ ನಾಮಕರಣ ವನ್ನು ಮಾಡಿರುತ್ತಾನೆ ಪ್ರಸ್ತುತ ಲೇಖಾದಲ್ಲಿ ಇವರ ವಿಷಯವನ್ನು ವರ್ಣಿಸುವುದು ಕೇವಲ ಅಸಮಂಜಸ ವಾಗಿದ್ದರೂ, ಇವರ ಈ ತರಹದ ವರ್ತನೆಯನ್ನು ನೋಡಿ ಬಹುಮಟ್ಟಿಗೆ ಕೆಲವರಾದರೂ ಸುಧಾರಿಸಬಹು ದೆಬಭಪ್ರಾಯದಿಂದ ಇಲ್ಲಿ ಬರೆಯುವ ಪ್ರಸಂಗವೊದ ಗಿತು

ಭಾರತ ವೀರ ಮಹಿಳೆಯರೇ! ಇತ್ತ ಸ್ವಲ್ಪ ಲಕ್ಷ್ಯ ಕೊಡಿರಿ ಇನ್ನಾದರೂ ನಿಮ್ಮ ನಡೆನುಡಿಗಳನ್ನು ಸರಿ ಪಡಿಸಿಕೊಂಡು, ಸದಾ ಪತಿಭಕ್ತಿಪರಾಯಣೆಯರಾಗಿ ಪಾತಿವ್ರತ್ಯ ಧರ್ಮವನ್ನು ಕಾಪಾಡಿಕೊಂಡು, ಗೃಹ ಕೃತ್ಯದ ಸರ್ವ ಕಾರ್ಯಗಳಲ್ಲಿ ಎಡೆಬಿಡದೆ ಮಗ್ನರಾಗಿ, ಸೇವಕ ಜನರಲ್ಲಿಯೂ ಪರಜನರಲ್ಲಿಯೂ ಅದರಿಕೆ ಯುಳ್ಳವರಾಗಿ 'ಗೃಹಲಕ್ಷ್ಮಿ' ಎಂಬ ಪವಿತ್ರಾಭಿಧಾನ ದಿಂದ ಸುಶೋಭಿತೆಯರಾಗಿರಿ ಹಿಂದೆಲ್ಲ ಇಂತಹ ಗೃಹ ಲಕ್ಷ್ಮಿಯರು ನಮ್ಮ ಭರತಭೂಮಿಯನ್ನ ಲಂಕರಿಸಿದ್ದು, ಭಾರತಮಾತೆಯ ಸೃಭವವನ್ನು ಸಕಲ ದೇಶಗಳಲ್ಲಿಯೂ ಸಾರಿದರು ಇನ್ನಾದರೂ ನಮ್ಮ ಭಾರತಮಾತೆಯು, ತನ್ನ ಗತ ವೈಭವವನ್ನು ನಿಮ್ಮಂತಹ ಗೃಹಲಕ್ಷ್ಮಿಯ ರಿಂದಲೇ ಸಂಪಾದಿಸಬೇಕಾಗಿದೆ ಆದ್ದರಿಂದ ಇನ್ನಾ ದರೂ ಪಾಶ್ಚಾತ್ಯರ ಥಳಕಿಗೆ ಮನೆಮೋದಿ ಸದಾ ಗೃಹಲಕ್ಷ್ಮಿ ಎಂಬ ನಾಮವನ್ನು ಸಂಪಾದಿಸಿ ಭಾರತ ಮಾತೆಯ ಗತ ವೈಭವವನ್ನು ಬೊರೆಸಿ, ಆಕೆಯ ಸಂವೆ ಲ್ಲಿಯೇ ತಮ ಮನೋಧನಗಳನ್ನು ಸವಿಸಿ ಇಹ ಪರ ಕೀರ್ತಿಕ ಲಿಸಿಯಾರಗಬೇಕೆಂದು ಈ ಕಿಂಕರನು ಕಿಂಕರಭಾವದಿಂದ ಬೇಡಿಕೊಳ್ಳುತ್ತಾನೆ

ಪಟ್ಟಾಧಿಕಾರ ಮತ್ತು ಶಿವದೀಕ್ಷಾಮಹೋತ್ಸವ

ಮದ್ದೂರು ತಾ॥ ಬೆಸಗರಹಳ್ಳಿ ಗ್ರಾಮ ದಲ್ಲಿರುವ ಶ್ರೀಮಜ್ಜಂಗಮಕಾಶ್ರಯ ಶಿವಾಮಣಿ ಮರಿಯ ಶ್ರೀ॥ ಬಸವರಾಜದೇಶಿಕ ಕೇವಲ ಪೂರ್ವವಯಸ್ಸಿನವರಾದರೂ ಅನಿವಾರ್ಯವಾದ ರೋಗಪೀಡಿತರಾಗಿದ್ದು ತಮ್ಮ ಶರೀರವು ಇನ್ನು ನಿಲ್ಲಲಾಶವೆಂದು ತೋರಿಬಂದದ್ದರಿಂದ ಇವೇ ಕಾರ್ತಿಕ ಬಹುಳ ೭ ಭಾನುವಾರ (ತಾ॥ 3 12 39) ಗ್ರಾಮದ ಸದ್ಭಕ್ತರಾದ ಮಿ॥ ರಾ॥ ಛೇರ್‌ಮನ್ ಬಸವ ರಾಜಪ್ಪನವರು, ಮಿ॥ ರಾ॥ ಸಾಹುಕಾರ್ ಎಡೆಯೂರಪ್ಪ ನವರು, ಮಿ॥ ರಾ॥ ಯಜಮಾನ್ ಚಿನ್ನಪ್ಪನವರು ಮ॥ ತಾದ ತಮ್ಮ ಶಿಷ್ಯವರ್ಗದವರನ್ನೂ ಗ್ರಾಮದ ಇತರ ಸದ್ಭಕ್ತರನ್ನೂ ಕರೆಯಿಸಿಕೊಂಡು ಅವರ ಸಂಗಡ ಸದ್ಭಕ್ತ ತಮ್ಮ ಸ್ಥಿತಿಯನ್ನೂ ಮುಂದಿನ ವಿಷಯಗಳನ್ನೂ ಮಾತ ನಾಡಿ ಸದರಿಯವರ ಸಲಹೆಯಂತೆ ಪುತ್ರವರ್ಗದ ತಮ್ಮ ಪಟ್ಟವನ್ನು ತಮ್ಮ ಪೂರ್ವಾಶ್ರಮದ ತಮ್ಮಂದಿರಾದ ಗುರುಸಿದ್ಧಾರ್ಯರಿಂ ಪಟ್ಟವಿಧಿ ವಿಧ್ಯುಕ್ತವಾಗಿ ತಮ್ಮ ಪಟ್ಟಾಧಿಕಾರವನ್ನು ವಹಿಸಿ ಇದೇ ಕಾರ್ತಿಕ ಬಹುಳ ೧೦ ಬುಧವಾರ (ತಾ॥ 5 12 39 ದಿವಸ ಶಿವಸಾಯುಜ್ಯವ ನ್ನೈ ದಿದರು

ಸದರಿ ಶ್ರೀಗಳವರ ಅಪ್ಪಣೆಯಂತೆ ಮಾರ್ಗಶಿರ ಬಹು ೪ ಶುಕ್ರವಾರ (15 12 39) ಬೆಸಗರಹಳ್ಳಿ ಗ್ರಾಮದಲ್ಲಿ ೭೫ ಜನ ವೀರಶೈವಭಕ್ತಮಾಹೇಶ್ವರ ವಮಿಗಳಿಗೆ ಶಿವ ದೀಕ್ಷಾಮಹೋತ್ಸವವು ಬಹಳ ವಿಜೃಂಭಣೆಯಿಂದ ನೆರ ವೇರಿತು ಈ ಕಾರ್ಯಕ್ಕಾಗಿ ಪರಸ್ಥಳದಿಂದ ಸುಮಾರು ೨೫೦ ಜನಗಳ ವರೆಗೆ ಭಕ್ತಮಾಹೇಶ್ವರರು ಆಗಮಿಸಿ ದ್ದರು ಇವರ ಆತಿಥ್ಯವನ್ನೆಲ್ಲಾ ಮಿ॥ ರಾ॥ ಛೇರ್‌ಮನ್ ಬಸವರಾಜಪ್ಪನವರು ಮಾಡಿದರು

ಈ ಸಮಾರಂಭದಲ್ಲಿ ನೂತನಪಟ್ಟಾಭ್ಯಕ್ಷ ಶ್ರೀಗುರುಸಿದ್ಧಸ್ವಾಮಿಗಳವರ ಉತ್ಸವವು ಬಹಳ ಶುಕ್ರವಾರ ಮುಂತಾದ ಮುಖ್ಯ ದೀಪಿಗಳಲ್ಲಿ ಬಾಜಾಬಜಂತ್ರಿಗಳೊಂದಿಗೆ ಪಂಚಾಚಾರ್ಯರ ಜಯಘೋಷದೊಡನೆ ನೆರವೇರಿತು ಅನಂತರ ಕೈವಲ್ಯ ರಾಮೇಶ್ವರದೇವಾಲಯದ ಮುಖಾಗದ - ಜಗ್ಗುರದಲ್ಲಿ ಸಭೆಸೇರಿತು ಅನೇಕರು ಧರ್ಮದ ಬಗ್ಗೆ ಭಾಷಣಮಾಡಿದರು ಬಳಿಕ ನೂತನ ಸ್ವಾಮಿಗಳ ವಿದ್ಯಾಭ್ಯಾಸ ಮತ್ತು ಮುಂದಿನ ಅಭಿವೃದ್ಧಿಗಾಗಿ ಸ್ವಪಕ್ಷಮಾತಲಾಯಿತು ಮಾ|| ರಾ|| ಸಾಹುಕಾರ್ ಎಡೆಯೂರಪ್ಪನವರು ಈ ಕಾರ್ಯವನ್ನು ಶ್ರವು ಪಡಿಸಿ ನೆರವೇರಿಸಿದ ಸ್ವಜನವರಿಗೂ ಪರಸ್ಥಳಗಳಿಂದ ಆಗಮಿಸಿದವರಿಗೂ ಧನ್ಯವಾದಗಳನ್ನರ್ಪಿಸಿದಮೇಲೆ ಪಂಚಾಚಾರ್ಯರ ಜಯಘೋಷದೊಂದಿಗೆ ಪಟ್ಟಾಧಿಕಾರದ ಸಂಪ್ರತಿವನ್ನು ಸಭೆಯಲ್ಲಿ ವಾಚಿಸಿ ಸಮಸ್ತರ ರಜಪನ್ನೂ ಮಾಡಿಸಿ ಸದರಿ ಪಟ್ಟಾಧಿಕಾರ ನೆರವೇರಿದ ವಿಚಾರವನ್ನು ಶ್ರೀಜಗದ್ಗುರು ರಂಭಾಪುರೀ ಮಹಾಸ್ಸಿನ್ನಿಧಿಗೂ ಶ್ರೀಜಗದ್ಗುರು ಶ್ರೀಶೈಲಮಹಾಸ್ಸಿನ್ನಿಧಿಗೂ ಬಿನ್ನವಿಸಿಕೊಳ್ಳುವುದಲ್ಲದೆ ಯಥಾಶಕ್ತಿ ಕಾಣಿಕೆಯನ್ನೂ ಸಲ್ಲಿಸಬೇಕೆಂದು ತೀರ್ಮಾನಿಸಿದ ಮೇಲೆ ಸಭಾವಿಸರ್ಜನೆ ಆಯಿತು

ಉತ್ಸವಛಾಗಿ

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತಿನೇ ನಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ಜಾಲಸಿಂಧೂರ	೧	೪—೦—೦
ಖಲಸಿಂಧೂರ	೧	೬—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೫—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦

ನೋಟು—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಸುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,
ಆಯುರ್ವೇದರಸಾಯನಶಾಲಾ,
ಫೋಸ್ಟ್ ಓಬಿಪುರ, ಒಲ್ಲ ಗಢಸುಲ್ ಮಿ ಸಿ

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಬ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸಮ್ರಕ್ಷಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಕಶಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ಪದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಲ್ಲವೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಳಗಾಗಲಿ, ಶ್ರೀರುದ್ರಾಧ್ಯಾಯ ಚಮಕಾದ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಸದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ನೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಸಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಕೂಡಿತಯ ವಿವರಿಸಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಪಂಚಮುಖಸ್ತುತಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿ ಬೆಲೆ ೧೫ ಆಣೆ ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಸಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಕಶ್ಮೀರವೀರಶೈವ ಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥವು ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರವಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ನೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೩೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೋಷಿಸೋಪಹಾಸಾಗಿ ಹೇಳಬಹುದಾಗಿದೆ ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಪಡಿತೀರವನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿಸುಕೊಂಡು ಧನ್ಯರಾಗಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬಿಳಿಯುಳ್ಳ ಕಾಗದ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದೃಷ್ಟಿಸಕದೆಗೆ ದೃಷ್ಟಿಯಿಸ್ಸಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ೮ ರೂಪಾಯಿಗಳು. ಒಂದುರೂಪಾಯಿಗೆ ನಾಲ್ಕುಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ ೫ ಆಣೆ ಗೆ ಮೊರೆಯುವುದು ವಿ ಪಿ ಚಾರ್ಜು ೧ ರೂ ೫ ಆಣೆ ಪ್ರತ್ಯೇಕ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫	೦—೩—೦
ಶ್ರೀ ರೇಣುಕಾಚಾರ್ಯ ಪಂಚಾಚಾರ್ಯರು ಜೋಡಿವಿಗ್ರಹಕರಾದ ಆಗಸ್ತ್ಯ, ಪಠೋಣಿ, ವ್ಯಾಸ, ಸಾಮಂಡಿ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪಡೆಸಿಕೊಡುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸಣ್ಣ ಪೀಠಾರೋಹಣಮಾಡಿಸಬೇಕೆಂದು ಬಯಸುವ ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೯	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೯	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿದ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನಾನುಸಾರವಾಗಿ ಏಕಕಾಲದ ಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೯ ಇಂಚಿ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರಾವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಾಧೀದ ಫೋಟೋ	೦—೦—೯
ಶ್ರೀ ಕಾಶೀ ಸಂಜಾತಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಚಾರ್ಯರ ಶಿವಾಚಾರ್ಯರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ದೊಡ್ಡ ಸೈಜು	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪	೦—೦—೯
ಶ್ರೀ ಜಗದ್ಗುರು ಕೇದಾರಶಿಲಾಮಂಟಪದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮಾವೃತ್ತ ಪರ್ವತದ ಮಧ್ಯದಲ್ಲಿ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಿರ್ಮಿಸಿರುವ ರಂಭಾಪುರೀ ಜಗದ್ಗುರುಗಳ ಅಶ್ವಾರೂಢ ಪುತ್ಥಳಿಯ ಮಹೋತ್ಸವದ ಫೋಟೋ	೦—೦—೯

* ರೂ ಬಾಯಿಗಳಿಗೆ ಮೇಲೆ ತಿಳಿಸಿಕಳುಹಿಸುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟಿನ್ದು, ಸಾರ್ವಜನಿಕರುಮಂದಿಗಳು ಇದನ್ನು ಉಪಯೋಗಿಸಿ ಸಾರ್ವಜನಿಕರುಗಳಾಗಿ, ಯೋಗ್ಯತಾಪತ್ರ

ಗಳನ್ನು ಕೊಟ್ಟಿರುವ ರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವಮೆಂದರೆ :—ಪೀನಸಿ, ಒಂಟಿ ಕಲೆನೋವು, ತಲೆಯಲ್ಲಿಯ ಪೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಬಟ್ಟು ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮ ೀಸೆಗೆ ಸ್ರೀ. ಬುಡ್ಡಿ ಒಂದಕ್ಕೆ ೧ ಆಣೆ ಡಜ಼ನ್ ಒಂದಕ್ಕೆ ಕ್ರಯ ರೂ. ೨-೮ ೦. ವಿ.ಪಿ ೮ ಆಣೆ

ನಿಮ್ಮ ಆಜ್ಞೆಪ್ರಸ್ಪನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,

[೭೮] ಪೋ. ಬಾ. ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	....	....	೧ ಆಣೆ
ಸಜ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚಮಿಂಕತಿ ಪುಸ್ತಕಪ್ರಕಾಶ (೩ನೆಯ ಆವೃತ್ತಿ)		...	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)		..	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ			೨ ಆಣೆ
ಬಸವಾದಿಶಿವಶರಣರ ಅತ್ಯಂತ ಅಪರೂಪದ ಚಿತ್ರಪಟ			೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)		....	೨ ಆಣೆ
ಪಂಚಾಚಾರ್ಯಸ್ತವಭಾಸ್ಕರ		..	೨ ಆಣೆ
ಶ್ರೀಗುರುತತ್ತ್ವಪದಗಳು	....	...	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ		....	೨ ಆಣೆ
ವೀರಶೈವಮತಮಿಮಾಂಸಾ	....	...	೩ ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	....	....	೩ ಆಣೆ
ಲಿಂಗಧಾರಣವಿಧಿ	..	....	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	...		೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	....	೪ ಆಣೆ
ಸಜ್ಯಾಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)		....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಬಕ್ಕಸ್ಯೆಗು)		....	೬ ಆಣೆ
ವೀರಶೈವಮಹಾಹ್ಯರು	.	....	೮ ಆಣೆ
ಬಸವಾಧ್ಯಾಂತದಿವಾಕರ (೨ನೆಯ ಆವೃತ್ತಿ)	...	....	೮ ಆಣೆ
ಶಿವಾದ್ವೈತಸರಭಾಸಾ (ಸಂಸ್ಕೃತ)	....	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಬಾಸಮಣಿ (ತೆಲುಗು)			೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)			೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)		...	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		....	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)		.	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	...	..	೧೭ ಆಣೆ
ಶ್ರೀಕರಭಾಷ್ಯಂ (ಚಕುಸ್ಯೂಕ್ತಿ)	..	..	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	..	....	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೪೦೦ಮುತ್ತದ ಫೋಟೋಗಳಿರುವುವು)		....	೧೫ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)		..	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	..	....	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪ್ರತಿದ)		....	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	....	೨ ರೂ
ವೀರಶೈವಸಿದ್ಧಾಂತಸುಧಾಕರ	....	....	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೫ ಪುಟ)		....	೮ ರೂ
A brief life sketch of Pandit Sri Kashinatha Shastriji (*English*)			4 As
The Philosophical Aspect of Virasaivism (*English*)		..	8 As.
Speeches by Pandit Shri Kashinatha Shastriji *English*)			12 As.
ವೀರಶೈವರತ್ನ (ಕನ್ನಡ)	...	...	೧ ರೂ.
ಮಹಾಜ್ಞಾನಚಂದ್ರೋದಯ (ವೀರಶೈವಾಚಾರ-ಸಂಸ್ಕೃತ)		..	೧ ರೂ.
ವೀರಶೈವೇತಿಹಾಸ (ಸಂಸ್ಕೃತ)		...	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ)		...	೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	...	೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ

೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಜಾತಸಿಂಹಾಸ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 || ಕೇಸರಿಸ್ಯ ಸಂಸ್ಥಾಪನಾಯಸ್ವಾಶ್ರಮಸ್ಯ ಚ || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು

ಪಂಚಾಸ್ಯಾನನಸಂಜಾತಪಂಚಾಚಾರ್ಯಪರಂಪರಾ | ಪಂಚಕ್ಲೇಶವಿನಾಶಕರ ಪರತತ್ತ್ವಪ್ರಕಾಶಕರ ||
ಪಂಚಾಚಾರಧುರೀಣಾಮಕರ ಪರಿಲಸತ್ಪಂಚಾಕ್ಷರೀಮೋಧಕರ ಪಂಚಾಚಾರ್ಯಜಗನ್ಮಯೂರಮರವರ ಪಾಲಿಸ್ಪುದೀಲೋಕಮಂ ||

ಸ್ವದೆವರಿಗೆ ೧ ರೂ ೧೧ ಆಣೆ ಬಿಡಿ ಪ್ರತಿ ೧೫ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೮ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ ಸೋಮವಾರ ತಾ|| ೧೫ ನೇ ಜನವರಿ ೧೯೪೦ [ಸಂಚಿಕೆ ೩೮]

ಲಿಬರಲ್ ಫೆಡರೇಷನ್ ಅಧ್ಯಕ್ಷರಾದ ಶ್ರೀ ಪರಾಂಜಪೆಯವರ ಅಧ್ಯಕ್ಷ ಭಾಷಣದ ಸಾರ

"ಲಿಬರಲ್‌ಗಳಿಸಿಕೊಂಡವರು ದೇಶದಲ್ಲಿ ಬಹು ಸ್ವಲ್ಪ ಮಂದಿ ಇರಬಹುದು. ಆದರೆಯೂ 'ನಾವು ಲಿಬರಲ್‌ಗಳು' ಎಂಬುದಾಗಿ ಬಹಿರಂಗವಾಗಿ ಹೇಳಿಕೊಳ್ಳವವರ ಸಂಖ್ಯೆಯು ತೀರ ಸ್ವಲ್ಪವಿರಬಹುದು ಆದರೆ ಲಿಬರಲ್ ಪಕ್ಷದ ಅಭಿಪ್ರಾಯವುಳ್ಳವರು ದೇಶದಲ್ಲಿ ಬಹು ಮಂದಿ ಇರುವರೆಂದು ನಾನು ಧಾರಾಳವಾಗಿ ಬೇಳ ಬಲ್ಲೆನು ಭರತಖಂಡದಲ್ಲಿ ಹಾದುಳಿಯಿ, ಈ ನಾಡಿ ಮುಂತಾದ ಮಹಾವುರುಷರಿಂದ ಹೊಸಲು ಆರಂಭಿಸಲ್ಪಟ್ಟ ರಾಜಕೀಯ ಜೀವಳಯ ಜ್ಯೋತಿಯನ್ನು ಹಿಡಿದಿರುವವರು ನಾವು ಹಳೆಯ ಕಾಂಗ್ರೆಸ್ಸಿನ ನ್ಯಾಯವಾದ ವಂಶಕಾರಣವು ಕಳೆದ ೫೫ ವರ್ಷಗಳಲ್ಲಿ ಆ ಕಾಂಗ್ರೆಸ್ಸು ಇತರರ ಕೈಗೆ ಸೇರಿಹೋಗಿದ್ದರೂ ನಾವು ಸ್ವತಂತ್ರ ಕಾರ್ಯಕ್ರಮವನ್ನು ಕಿತ್ತೊಗೆದು ಹಾಕಿ ಹೊಸಹೊಸ ವಿಧಾನಗಳನ್ನು ಆಚರಣೆಗೆ ತರಲಾಗಿದ್ದರೂ ನಾವು ಅನುಸರಿಸುತ್ತಿರುವ ನೀತಿಯೇ ಬಹಳ ಪರಿಣಾಮಕಾರಿಯಾದುದೆಂದೂ ಉತ್ತೃತ ಫಲಿತಾಂಶಗಳನ್ನು ಕೊಡುವಂತಿದೆಯೆಂದೂ ನಾವು ಇನ್ನೂ ದೃಢವಾಗಿ ನಂಬಿದ್ದೇವೆ. ಇತರ ಬಗೆಯ ನೀತಿಗಳು ತಾತ್ಕಾಲಿಕ ಜನಪ್ರಿಯತೆಯನ್ನು ಗಳಿಸಬಹುದು ರಾಜಕೀಯ ಆದರೆ ನಾವು ಅಧೈರ್ಯಪಡಬಾರದು ರಾಜಕೀಯ ಜೀವನದಲ್ಲಿ ವಿಶಾಲ ದೃಷ್ಟಿಯುಳ್ಳ ಕೆಲವು ವರ್ಷಗಳು ಕಳೆದುಹೋದರೂ ಅದು ಕೇವಲ ಅತ್ಯಲ್ಪಕಾಲವಷ್ಟೆ ಎಂದು ನಾವು ಕೊನೆಗೆ ವಿವೇಕಕ್ಕೂ ರಾಜನೀತಿಗೂ ಜಯವು ಖಂಡಿತವಾಗಿಯೂ ಲಭಿಸುವುದು ಆದುದರಿಂದ ಹಿಂದಿನ ಉದಾತ್ತ ಸಂಪ್ರದಾಯಗಳ ಧೈರ್ಯ-ವರ್ಚಸ್ಸಿಗಳು ನಾವೆಂಬ ಭಾವನೆಯನ್ನೂ ನವ್ಯ ಪ್ರಯತ್ನಗಳ ಫಲವಾಗಿ ನವ್ಯ ದೇಶದ ಅಭಿವೃದ್ಧಿಗೆ ಖಂಡಿತವಾಗಿಯೂ ಅನುಕೂಲವಾಗುವುದೆಂಬ ಭಾವನೆಯನ್ನೂ ಇಟ್ಟುಕೊಂಡು ನವ್ಯ ನವ್ಯ ಕೆಲಸಗಳನ್ನು ಧೈರ್ಯದಿಂದ ಮುಂದುರಿಸೋಣ"

"ಇಂದು ರಷ್ಯದೇಶವೂ ಜರ್ಮನಿಯೂ ಒಂದಾಗಿ ಯುದ್ಧ ನಡೆಸುವ ಕೆಲಸವನ್ನು ಆರಂಭಿಸಿದುದೇ ಆದರೆ ಸಾಮಾನ್ಯವಾಗಿ ಅನುಭವನ್ನೆ ಬರಲಾರದೆಂದು ಊಹಿಸಿದ್ದ ಪರಿಸ್ಥಿತಿಯ ಉಬ್ಬಾಗುವುದೆಲ್ಲಿ ಸಂಶಯವಿಲ್ಲ ಭಾರತದ ವಾಯವ್ಯ ಗಡಿಯಲ್ಲಿ ಭಾರತಕ್ಕೆ ಜೊಂದೆರೆಯಂಟಾಗಬಹುದು ಆದರೆ ಪರಿಸ್ಥಿತಿಯು ಕ್ಷಣಕ್ಷಣಕ್ಕೂ ಬದಲಾವಣೆ ಹೊಂದುತ್ತಿರುವಾಗ ಭವಿಷ್ಯನನಾಗುವುದೆಂಬುದನ್ನು ಆಲೋಚನೆಮಾಡುವುದು ಸರಿಯಲ್ಲ" ಎಂದು ನುಡಿದರು

ಎಸಕರ ಭಾರತದ ಪರಿಸ್ಥಿತಿಗು ವಿಜಯಂಜನೆತ್ತಿ 'ಸ್ವಾತಂತ್ರ್ಯವನ್ನೇ ಭಾರತದ ಅಂತಿಮ ಗುರಿಯೆಂಬು ದನ್ನು ಅಂಗೀಕರಿಸಿರುವ ಪತ್ರ ಅಹಿಂಸಾ ತತ್ವಕ್ಕೆ ಬದ್ಧವಾಗಿರುವ ಸಹಾಯಸಹಕಾರಿತೆಯನ್ನು ಮಾತ್ರ ತೋರಿಸಿತ್ತಿರುವ ಮಂದಿ ಕಾಂಗ್ರೆಸ್ ಸದಸ್ಯರೆ, ಎಂತಹ ಪರಿಸ್ಥಿತಿ ಒದಗಿದರೂ ಅವನ್ನು ಎದುರಿಸಿ ತಮ್ಮ ದೇಶವನ್ನು ರಕ್ಷಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲವೆ ದೇಶಗಳು ಸ್ವತಂತ್ರವಾಗಿ ಜೀವಿಸುವುದಕ್ಕೆ ಅಧಿಕಾರವೇ ಇಲ್ಲವೆಂಬ ವಿಷಯವು ಈಗ ಜನ್ಮಾಂತರ ಮನಸ್ಸಿನಲ್ಲಿ ಬಲವಾಗಿ ಬೇರೂರಿರುವುದೆಂಬುದನ್ನು ಅವರು ಅರಿತವರಾಗಿರುವುದೂ ಸ್ಪಷ್ಟವಾಗಿದೆ, ಮತ್ತು ಇದರಿಂದ ಲಭ್ಯವಾಗಿರುವ ಅಭಿಪ್ರಾಯತತ್ವಕ್ಕೆ ಅವುಗಳು ರಾಜ್ಯ ವಿಸ್ತರಣ ಪ್ರಾಪ್ತಿಗಳನ್ನು ಎದುರಿಸಲಾರವು ಸ್ವತಂತ್ರವೆನಿಸಿದ ವತ್ತು ತನ್ನ ಸ್ವಶಕ್ತಿಯನ್ನೇ ನಂಬಿ ಕೊಡಿರುವ ಭಾರತವು ಜರ್ಮ ರಷ್ಯ, ಇಬ್ಬರಿಂದಲೂ ಜರ್ಮನಿ ಈ ದೇಶಗಳಿಗೆ ತತ್ತುಂಬಿ ಬೋಗುವದು ಎಂಬ ದಾಗಿ ಅಭಿಪ್ರಾಯಪಟ್ಟರು.

ಇಂದಿನ ರಾಜಕೀಯ ಪರಿಸ್ಥಿತಿಯಿಂದ ಬ್ರಿಟನ್ ಕೂಡ ಒಂದು ಪಾಠವನ್ನು ಕಲಿಯಬೇಕಾಗಿರುವುದೆಂದೂ, ಕಳೆದ ಒಂದು ಶತಮಾನದಿಂದಲೂ ಭಾರತವು ವಿಚಾರದಲ್ಲಿ ಅನುಸರಿಸುತ್ತಿರುವ ಸಂಪರ್ಯಾತ್ಮಕ ನೀತಿಯನ್ನು ತ್ಯಜಿಸಿ ಇಂದಿನ ಪರಿಸ್ಥಿತಿಗೆ ಅನುಗುಣವಾದ ನೀತಿಯನ್ನು ಅನುಸರಿಸಬೇಕೆಂದೂ ಸೂಚಿಸಿದರು

ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆ ಇತ್ತಿರುವುದಕ್ಕಾಗಿ ವಿಷಾದ ವ್ಯರ್ಥವೆನ್ನು ವ್ಯಕ್ತಪಡಿಸಿ, "ಪರಿಸ್ಥಿತಿಗನುಗುಣವಾಗಿ ವರ್ತಿಸುವ ವಿಚಾರದಲ್ಲಿ ಸರ್ಕಾರದ ಪರ ವಿವೇಕದಿಂದ ನಡೆದುಕೊಳ್ಳದೇ ಹೋದರು ಅವರಂತೆಯೇ ಕಾಂಗ್ರೆಸ್ಸೇತರ ಮೂಡ ತಮ್ಮಿಸಿತಕೊಳ್ಳುವಂತಹ ಪರಿಸ್ಥಿತಿಯನ್ನೇ ಮುಂದುವರಿಸಲು ಅನಕಾಶ ಕೊಟ್ಟಿರ ಮಹಾತ್ಮಾಗಾಂಧಿಯವರು ಪಂಡಿತ ನೆಹರು ರವರೂ ಸೂಚಿಸಿ ಇತ್ತ ದೇಳಕೆಗಳು ರಾಜನೀತಿಯಿಂದ ಕೂಡಿದವಾಗಿವೆ ಎಂದು ಭಾವನೆಯನ್ನು ವ್ಯಕ್ತ ಪಡಿಸುವಂತಹವ್ಯಳಾಗಿದ್ದವು ಆದರೆ ಪರಿಸ್ಥಿತಿಯನ್ನು ಚರ್ಚಿಸಲು ವರ್ಕಿಂಗ್ ಸಮಿತಿಯು ನೀತಿಯಾ ನೇಳಾಗಿ ಆ ಭಾವನೆಗಳು ನೂಮಾವಾವವು ಗುಂಪಿನ ನಗೇಜಾವಯು ವರ್ಕಿಂಗ್ ಸಮಿತಿಯ ಸದಸ್ಯರಲ್ಲಿ ಬೇರೂರಿತ. ಸಂಗ್ರಾಮ ಪರಿಸ್ಥಿತಿಯನ್ನು ಪರಿತೀರಿಸುವುದನ್ನು ಬಿಟ್ಟು ಭಾರತಕ್ಕೆ ಸಂಬಂಧ ಪಟ್ಟಂತೆ ಬ್ರಿಟಿಷ್ನಿನ ಸಂಗ್ರಾಮ ನೀತಿಯನ್ನು ಬ್ರಿಟಿಷ್ ಸರ್ಕಾರದವು ವ್ಯಕ್ತಪಡಿಸಬೇಕೆಂಬ ಬೇಡಿಕೆಯನ್ನು ಮುಂದಿತಳಾಯಿತು ಆದರೆ ಸಂಗ್ರಾಮದ ನೀತಿಯನ್ನೇನೆಂಬುದನ್ನು ಸಾಮಾನ್ಯವಾಗಿ ವಿವರಿಸಬಹುದೆಂಬೂ, ಸ್ಪಷ್ಟವಾದ ನೀತಿಯನ್ನು ಅದನ್ನು ಆಚರಣೆಗೆ ತರುವ ದಿನವನ್ನು ತಳಿಸಲು ಆಗುವದಿಲ್ಲವೆಂಬುದನ್ನು ಎಲ್ಲರೂ ಗ್ರಹಿಸಿದ್ದಾರ ಸಂಗ್ರಾಮದ ಅಂತ್ಯದಲ್ಲಿ ಎಂತಹ ಪರಿಸ್ಥಿತಿ ಇರುವುದೆಂಬುದನ್ನು ಯಾರೂ ಈಗಲೇ ಗ್ರಹಿಸುವುದಾಗಿಲ್ಲ ಸ್ಪಷ್ಟವಾದ ಭರವಸೆಯನ್ನು ಕೊಡುವುದಕ್ಕೆ ಕೋಮುವಾರು ಭಿನ್ನಾಭಿಪ್ರಾಯಗಳು ಅಡ್ಡಿ ಬಂದಿವೆಯೆಂಬುದನ್ನು ಬ್ರಿಟಿಷ್ ಸರ್ಕಾರದವರು ಸೂಚಿಸಿದರು ಕಾಂಗ್ರೆಸ್ ಅಂತಹ ಪರಿಹಾರ್ಯಕರವಾದ ಮತ್ತು ಅನುಭವಕ್ಕೆ ಬಂದಿರದಂತಹ ಸುಪ್ರತಿನಿಧಿ ಸಭೆ ಸೇರಿಸುವ ಸಲಹೆಯನ್ನು ಮಾಡಿರುವುದಾಗಿತ್ತು ಹಿಂದೂ ಮುಸ್ಲಿಂ ವಿಕಮತ್ಯವನ್ನು ಒಂಟುಮಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗಿತ್ತು. ಅವಕ್ಕೆ ಬದಲಾಗಿ ಶ್ರೀ ಜಿನ್ನಾರವರೊಡನೆ ಸಾಮ್ಯಕ್ಕ ನಡೆಸಲಾಯಿತು ಹೆಸರಿಲ್ಲದ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದೂ, ಹೇಳಿಕೆಗಳನ್ನು ಹೊರಡಿಸಿಯೂ, ಕೋಮುವಾರು ಪರಿಸ್ಥಿತಿಯನ್ನು ಮತ್ತಷ್ಟು ಉತ್ತಮಾಗುವಂತೆ ಮಾಡಲಾಯಿತು ಬ್ರಿಟಿಷ್ ಸರ್ಕಾರವು ಇತ್ತ ಭರವಸೆಯನ್ನು ಅಂಗೀಕರಿಸಬೇಕಾಗಿತ್ತು ಭಾರತಕ್ಕೆ 'ಡೊಮಿನಿಯನ್ ಸ್ಟೇಟಸ್' ಪದವಿಯನ್ನು ಕೊಡಲಂಗುವುದೆಂದು ಬ್ರಿಟಿಷ್ ಸರ್ಕಾರದವರು ಇತ್ತಿದ್ದ ಭರವಸೆಯನ್ನು ಅಂಗೀಕರಿಸಬಹುದಾಗಿತ್ತು" ಎಂಬುದಾಗಿ ಸೂಚಿಸಿದರು.

ಸಾರ್ವಜನಿಕ ನಾಯಕರನ್ನು ವೈಸರಾಯರು ತಮ್ಮ ಮಂತ್ರಿಮಂಡಲವನ್ನು ಸೇರಿಸಿಕೊಳ್ಳುವದಾಗಿ ಮಾಡಿದ ಸೂಚನೆಯನ್ನು ಕಾಂಗ್ರೆಸ್ಸು ತುಚ್ಛೀಕರಿಸಿ ಬಹು ದೊಡ್ಡ ತಪ್ಪುಮಾಡಿತೆಂದೂ, ಅಂಗೀಕಾರ ಯೋಗ್ಯವೆನಿಸಿದ ಪೂರ್ಣ ಭಾಗದಲ್ಲಿ ಒಂದು ಭಾಗವನ್ನಾ ಕೊಡುವು ದಾದರೆ ಸ್ವೀಕರಿಸುವುದು ಅನುಭವಸ್ಥಳ ಪ್ರತಿಯೊಬ್ಬರ ಕರ್ತವ್ಯವೆಂದೂ, ಅಂಗೀಕರಿಸಿದ ಈ ಭಾಗವನ್ನೆಲ್ಲ, ಉಳಿದ ಭಾಗವನ್ನು ಗಳಿಸುವುದಕ್ಕಾಗಿ ಬಾಹಯೋಗಿಸುವ ಬೇಕೆಂದೂ 'ಸ್ಪಷ್ಟವಾಗಿ ವಿವರಣೆ ಮಾಡಬೇಕೆಂದು ಒತ್ತಿ ಹೇಳಿ ಮೂರ್ಜಾತನವನ್ನು ಇಂತಹ ರೀತಿ ವ್ಯಕ್ತ ಪಡಿಸಿ ಸುಯೋಗಗಳನ್ನು ಗಾಂದಿಯವರು ಕಳೆದುಕೊಂಡಿರುವುದು ಇಮ ಮೊದಲನೇಸಾರಿಯಲ್ಲ" ವೆಂದೂ ಅಭಿಪ್ರಾಯಪಟ್ಟರು

"ಬೇತಖಂಡದ ಮುಂದಿನ ರಾಜಕೀಯ ವ್ಯವಸ್ಥೆಯು ವಿಷಯವಾಗಿ ಬ್ರಿಟನ್ ತನ್ನ ಗುರಿಯೇನೆಂಬುದನ್ನು ಈಗಲೇ ಸ್ಪಷ್ಟಪಡಿಸಬೇಕೆಂದು ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಕೇಳುತ್ತಿರುವುದೂ ಅಸಹಕಾರದ ಬೆದರಿಕೆಯನ್ನು ತುಟ್ಟಿಸಿರುವುದೂ ತಪ್ಪು" ಎಂಬುದಾಗಿ ಸೂಚಿಸಿ, ಲಭ್ಯವಾಗಿದ್ದ ಅಪೂರ್ವ ಸುಯೋಗವು ವ್ಯರ್ಥವಾಗಿ ಹೋಗುವುದಕ್ಕಾಗಿ ಅಪಾರ ವ್ಯಸನವನ್ನು ವ್ಯಕ್ತಪಡಿಸಿದರು.

[೬ ನೆಯ ಪುಟವನ್ನು ನೋಡಿ]

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯ ನಮಃ ॥

ಜೀವನ ಬೆಳವಣಿಗೆ

ಲೇಖಕರು—ಆರ್ ಎಂ ಮಲ್ಲಿಕಾರ್ಜುನಾರಾಧ್ಯ, ತಿಪಟೂರು.

ಜಗತ್ತಿನಲ್ಲಿರುವ ಸಮಸ್ತ ವಸ್ತುಗಳೂ ಬೆಳವಣಿಗೆಯು ಸ್ಥಿತಿಯನ್ನು ಹೊಂದುತ್ತಿರುವವೆಂಬ ವಿಷಯವು ಕರತಲಾಮಲಕದಂತೆ ನಮ್ಮೆಲ್ಲರಿಗೂ ತಿಳಿವ ಅಂಶವೇ ಆಗಿರುವುದು ಪ್ರತಿವಸ್ತುಗಳೂ ತಮ್ಮ ಪೂರ್ವರೂಪಗಳನ್ನು ಕಳೆದು ಕೊಳ್ಳುತ್ತಲೂ ಹೊಸ ಹೊಸ ರೂಪಗಳನ್ನು ಹೊಂದುತ್ತಲೂ ಇರುವುದು ಬಳಿಕ ಆ ಹೊಸ ರೂಪಗಳೂ ಸಹ ನಿಜವಾಗಿ ನ್ನೂ ಉತ್ತಮೋತ್ತಮವಾದ ರೂಪಗಳನ್ನು ಪಡೆಯುವ ರೀತಿಯಾವುದೂ ಉದಾಹರಣೆಗಾಗಿ ನೋಡಿರಿ— ಅತಿ ಸೂಕ್ಷ್ಮವಾದ ಮೊಟ್ಟೆಯಿಂದ ಹೊರಗೆ ಬರುವ ರೇಷ್ಮೆಹುಳುವು ಮೊದಮೊದಲು ರೆಕ್ಕೆಗಳಿಲ್ಲದ ನೂಲಿನ ಉಂಡೆಯಂತಿದ್ದು ಕೊನೆಗೆ ಸಂದರ್ಭಾನುಸಾರ ರೆಕ್ಕೆಗಳುಳ್ಳ ಹುಳವಾಗುವಂತೆ ಹಿಗೆಯೆ ಪ್ರತ್ಯೇಕ ಸಂದರ್ಭವಾದ ಹೂವು, ಹೀಚು, ಕಾಯಿ, ಪಕ್ವವಾದ ಹಣ್ಣುಗಳೂ ಸಹ ಆಗುವುವು ಇವೇ ರೀತಿಯಲ್ಲಿ ಶಿಶುವು ಮಗುವಾಗಿಯೂ, ಮಗುವು ಪ್ರಾಯಕನ ದರ್ಶನದಿಂದ ಗಂಡಸರು ಇಲ್ಲವೇ ಹೆಂಗಸರಾಗಿಯೂ ಬೆಳೆಯುವದು ಈ ಪರಿಪಾಟಿಯಲ್ಲಿ ಪರಿಪಸಂಪಿಂದ ಸೃಜಿಸಲ್ಪಟ್ಟ ಪ್ರಪಂಚದಲ್ಲಿ ಸವ ಸ್ತು ವಸ್ತುಗಳೂ ಸತ ಪರಿವೃದ್ಧಿಯನ್ನು ಹೊಂದುತ್ತಲೇ ಇರುವವು. ನಾವಾದಮ (ಜೀವರು) ಪಂಕಿವಸಿಂದಲೇ ಬಂದವರಾಗಿರುವೆವು ಯಃಗಾಂತರಗಳಿಂದಲೂ ನಾನಾ ವಿಧವಾದ ರೂಪಾಂತರಗಳನ್ನು ಹೊಂದಿ ಈಗ ಈ ಮನುಷ್ಯದೇಹವನ್ನು ಹೊಂದಿರುವೆವು. ಒಂದು ಅಂಗಿಯು ತಯಾರಾಗಬೇಕಾದರೆ ಒಂದು ಅಳತೆಯು ಬೇಕಾಗಿರುವಂತೆ ಒಂದು ಸ್ಥಲವನೆಹವು ಸಿದ್ಧವಾಗುವುದಕ್ಕೆ ಪೂರ್ವ ಜನ್ಮವಾಸನೆಯು ಇರಬೇಕಾಗುವುದು, ವಾಸನೆಗೆ ತಕ್ಕಂತೆ ದೇಹ ಮನ ಬುದ್ಧಿಗಳುಂಟಾಗುವುವು ಈ ಮನುಷ್ಯ ಜನ್ಮಕ್ಕೆ ಬಂದ ಮಾತ್ರದಿಂದಲೇ ನಮ್ಮ ಬೆಳವಣಿಗೆಯು ಪರಿಪೂರ್ಣವಾಯಿತೆಂದು ಸರ್ವಥಾ ಭಾವಿಸಲಾಗದು. ನಾವು ಇನ್ನೂ ಸಾವಿರಾರು ತರಗತಿಗಳನ್ನು ದಾಟಿ ಸಂಪೂರ್ಣವಾದ ಜ್ಞಾನ ಪ್ರೀತಿಗಳನ್ನು ಹೊಂದಿ ಶಿವನನ್ನು ಸೇರುವವರೆಗೂ ಬೆಳೆಯುತ್ತಲೇ ಇರುವೆವು. "ಬೆಳೆಯುವೆವು" ಅಂದರೆ ಜಡದೇಹ ನೈಷ್ಟಗಳಂತೆ ಆಕಾರದಲ್ಲಿ ಬೆಳೆಯುವೆವೆಂದು ಭಾವಿಸಲಾಗದು. ಏಕೆಂದರೆ ಜೀವನಿಗೆ ಆಕಾರವೇ ಇಲ್ಲ ಜೀವನಲ್ಲಿ ಅವಶ್ಯಕವಾಗಿರುವ ಶಕ್ತಿಗಳು ಸೃಷ್ಟಿಯಾಗುವವೆಂದು ಭಾವಿಸಬೇಕು.

ಚನ್ನಾಗಿ ಪ್ರಜ್ವಲಿಸುವ ಅಗ್ನಿಯ ಜ್ವಾಲೆಯಿಂದ ಅದೇ ಸ್ವಭಾವವುಳ್ಳ ಅಗ್ನಿ ಕಣಗಳು ಅನೇಕವಾಗಿ ಹೊರಹೊರಡುವ ರೀತಿಯಲ್ಲಿ ಅಕ್ಷರವಾದ ಪರಬ್ರಹ್ಮನಿಂದ ನಾನಾವಿಧಗಳಾದ ಜೀವರು ಹೊರಡುತ್ತಾರೆ. ಬೀಜದಲ್ಲಿ ವೃಕ್ಷವಾಗತಕ್ಕ ಶಕ್ತಿಯು ಅಡಗಿರುವಂತೆ ಜೀವರಲ್ಲಿಯೂ ಪರಬ್ರಹ್ಮಲ್ಲಿರತಕ್ಕ ಶಕ್ತಿಗಳೆಲ್ಲವೂ ಅವ್ಯಕ್ತಾವಸ್ಥೆಯಲ್ಲಿ ರುವವು ಪರತಿವಸ್ಥಲ್ಲಾದರೋ ಈ ಗುಣಗಳೆಲ್ಲವೂ ವ್ಯಕ್ತಾವಸ್ಥೆಯಲ್ಲಿರುವವು. ಇದೇ ಜೀವಪರಪಿಪಂಗಿರುವ ವ್ಯತ್ಯಾಸವು. ಪರಮಾತ್ಮನು ಬೀಜದೋಪಾದಿಯಲ್ಲಿರುವ ಜೀವರುಗಳೆಲ್ಲರೂ ಬೆಳೆದು ತನ್ನಂತೆಯೇ ಆಗಬೇಕೆಂಬ ಪದಿಚ್ಛೆಯಿಂದಲೇ ಈ ಜೀವರೆಂಬ ಬೀಜಗಳನ್ನು ಪ್ರಕೃತಿ ಬೀಜ ಕ್ಷೇತ್ರದಲ್ಲಿ ಬಿತ್ತಿರುವನು ಮತ್ತು ಹೆದರಿ ಓಡುತ್ತಿರುವ ಪಶುಗಳನ್ನು ಮನುಷ್ಯರು ಯಾವರೀತಿ ಹುಲ್ಲನ್ನು ತೋರಿಸುತ್ತಾ ಆಕರ್ಷಿಸಿ ಹಿಡಿದು ಕಟ್ಟುವರೋ ಅದೇ ರೀತಿಯಲ್ಲಿ ಕೆಸಲು ಸೂತ್ರವೂ, ಮಂದಮತಿಗಳೂ ಆದ ಅತ್ಯಂತ ಮೋಹಪದದಿಂದ ಆಕರ್ಷಿಸಲ್ಪಟ್ಟಿರುವ ಜನರಿಗೆ (ಜೀವರಿಗೆ) ಭಗವಂತನು ಪರಮಕ್ಕ ಪೆಯಿಂದ ಕ್ಷುದ್ರ ಮಾರ್ಗಗಳನ್ನು ತೋರಿಸಿ ಹೋಗಿ ಅವುಗಳಲ್ಲಿ ಅವರಿಗೆ ಅಧಿರುಚಿಯುಂಟುಮಾಡಿ ನಾನಾ ಸುಖದುಃಖಗಳನ್ನು ತೋರಿಸಿ ಕೊನೆಗೆ ಪಕ್ವಾನುಸಾರವಾಗಿ ಉತ್ತಮಜ್ಞಾನವನ್ನು ಕೊಟ್ಟು ಕಡೆಹಾಯಿಸುವನು. ಬೀಜವು ವೃಕ್ಷವಾಗುವುದಕ್ಕೆ ಕಾಲವು ಅವಶ್ಯಕವಾಗಿರುವಂತೆ ಕಿಂಚಿಜ್ಞನಾದ ಜೀವನು ಪರಿಪೂರ್ಣತೆಯನ್ನು ಹೊಂದಿ ಪರಶಿವನಂತಾಗ ಬೇಕಾದರೆ ದುಃಗಾಂತರಗಳು ಬೇಕಾಗುವದು. ಪರಶಿವ ತ್ವವು ನಮಗೆ ಸಿದ್ಧಿಸಬೇಕಾದರೆ ಅವನಲ್ಲಿರುವ ಮಹಶ್ಯಕ್ತಿಗಳೆಲ್ಲವೂ ನಮ್ಮಲ್ಲಿ ಪೂರ್ಣವಾಗಿ ಬೆಳೆಯಬೇಕು. ಈ ಸಂಪೂರ್ಣತೆಯು ಸಿದ್ಧಿಸುವವರೆಗೂ ನಾವು ಪರಸ್ಪರ ವ್ಯತ್ಯಾಸಗಳನ್ನು ಹೊಂದಿಯೇ ಇರುವೆವು ಮತ್ತು ನಾವು ಸಂಪೂರ್ಣತೆಯನ್ನು ಹೊಂದುವವರೆಗೂ ಈ ಸಂಸಾರ ಚಕ್ರದಲ್ಲಿ ವೈತ್ಯಾಸಗಳೂ ಇದ್ದೇ ಇರುವುವು.

ಪ್ರಥಮತಃ ಅಂದರೆ ಜೀವನು ಖನಿಜ ಸಸ್ಯ ಮತ್ತು ಪ್ರಾಣಿವರ್ಗಗಳಲ್ಲಿರುವಾಗ ಅವನ ಶಕ್ತಿಗಳು ಬಹು ಮಂದ ಗತಿಯಿಂದ ಬೆಳೆಯುವವು. ಏಕೆಂದರೆ, ಅಲ್ಲಿ ಆವನಿಗೆ ಜ್ಞಾನವು ಇರುವದಿಲ್ಲ. ತಾನು ಯಾರೆಂಬುದಾಗಲೀ ಎಲ್ಲಿ ಹೋಗುತ್ತೇನೆಂಬುದಾಗಲೀ ಏನು ಮಾಡುತ್ತೇನೆಂಬುದಾಗಲೀ ಪ್ರಜ್ಞೆಯಿರುವದಿಲ್ಲ ಈ ಮನುಷ್ಯ ದೇಹದಲ್ಲಿ ಅನೇಕ ಜನ್ಮಗಳನ್ನೆತ್ತಿದಮೇಲೆ ಅವರ ಮನಸ್ಸೆಂಬ ಇಂದ್ರಿಯವು ಜೀವನ ಆಲೋಚಶಾಶಕ್ತಿಯು ಬೆಳೆದು ನೈಷ್ಟವಾಗುವುದಕ್ಕೆ ಉಪಕರಣವಾಗುವುದು ಪ್ರಪಂಚದ ಸ್ವಭಾವ ವಿಧಿಗಳನ್ನೂ ಮನುಷ್ಯ ಜನ್ಮದ ಪಯೋಗವನ್ನೂ ಅರಿಯದ ವಿಚಾರ ಹೀನನ (ಜೀವನ) ಬೆಳವಣಿಗೆಯು ಕುಂಠಿತವಾಗುವದು. ಮತ್ತು ವಿವೇಕ ವಿಚಾರದಿಂದ ನಡೆಯತಕ್ಕವನೆ (ಜೀವನ) ಬೆಳವಣಿಗೆಯು ಹೆಚ್ಚು ಜಾಗ್ರತೆಯಲ್ಲಿ ಬೆಳೆಯುತ್ತಾ ಹೋಗುವದು

ವಿವೇಸಮಾಗಿ ತಿಳಿವಳಿಕೆಯಲ್ಲದೆ, ಉತ್ತಮ ನಡತೆಯಿಲ್ಲದೆ, ತಾನು ಏನುಮಾಡುತ್ತೇನೆಂಬ ವಿಷಯದಲ್ಲಿ ಲಕ್ಷ್ಯಮಾಡದೆ ಇರುವ, ಮತ್ತು ತನ್ನ ಸ್ವಂತ ಸುಖವನ್ನೇ ಬಯಸುತ್ತಿರುವ ಮನುಷ್ಯನ ವಿಷಯಾಗಿ ಯೋಚಿಸಿದರೆ, ಅಂಥ ಮನುಷ್ಯನಿಗೆ ತಾನು ಸತ್ಕರ್ಮಗಳಿಂದ ಪುಣ್ಯ ಹೆಚ್ಚುವದಿಲ್ಲೆಂಬ ಭಾವನೆ ಇದ್ದುದಾದರೆ ಅಂತ ಹವನು ತನ್ನವ್ಯಕ್ಕೇ ತಾನು ಹೀಗೆ ಯೋಚಿಸುವನು— "ನಾನು ಇನ್ನೂ ಕೆಲವುಕಾಲ ಮಾತ್ರ ಬದುಕಿರುವೆನು ಈ ಅಲ್ಪಕಾಲ ಸಾಧ್ಯವಾದಷ್ಟು ಸುಖವನ್ನು ಅನುಭವಿಸುವೆನು ಈಗ ಒಳ್ಳೆಯವನಾಗಬೇಕೆಂದು ಪ್ರಯತ್ನಿಸುವುದರಿಂದ ನನಗೇನು ಪ್ರಯೋಜನ? ನಾನು ಸತ್ತರೆ ನನಗೆ ಇಂತಹ ಸುಖವು ಲಭಿಸುವದೇ? ಪಾಪಪುಣ್ಯವೆಂದರೇನು? ಸ್ವರ್ಗನರಕವೆಂದರೇನು? ಇವೆಲ್ಲಾ ಸೋಮಾರಿಗಳ ಮಾತು. ಅದುದಂದಂ ಯಾಂಗಿಗೆ ನಿನು ಸಂಭವಿಸಿದರೂ ಸರಿಯೆ, ನಾನು ಮಾತ್ರ ಉಂಡುಟ್ಟು ಸುಖವನ್ನನುಭವಿಸುವಂತೆ ಪ್ರಯತ್ನಿಸುವೆನು" ಎಂದು ಹೇಳಿಕೊಳ್ಳುವನು. ಇದೇ ಮನುಷ್ಯನಿಗೆ ಯಾವುದೋ ಒಂದು ಕಾಲದಲ್ಲಿ ತಾನು ಸತ್ತರೂ ಪುನಃ ಜನ್ಮವನ್ನು ಹೊಂದುವೆನೆಂಕಲೂ, ಈ ಜನ್ಮದಲ್ಲಿ ತಾನು ಮಾಡಿದ ಸತ್ಕರ್ಮದ ಇಲ್ಲವೆ ಮತ್ಕರ್ಮದ, ಪಶ್ಚಾವದ ಇಲ್ಲವೆ ದುಷ್ಟ ಭಾವದ ಫಲಗಳನ್ನು ಅನುಭವಿಸಿಯೇ ತೀರಬೇಕೆಂತೂ, ತಿಳಿದುಕೊಳ್ಳುತ್ತಾನೆಂದು ಭಾವಿಸೋಣ. ಈ ತಿಳಿವಳಿಕೆಯು ಅವನ ನೈತ್ಯಿಯಂ ಸಂಪೂರ್ಣವಾಗಿ ಬದಲಾಯಿಸುವುದು. ಅದೇ ಮನುಷ್ಯನು ಈಗ ಹೀಗೆ ಹೇಳಿಕೊಳ್ಳುವನು—"ನನ್ನ ವರ್ತನೆಯು ಈಗ ಹೇಗಿರ ಬೇಕೊ ಹಾಗಿದೆ ಮತ್ತು ಮುಂದಿನ ಜನ್ಮದಲ್ಲಿ ನಾನಾ ದುಃಖಗಳನ್ನನುಭವಿಸಬೇಕಾಗುವದು. ನಾನು ಈಗಿನ ಕಾಲವನ್ನೂ ನನಗೆ ಈ ಜನ್ಮದಲ್ಲಿ ದೊರೆಯುವ ಅವಕಾಶ ಸನ್ನಿವೇಶಗಳನ್ನೂ ಉತ್ತಮವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದೆ ಹೋದರೆ ಮುಂದಿನ ಜನ್ಮದಲ್ಲಿ ನಾನಾ ದುಃಖಗಳನ್ನನುಭವಿಸಬೇಕಾಗುವದು. ನನ್ನ ಮನೋಬುದ್ಧಿಗಳನ್ನು ಶುದ್ಧಿಮಾಡಿಕೊಳ್ಳುವುದರಲ್ಲಿಯೂ, ನನ್ನ ನಡತೆಯನ್ನು ಸುಧಾರಿಸಿಕೊಳ್ಳುವುದರಲ್ಲಿಯೂ ಪ್ರಯತ್ನವಾಗಬೇಕು. ಈ ಜನ್ಮದಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇನೆ. ಹೀಗೆ ಮಾಡಿದರೆ ಮುಂದಿನ ಜನ್ಮದಲ್ಲಿ ಈ ಕಾರ್ಯಕ್ಕೆ ಹೆಚ್ಚು ಸೌಲಭ್ಯಗಳುಂಟಾಗುವವು. ಮತ್ತು ಮುಖಕರಂಪರೆಯಿಂದ ತುಂಬಿರುವ ಈ ಜನ್ಮಗಳನ್ನು ಪುನಃ ಪುನಃ ಎತ್ತುವುದಕ್ಕೆ ಬದಲಾಗಿ ನಾನು ಅಭಿವೃದ್ಧಿಯನ್ನು ಹೊಂದಿ ಈಗ ಸಂಸಾರ ಚಕ್ರದಲ್ಲಿ ಒಂದು ಮರದ ತುಂಡಿನಂತೆ ಇರುವುದಕ್ಕೆ ಬದಲಾಗಿ ಲೋಕೋಪಕಾರಿಗಳ ಲ್ಲೊಬ್ಬನಾಗಿ ಬೆಳೆಯುವೆನು" ಎಂದು ಯೋಚಿಸುವನು. ಹೀಗೆ ಯೋಚಿಸುತ್ತಾ ಸದ್ವಾಸನೆಗಳನ್ನು ರೂಢಿಗೊಳಿಸುತ್ತಾ, ಸಾತ್ವಿಕತನದಿಂದಿರುವುದೇ ಜೀವನ ಬೆಳವಣಿಗೆಯು.

ಸಂಸಾರದಲ್ಲಿ ಅಡಿಗಡಿಗೆ ಉಂಟಾಗುವ ದುಃಖಗಳೂ ಸಹ ಜೀವನಿಗೆ ಹಿತಕರಗಳಾಗಿಯೇ ಇರುವವು. ಈ ಸಂಸಾರದಲ್ಲಿ ಪಾರಮಾರ್ಥವಾಗಿ ಸರ್ವರಿಗೂ ನ್ಯಾಯವೇ ದೊರೆಯುವದಲ್ಲವೆ ಅನ್ಯಾಯವು ಎಂದಿಗೂ ಉಂಟಾಗುವದಿಲ್ಲವು. ಆದ್ದರಿಂದ ಎಂತಹ ಹೀನೋತ್ಪೃಷ್ಟ ಸ್ಥಿತಿಗತಿಗಳು ಬಂದರೂ ಅವುಗಳನ್ನು ನಾವು ತಂದುಕೊಂಡದ್ದೇ ಹೊರತು ಅನ್ಯರು ಸಂಕಾದಿಸಿಕೊಟ್ಟದ್ದಲ್ಲವೆಂದು ಚನ್ನಾಗಿ ತಿಳಿದುಕೊಳ್ಳಬೇಕು. ಇಷ್ಟೇ ಅಲ್ಲ ಇವಕ್ಕಿಂತಲೂ ಹೆಚ್ಚಾದಂತಹವನ್ನು ತಿಳಿದುಕೊಳ್ಳಲೂ ಬಹುದು. ಅದೇ ನೆಂದರೆ—ಜೀವಿಗಳ ಉನ್ನತಿಗಾಗಿಯೇ ಪ್ರಪಂಚ ಗತಿಯು ನಡೆಯತಕ್ಕದೆಂಬ ದೈವಶಾಯಮಕ ಬಲದಿಂದ, ಮನುಜಜಾಗೆ ಸಂಭವಿಸುವ ಸ್ಥಿತಿಗತಿಗಳೆಲ್ಲವೂ ಅವನ ಉನ್ನತಿಗೆ ಅತ್ಯಾವಶ್ಯಕವಾದ ಸುಗುಣಗಳು ಅವನಲ್ಲಿ ಉದಯಿಸಲು ಉಚಿತವಾದ ಕಾರಣಸಾಮಗ್ರಿಗಳಾಗಿರುವವೆಂದು ದೃಢವಾಗಿ ನಂಬಬೇಕು. ಮತ್ತು ಅಂತಹ ಆಗುಹೋಗುವಿಕೆಗಳೆಲ್ಲವೂ ತನ್ನಿಚ್ಛೆಯಿಂದಲೇ ಮನುಷ್ಯನು ಬಯಸಿದವುಗಳಾಗಿಯೇ ಇರುತ್ತವೆಂದೂ ಹೇಳಲಾಗದು. ಆದರೆ ಇಷ್ಟುಮಾತ್ರ ಹೇಳಬಹುದು. ಏನೆಂದರೆ—ಅವುಗಳೆಲ್ಲವೂ ಅವನ ಕರ್ಮಾನುಸಾರವಾಗಿ ಅವನಿಗೆ ಪ್ರಾಪ್ತವಾಗತಕ್ಕವುಗಳಲ್ಲದೆ ಅನ್ಯಥಾ ಅಲ್ಲ. ಆಳವಾಗಿ ವಿಚಾರಮಾಡಿ ನೋಡಿದರೆ ಯಾವ ನೊಬ್ಬನೇದ ನಮಗೆ ಒಳಿತು ಕೆಡುಕುಗಳಾದರೆ ಅವನು ನಮ್ಮ ಕರ್ಮವು ಕಾರ್ಯಕಾರಿಯಾಗುವುದಕ್ಕೆ ನಿಮಿತ್ತ ಮಾತ್ರನಾಗುತ್ತಾನೆ. ನಮ್ಮ ಶತ್ರುವು ನಮ್ಮ ಜನ್ಮಾಂತರೀಯ ಕರ್ಮವಲ್ಲದೆ ಅನ್ಯವಲ್ಲ. ಆದರ ಪ್ರೇರಣೆಯಿಂದ ತೊಂದರೆ ಕೊಡುತ್ತಾರೆ. ಹಾಗೆ ಆವರು ತೊಂದರೆ ಕೊಟ್ಟುದ್ದು ನಮ್ಮ ಕರ್ಮಗಳು ಬೇಗ ನಿರ್ಜರೆಯಾಗಲು ಸಹಾಯವಾಗುವದು. ಆದರೆ ವಿಚಾರ ಶೂನ್ಯರಾದ ನಾವು ದುಃಖದ ತಳಮಳದಲ್ಲಿ ಅವನು ಹಾಗೆ ಮಾಡಿದನು, ಇವನು ಹೀಗೆ ಮಾಡಿದನು ಎಂದು ತಳಮಳಿಸುತ್ತೇವೆ. ಇದು ವಿಹಿತವಲ್ಲವು. ಹೀಗೆ ಪೂರ್ವ ಕರ್ಮಾನುಗುಣವಾಗಿ ಪ್ರಾಣಿಗಳ ಸ್ಥಿತಿಗತಿಗಳಂತೆಯೆ ಇವುಗಳು ಆಗಾಗ್ಗೆ ಅವನ ಪ್ರಗತಿಗೆ ಬಹಳ ಅಡ್ಡಿಯಾಗುತ್ತವೆ, ಎಂಬೀ ಅಂಶವನ್ನು ಮಾತ್ರ ಬಿಟ್ಟು ಉಳಿದ ಅಂಶಗಳನ್ನು ನೋಡಿದರೆ ಪ್ರತ್ಯಕ್ಷ ಸ್ಥಿತಿಗತಿಗಳೇ ಅವನ ಪ್ರಗತಿಗೆ ಸಾಧಕಗಳಾಗುವವು. ಪ್ರಾರಬ್ಧ ಕರ್ಮದಿಂದ ಅವನಿಗೆ ನಾನಾ ವಿಧ ಕಷ್ಟಗಳು ಬರಬಹುದು. ಆವರೆ ಕಷ್ಟನಷ್ಟಗಳು ಬರುವುದರಲ್ಲಿ ಒಂದು ಉದ್ದೇಶವಿರುವದು. ಅದೇನೆಂದರೆ—ಕಷ್ಟಗಳು ಬಂದಾಗ ಅವುಗಳಿಂದ ಪಾರಾಗುವ ಹಂಚಿಕೆಗಳನ್ನು ತಿಳಿದುಕೊಳ್ಳಬಹುದು ಈ ಮೂಲಕವಾಗಿ ಮನಸ್ಸಿನ ಧೈರ್ಯ, ಸ್ಥೈರ್ಯ, ಸಹನೆ ತಿಲತೆ, ಫಲ ಇತ್ಯಾದಿ ಸುಗುಣಗಳನ್ನು ಸಂಪಾದಿಸಿಕೊಳ್ಳಬಹುದು. ಸಾಧಾರಣವಾಗಿ ಜನರು ಏನು? ಸಂಸಾರಗತಿಯಲ್ಲಿರುವ ನಮಗೆ ವಿಧೇಯಮಾಡುವದಕ್ಕಾಗಿಯೇ ಹುಟ್ಟಿರುವದೆಂದು ದೀರ್ಘವಾದ ಉದ್ಗಾರಗಳನ್ನು ತೆಗೆಯುತ್ತಾರೆ. ಅದು ಹಾಗಲ್ಲ. ನಾವು ಸಾವಧಾನದಿಂದ ವಿಚಾರಮಾಡಿ ನೋಡಿದ್ದೇ ಆದರೆ ವಸ್ತುಸ್ಥಿತಿಯು ಗೊತ್ತಾಗುವದು. ಪ್ರತಿಯೊಂದು ಸನ್ನಿವೇಶವೂ ಶ್ರೇಯೋ ಮಾರ್ಗದಲ್ಲಿ ಮೇಲೆಮೇಲೆ ಏರುವುದಕ್ಕೆ ಅನುಕೂಲವಾಗುವಂತೆಯೇ ಉದ್ದೇಶ ಪೂರ್ವಕವಾಗಿ ವಿರ್ಮಿಸಲ್ಪಟ್ಟಿರುವದು.

ವಾಚಕಮಹಾಶಯರೇ! ಲೌಕಿಕಜ್ಞಾನದಿಂದ ಎಷ್ಟು ಕುಶಲನಾಗಿದ್ದರೂ ಜೀವನ ಬೆಳವಣಿಗೆಯಾಗುವದಿಲ್ಲ. ಲೌಕಿಕ ಜ್ಞಾನದಿಂದ ಕ್ಷಣಿಕಸುಖದ ಆಭಾಸವೂ ಸಾರ ಮಾರ್ಥಿಕ ಜ್ಞಾನದಿಂದ ನಿತ್ಯಸುಖದ ವಿಕಾಸವೂ ಆಗುವದು ಜ್ಞಾನಾನಂದವು ಇಹಲೋಕ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿದ್ದರೂ ಕೇವಲ ಅದಕ್ಕೇ ಮಹತ್ವವನ್ನು ಕೊಡಬೆ ನಾವು ಯಾರು? ಎಲ್ಲಿಂದ ಬಂದೆವು? ಮುಂದೆ ಎಲ್ಲಿಗೆ ಹೋಗುವೆನು? ಈ ಮರ್ತ್ಯಲೋಕಕ್ಕೆ ಬಂದುದರ ಲ್ಲಿ ನಾನು ಏನನ್ನು ಸಾಧಿಸಿಕೊಳ್ಳಬೇಕು? ಎಂಬುದಾಗಿ ಪದೇ ಪದೇ ತನ್ನಲ್ಲಿ ತಾನು ನಿಚಾರಮಾಡುತ್ತಿರಬೇಕು ಈ ಮಹಾವಿಚಾರಗಳು ಮನಸ್ಸಾಗಬೇಕಾದರೆ ಸತ್ಸಂಗ ಸತ್ಸಂಥಗಳ ವ್ಯಾಸಂಗವಾಗಬೇಕು. ಸತ್ಸಂಗವು ದೊರೆಯದಿದ್ದರೆ ಸದ್ಗ್ರಂಥಗಳ ವ್ಯಾಸಂಗವನ್ನಾದರೂ ಮಾಡಬೇಕು. ಸದ್ಗ್ರಂಥಗಳು ಸರಿಯಾಗಿ ವ್ಯಾಸಂಗ ಮಾಡತಕ್ಕ ಸಾಧಕನಿಗೆ ಅಪ್ಪತ್ಯೆಚ್ಛಿತಕರವಿರುವುದು ಸತ್ಸಂಥಗಳ ಪಾರಾಯಣಮಾಡುವದರಿಂದ ಸತ್ಸಂಗದಿಂ ದುಂಟಾಗುವ ಪ್ರಯೋಜನಗಳೆಲ್ಲವೂ ಉಂಟಾಗುವವು. ಅದಕಾರಣ ಉತ್ತಮಗ್ರಂಥಗಳನ್ನು ಸಾವಧಾನವಾಗಿ ಓದುತ್ತಾ ವಿಷಯಗಳನ್ನು ಮನನಮಾಡುತ್ತಿರಬೇಕು ಹೀಗೆ ಮಾಡುತ್ತಾ ಬಂದರೆ "Two birds at a shot" ಎಂಬ ವಾಕ್ಯದಂತೆ ಇಹದಲ್ಲಿ ಸ್ಥಿತಿಯೂ ಪರ ವಲ್ಲಿ ಗತಿಯೂ ಪ್ರಾಪ್ತವಾಗುವುದರಲ್ಲಿ ಸಂಶಯವಿಲ್ಲವು

"ನಾನ್ಯಃ ಪಂಥಾ ವಿದ್ಯತೇಽಯನಾಯ"

ಕವಿಯ ಮನೋವಿಲಾಸ ನಿರೂಪಣೆ

ಲೇಖಕ ಕನ್ನಡಕವಿ, ಆಸ್ಥಾನವಿದ್ವಾನ್, ಆನವಟ್ಟಿರಾಜ-ರಾಯರು

ಪ್ರಬಂಧ ರಚನಾಕರ್ತರಲ್ಲಿ ಗ್ರಂಥಕರ್ತರೆಂಬಲೂ, ಗ್ರಂಥೋಪೋದ್ಘಾಟಕರೆಂಬಲೂ ಎರಡು ಪಂಗಡ ಗಳುಂಟು. ಗ್ರಂಥಕರ್ತರ ಪಂಗಡಕ್ಕೆ ಕವಿಗಳೂ, ನಾಟಕ ರಚನಾಕರ್ತರೂ ಮತ್ತು ನವಚನಸ್ರಂದಕರ್ತರೂ ಸೇರ ಲಾಯರು ಸೇರಿರುತ್ತಾರೆ. ಈಗ ಪ್ರತಿಯೊಬ್ಬರೂ ತಮ್ಮ ತಮ್ಮ ಕಾರ್ಯದಲ್ಲಿ ತೋರ್ಪಡಿಸುವ ಕಾರ್ಯಭಾಗಗಳೂ, ಅವರವರಿಗೆ ಆಪ್ತಾರ್ಥಿತವಾಗಿ ಪ್ರಾಪ್ತವಾಗುವ ಸುಖ ಸಂತೋಷಗಳೂ ಆವುವೆಂಬುದನ್ನು ವಿವರಿಸಿ ಮಾಡಿ ತೋರಿಸುವುದೇ ಈಗಿನ ಉದ್ದೇಶವಾಗಿರುವುದಂದು ವಾಚಕರು ಗಮನಿಸಬೇಕು

ಈ ಪ್ರಬಂಧದಲ್ಲಿ ಪ್ರಕೃತಿಯಲ್ಲಿ ಸಂಭವಿಸುವ ಪ್ರತಿ ಯೊಂದು ಕಾರ್ಯದ ವ್ಯತ್ಯಾಸಗಳನ್ನು ಹೊರಪಡಿಸಿ, ಎಲ್ಲರಿಗೂ ಬಹು ಸುಲಭವಾಗಿ ಗ್ರಾಹ್ಯವಾಗುವಂತೆ ಮಾಡು ವುದೇ ಶ್ಲೇಷಕಲ್ಪನಾಶಕ್ತಿಯನ್ನು ಹೊಂದಿರುವ ಗ್ರಂಥ ಕರ್ತನ ಕರ್ತವ್ಯವಾಗುತ್ತದೆ ಈತನು ತನ್ನಸುತ್ತಮುತ್ತ ಲಿರುವ ವಸ್ತುಗಳನ್ನು ನೋಡದೇಕಾದಾಗ ತನ್ನ ನೇತ್ರೇಂ ದ್ರಿಯಕ್ಕೆ ಯಾವ ಸಹಾಯವೂ ಬೇಕಾಗಿರುವುದಿಲ್ಲ. ಈತನು ತನ್ನ ಕಣ್ಣುಗಳನ್ನು ವಿಕಾಲವಾಗಿ ತೆರೆದು, ಅವ ಲಕ್ಷಣವೆಂದು ಇತರರು ಹೇಳುವ ನನ್ನುಗಳಲ್ಲಿಯೂ, ಕೆಲವು ಉಪಯುಕ್ತವಾದ ವಿಷಯಗಳನ್ನೆ ಕವಿಯು ತನ್ನ ಜ್ಞಾನೇನ್ದ್ರಿಯಿಂದ ನೋಡಿ, ಬರವಣಿಗೆಯು ಮೂಲಕ ಇತರರಿಗೆ ಹೊರಪಡಿಸಿ, ತೋರ್ಪಡಿಸಿ ಆನಂದವನ್ನು ಒಟು ಮಾಡುವನು.

ಸ್ವಭಾವಜನ್ಯವಾದ ಕವಿತಾಶಕ್ತಿಯನ್ನು ಹೊಂದಿ ರುವ ಕವಿತಿರೋಮಣಿಗೆ ಈ ಪ್ರಬಂಧದನೇಲೆ ತೋರಿ ಬರುವ ಪ್ರತಿಯೊಂದು ವಸ್ತುವೂ, ಅವನ ಕಿವಿಯಲ್ಲಿ ಬರುವ ಪ್ರತಿಯೊಂದು ಪದಾರ್ಥವೂ ಸುಂ ದರವಾಗಿಯೂ ಸಂತೋಷಜನಕವಾಗಿಯೂ ತೋರಿಬರುವುದು ಹೇಗೆಂದರೆ— ಬೀಸುವ ಮಂದಮಾ ರುತವನ್ನು ಯೋಚಿಸಿನೋಡಿದರೆ ಕವಿಯ ಆಯಾಸ ಪರಿ ಹಾರ ಮಾಡುತ್ತಿರುವಂತೆ ಬೀಸುತ್ತಿರುವುದು. ಮರಗಳಲ್ಲಿ ಬಿಟ್ಟಿರುವ ಮಧುರಫಲದ ಗೊಂಚಲುಗಳು ಕವಿಯ ದೃಷ್ಟಿ ಯೆನ್ನು ಸೆರೆಪಿಡಿದು, ತಮ್ಮಲ್ಲಿರುವ ಸೊಬಗನ್ನೂ ಮಾಧು ರ್ಯವನ್ನೂ ಜನರು ರುಚಿನೋಡಿ ಅನುಭವಿಸಲಿ ಎಂಬ ಭಾವ ದಿಂದ ಸೂಚಿಸುತ್ತ ದೃಗ್ಗೋಚರವಾಗುತ್ತಲಿರುವಂತೆ ಕಾಣ ಬರುವುವು ಇಂಚರಗಳಿಂದ ಪ್ರವಹಿಸುತ್ತಿರುವ ಪ್ರವಾ ಹವು ಆಯಾಸಹೊಂದಿದ ಶರೀರವನ್ನು ವೇಗ ಶುಚಿಮಾ ಡಿಕೊ ಎಂದು ಪಥಿಕರಿಗೆ ಕರೆಗಾ ಹೇಳಿದಂತೆ ಶಬ್ದದಿಂದ ಪ್ರವಹಿಸುತ್ತಿರುವುವು! ಮಧ್ಯಾಹ್ನಕಾಲವನ್ನು ಸಂತೋ ಷದಿಂದ ಕಳೆಯಿರಿ, ಎಂದು ಹೇಳುತ್ತಿರುವಂತೆ ಚಿಟ್ಟೆಹುಗಳು ಗಾನಮಾಡುತ್ತಿರುವುವು! ತಂಪಾದ ನೆಳಲಿನಲ್ಲಿ ವಿಶ್ರಮಿಸಿ ಕೊಳ್ಳಿಂದು ಅಲ್ಲಲ್ಲಿ ಲತಾಮಂದಿರಗಳಿರುವುವು! ವಿಕಾಂತಿ ಯಾಗಿಪ್ಪ ಮನೋವಿಲಾಸವನ್ನು ಹೊಂದಲು ಅನುಕೂಲ ಸುವಂತೆ ಪಾದ್ಯಾನ ಕಿರಣಗಳು ಸುತ್ತಲೂ ಬಿದ್ದು ರಾಧಾ ಜಿಸುತ್ತಿರುವ ತೋಪುಗಳಿರುವುವು! ಎಂಬುದಾಗಿ ಕವಿಯು ವಿಷಯಗಳನ್ನು ಹೊರಪಡಿಸಿ ತೋರ್ಪಡಿಸುತ್ತಿರುವನು ಮಾಚಕರೆ! ಇಂತಹ ಸ್ಥಳಗಳಲ್ಲಿ ಕವಿಯು ಇದ್ದರೆ ಸರ್ವ ವಸ್ತುಗಳೂ ಸ್ಪಿಸ್ಪಿದಿಂದಿರುವುದೆಂದರೆ ಅವನ ಮನಸ್ಸಿನ ಪ್ರವೃತ್ತಿಗೆ ನಿರಾತಂಕವಾಗಿರುವುದಲ್ಲವೆ?

ಕವಿಯು ಇಂತಹ ಪ್ರದೇಶಗಳಲ್ಲಿರುವಾಗ್ಗೆ, ಅವನು ತನ್ನ ಸ್ಥಿತಿಗನುಸಾರವಾಗಿ ಬಹಿರಾವರಣವಲ್ಲಿರುವ ವಸ್ತು ಗಳಿಂದ ವಿಷಯಾಂತರ ಸುಖ ಸಂಪೋಷಗಳಿಲ್ಲಾ ತನ್ನ ಸಂತೋಷವೊಂದೇ ತಿಳಿದು ಅನುಭವಿಸುವನು. ತಲ್ಲಿದೆ ಸ್ವಯಜನ್ಯ ಪ್ರೀತಿಯಿಂದ ತನ್ನ ಸುತ್ತಲಿರುವ ವಸ್ತುಗಳು ಪ್ರೀತಿಸುತ್ತಿರುವಂತೆ ಕಾಣಬಂದಹಾಗೆ, ಅವು ಗಳನ್ನು ಕವಿಯು ತಾನೂ ಪ್ರೀತಿಸುತ್ತಿರುವೆನೆಂದು ತಿಳಿದು ಕೊಳ್ಳುವನು ಕವಿಯು ಚಿಟ್ಟೆಳ ಪಕ್ಷಿಯ ಗಾನವನ್ನು ತಿಳಿದಮೇಲೆ ಅವರ ನಿಸ್ಪಳಂಕವಾದ ಹೃದಯದಂತೆಯೇ ತಾನೂ ಆಗುವನು ಮೇಣ್ ಜಾಲವನ್ನು ನೋಡಿ ಅವರ ಬಿಡಿಸ್ಪ ಗುಣವನ್ನನುಕರಿಸಬೇಕೆಂದು ಪ್ರಯತ್ನಿಸುವನು ಜನಗಳನ್ನು ನೋಡಿ, ಅವರ ಅಭಿವೃದ್ಧಿಯನ್ನು ಬಯಸಿ ಅವರಿಗೆ ಪ್ರಾಪ್ತವಾದ ಸುಖದುಃಖಗಳು ತನ್ನವೆಂದು ಭಾವಿಸಿ, ತನ್ನ ಕನಿಕರಿಕ್ಕೆ ಪಾತ್ರರಾದವರಿಗಾಗಿ ತನ್ನ ಜೀವನವನ್ನು ಅವರಿಗೆ ಒಪ್ಪಿಸುವನು ಕವಿಯು ತನ್ನ ಮನಸ್ಸಿಗೆ ಗೋಚರಿಸಿರುವ ವಿಷಯಗಳನ್ನು ಕುರಿತು ಯೋಚಿಸಿ ಇತರರೊಡನೆ ಆ ವಿಷಯಗಳನ್ನು ಕುರಿತು ಸಂಭಾಷಿಸಿ ಪಡೆದಿರುವ ತಿಳಿವಳಿಕೆಯನ್ನು ತಾನೂ ಒಂದು ಪುಸ್ತಕವಲ್ಲಿ ಬರೆದು, ಆವುಗಳನ್ನು ಪ್ರಸಂಚಕ್ಕೆ ಹೊರಪಡಿಸಿ ತೋರಿಸುತ್ತಾನೆ ಮುಖ್ಯವಾಗಿ ಕವಿಯು ತನ್ನ ಸುತ್ತಮುತ್ತಲಿರುವ ವಸ್ತುಗಳೊಸ್ಕರವಾಗಿ ತಾನು ಜೀವಿಸುತ್ತಿರುವೆನೆಂತಲೂ, ಎಲ್ಲವೂ ತನ್ನನ್ನು ಪ್ರೀತಿಸಿ, ಸೌಖ್ಯವನ್ನನುಗೊಳಿಸತಕ್ಕವುಗಳಾಗಿರುವು ವೆಂತಲೂ ಭಾವಿಸಿಕೊಂಡಿರುವನು

ಇಂತಹ ಅಭಿವೃಚಿಪ್ರಾಯವಾದ ವಿಷಯಗಳಿಂದ ಕೂಡಿದ ಕವಿಯ ಮನಸ್ಸು ಸರ್ವದಾ ಹೋಚಿನಾಪರ ವಶವಾಗಿರುವಂತೆ ಗೈದು ಅವರವರ ಆನಂದಾಭ್ಯು ದಯಗಳಿಗೆ ತನ್ನ ಮನಸ್ಸಿಗೆ ಗೋಚರಿ ಸಿದ ವಸ್ತುವು ಎಷ್ಟು ಅಲ್ಪವೆಂದು ಇತರರಿಗೆ ತೋರಿ ಬಂದರೂ ಅವರಲ್ಲಿರುವ ಗುಣವನ್ನೇ ಹೊರಪಡಿಸಿ ಅವು ಗಳ ಪ್ರಯೋಜನವು, ಅವುಗಳಿಂದ ತಿಳಿದುಕೊಳ್ಳಬೇ ಕಾಗಿರುವ ಅಮೋಘವಾದ ಬುದ್ಧಿಮಾದವೂ ಇವುಗಳನ್ನು ಪ್ರಸಂಚಕ್ಕೆ ತೋರ್ಪಡಿಸಿ, ಅವುಗಳ ಮೇಲ್ಪಂಕ್ತಿಯಂತೆ ಇತರರು ನಡೆಯಲು ದಾರಿಯನ್ನು ಚೆನ್ನಾಗಿ ತೋರಿಸು ತ್ತಿರುವನು ಹೇಗೆಂದರೆ— ಭೃಮರವು ವಿವಿಧ ಪುಷ್ಪ ಸಂಗಾಲಕ್ಕೆ ಹೋಗಿ ಅವುಗಳಲ್ಲಿರುವ ಸಾರ ಮಕರಂದ ವನ್ನು ಸಂಗ್ರಹಿಸಿ ನಮಗೆ ಹೇಗೆ ಅದನ್ನು ತೆಗೆದು ತ್ತೊಂದು ಬರುವುದೋ ಹಾಗೆಯೇ ವಿವಿಧ ಗುಣಗಳಿಂದ ಕೂಡಿ ಮೆರೆಯುತ್ತಿರುವ ಮನುಜರ ಗುಣಗಳನ್ನು ನಾನಾ ಮಾರ್ಗಗಳಿಂದರಿದು, ಸಂಗ್ರಹಿಸಿ ಪ್ರಪಂಚಕ್ಕೆ ಅಮೇಯ ವಾದ ನೈಜಾಂಶವನ್ನೇ ತೋರ್ಪಡಿಸುತ್ತಿರುವನು! ಭೃಮರ ದೋಪಾದಿಯಲ್ಲಿರುವ ಇಂತಹ ವರಕವಿಯ ಜೀವನಿ ಯನ್ನು ನೋಡುವುದಕ್ಕೂ, ಯೋಚಿಸುವುದಕ್ಕೂ ಮತ್ತು ಅಂತಹ ಕವಿಯ ಸಹವಾಸದಲ್ಲಿರುವುದಕ್ಕೂ ಎಷ್ಟು ಪರಮಾನಂದಕರವಾಗಿರುವುದು?

ಇಂತಹ ಧನ್ಯರಿಗಳೇ ಕಾಳದಾಸ ಮತ್ತು ಶೇಕ್ಸ್ ಪಿಯರ್ ವರಕವಿಗಳು ಇವರ ವಿಷಯಗಳನ್ನು ಜೆನ್ನಾಗಿ ಗ್ರಹಿಸಿಕೊಂಡು ಪರ್ವಕಾಲದಲ್ಲಿಯೂ, ಸರ್ವರಿಗೂ ಅನ್ಯರಿಯಸುವಂತೆ ತಮ್ಮ ಜಯೋಳಿವಾದ ಯೋಚನೆ ಗಳನ್ನು ಹೊರಪಡಿಸಿರುತ್ತಾರೆ ಮನುಷ್ಯರ ಸ್ವಭಾವಾನು ಸಾರವಾಗಿ ತೋರ್ಪಡಿಸುವ ಪ್ರತಿಯೊಂದು ವಿಷಯವನ್ನೂ ಬಿಡದೆ ಸಂಗ್ರಹಿಸಿ ಅತ್ಯಂತ ಆಶ್ಚರ್ಯಕರವಾದ ವಿಷಯ ಗಳ ಸಾರಗಳನ್ನೊಳಗೊಂಡಿರುವಂತೆ ಅಮೂಲ್ಯವಾವ ಗ್ರಂಥಗಳನ್ನು ವರಕವಿಗಳು ಆವಾರವಾಗಿ ರಚಿಸಿರುತ್ತಾರೆ. ಆಲ್ಲದೆ ಅವರು ಆಯಾಕಾಲದ ನವಚಿತ್ರಗಳನ್ನೂ, ಜನ ಗಳ ಸ್ವಭಾವಗಳನ್ನೂ, ಕಾಲದ ವೈಪರೀತ್ಯಗಳನ್ನೂ ತಾವೇ ಮೊದಲು ನೋಡಿ, ಅನುಭವಿಸಿ, ಅನಂತರ ತಮ್ಮ ಅಭಿಪ್ರಾಯವನ್ನೂ, ಪದಾರ್ಥಗಳ ಗುಣದೋಷ ಗಳನ್ನೂ, ಬುದ್ಧಿವಾದಗಳನ್ನೂ ಮತ್ತು ಕಾರ್ಯಸಾಧನಾ ಕ್ರಮಗಳನ್ನೂ ಜನರಿಗೆ ಬೋಧಿಸುವುದರಿಂದ ಇಂತಹ ಕವಿಗಳಿಗೆ ಕಾಲೋಚಿತವಾದ ಶ್ರೀಕ್ಷ ಭೃಮರಗಳೆಂದೇ ನಾವು ಹೇಳಬಹುದು.

ಪ್ರಪಂಚದಮೇಲೆ ಕಂಡ ವಸ್ತುಗಳಂದ, ಜನಗಳಿಗೆ ಸರಿಯಾದ ಬುದ್ಧಿವಾದಗಳನ್ನು ಕವಿಯು ತನ್ನ ಮನ ಸ್ಸಿಗೆ ತೋಚಿದ ಮಾರ್ಗದಲ್ಲಿ ಜನಕ್ಕೆ ತೋರ್ಪಡಿಸುವ ಸ್ವಪಾಮರ್ಥ್ಯವುಳ್ಳ ಕವಿಯ ಮನೋವಿಲಾಸಗಳಲ್ಲಿ ಒಂದು ರಹಸ್ಯವು ಬುದ್ಧಿವಾದಗಳನ್ನು ಹೇಳುವಾಗ್ಗೆ ಹಿರುವವರ ಮತ್ತು ಕೇಳುವವರ ಮನಸ್ಸಿಗೆ ವ್ಯಕ್ತಿಯುಟಾಗದಂತೆ ಪ್ರಜ್ಞೇಕವಾಗಿಯಾರೋ, ಎಲ್ಲಿಯೋ ಕಾರ್ಯಗಳು ಪ್ರಾಪ್ತ ವಾದಂತೆ ರಚಿಸಿ, ದೃಷ್ಟಾಂತಮುಖೇನ ಸಾರಕ ಮಹಾ ಶಯರಿಗೆ ಅಭಿರುಚಿ ಹುಟ್ಟುವಂತೆಯೂ, ಹಾಸ್ಯರೂಪ ದಲ್ಲಿರುವಂತೆಯೂ ವಿಷಯಗಳನ್ನು ಹೊರಪಡಿಸಿ ಕವಿಯು ತೋರ್ಪಡಿಸುವನು. ಇದಕ್ಕಾಗಿ ಅನೇಕ ದೃಷ್ಟಾಂತ ವಾಗಿ ಕವಿಗಳು ತಾವು ರಚಿಸಿರುವ ನಾಟಕಗಳಲ್ಲಿ ಅಧಾ ಕಾಲದ ಜನರ ನಡವಳಿಕೆ, ಸ್ವಭಾವ, ವೇಷ ಮತ್ತು ಭಾಷೆ ಮೊಂತಾದುವುಗಳಲ್ಲಿರುವ ನ್ಯೂನಾತಿರೇಕಗಳನ್ನು ಸಂಪೂರ್ಣವಾಗಿ ತೋರ್ಪಡಿಸಿರುವುದೇ ದೃಷ್ಟಾಂತ ವಾಗಿದೆ ಇಂತಹ ವಿಷಯಗಳಿಂದ ಅಮೃತವನ್ನು ಪಾನಮಾಡುವುದಕ್ಕೆ ಪ್ರಯತ್ನಿಸುತ್ತಿರುವವರೇ ಭೃಮರ ಗಳಂತಿರುವರು.

ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ವೀರಶೈವ ಶ್ರೀಯರಲ್ಲಿ ವಿಜ್ಞಾಪನೆಗಳು

ಲೇಖಕಿ—ಬಿ ಎಂ ಮರುಳಸಿದ್ಧಮ್ಮ

ಮತನೆಂದರೆ ಅಭಿಕ್ರಾಯ. ಪ್ರತಿಯೊಬ್ಬ ಮಾನವ ನಲ್ಲಿಯೂ ಜ್ಞಾನವಿದ್ದಮಾತ್ರ ಅಭಿಕ್ರಾಯಗಳು ತೋಡ ಕ್ಕಿರುವುದರಿಂದ ಅವುಗಳಲ್ಲಿ ಮನುಷ್ಯಜನ್ಮೋದ್ಯಾಪಕ್ಕೆ ಯಾವವು ಮುಖ್ಯವೋ ಅವುಗಳನ್ನು ಮಾತ್ರ ನಾವು ಗ್ರಹಿಸಬೇಕಾಗಿದೆ. ಮಾನವನು ಪುಣ್ಯಕರ್ಮಕ್ಕನು ಸಾರನಾಗಿ ಆತ್ಮತೃಪ್ತನಾದ ಜನ್ಮವನ್ನು ಪಡೆದಿದ್ದಾನೆ. ಅವನಿಗೆ ಜಗತ್ತಿನ ಎಲ್ಲಾ ಪ್ರಾಣಿಗಳಿಗಿಂತಲೂ ಬುದ್ಧಿ ಯು ಬಹಳ ಹೆಚ್ಚಾಗಿರುವದು ಮಾನವನು ಸಾರಾ ಸಾರವಿಚಾರಗಳನ್ನು ತಿಳಿಯುವುದರಿಂದಲೂ ಅವುಗಳನ್ನು ಅನುಷ್ಠಾನದಲ್ಲಿ ತರುತ್ತ ಸದ್ಗತಿದಾಯಕವಾದ ಬ್ರಹ್ಮ ಜಿಜ್ಞಾಸೆಯಲ್ಲಿ ನಿರತನಾಗಬೇಕು. ಮಳೆ ಹನಿಗಳು ಆಕಾಶದಿಂದ ಭೂಮಿಗೆ ಬಿದ್ದು ಕೆರೆ ತೊರೆಗಳಲ್ಲಿ ಸೇಂ

[ಒನೆಯ ಪುಟವನ್ನು ನೋಡಿ]

[೩ನೆಯ ಪುಟದಿಂದ ಮುಂದುವರೆದುದು]

ಕೊನೆಗೆ ಸಮುದ್ರದಲ್ಲಿ ಬೆರೆತಂತೆ, ಜೀವಾತ್ಮರು ಭವ ಬಂಧನದಿಂದ ದೂರರಾಗಿ ಪರಶಿವನಲ್ಲಿ ಸಮರಸವಾಗುವ ಮಾರ್ಗವನ್ನು ಅನುಸರಿಸಲೇಕು. ಇಂತಹ ದಿವ್ಯ ಮಾರ್ಗವನ್ನು ತೋರಿಸುವಾತನೇ ನಮ್ಮ ಕಣ್ಣಿಗೆ ಕಾಣುವ ಪ್ರತ್ಯಕ್ಷ ಶಿವನು

ನಮ್ಮ ವೀರಶೈವ ಮತದಲ್ಲಿ ಅಂಧ ಶಿವಸ್ವರೂಪಿಗಳು ಯಾರಾದರೂ ಹಿಂದೆ ಇದ್ದರೋ? ಈಗ ಇದ್ದಾರೆಯೇ? ಎಂದರೆ ಹಿಂದೂ ಇದ್ದರು ಮಧ್ಯದಲ್ಲೂ ಇದ್ದರು ಈಗಲೂ ಇದ್ದಾರೆ ಹಿಂದೆ ಇದ್ದವರು ತ್ರಿಜಗದ್ಗುರು ಪಂಚಾಚಾರ್ಯರು ಮಧ್ಯದಲ್ಲಿ ನಾವು ಕಣ್ಣಿನಲ್ಲಿ ಕಂಡಂತೆ ಇತ್ತವರು ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಪಟ್ಟಾಚಾರ್ಯ ಮಹಾಸ್ವಾಮಿಗಳವರು ಸದ್ಯ ನಮ್ಮ ಕಣ್ಣಿಗೆ ಕಾಣುತ್ತಿರುವವರಲ್ಲಿ ಶ್ರೀ ರಂಭಾಪುರಿಪೀಠದ ಜಗದ್ಗುರು ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ಶಿವರುದ್ರ ಶ್ರೀ ಗಂಗಾಧರ ಶಿವಾಚಾರ್ಯರು, ಸತ್ಪತಿಗಳವರು ಬೆಂಗಳೂರು, ಹೊಟ್ಟಿಗಿ ಶ್ರೀ ಶಿವಶರ, ಪಂಡಿತ ಶ್ರೀ ಶಾಂತಿನಾಥ ಶಾಸ್ತ್ರಿಗಳವರು, ಪಂಡಿತ ಶ್ರೀ ವೀರಭದ್ರ ಶಾಸ್ತ್ರಿಗಳು ಇಂತಹ ಮಹಾ ವಿಭೂತಿಗಳು ಶಿವರಲ್ಲದೆ ಬೇರೆಯರೆ? ಈ ಮಹಾನೀಯರು ಬರೆಯುತ್ತಿರುವ ಬೋಧಿಸುತ್ತಿರುವ ತತ್ತ್ವಗಳನ್ನು ವೀರಶೈವ ಮತದಲ್ಲಿ ಯಾರೂ ಬೋಧಿಸಲಾರರೆಂದು ಬರೆದರೆ ಅತಿಶಯೋಕ್ತಿಯೆ ಸಿಸಲಾರದು ಈ ಪ್ರಪಂಚವಲ್ಲಿರುವ ಮೆ ಖ್ಯ ಮತಗಳಲ್ಲೆಲ್ಲಾ ಮತಾಚಾರ್ಯರು ಇದ್ದೇ ಇದ್ದಾರೆಂಬುದು ಎಲ್ಲರಿಗೂ ತಿಳಿದಿದೆ ಹಿಂದೂ ಧರ್ಮದಲ್ಲಿ ಯೇಸು ಕ್ರಿಸ್ತನು, ಮಧ್ಯ ಪಶ್ಚಿಮದಲ್ಲಿ ಮಹಮದ ಪೈಗಂಬರರೂ ಮತಸ್ಥಾಪನೆ ಮಾಡಿದರು ಭರತಖಂಡದಲ್ಲಿ ಶಕ್ತಿವಿಶಿಷ್ಟಾದ್ವೈತವನ್ನು ಶ್ರೀರಂಗ ಕಾದಿ ಪಂಚಾಚಾರ್ಯರೂ, ಅದ್ವೈತವನ್ನು ಶ್ರೀ ಶಂಕರಾಚಾರ್ಯರೂ, ದ್ವೈತವನ್ನು ಶ್ರೀಮಧ್ವಾಚಾರ್ಯರೂ, ವಿಶಿಷ್ಟಾದ್ವೈತವನ್ನು ಶ್ರೀ ರಾಮಾನುಜಾಚಾರ್ಯರೂ ಸ್ಥಾಪನೆಮಾಡಿದರು ಪ್ರತಿಯೊಬ್ಬ ಆಚಾರ್ಯರೂ ಬೋಧಿಸಿದ ತತ್ತ್ವದಂತೆ ನಡೆದು ಅವನ್ನು ಅನುಷ್ಠಾನದಲ್ಲಿ ತರುವುದರಿಂದ ಮನಃಶುದ್ಧಿಯಾಗಿ ಜ್ಞಾನವು ಅಭಿವೃದ್ಧಿಯಾಗುವದು ಹುಟ್ಟಿನ ಮತ್ತು ಸಾವಿನ ಮಧ್ಯದಲ್ಲಿ ಇರುವ ಅಂಡಾಶಯವು ಬಲಿತಮೇಲೆ ಬೆಳಗು ಹೇಗೆ ಬಾಡಿ ಬಿದ್ದು ಹೋಗುವುದೋ ಹಾಗೆಯೇ ಆಚಾರ್ಯರು ಬೋಧಿಸಿದ ಜ್ಞಾನವು ವೃದ್ಧಿಗೊಂಡು ಕರ್ಮವು ಕಡಿಮೆಯಾಗಿ ಕ್ರಮೇಣ ಶಿವಜ್ಞಾನದಲ್ಲಿ ಅಭೇದವು ಪ್ರಾಪ್ತವಾಗುವುದೆಂದು ಶ್ರೀಜಗದ್ಗುರು ರೇಣು ಕಾಚಾರ್ಯರು ಮುನಿತಿಲಕ ನಾದ ಅಗಸ್ತ್ಯ ಮಹರ್ಷಿಗೆ ಶಿವಪಿಠಾಂತರವನ್ನು ಉಪದೇಶಿಸಿ ಜಗತ್ಪ್ರಸಿದ್ಧರಾದರೆ ಅದ್ವೈತದ ಎಲ್ಲಾ ಮತಸ್ಥಾಪನಾಚಾರ್ಯರೂ ತಮ್ಮ ತಮ್ಮ ಮತದ ಚಿಹ್ನೆಗಳನ್ನು ಪ್ರತಿಯೊಬ್ಬ ಶಿಷ್ಯರೂ ಧರಿಸಿಕೊಂಡು ಕರ್ಮವನ್ನು ಮಾಡತ್ತ ಜ್ಞಾನವನ್ನು ಗಳಿಸಿ ಮೋಕ್ಷವನ್ನು ಹೊಂದುವಂತ ಕಟ್ಟು ಮಾಡಿದ್ದಾರೆ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರು ಸ್ತ್ರೀಪುರುಷರೆಂಬ ಭೇದ ವಿಡದೆ ಸರ್ವರೂ ಗುರುವಿನ ಅನುಗ್ರಹಕ್ಕೆ ಪಾತ್ರರಾಗಿ ಶಿವಲಿಂಗಧಾರಣವೆಂಬ ಸರ್ವಕಾಲ ಯಜ್ಞವನ್ನು ಕೈಕೊಂಡು ಶಿವನನ್ನು ಸೇರಬಹುದೆಂದು ಬೋಧೆಮಾಡಿದ್ದಾರೆ ಮಿಕ್ಕ ಮತಾಚಾರ್ಯರು ಪುರುಷರಿಗೆ ಮತ ಚಿಹ್ನಧಾರಣದ ಅಧಿಕಾರವನ್ನು ಕೊಟ್ಟಂತೆ, ಸ್ತ್ರೀಯರಿಗೆ ಕೊಟ್ಟಂತ ತೋರುವದಿಲ್ಲ ವೀರಶೈವಸ್ತ್ರೀಯರು ಮತಚಿಹ್ನೆಯಾದ ಇಷ್ಟಲಿಂಗ ಭಸ್ಮ ರುದ್ರಾಕ್ಷಗಳನ್ನೂ, ಸಮಂಗಲೆಯು ಚಿಹ್ನವಾದ ಅರಿಸಿನ ಕುಂಕುಮಗಳನ್ನೂ ಧರಿಸುತ್ತಾರೆ ವಿಶ್ವ ಮತಗಳ ಸ್ತ್ರೀಯರಿಗೆ ಕೇವಲ ಅರಿಸಿನ ಕುಂಕುಮಗಳ ಹೊರತು ಬೇರೆ ಮತಚಿಹ್ನಗಳಾವುವೂ ಇರುವುದೇ ಇಲ್ಲ ಇದರಿಂದ ವೀರಶೈವ ಮತ ಸ್ಥಾಪನಾಚಾರ್ಯರು ಸ್ತ್ರೀಯರಿಗೆ ಮಾಡಿರುವ ಉಪಕಾರವು ಅಸಾಧಾರಣವಾದುದೆಂದು ಬಹು ಹೆಮ್ಮೆಯಿಂದ ಹೇಳಬೇಕಾಗಿದೆ.

ಮುಖ್ಯವಾಗಿ ನಮ್ಮ ವೀರಶೈವ ಸ್ತ್ರೀಯರು ಪುರುಷರಂತೆ ವಿದ್ಯಾವತಿಯರಾಗಬೇಕು ಲೌಕಿಕ ಪಾರಮಾರ್ಥಿಕ ವಿದ್ಯೆಗಳೆರಡನ್ನೂ ಸಂಪಾದಿಸಬೇಕು. ಈಗ ನಮ್ಮ ವೀರ ಶೈವ ಸ್ತ್ರೀಯರಲ್ಲಿ ಓದುಬರಹ ನೂರಕ್ಕೆ ಕೊಂಬತ್ತೈದು ಜನಗಳಿಗೆ ಬರುವುದಿಲ್ಲವೆಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ ಇನ್ನು ಕೆಲವರು ಓದುಬರಹ ಬಂದರೆ ಅದೇ ತಮ್ಮ ಜನ್ಮಾಂತ್ಯದ ಉತ್ತಮಗುರಿಯೆಂದು ಧಾನಿಸಿ ತಮ್ಮ ಪುರಿವೆಗಳನ್ನು ಅಲಕ್ಷ್ಯಮಾಡುತ್ತಿರುವುದು ಅನೇಕ ಭಾಗಗಳಲ್ಲಿ ಸರ್ವತ್ರ ತಿಳಿದ ವಿಷಯವಾದರೆ ಇಂಥವರು ದೊಡ್ಡ ಡಿಗ್ರಿಯನ್ನು ಪಡೆದಾಕ್ಷಣವೇ ಉತ್ತಮ ಸ್ತ್ರೀಯರಾಗಲಾರರು ಇವರು ಸ್ತ್ರೀಜಾತಿಗೆ ಸುತಾ ಕಲಂಕಿನಿಯರೆಂದು ಬರೆದರೆ ತಪ್ಪಾಗಲಿಕ್ಕಿಲ್ಲ ಆದುದರಿಂದ ಸ್ತ್ರೀಯರು ವಿದ್ಯಾವತಿಯರಾದಂತೆ ಸಹಧರ್ಮಿಣಿಯರಾದರೆ ಅವರ ಸೌಭಾಗ್ಯಕ್ಕೆ ಎಣೆಯೇ ಇಲ್ಲ ಸಂದು ಹೇಳಬಹುದಾಗಿದೆ ಮುಖ್ಯವಾಗಿ ಪ್ರತಿಯೊಬ್ಬ ಸ್ತ್ರಿಯರೂ ಪತಿವೇವನಲ್ಲಿ ಭಕ್ತಿಯನ್ನಿಟ್ಟು ಧರ್ಮದಿಂದ ನಡೆದು ಧನ್ಯರಾಗಬೇಕೆಂದು ಪ್ರಾರ್ಥನೆ

ವಿವಾಹಮಹೋತ್ಸವ, ಕುರುಡಿ

ಮಾನವಿ ತಾಲೂಕ ಕುರುಡಿ ಗ್ರಾಮದ ಶ್ರೀಯುತ ಬುಡಮ್ಮಾಳ ವಿರೂಪಾಕ್ಷಪ್ಪಗೌಡರು ತಮ್ಮ ಸುಪುತ್ರ ಚಿ॥ ಮಲ್ಲನಗೌಡರ ವಿವಾಹವನ್ನು ಇದೇ ಮಾಗಶಿ ಬಗ ೧೦ ಗ ವಾರ ಅತ್ಯಂತ ವಿಜೃಂಭಣೆಯಿಂದ ಸ್ವಗ್ರಹದಲ್ಲಿ ನೆರವೇರಿಸಿದರು ಇವರು ಗುರುಭಕ್ತಿ, ವತ್ಸಲರೂ ಸನಾತನ ಧರ್ಮಾವಲಂಬಿಗಳೂ ಆದುದರಿಂದ ಸುಲೇಪೇಟೆಯಲ್ಲಿದ್ದ ಬಿಜ್ಜಾಲಿಸಾವಿರ ದೇವರು (ತರ್ಕರತ್ನ) ಶ್ರೀ ಚನ್ನವೀರಶಿವಾಚಾರ್ಯ ಸ್ವಾಮಿಗಳ ವರನ್ನು ಬರಮಾಡಿಕೊಂಡು, ಮಿರ್ಜಾಪುರ ನುರಿದ ವೇ॥ ಬಸವರಾಜಶಾಸ್ತ್ರಿಗಳವರ ಪೌರೋಹಿತ್ಯದಿಂದ ಜ್ಯೋತಿಷ್ಕರು ನಿಯಮಿಸಿದ ವೇಳೆಯನ್ನು ತಿಳ್ರ್ಯಮಿಸಿ, ವಿಧ್ಯುಕ್ತವಾಗಿ ಮಂಗಲಧಾರಣವನ್ನು ಮಾಡಿಸಿದರು ವಿವಾಹಕಾಲದಲ್ಲಿ ಅನೇಕ ಪರಂಪರೆಯನ್ನು ಅಭಿಮಾನಿಸುವ ನಾಡು—ನಾಡು ರಂಗು ಮತ್ತು ನೋದಲಾದವುಗಳಿಗವ ಕಾಶಕೊಡದೆ ಕೇವಲ ಗುರು-ಜಂಗಮರ ಪೂಜಾ ಭೋಜನಾದಿಗಳನ್ನೇ ಅವರವರ ಆಚಾರಕ್ಕನುಸರಿಸಿ ಬಹು ಬಕ್ತಿಯಿಂದ ನೆರವೇರಿಸಿದರು ಈ ಕಾಲದಲ್ಲಿ ಈ ಕ್ರಮವನ್ನನುಸರಿಸುವವರು ಬಹು ವಿರಳರಾಗಿದ್ದಾರೆ ಪರಮಾತ್ಮನು ಇದೇ ಪದ್ಧತಿಯನ್ನೇ ಅನುಸರಿಸುವಂತೆ ಪ್ರತಿಯೊಬ್ಬರಿಗೂ ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ.

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವಿವಾಹಸಮಾರಂಭ, ಸೊಲ್ಲಾಪುರ

ಸೊಲ್ಲಾಪುರ ಜೋಡಭಾವಿಪೇಟೆಯಲ್ಲಿರುವ, ನೇ॥ ಸಿದ್ಧರಾಮಯ್ಯ ಕರಜೋಳ ಇವರ ಪುತ್ರ ಚಿ॥ ಸಂಗಯ್ಯ ನಿಗೆ ಗೌರಾಬಾಯಿ ಕೋಂ ಸಿದ್ಧರಾಮಯ್ಯ ನಿಟ್ಟೂರಿನ ಇವರ ಪುತ್ರಿ ಕುಂ॥ ಸೌ॥ ಚಿ॥ ಅನ್ನಪೂರ್ಣದೇವಿಯನ್ನು ಕೊಟ್ಟು ವಿವಾಹಸಮಾರಂಭವು ಒಳ್ಳೆ ವೈಭವದಿಂದ ಜರುಗಿತು ಪ್ರಮಾಥಿಸಂವತ್ಸರ ಮಾರ್ಗಶೀರ್ಷ ಕೃಷ್ಣ ಪಕ್ಷ ೧೧ ಶುಕ್ರವಾರ ಒಂದೇದಿನವಸದರಲ್ಲಿಯೇ ವಿವಾಹದ ಸರ್ವಕಾರ್ಯಗಳೂ ಸಾಂಗವಾಗಿ ಜರುಗಿದವು ಈ ವಿವಾಹಕ್ಕೆ ಹೋಟಗಿ ಜೇವರಗಿ (ಅಕ್ಕಲಕೋಟ ಕುಂಡಾರದಮಠಾಧ್ಯಕ್ಷ) ಶ್ರೀಗಳೂ ಇಲ್ಲಿಯ ಹುಬ್ಬಳ್ಳಿ ಮಠಾಧ್ಯಕ್ಷರಾದ ಶ್ರೀ ಧೇನುಕರ್ಣಾಶಿವಾಚಾರ್ಯರೂ ಆಗಮಿಸಿದ್ದರು. ಅಲ್ಲದೆ, ಸೌ॥ ಭಾಗೀರಥೀಬಾಯಿ ಕಟಾಪ, ಶ್ರೀ ಮುತ್ತಾಬಾಯಿ ಹೇಟೆ ಮುಂತಾದ ಮಾಶ್ಯಮುಖಿಗಳೂ ಆಗಮಿಸಿದ್ದರು. ವೇ॥ ಅಲ್ಲಮಪ್ರಭು ಪುರಾಣಿಕ ವೇ॥ ವೀರಯ್ಯ ಹಿರೋಳ ಇವರ ವೈದಿಕತ್ವದಲ್ಲಿ ಸಕಾಸ್ತ್ರವಾಗಿ ನೆರವೇರಿತು ವಧುವು ಸೌ॥ ಭಾಗೀರಥೀಬಾಯಿ ಕಟಾಪ ಇವರ "ಸದಾಚಾರಸಮಾಜ" ದಲ್ಲಿ ಸುಧಾರಣಾ ಮಾರ್ಗವನ್ನಳ್ಳಿಸಿ ಸುವಿಚಾರಣೆಯಾಗಿದೆ ನೇ॥ ಗುರುಸಿದ್ಧಯ್ಯ ಕರಡೋಳ ಇವರು ಪಂಚಾಚಾರ್ಯ ಪ್ರಭೆಗೆ ೧೦ ರೂಪಾಯಿಯನ್ನು ಶ್ರೀ ಧೇನುಕರ್ಣ ಶಿವಾಚಾರ್ಯರ ಅಪ್ಪಣೆಯಮೇರೆಗೆ ಶ್ರೀ ಭಕ್ತಿಯಿಂದರ್ಪಿಸಿದರು. ಶ್ರೀ ಜಗದಾಚಾರ್ಯರು ನೂತನ ವಧೂವರರಿಗೆ ಚಿರಾಯುರಾರೋಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಪ್ರಾರ್ಥಿಸುವೆನು ಶ್ರೀ॥ ಕರಬಸಯ್ಯನವರು ಸರ್ವವ್ಯವಸ್ಥೆಯನ್ನು ಚೆನ್ನಾಗಿ ಮಾಡಿದರು.

ವೀರಂತಯ್ಯ ಹಿರೇಮಠ-ಬೀಗಂಪೇಟೆ,
ಸೊಲ್ಲಾಪುರ

ಬೆಕೆ ಇರದೆ ತೋರದೂ, ಬಾಯಿಮಾತಿನಲ್ಲಿಯಾದರೂ ಅವುಗಳಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಬೇಕು. ಇವುಗಳೆಲ್ಲವನ್ನು ಕಾಂಗ್ರೆಸ್ ಮೊದಲು ತೆಗೆದುಕಾಕಬೇಕು. ವಿಶಾಲ ಭೀತಿಯನ್ನೊಳಗೊಂಡ ಕಾರ್ಯಕ್ರಮವನ್ನು ಮುಂದಿಟ್ಟು ಆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುವವರಿಗೆ ಮಂತ್ರಿಮಂಡಲದಲ್ಲಿ ಅವಕಾಶವನ್ನು ಕೊಡ ಬೇಕು. ಎಂದೆರಡು ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಬಂದರೆ ಸ್ವತಂತ್ರವಾಗಿ ಓಟು ಮಾಡುವ ಹಕ್ಕಿರಬೇಕು."

ಭಾರತಕ್ಕೆ ಫೆಡರೇಷನ್ ವ್ಯವಸ್ಥೆಯೇ ಕಕ್ಕ ರಾಜ್ಯಾಂಗ ವ್ಯವಸ್ಥೆಯೆಂದೂ ಆದನ್ನು ಆಚರಣೆಗೆ ತರ ಬೇಕೆಂದೂ ಸೂಚಿಸುತ್ತ "ಶಾಂತಿಯುತವಾದ ರಾಜ ಕೀಯ ಕ್ರಾಂತಿಯನ್ನು ಭಾರತದಲ್ಲಿ ಉಂಟುಮಾಡಿ ಕೊಡುವುದೇ ಇಂದು ಮುಖ್ಯವಾಗಿ ಆಗಬೇಕಾಗಿರುವ ಕೆಲಸ ರಾಜಕೀಯವಿವಿಸಿದ ಬೇಡಿಕೆಗಳನ್ನು ಮುಂದಿಡು ವುದೂಂದಾಗಲೀ, ಇಲ್ಲವೇ ಕಿಸಿಪ್ಪಕ್ಷ ಇಸ್ಸು ಸುಧಾರ ಣೆಗಳನ್ನಾದರೂ ಕೊಡಬೇಕೆಂಬ ಬೇಡಿಕೆಯನ್ನು ಮುಂದಿ ಡುವುದರಿಂದಾಗಲೀ ತಾವು ಮಾಡಿಕೊಂಡಿರುವ ಕೌಲು ಕರಾರುಗಳನ್ನು ಒತ್ತಿ ಹೇಳುವುದರಿಂದಾಗಲಿ ತಾವೇ ಪೆಚ್ಚೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವುದರಿಂದಾ ಗಲೀ, ಈ ಕ್ರಾಂತಿಯುಂಟಾಗುವುದಿಲ್ಲ ಬಗಳ ಕದನ ಜೋರಾಟ ಇವುಗಳ ಮಧ್ಯೆ ಈ ಕ್ರಾಂತಿಯನ್ನುಂಟು ಮಾಡುವುದಾದರೆ ವಿಷಾದಕರವಾದ ಪ್ರಸಂಗಗಳ ಸ್ಪೃ ತಿಯು ಸದಾ ಕಾಲವಲ್ಲಿಯೂ ಇರುವುದು ಇದರಿಂದ ಭಾರತದ ಪ್ರಗತಿಗೆ ಅಡಚಣೆಯಾಗುವುದು ಅದುವ ರಿಂದ ಸರ್ಕಾರ, ಕಾಂಗ್ರೆಸ್, ಮುಸ್ಲಿಂ ಲೀಗ್, ಹಿಂದೂ ಮಹಾಸಭೆ, ನಿಮ್ಮವರ್ಗದ ಲಿಬರಲ್‌ಗಳು ಮುಂತಾದ ವಿವಿಧ ಪಕ್ಷಗಳಿಗಳವರು ಸಹಕರಿಸಿ ಸ್ನೇಹಭಾವದಿಂದ ಕೆಲಸಮಾಡಿ ಅನುಕೂಲವಾದ ವ್ಯವಸ್ಥೆಯನ್ನು ರೂಪಿಸು ವುದೇ ಅತ್ಯುತ್ತಮ ಮಾರ್ಗ" ಎಂಬುದಾಗಿ ಸೂಚಿಸಿ ನರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಧರಣಿಮಂಡಪದಲ್ಲಿರುವ ಪತ್ರಿಯೊಂದು ಗುರುವರ್ಗದ ಮನೆಕ್ಕೆ ಶಾಖೆಯಾದು ಶಿಷ್ಯರ ಮನೆಗಳಿರುತ್ತಿವ್ವು, ಆ ಪ್ರತಿಯೊಂದಿಗೆ ಎಲ್ಲವರ್ಷಕ್ಕೋ ಹತ್ತು ವರ್ಷಕ್ಕೋ ಒಮ್ಮೆಸಾದೆ ಹೋಗಿ ಶಿಷ್ಯ ರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಗಳನ್ನು ಟಿಪ್ಪಣಿಮಾಡಿಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಪಠವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇವನ್ನು ದೂರವಾಡುವುದಕ್ಕೂಸ್ಕರ ಸೇಲ್ವಂಡ ಪುಸ್ತಕವನ್ನು ಹೊಸ ದಾಗಿ ಮುದ್ರಣಮಾಡಿಸಿದ್ದೇವೆ ಇವರಲ್ಲಿ ಬರೆಯುವ ವಿಷಯಗಳ ವಿವರವು ಚಿತ್ರಾಗಿ ತೋರಿಸಲ್ಪಟ್ಟಿವೆ ಆಯಪಠಂದ ಸದರಿ ಪುಸ್ತಕ ವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಲ್ಲಿರ್ದಂತೆ ವಿವರವನ್ನೆಲ್ಲಾ ಬರೆದು ತಂಜಾವೂರಿಸ್ಟೇಷನಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇವಕ್ಕಾಗಿ ಎಂದೂ ಕೆಡದಂಥ ಕಾದನಗಳನ್ನುಪಯೋಗಿಸಿರುವದಲ್ಲದೆ ಸುಂದ ರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಪೂರ್ತ್ರಿಕಾಲಯದಲ್ಲಿ ಬಹು ಮುದ್ರಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಸಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು ಅಲ್ಲದೆ ಈ ಪೂಜಾವಿಧಿಯ ಅಂಕ್ಯವಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಧನ್ವಂತ್ರಿಕಾಳೀದೇವೀನಾಮಾವಳಿ, ಪಣ್ಣುಖಸ್ಕಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೫ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಕಕ್ಕಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿ ಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇವಿನಿವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡೀಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೂಪಿಸಿರುವಂಥ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಸ್ವತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಆದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಾಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಆಯ್ದ ತರೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫	೦—೩—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕಾರಣ ಅಗಸ್ತ್ಯ, ಧರ್ಮಜ, ವ್ಯಾಸ, ಷಾನಂತ, ಮಾರ್ಕಾಂಡೇಯ ಮಹರ್ಷಿಗಳಿಗೆ ಶಿವತಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಶತ್ರು ಪೀಡಾನಿವಾರಣಾರ್ಥವಾಗಿ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ೨೦×೧೬ ಬೆಲೆ ೨೫	೦—೨—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೮
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಸಹಿಷ್ಣು ಭಕ್ತಿಯ ಮಾಡುವ ಫೋಟೋ	೦—೦—೮
ಶ್ರೀ ರೇಣುಕಾಚಾರ್ಯರು ವಿಭೀಷಣನ ಹಸ್ತಾರ್ಪಣಾನುಷ್ಠಾನವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಾಗಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೯	೦—೦—೮
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೮
ಶ್ರೀಕಾಶೀಕ್ಷೇತ್ರ ನಿರಾಲಂಬಸ್ವಾಮಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಭಿಮಾನಿಕರ ಫೋಟೋ	೦—೦—೮
ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ	೦—೦—೮
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೮
ಶ್ರೀಮದ್ರಂಭಾಪುರೀ ಸಿಂಹಾಸನಾಧೀಶ್ವರ ಜಗದ್ಗುರು ವೀವಾನಂದವಿಶಾಚಾರ್ಯ ಮುನೀಶ್ವರಾಮಿಗಳವರ ಫೋಟೋ	೦—೦—೮
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ನಾನಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೮
ಪೂರ್ಣ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೯	೦—೦—೮
ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪	೦—೦—೮
ಶ್ರೀ ಜಗದ್ಗುರು ಉಜ್ಜಯಿನೀ ಸಿಂಹದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ	೦—೦—೮
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೮
ಹಿಮವತ್ಕೇದಾರದ ಸುಪ್ರಸಿದ್ಧ ಶಿವಲಿಂಗವು ಶ್ರೀ ಕೇದಾರನಾಥಪ್ಪಾಮಿಯ ಮಂದಿರದ ಸುಂದರ ಫೋಟೋ	೦—೦—೮
ಶ್ರೀರಂಭಾಪುರೀ ಜಗದ್ಗುರುಗಳವರ ಸ್ನಾನಧಿಯಲ್ಲಿ ಶ್ರೀಮದ್ಭಕ್ತಾಚಾರವರು ವಿರಾಜಿಸುತ್ತಿರುವ ಫೋಟೋ	೦—೦—೮
ಬೆಲ್ಲಾರಿ ಬಂಟ್ಟಿಕ್ಕಲ್ಲಿನ ನೆರವೇರಿ ಭಾಪ್ರಶ್ರೀ ಜಗದ್ಗುರುಗಳ ಅಶ್ವ ಪಟ್ಟಾಭಿಷೇಕ ಮಹೋತ್ಸವದ ಫೋಟೋ	೦—೦—೮

* ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ರೋಗಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರ

(Registered Trade Mark)

ಗಳನ್ನು ಕೊಟ್ಟಿರುವ ಈ ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಪ್ಲುಯ ತೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯವಪುಡಿಯಲ್ಲಿ ಒಂದ ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ ತೆಗೆ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ

ನಿಮ್ಮ ಅಪೇಕ್ಷೆಪತ್ರವನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್:,
[37] ಪೋ. ಬಾ. ನಂ೧೦, ಮದರಸು.

ಸರ್ವೋತ್ತಮವಾದ ಮತಗ್ರಂಥಗಳು

ಸೋಪ್ರಸೂತ್ರಸಟ (೩ನೆಯ ಆವೃತ್ತಿ)	.... ೧ ಆಣೆ
ಸತ್ಯಾಸತ್ಯಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	.... ೧ ಆಣೆ
ಸಂಕಷ್ಟಿಪ್ರಕಾಶ (೩ನೆಯ ಆವೃತ್ತಿ)	.... ೧ ಆಣೆ
ಶ್ರೀಸಂಜಾಚಾರ್ಯ ಮಂಗಲಸ್ತೋತ್ರಾವಳಿ (೮ನೆಯ ಆವೃತ್ತಿ)	.... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	.... ೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	.... ೨ ಆಣೆ
ಬಸವಾದಿಶಿಷ್ಟತತ್ವನಿರಾಕರಣ (೪ನೆಯ ಆವೃತ್ತಿ)	.... ೨ ಆಣೆ
ಶ್ರೀತೇರಣುಕಾಚಾರ್ಯಶತಕ (೩ನೆಯ ಆವೃತ್ತಿ)	.... ೨ ಆಣೆ
ಪಂಚಾಚಾರ್ಯಸ್ತ್ರೋತ್ರಾಕರ	.... ೨ ಆಣೆ
ಸ್ತ್ರೀಗುರುಶತ್ತ್ವಾಪವಗಳು	.... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	.... ೨ ಆಣೆ
ವೀರಶೈವಮತಮೀಮಾಂಸಾ	.... ೩ ಆಣೆ
ವೀರಶೈವಾಚಾರನಿಧಿ (೩ ನೆಯ ಆವೃತ್ತಿ)	.... ೩ ಆಣೆ
ಲಿಂಗಧಾರಣವಿಧಿ	.... ೪ ಆಣೆ
ವಿವಾಹಪದ್ಧತಿ (೩ನೆಯ ಆವೃತ್ತಿ)	.... ೪ ಆಣೆ
ಶ್ರೀಪಟ್ಟಪಂಡಿತಾರಾಧ್ಯರ ಕಾಲನಿರ್ಣಯ	.... ೪ ಆಣೆ
ಪನ್ಯಾಸ್ತ್ರಮಸಿಸುರ್ಪತತ್ತ್ವ ಸ್ಪೀಕರಣ (೩ನೆಯ ಆವೃತ್ತಿ)	.... ೬ ಆಣೆ
ಸಿದ್ಧಾಂತ ಶಿಖಾಮಣಿ (ಪೂರ್ವಾರ್ಧ ಚಿತ್ರಸಹಿತ)	.... ೬ ಆಣೆ
ವೀರಶೈವಮಹಾತ್ಮರು	.... ೮ ಆಣೆ
ಬಸವಾಧ್ಯಾಂತದಿಕ್ಕಾರ (೩ನೆಯ ಆವೃತ್ತಿ)	.... ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	.... ೮ ಆಣೆ
ತೆಂಡಿಕ ಶ್ರೀಕಾಶೀನಾಥಶಾಸ್ತ್ರುಲಾರಿ ಭಾಷಣಾಂಗಮು (ತೆಲುಗು)	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರಯಸ್ತ್ರೋತ್ರವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನತಿಪಾಚಾರ್ಯಕೃತ)	.... ೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	.... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	.... ೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	.... ೧೨ ಆಣೆ
ಶ್ರೀಕರಭಾಷ್ಯಂ (ಜಕುಸ್ಮಾತ್ರೀ)	.... ೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	.... ೧ ರೂ.
ವೀರಶೈವರಕ್ಷೆ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿವುವು)	.... ೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	.... ೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	.... ೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಛಾಯಾಚಿತ್ರದ)	.... ೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	.... ೨ ರೂ.
ವೀರಶೈವಸಿದ್ಧಾಂತಸುಧಾಕರ	.... ೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	.... ೮ ರೂ.
A brief life-sketch of Pandit Sri Kashinatha Shastriji *(English)*	4 As.
The Philosophical Aspect of Virasaivism *(English)*	8 As.
Speeches by Pandit Shri Kashinatha Shastriji *English)*	12 As.
ವೀರಶೈವರತ್ನ (ಮರಾಠಿ)	೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ವೀರಶೈವೇಂದುಶೇಖರ (ಸಂಸ್ಕೃತ)	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ)	೨ ಆಣೆ.
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	.... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ.

* ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಂಸ್ಥಾನದಲ್ಲಿರುವ ಶ್ರೀ ಪಂಡಿತಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇ!! ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀರಾಜ್ಯಾಭಿ ಪಂಚಾಚಾರ್ಯಾಯ ನ್ಮಃ ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾತ್ಮಶಿಷ್ಯಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಪ್ರತಿ ಪ್ರತಿ ೧೫ಕ್ಕೆ ೬ ಪೈ. ಪಂಚ್ಯಳದವರಿಗೆ ೨ ರೂ. ೪ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ. ಸೋಮವಾರ ತಾ॥ ೨೨ ನೇ ಜನವರಿ ೧೯೪೦ [ಸಂಚಿಕೆ ೩೯

ಶಿವಾದ್ವೈತ ಪರಿಭಾಷಾ

ಮೇಲ್ಕಂಡ ಗ್ರಂಥವು ತರ್ಕತೀರ್ಥ-ನ್ಯಾಯವಾಚಸ್ಪತಿ-ವೇದಾಂತವಿಶಾರದೇತ್ಯಾದಿ ಪದವೀಧರರಾದ ಹೊಲಿ ಬ್ರಹ್ಮಶ್ರೀ ಶ್ರೀ ನೀಲಕಂಠಶಿವಾಚಾರ್ಯರಿಂದ ಸಂಸ್ಕೃತಭಾಷೆಯಲ್ಲಿ ರಚಿಸಲ್ಪಟ್ಟಿರುವುದು. ತಾವರೆಲ್ಲಿ ವೀರಶೈವ ಸಿದ್ಧಾಂತದ ಸಮಸ್ತ ಪ್ರಕ್ರಿಯೆಗಳು ಬಹು ಸುಲಭವಾಗಿ ಪ್ರತಿಪಾದಿಸಲ್ಪಟ್ಟಿರುವವು. ಆದ್ವೈತ ಪ್ರಕ್ರಿಯೆಯನ್ನು ತಿಳಿದುಕೊಳ್ಳಲಿಕ್ಕೆ "ವೇದಾಂತಪರಿಭಾಷೆ" ಯು ಹೇಗೆ ಅನುಕೂಲವಾಗಿರುವುದೋ, ಹಾಗೆಯೇ ಶಿವಾದ್ವೈತಪ್ರಕ್ರಿಯೆಯನ್ನು ತಿಳಿದುಕೊಳ್ಳಲಿಕ್ಕೆ ಈ ಶಿವಾದ್ವೈತಪರಿಭಾಷೆಯು ಅನುಕೂಲವಾಗಿರುವದು. ಗ್ರಂಥ ಕರ್ತರು ಬಹು ಶ್ರಮವಹಿಸಿ ಈ ಗ್ರಂಥವನ್ನು ರಚಿಸಿ ವೀರಶೈವಸಮಾಜಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಗ್ರಂಥವು ಶ್ರೀ ಕಾಶೀನಾಥಗ್ರಂಥಮಾಲೆಯಲ್ಲಿ ೯೯ ನೆಯ ಪುಷ್ಪವಾಗಿ ಮುದ್ರಿಸಲ್ಪಟ್ಟಿದೆ. ಸಂಸ್ಕೃತಭಾಷೆಯನ್ನು ಬಲ್ಲ ಪಂಡಿತರೆಲ್ಲರೂ ಈ ಗ್ರಂಥವನ್ನು ತರಿಸಿಕೊಂಡು ಶಿವಾದ್ವೈತಸಿದ್ಧಾಂತರಹಸ್ಯವನ್ನು ತಿಳಿದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ.

ಬೆಲೆ ೮ ಆಣೆ.

ಲಿಂಗಧಾರಣಚಂದ್ರಿಕಾ

ಶ್ರೀ ನಂದಿಕೇಶ್ವರಶಿವಾಚಾರ್ಯರಿಂದ ವಿರಚಿತವಾಗಿರುವ **ಲಿಂಗಧಾರಣಚಂದ್ರಿಕೆ** ಯೆಂಬ ಈ ಗ್ರಂಥವು ಈ ಮೊದಲು ಶ್ರೀ ಜಗದ್ಗುರು ಕಾಶೀವಿಶ್ವಾರಾಧ್ಯಪೀಠಾಧಿಪತಿಗಳಿಂದ ಕೈ॥ ಮಹಾಮಹೋಪಾಧ್ಯಾಯ ಶಿವಕುಮಾರ ಮಿಶ್ರರ ಸಂಸ್ಕೃತ ವ್ಯಾಖ್ಯಾನದೊಡನೆ ಸಂಸ್ಕೃತಾಕ್ಷರಗಳಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿರುವುದು ಸರಿಯಷ್ಟೆ ! ಆದರೆ ಆ ಕಾಲಕ್ಕೆ ಈ ಮತಾಗ್ರಂಥದ ಪ್ರಾರಂಭಭಾಗವು ಎಷ್ಟು ಹುಡುಕಿದರೂ ದೊರೆಯಲಿಲ್ಲ. ಆದುದರಿಂದ "**ಕೈಲ್ಕಿರೀಯಮೀಶ ಮು**" ಎಂಬ ಮಂತ್ರದಿಂದಲೇ ಗ್ರಂಥವು ಆರಂಭಿಸಲ್ಪಟ್ಟಿರುವುದು. ವೇ॥ ಪಂ॥ ಶ್ರೀ ಕಾಶೀನಾಥ ಶಾಸ್ತ್ರಿಗಳವರು ಮದ್ರಾಸ್ " ಅಡಯಾರ್ ಲೈಬ್ರರಿ"ಯಲ್ಲಿ ಪ್ರಾಚೀನಗ್ರಂಥಗಳನ್ನು ಪರಿಶೋಧಿಸುತ್ತಿರುವ ಸಮಯದಲ್ಲಿ, ಲಿಂಗಧಾರಣಚಂದ್ರಿಕೆಯ ಪ್ರಾಚೀನ ತಾಳಪತ್ರ ಪ್ರತಿಯು ದೈವಾನುಗ್ರಹದಿಂದ ದೊರೆಯಿತು. ಪಂಡಿತರು ಅದರಲ್ಲಿದ್ದ ಪ್ರಾರಂಭಭಾಗವನ್ನು ಬರೆದುಕೊಂಡುಬಂದು ಮುದ್ರಿಸಿ ಕಾಶೀಪೀಠದಲ್ಲಿ ಮುದ್ರಿತವಾಗಿರುವ ಪುಸ್ತಕಗಳಿಗೆ ಸಂಬಂಧಿಸಿ ಕೈಂಕು ಮಾಡಿಸಿರುವರು. ಪ್ರಾರಂಭಭಾಗವನ್ನು ನೋಡಲಪೇಕ್ಷೆಯುಳ್ಳ ಪಂಡಿತರು ಈ ಗ್ರಂಥವನ್ನು ತರಿಸಿಕೊಳ್ಳಬೇಕೆಂದು ಕೋರಿಕೆ.

ಬೆಲೆ ೩ ರೂ.

ಮ್ಯಾನೇಜರ್,
ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಜರ್ಮನಿಯ ಮುಖ್ಯಾಧಿಕಾರಿ ಪ್ರಜೆಗಳು ಹಿಟ್ಲರನ ವಿರೋಧಿಗಳು

ಈಗ ತಾನೇ ಜರ್ಮನಿಯಿಂದ ಹಿಂದಿರುಗಿದ ಅಮೆರಿಕೆಯ ಪ್ರಸಿದ್ಧ ಸುದ್ದಿಗಾರರಾದ ಶ್ರೀ ಹೆ. ಜಿ. ವಿಲ್ಲಾರ್ಡ ರವರು-ಜರ್ಮನಿಯ ಪ್ರಜೆಗಳಲ್ಲಿ ನೂರಕ್ಕೆ 75 ಜನರು ಹಿಟ್ಲರನನ್ನು ವಿಶೇಷವಾಗಿ ದ್ವೇಷಿಸುತ್ತಿದ್ದಾರೆಂದೂ, 95 ಜನರು ಯುದ್ಧಕ್ಕೆ ವಿರುದ್ಧವಾಗಿದ್ದಾರೆಂದೂ ಹೇಳಿದರು.

ಸ್ವೀಡನ್ನಿನ ಮೇಲೆ ಅನ್ಯದೇಶದ ವಿಮಾನಗಳು

ಕಳೆದ 14 ನೆಯ ತಾರೀಖಿನ ಶಿವನ ಪ್ರಾತಃಕಾಲ ಸ್ವೀಡನ್ನಿನ ಮೇಲೆ ಕೆಲವು ಅನ್ಯದೇಶದ ವಿಮಾನಗಳು ಹಾರಾಡಿದವು. ಜರೆರೆ ಅವು ಯಾವ ದೇಶದವೆಂಬುದು ಗೊತ್ತಾಗಲಿಲ್ಲ. ಉಲಿಯಾ ಎಂಬ ಪ್ರದೇಶಕ್ಕೆ ಅಗ್ನೇ ಯದಲ್ಲಿ 6 ಮೈಲಿಗಳ ದೂರದಲ್ಲಿರುವ ಕಾರ್ಲೆಜ್ ಎಂಬ ಊರಿನಮೇಲೆ ಅನೇಕ ಬಾಂಬುಗಳು ಬಿದ್ದವು. ಬಾಂಬು ಗಳು ಎಲ್ಲಿಯವೆಂಬುದನ್ನು ಪರಿಶೀಲಿಸಲಾಗುತ್ತದೆ.

ಯುದ್ಧವಾರ್ತೆ.

ಜರ್ಮನ್ ಜಹಗವು ಮುಳುಗಿತು.

ಜರ್ಮನ್ "ಫ್ಲೈಟರ್" ನೌಕೆಯು ತನ್ನನ್ನು ತಾನೇ ಮುಳುಗಿಸಿಕೊಂಡಿತೆಂದು ಅದನ್ನು ಹಿಂಬಾಲಿಸಲು ಪ್ರಯತ್ನಿಸಿದ ಫ್ರೆಂಚ್ ಸಂಗ್ರಾಮನೌಕೆಯು ತಿಳಿಸಿರುವದಾಗಿ ಪ್ರಕಟವಾಗಿದೆ.

ಅಮೇರಿಕೆಯಿಂದ 12000 ವಿಮಾನಗಳು

ಬ್ರಿಟಿಷ್ ಮತ್ತು ಫ್ರಾನ್ಸ್ ದೇಶಗಳು ಮುಂದಿನ ಎರಡು ವರುಷಗಳಲ್ಲಿ ಅಮೇರಿಕೆಯಿಂದ 12000 ವಿಮಾನ ಗಳನ್ನು ಕೊಂಡುಕೊಳ್ಳಲು ನಿರ್ಧರಿಸಿರುತ್ತವೆ.

ಬೆಲ್ಜಿಯಂ ಹಾಲೆಂಡ್ ಗಡಿಯಲ್ಲಿ ಅಸಾಧ್ಯ ನಂಜು

ಬೆಲ್ಜಿಯಂ ಮತ್ತು ಹಾಲೆಂಡು ಗಡಿ ಪ್ರದೇಶವಲ್ಲಿ ಮಂಜು ವಿಪರೀತವಾಗಿ ಸುರಿದುಗಡ್ಡೆ ಕಟ್ಟಿದೆ. ರಾತ್ರಿಯಾಗಿ ಬಿದ್ದಿರುವ ಈ ಮಂಜಿನಗಡ್ಡೆಗಳ ಮೇಲೆಯೇ ತರ್ಜ್ ಮತ್ತು ಬೆಲ್ಜಿಯಂ ಸೈನಿಕರು ತಿರುಗುತ್ತ ಗಡಿಯನ್ನು ರಕ್ಷಿಸುತ್ತಿದ್ದಾರೆ.

ವಿಮಾನ ಅಪಾಯತ.

ಇಂಗ್ಲೆಂಡಿನ ಫಿಫ್ಟೈರ್‌ನಲ್ಲಿ ಒಂದು ಆರ್. ಎ. ಎಫ್ ಬಾಂಬು ಹಾಕುವ ವಿಮಾನವು ಅನಾಹುತಕ್ಕೀಡಾಗಿ ಮುರಿದು ಬಿತ್ತು. ಅದರಲ್ಲಿದ್ದ ಬಾಂಬುಗಳೆಲ್ಲವೂ ಸಿಡಿದ ಸುತ್ತ 6 ಮೈಲು ದೂರದವರೆಗಿದ್ದ ಕಟ್ಟಡಗಳೆಲ್ಲ ಅದುರಿ ಹೋದವು. ವಿಮಾನವು ನೆಲಕ್ಕೆ ಬೀಳುವುದಕ್ಕೆ ಮೊದಲೆ ಒಳಗಿದ್ದವರು ಹೊರಕ್ಕೆ ಹಾರಿದ್ದರಿಂದ ಪ್ರಾಣಾಪಾಯವಾಗಲಿಲ್ಲ.

ಬ್ರಿಟಿಷ್ ಸಬ್‌ಮೆರಿನ್‌ಗಳು ನಾಶವಾಯಿತು

ಕಳೆದವಾರ ಶನಿ ಕೆಲಸವನ್ನು ಪೂರೈಸಲು ಹೋದ 'ಆರ್‌ಫೈಫ್ ಮತ್ತು ಸ್ಟಾರ್ ಫಿಶ್' ಎಂಬ 2 ಬ್ರಿಟಿಷ್ ಸಬ್‌ಮೇರೀನ್ ನೌಕೆಗಳು ಸಕಾಲದಲ್ಲಿ ಹಿಂದಿರುಗಲಿಲ್ಲವಾಗಿ ಅವುಗಳು ನಾಶವಾಗಿರಬೇಕೆಂದು ನೌಕಾಶಾಖಾಧಿಕಾರಿಗಳು ಪ್ರಕಟಿಸಿದ್ದಾರೆ. ಜರ್ಮನಿಯ ಅಧಿಕಾರಿಗಳು—"ಸ್ಟಾರ್‌ಫಿಶ್ ಮತ್ತು ಆರ್‌ಫೈಫ್ ಎಂಬ ಎರಡು ಬ್ರಿಟಿಷ್ ಸಬ್‌ಮೇರೀನ್ ನೌಕೆಗಳನ್ನು ಮುಳುಗಿಸಲಾಯಿತು." ಎಂದು ಪ್ರಕಟಿಸಿದ್ದಾರೆ.

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಮರಣ್ ಚಮಃ ತ್ಯಾಗ.

ಲೇಖಕರು—ಆರ್ ಎಂ. ಮಲ್ಲಿಕಾರ್ಜುನಾರಾಧ್ಯ, ಶಿಪಟೂರು

ಬಹುಕಾಲದ ಹಿಂದೆ ಕಾಶೀನ್ಗರದಲ್ಲಿ ಸತ್ಯನಂದ ನೆಂಬ ಒಬ್ಬ ತಾಪಸೋತ್ತಮನು ಬೀದಿಯಲ್ಲಿ ಹೋಗುತ್ತಿರುವಾಗ ಜನರು ಗುಂಪುಕೂಡಿಕೊಂಡು, "ಇವೇ ನಪ್ಪಾ ಅನ್ಯಾಯ! ನಿನ್ನೆಯ ದಿವಸ ಜನ್ಮಾನಿಗ್ವವನು ಈ ದಿವಸ ಸತ್ತುಹೋದನೇ? ಈಗ ಕಾಲರಾ ರೋಗವು ಎಗ್ಗಿಡೆಯಲ್ಲಿಯೂ ವ್ಯಾಪಿಸಿಕೊಂಡು ಪ್ರತಿದಿನ ಸಾವಿ ರ ರು ಜನರು ಯಮಾಲಯಕ್ಕೆ ತೆರಳುತ್ತಿದ್ದಾರೆ. ಹೀಗಾ ಟ ಪ್ರಪಂಚವೆಲ್ಲವೂ ಅಶ್ಯಲ್ಪಕಾಲದಲ್ಲಿಯೇ ಹೇಳ ಹೆಸರಿಲ್ಲದಂತಾಗುತ್ತದೆ" ಎಂದು ಮಾತಾಡಿಕೊಳ್ಳು ತ್ತಿದ್ದರು ಹೀಗೆ ಜರಿದಾಡುತ್ತಿದ್ದುದನ್ನ ಈ ನನ್ನ ಸತ್ಯಾನಂದನು ಕೇಳಿ "ಇದೇನು" ಪ್ರಪಂಚದಲ್ಲಿ ಜನ ಸಂಖ್ಯೆಯು ವಿಕಸ್ಪಕಾರವಾಗಿ ಹೆಚ್ಚುತ್ತಲೂ ಕಡಿಮೆ ಯಾಗುತ್ತಲೂ ಇವೆಯಲ್ಲ! ಯಾವ ಯಾವ ರೀತಿಯಲ್ಲಿ ಜನರು ಕಾಲಸಿಗೆ ತುತ್ತಾಗಿ ಹೋಗಲಿ ತ್ತಾರೆ" ಎಂಬುದಾಗಿ ಯೋಚಿಸಿ ಪರಿಸಿದ್ದಾನೆಂದರೆ --ಹೀಗೆ ಜನರು ಸಾಯುತ್ತಿರುವುದನ್ನು ನೋಡಿದರೆ ಸಾವಿಗೆ ಇದಿ ಕಾರಿಯೊಬ್ಬನಿದ್ದಾನೆಂದು ಹೇಳಿದೆ ಇಲಿಕ್ಯಾಗುವವಿಲ್ಲ ಪರಿಪಾವನ ಜಗತ್ತನ್ನು ಪಾಲನೆಮಾಡುತ್ತಾನೆ ಜಗತ್ತಿಗೆ ಒಡೆಯನಾದವನೊಬ್ಬನಿರಬೇಕು ಎಂಬುದಾಗಿ ಪೂರ್ವದ ಇದ್ದವರೆ ಮರಣಾನಂತ್ರ ಜನನವಾಗುತ್ತಿರುವುದಕ್ಕೂ ಪುರು ಷರಿಗೆ ತಕ್ಕ ಪ್ರಮಾಣದಲ್ಲಿ ಸ್ತ್ರೀಯರಿರುವುದಕ್ಕೂ ರವಿ-ಚಂದ್ರ-ವಾಯು, ಋತು-ಪರಿವರ್ತನಗಳು ಕ್ರಮಬದ್ಧವಾಗಿ ತಮ್ಮ ತಮ್ಮ ಕಾರ್ಯಗಳನ್ನು ನಡಾಯಿಸುತ್ತಿರುವುದಕ್ಕೂ ದೇಶಕಾಲಗಳಿಗನುಗುಣವಾಗಿ ಕಾಲಕಾಲಕ್ಕೆ ಮಳೆ ಬೆಳೆ ಗಳಾಗುತ್ತಿರುವುದಕ್ಕೂ ಸರಿಯಾದ ಕಾರಣವನ್ನು ಹೇಳ ಲಿಕ್ಯಾಗುವದಿಲ್ಲ ಪರಿಪಾವನ ಹೊರತ ನುತ್ತಾರಿಂದ ಪ್ರಪಂಚವಲ್ಲಿ ಜನನಕ್ಕೆ ತಕ್ಕ ಸ ರಣವನ್ನೂ ಪುರುಷರಿಗೆ ತಕ್ಕಷ್ಟು ಸ್ತ್ರೀಯರನ್ನೂ ಸೃಷ್ಟಿಸಲಿಕ್ಕಾದೀತ್ಯ? ಪ್ರಪಂಚ ವ್ಯವಹಾರವನ್ನು ಸನ್ಯವಸ್ಥೆಯಿಂದ ನಡೆಯಿಸಬಕ್ಕ ಮತ್ತು ಜನಸಂಖ್ಯೆಯನ್ನು ಏರು ಇಳಿತವಿಲ್ಲದಂತೆ ಜ್ಞಾನ ತನದಿಂದ ಲೆಕ್ಕವಮಾಡತಕ್ಕ ಒಡೆಯನೊಬ್ಬನಿಲ್ಲದಿದ್ದರೆ, ಕೆಲವು ಸಮಯಗಳಲ್ಲಿ ಜನರು ಹೆಚ್ಚಾಗಿ ತುಂಬಿಹೋಗಿ ಬಹುದು ಇಲ್ಲವೇ ಜನರಿಗೇ ಇಲ್ಲದೆ ಜಗತ್ತು ಬರಿದಾ ಗಿಯೂ ಪ್ರಪಂಚವ್ಯವಹಾರವು ವ್ಯತ್ಯಾಸವಾಗಿಯೂ ಆಗ ಬಹುದು. ಕೆಲವು ಸಮಯಗಳಲ್ಲಿ ಪುರುಷಸಂತಾನವೇ ಹೆಚ್ಚಾಗಿಯೂ, ಇಲ್ಲವೇ ಸ್ತ್ರೀಸಂತಾನವೇ ಹೆಚ್ಚಾಗಿಯೂ ಹುಟ್ಟಬಹುದು. ಹೀಗೆಯೇ ಇನ್ನು ಳಿದ ಪಶುಪಕ್ಷಿ ಕ್ರಿಮಿ ಕೀಟಾದಿಗಳ ವಿಷಯವಲ್ಲಿ ಸಮಾಲೋಚನೆಮಾಡಿ ನೋಡಿದರೂ ಅಲ್ಲಿಯೂ ಜನನಕ್ಕೆ ತಕ್ಕ ಪ್ರಮಾಣದಲ್ಲಿ ಮರಣವೂ ಗಂಡು ಜಾತಿಗೆ ತಕ್ಕಷ್ಟು ಹೆಣ್ಣು ಜಾತಿಯೂ ಇರುತ್ತವೆ ಇದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿದರೆ ಜಗದೊಡೆಯನಾದ ಪರಿಪಾವನ ಅದ್ಭುತವಾದ ಶಕ್ತಿಯು ನಮಗೆ ತಿಳಿದುಬರುವದು.

ತಪಶ್ಶಕ್ತಿಗಳನ್ನು ಗಳಿಸಿದರೆ, ಮಹಾಮಹಾ ಪುರು ಷರು ಕಾಲಾಧೀನರೆಂದ ಸಂಗತಿಯೂ, ಮರಣ ಸಮಯ ದಲ್ಲಿ ಆವರಿಸಿದ್ದ ಮನೋಧರ್ಮವೂ ನಮಗೆ ಗೊತ್ತಾಗು ವದು ಉಳಿದ ಯಾವ ವಿಷಯವೂ ತಿಳಿದಂತೆ ನಮ್ಮ ಮನಸ್ಸಿಗೆ ವಿವೇಕವನ್ನು ಉಂಟುಮಾಡುವದಿಲ್ಲ. ಯಾರಾ ದರೂ ಮರಣ ಶಯ್ಯೆಯಲ್ಲಿರುವಾಗ ನೋಡಿದರೆ ಅವರು ಏನು ಮಾಡುತ್ತಾರೆ? ಏನು ಹೇಳುತ್ತಾರೆಂದು ನಾವು ಕುತೂಹಲದಿಂದ ನೋಡುತ್ತಲೂ ಕೇಳುತ್ತಲೂ ಇರು ತ್ತೇವೆ. ನಾವೂ ಎಂದಾದರೂ ಈ ಅವಸ್ಥೆಗೆ ಬಂದೇ ತೀರಬೇಕೆಂದು ತಿಳಿದುಕೊಂಡಿರುವುದೀಗ ಇದಕ್ಕೆ ಕಾರ ಣವು. ರಾಜನಾಗಿಯಬೂ, ಸುಂತ್ಯಾಗುವದೂ, ಪಂ ಡಿತನಾಗುವದೂ, ಹೆಣಗಾರನಾಗುವದೂ ಎಲ್ಲರಿಂದಲೂ ಸಾಧ್ಯವಿಲ್ಲ. ಆದರೆ, ಯಾವ ಕಾಲ ಹ್ಮುದರೂ ಸಾಯುವ ಕಾಲ ತಪ್ಪದೆಂಬಂತೆ ಶಿಕ್ಷ್ಯನಾಗೋ ಪಡ ವಾಗಿರೋ ಪ್ರತಿ ಜ್ಞಾನಿಯೂ ಸತ್ಯೇತಾಯಿಳು. ಈ ಪ್ರಪಂಚದಲ್ಲಿ ಹುಟ್ಟಿದ ನಾವೆಲ್ಲರೂ ಪ್ರಯಾಣಿಕ ರೆಂದು ತಿಳಿಯಬೇಕು; ಆದ ಪ್ರಯುಕ್ತ ನನ್ನ ಆಯುಃ ಪರಿಮಿತಿಯಲ್ಲಿ ನಾವು ಯಾವ ಮಾರ್ಗದಲ್ಲಿ ಹೋಗುತ್ತಿ ದ್ದೇವೆಂದು ಸ್ಪಷ್ಟವಾಗಿ ಎಚ್ಚರಿಕೆಯಿಂದ ಪರೀಕ್ಷಿಸಿಕೊಳ್ಳುತ್ತಿರಬೇಕು. ಈ ಅಲೋಚನೆಯೊಂದರಿಂ ದಲೇ ಜಗತ್ತಿನಲ್ಲಿ ದ್ವೇಷಾಸೂಯೆಯೂ, ಲೋಭವೂ, ಅಕಯೂ ತಗ್ಗುಬೇಕು

ವಾಚಕ ಮಹಾಶಯರೇ! ಮಡಿದುಹೋದ ನಮ್ಮ ಅಪ್ಪೇಷ್ಟರಿಗಾಗಿ ಬಿತಿಮಿಾರಿ ದುಃಖಿಸಬಾರದು; ಅವರು ಸತ್ತುಹೋದವರಲ್ಲ, ಹುಟ್ಟಿದವರೆಲ್ಲರೂ ಹೋಗಲೇ ಕಾದ ಮಾರ್ಗವನ್ನೇ ಹಿಡಿದಿದ್ದಾರೆಂದು ತಿಳಿಯಬೇಕು. ಒಂದಾನೊಂದು ದಿವಸ ನಾವೂ ಸಹ ಆ ಪಯಣಾವನ್ನು ಮಾಡಲೇಬೇಕು ನಮ್ಮ ಜೀವನವು ಯಾತ್ರೆಯೆಂದೂ, ಈ ಯಾತ್ರೆಯನ್ನು ಮಾಡುವವರೆಲ್ಲರೂ ಬೇರೆ ಬೇರೆಯು ವರಂಪರೆ ಕೆಲವು ಕಾಲದವರೆಗೆ ಒಂದೆಡೆಯಲ್ಲಿ ಕೂಡಿರು ವರೆಂದೂ, ರಾತ್ರಿ ಒಂದು ಮರದಲ್ಲಿ ಹಲವು ಪಕ್ಷಿಗಳು ಕೂಡಿದ್ದು ಬೆಳಗಾಗುತ್ತಲೇ ಚದುರುಹೋಗುವಂತೆ ತಮ್ಮ ತಮ್ಮ ದಾರಿಯನ್ನು ಹಿಡಿದು ಹೋಗುತ್ತಾರೆಂದೂ, ಮರಣ ವೆಂದರೆ—ಪಕ್ಷಿಯು ಗೂಡಿನಿಂದ ಹಾರಿಹೋಗುವಂತೆ ಜೀವಾತ್ಮನು ಜಡದೇಹ ಪಂಜರದಿಂದ ಬಿಡುಗಡೆ ಹೊಂದುತ್ತಾನೆಂದೂ ತಿಳಿಯಬೇಕು.

ಜಗತ್ತಿನ ಜನರೆಲ್ಲರೂ ಯಾತ್ರಿಕರೀಲು ಬಗ್ಗೆ ಒಂದು ಕಥೆ ಯು ಅಜೀತನೆಂದರೆ,— ಶಾಂಒಸಾಗರನೆಂಬ ಓರ್ವ ಭೈರಾಗಿಯು ಹಳ್ಳಿಗೆ ಏಕ ರಾತ್ರಿ ಸಟ್ಟುಣಕ್ಕೆ ಪಂಚ ರಾತ್ರಿಯಂತೆ ಸಂಚಾರವಾಡುತ್ತ, ಒಬ್ಬ ರಾಜನ ಆರಮನೆಗೆ ಬಂದು ಇವೊಂದು ದೊಡ್ಡ ಛತ್ರವೆಂದು ತಿಳಿದು ಮಲಗಿಕೊಂಡನು ಆಶ್ಚರ್ಯಲ್ಲಿ ಪರಿವಾರ ದವರು ಬಂದು ಭೈರಾಗಿಯನ್ನು ನೋಡಿ, ಇದೇನೀ ಆಸಂಗತ? ನೀನಾರು? ಇಲ್ಲಿಗೇತಕ್ಕೆ ಬಂದಿದ್ದೀಯೆ? ಹೊರಡು, ಹೊರಡು! ಎಂದು ಬೆದರಿಸಿದರು. ಆಗ ಭೈರಾಗಿಯು ಆಪ್ಪಗಳಾ, ನೀನೇಕೆ ಹೀಗೆ ತಿರುಕನಾದ ನನ್ನನ್ನು ಸೀಡಿಸುತ್ತೀರಿ? ನಾನು ಈ ಛತ್ರದಲ್ಲಿ ಈದಿನ ಬಿದ್ದು ಬೆಳಿಗ್ಗೆ ಮುಂದಕ್ಕೆ ಹೊರಡುತ್ತೇನೆ. ನೀವು ಸುಮ್ಮನೆ ಸುಮ್ಮನೆ ನನಗೆ ಹಿಂಸೆ ಮಾಡಬೇಡಿರಿ ಎಂದನು. ಆವನ ಮಾತುಗಳನ್ನು ಕೇಳಿ ಆಳುಗಳಿಗೆ ಸಿಟ್ಟು ಬಂದು ಆಯ್ಯಾ, ನಿನಗೇನು ಹುಚ್ಚುಹಿಡಿದಿದೆಯೋ? ಇದು ಆ ನಗರದ ರಾಜನ ಆರಮನೆಯು; ಛತ್ರವಲ್ಲ! ಆದುದ ರಿಂದ ಇಲ್ಲಿರಕೂಡದು; ಎದ್ದು ಹೊರಡು ಎಂದರು. ಆ ಸಮಯಕ್ಕೆ ಸರಿಯಾಗಿ ರಾಜನು ಅಲ್ಲಿಗೆ ಬಂದನು. ಭೈರಾಗಿಯೂ ತಮ್ಮ ಅಳುಗಳಿಗೂ ನಡೆಯುತ್ತಿದ್ದ ಮಾತು ಗಳೆಲ್ಲವನ್ನೂ ಕೇಳಿ ಭೈರಾಗಿಯ ಕಡೆಗೆ ತಿರುಗಿ, ಏನಯ್ಯಾ ಹೀಗೆ ನೈಮನೇಲೆ ಪ್ರಶ್ನೆಇಲ್ಲದವನಂತೆ ಮನೆ ಸ್ತೀ ಮಾತನಾಡುತ್ತಿದ್ದೀಯೆ? ಇದು ಆರಮನೆ, ಇಷ್ಟು ಕೂಡ ನಿನಗೆ ತಿಳಿಯದೇ? ನಿನಗೆ ಇಷ್ಟು ಬುದ್ಧಿಯೂ ಇಲ್ಲವೇ ಎಂದನು ಶಾಂತಿಸಾಗರನು ರಾಜನು ಹೇಳಿದು ದನ್ನು ಶಾಂತತೆಯಿಂದ ಕೇಳಿ, ಮಹಾರಾಜಾ! ನನಗೆ ಒಂದೆರಡು ಮಾತುಗಳನ್ನಾಡಲಿಕ್ಕೆ ಅಪ್ಪಣೆ ಕೊಡಬೇಕೆ ನೆಲಾಗಿ, ರಾಜನು ಆಗಲಿ, ನೀನು ಹೇಳುವದಾದರೂ ಏನು ಹೇಳು ಎಂದನು.

ಸಜ್ಞಾಸಿ—ಮಹಾರಾಜರೇ, ನೀವು ಹೇಳುವ ಈ ಆರಮನೆಯು ಯಾರದು?

ರಾಜ—ನಮ್ಮದು.

ಸ—ಇದನ್ನು ಕಟ್ಟಿದಾಗ ಇಲ್ಲಿ ವಾಸಮಾಡುತ್ತಿ ದ್ದವರಾರು?

ರಾ—ನಮ್ಮ ಹಿರಿಯರು

ಸ—ಪ್ರಭುವೇ, ತಮಗೆ ಹಿಂದೆ ಇಲ್ಲಿ ಯಾರಿದ್ದರು?

ರಾ—ತಮ್ಮ ತಂದೆಯವರು.

ಸ—ಇಗ ಯಾರು ವಾಸಮಾಡುತ್ತಿದ್ದಾರೆ?

ರಾ—ನಾವು.

ಸ—ತಮ್ಮ ಅಕಂತರ ವಾಸಮಾಡಬಕ್ಕವರಾರು?

ರಾ—ನನ್ನ ಮಗನು.

ಸ—ತಮ್ಮ ಮಗನ ಆಕಂತರ.

ರಾ—ಆವನ ಮಕ್ಕಳು ಆಂತುರ್ತರವಿತ್ತನು.

ಇದನ್ನೆಲ್ಲಾ ಕೇಳಿದ ಸಾಧುವು ಭೂಪತಿಯೆ, ಹಾಗಾ ದರೆ ಇದು ನಿಜವಾಗಿಯೂ ಆರಮನೆಯಲ್ಲ; ಛತ್ರವೇ ಸರಿ; ನಾನು ಸರಿಯಾಗಿಯೇ ತಿಳಿದುಕೊಂಡು ಇಲ್ಲಿ ಮಲಗಿರುತ್ತೇನೆ. ನಾನು ಪಶುವಲ್ಲ ಎಂದನು. ಆ ಸಾಧು ವಿನ ವಿಲಕ್ಷಣವಾದ ಮಾತನ್ನು ಕೇಳಿದ ರಾಜನು ಬಹು ಆಶ್ಚರ್ಯಾನ್ವಿತನಾಗಿ, ಆಯ್ಯಾ ಸಾಧುವೇ! ಇದೇನು? ನೀನು ಹೀಗೆ ಹೇಳುತ್ತಿದ್ದೀಯೆ! ನಿನ್ನ ಮಾತು ಆಶ್ಚರ್ಯಕರವಾಗಿದೆ. ಅದನ್ನು ಬಿಡಿಸಿ ಹೇಳಿರಿ ಎಂದನು. ಆದಕ್ಕೆ ಸಾಧುವು ಪ್ರಭುವೇ, ಸಾವಧಾನಚಿತ್ತದಿಂದಾಲಿಸ ಬೇಕು. ಈ ಸ್ಥಳದಲ್ಲಿ ಪ್ರಥಮತಃ ತಮ್ಮ ಹಿರಿಯ ರಿದ್ದರು. ಆವರ ತರುವಾಯ ತಮ್ಮ ತಂದೆಯವರಿದ್ದರು. ಪ್ರಕೃತದಲ್ಲಿ ತಾವಿರುತ್ತೀರಿ. ತಮ್ಮ ಆನಂತರ ತಮ್ಮ ಕುಮಾರರಿರುತ್ತಾರೆ. ಈ ಪರಿಯಲ್ಲಿ ಇಲ್ಲಿ ಒಬ್ಬರಾದ ನಂತರ ಒಬ್ಬರು ಇರುತ್ತಿದ್ದಾರೆ. ಯಾರೊಬ್ಬರೂ ಇಲ್ಲಿಯೇ ನೆಲೆಯಾಗಿರುವದಿಲ್ಲ. ಇದರಂತೆಯೇ ಭೂತ ದಲ್ಲಿಯೂ ಈ ದಿವಸವಿದ್ದವರು ನಾಳೆ ಇರುವದಿಲ್ಲ. ನಾಳೆ ಬಂದವರು ನಾಡಿದು ಹೊರಟುಬಿಡುವರು. ಈ ರೀತಿಯಾಗಿ ಬೇರೆ ಬೇರೆ ಜನರು ಬರುತ್ತಾ ಹೋಗುತ್ತಾ ಇರುವ ಈ ರಾಜವಾಡೆಯು ಛತ್ರವಲ್ಲದೆ ಮತ್ತೇನು? ಅಪ್ಪಣೆ ಯಾಗಲಿ ಎಂದನು. ಆಗ ರಾಜನು ಭಯಾನ್ವಿತನಾಗಿ ಮಹಾಸ್ವಾಮಿ, ತಮ್ಮ ಮಾತು ಸತ್ಯವಾದುದು. ಆತಿಥಿ ಪೀಡಾಭಿಮಾನದಿಂದಲೂ, ರಾಜ್ಯಕೋಶಗಳ ಸಂಪತ್ತಿನಿಂದಲೂ 'ನಾಮ ನನ್ನ' ದೆಂಬ ಅಹಂಕಾರ ಮಮಕಾರಗಳಿಂದಲೂ ಕೂಡಿ ದುರ್ಮದಾಂಧತೆಯಿಂದ ಕಣ್ಣು ಕಾಣದೆ ನಡೆಯುತ್ತಿರುವ ವಿವೇಕ ಹೀನನಾದ ನನಗೆ ನೀವೇ ಮಾರ್ಗದರ್ಶಕರು. ನನ್ನ ಸರ್ವಾಪರಾಧ ವನ್ನು ಮನ್ನಿಸಿ ನನಗೆ ಜ್ಞಾನೋಪದೇಶವನ್ನು ಮಾಡ ಬೇಕೆಂದು ಬೇಡಿಕೊಂಡನು.

ರಾಜನೇ! ನೀನು ರಾಜನೆಂದೂ ಇತರರು ನಿನ್ನ ಸೇವೆ ಮಾಡತಕ್ಕವರೆಂದೂ ತಿಳಿದಿರುವೆಯಲ್ಲವೆ? ಈ ಸೇವ್ಯ ಸೇವಕ ಭಾವವು ಶಾಶ್ವತವಾದುದಲ್ಲ. ರಾಜ್ಯ ಕೋಶ ಗಳೂ, ಸತ್ಕೀ ಸುತಾದಿಗಳೂ ಶಾಶ್ವತವಲ್ಲ. ಏಕೆಂದೆಯೊ? ಇಂದು ರಾಜನಂತಿರುವ ನೀನು, ನಾಳೆ ಬಡತನ ಬಂದು ಬಿಟ್ಟೆಯು ಆಲಾದರೆ, ಆಗ ಈ ಸೇವ್ಯಭಾವವು ನಿಲ್ಲಲಿಕ್ಕ ವಷ್ಟೆ! ನಿಜವಾದ ಸೇವ್ಯ ಸೇವಕ ಭಾವವು, ಪರಮಾತ್ಮ ನಿಗೂ ಜೀವಾತ್ಮನಿಗೂ ಇರುವದಲ್ಲದೆ ಅನ್ಯಥಾ ಇಲ್ಲ ನಿಜವಾದ ಧನವೆಂದರೆ, ಜ್ಞಾನಧನವು. ಇದರ ತಕ್ಕ ವನ್ನು ತಿಳಿದವನಾಗು ಎಂದನು. ಸ್ವಾಮಿ! ಆತ್ಮ ಎಂದ ರೇನು? ಆತ್ಮನನ್ನು ತಿಳಿಯುವ ಬಗೆ ಹೇಗೆ? ಹಾಗೆ ತಿಳಿ ಯುವುದರಿಂದೇನಾಗುವದು? ಎಂದು ಬೇಡಿಕೊಂಡನು.

ಎಲೈ ರಾಜನೇ! ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆ ಗಳಿಗೆ ಸಾಕ್ಷೀಭೂತನಾಗಿಯೂ, ಅಪ್ಪತ್ಯೈಕ್ಯಯ ಗೋಚರ ನಾಗಿಯೂ, ಅನ್ನ-ಪ್ರಾಣ-ಮನೋ-ವಿಜ್ಞಾನಾನಂದಾದಿ ಪಂಚಕೋಶ ವಿಲಕ್ಷಣನಾಗಿಯೂ ಇರುವನೆನೇ ಆತ್ಮ ನೆನಿಸುವನು. ಯಾವನು ಅನೇಕ ಜನ್ಮ ಸಂಸಿದ್ಧಿಗಳ ಮೂಲಕವಾಗಿ ಪ್ರಾಪ್ತವಾದ ಸದ್ಗುರುವಿನ ಉಪದೇಶ ದಂತೆ ನಡೆಯುವನೋ ಅವನು ಆತ್ಮನಾತ್ಮ ವಿವೇಕ ದಿಂದ ಜನನ ಮರಣರೂಪ ಸಂಸಾರ ಬಂಧನದಿಂದ ಮುಕ್ತನಾಗಿ, ಬ್ರಹ್ಮಾನಂದಸುಖವನ್ನನುಭವಿಸುವನು. ತಿಳಿಯುತೇ ಎಂದನು.

ಆಗ್ಗೆ ರಾಜನು-ಮಹಾಗುರುವೇ! ಮನಸ್ಸು ಜೀವನ ಬಂಧ ಮೋಕ್ಷಗಳಿಗೆ ಕಾರಣವಾಗಿರುವೆಂದು ಜ್ಞಾನಿಗಳು ಹೇಳುವರಲ್ಲ, ಅದು ಹೇಗೆ? ಎಂದನು. ಆಗ ಸಾಧುವು

ರಾಜೇಂದ್ರನೇ! ಈ ಮನಸ್ಸು, ಸತ್ವರಜಸ್ತಮೋಗುಣಗಳ ವಶವಾಗಿರುವವರೆಗೆ, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳ ಅಧಿಕಾರಕ್ಕೊಳಪಟ್ಟುದಾಗಿ ಸುಖದುಃಖಜಾಲದಲ್ಲಿ ಮುಳುಗೇಳುತ್ತ ನಾನಾವಿಧವಾದ ಉಚ್ಚನೀಚಕರ್ಮಗಳನ್ನು ಮಾಡುತ್ತಲೇ ಇರುವದು. ಈ ಮನಸ್ಸೇ ಜನನ ಮರಣಗಳಿಗೂ ಬಂಧ ಮೋಕ್ಷಗಳಿಗೂ ಹೇಗೆ ಕಾರಣವಾಗುವದೆಂಬುದನ್ನು ಸೂಕ್ಷ್ಮವಾಗಿ ಹೇಳುವೆನು ಕೇಳು! ಮನಸ್ಸಿನಲ್ಲಿ ಮೊದಲು ಜೀವನ ಕರ್ತೃರಂಭ ಬದ್ಧದಿಂದ ವಿಷಯವಾಸನೆಯುತ್ಪನ್ನವಾಗುವದು. ಅನಿಲಿಕೆ ಅದು ಗಟ್ಟಿಯಾಗಿ ಅಹಂಕಾರಮಮಕಾರಗಳ ಫಲವೇ! ಮುಖ್ಯವಾಗಿ ಇವುಗಳೆಲ್ಲಕ್ಕೂ ಕಾರಣವಾದ ಕರ್ಮಸಂಬಂಧಕ್ಕೂ ತನಗೂ ಸಂಬಂಧವಿಲ್ಲವೆಂದು ಮನಸ್ಸಿನಿಂದ ನಡೆಯಿಸಲ್ಪಡತಕ್ಕ ಸಮಸ್ತ ಕಾರ್ಯಗಳಿಗೂ ಸಾಕ್ಷಿಯಾಗಿ ಸ್ವತಂತ್ರನಾಗಿ ಸಮಸ್ತ ಅನರ್ಥಗಳಿಗೂ ಕಾರಣವಾದ ಅಹಂಕಾರವನ್ನು ಸಂಪೂರ್ಣವಾಗಿ ಪರಿತ್ಯಜಿಸಿ ಸಮಸ್ತ ಪ್ರಪಂಚಕ್ಕೂ ಆದಿಕಾರಣನೂ, ಸ್ವಯಂಪ್ರಕಾಶ ವ್ಯಾಪಕನೂ, ಸರ್ವಶಕ್ತಿಸ್ವತಂತ್ರನೂ, ಬ್ರಹ್ಮಾದಿಗಳಿಗೂ ನಿಯಾಮಕನೂ ಆಗಿರುವನು ಈ ಅಭಿಪ್ರಾಯವನ್ನು ಮನದಲ್ಲಿ ನಿಶ್ಚಯಗೊಳಿಸಿ, ಅದರಿಂದ ಜಜ್ಞಿಸಿಕಾರ ಮಮಕಾರಗಳನ್ನೂ, ದೇಹಾಭಿಮಾನಾದಿಗಳನ್ನೂ, ಕಾವಸಾದಿ ಪಡ್ಡೈರಿಗಳನ್ನೂ ನೀಗಿ ಆನಸ್ಸು ಶುದ್ಧಿಗೊಳಿಸಿ ಮೋಹನಿಯೇ ಮನಸ್ಸು ಕರ್ಮಯೋತ್ರನಿಯಂತ್ರಿತವಾದ ಸಂಸಾರಚಕ್ರದಲ್ಲಿ ಸುತ್ತುವ ಈ ವೈಧರ್ಕಾರ್ಯವನ್ನು ತ್ಯಜಿಸಿ ಭಗವತ್ಸಾರಾಗುವದು ಆಲ್ಲಿಯವರೆಗೆ ಮನಸ್ಸಿಂ ಇಲ್ಲನೆಂದು ತಿಳಿ. ಎಲೈ ರಾಜನೇ! ಲಯಸ್ಸಿನ ಬಹುಭಾಗವು ಕಳೆ ಮಹೋಯಿತು. ಇನ್ನಾದರೂ ಅಹಂಕಾರ ಮಮಕಾರಗಳನ್ನು ತ್ಯಜಿಸು. ವಹಿಶಾದಿವಿಷಯಗಳನ್ನು ಸಮನದಂತೆ ಕಾಣು. ಪಾಂಚೇಂದ್ರಿಯಗಳ ಉಲ್ಬಣವನ್ನು ನಿಲ್ಲಿಸು ಸಮಸ್ತ ಭೂತಗಳಲ್ಲೂ ಸ್ನೇಹ ಪ್ರೇಮಗಳನ್ನು ಅಭ್ಯಸಿಸಿ ಸನ್ಮತಿಯನ್ನು ಸಾಧಿಸು ಎಂದು ಬೋಧಿಸಿದನು

ಆ ಸಾಧುವಿನ ಅಮೃತವಾಕ್ಯಗಳನ್ನು ಕೇಳಿದ ರಾಜಮ, ಕಣ್ಣಾಗಳಿಂದ ಆನಂದಾಶ್ರುಗಳನ್ನು ಸುರಿಸುತ್ತ ಪದೇಪದೇ ನಮಸ್ಕರಿಸುತ್ತ, ಮಹಾತ್ಮಾ-ನನ್ನ ಜನ್ಮವು ಇಂದಿಗೆ ಸಾರ್ಥಕವಾಯಿತು. ಸೃಷ್ಟಿಯಲ್ಲಿ ತ್ರೈತ್ಯತರವಾದ ಮನುಷ್ಯ ಜನ್ಮವನ್ನು ಎತ್ತಿಯೂ ಕಾಮಕ್ರೋಧಾದಿಗಳಿಗೂ, ದುರ್ಮೋಹಾದಿಗಳಿಗೂ, ಒಳಗಾಗಿ ಭವಾಂಧಕೂಪದಲ್ಲಿ ಬೀಳಿತ್ತಿದ್ದ ನನಗೆ ಸದ್ಗೋಚೆಯಿಂದ ಜ್ಞಾನನೇತ್ರಗಳನ್ನು ದಯಪಾಲಿಸಿದ ತಾವು ಪ್ರತ್ಯಕ್ಷದೇವರೇ ಆಗಿದ್ದೀರಿ. ತಮ್ಮ ಕೃಪೆಯು ಅಗಾಧವಾದುದು. ಗುರುವೇ! ತಮ್ಮಂತಹ ಲೋಕಹಿತೈಷಿಗಳಾ ರೂಪವನ್ನು ಮರೆಯಿಸಿಕೊಂಡು ಸಂಚರಿಸುವ ಮಹಾತ್ಮರಿಗೆ ವೀರ್ಘದಂಡ ಪ್ರಣಾಮ ಮಾಡುವೆನು, ಎಂದು ಹೇಳುತ್ತ ವಿಧ್ಯುಕ್ತವಾಗಿ—ಅರ್ಘ್ಯ ಪಾದ್ಯಾದಿಗಳಿಂದ ಪೂಜಿಸಿ ಕೈಮುಗಿದು ನಿಂತುಕೊಂಡು, ಗುರುವೇ, ನೀನಿಗೆ ಈ ರಾಜ್ಯಕಳತ್ರ ಸಖ-ಪುತ್ರರು ಯಾರೂ ಬೇಡ, ತಮ್ಮ ಸಂಗತ ಬಯತ್ತೇನೆ ಅಪ್ಪಣೆಯಾಗಬೇಕೆಂದು ಬೇಡಿಕೊಂಡನು. ಎಲೈ ರಾಜನೇ ಬೇಡ! ಇಲ್ಲಿಯೇ ಇದ್ದು ಕೊಂಡು ತತ್ತ್ವಾಭ್ಯಾಸಮಾಡುತ್ತಾ ಜನಕಾದಿಗಳಂತೆ ವಿದೇಹ ಮುಕ್ತಿಯನ್ನು ಪಡೆಯುವವರಾಗು ಎಂದು ಹೇಳಿ ತರಸಿ ಹೋಗು ಹೋದನು ಇತ್ತ ರಾಜನು ಕತ್ಯಜಿಂತನೆಯಿಂದ ಪಂಚೇಂದ್ರಿಯಗಳನ್ನು ಜಯಿಸಿ, ಕಾವಮಿದ ಪತ್ನಿಪುಗಳನ್ನು ನಿಗ್ರಹಿಸಿ, ಪರಮಾತ್ಮನ ಸಾದಾರಾಧನೆಗಳಲ್ಲಿ ಚಿತ್ತವನ್ನು ನೆಲೆಗೊಳಿಸಿ ಸದ್ಗತಿಯನ್ನು ಹೊಂದಿದನು.

ಇದರಿಂದ ಮರಣನೆಂಬುದು ಇತಲೋಕದಿಂದ ಪರಲೋಕಕ್ಕೆ ಪ್ರಯಾಣಮಾಡುವ ಹಾದಿಯೇ ಹೊರತು ಮತ್ತಾವದೂ ಅಲ್ಲ ಪ್ರಪಂಚದಲ್ಲಿ ಜನರು ಊರಿಂದೂರಿಗೆ ಪ್ರಯಾಣಮಾಡಬೇಕಾದರೆ ಹಣ ಮತ್ತು ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಹೊರಡುತ್ತಾರೆ. ಆದರೆ ಈ ಪರಲೋಕಪ್ರಯಾಣವು ಎಷ್ಟು ದೂರವಿರುವದೋ, ಎಷ್ಟು ದಿನಗಳಾಗುವವೋ, ಯಾರೂ ಅರಿಯರು. ಆದರೆ ಇಹಲೋಕವ್ಯಾಪಾರವನ್ನು ಮುಗಿಸಿಕೊಂಡು ಹೊರಟ ಯಾರೊಬ್ಬರೂ ಹಿಂದಿರುಗಿ ಬಂದಿರುವುದಿಲ್ಲ. ಆದಕಾರಣ ಈ ಪ್ರಯಾಣಕ್ಕೆ ಬೇಕಾದುದನ್ನು ಅಣಿಮಾಡಿಕೊಳ್ಳಬೇಕಾದರೆ, ದೀರ್ಘಕಾಲವು ಬೇಕಾಗುತ್ತದೆ ಈ ಕಾರಣದಿಂದಲೇ ಜ್ಞಾನಿಗಳು ಈ ರೀತಿ ಜಗತ್ತಿಗೆ ಉಪದೇಶಮಾಡಿರುತ್ತಾರೆ—ಜನರು ಒಂದು ವರ್ಷದವರೆಗೆ ಉಂಂಟ್ಟು ಸುಖವಾಗಿರಬೇಕಾದರೆ ಎಂಟು ತಿಂಗಳು ಕಷ್ಟಪಟ್ಟು ದುಡಿಯಬೇಕು; ಸಂಜೆಯ ಊಟಕ್ಕಾಗಿ ಹಗಲೆಲ್ಲ ಸ್ಟೆಮುರಿದು ಕೆಲಸಮಾಡಬೇಕು. ಮುಪ್ಪಿನಲ್ಲಿ ಸುಖವಾಗಿರಬೇಕಾದರೆ ಪ್ರಾಯದಲ್ಲಿ ತುಂಬಾ ಕಷ್ಟಪಡಬೇಕು ಪರಲೋಕದ ಪ್ರಯಾಣಕ್ಕೆ ಕಟ್ಟೆ ಬೇಕಾದ ಬುತ್ತಿಗಾಗಿ ನಮ್ಮ ಆಯುಃಪರಿಮಿತಿಯನ್ನೆಲ್ಲಾ ನ್ಯಯಮಾಡಿ ಕೆಲಸಮಾಡಬೇಕು. ಇದರಿಂದ ಮಾನವ ನಾದವನು ಹುಟ್ಟುವಂದಿನಿಂದ ಸಾಯುವವರೆಗೂ ತನ್ನನ್ನು ತಿದ್ದಿಕೊಳ್ಳುವುದರಲ್ಲಿ ಮತ್ತಿಯನ್ನುತ್ತಲೇ ಇರಬೇಕೆಂದು ಜನ್ಮಾಗಿ ತಿಳಿಪಡಿಕೆ ಆಯಿತು ಈ ಉಪದೇಶದಲ್ಲಿ ತುಂಬಾ ಗಹನವಾದ ವಿಷಯವು ಗರ್ಭೀಕರಿಸಿಕೊಂಡಿರುವದು ಏಕೆಂದರೆ, ಲೋಕಹಿತ ಕಾರ್ಯಗಳನ್ನು ತನ್ನ ಕರ್ತೃತ್ವಭಿನ್ನವಾಗಿ ಕೌರ್ಯೋದಾರ್ಯಗಳಿಂದ ನೆರವೇರಿಸಿ, ನಾನು, ನನ್ನದೆಂಬ ಅಹಂಕಾರ ಮಮಕಾರಗಳನ್ನು ತೊರೆದು, ಎಲ್ಲಿರಲ್ಲಿಯೂ ತಾರತಮ್ಯವಿಲ್ಲದೆ ಏಕರೀತಿಯಾಗಿ ನರ್ತಿಸುತ್ತ, ಕಾರ್ಯಕ್ರಮವಲ್ಲಿ ಲಭ್ಯವಾಗುವ ಸುಖಗಳನ್ನು ಭೋಗಿಸುತ್ತ, ಸುಖಕ್ಕಾಗಿಯೇ ದುಡಿಯದಿರತಕ್ಕ ಮನುಜನೀಗ ಪರಲೋಕದ ಪ್ರಯಾಣ ವೆಂದರೆ ಪ್ರಿಯಮಿತ್ರನ ಮನೆಗೆ ಹೋಗುವಂತೆ ಧಾವಿಸಿ ಕೊಂಡು ಸಂತೋಷಚಿತ್ತದಿಂದಿರುವನು ಈ ವಿಷಯದಲ್ಲಿ ಮತ್ತೊಬ್ಬ ಜ್ಞಾನಿಯು ಈ ರೀತಿಯಾಗಿ ಹೇಳಿರುತ್ತಾನೆ— ನೋನವನು ಹುಟ್ಟಿ ತಾಯಿಯ ಪಕ್ಕದಲ್ಲಿ ಬಿದ್ದು ಅಪಹಾಯನಾಗಿ ಅಳುತ್ತಲಿರುವ ಸಮಯದಲ್ಲಿ ಆಪ್ತೇಷ್ಟರು ಸುತ್ತುಗಟ್ಟಿಕೊಂಡು ನಗುತ್ತಲಿರುವಂತೆ, ಹೇ, ಮಾನವನೇ, ನಿನ್ನ ಮರಣಕಾಲದಲ್ಲಿ ನಿನ್ನ ಸುತ್ತಮುತ್ತಲೂ ಬಂಧುಗಳೂ ಮಿತ್ರರೂ ನೆರೆದು ನಿನ್ನ ಅಗಲಿಕೆಗಾಗಿ ಪರಿತಪಿಯಿಂದ ಅಳುತ್ತಲಿರುವಾಗ ನೀನು ನಗುತ್ತಲಿರುವಂತೆ, ಹೇ, ಮಾನವನೇ, ನಿನ್ನ ಮರಣಕಾಲದಲ್ಲಿ ನೀನು ಸುತ್ತಮುತ್ತಲೂ ಇರುವ ಜನನ ಮೊದಲ್ಗೊಂಡು ಮರಣಪರ್ಯಂತವೂ ಇರಬೇಕಾದ ನಡವಳಿಕೆಯು ಅಡಕವಾಗಿರುವದು. ಈರೀತಿಯಾಗಿ ಅಂತ್ಯಕಾಲದಲ್ಲಿ ಮಾನವನು ಶಾಂತತೆಯಿಂದಿರಬೇಕಾದರೆ ಅದಕ್ಕಾಗಿ ಅವನು ಜೀವಿತಕಾಲವನ್ನೆಲ್ಲ ಹೇಗೆ ವ್ಯಯಮಾಡಿರಬಹುದೆಂಬುದು ಸುಮತಿಗಳಿಗೆ ಅರಿಯದ ವಿಷಯವಲ್ಲ. ಆದಕಾರಣ, ತನ್ನ ಪುರೋಭಿವೃದ್ಧಿಯಂ ಬಯಸತಕ್ಕವನು ನಾನು, ತನ್ನದು ಎಂಬ ಅಹಂಕಾರಮಮಕಾರಗಳನ್ನು ತೊರೆದು ಕರ್ತೃತ್ವ—ಭೋಕ್ತೃತ್ವಗಳಿರಹೂ ನನಗೆ ಸಂಬಂಧಪಟ್ಟವುಗಳಲ್ಲವೆಂದು ತಿಳಿದು ಸಂಸಾರದ ಹೊಲಬನ್ನು ಕಡಿಮೆಮಾಡಿಕೊಂಡು ಕೆಸರಿನಲ್ಲಿರುವ ಕುಂಭಾಶುಳುವಿನಂತಿದ್ದು ಸತ್ಸಂಗವನ್ನು ಸಂಪಾದಿಸಿ, ಪರಿತಿವನನ್ನು ಸದಾ ಧ್ಯಾನಮಾಡುತ್ತ ಅವನ ಮಹಿಮಾತಿಶಯಗಳನ್ನು ಅರುಹುವ ಅಧ್ಯಾತ್ಮಿಕ ಗ್ರಂಥಗಳನ್ನು ಪರಿತಿಲನಿಸಮಾಡತ್ತ ಕಾಲಯಾಪನೆಯನ್ನು ಮಾಡುತ್ತಿರಬೇಕು. ಮತ್ತು ಪಂಚಭೂತಾತ್ಮಕವಾದ ಈ ಸ್ಥೂಲದೇಹವು ಬಿದ್ದುಹೋಗುವ ಕಾಲ ಬಂದರೆ ಇದುವರೆಗೂ ಅರ್ಜಿಸಿಕೊಂಡುಬಂದ ಲೌಕಿಕ ಧ್ಯಾತ್ಮಿಕವಿದ್ಯೆಗಳ ಪ್ರಭಾವದಿಂದ ಮನಸ್ಸಿನಲ್ಲಿ ಬೇರಾವ ದೊಂದು ಚಿಂತೆಯನ್ನಿಟ್ಟುಕೊಳ್ಳದೆ ಪರಿತಿವನ ತಾಮ ಸ್ಮರಣೆಯನ್ನು ಮಾಡುತ್ತ ಮೋಸವನ್ನು ಬಿಟ್ಟು ಪರಮ ಪದವನ್ನು ಪಡೆಯಬೇಕು. ಇದು ಮಾನವಜನ್ಮವನ್ನು ಸಾರ್ಥಕಪಡಿಸಿಕೊಳ್ಳುವ ರೀತಿ

॥ ಶ್ರೀ ಜಗನ್ಗುರು ಪಂಚಾಚಾರ್ಯಾ ಪ್ರಸೀದಂತು ॥

ಶ್ರೀಕ್ಷೇತ್ರ ಗೊಡಚಿ ವೀರಭದ್ರದೇವರ ರಥೋತ್ಸವ

ಪ್ರತಿವರ್ಷ ಪದ್ಧತಿಯಂತೆ ಈ ವರ್ಷ ಮಾರ್ಗಶೀರ್ಷ ಶು|| ೧೫ ಮಂಗಳವಾರ ಶ್ರೀ ವೀರಭದ್ರದೇವರ ರಥೋತ್ಸವವು ಅತ್ಯಂತ ವೈಭವದಿಂದ ನೆರವೇರಿತು.

ಬೋಡೀನವರು ಜನರ ವಸತಿಗೆ ಬೇಕಾಗುವ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದರು ಹಳ್ಳದಲ್ಲಿ ನೀರು ತಲಕೆ ಜನರ ಆರೋಗ್ಯಕ್ಕೆ ಕೆಡಬಾರದೆಂದು ಹಳ್ಳದ ಎಲ್ಲ ಭಾಗಗಳಲ್ಲಿಯೂ ಟ್ಯಾಕಿಗಳನ್ನು ಹುಗಿಸಿ ಸುವ್ಯವಸ್ಥೆಗೊಳಿಸಿದ್ದರು. ಮತ್ತು ಜನಗಳ ಪ್ರಾಣ-ವಸ್ತುಗಳ ಸಲುವಾಗಿ ಅಸ್ತ್ರಶಸ್ತ್ರಗಳನ್ನಿಡಿಸಿದ್ದರು. ಕಟಕೋಳದಿಂದ ಗೊಡಚಿಯ ವರೆಗೆ ರಸ್ತೆಯನ್ನು ಸುಧಾರಿಸಿದ್ದರಿಂದ ಬರುಹೋಗುವ ಮೋಟಾರುಗಳಿಗೂ ಸುತ್ತು ಗಾಡಿಗಳಿಗೂ ತುಂಬ ಅನುಕೂಲವಾಗಿತ್ತು. ಅಂತ ಈ ವರ್ಷದ ಜಾತ್ರೆಯು ಎಲ್ಲ ರೀತಿಯಿಂದಲೂ ಬಹು ಚನ್ನಾಗಿ ಜರಗಿತು

ಈ ಸ್ಥಿನೀಕ್ಷೇತ್ರದಲ್ಲಿ ಪ್ರತಿವರ್ಷದ ಪದ್ಧತಿಯಂತೆ ಶ್ರೀ ಗೊಡಚಿಕ್ಷೇತ್ರದ ಗುರುಶುಲಾಶ್ರಮದವರು ವೀರಶೈವ ಮತದ ಧರ್ಮಾಳ ನೈತಿಕ ತತ್ವಜ್ಞಗಳ ಅಭಿವೃದ್ಧಿಗಾಗಿ ಪ್ರಯತ್ನಪಡುವ ತಮ್ಮ ಸದುದ್ದೇಶವನ್ನು ನೆರವೇರಿಸುವದಕ್ಕಾಗಿ ಪಾಕಶಾಲೆಯ ವಿದ್ಯಾರ್ಥಿಗಳೊಡನೆ ಆಗಮಿಸಿದ್ದೇನಸ್ಥಾನದ ಪ್ರಾಕಾರದಲ್ಲಿಯೇ ಮುಕ್ತಾಂಮಾಡಿ ಭಕ್ತ ಜನರ ಇಚ್ಛಾನುಸಾರ ಆವರವರ ಹೆಸರಿನಿಂದ ಗಣ್ಯದಿವಸಗಳ ವರೆಗೂ ತಮ್ಮ ಅಶ್ರಮದ ವಾರಕಾಲೆಯ ವಿದ್ಯಾರ್ಥಿಗಳಿಂದ ಕ್ಷೇತ್ರಿನಾಯಕನಾದ ಶ್ರೀ ವಿರಭದ್ರದೇವರಿಗೆ ರುದ್ರಾಭಿಷೇಕವನ್ನೂ ಶ್ರೀ ಭವ್ಯಕಾಳೀದೇವಿಯವರಿಗೆ ಕುಂಕುಮಾರ್ಚನೆಯನ್ನೂ ಮಾಡಿಸಿ ಭಕ್ತಮಂಡಳಿಯಲ್ಲಿ ಆಸ್ತಿಕ್ಯಬುದ್ಧಿಯನ್ನೂ ಹೆಚ್ಚಿಸುವ ಕಾರ್ಯಕ್ರಮವನ್ನು ಕೈಕೊಂಡು ಸಾಂಗವಾಗಿ ಕೊನೆಗಾಣಿಸಿದರೆಂದು ತಿಳಿ.ಹಿಸುವುದಕ್ಕೆ ಬಹಳ ಸಂತೋಷವಾಗುತ್ತದೆ.

ತಾ|| ೩೭-೧೫-೩೯ ನೆಯ ಮಂಗಳವಾರ ಮಧ್ಯಾಹ್ನ ೩ ಘಂಟೆಯಿಂದ ಇಂಗ್ಲೀಷ್ ಮತ್ತು ಸಂಸ್ಕೃತ ವಿದ್ಯಾಸಿಕಾರದಾದ ಬನ್ನೂರು ಬೃಹನ್ಮಠದ ಶ್ರೀ|| ಹಾ ಬ್ರಾ ಪಟ್ಟಾಧ್ಯಕ್ಷಪ್ರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿತು. ಆದಿಯಲ್ಲಿ ಪಾಕಶಾಲಾ ವಿದ್ಯಾರ್ಥಿಗಳು ಶಾಂತಿ ಸೂಕ್ತವನ್ನು ಹೇಳಿ ಶ್ರೀ ಜಗದ್ಗುರು ಆಚಾರ್ಯ ಭಗವತ್ಪಾದರವರ ಸ್ತೋತ್ರಮಾಡಿದನಂತರ ಅಶ್ರಮದ ವೃದ್ಧ ಸ್ವಾಮಿಕರು ಸ್ವಾಗತಭರ ಭಾಷಣವನ್ನು ಮಾಡಿ ಸಭೆಗೆ ಸಹಾಮಭೂತಿಯನ್ನು ತೋರಿಸಿ ಬರೆದು ಬಂದ ಮಹಾ ಜನಗಳ ಪತ್ರಗಳನ್ನು ಓದಿಶೇಳಿದರು.

ಅನಂತರ ಪಂಡಿತ ಧರ್ಮಭೂಷಣ ಹರೀಶ್ವರಶಾಸ್ತ್ರಿಗಳು ಸುಣಗಳ ಬೆದರಿ ಆರಾಧ್ಯಮತ ಇವರು ' ಧರ್ಮ ' ಎಂಬ ವಿಷಯದಮೇಲೆ 3 ತಾಸುಗಳವರೆಗೂ ಬಹು ಸಾಮಂ ಜಸವಾಗಿ ಯುಕ್ತಿಪ್ರಯುಕ್ತಿಗಳಿಂದ ಭಾಷಣವನ್ನು ಮಾಡಿ ಸಳಲು ಶ್ರೋತೃವರ್ಗಕ್ಕೆ ಸಂತೋಷವನ್ನುಂಟುಮಾಡಿದರು. ಅಂತ ಈ ಸಭೆಗೆ ಎಲ್ಲ ಮತದವರೂ ಬಂದಿದ್ದರು.

ಧರ್ಮದ ಬಗ್ಗೆ ಅಸಾರ್ಥವನ್ನು ಕಲ್ಪಿಸಿ ಕಪ್ಪುಚಿಕ್ಕೆಯಿಂದ ಧರ್ಮಾಭಿಮಾನಿಗಳ ಬಗ್ಗೆ ದೋಷವನ್ನು

[ಒನೆಯ ಪುಟವನ್ನು ನೋಡಿ]

ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯದಿನ.

ಪುಷ್ಯ ಬಹು ೪ ಭಾನುವಾರ (೨೮-೧-೧೯೪೦)

ಯಾವ ಗುರುಸಾರ್ವಭೌಮನ ಮಹಿಮಾಪ್ರಭಾವದಿಂದ ಮಹಾಚಾರ್ಯರ ಧರ್ಮಪೀಠಗಳು ಪ್ರಕಾಶಕ್ಕೆ ಬಂದವೋ, ಯಾವ ಮಹಾತ್ಮನ ಪವಿತ್ರಪಾದವಿನ್ಯಾಸದಿಂದ ವೀರಶೈವಮತದ ನೈಧವು ಕರ್ನಾಟಕ ಆಂಧ್ರ ಮಹಾರಾಷ್ಟ್ರವಿದೇಶಗಳಲ್ಲಿ ಪ್ರಕಾಶಿತವಾಯಿತೋ, ಯಾವ ಗುರುಪ್ರಭಾಕರನ ದಿವ್ಯಪ್ರಭೆಯಿಂದ ವೀರಶೈವಗುರು ವರ್ಗವು ಎಚ್ಚೆತ್ತು ತನ್ನ ಕರ್ತವ್ಯಕರ್ಮದಲ್ಲಿ ನಿರತವಾಯಿತೋ ಯಾವ ಪರಶಿವಾವತಾರಿಯ ಪಾದಾರವಿಂದವನ್ನು ಭಕ್ತವೃಂದವು ಪೂಜಿಸಿ, ಭಜಿಸಿ, ಧ್ಯಾನಿಸಿ, ಸೇವಿಸಿ, ಸಕಲೇಷ್ಟಾರ್ಥಸಿದ್ಧಿಗಳನ್ನು ಪಡೆಯಿತೋ, ಯಾವ ಧರ್ಮಾಚಾರ್ಯರ ಧರ್ಮಬೋಧಾಮೃತವನ್ನು ಪಾನಮಾಡಿ ಸಮಸ್ತವಾಣವರು ಸದ್ಧರ್ಮಶೀಲರಾದರೋ, ಯಾವ ಜಡಿಪುಗವನ ನೈಕವಾದ ವಿರಶಿಧರ್ಮವನ್ನು ನೋಡಿ ಸಮಸ್ತಮತೀಯ ಯತಿತತಿಯು ಮುಕ್ತಕಂಠದಿಂದ ಸ್ತುತಿಸಿತೋ ಯಾವ ಕರುಣಾಕರನ ಕರುಣಾಕಟಾಕ್ಷವೀಕ್ಷಣದಿಂದ ಕಷ್ಟದಲ್ಲಿ ಶಿಲುಕಿ ಬಳಲುತ್ತಿದ್ದ ಭಕ್ತರ ಕಷ್ಟಗಳು ನಷ್ಟವಾದವೋ, ಯಾವ ದಯಾಸಮುದ್ರನ ದಯೆಯಿಂದ ದೀನರ ಮುಖಗಳು ದೂರವಾದವೋ, ಯಾವ ಪುಣ್ಯಮೂರ್ತಿಯ ಪಾದದರ್ಶನದಿಂದ ಪಾಪಿಗಳು ಪಾಪದಿಂದ ದೂರರಾಗಿ ಪುಣ್ಯಮಯ ತರೀರಿಗಳಾದರೋ, ಯಾವ ಮಂತ್ರಮೂರ್ತಿಯ ಮಂತ್ರೋಪದೇಶದಿಂದ ಶಿಷ್ಯವೃಂದವು ಮಂತ್ರಮಯವಾಗಿ ವಿರಾಜಿಸಿತೋ, ಯಾವ ಮಹಿಮನ ಮಹಿಮಾತಿಶಯದಿಂದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರಾಭಿಧಾನವು ಪ್ರತಿಯೊಬ್ಬರ ಮುಖಮಂಟಪದಲ್ಲಿ ನರ್ತನಮಾಡಲು ಪ್ರಾರಂಭಿಸಿತೋ, ಯಾವ ಧರ್ಮಾವತಾರಿಯ ತಪಃಪ್ರಭಾವದಿಂದ ಉಜ್ಜಯಿನೀ ಸದ್ಧರ್ಮಸಿಂಹಾಸನವು ಜಗತ್ತಿನಲ್ಲಿ ಪ್ರಜ್ವಲಿತವಾಯಿತೋ, ಅಂತಹ ಸಾಕ್ಷಾತ್ಪರಶಿವಾವತಾರಿಗಳಾದ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು ಶಿವೈಕ್ಯರಾಗಿ **ಪುಷ್ಯ ಬಹು ೪** ಮಿತಿಗೆ ೪ ವರ್ಷಗಳು ಪೂರ್ತಿಯಾಗುವವು ಆ ದಿವಸ ಭರತಖಂಡದಲ್ಲಿರುವ ಸಮಸ್ತಗುರುಭಕ್ತರೂ ಶ್ರೀಜಗದ್ಗುರುಗಳವರ **ಪುಣ್ಯದಿನವನ್ನು** ವಿಶೇಷ ಭಕ್ತಿಯಿಂದ ಆಚರಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ

ಹಿಟ್ಲರರಿಗೆ ಸಾವಿನ ಭಯ.

ಹಿಟ್ಲರ್‌ರವರಿಗೆ ಸೋಲಿನ ಸೂಚನೆಗಳಾಗಲೇ ಬರುತ್ತಿವೆ ಅವರಿಗೆ ಮರಣದ ಭಯವೂ ತಲೆದೋರುತ್ತಿದೆ

ಅವರು ಬರ್ಲಿಟಸ್ ಗಾಡನ್ನಿನಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಿದ್ದಾರೆ ಅಲ್ಲಿಂದಲೇ ಅವರು ಎಲ್ಲ ಕಾರ್ಯಕಲಾಪಗಳನ್ನೂ ನಡೆಯಿಸಲು ನಿರ್ಧರಿಸಿದ್ದಾರೆ ಅಲ್ಲಿಂದ ಬಿಟ್ಟು ಹೊರಗೆ ಹೋರಡಲು ಅವರಿಗೆ ಇಷ್ಟವೇ ಇಲ್ಲ

ಅಡಳಿತ ನಡೆಸುವವರು ಹೀಗೆ ಕುಳಿತರೆ ಆಗುತ್ತದೆಯೇ ಎಂದು ಅನೇಕರು ಕೇಳುತ್ತಿರುವರು ಅವರ ಆಧಿಪತ್ಯಯದಲ್ಲಿ ಹಿಟ್ಲರರಿಗೆ ಯುದ್ಧದಲ್ಲಿ ಬೇಸರಿಕೆಯುಂಟಾಗಿದೆ. ಅವರು ಆಗಾಗ್ಗೆ ಮರಣದ ಯೋಚನೆ ಮಾಡುತ್ತಿರುತ್ತಾರೆ

ಅವರಿಗೇನೇ ಯೋಚನೆಯಿದ್ದರೂ ಅವರು ತಮ್ಮ ಆಜ್ಞಾಪತ್ರಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಡಗಿರುವ ನಿಬಂಧನೆಗಳನ್ನು ಪೂರೈಸುವುದೇ ಅವರ ಉದ್ದೇಶ ತನ್ನ ಸಹಚರರು ಏನುಮಾಡಬೇಕೆಂಬುದನ್ನು ಆ ಆಜ್ಞಾಪತ್ರದಲ್ಲಿಯೇ ಜೆಕ್ಕಾಗಿ ಸ್ಪಷ್ಟಪಡಿಸಿದ್ದಾರೆ ತಮಗೆ ಮರಣವೊದಗಲಿ ಏನೇ ಆಗಲಿ ಅದರಂತೆ ನಡೆಯಬೇಕಾದುದು ಅವರ ನಿಯಮ ಆ ಆಜ್ಞಾಪತ್ರದಂತೆ ನಡೆಯುವ ವರೆಗೆ ತಾವು ಜೀವಂತವಾಗಿ ಇರುವುದಿಲ್ಲ ವೆಂದು ಹಿಟ್ಲರರು ನಂಬಿದ್ದಾರೆ ತಮ್ಮ ಕಾರ್ಯವನ್ನು ಬೇರೆಯವರ ಮಾಡಿಮುಗಿಸಬೇಕಾಗಿದೆ

ವ್ಯಸನವು ಅವರ ಮನಸ್ಸನ್ನು ಹೊಕ್ಕಿದೆ ಒಂದು ಕ್ಷಣದ ಹಿಂದೆ ಅವರಿಗಿದ್ದ ಉತ್ಸಾಹವು ಈಗ ಇಲ್ಲ ಇವರ ವಿಷಯ ನಾಗಿ ಜನರ ಆಡಿಕೆ ಹೆಚ್ಚಾಗಿದೆ ಇವರ ಮೇಲೆ ಸಂಚುಗಳು ನಡೆದಿವೆ ಇವರ ವಿರೋಧಿಗಳ ಕೈ ಮೇಲಾಗಿದೆ ಹಿಂದಿದ್ದ ವಿರೋಧಿಗಳ ಜೊತೆಗೆ ಈಗ ಇನ್ನೂ ಹೆಚ್ಚು ಜನ ಸೇರಿದ್ದಾರೆ

ಸಾಮಾನ್ಯ ಜನತೆಯಲ್ಲಾದರೂ ಇವರ ಮೇಲೆ ಅಲಕ್ಷ್ಯ ಹೆಚ್ಚಾಗಿದೆ ಅವರೆಲ್ಲರೂ ಯುದ್ಧದಲ್ಲಿ ಆಸಕ್ತಿಯನ್ನು ತೃಜಿಸುತ್ತಿದ್ದಾರೆ ಇಂತಹ ಜನತೆಯನ್ನು ಕಟ್ಟಿಕೊಂಡು ಅವರು ಹೇಗೆ ತಾನೇ ಯುದ್ಧಮಾಡುವರು?

ಈಗ ಅವರಿಗೆ ದಿಕ್ಕೇ ತೋಚದಾಗಿದೆ ಕಾರ್ಗತ್ತಲೆ ಕವಿಯುತ್ತಿದೆ ನುಂದಕ್ಕೆ ಹೆಜ್ಜೆಯಿಡುವುದೇ ದುಸ್ತರವಾಗಿದೆ ಎಲ್ಲ ಕಡೆಯಿಂದಲೂ ಸಮಸ್ಯೆಗಳು ಬಂದು ಒತ್ತಾಯಮಾಡುತ್ತಿವೆ ಯಾವುದು ಬೇಡವೆಂದು ಹಿಂದೆಲ್ಲಾ ಜೋರಾಗಿ ಹೇಳುತ್ತಿದ್ದರೋ ಅದನ್ನೇ ಈಗ ಅಂಗೀಕರಿಸಬೇಕಾಗಿದೆ ಎಂತಹ ಪರಿಸ್ಥಿತಿಯಿದು?

ಇವರು ಈಗ ಹೊಂದಿರುವ ಫಲವಾದರೂ ಏನು? ಇವರಿಂದ ನಿರ್ಮಿತವಾದ ರಾಜ್ಯಪದ್ಧತಿಯು ಉಳಿಯುವದು ಸಾಧ್ಯವೇ? ಇವರು ಹೊರಟುಹೋದಮೇಲೆ ಇವರ ಕೆಲಸಗಳು ಉಳಿಯುವಹಾಗಿದ್ದಿ ಇವರ ಅನುಯಾಯಿಗಳು ಇವರ ಉದ್ದೇಶಗಳನ್ನು ಸಾಧಿಸಲು ಸಾಧ್ಯವೇ? ಅವರು ಎಲ್ಲವನ್ನೂ ತಪ್ಪಾಗಿ ಪ್ರತಿಪಾದಿಸಿ ಹದಗೆಡಿಸುವರು ಇವರು ಈಗಿನವರೆಗೆ ಮಾಡಿದ ಪ್ರಯತ್ನವೆಲ್ಲಾ ನೀರಿನಲ್ಲಿ ಹೋಮಮಾಡಿದಂತಾಗಿದೆ

ಇವರ ಆರ್ಥಿಕ ವ್ಯವಸ್ಥೆಯಾಗಲಿ ರಾಜಕೀಯ ಪದ್ಧತಿಯಾಗಲಿ ಉಳಿಯದೆ ನಿರ್ನಾಮವಾಗುವವು ಇವೆಲ್ಲಾ ಆಲೋಚನೆಗಳು ಇವರ ಮನಸ್ಸಿನಲ್ಲಿ ಬಂದೇ ಬರುತ್ತವೆ ಈ ಆಲೋಚನೆಗಳು ಬಂದಾಗಲೆಲ್ಲಾ ಇವರಿಗೆ ದಿಗಿಲಾಗುವುದು ಅಂತೆಯೇ ಇವರು ಕೇವಲ ನಿಕೃಷ್ಟವಾದ ಬರ್ಲಿಟಸ್ ಗಾಡನ್ನಿನಂತಹ ಪರ್ವತ ತಿಖರದ ಮೇಲೆ ಕುಳಿತು ತಪಸ್ವಿಯಂತೆ ಕಾಲಕಳೆಯುತ್ತಿದ್ದಾರೆ

(ತಾ ಸಾ)

ತನ್ನ ಮಿತ್ರನಿಂದಲೇ ಹಿಟ್ಲರನ ಮರಣ

ಜರ್ಮೆಂಜ್ ಸಾಧುವಿನ ಭವಿಷ್ಯ

ಯುದ್ಧದ ಪರಿಣಾಮವು ವಿನಾಗುವುದೇಜಬದನ್ನು ಕುರಿತು ಬರೆಂಡಿನ ಒಬ್ಬ ಸಾಧುವು ಈ ಕೆಳಗೆ ಕಂಡಂತೆ ಭವಿಷ್ಯ ಹೇಳಿರುವನು " ಈ ಯುದ್ಧವು ಹಿಂದಿನ ಮಹಾಯುದ್ಧವು ನಡೆದಷ್ಟು ದೀರ್ಘಕಾಲ ನಡೆಯುವುದಿಲ್ಲ ಇದರಲ್ಲಿ ಅಗಿನಂಥ ಹತ್ಯೆಗಳವುಗಳೂ ಆಗುವುದಿಲ್ಲ ಇನ್ನು ಸ್ವಲ್ಪ ದಿನಗಳಲ್ಲಿ ಜರ್ಮನಿಯಲ್ಲಿ ಅಶಾಂತಿಯು ಉಂಟಾಗುವುದು. ಅದರಿಂದ ಜನರು ದಂಗೆ ಏಳುವರು ಹಿಟ್ಲರನ ಸರ್ವಾಧಿಕಾರತ್ವದ ಸ್ಥಾನದಲ್ಲಿ ಜರ್ಮನಿಯ ಹಿಂದಿನ ರಾಜವಂಶವು ಪುನಃ ಅಧಿಕಾರಕ್ಕೆ ಬರುವುದು ಆವೇಶ ಶಾಂತಿಯು ಉಂಟಾಗುವುದು ಆದರೆ ಜರ್ಮನಿಯು ಒಂದು ದೇಶವಾಗಿ ಇರುವುದರ ಬದಲು ಹಲವು ಸಣ್ಣ ಸಣ್ಣ ಸಂಸ್ಥಾನಗಳಾಗಿ ಒಡೆದು ಹೋಗುವುದು

ಹಿಟ್ಲರನ ಒಬ್ಬ ಸ್ನೇಹಿತನು ಅವನನ್ನು ಗುಂಡಿಟ್ಟು ಕೊಲ್ಲುವನು ಈ ಕಾರ್ಯವು ಅವನ ಒಬ್ಬ ಜೀವದ ಗೆಳೆಯನಿಂದಲೇ ಆಗುತ್ತದೆ ಈಗ ಆ ಗೆಳೆಯನ ಹಿಟ್ಲರನ ವಿಶ್ವಾಸವಾತ್ರನ ದೆ ಉಪದೇಶಕನ ಪದವಿ ಯಲ್ಲಿದ್ದಾನೆ ಹಿಟ್ಲರನ ಬಲಗೈಯಂತಿರುವ ಗೋರಿಂ ನೂ ಕೂಡ ಇನ್ನು ಬಹಳ ದಿನಗಳವರೆಗೆ ಜೀವಿಸಿರುವುದಿಲ್ಲ ಅವನನ್ನೂ ಜನರು ಗುಂಡಿಟ್ಟು ಕೊಲ್ಲುವರು

ಹಿಟ್ಲರನ ಕೊಲೆಗೆ ಅವನ ಮಿತ್ರರಲ್ಲಿಂದ ಸಮ್ಮತಿ ತಿರುವುದು ಒಂದು ದಿನ ಅವರೆಲ್ಲರೂ ಒಂದು ದುಂಡು ಮೇಜಿನ ಸುತ್ತು ಕುಳಿತಿರುತ್ತಾರೆ ಹಿಟ್ಲರನೂ ಅವರ ನಡುವೆ ಕುಳಿತಿರುತ್ತಾನೆ ಆ ದಿನವೇ ಅವನ ಅವಸಾನ ಕಾಲ! ಕುಳಿತವರಲ್ಲಿ ಒಬ್ಬನು ಪಕ್ಕನೆ ಎದ್ದು ಜೇಲ ಮೂಳಗಿಂದ ಪಿಸ್ತೂಲನ್ನು ತೆಗೆದು ಹಿಟ್ಲರನ ಕಡೆ ಹಾರಿ ಎನ್ ಉಳಿದವರು ತಲೆ ಆಡಿಸಿ ತಮ್ಮ ನಿರ್ಣಯವನ್ನು ಮೂಲಕ ಆ ಕೊಲೆಗೆ ಒಪ್ಪಿಗೆಯನ್ನು ಸೂಚಿಸುವರು ಹಿಟ್ಲರನು ನೆಲಕ್ಕೆ ಉರುಳುವನು

ರಷ್ಯ ಜರ್ಮನ್ ಒಪ್ಪಂದವು ಬಹಳ ದಿನಗಳವರೆಗೆ ಇರುವುದಿಲ್ಲ ಹಿಟ್ಲರನ ಪ್ರತಿಜ್ಞೆಗೆ ಭಂಗವನ್ನು ತರುವ ಮತ್ತು ಜರ್ಮನಿಗೆ ಹಾನಿಯನ್ನುಂಟುಮಾಡುವ ಒಂದು ಮಹತ್ಕಾರ್ಯ ಕೈಬಸವನ್ನ ರಷ್ಯವು ಮಾಡುವುದು ಇದರ ಪರಿಣಾಮವಾಗಿ ಜರ್ಮನಿಯ ಲ್ಲಿ ಕಮ್ಯೂನಿಸ್ಟರ ಪ್ರಭ ವವು ಮತಿಮಾರಿ ಬೆಳೆಯುವುದು ಅದ್ದರಿಂದಲೇ ಯುದ್ಧವು ಸ್ವಲ್ಪ ಕಾಲದಲ್ಲಿಯೇ ಮುಗಿಯುವಂತಾಗುವುದು ಈಗ ಜರ್ಮನಿಯ ಅಧೀನದಲ್ಲಿರುವ ಪೋಲೆಂಡು ಸ್ವತಂತ್ರವಾಗುವದು ಜೆಕೊಸ್ಲೊವೇಕಿಯ , ಆಸ್ಟ್ರಿಯಗಳೂ ಸ್ವತಂತ್ರ ವಾಗುತ್ತವೆ "

ರಷ್ಯಾ ನೌಕೆಯ ಬಂದನ

ಬ್ರಿಟಿಷ್ಸಿನ ಯುದ್ಧನೌಕೆಗಳು ರಷ್ಯಕ್ಕೆ ಸೇರಿದ ಸ್ಟೆಗ್" ಎಂಬ ಹಡಗನ್ನು ತಡೆದು, ಕಳ್ಳತನದಿಂದ ಸಾಗಿಸುತ್ತಿರುವ ಸಾಮಾಮುಗಳೇನಾದರೂ ಆದರಲ್ಲಿವ ಯೇ ಎಂಬುದನ್ನು ಪರೀಕ್ಷಿಸುವದ್ಕಾಗಿ ಅವನ್ನು ಹಾಂ ಕಾಂಗ್ ಬಂದರಿಗೆ ಒಯ್ದವು ಈಗಿನ ಯುದ್ಧವಾರಂಭ ವಾದಂದಿನಿಂದ ಚೀನಾ ಸಮುದ್ರದಲ್ಲಿ ಹಡಗನ್ನು ತಡವಿರುವದು ಇದೇ ಮೊದಲು ಹಡಗಿನ ಕ್ಯಾಪ್ಟನ್ನರು ರಷ್ಯಾ ಸರ್ಕಾರಕ್ಕೂ ಇಂಗ್ಲೆಂಡಿನಲ್ಲಿರುವ ರಷ್ಯದ ರಾಯಭಾರಿಗಳಿಗೂ ತಮ್ಮ ಪ್ರತಿಭಟನೆಯ ನ್ನು ಕಳುಹಿಸಿರುವರ

ರಷ್ಯದ ತೇಜೋವಧೆ

ರಷ್ಯದಂತಹ ದೊಡ್ಡ ರಾಷ್ಟ್ರಕ್ಕೆ ಫಿನ್‌ಲೆಂಡಿನಂತಹ ಸಣ್ಣ ರಾಷ್ಟ್ರದಲ್ಲಿ ತೇಜೋವಧೆಯಗಾಗುವುದೆಂದ ಯಾರೂ ಎಣಿಸಿರಲಿಲ್ಲ ಕಟ್ಟಕಡೆಯಲ್ಲಿ ರಷ್ಯಾ ಫಿನ್ಲೆಂಡ್ ಕದನವು ಹೇಗೇ ಮುಕ್ತಾಯವಾದರೂ ಸದ್ಯಃ ರಷ್ಯಕ್ಕೆ ಸೋಲಿನಮೇಲೆ ಸೋಲುಗಳಾಗುತ್ತಿವೆ ಫಿನ್‌ಲೆಂಡಿನ ಸೈನಿಕರು ಅಪೂರ್ವ ಶೌರ್ಯವನ್ನು ತೋರಿಸುತ್ತಿದ್ದಾರೆ ರಷ್ಯದ ಸೈನ್ಯವು ಬಹಳ ದೊಡ್ಡದು. ನಿಜ ಆದರೆ ಅದರ ಸಂಗ್ರಾಮಯೋಗ್ಯತೆ ಕಡಿಮೆ ಯೆಂಬುದು ಈಗ ವ್ಯಕ್ತಪಟ್ಟಿತು.

ರಷ್ಯವು ಫಿನ್‌ಲೆಂಡಿನ ಮೇಲೆ ಬಿದ್ದದ್ದು ನ್ಯಾಯವಲ್ಲ ನೆಂದೂ ಲೀಗ್ ರಾಷ್ಟ್ರಗಳೆಲ್ಲ ಫಿನ್‌ಲೆಂಡಿಗೆ ಸಹಾಯ ನೀಡಬೇಕೆಂದೂ ಲೀಗ್ ನ ಸ್ಥ ಲ್ಲಿ ನಿರ್ಧಾರವಾಯಿ ತಪ್ಪಿ ನಾನಾ ದೇಶ ಗಳು ಈಗ ಫಿನ್‌ಲೆಂಡಿಗೆ ಸಹಾಯ ಮಾಡತ್ತಿವೆ ಇಂದಿಲ್ ಫಿನ್‌ಲೆ ಡಿಗೆ ಸಂಗ್ರಾಮ ವ್ಯ ಯೊಸಿಲ ಸಾಕಾಗಲಾಗಿ ಎಮರಿಕೆ ಯಂತಾ ಲ್ಲಾತಂ ಡಾಲರುಗಳನ್ನು ಸಾಲವಾಗಿ ಕೊಟ್ಟಿದೆ ಇಟಲಿಯು ವಿಮಾನಗಳನ್ನೂ ಇತರ ಸಾಮಗ್ರಿಯ ವಸ್ತುಗಳನ್ನೂ ಫಿನ್‌ಲೆಂಡಿಗೆ ಕಳುಹಿಸುತ್ತಿದೆ ತಪಸ್ಸೆ ಈ ವಸ್ತುಗಳು ಜರ್ಮನಿಯ ಮೂಲಕ ಹೋಗ ಬೇಕಾಗಿರುವದರಿಂದ ಅಡಚಣೆಯ ನ್ನುಂಟುಮಾಡಿ ದ್ದಾರೆ ರಷ್ಯಾ ಪ್ರಭಾವವು ಸ್ಕಾಂಡಿನೇವಿಯಾದೇಶಗಳು ಇಟಲಿಯು ಅಲ್ಲದೇ ಇಂಗ್ಲೆಂಡು ಫ್ರಾನ್ಸುಗಳಿಂದಲೂ ಫಿನ್‌ಲೆಂಡಿಗೆ ಸಹಾಯ ಮಾಡತ್ತಿವೆ ಆದರೆ ಜರ್ಮನಿ ಈಗ ಇದಕ್ಕೆ ವಿಶ್ವಾಸವಿಲ್ಲ ಇದೇ ಹೀಗೆ ಪರ್ಯವಸಾನಗೊಳ್ಳುವುದೋ ನೋಡಬೇಕು

ಅದು ಹೇಗ ಇರಲಿ ಫಿನ್‌ಲೆಂಡು ಸದ್ಯಃ ನೋಲಾನ ಜಿಜೀ ಇಲ್ಲ ಎಲ್ಲಕ್ಕಿಂತ ಹೆಚ್ಚಾಗಿ ಫಿನ್ನಿಷರಿಗೆ ಪ್ರಾಕೃತಿಕ ರಕ್ಷಣೆಗಳಿವೆ ಫಿನ್‌ಲೆಂಡು ಸರೋವರಗಳ ನಾಡು ಇದಲ್ಲದೆ ಫಿನ್ನಿಷ್ಷರು ಬಲಾಢ್ಯ ಕೋಟೆ ಗಳನ್ನು ಕೇಸ್ ಕಟ್ಟಿದ್ದಾರೆ ರಷ್ಯನರು ಇಂದುವರೆಗೆ ಯಾವ ರಣಕ್ಷೇತ್ರಗಳಲ್ಲೂ ಅಷ್ಟಾಗಿ ಮುಂದುವರಿಯಲು ಶಕ್ತರಾಗಿಲ್ಲ ಅಕ್ಕರಿಸಿಕೊಂಡಿದ್ದ ಸ್ಥಾನದಿಂದ ಸಹ ಹಿಮ್ಮಟ್ಟುತ್ತಿದ್ದಾರೆ

ಜರ್ಮನಿಯ ಪರಿಸ್ಥಿತಿ

ಜರ್ಮನಿಯ ಸ್ಥಿತಿ ದಿನದಿನವೂ ಕ್ರೂರವಾಗುತ್ತಿದೆ ಹಡಗ ಗಳನ್ನು ವಶಪಡಿಸುವ ಕಾರ್ಯವು ಕೂಡ ಈಗ ಅತ್ಯಲ್ಪ ಯಶಸ್ವಿಯಾಗುತ್ತಿಲ್ಲ ಜರ್ಮನಿಗೆ ಸಮುದ್ರ ಮಾ ರ್ಗ ದಿಂದ ಸಾಮಾನುಗಳೇ ಬಾರದಂತಾಗಿದೆ ರಷ್ಯದಿಂದ ಹೆಚ್ಚಿನ ಸಹಾಯ ಸಿಗುವಂತಿಲ್ಲ ರಷ್ಯವು ಈಗ ತಾನು ಆರಂಭಿಸಿರುವ ಕದನವೆಲ್ಲ ಜಯ ಸಂಪಾದಿಸಿದರೆ ಸಾಕಾಗಿದೆ ಜರ್ಮನಿಯು ರಷ್ಯವನ್ನು ಸಂಪೂರ್ಣವಾಗಿ ನಂಬಿತ್ತು ಈಗ ಅದರ ನಂಬಿಕೆ ಮಣ್ಣುಗೂಡಿತು ಜರ್ಮನರು ದಿಕ್ಕುತೋಚದೆ ನಾನಾ ವಿಧವಾದ ಉಪಾಯದ ಕಾರ್ಯಕ್ರಮಗಳಲ್ಲಿ ತೊಡಗಿದ್ದಾರೆ ಬರಿದಾಗಿರುವ ಖಜಾನೆ ತುಂಬಲು ಜನರುಮೇಲೆ ನಿರ್ಬಂಧವಾಗಿ ತೆರಿಗೆ ಹಾಕತ್ತಿದ್ದಾರೆ ಎಲ್ಲದೆ ಜನರಲ್ಲಿರ ಜೀವನ ಮಟ್ಟವನ್ನು ನಿರ್ಧರಿಸಿ ಅವಶ್ಯಕತ ಹೆಚ್ಚಿಗೆ ಸಂಪಾದಿಸುವವು ತಮ್ಮ ಹೆಚ್ಚಿನ ಹಣವನ್ನೆಲ್ಲ ಸರ್ಕಾರಕ್ಕೆ ಕೊಟ್ಟುಬಿಡಬೇಕೆಂದು ಆಜ್ಞೆ ಮಾಡುವುದರಲ್ಲಿದ್ದಾರೆ ಅಂತೂ ಜರ್ಮನಿಗೆ ಕಡಲ ಅಭಾವ, ಪದಾರ್ಥಗಳ ಕೊರತೆ ಹೆಚ್ಚಾಗಿದೆ ಸದ್ಯ ಪಶ್ಚಿಮ ರಣಾಂಗಣವು ಶಾಂತವಾಗಿದೆ ಎರಡೂ ಕಡೆಯ ವಿಮಾನಗಳು ಪರಸ್ಪರ ಪರೀಕ್ಷಾಯಾನಗಳನ್ನು ಮಾಡುತ್ತಿರುವುದು ಹೊರತು ಮತ್ತೇನೂ ನಡೆಯುತ್ತಿಲ್ಲ ಬ್ರಿಟಿಷರೂ ಫ್ರೆಂಚರೂ ತಾವಾಗಿ ಜರ್ಮನಿಯ ಮೇಲೆ ಬೀಳಲು ಬಯಸುವುದಿಲ್ಲ ಜರ್ಮನಿಯೆ ಕೊಬ್ಬಿಗಿಲ್ಲದೆ ಸಾಯುವಂತೆ ಮಾಡಬೇಕೆಂಬುದು ಅವರ ಉದ್ದೇಶ ಅದಕ್ಕಾಗಿಯೇ ಅವರು ಸಮುದ್ರ ಮಾರ್ಗದಲ್ಲಿ ಜರ್ಮನಿಗೆ ಯಾವ ವಸ್ತುವು ಬಾರದಂತೆ ಮಾಡುವುದರಲ್ಲಿ ಉದ್ಯುಕ್ತರಾಗಿರುವರು ಜರ್ಮನಿಗೆ ಉಭಯ ಸಂಕಟ ಪ್ರಾಪ್ತವಾಗಿದೆ. ಒಂದು ಕಡೆ ಜನರ ಆಕಾಂಕ್ಷೆ, ಅಶಕ್ತಿ ಹೆಚ್ಚುತ್ತಿದೆ ಇನ್ನೊಂದು ಕಡೆ ಶತ್ರುಗಳ ಅಶ್ವದಿಗ್ಬಂಧನ ಬಲವಾಗುತ್ತಿದೆ ಅಂತೂ ಜರ್ಮನಿಗೆ ಮುಂದೆ ಬಹಳ ಕಷ್ಟ

ಇತರ ರಾಷ್ಟ್ರಗಳು

'ಜೊಲ್ಸೆವಿಜಂ' ಭೂತವು ಪಶ್ಚಿಮಕ್ಕೆ ಒತ್ತಿಬಾರದಂತೆ ತಡೆಯಲು ಬಲ್ಗೇರಿಯಾ ರಾಷ್ಟ್ರಗಳೆಲ್ಲವೂ ನಿರ್ಧರಿಸುವಂತಿದೆ ಆಗಲೇ ಇಟಲಿಗೂ ಹಂಗೇರಿಗೂ ಒಂದು ಒಪ್ಪಂದವಾಗಿದೆ ರಷ್ಯವು ಬೇಲ್ ಬೀಳುವನಾದರೆ ಸಹಾಯ ನೀಡುವುದಾಗಿ ಇಟಲಿಯು ಹಂಗೇರಿಗೆ ಭರವ ಸೆಯುತ್ತಿದೆ ಇದಲ್ಲದೆ ಬಾಲ್ಕನ್ ರಾಷ್ಟ್ರಗಳ ಸಮ್ಮೇಳನವು ಕೈನರಿ ಆರಂಭದಲ್ಲಿ ವಿೀನ್‌ಸ್ಟ್ರೇಡಿನಲ್ಲಿ ನೇರುವುದು ಇಲ್ಲಿ ಬಾಲ್ಕನ್ ಪ್ರೆತ್ರಿದ ರಕ್ಷಣೆ ವಿಚಾರವು ಪ್ರಧಾನವಾಗಿ ವಿನ ಶೈಗೆ ಬರುತ್ತದೆ

ಹಿಟ್ಲರನ ಭಯದಿಂದ ಯೂರೋಪಿನ ಸಣ್ಣ ಪುಟ್ಟ ರಾಷ್ಟ್ರಗಳು ಜರ್ಮನಿಯ ಸಹಾಯಕ್ಕೆ ಬರಬಹುದೆಂಬ ನಿರೀಕ್ಷೆ ಸರಿ ಭದದಲ್ಲಿತ್ತು ಈಗ ತಟಸ್ಥ್ಯ ದೇಶಗಳೆಲ್ಲ ಆತ್ಮಸಂರಕ್ಷಣೆಗೆ ತಕ್ಕ ವಿಶಾಪಟುಗಳನ್ನು ಮಾಡಿಕೊಂಡಿವೆ ಈಗ ಯಾವ ದೇಶವೂ ಜರ್ಮನಿಯ ಬೆದರಿಕೆಗೆ ಜಗ್ಗುವಂತಿಲ್ಲ ಮೊದಮೊದಲು ಈ ದೇಶಗಳು ಜರ್ಮನಿಗೆ ಕೊಂಡ ಸಹಾಯ ನೀಡಿದವು ಈಗ ಅವುಗಳ ವನೋಭಾವನೆ ತೀರ ಬದಲಾಯಿಸಿದೆ ಅಂತೂ ಜರ್ಮನಿಗೆ ಗ್ರಹಚಾರ ಬೆನ್ನಾಗಿಲ್ಲ (ವಿ ಕ)

ರಷ್ಯದ ವಿಮಾನನಾಶ

ಕಳೆದ 18 ನೆಯ ತಾರೀಖಿನ ದಿವಸ ಫಿನ್‌ಲೆಂಡಿನ ಮೇಲೆ 400 ರಷ್ಯಾವಿಮಾನಗಳು ದಾಳಿನಡೆಸಿದವು ರ ಜಧಾನಿಯಾದ ಹೆಲ್‌ಸಿಂಕಿನಗರದಮೇಲೆ 50 ಬಾಂಬು ಗಳು ಬಿದ್ದವು ರಷ್ಯವಿಮಾನಗಳಲ್ಲಿ 12 ವಿಮಾನಗಳನ್ನು ಫಿನ್ನಿಷರು ಹೊಡೆದುರುಳಿಸಿದರು ಈ ದಾಳಿಯ ಪರಿಣಾಮವಾಗಿ 18 ಜನರು ಮೃಕರಾದರೆಂದೂ, 70 ಜನರು ಗಾಯಗೊಂಡರೆಂದೂ ಪ್ರಕಟವಾಗಿದೆ 14 ನೆಯ ತಾರೀಖಿನ ಭಾನುವಾರ ರಷ್ಯದ ವಿಮಾನಗಳು ದಕ್ಷಿಣ ಪೋಲೆ ಡಿನಮೇಲೆ ದಾಳಿನಡೆಯಿಸಿದವಷ್ಟು ಖಚ್ಚಗಾಗಿ ಹಿಂದೆಂದೂ ನಡೆಯಿಸಿರಲಿಲ್ಲ ಹೆಲ್‌ಸಿಂಕಿ ನಗರದ ಸುತ್ತ ಹತ್ತಾರು ಗ್ರಾಮಗಳ ಮೇಲೆ ಬಾಂಬುಗಳನ್ನು ಹಾಕಿದವು ಇವರಿಂದ ಬೇಸಿಯು ಹತ್ತಿ ಬಹಳ ಅನಾಹುತಗಳಾದವು ಟೆಲಿಗ್ರಾಂ ಟೆಲಿಫೋನ್ ತಂತಿಗಳೆಲ್ಲವೂ ಕಿತ್ತು ಹಾಳಾದವು 3 ಗ್ರಾಮಗಳ ಮೇಲೆ 600 ಬಾಂಬು ಗಳನ್ನು ಹಾಕಿದರೆ ದೊ, ಇವರಿಂದ ನಿರಪರಾಧಿಗಳಾದ ಅನೇಕ ಪ್ರಜೆಗಳು ಮೃತರಾದರೆಂದೂ ತಿಳಿಯಬರುತ್ತದೆ

ಹಡಗುಗಳ ನಾಶ

17 ನೆಯ ತಾರೀಖಿನ ರಾತ್ರಿ ಇಂಗ್ಲೆಂಡಿನ ಪಶ್ಚಿಮ ತೀರದಲ್ಲಿ ವೈನಿಗೆ ತಗುಲಿ " ಕೈಡೋರಾಸ್ " ಎಂಬ ಹಡಗವು ಮುಳುಗಿತು. ಆ ಹಡಗಿನಲ್ಲಿದ್ದ 48 ಜನರ ನ ವಿಕರು ಜೀವದಿಂದ ಪಾರಾದರು 1140 ಟನ್ ತೂಕದ " ಎನಿಡ್ " ಎಂಬ ಹಡಗನ್ನು " ಯು ಬೋ ಟ್ ಟಿಪ ಡೊ ಮಾಡಿ ಪೆಲ್ಲ ಗಳನ್ನು ಸುರಿಸಿದ್ದರಿಂದ ನಾಶವಾಯಿತು ಎ೪೨ ಟನ್ ತೂಕದ " ಆಸ್ಟ್ರಿಯ " ಎಂಬ ಗ್ರೀಕ್ ಹಡಗು ಉತ್ತರಸಮುದ್ರದಲ್ಲಿ ವೈನಿಗೆ ತಗುಲಿ ಮುಳುಗಿಹೋಯಿತು

[೩ನೆಯ. ಪುಟದಿಂದ ಮುಂದುವರೆದುದು]

ಕೊಡುವ ಅಪಕೃಮತಿಗಳ ದುರಾಕ್ಷೇಪಗಳನ್ನು ದೃಷ್ಟಾಂತ ಶಪೂರ್ವಕವಾಗಿ ಖಂಡಿಸಿ ಪ್ರತಿಯೊಬ್ಬನೂ ಸ್ವಾರ್ಥ ಸ್ವಾಭಿಮಾನವನ್ನು ಕಾಯುವಾತ್ಸಾನಸ್ಸುಗಳಿಂದ ಪರತ್ಯಾಗ ಮಾಡಿ ಶ್ರೀಯರು ಶಾತಿವ್ರತ್ಯವನ್ನೂ ಪುರುಷರು ಬ್ರಹ್ಮ ಚರ್ಯವನ್ನೂ ಕಾಪಾಡಿಕೊಂಡು ತಮ್ಮ ತಮ್ಮ ರೀತಿ ಪ್ರೀತಿಗಳನ್ನು ಬಿತದಂತೆ ಸಮಾಜೋದ್ಧಾರ-ದೇಶೋದ್ಧಾರ ರಕಾರ್ಯವನ್ನು ಮಾಡುವದಕ್ಕೆ ಸಿದ್ಧರಾಗಲೆಂದು ಪ್ರೋ ತ್ಸಾಹಿಸುವದೇ ಪಂಡಿತರ ಭಾಷಣದ ಮುಖ್ಯ ಸಾರಾಂಶ ವಾಗಿತ್ತು

ಗುರುಕುಲಾಶ್ರಮದವರು ತಾ॥ ೧೬ ರಿಂದ ೨೮ ರ ವರೆಗೂ ಭಕ್ತಮಾಹೇಶ್ವರರ ಇ ೃಯಂತೆ ರುದ್ರಾಭಿಷೇಕ ಮತ್ತು ಕಂಕುಮಾರ್ಚನೆ ಕಾರ್ಯಗಳನ್ನು ವಿಧ್ಯುಕ್ತ ವಾಗಿ ನೆರವೇರಿಸಿ ತಾರೀಖು ೨೯ ರಿಂದ ೩೧ನೆಯ ಶುಕ್ರವಾರ ದಿವಸ ಕೊಲ್ಲಾಪುರ ಸಂಸ್ಥಾನಾಧಿಪತಿಗಳಾದ ಶ್ರೀಮನ್ಮಹಾರಾಜವರ ಆಯುರಾರೋಗ್ಯೈಶ್ವರ್ಯಾಭಿ ವೃದ್ಧಿಗಾಗಿ ಮಹಾರುದ್ರಾಭಿಷೇಕವನ್ನು ಮತ್ತು ಕುಂಕು ಮಾರ್ಚನೆಯನ್ನು ಮಾಡಿ ಪ್ರಭುಗಳಾದ ಹೆಸರಿನಿಂದ ಇನ್ನೂ ಸಂತರ್ಪಣೆಯನ್ನು ಮಾಡಿಸಿ ಅಂದಿಗೆ ಎಲ್ಲ ಕಾರ್ಯ ಕ್ರಮಗಳನ್ನು ಪೂರ್ತಿಸಿಕೊಂಡು ಪಾಠಶಾಲಾ ವಿದ್ಯಾರ್ಥಿ ಗಳೊಂದಿಗೆ ಕಟಿಕೋಳಕ್ಕೆ ಬಂದವು

ಪ್ರತಿಯೊಬ್ಬನೂ ತಾನು ಜನಿಸಿದ ಮತದಲ್ಲಿ ಶ್ರೇಷ್ಠ ವಾದ ಅಭಿಮಾನವನ್ನಿಟ್ಟುಕೊಂಡು ಧರ್ಮಾಚರಣೆ ಗಳಿಂದ ತನ್ನ ಸಂತತಿ ಸಂಪತ್ತನ್ನು ಅಭಿವೃದ್ಧಿಗೊಳಿಸಿ ಕೊಂಡು ಸುಬಜೀವಿಯಾಗಿರಲೆಂದು ಗುರುಕುಲಾಶ್ರಮ ದವರು ತನಿನ ನೋಧನಗಳಿಂದ ಅಹೋರಾತ್ರಿ ಪ್ರಯತ್ನ ಪಡುತ್ತಲಿ ೨ವರು ಈ ಮಹಾ ಕಾರ್ಯಕ್ಕೆ ಭಕ್ತರು ಮತ್ತು ಸಾರ್ವಜನಿಕರು ಆಶ್ರಯವನ್ನೂ ಪ್ರೋತ್ಸಾಹ ವನ್ನೂ ಕೊಟ್ಟು ಗುರುಕುಲಾಶ್ರಮಕ್ಕೆ ನಿರೀಕ ಮೋಭೆ ಯಸ್ಮುಂಟುಮಾಡಬೇಕೆಂದು ಹಾರೈಸುತ್ತೇನೆ

ಗುರುವರ್ಗದವರು ಸ್ವಾರ್ಥ ಸ್ವಾಭಿಮಾನವನ್ನು ಪರಿ ತ್ಯಾಗಮಾಡಿ, ನಿಸ್ಪೃಹಬುದ್ಧಿಯಿಂದ ಜನತೆಗೆ ಕಲ್ಯಾಣ ವನ್ನುಂಟು ಮಾಡ ಮೆಂಥ ಶ್ರೇಷ್ಠವಾದ ಕಾರ್ಯವನ್ನು ಕೈಕೊಂಡಿದ್ದರಿಂದ ಹೋದ ವರ್ಷಕ್ಕಿಂತಲೂ ಈ ವರ್ಷ ದಲ್ಲಿ ರುದ್ರಾಭಿಷೇಕ ಮೊದಲಾದ ಕಾರ್ಯಗಳು ಇನ್ನೇ ಪರಿ ಲಿಂ ವಿದ್ಯಾರ್ಥಿಗಳಿಂದ ಸಮಾಧಾನಕರವಾಗಿ ಜರಗಿದು ವಿರಕಾಲೆಯು ಸ್ಥಾಪಿಸಲ್ಪಟ್ಟು ೯ ತಿಂಗಳಾದವು ವಿದ್ಯಾರ್ಥಿಗಳ ಅಭ್ಯಾಸವು ಪ್ರಾರಂಭವಾಗಿ ೬ ತಿಂಗಳಾಯಿತು ಈ ಅಲ್ಪಾವಧಿಯಲ್ಲಿಯೇ ವಿದ್ಯಾರ್ಥಿ ಗಳಲ್ಲಿ ವಿಶೇಷ ವ್ಯಕ್ತಿತ್ವವಾಗಿ ರುದ್ರಾಭಿಷೇಕವನ್ನು ಮಾಡಿದ್ದಕ್ಕೆ ಜಗದ್ಗುರುಗಳಾರ ಆಶೀರ್ವಾದವೇ ಮೂಲಕಾರಣವು

ಈ ವರ್ಷ ದೇವಸ್ಥಾನದಲ್ಲಿ ಗುರುಕುಲಾಶ್ರಮದವರು ತಮ್ಮ ವಿದ್ಯಾರ್ಥಿಗಳೊಂದಿಗೆ ೧೫ ದಿವಸ ಮುಕ್ಕಾಂ ಮಾಡಬೇಕಾದ್ದರಿಂದ ವಿದ್ಯಾರ್ಥಿಗಳ ಉಸ್ತುವಾರಿಗಾಗಿ ಅರ್ಥಾತ್ ಸಂಕ್ಷಣೆಗಾಗಿ, ಒಬ್ಬ ಪೋಲೀಸನನ್ನು ಎರಡು ಜನ ಶಬರನ್ನು ಕೊಟ್ಟಿದ್ದರಿಂದ ಭೋಜನವ್ಯವಸ್ಥೆಯಿದ ಕೊಲ್ಲಾಪುರ ಸಂಸ್ಥಾನಾಧಿಪತಿಗಳಾದ ಮಹಾಪ್ರಭು ಗಳವರ ಸಂಕಾರಕ್ಕೆ ದಯಾಭಿನಾದ ಶ್ರೀ ವೀರಭದ್ರ ದೇವರು ಉತ್ತರೋತ್ತರ ಉನ್ನತಿಯನ್ನುಂಟುಮಾಡ ಲೆಂದು ಹಾರೈಸಿತ್ತೇನೆ ಮತ್ತು ನಮ್ಮ ಶ್ರೀ ಗುರು ಕುಲಾಶ್ರಮಕ್ಕೆ ಕಾಲಕ್ಕನ ಸರಿಸಿ ಸಲಹೆಯನ್ನು ಮತ್ತು ಸ್ಫೂರ್ತಿಪ್ರಚೋದನವನ್ನು ಕೊಡುತ್ತಿರುವ ಕಟಿಕೋಳ ರಾಜ್ಯ ಅಧಿಕಾರಿಗಳಾದ ಮೇಲೆ ಮಹಾಲಕರಿ ಸಾಹೇಬರವರಿಗೆ ದಯಾಭಿನನಾದ ಪರಿತವನು ಉದ್ಭವಾದ ಆಯುಷ್ಯ ವನ್ನು ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ

ಗುರುಕುಲಾಶ್ರಮದ ವ್ಯವಸ್ಥಾಪಕ

ಜಗಲೂರಿನ ಸಮಾಚಾರ

ಈ ಜಗಲೂರು ತಾಲ್ಲೂಕು ಅಮಲ್ದಾರರಾಗಿದ್ದ ಮಿ॥ ರಾ॥ ಯಂ ಪುಟ್ಟಯ್ಯನವರಿಗೆ ವರ್ಗವಾದ್ದರಿಂದ ದಾವ ಣಗೆರೆ ತಾಲ್ಲೂಕು ಅಮಲ್ದಾರರಾಗಿದ್ದ ಮಿ॥ ರಂ॥ ಗುಪ್ತರ ನರು ಈ ತಾಲ್ಲೂಕಿಗೆ ವರ್ಗಪಟ್ಟು ಬಂದು ತಾ॥ 17 ರಲ್ಲಿ ಛಾರ್ಜುತೆಗೆದುಕೊಂಡರು ತಾ॥ 18 ನೇ ದಿನ ವಿಳೆಗ್ಗೆ ಸದರಿ ಪುಟ್ಟಯ್ಯನವರನ್ನು ಪುರಪ್ರಮುಖರು ಅವರವರ ಮನೆಗೆ ಕರೆದುಕೊಂಡುಹೋಗಿ ಫಲತಾಂಬೂಲಗಳನ್ನು ಕೊಟ್ಟು ಸತ್ಕರಿಸಿ ಮಧ್ಯಾಹ್ನ 11 ಘಂಟೆ ಬಸ್ಸಿನಲ್ಲಿ ಬೀಳ್ಕೊಟ್ಟರು

ಇಲ್ಲಿಗೆ ಕಳೆದ ತಿಂಗಳಲ್ಲಿ ನಮ್ಮ ಶ್ರೀಮದ್ಮಹಾಜರ ವರ ಪ್ರೈವೇಟ್ ಸೆಕ್ರಟರಿಯವರಾದ ಮಿ॥ ಸರ್ ಛಾರ್ಲ್ಸ್ ಟಾರ್ಪಾಹಂಟರ್ ಸಾಹೇಬರವರು ಬಂದು ಎಲ್ಲಾ ನೋಡಿ ಕೊಂಡು ಹೋಗಿದ್ದರು

ಈ ತಿಂಗಳು ತಾ॥ 4 ರಲ್ಲಿ ನಮ್ಮ ಭೂನಹೊಂದಿದ ದಿವಾಣಸಾಹೇಬರವರು ಬಂದು ಬಡಪ್ರಜೆಗಳಾದ ನಮಗೆ ದರ್ಶನಕೊಟ್ಟು ನಮ್ಮ ಅಜವಾಲುಗಳನ್ನು ಕೇಳಿಕೊಂಡು ಮಿ॥ ರಾ॥ ಅಹಮದ್ ಇಮಾಮ್ ಸಾಹೇಬರವರ ಬಂಗಲೆ ಯಲ್ಲಿ ಊಟವೇರಿಸಿಕೊಂಡು ನಂತರ ಹಿಂದೆ ಇವರಿಂ ತಂಕಸ್ಥಾಪನೆಮಾಡಿಸಿ, ಹಾಲಿ ಸಾಹುಕಾರ್ ತಿಮ್ಮಣ್ಣ ನವರ ಹೆಸರಿನಮೇಲೆ ಕಟ್ಟಿಸಿ ಮುಗಿಯುತ್ತಾ ಬಂದಿರುವ ಕಂಬ್ಯೌಂಡ್ ಆಸ್ಪತ್ರೆಯ ನೂತನ ಕಟ್ಟಡದ ಮಿ॥ ರಾ॥ ಸಾಹುಕಾರ್ ಜೆ ಎಸ್ ಮಹಲಿಂಗಪ್ಪನವರು ವಿರ್ಡ ಡಿಸಿದ್ದ ಟೀಪಾರ್ಟಿಯಲ್ಲಿ ಭಾಗಿಗಳಾಗಿ ಕಟ್ಟಡವನ್ನು ಪರಾಮರ್ಶಿಸಿಕೊಂಡು ಹಾರತುರಾಯಿ ಸನ್ಮಾ ಸ್ವೀಕರಿಸಿ ಬಿದ್ರಿಕೆರೆಮಾರ್ಗವಾಗಿ ದಾವಣಗೆರೆಗೆ ಪ್ರಯಾಣಮಾ ಡಿದರು

ನಮ್ಮ ಮಹಾಪ್ರಭುಗಳಾದ ಶ್ರೀಮದ್ಮಹಾರಾಜ ರವರು ಈ ತಿಂಗಳ ಕೊನೆಯಲ್ಲಿ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ಸಂಚರಿಸುವ ಸುದ್ದಿಯಿರುವದ್ದಿಂ ಈ ಸಾರ್ವಜನಿಕ ಧರ್ಮವಾದ ನೂತನ ಭವ್ಯ ಭವನದ ಪ್ರಾರಂಭೋತ್ಸವವನ್ನು ಮಹಾ ಸ್ವಾಮಿಗಳವರಿಂದ ನೆರವೇರಿಸುವಂತೆ ವಿಜ್ಞಾಪಿಸಿದ್ದರೆ ಇಲ್ಲಿನ ಪ್ರಜೆಗಳಾದ ನಮಗೆ ಬಹಳ ಆನಂದವಾಗುತ್ತಿತ್ತು ಅಷ್ಟಾಗದೆ ಇರಲು ಕಾರಣವು ತಿಳಿಯದು

ಧರ್ಮಾಭಿಮಾನಿಯಾದ ಪುರಪ್ರಮುಖ

ನಾಗಪುರದಲ್ಲಿ ವೈಸರಾಯರ ಭಾಷಣ

" ಭಾರತದ ರಾಜಕೀಯದಲ್ಲಿ ಇಂದಿನ ಬಿಕ್ಕಟ್ಟನ್ನು ಪರಿಹರಿಸಿ ರಾಜಕೀಯ ಸಮನ್ವಯವನ್ನು ತೃಪ್ತಿಕರವಾಗಿ ತೀರ್ಮಾನ ಮಾಡಬೇಕೆಂದು ತುಂಬಾ ಆಸಕ್ತರಾಗಿದ್ದೇ ನೆ ಈ ಬಗ್ಗೆ ಭರವಸೆಯನ್ನು ಈಗಾಗಲೇ ಕೊಟ್ಟಿರು ತ್ತೇವೆ ಪ್ರಾಂತಗಳಲ್ಲಿ ಸ್ವರಾಜ್ಯ ಆಡಳಿತಗಳು ಯಶಸ್ವಿ ಯಾಗಿ ನಡೆಯುತ್ತಲಿದ್ದು ನಿಂತುಹೋಗಿರುವುದು ತುಂಬಾ ವಿಷಾದಕರವಾಗಿದೆ ಪ್ರಾಂತಗಳ ಸ್ವರಾಜ್ಯ ಆಡಳಿತಗಳು ಸುಗಮವಾಗಿ ನಡೆದು ಭಾರತವು ಡೊಮಿನಿಯ್ ಸ್ಟೇಟ್ಸ್ ಪದವಿಗೆ ಆದಷ್ಟು ಬೇಗನೆ ಬರಬೇಕೆಂದು ಸಾಮ್ರಾ ಜ್ಯ ಸರ್ಕಾರದ ಅಧಿಕಾರಿಯಾಗಿರುತ್ತದೆ. ಡೊಮಿನಿಯ್ ಸ್ಟೇಟ್ಸ್ ಪದವಿಯನ್ನು ಹೊಂದುವುದೇ ಭಾರತದ ಗು ರಿಯಾಗಿರುತ್ತದೆ. ಪ್ರಕೃತದ ರಾಜಕೀಯ ಪರಿಸ್ಥಿಯಲ್ಲಿ ಬ್ರಿಟ್ನಿಗೂ ಭಾರತಕ್ಕೂ ಹೆಚ್ಚು ವ್ಯತ್ಯಾಸವಿಲ್ಲ ಬ್ರಿಟನ್ನು ಯಾವ ಕಾರಣಗಳಿಗಾಗಿ ಇಂದು ಯುದ್ಧ ಮಾಡುತ್ತಲಿದೆಯೋ, ಭಾರವೂ ಆ ಕಾರಣಗಳನ್ನು ಒಪ್ಪಿರುತ್ತದೆ ಬ್ರಿಟನ್ನಿಗೂ ಭಾರತಕ್ಕೂ ಇರುವ ಪರಸ್ಪರ ವ್ಯತ್ಯಾಸಗಳನ್ನೂ ಭಿನ್ನಾಭಿಪ್ರಾಯಗಳನ್ನೂ ದೊಡ್ಡದು ಮಾಡುವುದು ರಾಜನೀತಿಯಲ್ಲ. ಭಾರತವು ಕೃಪ್ತಿಕರವಾಗಿ ಸಮಾಧಾನ ಹೊಂದಿ ರಾಜಕೀಯದಲ್ಲಿ ಮುಂದುವರಿಯಬೇಕು ಭಾರತದ ಐಕಮತ್ಯವನ್ನು ಕಾಪಾಡಬೇಕು. ಭಾರತದ ಜಹಾಂಗಗಳೂ ಸಂಸ್ಥಾ ನಗಳೂ ಒಂದೇ ಮನಸ್ಸಿನಿಂದ ಅಭಿವೃದ್ಧಿಮಾರ್ಗ ದಲ್ಲಿ ಮುಂದುವರಿಯಬೇಕು. ಭಾರತದ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ನಾನಾ ಕಕ್ಷಿಗಳಲ್ಲಿರುವುದೇನೋ ನಿಜ ಈ ಸಂದರ್ಭದಲ್ಲಿ ನಾವೆಲ್ಲರೂ ಪರಸ್ಪರ ಸಾಮಾನ್ಯ ಒಪ್ಪಿಗೆಯ ವಿಷಯಗಳನ್ನು ಮುಖ್ಯವಾಗಿ ಗಮನಿಸ ಬೇಕು ಭಿನ್ನಾಭಿಪ್ರಾಯಗಳನ್ನೂ ವ್ಯತ್ಯಾಸಗಳನ್ನೂ ಲಕ್ಷ್ಯಕ್ಕೆ ತರಕೂಡದು. ಸಮಗ್ರ ಭಾರತದ ಹಿತವನ್ನು ಗಮನದಲ್ಲಿಟ್ಟು ಆದಷ್ಟಾಗಿ ಸಾಹಸಪಡಬೇಕು. ಭಾರ ತದ ಮುಖಂಡರೆಲ್ಲರೂ ಈ ವಿಚಾರಕ್ಕೆ ಹೆಚ್ಚು ಗಮನ ಕೊಡಬೇಕು ಕಷ್ಟತರವಾದ ರಾಜಕೀಯ ಸಮಸ್ಯೆ ಗಳನ್ನು ವಿವೇಕದಿಂದಲೂ ಉದಾರಬುದ್ಧಿಯಿಂದಲೂ ವಿಮರ್ಶೆ ಮಾಡಿ ತೀರ್ಮಾನಕ್ಕೆ ಬರಬೇಕು ಸ್ವಾರ್ಥ ಪ್ರತಿಷ್ಠೆಗಳಿಗೂ ಹಟಸಾಧನೆಗೂ ಅವಕಾಶ ಕೊಡ ಬಾರದು " ಎಂದು ಹೇಳಿದರು

ನಾರ್ವೆ ಸ್ವೀಡನ್‌ಗಳ ಮೇಲೆ ರಷ್ಯದ ಕ್ರೋಧ

ನಾರ್ವೆ ಮತ್ತು ಸ್ವೀಡನ್ ದೇಶಗಳ ಸರ್ಕಾರದ ಕಡೆ ಪತ್ರಿಕೆಗಳು ರಷ್ಯದ ವಿರುದ್ಧ ಪ್ರಚಾರಮಾಡುತ್ತಿರು ವದರಿಂದ ಕ್ರುದ್ಧವಾದ ರಷ್ಯವು ಆ ಸರ್ಕಾರಗಳಿಗೆ ಉಗ್ರ ಪ್ರತಿಭಟನೆಯನ್ನು ಕಳುಹಿಸಿ ಈ ವಿಷಯದಲ್ಲಿ ಆಯಾ ಸರ್ಕಾರಗಳಿಗೆ ಸರಿಯಾಗಿ ತಿಳಿಸಿಕೆ ಕೊಡಬೇಕೆಂದು ನಾರ್ವೆ-ಸ್ವೀಡನ್‌ಗಳಲ್ಲಿರುವ ರಷ್ಯಾಪಟಿವರುಗಳಿಗೆ ಸೂ ಚಿಸಲಾಗಿತ್ತು. ಆ ದೇಶಗಳು ರಷ್ಯಕ್ಕೆ ಸಮರ್ಪಕ ವಾದ ಉತ್ತರಕೊಡಲಿಲ್ಲವಾದುದರಿಂದ ಸ್ವೀಡನ್ನಿನಿಂದ ಸಾವಿರಾರು ಸ್ವಯಂಸೇವಕರನ್ನು ಫಿನ್‌ಲೆಂಡಿಗೆ ಕಳುಹಿ ಲಾಗಿದೆ ಸ್ವೀಡನ್ನಿನ ಹಲವು ಸೈನ್ಯಾಧಿಕಾರಿಗಳು ಸಹ ಫಿನ್‌ಲೆಂಡಿಗೆ ಹೋಗಿ ರಷ್ಯಕ್ಕೆ ವಿರುದ್ಧವಾಗಿ ಹೋಡಿದಾ ಡುತ್ತಿದ್ದಾರೆ ನಾರ್ವೆಯಲ್ಲಿ ಫಿನ್‌ಲೆಂಡಿಗೆ ಕಳುಹಿಸುವದ ಕ್ಕಾಗಿಯೇ ಒಂದು ವಿಶೇಷ ಸೈನ್ಯಪಡೆಯನ್ನು ಸೇರಿಸು ತ್ತಿದ್ದಾರೆ ಈಗಾಗಲೇ ಬೇಕಾದಷ್ಟು ಯುದ್ಧಸಾಮಗ್ರಿ ಗಳನ್ನು ಫಿನ್‌ಲೆಂಡಿಗೆ ಕಳುಹಿಸಿದ್ದಾರೆ. ಎಂಬದಾಗಿ ರಷ್ಯವು ಆ ದೇಶಗಳ ಮೇಲೆ ಆಪಾದನೆ ಹೊರಿಸಿದ ಅದಕ್ಕೆ ಆ ದೇಶಗಳು ಕೊಟ್ಟ ಉತ್ತರದಲ್ಲಿ " ರಷ್ಯದ ಆಪಾದನೆಗಳಿಗೆ ಆಧಾರವಿಲ್ಲ ಸ್ವಯಂಸೇವಕರು ತಾವಾಗಿ ಫಿನ್‌ಲೆಂಡಿಗೆ ಹೋಗುತ್ತಿರುವರು ಯುದ್ಧಸಾಮಗ್ರಿಗಳ ನ್ನು ನಾವು ಕಳುಹಿಸುವುದಿಲ್ಲ " ಎಂದ. ತಿಳುಹಿಸಿದೆ

ಧರ್ಮರಾಜ್ಯದ

ಜಂಗಮಾದಾರಲ್ಲಿ ಕೋರಿಕೆ

ಧರ್ಮರಾಜ್ಯ ಮಾಸಪತ್ರಿಕೆಯು ಇದುವರೆಗೂ ಧಾರ ವಾಡದಲ್ಲಿ ಅಲ್ಲಿಯ ರೂಲ್ಸ್‌ಪ್ರಕಾರ ಹೊರಡುತ್ತಿದ್ದುದು ಸರಿಯಷ್ಟೆ! ಅತ್ಯಯಜಮಾನದಿಂದ ತಡಿಹರದಲ್ಲಿ ಹೊರ ಡಿಸಬೇಕೆಂದು ಸ್ಥಳಾಂತರಮಾಡಿದ್ದಾಯಿತು ಈ ಪತ್ರಿ ಕೆಯ ಪ್ರಕಾಶಕತ್ವಕ್ಕೆ ಇಲ್ಲಿ ಇನ್ನೂ ಪರವಾನಗಿ ದೊರೆತಿಲ್ಲ ಆದಕಾರಣ ಪತ್ರಿಕೆಹೊರಡಲು ತಡವಾಗಿದೆ ಹೊಸ ಜಳೆ ಜಂಗಮಾದಾರರಿಗೆ ಕ್ರಮವಾಗಿ ಎಲ್ಲಾ ತಿಂಗಳ ಸಂಚಿಕೆ ಗಳನ್ನೂ ಪರವಾನಗಿ ದೊರೆತೊಡನೆ ಕಳುಹಿಸುವುದಾ ಗುವುದು

ಸಾಹಿತ್ಯಾಭಿಮಾನಿಗಳು ಎಂದಿನಂತೆ ಪ್ರೋತ್ಸಾಹಿಸ ಬೇಕಾಗಿಯೂ, ಮತ್ತಾವಿಧವಾಗಿಯೂ ಭಿನ್ನಾಭಿಪ್ರಾಯ ಪಡಬಾರದಾಗಿಯೂ ಕೋರಿದೆ.

ಸಂಪಾದಕ,
ಶ್ರೀ ವೀರಶೈವ ಧರ್ಮಾಲಯ, ಹರಿಹರ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್.

ಧರ್ಮಸಿಂಹಪಟ್ಟದಲ್ಲಿರುವ ಪತ್ರಿಯೊಂದು ಗುರುವರ್ಗದ ಮಕ್ಕಳಿಂದಲು ಶಿಷ್ಯರ ಮನೆಗಳನ್ನು ಪ್ರಯಾಣಮಾಡಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾತ್ರಕ್ಕು ನಿಯಮಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ನಿಯಮಗಳ ಪ್ರಕಾರ ಜಾತ್ರಾ ಹೋರಡಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕಗಳನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಲ್ಲಿರುವ ನಿಯಮಪ್ರಕಾರ ಬರೆದು ಪಂಚಾಚಾರ್ಯರಾಗಿ ಒಬ್ಬ ತಮ್ಮ ಶಿಷ್ಯನನ್ನು ಕಾಣಬೇಕೆಂಬುದೇ ಇದರ ಕೆಲಸಂಬ ಈಗಿರುವ ಕಾಲಕ್ಕೆ ಅವಶ್ಯಕವಾಗಿರುವಲ್ಲದೆ ಸುಲಭವಾದ ಮತ್ತು ಭದ್ರವಾದ ಬೈಂಡಿನ್ಲ್ಲಿ ಮಾಡಿಸಿದೆ

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಔಷಧೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಮದಲ್ಲಿ ದೊರೆಯುವವು

ಔಷಧ ಹೆಸರು	ತೊಲ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ಏನೇ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦ ೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳಿಭಸ್ಮ	೧	೦—೮—೦
ಕಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೬—೦
ಸ್ವರ್ಣಮಾಕ್ಷಿಕಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವದೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರರು,
ಆಯುರ್ವೇದರಸಾಯನಶಾಲಾ,
ಪೋಸ್ಟ್ ಓಫೀಮಳೆ, ಜಿಲ್ಲಾ ಗಢವಾಲ್ ಯು ಪಿ

ವೈದಿಕ ಶಿವಪೂಜಾವಿಧಿ.


ಮಹಾಪ್ರಭುವೇ! ನಮ್ಮಲ್ಲಿ ದೇವರ ಪೂಜೆಗೆ ಬೇಕಾಗುವ ಪರಿಮಳ ದವಾಗಿ, ಧೂಪದಗಟ್ಟಿ, ದೇಶೀಕರ್ಪೂರ, ಶಕಂನಾದ ಜವಪಾದ ಊದುಬತ್ತಿಗಳು ಯೋಗ್ಯಬೆಲೆಗೆ ದೊರೆಯುತ್ತವೆ. ಬೇಕಾದ ಸಾಮಾನುಗಳಿಗೆ ಬರೆದು ತರಿಸಿಕೊಳ್ಳಿರಿ.

ಶ್ರೀ ಜಯಣ್ಣ
ಊದುಬತ್ತಿ ಧೂಪಗಳ ಕಾರ್ಖಾನೆ,
[3] ಬಳ್ಳಾಪೇಟೆ, ಬೆಂಗಳೂರುಸಿಟಿ.

ನಾರುಹುಳಪ ವ್ಯಾಧಿಯಪ್ಪ ನಿವಾರಿಸುವ ಮಾರ್ಗಗಳು.

ಲೆಫ್ಟಿನೆಂಟ್ ಕರ್ನಲ್ ಕೆ. ಜಿ. ಫರ್‌ಗೂಸನ್, ಐ. ಎಮ್. ಎಸ್.
ಸಿವಿಲ್ ಸರ್ಜನ್.

ಕೆಲಕೆಲವು ಜಿಲ್ಲೆಗಳಲ್ಲಿ ಅನೇಕ ಗ್ರಾಮಗಳೊಳಗೆ ಮೇಲ್ಕಂಡ ನಾರುಹುಣ್ಣುಗಳೆಂದುಂಟಾಗುವ ವ್ಯಾಧಿಯು ಜನರನ್ನು ಪೀಡಿಸುತ್ತಿದೆ ಈ ವ್ಯಾಧಿಯಿಂದ ಪೀಡಿತರಾದ ಜನಗಳ ಕಷ್ಟವೂ, ಬಾಧೆಯೂ, ಅವರೆಂದ ಅವರಲ್ಲಿ ಉಂಟಾಗತಕ್ಕ ಅಧಿಕ ಬಲಹೀನತೆಯೂ ನೋಡುವವರಿಗೆ ಬಹಳ ಪರಿತಾಪಕರವಾಗಿದೆ. ಇದು ಕರಿಣ ವ್ಯಾಧಿಯಾಗಿದ್ದರೂ, ಇದನ್ನು ಬಾರದಂತೆ ನಿವಾರಿಸುವು ವೇನೋ ಆಸಾಧ್ಯವಲ್ಲ. ತಾಗಿದ್ದ ಪಕ್ಷದಲ್ಲಿ ಜನಗಳು ಇದನ್ನು ನಿವಾರಿಸದೆ, ಅವರಿಂದ ಬಾಧೆಪಡುತ್ತಿರುವುದೇ ಕೆಲಬ ಬಬಬಹುದು. ಜನಗಳಲ್ಲಿರುವ ಅಶ್ರದ್ಧೆಯೂ, ಅಜ್ಞತೆಯೂ ಇವೆರಡೂ ಆ ವ್ಯಾಧಿಯು ಹರಡುವುದಕ್ಕೆ ಮುಖ್ಯ ಕಾರಣಗಳಾಗಿವೆ ಈಗ್ಗೆ ನೂರಾರು ವರ್ಷಗಳಿಗೆ ಹಿಂದೆ ಇದ್ದಂತೆಯೇ ಈಗಲೂ ಜನರು ಅಜ್ಞತೆಯಿಂದಲೇ ನಡೆಯುತ್ತಿರುವರು ಈಗ ರೋಗಗಳ ವಿಷಯದಲ್ಲಿ ಎಷ್ಟೋ ಪರಿಜ್ಞಾನಗಳೆಲ್ಲ ನಡೆದು, ವ್ಯಾಧಿ ನಿವಾರಣೆಗೆ ಬೇಕಾದ ವಿಚಾರಾದಿಗಳೆಲ್ಲ ನೆಡೆದಿರುವುದರಿಂದ, ಜನರು ಎಚ್ಚರಿಕೆಯಿಂದ ಅದನ್ನು ನಿವಾರಿಸಬೇಕಾದುದವಶ್ಯವು

ಈ ನಾರುಹುಳುಗಳ ಜೀವನಚರಿತ್ರೆಯನ್ನು ಕೇಳಿದರೆ ಬಹಳ ಆಶ್ಚರ್ಯವಾಗುವುದು ಯಾವನಾದರೂ ಒಬ್ಬನಿಗೆ ಕಾಲಿನಲ್ಲಿರಬೇಕೋ, ಅಥವಾ ಅಂಗಾಲಿನಲ್ಲಿರಬೇಕೋ ಈ ನಾರುಹುಣ್ಣಿದ್ದಾಗ, ಅವನು ಒಂದು ಕೊಳದ ನೀರಿನಲ್ಲಿ ಳಿದರೆ, ಒಡನೆಯೇ ಅವನ ದೇಹದಲ್ಲಿರುವ ಹುಳುವು ಅಲ್ಲಿ ಕೋಟಿಸಂಖ್ಯೆಯಿಂದ ನೆಂಟ್ಟೆಗಳನ್ನಿಟ್ಟುವಿಡುವುದು. ಈ ಮೊಟ್ಟೆಗಳು ನೀರಿನಲ್ಲಿ ಜೀವಿಸುತ್ತಿರುವ ಸೈಕ್ಲಾಪ್ಸ್ ಎಂಬ ಹುಳುಗಳ ಹೊಟ್ಟೆಯೊಳಗೆ ಸೇರುವುವು. ಈ ಸೈಕ್ಲಾಪ್ಸ್ ಎಂಬ ಹುಳುಗಳು ಗುಂಡು ಸೂಜಿಯ ತಲೆಯಷ್ಟೇ ಪ್ರಮಾಣವುಳ್ಳದಾಗಿ ತಿಗಣೆಯ ಆಕಾರಕ್ಕಿರುವುವು. ಇವು ನೀರಿನಲ್ಲಿ ಈಜುಹಾಡ್ತಿರುವುವು. ಆ ನಾರುಹುಳದ ಮೊಟ್ಟೆಗಳು ಈ ಕ್ರಿಮಿಗಳ ಹೊಟ್ಟೆಗೆ ಸೇರಿದೊಡನೆ ಎದುರಾದವರೆಗೆ ಅಲ್ಲಿ ಬೆಳೆಯುತ್ತಿರುವುವು. ಮಲೆಪ್ರದೇಕ್ಕೂ, ಸೊಳ್ಳೆಗೂ ಹೇಗೆ ಅನ್ಯೋನ್ಯ ಸಂಬಂಧವುಂಟೋ ಅದೇ ವಿಧವಾದ ಸಂಬಂಧವೇ ಸೈಕ್ಲಾಪ್ಸ್‌ಗೂ, ನಾರುಹುಳಗಳಿಗೂ ವಿರ್ಪ್ಪಡುವುದು ಈ ಸೈಕ್ಲಾಪ್ಸ್ ಹುಳು ಸೇರಿದ ನೀರನ್ನು ಕುಡಿಯುವುದರಿಂದ ಜನಗಳಿಗೆ ನಾರುಹುಣ್ಣು ವ್ಯಾಧಿಗಳು ಬರುವುವು. ಹೇಗೆಂದರೆ, ಆ ಸೈಕ್ಲಾಪ್ಸ್ ಹುಳುಗಳು ಮನುಷ್ಯರ ಹೊಟ್ಟೆಗೆ ಹೋದೊಡನೆಯೇ, ಅವುಗಳೊಳಗಿನ ನಾರು ಹುಳದ ಮೊಟ್ಟೆಗಳು ಮನುಷ್ಯರ ಜಠರಕ್ಕೆ ಬಂದು ತಂಗುವುವು. ಅಮೇಲೆ ಆ ನಾರುಹುಳುಗಳು ಸ್ನಾಯುಗಳನ್ನು ಕೊರೆದುಕೊಂಡು ಹೋಗಿ ಅಲ್ಲಿಯೇ ವೃದ್ಧಿಯಾಗುತ್ತ, ಕೊನೆಗೆ ಅದೊಂದು ದೊಡ್ಡ ಹುಳುವಾಗುವುದು. ಹೀಗೆ ಆ ಕ್ರಿಮಿ ಸಂಬಂಧವುಳ್ಳ ನೀರನ್ನು ಕುಡಿದಮೇಲೆ ಒಂಬತ್ತು, ಹತ್ತು. ಅಥವಾ ಹನ್ನೆರಡು ತಿಂಗಳ ಕಾಲ ಮೊಳಗಾಗಿ ಆ ದೊಡ್ಡ ಹುಳುವು ಚರ್ಮದ ಸಮೀಪಕ್ಕೆ ಬಂದು ಸೇರುವುದು. ಆಮೇಲೆ ಚರ್ಮದಲ್ಲಿ ದ್ವಾರ ಮಾಡಿ ಬರುವುದರಿಂದ, ಅಲ್ಲಿ ಹುಣ್ಣಾಗುವುದು. ಆ ಚರ್ಮದ ಬಳಿಗೆ ಬಂದೊಡನೆ ಆ ಹುಳುವು ತನ್ನ ನೊಟ್ಟೆಯನ್ನಿಡುವುದಕ್ಕಾಗಿ ನೀರು ಸಿಕ್ಕುವ ಸಂದರ್ಭವನ್ನೇ ಇದಿರು ನೋಡುತ್ತಿರುವುದು. ನೀರು ಸಿಕ್ಕಿದೊಡನೆ ಅದರಲ್ಲಿ ಮೊಟ್ಟೆಯಿಟ್ಟು ಅಮೇಲೆ ದೊಡ್ಡ ಹುಳುವು ಸತ್ತುಹೋಗುವುದು. ಈ ನಾರುಹುಳುವೆಂಬುದು ಬಹಳ ಉದ್ದವಾಗಿಯೂ, ಸಣ್ಣದಾಗಿಯೂ ಇರುವ ಒಂದು ಜಂತು. ಇದು ಸಾಧಾರಣವಾಗಿ ಒಂದು ಮೊದಲು ಮೂರಡಿಯ ಉದ್ದಕ್ಕಿರುವುದು, ನೋಟಕ್ಕೆ ದಪ್ಪವಾದ ಒಂದು ಬೀಳಲಿನಂತೆ ಕಾಣುವುದು. ಆದರೆ ಬಾಲವು ಕೊಕ್ಕೆಯಂತೆ ಬಗ್ಗಿರುವುದು ಆ ಕೊಕ್ಕೆಯಿಂದಲೇ ಆ ಹುಳುವು ಸ್ನಾಯುಗಳಲ್ಲಿ ಭದ್ರವಾಗಿ ತಗುಲಿಕೊಂಡು ನಿಲ್ಲಲ್ಪವುದು. ಈ ಹುಳುಗಳ ವಿಷಯವಾಗಿ ನಾವು ಎಚ್ಚರ ತೆಗೆದು ಕೋಳ್ಳಬೇಕಾದರೆ ಈ ಕೆಳಗೆ ಕಂಡ ನಾಲ್ಕು ವಿಷಯ ಗಳಲ್ಲಿ ಬಹಳ ಜಾಗರೂಕರಾಗಿರಬೇಕು.

(೧) ನಾರುಹುಣ್ಣಿನ ವ್ಯಾಧಿಯಿಂದ ಪೀಡಿತರಾದ ಜನರು

(೨) ಜನಗಳು ಧಾರಾಳವಾಗಿ ಇಳಿದುಹೋಗಬಹು ದಾದ ಬಾವಿಗಳು ಮುಂತಾದ ಜಲಾಶಯಗಳು. ಇಂತಾ ಜಲಾಶಯಗಳಲ್ಲಿ ಅನೇಕ ರೋಗಿಗಳು ಬಂದು ಕಾಲಿಟ್ಟಿವ ಸಂಭವವಿರುವುದರಿಂದ, ಆ ನೀರಿನಲ್ಲಿ ಎಷ್ಟೋ ಹುಳುಗಳ ಮೊಟ್ಟೆಗಳು ಸೇರಿರಬಹುದು.

(೩) ಇಂತಹ ಬಾವಿಗಳ ನೀರಿನಲ್ಲಿ ಸೇರುವ ಸೈಕ್ಲಾಪ್ಸ್ ಎಂಬ ಸಣ್ಣ ಕ್ರಿಮಿಗಳು ನಾರುಹುಣ್ಣಿನ ಕ್ರಿಮಿಗಳ ಮೊಟ್ಟೆಗಳು ಈ ಸೈಕ್ಲಾಪ್ಸ್ ಕ್ರಿಮಿಗಳಲ್ಲಿ ಸೇರಿ ವೃದ್ಧಿಹೊಂದುವುವು.

(೪) ಕುಡಿಯುವ ನೀರಿನಲ್ಲಿ ಸೇರಿರಬಹುದಾದ ಸೈಕ್ಲಾಪ್ಸ್ ಮೊದಲಾದ ಕ್ರಿಮಿಗಳು.

ಮೇಲೆ ಹೇಳಿದವು ನಾಲ್ಕೂ ವಿಕೇಭವಿಸದಂತೆ ತಕ್ಕ ಎಚ್ಚರಿಕೆಯನ್ನು ತೆಗೆದುಕೊಂಡರೆ ಈ ವ್ಯಾಧಿಯು ಬಾರದಂತೆ ಮಾಡಬಹುದು ಅವಕ್ಕೆ ಮಾರ್ಗಗಳಿಗೆನೆಂದರೆ.

(೧) ನಾರುಹುಣ್ಣಿನ ವ್ಯಾಧಿಯುಳ್ಳ ಜನಗಳ ಸಂಪರ್ಕವಿರಬಾರದು.

(೨) ಅಂತಹ ರೋಗಿಗಳು ಇಳಿಯಬಹುದಾದ ಬಾವಿ ಮುಂತಾದ ಜಲಾಶಯಗಳಾವುದೂ ಇರಬಾರದು.

(೩) ಈ ನಾರುಹುಣ್ಣಿನ ಕ್ರಿಮಿಗಳ ಮೊಟ್ಟೆಗಳು ವೃದ್ಧಿಹೊಂದಲು ಅವಕಾಶ ಕೊಡತಕ್ಕ ಸೈಕ್ಲಾಪ್ಸ್ ಕ್ರಿಮಿಗಳು ನೀರಿನಲ್ಲಿರಬಾರದು

(೪) ಈ ಸೈಕ್ಲಾಪ್ಸ್ ಹುಳುಗಳಿದ್ದ ನೀರನ್ನು ಜನರು ಕುಡಿಯದಂತೆ ನಿವಾರಿಸಬೇಕು

(೧) ಮೇಲೆ ಹೇಳಿದ ಮಾರ್ಗಗಳಿಂದ ಈ ವ್ಯಾದಿಯನ್ನು ಸಂಪೂರ್ಣವಾಗಿ ನಿವಾರಿಸುವ ಪ್ರಯತ್ನವನ್ನು ಮಾಡಿದ ಹೊರತು ಆ ರೋಗಪೀಡಿತರಾದ ಜನರು ಇಲ್ಲದಿರುವುದು ಸಾಧ್ಯವಲ್ಲ.

(೨) ನಾರುಹುಣ್ಣಿನ ವ್ಯಾಧಿಯುಳ್ಳ ಜನಗಳನ್ನು ನೀರಿನಲ್ಲಿ ಕಾಲಿಡದಂತೆ ಮಾಡುವುದೇನೋ ಸುಲಭವೇ. ಹೇಗೆಂದರೆ ಇಳಿಯುವುದಕ್ಕೆ ಅನುಕೂಲವಾದ ಸೋವಾನಗಳನ್ನು ಒಡೆದುಹಾಕಿ, ಬಾವಿಯ ಸುತ್ತಲೂ ಎತ್ತರವಾದ ಗೋಡೆಗಳನ್ನು ಹಾಕಿಸಿ, ನೀರನ್ನು ಬಾವಿಯಿಂದ ಸೇದುವ ಹಾಗೆಯೇ ಮಾಡಬಹುದು.

(೩) ಸೈಕ್ಲಾಪ್ಸ್ ಕ್ರಿಮಿಗಳು ನೀರಿನಲ್ಲಿ ವೃದ್ಧಿಯಾಗದಂತೆ ತಡೆಯುವುದೂ ಸುಲಭವೇ. ಹೇಗೆಂದರೆ, ವಿಷ ಹಾರಕ ಔಷಧಿಗಳಿಂದ ಈ ಕಾರ್ಯಗಳನ್ನು ಮಾಡ ಬಹುದು. ಸ್ವಲ್ಪ ಕಾಪ್ಪಿಕ್ ಪೌಡಾಪ್ ಅಥವಾ ಸುಣ್ಣದ ನೀರನ್ನು ಉಗುಯೋಗಿಸಿದರೆ ಆ ಕ್ರಿಮಿಗಳೆಲ್ಲವೂ ಸಾಯುವುವು ಇಲ್ಲವೇ ಮೊದಲು ನೀರಿಗೆ ಮೈಲುತುತ್ಥವನ್ನು ಹಾಕಿ, ಅಮೇಲೆ ಫರ್‌ಕ್ಲೋರೈಡ್ ಎಂಬುದನ್ನು ಉಪಯೋಗಿಸಿದರೂ ಆ ಹುಳುಗಳು ಸಾಯುವುವು. ಅವರೆ, ಈ ವಿಷಹಾರಕ ಮದ್ದುಗಳು ಸೈಕ್ಲಾಪ್ಸ್ ಹುಳುಗಳನ್ನು ಮಾತ್ರವೇ ಕೊಲ್ಲಬಲ್ಲವೇ ಹೊರತು ಆ ಸೈಕ್ಲಾಪ್ಸ್ ಹುಳುಗಳ ಮೊಟ್ಟೆಗಳು ಅದರಿಂದ ಹಾಯುವುದಿಲ್ಲ. ಆದುದರಿಂದ ತಿರುಗಿ ಒಂದು ತಿಂಗಳೊಳಗಾಗಿಯೇ ಆ ಮೊಟ್ಟೆಗಳೆಲ್ಲಾ ಬಲಿತು ಹುಳುಗಳಾಗಿ ಪರಿಣಮಿಸುವುವು. ಮತ್ತು ಈ ವಿಷಹಾರಕ ಮದ್ದುಗಳನ್ನುಪಯೋಗಿಸುವುದರಿಂದಲೂ ಒಳ್ಳೇ ಸುಶಿಕ್ಷಿತರಾದ ಡಾಕ್ಟರ ಸೂಚನೆಯಂತೆಯೇ ನಡೆಯಬೇಕು.

(d) ನಾರುಹುಣ್ಣಿನ ವ್ಯಾಧಿಯಿರುವ ಸ್ಥಳಗಳಲ್ಲಿ ಜನರು ಬಾವಿಗಳಲ್ಲಿಳಿದು ನೀರನ್ನು ತೆಗೆಯಲು ಅವಕಾಶ ಕೊಡಬಾರದು. ಈ ಕಾರ್ಯವನ್ನು ಸುಲಭವಾಗಿಯೇ ಮಾಡಬಹುದಾದರೂ ಜನಗಳು ಅದನ್ನು ಅಕ್ಕರೆಯಿಂದ ನಡೆಯಿಸುವುದಿಲ್ಲ. ಕೆಲವು ಮೆಟ್ಟಿಲುಗಳ ನ್ನಿಳಿದು ಹೋಗಿ ನೀರನ್ನು ಕುಡಿಯುವುದರಿಂದ ತಮಗೆ ಹೆಚ್ಚು ಶ್ರಮವಿಲ್ಲವೆಂದು ಭಾವಿಸಿರುವರು.

ನೀರನ್ನು ಕುಡಿಯುವ ಮೊದಲು ಒಂದು ಸಣ್ಣ ಬಟ್ಟೆಯಿಂದ ಆ ನೀರನ್ನು ಶೋಧಿಸಿದರೂ, ಸೈಕ್ಲಾಪ್ಸ್ ಹುಳುಗಳೆಲ್ಲ ಆ ಬಟ್ಟೆಯಲ್ಲಿ ನಿಲ್ಲುವುವು ಆಗ ಕ್ರಿಮಿಗಳು ಹೊಟ್ಟೆಗೆ ಸೇರುವ ಸಂಭವವಿಲ್ಲ. ಈ ವಿಧವಾಗಿ ಒಬ್ಬೊಬ್ಬರೂ ಎಚ್ಚರಿಕೆಯನ್ನು ತೆಗೆದುಕೊಂಡರೆ ಎಷ್ಟೋ ಕ್ಷೇಮವುಂಟು ಈ ಮಾರ್ಗವನ್ನನುಸರಿಸುವುದು ಅಷ್ಟು ಕಷ್ಟವೂ ಅಲ್ಲ. ಪ್ರತಿಯೊಬ್ಬರೂ ನೈಮೇಲೆ ಅಂಗಿಯನ್ನೊ, ವಸ್ತ್ರವನ್ನೋ ಅಥವಾ ತಲೆವಾಸಿನ್ನೋ ಇಟ್ಟುಕೊಂಡೇ ಇರುವರು. ಹೆಂಗಸರು ತಮ್ಮ ಸೀರೆಯ ಸೆರಗಿನಿಂದಲೇ ನೀರನ್ನು ಶೋಧಿಸಿ ಕುಡಿಯಬಹುದು ಮುಖ್ಯವಾಗಿ ನಾರುಹುಣ್ಣಿನ ವ್ಯಾಧಿಯು ಅಧಿಕವಾಗಿ ವ್ಯಾಪಿಸಿರುವ ಪ್ರದೇಶಗಳಲ್ಲಿ ಈ ಸ್ವಲ್ಪ ಎಚ್ಚರಿಕೆಯನ್ನು ತೆಗೆದುಕೊಂಡರೆ ಆ ವ್ಯಾಧಿಯನ್ನು ಪೂರ್ಣವಾಗಿ ನಿವಾರಿಸಬಹುದು. ಜನರು ಇದನ್ನು ಮನಸ್ಸಿಗೆ ತಂದುಕೊಂಡು, ಅದರಂತೆ ಎಚ್ಚರದಿಂದ ನಡೆಯಬೇಕಾದುದು ಮುಖ್ಯವು. ಪಾತ್ರವೇನೂ ಇಲ್ಲದಿದ್ದ ಪಕ್ಷದಲ್ಲಿ ಕೂಡ ಬಾಯಿಗೆ ನೇರವಾಗಿ ಬಟ್ಟೆಯಿಂದ ನೀರನ್ನು ಶೋಧಿಸಿಕೊಳ್ಳಬೇಕು. ಈ ವಿಷಯದಲ್ಲಿ ಜನಸಾನ್ಯತ್ಯಕ್ಕೆ ತಿಳಿವಳಿಕೆಯನ್ನು ಹುಟ್ಟಿಸಿ ದಾಗಲೇ ಆ ಸದ್ಭತಿಯು ಸರಿಯಾಗಿ ನಡೆದುಬರುವುದು

ಆಯಾ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡಿನವರೂ, ತಾಲೂಕು ಬೋರ್ಡಿನವರೂ, ಗ್ರಾಮಪಂಚಾಯಿತಿಯವರೂ, ಆರೋಗ್ಯ ಸಂಘಗಳೂ ಆಯಾ ಜಿಲ್ಲೆಗಳ ಇತರ ಉದ್ಯೋಗಸ್ಥರೂ ಮೇಲೆ ಹೇಳಿದ ೨ ನೇ ಮತ್ತು ೪ ನೇ ವಿಚಾರಿಡುಗಳನ್ನು ನಡೆಸಬಹುದು. ಆದರೆ ಆ ಕಾರ್ಯದಲ್ಲಿ ಆವರಿಗೆ ಸ್ವಲ್ಪ ತಾಳ್ಮೆಯು ಬೇಕು. ನಾರುಹುಣ್ಣಿನ ವ್ಯಾಧಿಯು ಎಲ್ಲೆಲ್ಲಿ ಕಾಣಿಸುತ್ತಿದೆಯೋ ಅಂತಹ ಗ್ರಾಮಗಳಲ್ಲಿರುವ ಬಾವಿಗಳು, ನಡೆಬಾವಿಗಳು ಇವನ್ನೆಲ್ಲ ಲೆಕ್ಕಹಾಕಿಟ್ಟು, ಅವನ್ನೆಲ್ಲ ಬದ್ಧವಾಗಿರಿಸುವುದಕ್ಕೆ ತಕ್ಕ ವಿಚಾರಿಡುಗಳನ್ನು ಮಾಡಿಡಬೇಕು. ಆಯಾ ಗ್ರಾಮಗಳಲ್ಲಿ ಕುಡಿಯುವುದಕ್ಕಾಗಿ ಉಪಯೋಗಿಸುವ ನೀರಿನ ವಸಕಗಳು ನಡೆಬಾವಿಗಳಾಗಿದ್ದಾಗ, ಅವನ್ನೆಲ್ಲ ಸೇದುವ ಬಾವಿಗಳನ್ನಾಗಿ ಮಾರ್ಪಡಿಸಬೇಕು. ಹೀಗೆ ಒಂದೊಂದು ಗ್ರಾಮದಲ್ಲಿಯೂ ನಡೆಸುತ್ತಾ ಬಂದರೆ ಹತ್ತು ವರ್ಷ ಕಾಲದೊಳಗಾಗಿ ಆ ವ್ಯಾಧಿಯ ಹುಟ್ಟೇ ಇಲ್ಲದಂತೆ ಮಾಡಬಹುದು.

ಈ ಕಾರ್ಯವು ನಡೆಯುವುದಕ್ಕೆ ಹಣವೂ, ಕಾಲವೂ ಸ್ವಲ್ಪ ಹೆಚ್ಚಾಗಿ ಬೇಕಾದುದರಿಂದ, ಆ ಕಾರ್ಯವನ್ನು ನಡೆಸುವುದಕ್ಕೆ ಮುಂದಾಗಿ ಆ ವ್ಯಾಧಿಯಿರುವ ಕಡೆಗಳಲ್ಲಿ ಅಧಿಕಾರ್ಯ ಇಲಾಖೆಯ ಉದ್ಯೋಗಸ್ಥರು ಅಲ್ಲಲ್ಲಿಗೆ ಭಾವಿಗಳಿಗೆಲ್ಲ ವಿಷಹಾರಕ ಮದ್ದನ್ನು ಹಾಕಿ ಶುದ್ಧಪಡಿಸುತ್ತಿರಬೇಕು. ಮುಖ್ಯವಾಗಿ ಆ ವ್ಯಾಧಿಗೆ ಮಾರ್ಜಿ ಮೊದಲು ಜೂ ತಿಂಗಳವರೆಗೆ ಉದ್ರೇಕವು ಹೆಚ್ಚು. ಆ ಕಾಲದಲ್ಲಿ ನೋಂಕುಗುಣವೂ ಅಧಿಕವಾಗುವುದು.

ನಡೆಭಾವಿಗಳನ್ನು ಸೇದುವ ಭಾವಿಗಳನ್ನಾಗಿ ಮಾಡುವುದೊಂದೇ ಈ ವ್ಯಾಧಿಯನ್ನು ಹಗಿಸುವುದಕ್ಕೆ ಉತ್ತಮೋಪಾಯವೆಂಬುದೇ? ಎಂದು ಕೇಳಿದರೆ ಆ ವಿಷಯದಲ್ಲಿ ನನಗೆ ಪ್ರತ್ಯುತ್ತರವಿವುಂಟು. ನಾನು ಸೊಲ್ಲಾಪುರ ಜಿಲ್ಲೆಯಲ್ಲಿ ಸಾಲಾಸ್ಯವರೆ ವರ್ಷಗಳಕಾಲ ಸಿವಿಲ್ ಸರ್ಜನ್‌ನಾಗಿ ಕೆಲಸಮಾಡುತ್ತಿದ್ದೆನು. ಆಗ ಅಲ್ಲಿನ ಮಹಾ ಎಂಬ ತಾಲೂಕಿಗೆ ಮುಖ್ಯಳ್ಳವಾದ ಮಹಾ ಎಂಬ ಪಟ್ಟಣದಲ್ಲಿ ನಾರುಹುಣ್ಣು ವ್ಯಾಧಿಯು ವಿಶೇಷವಾಗಿ ಕರಡಿದ್ದಿತು. ಅಲ್ಲಿ ನಡೆಭಾವಿಗಳನ್ನೆಲ್ಲ ಸಾಧಾರಣ ಭಾವಿಗಳಂತೆ ಮಾಡಿಸಿದ ಮೇಲೆ ಅಲ್ಲಿದ್ದ ವ್ಯಾಧಿಯ ಜೆಸರೇ ಇಲ್ಲದಂತೆ ಮಾಯವಾಯಿತು.

ಈ ವ್ಯಾಧಿಯು ಎಲ್ಲಿ ಹೆಚ್ಚಾಗಿ ವ್ಯಾಪಿಸಿದೆಯೋ ಅಂತಹ ಕಡೆಗಳಲ್ಲಿಯೇ ಈ ಪ್ರಚಾರ ಕಾರ್ಯವನ್ನು ಅಧಿಕವಾಗಿ ನಡೆಸಬೇಕು. ಜನಗಳಿಗೆ ಆ ಕ್ರಿಮಿಗಳನ್ನು ಶಾತಮಾಡುವ ಮಾರ್ಗಗಳನ್ನೆಲ್ಲಾ ಬೋಧಿಸುತ್ತಿರಬೇಕು. ತೊಡೆಪಕ್ಷ ಕೆಲವು ವರ್ಷಗಳಾದರೂ ಎಡೆಬಿಡದೆ ಈ ಪ್ರೋಧಕಕಾರ್ಯವನ್ನು ಮುಂದುವರಿಸುತ್ತಿರಬೇಕು. ಆಗಾಗ ಇದಕ್ಕಾಗಿ ಪತ್ರಪತ್ರಿಕೆಗಳನ್ನು ಪ್ರಕಟಿಸಿ, ಶಾಲೆಯ ಉಪಾಧ್ಯಾಯರಿಗೂ ಗ್ರಾಮಾಧಿಕಾರಿಗಳಿಗೂ ಹೇಳುತ್ತಿರಬೇಕು. ನೀರನ್ನು ಶೋಧಿಸಿಯೇ ಕುಡಿಯಬೇಕೆಂದೂ ಹಾರುಹುಣ್ಣಿನ ವ್ಯಾಧಿಯುಳ್ಳವರ ರಕ್ತ ನೀರಿನಲ್ಲಿಳಿಯದ ಹಾಗೆ ಕಡೆಯಬೇಕೆಂದೂ ಇವೇ ಮೊದಲಾದ ಪದ್ಧತಿಗಳನ್ನು ಬೋಧಿಸಬೇಕು.

ನಾರುಹುಣ್ಣಿನ ವ್ಯಾಧಿಕ್ರಿಮಿಗಳನ್ನು ಕುರಿತು ಕೆಲವು ವಿಷಯಗಳು

ಸಾಮಾನ್ಯವಾಗಿ ಈ ವ್ಯಾಧಿಕ್ರಿಮಿಗಳು ಚರ್ಮದ ಮೇಲೆ ತಲೆದೋರಿ ವ್ಯಾಧಿಯನ್ನು ಹರಡುವ ಕಾಲವು ಮಾತ್ರ ಮೊದಲು ಜೂ ವರೆಗೆ ಮಾತ್ರವೇ ! ಆಮೇಲಿಂದ ಈ ಕಾಲದಲ್ಲಿ ಮಾತ್ರ ಶಪ್ತದೆ ವ್ಯಾಧಿನಿವಾರಣಮಾರ್ಗಗಳನ್ನು ಎಡೆಬಿಡದೆ ನಡೆಸುತ್ತಿರಬೇಕು.

'ಜೀನಸ್ ಬಾಬಾಸ್' ಎಂಬ ಜಾತಿಯ ಮಿಸುಗು ಸೈಕ್ಲಾಪ್ಸ್ ಹುಳುಗಳನ್ನು ಶಾತಮಾಡುವುದು. ಅಂದಿದೆ. ಈ ಜಾತಿಯ ಮಿಸುಗುಗಳು ನಡೆಘಾವಿಗಳಲ್ಲಿ ಹೆಚ್ಚಾಗಿ ಬದುಕಿರಲಾರವು.

ಈ ನಾರುಹುಣ್ಣುವ್ಯಾಧಿಯು ಮನುಷ್ಯರಿಗೆ ಮಾತ್ರವೇ ಅಲ್ಲದೆ, ಇತರ ಪ್ರಾಣಿಗಳಿಗೂ ಬರುವುದುಂಟು. ಕುದುರೆ, ಆಡುಕುರಿಗಳು, ಆಕಳುಗಳು ಕುಮಿರೆ, ಕಪಿ, ನಾಗರಹಾವು ಮುಂತಾದುವುಗಳೂ ಈ ವ್ಯಾಧಿಯಿಂದ ಪೀಡಿತವಾಗುವುದುಂಟು.

ಮನುಷ್ಯರ ಜಠರದಲ್ಲಿ ಉಪ್ಪನ್ನವಾಗುವ ಹೈಡ್ರೊಕ್ಲೋರಿಕ್ ದ್ರಾವಕವು 1-6 ಮೊದಲು 1% ರ ವರೆಗಿನ ಬಲವುಳ್ಳದ್ದಾಗಿದ್ದರೆ, ಆದೇ ನಾರುಹುಣ್ಣು ಕ್ರಿಮಿಗಳ ಮೊಟ್ಟೆಗಳನ್ನು ಕೊಂದುಬಿಡುವುದು.

ಬಿದಿರಿನ ಎಲೆಗಳನ್ನು ಒಂದು ಹಿಡಿಯಷ್ಟು ತೆಗೆದು, ಒಂದು ಗಡಿಗೆಯ ನೀರಿರಲ್ಲಿ ಹಾಕಿಟ್ಟರೆ, ಆ ನೀರಿನೊಗಿರುವ ಸೈಕ್ಲಾಪ್ಸ್‌ಕ್ರಿಮಿಗಳೆಲ್ಲಾ ಸಾಯುವುವು. ಆದರಿಂದೇ ಬಿದಿರಿನ ಪಟ್ಟೆಯ ರಸವೂ ಇವಕ್ಕೆ ನಾತಕರ ವಾಗಿದೆ.

ಜರ್ಮನಿಗೆ ಎಣ್ಣೆಯ ಅಭಾವ.

ಶಸ್ತ್ರಸಜ್ಜಿತ ಪಡೆಗಳು ಮಾತ್ರ ಎಂದಿಗೂ ಸಂಗ್ರಾಮದಲ್ಲಿ ಜಯಪಡೆಯಲು ಸಾಧ್ಯವಿಲ್ಲ.

ಒಂದು ರಾಷ್ಟ್ರದ ಸೈನ್ಯಪಡೆಯೂ ಮತ್ತು ನೌಕಾಪಡೆಯೂ ಎಷ್ಟು ಅಧಿಕವಾಗಿದ್ದರೂ ಸಹ ಆ ಮುಖ್ಯವಾದ ಹಲವು ಸಾಮಗ್ರಿಗಳಲ್ಲಿದ್ದರೆ ಸಂಗ್ರಾಮ ನಡೆಯಿಸುವುದು ಸಾಧ್ಯವಿಲ್ಲ. ತಮ್ಮ ಸೈನಿಕರಿಗೆ ಆಹಾರ ಪದಾರ್ಥಗಳನ್ನು ಒದಗಿಸುವುದೂ, ತಮ್ಮ ಕಾರ್ಖಾನೆಗಳಿಗೆ ಅಭಾರ್ ವಸ್ತುಗಳನ್ನು ತೆಗೆಯಿಸುವುದೂ ಇವೇ ಸಂಗ್ರಾಮಕ್ಕೆ ಮುಖ್ಯವಾದ ಸಾಮಗ್ರಿಗಳು. ಇವುಗಳೇ ಸಂಗ್ರಾಮದ ಮುಖ್ಯವಾದ ಬಲ.

ಸಮುದ್ರಪಯಣಿಕರ ಅಧಿಕಾರವನ್ನು ಬ್ರಿಟಿಷರು ಪಡೆದಿರುವ ಕಾರಣವಿತ್ತ, ಅವರು ವಿಶ್ವದ ಇತರ ಕಡೆಗಳಿಂದ ಯಾವ ಪದಾರ್ಥಗಳನ್ನು ಬೇಕಾದೂ ತರಬಹುದು. ಜರ್ಮನಿಯವರಾದರೋ ತೀಕ್ಷ್ಣದೃಷ್ಟಿಯೇ ಅವರ ಶಕ್ತಿಯ ಗೊತ್ತಾಗುವುದು. ವಿಶ್ವದ ಇತರ ಕಡೆಗಳಲ್ಲಿ ತಯಾರಾಗುವ ಸಂಗ್ರಾಮ ವಸ್ತುಗಳಲ್ಲಿ ಜರ್ಮನಿಯಲ್ಲಿ ತಯಾರಾಗುವುದು ಅತ್ಯಲ್ಪ. ಸಧ್ಯ: ಅವರು ತಮ್ಮ ಸುತ್ತಮುತ್ತಲಿನ ದೇಶಗಳಿಂದ ಸಂಗ್ರಾಮ ವಸ್ತುಗಳನ್ನು ತರಿಸಿಕೊಳ್ಳಬೇಕಾಗಿದೆ. ಸಾಧಾರಣವಾಗಿ ಆ ವಸ್ತುಗಳು ದೊರೆಯುವಂತಿಲ್ಲ. ಜರ್ಮನಿಗೆ ರಫ್ತಾಗುವ ಸ್ವಲ್ಪ ಸಕಾಯಮಾಡಬಹುದು. ಅದರಿಂದ ಪರಿಸ್ಥಿತಿಯೇನೂ ಬದಲಾವಣೆಯಾಗುವುದಿಲ್ಲ. ರಷ್ಯಾವೆ ಜೆರ್ಮನಿಗಿಂತ ಅಧಿಕವಾಗಿ ಸಾಮಗ್ರಿಗಳನ್ನು ಹೊಂದಿಸಲಾರದು. ರಫ್ತುವ್ಯಾಪಾರವು ಒಂದು ದಿನದಲ್ಲಿ ವಿರತಕ್ಕಂತಹದಲ್ಲ.

ಈಗ ಸಂಗ್ರಾಮಮಾರಂಭವಾಗಿರುವ ಪ್ರಯುಕ್ತ ಜರ್ಮನಿಗೆ ನಿಕ್ಕಲ್, ರಬ್ಬರ್ ಮತ್ತು ತಾಮ್ರ, ಇವುಗಳು ಸುಲಭವಾಗಿ ದೊರಕುವಂತಿಲ್ಲ. ಜರ್ಮನಿಗೆ ಇವು ಅತ್ಯಾವಶ್ಯಕವಾಗಿ ಬೇಕು. ಅವುಗಳು ದೊರೆಯದ ಪ್ರಯುಕ್ತ ಅವುಗಳಿಗೆ ಸರಿ ಹೋಗುವ ಇತರ ಸಾಮಗ್ರಿಗಳನ್ನು ಆಪಾರ ಬೆಳ್ಳಿಯಿಂದ ಕೊಂಡು ಅಧಿಕ ಮಾನವ ಬಲದ ಸಹಾಯದಿಂದ ಜರ್ಮನಿಯು ತನ್ನ ಸಂಗ್ರಾಮದ ಕೆಲಸ ಕಾರ್ಯಗಳನ್ನು ಮುಂದುವರಿಸಬೇಕಾಗಿದೆ.

ಯಾವಸಂಗ್ರಾಮದಲ್ಲಿಯಾಗಲಿ ಎಣ್ಣೆಯಿ.ಲ್ಲದೆ ಯಾವ ಕೆಲಸವೂ ಸಾಗುವುದಿಲ್ಲ. ಎಣ್ಣೆಗೆ ಸಂಗ್ರಾಮದಲ್ಲಿ ಪ್ರಥಮಸ್ಥಾನವೆಯೊಯ್ಯುವುದು ಈಗಿನ ಸಂಗ್ರಾಮವು ಕೇವಲ ಯಂತ್ರಗಳಿಂದಲೂ ಮತ್ತು ರಸಾಯನಿಕ ವಸ್ತುಗಳಿಂದಲೂ ನಡೆಯಿಸಲ್ಪಡುವ ಸಂಗ್ರಾಮವಾಗಿದೆ. ಸಾಮಾನ್ಯವಾಗಿ ವಿಮಾನಗಳು, ಟ್ಯಾಂಕುಗಳು, ಮೋಟಾರು ವಾಹನಗಳು ಮತ್ತು ಮದ್ದುಗುಂಡುಗಳು, ಬಾಂಬುಗಳು ಇವುಗಳೇ ಹೆಚ್ಚು ಪ್ರಾಶಾಪಪ್ಪು ಎಣ್ಣೆಯಲ್ಲಿದ್ದಲ್ಲಿ ಯಂತ್ರಗಳೆಲ್ಲ ಸ್ಥಳಚಲ್ಪು ಸಹ ಅಲುಗಾಡುವುದಿಲ್ಲ. ಯಂತ್ರಗಳಿಗೆ ಎಣ್ಣೆಯೇ ಜೀವನಾಧಾರ. ಭೂಮಿಯಿಂದ ತೆಗೆಯಲ್ಪಡುವ 'ಕ್ರೂಡ್ ಆಯಿಲ್' ಯಂತ್ರಗಳಿಗೆ ಅಷ್ಟು ಪ್ರಯೋಜನಕ್ಕೆ ಬರುವುದಿಲ್ಲ. ಬಹುಕಾಲದ ಪ್ರಯಾಸದಿಂದ ಅನೇಕ ಯಂತ್ರಗಳ ಕೈಗೆ ಸಿಕ್ಕಿ ಶುದ್ಧಿಹೊಂದಿದ ಎಣ್ಣೆಯೇ ಅಗತ್ಯವಾದುದು.

ಈ ವಿಚಾರದಲ್ಲಿಯೂ ಸಹ ಜರ್ಮನಿಗೆ ನಾತಾವರಣವು ಅನುಕೂಲವಾಗಿಲ್ಲ. ಶಾಂತಿಯ ಕಾಲದಲ್ಲಿಯೇ ನಾಜಿಗಳು ಹಳೆಯ ರೀಷ್‌ನಲ್ಲಿ ವರ್ಷವೊಂದಕ್ಕೆ ೭,೦೦,೦೦೦ ಟಿಗಳ ಎಣ್ಣೆಯನ್ನು ಉಪಯೋಗಿಸುತ್ತಿದ್ದರು ಅದರಲ್ಲಿ ಮೂರನೇ ಎರಡು ಭಾಗವಷ್ಟು ಬಿಣ್ಣೆ ಪರದೇಶಗಳಿಂದ ಬರಬೇಕಾಗಿತ್ತು.

ಸಂಗ್ರಾಮದ ಕಾಲದಲ್ಲಿ ಜರ್ಮನಿಗೆ ಕಡೆಯ ಪಕ್ಷ ೫೧,೦೦,೦೦೦ ಟಿಗಳ ಎಣ್ಣೆಯು ವರ್ಷವೊಂದಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿದೆ ಅಂದರೆ ಶಾಂತಿಯ ಕಾಲದಲ್ಲಿ ಉಪಯೋಗಿಸುತ್ತಿರುವುದಕ್ಕೆ ಒಂದಕ್ಕೆ ಮೂರರಷ್ಟಾಯಿತು. ಇದು ಬರಿಯ ಬ್ರಿಟಿಷರ ಅಭಿಪ್ರಾಯವಲ್ಲ ಜರ್ಮನಿಯ ಅರಿತನುರಿತ ಸೈನ್ಯಾಧಿಕಾರಿಗಳಾದ ಫರ್ಡಿನೆಂಡ್ ಫ್ರೀಡೆನ್ಸ್‌ಬರ್ಗ್‌ರವರು ಆಡಿದ ಮಾತುಗಳವು. ನಾಜಿಗಳು ತಮ್ಮ ದೇಶದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ತಪ್ಪುದಲ್ಲಿ ಪರದೇಶಗಳಿಂದ, ಶಾಂತಿಯ ಕಾಲದಲ್ಲಿ ಉಪಯೋಗಿಸುತ್ತಿದ್ದುದಕ್ಕಿಂತ ಹೆಚ್ಚಾಗಿ ೧೪,೦೦,೦೦೦ ಟಿಗಳಷ್ಟು ಎಣ್ಣೆಯನ್ನು ಆಮದುಮಾಡಿಕೊಳ್ಳಬೇಕು. ಆವರು ಅದನ್ನು ಯಾವ ರೀತಿ ಪಡೆಯುವರೆಂಬುದು ಒಂದು ದೊಡ್ಡ ಸಮಸ್ಯೆಯಾಗಿದೆ.

ಶಾಂತಿಯ ಕಾಲದಲ್ಲಿ ಜರ್ಮನಿಗೆ ಅಮೆರಿಕೆಯ ಸಂಯುಕ್ತ ಸಂಸ್ಥಾನದಿಂದಲೂ ಮತ್ತು ಅಮೆರಿಕೆಯ ಇತರ ದೇಶಗಳಿಂದಲೂ ಹೇರಳವಾಗಿ ಎಣ್ಣೆಯು ಆಮದಾಗುತ್ತಿದ್ದಿತು. ಈಗ ಸಂಗ್ರಾಮವಾರಂಭವಾಗಿರುವ ಪ್ರಯುಕ್ತ ಆ ಆನುಕೂಲವು ಅಸಾಧ್ಯವಾಗಿದೆ. ತಮಗೆ ಬೇಕಾದ ಹಲವು ಸಂಗ್ರಾಮ ಸಾಮಗ್ರಿಗಳಿಗೆ ಜರ್ಮನಿಯು ರಷ್ಯದ ಕಡೆಗೇ ತಿರುಗಬೇಕಾಗಿದೆ. ರಷ್ಯದ ಎಣ್ಣೆಯ ರಫ್ತು ಎಂದಿಗೂ, ಜರ್ಮನಿಯ ಶಾಂತಿಯಕಾಲದಲ್ಲಿ ಆಮದು ಮಾಡುತ್ತಿದ್ದ ಎಣ್ಣೆಗೆ, ಐದೇ ಒಂದು ಭಾಗಕ್ಕೆಂತ ಹೆಚ್ಚಾಗಲಾರದು. ರಷ್ಯವು ಪ್ರತಿವರ್ಷವೆಂಬ ರಫ್ತುಮಾಡುವುದು ೧,೦೦,೦೦೦ ಟಿಗಳಷ್ಟು ಎಣ್ಣೆ. ಜಾಜಿಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಪೆಟ್ರೊಲ್‌ಗಾಗಿ ರಷ್ಯದಿಂದ ಜರ್ಮನಿಗೆ ಆಮದಾಗುವುದು ಅತ್ಯಲ್ಪ. ಜರ್ಮನಿಯು ಇತ್ತು ಕಶ್ಯಗಳಿಂದ ಎಣ್ಣೆಯನ್ನು ರಷ್ಯದಿಂದ ಪಡೆದರೂ ಸಹ ಅದನ್ನು ಜರ್ಮನಿಗೆ ಸಾಗಿಸುವುದು ಅತಿಪ್ರಯಾಸ ವಾದುದಾಗಿದೆ. ರಷ್ಯದಿಂದ ಜರ್ಮನಿಗೆ ಆಮದಾಗುತ್ತಿದ್ದ ಎಣ್ಣೆಯು ಶಾಂತಿಯಕಾಲದಲ್ಲಿ, ಕಪ್ಪುಸಮುದ್ರ, ಅಜ್ಯಾಂಟಿಕ್ ಮತ್ತು ಮೆಡಿಟೇರಿಯನ್ ಸಮುದ್ರಗಳಮೂಲಕ ಉತ್ತರ ಸಮುದ್ರತೀರದಲ್ಲಿರುವ ಜರ್ಮನಿಯ ರೇವುಪಟ್ಟಣಗಳಿಗೆ ಸೇರುತ್ತಿತ್ತು. ಆದರೆ ಈಗ ಆ ಮಾರ್ಗಗಳು ಸಂಪೂರ್ಣವಾಗಿ ಮುಚ್ಚಿಹೋಗಿವೆ. ಆವರಿಗೆ ಈಗ ಉಳಿದಿರುವುದು ಒಂದೇ ಮಾರ್ಗ. ಅದು ಕಪ್ಪುಸಮುದ್ರ ಮತ್ತು ಡಾನ್ಯೂಬ್ ನದಿ ಮೂಲಕವಾಗಿ. ಆದರೆ ಆ ಮಾರ್ಗದಿಂದ ಅಧಿಕ ಪ್ರಮಾಣದಲ್ಲಿ ಸಾಗಿಸಲು ಸಾಧ್ಯವಿಲ್ಲ. ಏಕೆಂದರೆ ಅವರಲ್ಲಿ ಅಧಿಕ ಸಂಖ್ಯೆಯ ಟ್ಯಾಂಕರುಗಳೂ ಬಾರ್ಜುಗಳೂ ಮತ್ತು ಟ್ಯಾಂಕ್‌ಸ್ಟಾಗ್‌ನ್ನುಗಳೂ ಇಲ್ಲ. ಆದೂ ಅಲ್ಲದೆ ಡಾನ್ಯೂಬ್ ನದಿಯಲ್ಲಿ ಸುಲಭವಾಗಿ ಹಡಗುಗಳು ಹೋಗುವಂತಿಲ್ಲ. ಚಳಗಾಲದಲ್ಲಿ ಸಾವಾಸ್ಯವಾಗಿ ನದಿಯು ತೆಳಧಾನವು ಗಡ್ಡೆಕಟ್ಟಿಬಿಡುವುದು.

ನಾಜಿಗಳು ಈ ಕಪ್ಪುಗಳನ್ನು ಅರಿತು ಬೇರೆ ಉಪಾಯದಿಂದ ಕಲ್ಲಿದ್ದಿಲಿನ ಮೂಲಕ ಸಿಂಥೆಟಿಕ್ ಎಣ್ಣೆಯ ತಯಾರಿಕೆಗಳನ್ನು ಅಧಿಕಪಡಿಸಿಕೊಳ್ಳಬಹುದು. ಈ ವ್ಯವಸ್ಥೆಗೆ ಅಪಾರ ಹಣ ವೆಚ್ಚವಾಗುವುದು. ಅಲ್ಲದೆ ಶಾಂತಿಯ ಕಾಲದಲ್ಲಿಯೇ ಹೇರಳವಾಗಿ ಕಲ್ಲಿದ್ದಿಲು ವೆಚ್ಚವಾಗಿದೆ. ಈ ಮೂಲಕವಾಗಿ ಎಣ್ಣೆಯ ತಯಾರಿಕೆಯನ್ನು ಇನ್ನೂ ಹೆಚ್ಚಿಸುವುದಾದರೆ ಜರ್ಮನಿಯು ಕಲ್ಲಿದ್ದಿಲಿನ ಸಮಸ್ಯೆಯು ವಿಳುವುದು ಅಧಿಕಪ್ರಮಾಣದಲ್ಲಿ ಕಲ್ಲಿದ್ದಲನ್ನು ತೆಗೆಯುವುದು ಅತ್ಯು ಸುಲಭವಾದ ಕೆಲಸವಲ್ಲ. ಅದಕ್ಕೆ ಬಹು ಪ್ರಯಾಸಪಡಬೇಕು. ಗಣಿಗಳಿಂದಲೇ ಕಲ್ಲಿದ್ದಲನ್ನು ತೆಗೆಯಬೇಕು. ಅದನ್ನು ತೆಗೆಯಬೇಕಾದರೂ ಶಕ್ತಿಯನ್ನು ಅನುಭವವೂ ಮತ್ತು ವಿಪ್ಪಣವೂ ಬೇಕು. ಸಾವಿರಾರು ಜನ ನುರಿತವರನ್ನು ಅತ್ಯಲ್ಪಕಾಲದಲ್ಲಿ ತಯಾರಿಸಲು ಸಾಧ್ಯವಿಲ್ಲ

ಈ ಪ್ರಯತ್ನಗಳಲ್ಲೆಲ್ಲ ನಾಜಿಗಳಿಗೆ ಹೆಚ್ಚು ಫಲದೊರೆಯದಿದ್ದಲ್ಲಿ ಅವರು ರೊಮೇನಿಯದ ಎಣ್ಣೆಯ ಗಣಿಗಳನ್ನು ವಶಪಡಿಸಿಕೊಳ್ಳಲು ರೊಮೇನಿಯವನ್ನು ಮತ್ತ ಬಹುದು. ಅಲ್ಲಿಯ ಎಣ್ಣೆಯಗಣಿಗಳು ಯಾವರೀತಿ ಇವೆಯೋ ಅದೇರೀತಿ ಅವುಗಳನ್ನು ಜರ್ಮನರು ವಶಪಡಿಸಿಕೊಂಡರೂ ಸಹ ಅವರ ಸಮಸ್ಯೆಯು ಬಗೆಹರಿಯುವ ದಿಲ್ಲ. ಅವರಿಂದ ಸ್ವಲ್ಪಕಾಲದವರೆಗೆ ಪರಿಹಾರ ದೊರೆತಂತೆ ಆಗಬಹುದು. ನಾಜಿಗಳು ರೊಮೇನಿಯವನ್ನು ವಶಪಡಿಸಿಕೊಳ್ಳುವುದೂ ಸಹ ಅನುಮಾನಪ್ರದಾಗಿಯೇ ಇದೆ. ಜರ್ಮನಿಯಷ್ಟೆಯೂ ಮತ್ತು ರೊಮೇನಿಯಷ್ಟೆಯೂ ತಯಾರಾಗುವ ಎಣ್ಣೆಯೂ, ಜರ್ಮನಿಗೆ ಈ ಸಂಗ್ರಾಮದ ಕಾಲದಲ್ಲಿ ಬೇಕಾಗುವ ಎಣ್ಣೆಗೆ, ಅರ್ಧಕ್ಕಿಂತ ಅಧಿಕವಾಗಿರಲಾರದು. ರೊಮೇನಿಯದ ಎಣ್ಣೆಯು ವಿಮಾನಗಳಿಗೆ ಅಷ್ಟು ಸಮರ್ಪಕವಾಗಿಲ್ಲ. ಜರ್ಮನಿಗೆ ಸಂಗ್ರಾಮದ ಕಾಲದಲ್ಲಿ ಬೇಕಾಗುವ ಎಣ್ಣೆಗೂ ಜರ್ಮನಿಯ ಅಭಿಗದಲ್ಲಿರುವ ದೇಶಗಳಲ್ಲಿ ದೊರಕುವ ಎಣ್ಣೆಗೂ ಪರಾಮದಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ಶಾಂತಿಯ ಕಾಲದಲ್ಲಿ ತೆಗೆಯಿಸಿದುದನ್ನು ಉಪಯೋಗಿಸಿಕೊಂಡು ಸ್ವಲ್ಪಕಾಲ ತಳ್ಳಬಹುದು. ಕಾಲಕ್ರಮದಲ್ಲಿ ಹೆಚ್ಚಿನ ಎಣ್ಣೆಯನ್ನು ಸಂಗಡಿಸಲು ಜಾಜಿಗಳಿಗೆ ಆಪಾರವಾದ ಅತ್ಯಗಳು ಸಂಭವಿಸಬಹುದು.

ಸಂಗ್ರಾಮಕ್ಕೆ ಅತ್ಯವಶ್ಯಕವಾಗಿರುವ ಅಭ್ರಾಖ ಮತ್ತು ಗಳನ್ನು ಜರ್ಮನಿಯು ಹೇಗೆ ಪಡೆಯುವುದೋಬುದು ಒಂದು ದೊಡ್ಡ ಸಮಸ್ಯೆಯಾಗಿದೆ ಅಭ್ರಾಖ ವಸ್ತುಗಳಲ್ಲಿ ಅತಿ ಮುಖ್ಯವಾದುದು ಅಭ್ರಾಖ ಅಯಿರು. ಇದರ ಸಂಗ್ರಾಮದ [ಶೂರ್ವದಲ್ಲಿ ಜರ್ಮನಿಯು ತಮಗೆ ಬೇಕಾದ ಅಭ್ರಾಖ ಅದುರಿನ ಮುಕ್ಕಾಲು ಪ್ರಮಾಣವನ್ನು

[೬ ನೆಯ ಪುಟದಲ್ಲಿ ನೋಡಿ]

ಪಂಚಾಚಾರ್ಯಪ್ರಭಾ.

೧೯೪೦ ನೆಯ ಫೆಬ್ರವರಿ ತಾ|| ೧೯ ನೆಯ ಸೋಮವಾರ

ಭೃತ್ಯಾಚಾರ.

ಈಗ್ಗೆ ಕೆಲವು ವಾರಗಳಿಂದ ನಮ್ಮ ಪತ್ರಿಕೆಯಲ್ಲಿ ವೀರಶೈವಮತಕ್ಕೆ ಮುಖ್ಯಾಂಗಭೂತವಾಗಿರುವ ಪಂಚಾಚಾರಗಳಲ್ಲಿ ಪದಾ ಕಾರ ಶಿವಾಚಾರ ಲಿಂಗಾಚಾರ ಗಣಾಚಾರಗಳೆಂಬ ನಾಲ್ಕು ಆಚಾರಗಳ ವಿಷಯವನ್ನು ಚೆಂದವಾಗಿ ಜ್ಞಾನಿಗಳಾದ ಸರವಾಗಿ ಪ್ರತಿಪಾದಿಸಿದೆಪಲ್ಲೆ. ಸದ್ಯ ಭೃತ್ಯಾಚಾರವಿಷಯವನ್ನು ಪ್ರತಿಪಾದಿಸುವುದಾಗಿರುವುದು ಈ ಐದು ಆಚಾರಗಳಲ್ಲಿ ಗಣಾಚಾರವೇ ಬಹು ಮುಖ್ಯವಾಗಿರುವುದೆಂಬ ವಿಷಯವು ಪಾಠಕರಿಗೆ ನೇಯ್ದಾಗಿರಬಹುದು ಗಣಾಚಾರವಲ್ಲಿ ಕ್ತಾಗಿರುವಂತೆ ವೀರಶೈವಪುರವರ್ತಿಸಿದ್ದಾದರೆ ಅವನು ಸಾಕ್ಷಾತ್ ಶಿವನೇ ಎಂದೆ ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ ಈ ಆಚಾರದಲ್ಲುಕ್ತವಾಗಿರುವ ಪ್ರತಿಯೊಂದ ವಿಷಯವೂ ಬಹು ಮಹತ್ವದಿಂದ ಕೂಡಿರುವುದು. ಆಚಾರವೀರ ಈ ವಿಷಯವನ್ನು ನ್ನೀಡಿ ಪರಮಾನಂದಬರಿತರಾಗಿರಲಿ ಅನೆಂತರವೃತ್ತಿಯಿಪ್ಪತ್ತೆಸಿಂತಾಪರಮಾನಂದ ಹೊಂದ್ದಜ್ಞಾನಿಗಳವ್ಯ ಇಂತಹ ಅನೇಕಾನೇಕ ವಿಷಯಗಳಿಂದ ತಿಳಿಸಿ ತ್ಸಳಕುತ್ತಿರುವುದು ಈ ವಿಷಯಗಳಾವು ಇಲ್ಲಿಯವರೆಗೆ ಎಲ್ಲಿಯೂ ಮೊಸರಿತ್ತಿಲ್ಲ ಸದ್ಯ ಮೊದಲಾದವು ಈ ಮತದ ಪ್ರೌಢಪ್ರಬುದ್ಧವಸಿಂದೇ ತೋರಿಹನಗಿದೆ ಕಾರಣಾಗವೂ ಸಹ ಅತ್ಯಕವ ಹತ್ತ್ವವಿಷಯಗಳಂದೊಡಗೂಡಿರುವುದೆ ಜಿ ಪ್ರಜ್ಞಾವಂತರವ ಪವ ಪ್ರಾಯವು ಪೂರ್ತಿಯಾಗುತ್ತ ಬಂದಿರುವುದ ಇದು ಪರ್ಣವಾದ ಕೂಡಲೇ ಕಾರಣಾಗವ ದ ವಿಷ್ಯಾವು ಪ್ರಾರಿ ಭಸಲ್ಪಡುವುದು ಅನಂತರ ಮಕುಟಾಗಮ ವೀರಾವಳಿ ಮುದ್ರಿಸಲ್ಪಡುವುದು ಇನ್ನುಗಳಪ್ಪವನ್ನೂ ಒತ್ತಟ್ಟಿಗೆ ರೀತಿಸಿ 'ವಿವಾಗಮಸಂಗ್ರಹ' ಎಂಬ ಹೆಸರಿನಿಂದ ಪ್ರಸಿದ್ಧವಾಗಿಡಬೇಕೆಂದು ಸಂಕಲ್ಪಿಸಿದ್ದೇವ ಈ ಮಹಾಕಾರ್ಯಕ್ಕೆ ಶ್ರೀ ಜಗದ್ಗುರುಗಳ ಸಂಪೂರ್ಣಾನುಗ್ರಹವು ಮುಖ್ಯವಾದುದು ಆಸ್ತು!

ಇನ್ನು ಭೃತ್ಯಾಚಾರ ವಿಷಯವನ್ನು ಪ್ರತಿಪಾದಿಸೋಣ!

ಭೃತ್ಯಕ್ಷಂ ನಿರ್ಭೃತ್ಯಕ್ಷಂ ಭೃತ್ಯಾಚಾರೋ ದ್ವಿಧಾ ಮತಃ।
ಗುರು ಲಿಂಗಜಂಗಮಾನಾಂ ಕೈಂಕರ್ಯಾದಿಹ ಪೂರ್ವತಃ।
ಭೃತ್ಯಕ್ಷನಿತಿ ನಿರ್ದಿಷ್ಟಃ ನಿರ್ಭೃತ್ಯಕ್ಷಸ್ತು ಶಂಭವಃ ॥೧೭॥

(ಸೂತ್ರಜ್ಞಾನ ಪಟಲ ೯)

ಭೃತ್ಯಾಚಾರವು—ಭೃತ್ಯಕ್ಷ ವತ್ತ ವೀರಭೃತ್ಯಕ್ಷ ವೆಂಬುದಾಗಿ ಎರಡ ಪ್ರಕಾರವಿರುವುದು ಗುರುಲಿಂಗ ಜಂಗಮರ ವಿಷಯದಲ್ಲಿ ಅತ್ಯಂತ ಕೈಂಕರ್ಯಭಾವದಿಂದ ವರ್ತಿಸುವುದೇ ಭೃತ್ಯಾಚಾರವೆನಿಸುವುದು

ಪೀಠಿಕಾಯಾ ತಸ್ಯಾಂ ಚಿತ್ತಂ ಶಂಭೋಃ ಪದಂ ತಥಾ।
ಜಂಗಮಾಯ ಸಮರ್ಪ್ಯೈವಂ ಸ ಹೋತ್ಸಾಶಮಮುತಃ ॥೧೭೪॥

ಮುಕ್ತಿಮೇವ ಗಣಂಕಾಶ್ಚಸಾಗರೋ ಯಮವತಿಷ್ಠತೇ।
ತಸ್ಮೈತಂ ವೀರಭೃತ್ಯಕ್ಷಂ ಶಿವಪುರ್ಸ್ಯಾಜಸಂ ॥೧೭೫॥

ಯಾವನು ಗುರುವಿಗೆ ಶರೀರವನ್ನೂ, ಶಿವನಿಗೆ ಮತ್ತೆಸ್ಸನ್ನೂ, ಜಂಗಮನಿಗೆ ಧನವನ್ನೂ ಸಮರ್ಪಿಸಿ, ಪರಮಾನಂದಾನ್ವಿತನಾಗಿ ಸರ್ವಶ್ರೇಷ್ಠವಾದ ಮೋಕ್ಷವನ್ನು ಅಪೇಕ್ಷಿಸುವನೋ, ಅವನೇ ನಿರಭೃತ್ಯಕ್ಷನೆನಿಸಿಕೊಳ್ಳುವನು. ಅವನ ಈ ವಿಧವಾದ ಆಚರಣೆಯೇ ಶಿವಾನುಗ್ರಹ ಸಾಧನವಾದ ವೀರಭೃತ್ಯಾಚಾರವೆನಿಸಿಕ್ಕುವುದು

ಇತ್ಯೇವಂ ಕಥಿತಸ್ತುಭ್ಯಂ ಪಂಚಾಚಾರವಿನಿರ್ಣಯಃ।
ನಿಗಮಾಗಮಸಾರೋಽಯಂ ಮುಕ್ತಿಪಾಪ್ತೈ ಸ್ಮಕಾಧನಃ ॥೧೭೬॥

ಎಲೈ ಬೃಹಸ್ಪತಿಯೇ, ನಿಗಮಾಗಮಸಾರಭೂತವೂ, ಮೋಕ್ಷಸಾಧನವೂ ಆದ ಪಂಚಾಚಾರಸ್ವರೂಪವು ನಿನಗೆ ಉಪದೇಶಿಸಲ್ಪಟ್ಟಿತು ಇದರಂತೆ ನೀನು ಆಚರಿಸಿ ಧನ್ಯನಾಗೆಂದು ಆನಂತರುಪ್ಪನು ಬೃಹಸ್ಪತಿಗೆ ಬೋಧಿಸಿದುವಸು ಈ ವಿಧವಾದ ಬೋಧಾಮೃತವನ್ನು ಆಸ್ತಿಕ ಮತಾವಲಂಬಿಯಾಗಿಳಾದ ವೀರಶೈವರೆಲ್ಲರೂ ಪರಮಾನಂದದಿಂದ ಪಾನಮಾಡಿ ಧನ್ಯಾತ್ಮರಾಗಿ ಪರಶಿವನಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ

ಯುದ್ಧವಾರ್ತೆ.

ರಷ್ಯದ ಜಯ

ಕರೇಲಿಯನ್ ಇಸ್ತ್ಮಸ್‌ನಲ್ಲಿ ರಷ್ಯನರು ಫಿನ್‌ಲೆಂಡಿನ 12 ರಕ್ಷಣ ಕೋಟೆಗಳನ್ನೂ ಕಾಕ್ರೇಟಿನಂದ ನಿರ್ಮಿತವಾಗಿರುವ 12 ಫಿರಂಗಿ ಕೋಟೆಗಳನ್ನೂ ವಶಪಡಿಸಿಕೊ ಡಿರುವುದು ರಷ್ಯ ಪ್ರಕಟನೆಯು ತಿಳುಹಿಸುತ್ತದೆ

ಫಿನ್‌ಲೆಂಡಿಗೆ ಹೊರಗಿನ ಸಹಾಯ

ಈ ತಿಂಗಳು ಫಿನ್‌ಲೆಂಡಿಗೆ ಬೇರೆ ದೇಶಗಳಿಂದ 700 ವಿಮಾನಗಳು ಬರುವವೆಂದು ಪ್ರಕಟವಾಗಿದೆ ಸ್ವೀಡನ್ ೨೦೦ ವಿಮಾನಗಳನ್ನೂ, ಅಮೆರಿಕೆಯಿಂದ 300 ವಿಮಾನಗಳನ್ನೂ, ಇಟಲಿಯಿಂದ 100 ವಿಮಾನಗಳನ್ನೂ ಬರುವ ಸಂಭವವಿದೆ ೨೦ ಲಕ್ಷ ಕ್ರೋನರ್ ಬೆಲೆಯ ಸಂಪ್ರಾಮಸಾಮಗ್ರಿಗಳು ಸ್ವೀಡನಿಂದ ಬರುವವೆಂದೆ

ಜರ್ಮನ್ ಸೈನಿಕರು ರೈಲನ್ನು ಸುಟ್ಟರು

ಪೈನ್‌ಲ್ಯಾಂಡ್ ಪ್ರದೇಶದ ರೆಯೆಟ್‌ನಿಗರದ ಹತ್ತಿರ ವಿದ್ದ ಜರ್ಮನಿಯ ಸೈನ್ಯಪಡೆಯನ್ನು ಅಲ್ಲಿಂದ ಬೇರೆ ಕಡೆಗೆ ಹೊರಡುವಂತೆ ಸೈನ್ಯಾಧಿಕಾರಿಗಳು ಆಜ್ಞಾಪಿಸಿದ್ದರು ಯುದ್ಧಾರಂಭದಿಂದ ಗೊತ್ತುಗುರಿಯಿಲ್ಲದೆ ಸೈನಿಕರನ್ನು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಸುತ್ತಿಸುತ್ತಿರುವದರಿಂದ ಅಸಮಾಧಾನಹೊಂದಿದ ಸೈನಿಕರು ತಮ್ಮನ್ನು ಕುಳ್ಳಿರಿಸಿ ಕೊಂಡು ಹೊರಡಲು ಸಿದ್ಧವಾಗಿದ್ದ ರೈಲಿಗೆ ಬೆಂಕಿಯಿಟ್ಟು ಸುಟ್ಟುಬಿಟ್ಟರು ಅಧಿಕಾರಿಗಳು ಆ ಸೈನಿಕರ ಮೇಲೆ ಉಗ್ರಕಾರ್ಯಕ್ರಮವನ್ನು ಕೈಕೊಂಡಿರುವರಂತೆ!

ಮ್ಯಾನರ್‌ಹೀಂ ಕೋಟೆಗಳನ್ನು ತೀಕ್ಷ್ಣ ವಶಮಾಡಿಕೊಳ್ಳುವ ಪ್ರಯತ್ನ

ಪೆಬ್ರವರಿ ತಿಂಗಳ ಅಂತ್ಯ ಭಾಗದಲ್ಲಿ ಫಿಲೆಂಡಿನಲ್ಲಿ ವಿಶೇಷವಾಗಿ ಮಂಜು ಬಿದ್ದು ಸಂಚಾರವೇ ಅಪ್ಯಸಾಧ್ಯವಾಗುವುದರಿಂದ ಅಪ್ಪರೋಪಾಗಿ 'ಮಾನರ್‌ಹೀಂ' ರಕ್ಷಣ ದುರ್ಗಗಳನ್ನು ಸೈನಿಕ ಮಾಡಿಕೊಳ್ಳಬೇಕೆಂದು. ರಷ್ಯಾಸೈನ್ಯಾಧಿಕಾರಿಗಳ ಅಪೇಕ್ಷೆಯಾಗಿದೆ ಆದುದರಿಂದ ಅಲ್ಲಿ ರಷ್ಯಾಸೈನಿಕರ ಆಕ್ರಮಣವು ದಿನ ದಿನವೂ ಹೆಚ್ಚುತ್ತದೆ. ರಷ್ಯನರು ಮ್ಯಾನರ್‌ಹೀಂ ಲೈನಿನಲ್ಲಿ ಬಹಳ ಮುಂದುವರಿದು ಕೃದೇಶಗಳನ್ನು ವಶಪಡಿಸಿಕೊಂಡಿರುವ ದಾಗಿ ಫಿನ್‌ಲೆಂಡಿನವರು ಒಪ್ಪಿಕೊಂಡಿದ್ದಾರೆ

ಫಿನ್ನಿಷರ ಸಾಹಸ!

ಕರೇಲಿಯನ್ ಇಸ್ತ್ಮಸ್‌ನಲ್ಲಿ ಭಯಂಕರವಾದ ಯುದ್ಧವು ಆರಂಭವಾಗಿ 16 ದಿವಸಗಳ ಮೇಲಾಯವು. ಇಲ್ಲಿ ಫಿನ್ನಿಷರ ಪ್ರತಾಕಕ್ಕೆ ಪ್ರತಿದಿನ 3000 ರಷ್ಯನರು ಆಹುತಿಯಾಗುತ್ತಿದ್ದಾರೆಂದು ಹೇಳಲಾಗಿದೆ. ಇಲ್ಲಿಯ ವರೆಗೂ ರಷ್ಯನರ ಕಡೆ ಸತ್ತವರ ಗಾಯಗೊಂಡವರ ಮತ್ತು ಸೆರೆ ಸಿಕ್ಕಿರುವವರ ಸಂಖ್ಯೆಯು 33 ಸಾವಿರಕ್ಕೇರಿರುತ್ತದೆಯೆಂದು ತಿಳಿದುಬರುತ್ತದೆ. ಅಕ್ಟೋಬರ್ ತಿಂಗಳಿಯನ್ ಪ್ರದೇಶದಲ್ಲಿ ರಷ್ಯನ್ನರು 3 ಲಕ್ಷ ಜನ ಸೈನಿಕರನ್ನು ಒಟ್ಟುಗೂಡಿಸಿದ್ದಾರೆ. ಆದರೆ ಇನ್ನು ಜನವು ಒಟ್ಟಿಗೆ ಹೊಡೆದಾಟಕ್ಕೆ ಸಿಲ್ಲಲು ಸ್ಥಳವಿಲ್ಲವೆಂದು ತೋರುತ್ತದೆ. ಬಾಲ್ಟಿಕ್ ಸಮುದ್ರಪ್ರದೇಶದಲ್ಲಿ ಇನ್ನೂ ಹಿಮವು ಜೆಕ್ಕಾಗಿ ಸುರಿಯುತ್ತಿರುವುದರಿಂದ ರಷ್ಯನ್ ವಿಮಾನಗಳ ಆಟವು ಹೆಚ್ಚಾಗಿ ನಡೆಯಲವಕಾಶವಿಲ್ಲವಾಗಿದೆ.

ಜರ್ಮನಿಯ ಆರ್ಥಿಕ ದುಃಸ್ಥಿತಿ

ಕಿಂಗ್ಸ್‌ಲೆವ್ಹಾರವರು ಬ್ರಸ್ಸಲಿನಲ್ಲಿ ಭಾಷಣಮಾಡುತ್ತ—"ಜರ್ಮನಿಯ ಆರ್ಥಿಕ ಸ್ಥಿತಿಯು ದಿನೇ ದಿನೇ ಕೆಡುತ್ತಿರುವುದರಿಂದ ಅಲ್ಲಿಯ ಜನಗಳಿಗೆ ಕಳವಳವುಂಟಾಗಿದೆ ಜರ್ಮನರ ಈ ಸ್ಥಿತಿಗೆ ಮುಖ್ಯವಾದ ಕಾರಣವೆಂದರೆ, ಅದು ರಷ್ಯದೊಡನೆ ಬೆಳೆಯಿಸಿದ ಸ್ನೇಹ. ರಷ್ಯದೊಡನೆ ಒಪ್ಪಂದಮಾಡಿಕೊಂಡುದರಿಂದ ರಾಜಕೀಯ ಮತ್ತು ಇತರ ಸೌಕರ್ಯಗಳು ಜರ್ಮನಿಗೆ ಲಭಿಸಿದುವೆಂದು ಹರ್ ವಾನ್‌ರಿಬ್ಬನ್‌ಟ್ರಾಫರು ಕೂಡ ಹೇಳಲು ಸಾಧ್ಯವಿಲ್ಲವಾಗಿದೆ. ಈ ಕಡೆ ಬ್ರಿಟನ್ ಮತ್ತು ಫ್ರಾನ್ಸ್‌ಗಳ ಬಾಂಧವ್ಯವು ಹಿಂದಿಂದೂ ಇಲ್ಲದಷ್ಟು ಭದ್ರವಾಗುತ್ತಿದೆ ಈ ಎರಡು ದೇಶಗಳಲ್ಲಿ ಪರಸ್ಪರ ಉಂಟಾಗಿರುವ ನಂಬಿಕೆಯು ಅಪೂರ್ವವಾದುದು" ಎಂದು ಹೇಳಿದರು.

ಫಿಲೆಂಡಿಗೆ ಅಮೆರಿಕೆಯ ಸಹಾನುಭೂತಿ

ಕಳೆದ 10 ನೆಯ ತಾರೀಖಿನ ದಿವಸ ಅಮೇರಿಕೆಯ ರಾಜ್ಯಾಧ್ಯಕ್ಷರಾದ ರೂಜ್‌ವೆಲ್ಟರು ಅಮೇರಿಕೆಯ "ಸಿಟಿಜನ್ಸಿಪ್ ಇನ್ಸ್‌ಟಿಟ್ಯೂಟ್" ಸದಸ್ಯರನ್ನು ಕುರಿತು ಭಾಷಣ ಮಾಡುತ್ತ ಕಳೆದ ಹತ್ತು ವರ್ಷಗಳ ಅಮೇರಿಕೆಯ ಇತಿಹಾಸವನ್ನು ವರ್ಣಿಸಿದರು ಅನಂತರ ಫಿಲೆಂಡಿನ ವಿಚಾರವನ್ನೆತ್ತಿ—"ಫಿನ್‌ಲೆಂಡಿನ ವಿಷಯದಲ್ಲಿ ಅಮೇರಿಕೆಗೆ 98 ರಷ್ಟು ಸಹಾನುಭೂತಿಯಿದೆಯೆಂದೂ, ನಾವು ಫಿಲೆಂಡಿಗೆ ಸಹಾಯ ಮಾಡುತ್ತಿರುವುದರಿಂದ ರಷ್ಯವು ಅಮೇರಿಕೆಯ ಮೇಲೆ ಯುದ್ಧ ಹೂಡಿಬಹುದೆಂಬುದು ತಿಳಿದಿಲ್ಲದ ಮಾತಾಗಿದೆಯೆಂದೂ, ಸೋವಿಯಟ್ ಸರ್ವಾಧಿಕಾರಿ ಪ್ರಭುತ್ವವು ಉಳಿದ ಸರ್ವಾಧಿಕಾರಿ ಪ್ರಭುತ್ವಕ್ಕಿಂತ ನಿರಂಕುಶವಾದುದೆಂದೂ, ತನಗೆ ಯಾವ ವಿಧದಲ್ಲೂ ತೊಂದರೆ ಕೊಡಲು ಶಕ್ತಿಯಿಲ್ಲದ ಸಣ್ಣ ನೆರೆ ರಾಷ್ಟ್ರದಮೇಲೆ ರಷ್ಯವು ದಾಳಿಯನ್ನಾರಂಭಿಸಿದೆಯೆಂದೂ, ರಷ್ಯದ ಪ್ರಭುತ್ವ ಪ್ರಯೋಗದ ವಿಷಯವಲ್ಲಿ ತಾನು ಇಟ್ಟುಕೊಂಡಿದ್ದ ಅಭಿಪ್ರಾಯವು ತಪ್ಪೆಂಬುದು ಸ್ಪಷ್ಟವಾಯಿತೆಂದೂ" ಹೇಳಿದರು.

ಹಡಗುಗಳ ನಾಶ

ಹಾಲೆಂಡ್ ಅಮೇರಿಕೆಗಳ ನಡುವೆ ಓಡಾಡುತ್ತಿದ್ದ 'ಬರ್‌ಜರ್‌ಡಿಕ್' ಎಂಬ ಡಚ್ಚರ ಹಡಗು ಜರ್ಮನಿಯ 'ಯು' ಬೋಟಿನಿಂದ ಮುಳುಗಿಸಲ್ಪಟ್ಟಿತು. ಉತ್ತರ ಸಾಗರದಲ್ಲಿ ಶತ್ರು ವಿಮಾನಗಳ ಬಾಂಬುಗಳಿಗೆ ಸಿಕ್ಕಿ ಕಾಬರ್ಟಜಾ ಮತ್ತು ಪೋರ್ಟರಾಯಲ್ ಎಂಬ ಎರಡು ಟ್ರಾಲರ್ ಹಡಗೆಗಳು ಮುಳುಗಿದವು. 4 ಜನ ಅಧಿಕಾರಿಗಳೂ 18 ನಾವಿಕರೂ ಸಮುದ್ರದ ಪಾಲಾದರು. ಬ್ರಿಟಿಷ್ಸಿಗೆ ಎಣ್ಣೆಯನ್ನು ತುಂಬಿಕೊಂಡು ಬರುತ್ತಿದ್ದ "ಗ್ರೇಟ್‌ಫಿಲ್ಲಾ" ಎಂಬ ಹಡಗು ಸ್ಕಾಟ್ಲಿಂಡಿನ ಈಕಾನ್ಸ್ ದಿಕ್ಕಿನ ಸಮುದ್ರ ತೀರಪ್ರದೇಶದಲ್ಲಿ ಬೆಂಕಿ ಬಿದ್ದು ಸುಟ್ಟುಹೋಯಿತು. ಬ್ರಿಟಿಷ್ಸಿನ "ಟ್ರಾಂಪ್" ಎಂಬ ಹಡಗು ಉತ್ತರ ಸಮುದ್ರದಲ್ಲಿ ಸ್ಕೊಟಿಷರೆಕ್ಕೆ ಗುರಿಯಾಗಿ ಮುಳುಗಿತು. ಅದರಲ್ಲಿದ್ದವರಲ್ಲಿ 5 ಜನರು ಪತ್ತೆಇಲ್ಲದಾಗಿರುತ್ತಾರೆ. ಬ್ರಿಟಿಷ್ಸಿನ 10 ಸಾವಿರ ಟನ್ ತೂಕದ "ಸ್ಟಲ್ಲಾಸ್ಟಾರ್" ಎಂಬ ಹಡಗು ಟಾರ್ಪಿಡೋ ನಾಡಿಸಲ್ಪಟ್ಟು, ತಾಶವಾಹಿಸಿಂದು ಗೊತ್ತಾಗುತ್ತದೆ. ಆ ಹಡಗಿನಲ್ಲಿದ್ದವರು ಬದುಕಿದರು.

ಹಿಟ್ಲರನು ಜಯಿಸಬಲ್ಲನೇ?

ಜರ್ಮನಿಯ ಶಕ್ತಿಯು ಅಳವನ್ನೆನ್ನುವುದು ಈಗಿನ ಸಂದರ್ಭದಲ್ಲಿ ಒಪ್ಪತಕ್ಕದ್ದಲ್ಲ. ಜರ್ಮನ್ ಶಸ್ತ್ರಾಸ್ತ್ರ ಸೇನೆಯನ್ನು ವಿಸಾರಿಸುವ ಸೇವೆಯೆಂದರೆ ಸದ್ಯಃ ಪ್ರೇಷಣವೇ. ಬ್ರಿಟನ್ನಿನ ಶಸ್ತ್ರಾಸ್ತ್ರಗಳನ್ನಾತಂಭೂಸೇನೆ, ಜರ್ಮನಿಗೆ, ಸರಿಯೋ ಅಲ್ಲವೊ ತಿಳಿಯದು ಇನ್ನು ಜರ್ಮನಿಯ ವಿಮಾನ ಬಲದ ಖಾತಸವಂತೂ, ಈಗಾಗಲೇ ಜಗತ್ತಿಗೆ ತಿಳಿದುಬಂದಿದೆ ಜರ್ಮನ್ ನೌಕಾದಳ ಮಾತ್ರ, ಬ್ರಿಟನ್ನಿನ ನೌಕಾದಳವನ್ನು ಸರಿಗಟ್ಟಲಾರದು. ಅದರೆ ಜರ್ಮನಿಯು ನೌಕಾಬಲೆಯು ಕಿರಿದಾದರೂ, ಸರ್ಮರಿನ್ ದಳವು ಪ್ರಬಲವಾದುದು. "ಸರ್ಮರಿನ್" ಹಾಗೂ "ಮೈನ್" ಕಾಣಾಟಗಳಲ್ಲಿ, ಜರ್ಮನಿಯು ಸದ್ಯಃ ಮೇಲ್ಕೈಯನ್ನು ತೋರಿಬಿತ್ತದೆ.

ಕೊನೆಯ ಕಾಳಗವು ನೆಲದ ಮೇಲೆಯೇ. ನಡೆಯಬೇಕಾಗಿದೆ ಎಂಬ ವಿಚಾರವು ಜರ್ಮನಿಗೆ ಚೆನ್ನಾಗಿ ತಿಳಿದೇ ಇದೆ ಬಲದಲ್ಲಿ ಜರ್ಮನ್ ಸೇನೆಯು ಕಡಿಮೆಯದಲ್ಲ ಆದರೆ, ಶಸ್ತ್ರಾಸ್ತ್ರಗಳ ಹಾಗೂ ಯಂತ್ರಶಾಸ್ತ್ರಿಗಳ ವಿಚಾರದಲ್ಲಿ, ಇದು ಸ್ಪೆಂಚ್ ಸೇನೆಗಿಂತ ಕಡಿಮೆ ತರಗತಿಯದು. ಜರ್ಮನಿಯಲ್ಲಿ ಯೋಗ್ಯ "ರಿಜರ್ವ್" ಸೇನೆಯಿಲ್ಲ ಫ್ರೆಂಚರಲ್ಲಿ ೫೦ ಲಕ್ಷ ಸೈನಿಕರಿದ್ದಾರೆ ಜರ್ಮನಿಗೆ ಫ್ರಾನ್ಸಿನಂತೆ ಬೇಕಾದ ಸೈನಿಕರನ್ನು ಒದಗಿಸಿಕೊಳ್ಳಲು ತಕ್ಕ ಮನಾಹತುಗಳೂ ಇಲ್ಲ

ಒಂದು ಕಾಲದಲ್ಲಿ ಜರ್ಮನ್ ಸೇನೆಯು ನಾಯಕ ನಾಗಿದ್ದ ಜನರಲ್ ಫ್ರಿಡ್ಸನು ಪೋಲೆಂಡ್ ಯುದ್ಧದಲ್ಲಿ ಮಡಿದುಹೋದಮೇಲೆ ಜರ್ಮನ್ ಸೇನೆಯು ಸರಿಯಾದ ರೀತಿಯಲ್ಲಿಲ್ಲವೆಂದು ವ್ಯಕ್ತವಾಗುತ್ತದೆ ಆದರೆ ಫ್ರೆಂಚ್ ಸೈನ್ಯಾಧಿಕಾರಿ ಹಾಗೂ ಇತರ ನಾಯಕರುಗಳನ್ನು ಕಂಡರೆ, ಸಕಲರೂ ಒಂದೇ ವ್ಯಕ್ತಿಯೆಂಬಂತೆ ವ್ಯವಹರಿಸುತ್ತಿರುವುದು ತೋರಿಬರುತ್ತದೆ ಅಲ್ಲದೆ ಜಗದ್ವಿಖ್ಯಾತ ಸೇನಾನಾಯಕರುಗಳಾದ ಗಾನೆಲಿನ್, ಜೋಜಾಫ್, ಬಿನೋ, ಜೋರೆಟ್, ಹೆರಿಂಗ್ ಮತ್ತು ರಿಟ್ಸಿನ್ ಇಂದು ಫ್ರಾನ್ಸಿನ ಅವ್ಯವಸ್ಥೆಯನ್ನು ತಮ್ಮ ಕೈಯಲ್ಲಿರಿಸಿಕೊಂಡಿದ್ದಾರೆ.

ಫ್ರಾನ್ಸಿನ ಪೂರ್ವ ಗಡಿಯನ್ನು ಕಾಯುತ್ತಿರುವ ಮೆಗಿನೋಟ್ ಲೈನಿನ ಮೇಲೆ ಹಾಯ್ದು ಹೋಗುವು ದೆಂದರೆ, ಯಮ ಪದನವನ್ನು ಸೇರಿದಂತೆಯೇ ಸರಿ! ಇಂಥ "ಲೈನ್"ನ್ನು ಭೇದಿಸಿ ಮಾಡಿ ತನ್ನ ಸೇನೆಯನ್ನುನುಗ್ಗಿಸಬೇಕೆಂದು ಹಿಟ್ಲರನು ಆಶಿಸಿದನು ಆದರೆ, ತಮ್ಮ ಸೈನ್ಯಾಧಿಕಾರಿಗಳು, ಮೆಗಿನೋಟ್ ಲೈನನ್ನು ಕಾಯ್ದು ಮುಂದುವರಿಯಬೇಕಾದರೆ, ಪ್ರತಿ ವಾರಕ್ಕೆ ೩ ಲಕ್ಷ ಜನರಂತೆ ಎಂಟು ವಾರಗಳ ವರೆಗೆ ತನ್ನ ಸೈನಿಕರನ್ನು ಬಲಿಕೊಡಬೇಕೆಂದು ತಿಳಿಸಿದಾಗ, ಹಿಟ್ಲರನು ನಡುಗಿ, ಆ ಯೋಜನೆಯನ್ನೇ ಬಿಟ್ಟು ತನ್ನ ರಕ್ಷಣೆಯ ಕಾರ್ಯದಲ್ಲೇ ತೊಡಗಿರುವನು

ಜರ್ಮನ್ ಸೈನ್ಯಾಧಿಕಾರಿಗಳು ಮಿತ್ರ ರಾಷ್ಟ್ರಗಳ ಸೇನೆಗಳನ್ನು, ಸಾರ್ ಪ್ರಾಂತ್ಯದಲ್ಲಿ ಎದುರಿಸಿ ಮುಂಮೊತ್ತುವ ಅಲೆಯುಳ್ಳವರಾಗಿರುವರು. ಅದೇ ರೀತಿ, ಬೆಲ್ಜಿಯಂ, ಹಾಲೆಂಡುಗಳ ಮೂಲಕವಾದರೂ. ಫ್ರಾನ್ಸಿನ ಮೇಲೇರಿ ಹಾಗಬೇಕೆಂಬುದು ಇವರ ಉತ್ಕಟೇಚ್ಛೆ ಹಿಟ್ಲರಾದರೂ ಇವರ ಈ ಯೋಚನೆಗೆ ಒಪ್ಪುತ್ತಿದ್ದನು. ಆದರೆ ಬೆಲ್ಜಿಯಂ ಮತ್ತು ಹಾಲೆಂಡುಗಳ ದೃಢ ನಿಶ್ಚಯವನ್ನು ಕಂಡು, ಅವನಿಗೂ ಸಂಶಯವೇ ಬಂದಿದೆ.

ಇದರ ಜೊತೆಗೆ ಇಟಲಿಯೂ, ಸಹ ಬಂಡತೋಕ್ತಿಗಳಿಂದ "ಹಿಟ್ಲರನು ಹಾಲೆಂಡ್, ಬೆಲ್ಜಿಯಂಗಳ ತಾಟಸ್ಥ್ಯವನ್ನು ಮುರಿಯುವುದನ್ನು ಕಂಡು ಸಹಿಸಲಾರೆನೆಂದು" ಸಾರಿತು. ಆದುದರಿಂದ ಜರ್ಮನಿಯು ಈ ರಾಷ್ಟ್ರಗಳ ತಟಸ್ಥತೆಯ ತಪ್ಪು ಲಕ್ಷ ಧೃಢಿಯನ್ನು ಬೇರೆ ಕಡೆಗೆ ತಿರುಗಿಸಿತು.

ಸರ್ಮರಿನ್ ಮತ್ತು ಮೈನ್‌ಗಳ ಮೂಲಕ ಬ್ರಿಟಿಷ್ ಹಡಗುಗಳನ್ನು ಹಾಳಪಡಿಸುವುದೇ ಜರ್ಮನಿಯು ಆರಂಭಿಸಿದ ಯುದ್ಧ! ಹಿಟ್ಲರನ ಆಶೆಯೆಂದರೆ, ಬ್ರಿಟನ್ನಿನ ನೌಕಾದಳವನ್ನು ಸಂಕಟಕ್ಕೆ ಗುರಿಪಡಿಸಿ, ಸಾಧ್ಯವಾದರೆ ತಾಟಸ್ಥ್ಯ ರಾಷ್ಟ್ರಗಳನ್ನು ತನ್ನ ಕಡೆಗೆ ಒಲಿಸಿಕೊಳ್ಳುವುದೇ ಆಗಿದೆ. ಈ ಯುದ್ಧದಲ್ಲಿ ಹಿಟ್ಲರನ "ಸರ್ಮರಿನ್‌ಗಳ" ಸಾಹಸವು ನಿಂತಿದೆ ಮೈನ್‌ಗಳ ಹಾವಳಿಯೂ ಕಡಿಮೆಯಾಗುತ್ತಿದೆ. ಬ್ರಿಟನ್ ಹಡಗುಗಳು, ಜರ್ಮನಿಯ ಈ ತೊಡಕುಗಳನ್ನು ಎದುರಿಸಿ, ಸಂಚಾರಮಾಡುತ್ತವೆ. ರಾಷ್ಟ್ರಕ್ಕೆ ಬೇಕಾದ ವಸ್ತುಗಳನ್ನೂ ಒಯ್ಯುತ್ತವೆ

ಜರ್ಮನಿಯು "ಮೈನ್" ಯುದ್ಧದಂತಹ ಅಧರ್ಮ ಯುದ್ಧಕ್ಕೆ ಇಳಿದದನ್ನು ಕಂಡು ಬ್ರಿಟನ್ನು ಜರ್ಮನಿಗೆ ಬರುವ ನಸ್ತುಗಳನ್ನು ತಡೆಯಹತ್ತಿದೆ ಇದರಿಂದ ಬಾಯಿ ಮೂಗು ಹಿಡಿದಂತಾಗಿದೆ ಪರರಾಷ್ಟ್ರಗಳ ಸಾಮಾನು ಇಲ್ಲದೆ, ಜರ್ಮನಿಯು ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಳ್ಳಲಾರದು ಪ್ರಕೃತ ಜರ್ಮನಿಯ ಹತ್ತಿರ ಇರುವ ಕಬ್ಬಿಣವು ಒಂದು ವರ್ಷಕ್ಕೆ ಮಾತ್ರ ಸಾಕಾಗುವುದು ಆಂದ ಮೇಲೆ, ಬ್ರಿಟನ್ನನ್ನು ಎದುರಿಸಿ ಜರ್ಮನಿಯು ಬಹುಕಾಲ ಜೀವಿಸಲಾರದು

ಅಮೇರಿಕೆಯು ತನ್ನ ರಾಷ್ಟ್ರದ ಶಸ್ತ್ರಾಸ್ತ್ರಗಳನ್ನು ಯುದ್ಧಕ್ಕೆ ಕೊಡಗಿನ ರಾಷ್ಟ್ರಗಳಿಗೆ ವಿಕ್ರಯಿಸುವುದರಿಂದ ಮಿತ್ರರಾಷ್ಟ್ರಗಳು ತಮಗೆ ಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು, ಸುಲಭವಾಗಿ ಅಲ್ಲಿಂದ ತಂದುಕೊಳ್ಳಬಲ್ಲುವು ಆದರೆ, ಜರ್ಮನಿಗೆ ಇದು ಸಾಧ್ಯವಿಲ್ಲ ಯಾಕೆಂದರೆ—ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಬೇಕಾದ ನಗದಿ ಹಣವು ಜರ್ಮನಿಯ ಬಳಿ ಇಲ್ಲ

ಈ ಯುದ್ಧವು ಹೆಚ್ಚುಕಾಲ ಸಾಗಿದರೆ, ಬ್ರಿಟನ್ನಿಗೆ ಜಯವು ನಿಶ್ಚಯ! ಮಿತ್ರ ರಾಷ್ಟ್ರಗಳ ಮೇಲೆ ಯುದ್ಧವನ್ನು ಹೂಡಿದ ಹಿಟ್ಲರನು ಇಂದು, ಬಿಳಿ ಶುಭ್ರವನ್ನು ಬಾಯಲ್ಲಿ ಹಾಕಿಕೊಂಡವನಂತಾಗಿದ್ದಾನೆ ಯುದ್ಧವನ್ನು ಮುಂದುವರಿಸಿದರೂ ಸೋಲು ಸಿದ್ಧ! ಹಿಂದೆ ತೆಗೆದರೂ ಸೋಲು ಸಿದ್ಧ! ಈಗ ಹಿಟ್ಲರನ ಸ್ಥಿತಿ ಇಲ್ಲಿಗೆ ಬಂದಿದೆ ಮೂರ್ಖ ತನದಿಂದ ಮರ್ಮಾರ್ಗದಲ್ಲಿ ಪ್ರವೇಶಿಸುವವರಿಗೆ ಕೊನೆಗೆ ದುಃಖವೇ ಫಲ!

ಪೋಲೀಸ್ ಇಲಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಇ ಜಿ ಬಿ. ಸೀಲರು 2 ತಿಂಗಳವರೆಗೆ ರಜದಮೇಲೆ ಹೋಗುವದರಿಂದ ಆ ಕಾಲದಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಎ ಎ ಖಾನರು ಪೋಲಿಸ್ ಮುಖ್ಯಾಧಿಕಾರಿಗಳಾಗಿ ತಾತ್ಕಾಲಿಕವಾಗಿ ನೇಮಕಹಾಯರೆಂದೂ ಇವರ ಸ್ಥಾನಕ್ಕೆ ಮೈಸೂರು ನಗರದ ಪ್ರಾಯಾಧೀಕ್ಷರಾಗಿರುವ ಶ್ರೀ ಸಿ ಎಂ ಎಚ್. ರಣಜೋಧಘಿಂಗರವರು ಬೆಂಗಳೂರು ಜಿಲ್ಲಾಧಿಕಾರಿಗಳಾಗುವರೆಂದೂ ತಿಳಿದು ಬರುತ್ತದೆ

ಜನವರಿ 29 ನೆಯ ತಾರೀಖಿನ ದಿವಸ ನುಚ್ಚು ಬ್ಬಟ್ಟು ಮೈಸೂರು ರೈಲ್ವೆ ವರ್ಕಾಷಾಪಿನ ಬಾಗಿಲು ಇನ್ನೂ ತೆರೆಯಲ್ಪಟ್ಟಿಲ್ಲ ಬಾಗಿಲನ್ನು ತೆರೆದು ಕಾರ್ಯರೇಭ ಮಾಡಲು ಅಧಿಕಾರಿಗಳು ಸೂಚಿಸಿದ ಪ್ರಕಾರ ಕೆಲಸಗಾರರು ಒಪ್ಪದಾಗಿದ್ದಾರೆ. ಮದರಾಸಿನ ನ್ಯಾಯವಿಧಾಯ ಕಸಭೆಯ ಸದಸ್ಯರಾ ಎಂ ಎಸ್. ಎಂ ರೈಲ್ವೆಯ ಕೆಲಸಗಾರರ ಸಂಘದ ಕಾರ್ಯವರ್ತಿಗಳೂ ಆದ ಮಿ ಜಿ. ಕೃಷ್ಣಮೂರ್ತಿ ಎಂಬುವರ ಇಲ್ಲಿಗೆ ರೈಲ್ವೆ ಕೆಲಸಗಾರರಿಗೆ ಸಲುಹೆಗಳನ್ನು ತಿಳಿಹಲು ಬಂದಿದ್ದರು ಸರ್ಕಾರದವರು ಅವರನ್ನು ಬಂಧಿಸಿ ಸಂಜ್ಞಾನದಿಂದಾಚೆಗೆ ಕಳುಹಿಸಿದರು ಕೆಲಸಗಾರರೆಲ್ಲರೂ ತಮ್ಮ ಕಡೆದ ತಿಂಗಳಸಂಬಳ ಗಳನ್ನು ತೆಗೆದುಕೊಂಡಿರುವರು

ವರ್ತಮಾನಸಂಗ್ರಹ.

1 ವರ್ಷದಲ್ಲಿ 2 ಸಾರಿ ಕೆರು ಹಾಕಿದ ಹಸು.

ಇಂಗ್ಲೆಂಡಿನ ಹತ್ತರ "ಎಲ್ ಆಫ್ ಮ್ಯಾನ್" ಎಂಬುದೊಂದು ದ್ವೀಪವಿದೆ. ಅಲ್ಲಿ ಒಬ್ಬ ರೈತನ ಹಸು 1 ವರ್ಷದಲ್ಲಿ ಎರಡು ಸಾರಿ ಕರುಗಳನ್ನು ಹಾಕಿತು. ಜಗತ್ತಿನ ಮತ್ತಾವ ಕಡೆಯೂ ಇದುವರೆಗೆ ಈ ವಿಧವಾದ ಆಶ್ಚರ್ಯ ಸಂಗತಿ ನಡೆದಿರುವುದಿಲ್ಲ.

ಭೂಗರ್ಭ ನಗರ!

ಪ್ರಪಂಚದಲ್ಲಿ ಎಲ್ಲರೂ ನಮ್ಮ ಹಾಗೆ ಭೂಮಿಯ ಮೇಲೆಯೇ ಮನೆಗಳನ್ನೆ ಕಟ್ಟುವರೆಂದು ಭಾವಿಸಬಾರದು ಭೂಮಾರ್ಗದೊಳಗೆ ಊರನ್ನು ಕಟ್ಟಿಕೊಂಡು ವಾಸಿಸುವವರೂ ಇದ್ದಾರೆ. ಸಹರಾ ಸೆರಲ್‌ಭೂಮಿಯ ಉತ್ತರ ಭಾಗದಲ್ಲಿರುವ 10000 ಜನಸಂಖ್ಯೆಯುಳ್ಳ 'ಗಾರಿಯಾನ್' ಎಂಬನಗರವು ಭೂಮಿಯ ಮಟ್ಟಿಲ್ಲಿಂದಲೂ 40 50 ಅಡಿಗಳ ಕೆಳಗೆ ಭೂಗರ್ಭದಲ್ಲಿ ಕಟ್ಟಲ್ಪಟ್ಟಿದೆ ಒಟ್ಟಿಗೆಲು, ಕುದುರೆಗಳು ಮೊದಲಾದ ಪ್ರಾಣಿಗಳೆಲ್ಲವೂ ವಿಶೇಷವಾಗಿ ಅಲ್ಲಿಯೇ ಇರುವುವು. ಊರಿನ ಬೀದಿಗಳೆಂದರೆ ದೊಡ್ಡ ದೊಡ್ಡ ಸುರಂಗಗಳೇ! ಆದರ ಪಕ್ಕಗಲ್ಲಿ ಸಾಮಾನ್ಯವಾಗಿ 4-5 ಗವಿಗಳುಳ್ಳ ಮನೆಗಳಿರುವವು. ಜನರು ಊಟ ಮಾಡುವುದು ಮತ್ತು ಮಲಗುವುದು ಅಲ್ಲಿಯೆ! ವ್ಯವಸಾಯ ಮತ್ತು ದನಕರುಗಳ ಮೇವಿನಾಗಿ ಮಾತ್ರ ಬಯಲಿಗೆ ಬರುವರು ಈ ನಗರವು ಕ್ರಿಸ್ತನು ಹುಟ್ಟುವ ಕೆಲವು ವರ್ಷಗಳ ನಂತರ ನಿರ್ಮಿತವಾಯಿತಂತೆ!

ಭಾರತದ ಬಗ್ಗೆ ಲಾರ್ಡ್ ಜಟ್ಲೆಂಡರ ಅಭಿಪ್ರಾಯ.

ಭಾರತದ ಸಚಿವರಾದ ಲಾರ್ಡ್ ಜಟ್ಲೆಂಡರು "ಸಂಡೆ ಟೈಮ್ಸ್" ಪತ್ರಿಕೆಗೆ ಹೇಳಿಕೆ ಕೊಡುತ್ತ "1935 ರ ಇಂಡಿಯಾ ಸರ್ಕಾರದ ಶಾಸನವನ್ನು ಜಯಿಸಿಕೊಂಡು ಬಂದಿರುವುದರಿಂದಲೇ ಅನುಭವದಿಂದ ಅಲ್ಪಸಂಖ್ಯಾತರ ಸಮಸ್ಯೆಯನ್ನು ಭಾರತೀಯರೇ ಇತ್ಯರ್ಥಪಡಿಸಿಕೊಳ್ಳಬೇಕೆಂಬುದು ನ್ಯಕ್ತವಾಗಿರುವದೆಂದೂ, ಪ್ರಮುಖರ ವ್ಯಥಾ ಭಾಷಣ ಮತ್ತು ಪ್ರಕಟಣೆಗಳಿಂದ ಏನೂ ಪ್ರಯೋಜನವಾಗವದಿಲ್ಲವೆಂದೂ, ಸರಿಯಾದ ಅಧಿಕಾರ ಹೊಂದಿದ ನ್ಯಾಯಕರು ಕೂಡಿ ತಮ್ಮ ಸಮಸ್ಯೆಗಳ ಚರ್ಚೆ ಮಾಡುವದರಿಂದ ಸಮಸ್ಯೆಯು ಪರಿಹಾರವಾಗಬಹುದೆಂದೂ, ಈಗಿರುವ ತೊಂದರೆಗಳನ್ನೂ ಭಿನ್ನಾಭಿಪ್ರಾಯಗಳನ್ನೂ ಮೊದಲು ಸರಿಯಾಗಿ ನಿಗ್ರಹಿಸುವದು ಒಳ್ಳೆಯದೆಂದೂ, ಈ ವಿಷಯಗಳಲ್ಲಿ ಬ್ರಿಟಿಷ್ ಸರ್ಕಾರವು ಸೂಜನೆಕೊಡುವದಲ್ಲದೆ ಒತ್ತಾಯಪಡಿಸುವಂತಿಲ್ಲವೆಂದೂ ಗಾಂಧಿ-ನೆಹರುಗಳ ಭೇಟಿಯು ನಿಶ್ಚಲವಾದುದು ಆಶ್ಚರ್ಯವನ್ನುಂಟುಮಾಡಿದೆಯೆಂದೂ, ಮಾತುಕತೆಗಳು ದೀರ್ಘಕಾಲ ನಡೆದು ಫಲದಾಯಕವಾಗುವದೆಂದು ಭಾವಿಸಿದ್ದೆವೆಂದೂ, ಭಾರತೀಯರು ತಮ್ಮ ರಾಜ್ಯಾಂಗ ವ್ಯವಸ್ಥೆಯನ್ನು ತಾವೇ ರೂಪುಗೊಳಿಸಿಕೊಳ್ಳಲು ಅವಕಾಶಕೊಟ್ಟರೆ, ರಕ್ಷಣೆ, ಅಲ್ಪಸಂಖ್ಯಾತರು, ನರೇಂದ್ರರು, ಏರೋಸ್ಯರಹಿತಗಳು ಇತ್ಯಾದಿ ಸಮಸ್ಯೆಗಳು ತಾವೇ ಮಾಯವಾಗುತ್ತವೆಂದು ಗಾಂಧಿಯವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಅಂಗೀಕರಿಸಲಾಗುವದಿಲ್ಲವೆಂದೂ, ಭಾರತೀಯರು ತಮ್ಮ ದೇಶದ ಪ್ರಭುತ್ವವನ್ನು ತಾವು ನಡೆಯಿಸುವದಕ್ಕೆ ಸ್ವಾತಂತ್ರ್ಯ ಬೇಕೆಂದು ಬಯಸುತ್ತಿರುವೆವರಲ್ಲಿ ನನಗೆ ಅನುಮಾನವಿಲ್ಲವೆಂದೂ, ಆದರೆ ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತವು ಹೊರಗಾಗಬೇಕೆಂದು ಭಾರತೀಯರು ಬಯಸುತ್ತಿರುವೆನೆಂಬುದನ್ನು ಹಾಗು ನಂಬುವದಿಲ್ಲವೆಂದೂ, ಪ್ರಸಂಚದ ಇಂದಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಬ್ರಿಟನ್ನು ಕೊಡುತ್ತಿರುವ ರಕ್ಷಣೆಯನ್ನು ಎಷ್ಟು ಪ್ರಶಂಸಿಸಿದರೂ ಸಾಲದೆಂದೂ ಹೇಳಿದರು.

[೬ ನೆಯ ಪುಟದಿಂದ ಮುಂದುವರೆದುದು]

ಮಾತ್ರ ತಯಾರಿಸುತ್ತಿತ್ತು. ಆಕಾಲದಲ್ಲಿ ಅವರ ಅತ್ಯಂತ ಹೆಸರುವಾಸಿಯಾದ ಕಬ್ಬಿಣದ ಅದುರಿನ ಗಣಿಗಳು ಲೊರೇನಿನಲ್ಲಿ ಇದ್ದವು. ಈಗ ಲೊರೇನಿನ ಕಬ್ಬಿಣದ ಅದುರಿನ ಗಣಿಗಳು ಮ್ಯಾಜಿನೋಲೈನಿನ ಕಡೆಯಿದೆ ಅದು ಫ್ರಾನ್ಸಿಗೆ ಸೇರಿಹೋಗಿದೆ. ಕಬ್ಬಿಣದ ಅದಿರೂ ಮತ್ತು ಇತರ ಅಪೂರ್ಣ ವಸ್ತುಗಳೂ ಜರ್ಮನಿಗೆ ಪರದೇಶಗಳಿಂದ ಬರಬೇಕಾಗಿದೆ. ಪರದೇಶಗಳಿಂದ ಜರ್ಮನಿಗೆ ಅಪೂರ್ಣ ವಸ್ತುಗಳು ಆಮದಾಗುವುದು ಹು ಪ್ರಯಾಸದ ವಿಷಯ ಎನ್ನೆ ಮತ್ತು ಇತರ ಅಪೂರ್ಣ ವಸ್ತುಗಳ ಮೇಲೆ ಜಯವು ಬಹುವ ಕ್ಷೆಗೆ ಆಕ್ರಮಿಸುವುದರಿಂದ ಜರ್ಮನಿಗೆ ಈ ಸಂಗ್ರಾಮದಲ್ಲಿ ಜಯ ಲಭಿಸುವುದು ದುರ್ಲಭ (ವಿ ಕ)

ನಾವು ಸುಖವಾಗಿರುವುದಕ್ಕೆ ನಮ್ಮ ಕರ್ತವ್ಯವೇ ಮೂಲಕಾರಣ

ಲೇಖಕ, ಕನ್ನಡಿಗ ಅಸ್ಸಾನವಿದ್ವಾನ್, ಅನಪಟ್ಟರಾಮರಾಯರು

ನಮ್ಮ ಪ್ರಯತ್ನದಿಂದಲೇ ನಾವು ಸುಖಿಗಳಾಗಬಹುದಾದಿದೆ ಕೆಲವರು ತಮ್ಮ ಜೀವಿತಕಾಲದಲ್ಲಿ ಯಾವುದಾದರೊಂದು ಉದ್ದೇಶಪಟ್ಟುಕೊಂಡು ಕೆಲಸ ಮಾಡುತ್ತಿರುವರು ಮತ್ತೆ ಕೆಲವರು ಅದರ ಯೋಚನೆಯನ್ನೇ ಬಿಟ್ಟು ಸಮಯೋಚಿತವಾಗಿ ನಡೆಯುತ್ತಿರುವರು ಹೀಗೆ ನಡೆಯಬಾರದು ದೇವರು ನಮಗೆ ವಿವೇಕವಿಲಿರುವ ಸ್ಥಿತಿಯೇನು? ನಾವು ಮಾಡಬೇಕಾಗಿರುವ ಕಾರ್ಯಗಳಾವುವು? ಎಂದು ಯೋಚಿಸಿ ನಡೆಯುವುದೇ ಮೊದಲನೆಯ ಉದ್ದೇಶವು ಹಾಗೆ ಇವನು ಉದ್ದೇಶಪಟ್ಟುಕೊಂಡಿರುವುದು ಸಹಜವಾಗಿದ್ದರೆ ಸ್ವಾರ್ಥಫಲಾಪೇಕ್ಷೆಯನ್ನು ಪೂರ್ತಿಗೊಳಿಸಿಕೊಳ್ಳುವುದಕ್ಕೆ ಪ್ರಯತ್ನಪಡಬಾರದೆಂದು ಮೊದಲು ತಿಳಿದು ನಡೆಯಬೇಕು ಇದರ ತತ್ವವನ್ನು ತಿಳಿದ ಮಹಾತ್ಮರಾದ ಗುರುವರ್ಯರುಗಳು ಸರ್ವಶಕ್ತಿ ಸ್ವತಂತ್ರರಾಗಿದ್ದರೂ ಲೋಕೋಪಕಾರಾರ್ಥಿಗಳೇ ತಮ್ಮ ಶಕ್ತಿಗಳನ್ನು ಪಯೋಗಿಸಿದರೇ ಹೊರತು ಸ್ವಾರ್ಥಕ್ಕಾಗಿ ಯಾವ ಕಾರ್ಯವನ್ನೂ ಮಾಡಿ ತೃಪ್ತಿಗೊಂಡವರಲ್ಲ

ಮೇಲೆ ಹೇಳಿದ ಕಾರಣದಿಂದ ಅನ್ಯರ ಸೌಖ್ಯಕ್ಕಾಗಿಯೇ ನಮ್ಮ ಶಕ್ತಿಗಳನ್ನು ಬಲಪಡಿಸಿಕೊಳ್ಳಬೇಕಾದುದೇ ಮುಖ್ಯ ಇದಕ್ಕಾಗಿ ಅನೇಕ ಮಹನೀಯರು ಲೋಕದಲ್ಲಿ ಜನಸಮುದಾಯದ ಬುದ್ಧಿಯಲ್ಲಿ ನಿಂತು ತನ್ನ ಮಹಿಮೆಗಳನ್ನು ತೋರಿಸಿ, ಅನೇಕ ಬುದ್ಧಿವಾದಗಳನ್ನು ಬೋಧಿಸುವಾಗ್ಗೆ ಅವರ ವಾಕ್ಯಗಳ ಮಹಿಮೆಯನ್ನು ಅರಿಯದೆ, ಅನೇಕರು ತಿರಸ್ಕರಿಸಿ, ಅವರನ್ನು ಹರಿದಿಂದ ತೋಮಹಾಕರಿರುವರು ಚರಿತ್ರೆಗಳೇ ಬೇಕಾದಷ್ಟಿವೆ ಬುದ್ಧಿವಂತರಿಗೆ ಇತರರ ಬುದ್ಧಿವಾದವು ಬೇಕಾಗಿಲ್ಲ ಆವಿವೇಕಿಗಳಿಗೆ ಬುದ್ಧಿವಾದಗಳನ್ನು ಹೇಳದರೆ ಅವರು ಗ್ರಹಿಸುವರಾಗಿಲ್ಲ ಯೋಗ್ಯರು ಹೇಳುವ ಬುದ್ಧಿವಾತಗಳನ್ನು ಯಾರು ಮೊದಲು ಗ್ರಹಿಸಿ ನಡೆಯುವದಿಲ್ಲವೋ, ಅವರು ಕಷ್ಟಬಂದಾಗ್ಗೆ "ಅಯ್ಯೋ! ಅವರು ಹೇಳಿದುದನ್ನು ಮೊದಲು ತಿರಸ್ಕರಿಸಿದುದೇ ಕಾರಣವಾಗಿ ಹೀಗಾಯಿತು" ಎಂದು ಕೊನೆಗೆ ಪಶ್ಚಾತ್ತಾಪ ಪಟ್ಟುಕೊಳ್ಳುವರು

ಅನೇಕರು ಜಮೂಳ್ಳವಾದ ಕಾಲವನ್ನು ಅನ್ಯಾಯವಾಗಿ ಹರಣ ಮಾಡುತ್ತಿರುವುದು ಅವರ ಮೊದಲ ತಪ್ಪು ಅಂತಹ ಕಾಲವನ್ನು ಅಸಂಗತ ಪಾಪ ರೀತಿಯಿಂದ ವ್ಯಯಮಾಡುವುದರಿಂದ ಅವರ ಜೀವಿತ ಅತ್ಯಂತ ಹೇಯವಾಗಿದ್ದು ಕೊಂಡು, ಉಪಯೋಗವಿಲ್ಲದ ಹೊಂದಿದೆ ಕಾಯಿ, ಹಂದಿಗಳಂತೆ ಜೀವಿಸಿ ಕೊಂಡಿರುವುದೇ ದೃಷ್ಟಾಂತವಾಗಿದ್ದಾರೆ? ಸೌಖ್ಯ ವೆಂಬುದು ಮನಸ್ಸಿನ ಶಾಂತಿಯೇ ಹೊರತು ಪತ್ತಾ ವುದೂ ಕಾಣಬರುವುದಿಲ್ಲ ಮಾನವನು ಕೋಟಿರೂಪಾಯಿಗಳನ್ನು ಸಂಪಾದಿಸಿಕೊಂಡಿದ್ದ ಮಾತ್ರಕ್ಕೆ ಅವನು ಸುಖಜೀವಿಯೆಂದು ಹೇಳಿಸಿಕೊಳ್ಳುವಹಾಗಿಲ್ಲ, ದೇವರಿಂದ ಕೊಡಲ್ಪಟ್ಟ ಸಕಲೋಪಕರಣಗಳನ್ನು ಸನ್ಮಾರ್ಗದಲ್ಲಿ ಆನುಗೊಳಿಸಿಕೊಂಡು, ಪರಿಶುದ್ಧನಾದ ಗೈದರೆ ಅವನು ಊಹಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾದ ಸೌಖ್ಯವನ್ನು ಹೊಂದಿ ಜೀವಿಸಿರಬಹುದು ಅಂತ್ಯಕಾಲವು ಅತಿಕ್ರಮಿಸಿದ ಮೇಲೆ ಆದರೆ ಬೆಲೆಯನ್ನು ತಿಳಿದರೂ ಪ್ರಯೋಜನವಿಲ್ಲ ಈ ಪ್ರಪಂಚದಲ್ಲಿ ಯಾವುದೂ ಸುಲಭಸಾಧ್ಯವಾಗಿಲ್ಲ ಎಂತಹ ಕಷ್ಟ ಪ್ರಾಪ್ತವಾದೂ ಧೈರ್ಯದಿಂದಿದ್ದು ಸೌಖ್ಯವನ್ನೂ ಮನಸ್ಸಿನ ಶಾಂತತೆಯನ್ನೂ ಹೊಂದುವವರೆಗೂ ಹೋರಾಡುತ್ತಿರಬೇಕು ಮನಸ್ಸಿನ ಶಾಂತತೆಯೊಂದಲು ನಮ್ಮ ಇಂದ್ರಿಯಗಳ ಶಕ್ತಿಗೆ ವತನಾಗದೆ ಸನ್ಮಾರ್ಗದಲ್ಲಿ ನಡೆಯತ್ತಾ, ಭಗವಂತನ ಪ್ರೀತಿಗೆ ಪಾತ್ರನಾಗುವಂತಹ ಕಾರ್ಯಗಳನ್ನು ಮಾಡುತ್ತಾ ಅವನ ಕಾರುಣ್ಯಕ್ಕೆ ಪಾತ್ರನಾಗಬೇಕೆಂದು ಯೋಚಿಸುವವರಿಗೆ ಸುಖವೇನೆಂದು ಅವನೆ ಚಿತ್ತಕ್ಕೆ ವೇದ್ಯವಾಗ ವುದೇ ಹೊರತು ಮತ್ತಾರಿಗೂ ದೊರೆಯ ದೆಂದು ಧಾರಾಳವಾಗಿ ಹೇಳಬಹುದು

ಪ್ರತ್ಯಕ್ಷ ಮಾನವನ ಜೀವಿತಕಾಲದಲ್ಲಿ ಬಯಸುವುದು ಸುಖ ತನ್ನ ಆಕೆಯು ಪೂರ್ಣವಾಗುವುದಾದರೆ ಅದೇ ಸುಖವೆಂದು ತಿಳಿವನೇ ಹೊರತು ಮತ್ತಾವುದನ್ನೂ ತಿಳಿಯುವಂತಿಲ್ಲ ಸಕಲ ಪ್ರಾಣಿಗಳಲ್ಲೆಲ್ಲಾ ಮಾನವನ್ನೇ ಶ್ರೇಷ್ಠನೆಂಬುದಕ್ಕೆ ಇವನಲ್ಲಿರುವ ವಿವೇಕವೇ ಧ್ಯೇಯ ಇಂತಹ ವಿವೇಕದಿಂದ ತಾನಾರು? ತಾನಿರುವುದೆಲ್ಲಿ? ಕಾನು ಬಂದ ಬಗೆಹೇಗೆ? ತಾನು ಮಾಡಬೇಕಾದ ಕಾರ್ಯಗಳಾವುವು ಎಂದ ಯೋಚಿಸಿ, ನಡೆದುಕೊಂಡು ಬಂದಹೊರತು, ಸೌಖ್ಯವೇನೆಂಬುದೇ ಅವನ ಮನಸ್ಸಿಗೆ ಬರದೆ ದೇವನ ಪ್ರೀತಿಗೆ ಪಾತ್ರನಾಗದೆ, ಕಷ್ಟವನ್ನೂ ಭೂಸಿ ದೇಹವನ್ನು ಬಟ್ಟು ಹೋಗಬೇಕಾಗಿ ಒರುವುದು ಈ ಕಾರಣದಿಂದ ಮಾನವನು ತನ್ನ ಕರ್ತವ್ಯವಾದ ಪರ ಹಿತಚಿಂತನೆಯನ್ನೇ ಪ ಖ್ಯ ಧ್ಯೇ ಎಂಬಿಟ್ಟುಕೊಂಡಿರಬೇಕು ತನಗೆ ಬೇಕಾದ ಸಾಯ ಗುನ್ನ ಭಗವಂತನೇ ಒದಗಿಸಿಕೊಡುವನೆಂಬ ನಂಬಿ ನಡೆಯುತ್ತಿರುವುದೇ ಮುಖ್ಯ ಕರ್ತವ್ಯವೆಂದು. ತಿಳಿದು ಆಚರಣೆಯಲ್ಲಿ ತರಲು ನಡೆಯುತ್ತಿರ ವನಿಗೆ ಸೌಖ್ಯವೇನಂಬುದು ಮನಸ್ಸಿಗೆ ತಾನಾಗಿಯೇ ವೇದ್ಯವಾಗುವುದ

॥ ಶ್ರೀ ಜಗದ್ಗುರು ಸಂಜ ಚಾರ್ಯೂ- ಪ್ರಸೇವಂತು ॥

ಪುಣ್ಯತಿಥಿಮಹೋತ್ಸವ

ಹೂಲಿ ಶ್ರೀ ಸಾಂಬಯ್ಯಸ್ವಾಮಿವ ತದ ಶ್ರೀ ಬಾಲಲೀಲಾ ಸಂಗಮೇಶ್ವರ ಸ್ವಾಮಿಗಳವರ ಪುಣ್ಯತಿಥಿಮಹೋತ್ಸವವು ವೈಭವದಿಂದ ನೆರವೇರಿಸಲ್ಪಟ್ಟಿತು ತಾ|| ೫ ೨೪೦ ನೇ ಸೋಮವಾರ ಸಾಯಂಕಾಲ ಶ್ರೀಕ್ಷೇತ್ರ ಗೊಡಚಿ ಗುರುಕುಲಾಶ್ರಮದಲ್ಲಿ ಅಧ್ಯಾಸನಾರೂಢ ಬಂಕಾಪುರ ಕಲ್ಯಾಣಿಮಠದ ಸಿದ್ಧಾಂತಿ ಶಠಿದ್ಧಿಶರ್ಮ ಎಂಬ ವಿದ್ಯಾರ್ಥಿಯು ಶ್ರೀ ಜಗದ್ಗುರು ರೇಣುಕಾಚಿತಾಚಾರ್ಯರು ಈ ಭೂಮಿಯಲ್ಲಿ ಮಾಡಿರುವ ಅನಂತಾನಂತ ಲೀಲೆಗಳಲ್ಲಿ ಒಂದಾದ "ಗೋರಕ್ಷಣಾಥ ಗರ್ಭಭಂಗ" ವೆಂಬ, ಗುರುಕೀರ್ತನವನ್ನು ಮಾಡಿ ಸರ್ವಜನಗಳನ್ನು ಸಂತೋಷಪಡಿಸಿದನು ಕೀರ್ತನದ ಆರಂಭದಲ್ಲಿ ಶ್ರೀ ಕ್ಷೇತ್ರ ಗೊಡಚಿ ಗುರುಕುಲಾಶ್ರಮವ ವೇ|| ಪಂ|| ಹರೀ ಕೃಪ ಶಾಸ್ತ್ರಿಗಳು ಗುರುಭಕ್ತಿಯ ಬಗ್ಗೆ ಸಮ್ಮತಿಸಾಮಾಜಿಕವಾದ ಭಾಷಣಮಾಡಿದರು. ತಾ|| ೬ ೨೪೦ ನೆಯ ಮಂಗಳವಾರದಿಂದ ಶ್ರೀ ಬಾಲಲೀಲಾ ಸಂಗಮೇಶ್ವರ ಸ್ವಾಮಿಗಳವರ ಗದ್ದುಗೆಗೆ ವಿಶಾಷಕರುದ್ರಾಭಿಷೇಕವನ್ನೂ ಸಹಸ್ರವಿಲ್ವಾರ್ಚನೆಯನ್ನೂ ವಿಧ್ಯುಕ್ತವಾಗಿ ಮಾಡಿದ ನಂತರ ಪುಣ್ಯತಿಥಿಮಹೋತ್ಸವಕ್ಕಾಗಿ ಬಂಡಿದ್ದ ಸಾವಿರಾರುಜನ ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯು ನೆರವೇರಿತು ಸಾಯಂಕಾಲ ಪರಧಾನಮಹೋದಿದ ಶ್ರೀ ಸ್ವಾಮಿಯವರ ಧಾವಪಟವನ್ನು ಪಲ್ಲಕ್ಕಿಯಲ್ಲಿರಿಸಿ ಗ್ರಾಮದ ಎಲ್ಲ ಬೀದಿಗಳಲ್ಲಿ ಉತ್ಸವವನ್ನು ಮಾಡಿದರು

ಈಗಿನ ಶ್ರೀ ಸ್ವಾಮಿಗಳು ಸಣ್ಣವರಿದ್ದಾರೆ ಮಕ್ಕಳ್ಳೆ ಹೆಚ್ಚಾಗಿ ಆಸ್ತಿಯೇನೂ ಇಲ್ಲ ಆದಾಯ್ಕೂ ಇಂತಿಷ್ಟು ಕಾರ್ಯವನ್ನು ಈ ಕಾಲದಲ್ಲಿ ನಡೆಸಬೇಕಾದರೆ ಗತಿಸಿದ ಶ್ರೀ ಸ್ವಾಮಿಗಳವರ ಪ್ರಭಾವವೇ ಹೊರತು ಬೇರೂಂದಿಲ್ಲ ಈ ಮಹೋತ್ಸವಕ್ಕಾಗಿ ಶ್ರೀಕ್ಷೇತ್ರ ಗೊಡಚಿ ಗುರು ಕುಲಾಶ್ರಮದ ವಿದ್ಯಾರ್ಥಿಗಳು, ಪರಗುಂದ ಪಾಠಶಾಲೆಯ ವಿದ್ಯಾರ್ಥಿಗಳು, ಶ್ರೀಕ್ಷೇತ್ರ ಗೊಡಚಿ ಗುರುಕುಲಾಶ್ರಮ ಸ್ಥಾಪಕರಾದ ಕರ್ಮಯೋಗ ಮತ್ತು ಸತ್ಕೀರ್ತಿ ಶ್ರೀ ಪಟ್ಟಾಧಿಕಾರಿಗಳು, ಹುಬ್ಬಳ್ಳಿ ಹನ್ನೆರಡುಮಠದ ಶ್ರೀ ಚರಪಟ್ಟಾಧಿಕಾರಿಗಳು, ಧೈಲಹೊಂಗಲ ಕುಂಬಾರೇಶ ಮರದ ಶ್ರೀ ಚರಪಟ್ಟಾಧಿಕಾರಿಗಳು, ಪರಗುಂದ ಪಾಠಶಾಲೆಯ ಅಧ್ಯಾಪಕರಾದ ವೇ|| ಗೌರೀಶಂಕರಶಾಸ್ತ್ರಿಗಳು ಮೊದಲಾದವರು ಬಂದಿದ್ದರು ಧಾರವಾಡ ಲೋಕಮಿತ್ರ ಸಹಸಂಪಾದಕರಾದ ಮಿ|| ಸಿ ಜಿ ಹೊನ್ನಾಪುರಮಠ ಬಿ ಎ ಎಲ್ ಎಲ್ ಬಿ ವಕೀಲ ಇವರು ಆಕಸ್ಮಿಕವಾಗಿ ಬಂದಿದ್ದರಿಂದ ಮಹೋತ್ಸವಕ್ಕೆ ವಿಶೇಷ ಶೋಭೆಯುಂಟಾಗಿದ್ದಿತು ಎಲ್ಲ ಕಾರ್ಯಗಳು ಮುಗಿದಮೇಲೆ ಜಗದಾಚಾರ್ಯರ ಜಯಘೋಷದೊಡನೆ ಉತ್ಸವವು ಸಮಾಪ್ತಿಗೊಳಪಟ್ಟಿತು ವಿರ್ವ ಉತ್ಸವಭಾಗಿ

ಶ್ರೀಲಕ್ಷ್ಮೇಶ್ವರಸ್ವಾಮಿ, ವೇಣುಗೋಪಾಲಸ್ವಾಮಿ ರಥೋತ್ಸವ

1940 ನೇ ಇಸವಿ ಫೆಬ್ರವರಿ 23 ನೇ ತಾರೀಖು ಲಾಗಾಯಿತು 26 ನೇ ತಾರೀಖಿನವರೆಗೆ ಮೈಸೂರು ಡಿಸ್ಟ್ರಿಕ್ಟ್ ಫ್ರೆಂಡ್ಲಿ ಕ್ರಿಕೆಟ್ ಟೂರ್ನಾಮೆಂಟ್ ಉತ್ಸವದಿಂದ ಕೃಷ್ಣರಾಜಸಾಗರದ (ಸಾರ್ವಜ್ಞಾಂಗ್) ಉತ್ತರದಿಕ್ಕಿನಲ್ಲಿ ತಾ|| 23 2 40 ರಲ್ಲಿ ಶ್ರೀಲಕ್ಷ್ಮೇಶ್ವರಸ್ವಾಮಿಯವರ ರಥೋತ್ಸವವೂ, ತಾ|| 24 2 40 ರಲ್ಲಿ ಶ್ರೀ ವೇಣುಗೋಪಾಲಸ್ವಾಮಿ.ವರ ರಥೋತ್ಸವವೂ, ಮತ್ತು ತಾ|| 25 2 40 ರಲ್ಲಿ ದನಗಳ ಪ್ರದರ್ಶನವೂ, ನಡೆಯುತ್ತವೆ

ಜಾತ್ರೆಯಕಾಲದಲ್ಲಿ ಎಲ್ಲಾ ತರಹದ ವ್ಯಾಪಾರಗಳೂ ಚೆನ್ನಾಗಿ ನಡೆಯುತ್ತವೆ ದನಗಳ ಪ್ರದರ್ಶನದಲ್ಲಿ ಉತ್ತಮ ರಾಸುಗಳಿಗೆ ಬಹುಮಾನ ಕೊಡಲ್ಪಡುವದು ದನಗಳಿಗೆ ಹುಲ್ಲು ನೀರಿನ ವಷಿ ಬಹಳ ಚೆನ್ನಾಗಿರುತ್ತದೆ ಅಲ್ಲದೆ ಜನಗಳ ಮತ್ತು ದನಗಳ ಅಪ್ಪತ್ರೆ, ಪೋಲೀಸು, ಸ್ಯಾನಿಟೇಷನ್ ವಗೈರೆ ವಿಶ್ಚಾರಿಯಮಾಡಿದೆ ಮತ್ತು ದೀಪದ ಸೌಂದರ್ಯವೂ ಸಹ ಒದಗಿರುತ್ತದೆ ರಥೋತ್ಸವ ಮತ್ತು ದನಗಳ ಪ್ರದರ್ಶನಕ್ಕೆ ದಯಮಾಡಿಸುವ ಮಹನೀಯರುಗಳಿಗೆ ನಮ್ಮ ಮಹಾಸ್ವಾಮಿಯವರ ಸರ್ಕಾರದಿಂದ ನಿರ್ಮಿಸಲ್ಪಟ್ಟಿ ಪ್ರಕಾಂಡದಲ್ಲಿ ಎಲ್ಲೆಯಿಷ್ಟು ಮೀರಿ ಪ್ರಸಿದ್ಧಿಯನ್ನೂ ಹೊಂದಿರುವ ಕೃಷ್ಣರಾಜ ಸಾಗರವೂ, ನೋಟಕರ ಕಣ್ಮನಂಗಳಷ್ಟು ಸೆಳೆದು ಸೊಬಗನ್ನು ಬೀರುತ್ತಿರುವ ಬೃಂದಾವನದ ದೃಶ್ಯವೂ ಮತ್ತು ನಮ್ಮ ದೇಶದಲ್ಲಿ ಖ್ಯಾತಿಯನ್ನು ಹೊಂದಿರುವ ಕಣ್ಣಂಬಾಡಿ ಕಾಳೆಕಾಂಬಾದೇವರ ದರ್ಶನವೂ ಲಭಿಸುತ್ತವೆ. ಇವುಗಳ ದಯಮಾಡಿಸತಕ್ಕವರಿಗೆ ಕೃಷ್ಣರಾಜಸಾಗರದ ಲೈಲ್ವೆ ಸ್ಟೇಷನ್ 1 ಮೈಲಿ ಸಮೀಪದಲ್ಲಿರುವದು.

ಸಾರ್ವಜ್ಞಾಂಗ್ ಉತ್ಸಾಯರಜಳ್ಳಿ ಗ್ರಾಮಸ್ಥರು, ಕಾರ್ಯದರ್ಶಿಗಳು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುಸಗ್ಗದ ಮಳೆಕ್ಕಾಲಿಡುವ ಶಿಷ್ಯರ ಮನೆಗಳನ್ನು ಪ್ರತಿಯೊಬ್ಬ ಜಂಗಮಪರಂಪರೆಯಲ್ಲಿ ಪತ್ತು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅನ್ಯತಲೀಲೆಗಳುಳ್ಳ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಾನುಗ್ರಹಾರ್ಥವಾಗಿ ಅವತರಿಸಿದ ಸ್ಥಳ. ಪಶ್ಚಿಮಕ್ಕೆ ವ್ಯಾಸ, ಪೂರ್ವದಲ್ಲಿ ಮೇರುಪರ್ವತ ಮತ್ತು ಉತ್ತರದಲ್ಲಿ ಹಿಮವತ್ಪರ್ವತಗಳಿಂದ ಕೂಡಿದ ಪ್ರದೇಶದ ಫೋಟೋ ಸೈಜು ೧೦×೧೪ ಬೆಲೆ ೦—೧೫—೦

ಸ್ವಯಂ ವೀರಶೈವಧರ್ಮಾವಲಂಬಿಗಳಾಗಿ ಶಿವಪೂಜಾನಿರತರಾಗಿ ಸಕಲ ಐಶ್ವರ್ಯಗಳಿಂದ ಕೂಡಿ ಸಮೃದ್ಧಿಯಿಂದ ಇರುವ ಪ್ರಜೆಗಳ ಫೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ ೦—೧೫—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ ೦—೧೫—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೫ಕ್ಕೆ ೦—೦—೮

ಶ್ರೀ ಜಗದ್ಗುರು ಮಂತ್ರಮಹಿಮೆ ಪ್ರಭಾವ ಶಿವಾಚಾರ್ಯರ ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ವಿಪ್ರಮುನಿಪ್ರಭೃತಿ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ರಂಭೇಹೋರ ವ್ಯಾಪಾರಾನುಕಾರವಾಗಿ ವಿಕಲಾಲಬಧ್ಧರಿಯಂತೆ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಜಮದಗ್ನಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸುವ ಫೋಟೋ ಬಣ್ಣಕ್ಕೆ ೦—೦—೮

ಶ್ರೀ ಕೇಸರಿಭಟ್ಟಾರ್ಯರು ಶ್ರೀ ಚಿತ್ರಭಟ್ಟಾರ್ಯರಿಗೆ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೮

ಶ್ರೀಕಾಶೀಕ್ಷೇತ್ರನಿವಾಸಿಗಳಾದ ಶ್ರೀ ಜಾತವೇದ ವಿದ್ವಾಂಸರ ಮೂಲಅರ್ಚಾಮೂರ್ತಿಯ ಫೋಟೋ ೦—೦—೮

ಶ್ರೀ ಶಾಸ್ತ್ರಿ ಬಿಜಾಪುರವಾಸಿಗಳಾದ ಶ್ರೀ ಜಾತವೇದ ವಿದ್ವಾಂಸರ ಮೂಲಲಿಂಗಾರ್ಚನಾಮೂರ್ತಿಯ ಫೋಟೋ ೦—೦—೮

ಶ್ರೀಮಜ್ಜಗದ್ಗುರು ಜಾತವೇದ ವಿದ್ವಾಂಸರ ಸ್ವಪ್ನದಲ್ಲಿ ಶ್ರೀ ಜಾತವೇದ ಶಿವಲಿಂಗಾರ್ಚನಾಮೂರ್ತಿಯನ್ನು ಅನುಗ್ರಹಿಸಿದ ಫೋಟೋ ೦—೦—೮

ಶ್ರೀಮಜ್ಜಗದ್ಗುರು ಶಿವಾಚಾರ್ಯರ ಸ್ವಪ್ನದಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳಿಗೆ ಕುಳಿತುಕೊಂಡಿರುವ ಫೋಟೋ ೦—೦—೮

ಪೂಜಾ ಶ್ರೀ ಕಾಶೀನಾಥಶಾಸ್ತ್ರಿಗಳ ಫೋಟೋ ಬೆಲೆ ೧೫ಕ್ಕೆ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಸೀಮೆ ಮಹಾಕ್ಷೇತ್ರದ ಅತ್ಯಂತ ಸುಂದರವಾದ ಫೋಟೋ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಸೀಮೆಯ ಅತ್ಯಂತ ಪ್ರಾಚೀನ ಕ್ಷೇತ್ರದ ಸುಂದರ ಫೋಟೋ ೦—೦—೮

ಶ್ರೀ ಜಗದ್ಗುರು ಕೇದಾರಖಂಡಾಂತರದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೮

ಹಿಮಪ್ರಕೃತಿಯ ಮಧ್ಯದಲ್ಲಿ ಕೋಡಿಮಠ ಶ್ರೀ ಕೇದಾರನಾಥಸ್ವಾಮಿಯ ಮುಂದಿರುವ ಸುಂದರ ಫೋಟೋ ೦—೦—೮

ಶ್ರೀರುದ್ರಪಟ್ಟಣ ಜಗದ್ಗುರುಗಳ ಸ್ವಪ್ನದಲ್ಲಿ ಶ್ರೀಮನ್ಮಹಾಗಣಪತಿಯು ವಿರಾಜಿಸುತ್ತಿರುವ ಫೋಟೋ ೦—೦—೮

ಬೆಂಗಳೂರು ಕಾಮಾಕ್ಷಿಪಾಳ್ಯದಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಆಶ್ರಿತ ಪಲ್ಲಕ್ಕಿ ಸಹಿತ ಉತ್ಸವ ಫೋಟೋ ೦—೦—೮

* ಮಾಜಿಯರ್ಡ್ ಮೇಲೆ ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟಿದ್ದು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾವ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯ ಭಾರ ಮುಂತಾದ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ನರ್ವಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಚ್ಯಾಪಕಕಕ್ಕೆಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯನ್ನಿಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಿರುವರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂಗಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.


(Registered Trade Mark)

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆದಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[42] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೪ನೆಯ ಆವೃತ್ತಿ)	...	೧	ಆಣೆ
ಸಚ್ಯಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)		೧	ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	...	೧	ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೪ನೆಯ ಆವೃತ್ತಿ)	...	೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	..	೧	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	.	೨	ಆಣೆ
ಬಸವಾದಿಸಿಜಿತತ್ವದರ್ಪಣ (೪ನೆಯ ಆವೃತ್ತಿ)	..	೨	ಆಣೆ
ಶ್ರೀರೇಣುಕಾಜಾರ್ಯರಿತಕ (೩ನೆಯ ಆವೃತ್ತಿ)	...	೨	ಆಣೆ
ಪಂಚಾಚಾರ್ಯಪ್ರಭಾಕರ	..	೨	ಆಣೆ
ಶ್ರೀಗುರುತತ್ತ್ವಪ್ರದರ್ಶ	....	೨	ಆಣೆ
ಶ್ರೀಕುಮುನಿಪಿವಾಚಾರ್ಯಶತಕ	....	೨	ಆಣೆ
ವೀರಶೈವಮತವಿಮಾನಾರೋಹಣ	...	೩	ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	....	೩	ಆಣೆ
ಲಿಂಗಧಾರಣವಿಧಿ	...	೪	ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	..	೪	ಆಣೆ
ಶ್ರೀಸಪಿಪಂಡಿತಾರಾಧ್ಯರ ಕಾಲನಿರ್ಣಯ	....	೪	ಆಣೆ
ಸಚ್ಯಾಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸೈಜು)	....	೬	ಆಣೆ
ವೀರಶೈವಮಹಾತ್ಮರು	....	೮	ಆಣೆ
ಜಪಮಾಹ್ಯಾಂತದಿವಾಕರ (೩ನೆಯ ಆವೃತ್ತಿ)	....	೮	ಆಣೆ
ಶಿವಾದ್ವೈತಪರಭಾಸಾ (ಸಂಸ್ಕೃತ)	....	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		೪	ಆಣೆ
ವೈದಿಕಶಿವಪೂಜಾವಿಧಿ (ವೈದಿಕಶ್ಲೋಕಯುಕ್ತವಾಗಿ ಅತ್ಯಂತ ಸುಂದರಮುದ್ರಣ)		೧೨	ಆಣೆ
ಸಿದ್ಧಾಂತಶಿಖಾಮಣಿ (ಶ್ರೀರೇಣುಕಸಿದ್ಧಾಚಾರ್ಯಕೃತ)	....	೧೨	ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೪	ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	..	೧೪	ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	....	೧೪	ಆಣೆ
ಶ್ರೀಕರಭಾಷ್ಯ (ಚತುಸ್ಸೂತ್ರಿ)	....	೧	ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	..	೧	ರೂ.
ವೀರಶೈವಪಶ್ನ (೫ನೆಯ ಪ್ರಶ್ನ, ೭೦ಮಹತ್ವದ ಪ್ರಶ್ನೋತ್ತರಗಳಿರುವುವು)	....	೧	ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	...	೧	ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧	ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧	ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೩	ರೂ.
ವೀರಶೈವಸಿದ್ಧಾಂತಸುಧಾಕರ	....	೩	ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	....	೮	ರೂ.
A brief life-sketch of Pandit Sri Kashinatha Shastriji (*English*)		4	As.
The Philosophical Aspect of Virasaivism (*English*)	....	8	As.
Speeches by Pandit Shri Kashinatha Shastriji *English*)		12	As
ವೀರಶೈವರು (ಅಗಾಧಿ)		೧	ಕ.
ಸಹಾನುಭವಾಮೃತ (ವೀರಶೈವಾಚಾರ-ಅನುವಾದ) ..		೧	ಕ.
ವೀರಶೈವತತ್ತ್ವಸಾರ (ಅನುವಾದ)		೧	ಕ.
ಸದ್ಗುರಿಷ್ಟಾಕಾರಿಕಾ (ಅನುವಾದ)		೨	ಆಣೆ.
ಶಿವಾಚಾರಚಂದ್ರಿಕಾ (ಅನುವಾದ)		೩	ಕ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

REGISTERED No. M. 2266 || ಅಂಚಾಸ್ಮಾಕಂ ಪುಣ್ಯಫಲಾಸ್ವಾದಾಯ ಪ್ರಕಟೀಕರಂತು || REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ! ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗನ್ಮರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೯ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಫೆಬ್ರುವರಿ ೧೯೪೦ [ಸಂಚಿಕೆ ೪೪

ಚಿತ್ರದುರ್ಗಕ್ಕೆ ಶ್ರೀಮನ್ಮಹಾರಾಜರವರ ಆಗಮನ

ಶ್ರೀ ಮನ್ಮಹಾರಾಜರು 23 ನೇ ತಾರೀಖಿನ ದಿವಸ ಚಿತ್ರದುರ್ಗಕ್ಕೆ ಆಗಮಿಸಿದರು. ಅಲ್ಲಿಯ ಪೌರಸಭೆಯವರು ಬಿನ್ನಪತ್ರವೆಯೊಂದನ್ನು ಅರ್ಪಿಸಿದರು ಅದಕ್ಕೆ ಶ್ರೀ ಮನ್ಮಹಾರಾಜರು ಈ ಕೆಳಗಿಕಂಡತೆ ಉತ್ತರಕೊಡಿಸಿದರು.

ಶ್ರೀ ಮನ್ಮಹಾರಾಜರವರ ಉತ್ತರ

ಇತಿಹಾಸ ಪ್ರಸಿದ್ಧವಾದ ನಿಮ್ಮ ಪಟ್ಟಣಕ್ಕೆ ನೆ.ತ್ತೆ ನ್ನೆ ಆಗಮಿಸಿದ್ದೇವೆ. ನಾವು ಈಗ್ಗೆ ಎರೆಡು ವರ್ಷಗಳಿಗಿಂತ ಸ್ವಲ್ಪ ಹಿಂದೆ ಆಗಮಿಸಿದ್ದಾಗಿನಿಂದೀಚೆಗೆ ಇಲ್ಲಿ ನಡೆದಿರುವ ಪುರೋಭಿವೃದ್ಧಿ ಕಾಧನೆಯ ರೂಪವಾದ ಅನೇಕ ಕಾರ್ಯೆ ಮಾರ್ಗಾಡುಗಳನ್ನು ಅವಲೋಕಿಸಿದುದರಿಂದ, ನಮಗೆ ಮಹತ್ತರವಾದ ಹರ್ಷವುಂಟಾಗಿದೆ. ನಿಮ್ಮ ನೂತನ ಪೌರಭಾಮಂದಿರ, ಶಿಕ ವಿಜಾರೋದ್ಯಾನ, ಇಲ್ಲಿಯ ಚಿಕಿತ್ಸಾಲಯದ ಮತ್ತು ನಿರ್ವ್ಯಾಧಿನಿಲಯಗಳ ಕಟ್ಟಡಗಳ ಮೇಲ್ಚಾವಿಗಳು, ಚಲಚಿತ್ರ ಮಂದಿರ–ಮುಂತಾದ ಸೌಕರ್ಯ ಸಾಧನಗಳು ಅಗಿನಿಂದೀಚೆಗೆ ಮಾರ್ಗಟ್ಟಿವೆ. ನಿಮ್ಮ ಡಿಸ್ಟ್ರಿಕ್ಟಿನ ಕಸಬೆಯಾದ ಈ ಚಿತ್ರದುರ್ಗವು, ಸಂಸ್ಥಾನದಲ್ಲಿರುವ ಇತರ ಡಿಸ್ಟ್ರಿಕ್ಟ್ ಕಸಬೆಗಳಿಗಿಂತ ವಿಸ್ತೀರ್ಣದಲ್ಲಿ ಅಲ್ಪತಮವಾಗಿದ್ದರೂ, ಸಾರ್ವಜನಿಕ ಸೇವಾಸಕ್ತಿಯಲ್ಲಿಯೂ ಅಲ್ಪತಮವಾಗಿಲ್ಲವೆಂಬುದು ಸುವ್ಯಕ್ತವೇ ಸರಿ.

ನಮ್ಮಲ್ಲರಿಗೂ ಪ್ರಿಯವಾದ ನಮ್ಮಸಂಸ್ಥಾನದಲ್ಲಿರುವ ಪ್ರಾಕೃತಿಕ ಸೌಂದರ್ಯದ ಸನ್ನಿವೇಶಗಳಿಗೆ ಸಾಧ್ಯವಿರುವಲ್ಲಿ ಮತ್ತಷ್ಟು ರಮ್ಯತೆಯನ್ನುಂಟುಮಾಡುವ ನಿರ್ಜಾರದಲ್ಲಿ, ನಮ್ಮ ಸರಕಾರದವರು ಅನುಸರಿಸುತಿರುವ ಕಾರ್ಯನೀತಿಯು ನಿಮಗೆ ಹೃದಯಂಗಮವಾಗಿದೆಯೆಂಬ ಅಂಶವು ನಿಮ್ಮ ವಿಜ್ಞಾಪನಾ ಪತ್ರಿಕೆಯಿಂದ ವ್ಯಕ್ತವಾಗಿರುವುದರಿಂದ, ಅದನ್ನು ಕುರಿತು ನಮಗಾಗಹನೆಗೆ ತಂದುಕೊಂಡು ಹೆರ್ಷಿಸಿದ್ದೇವೆ. " ಚಿತ್ರದುರ್ಗ " ವೆಂಬ ಹೆಸರು ಅನ್ವರ್ಥನಾಮದಂತಿರುವ ಮೆದಕರಿ ನಾಯಕರವರ ಸುಂದರವಾದ ಚಿತ್ರದುರ್ಗವು ನಿಮ್ಮ ರಕ್ಷಣೆಗೆ ವಿಷಯವಾಗಿ ಪರಿಣಮಿಸಿದೆ. ಅದರ ಸುಂದರವಾದ ದೃಶ್ಯವು ಪರಿಷ್ಕಾರದಿಗಾಗಿ ಗೋಚರಿಸದಂತೆ. ಅಭ್ಯಂತರವುಂಟಾಗುವ ಹಾಗೆ ಸೇರಿರ ತಕ್ಕ ಅಸಹ್ಯಕರವಾದ ಸನ್ನಿವೇಶಗಳೆನ್ನೆಲ್ಲ ವಿವೇಚನೆಯಿಂದ ನಾಶಗೊಳಿಸಿ ವಿಚಾರಿಸಿಕ ದೃಷ್ಟಿಯಿಂದ ಅಮೂಲ್ಯವಾದ ಪ್ರಾಚೀನ ಕಾಲದ ಅವಶೇಷಗಳೂ ಪ್ರಾಕೃತಿಕ ಸನ್ನಿವೇಶಗಳೂ ಮತ್ತಷ್ಟು ಸುಂದರವಾಗಿ ಕಾಣುವಂತೆ ಸುವ್ಯವಸ್ಥೆಗೊಳಿಸಲು ನಿಮಗೆ ಅತ್ಯಧಿಕವಾದ ಅವಕಾಶಗಳುಂಟು. ಅದು ಹಿನ್ನೆಲೆಯಲ್ಲಿ ಸ್ವಾಭಾವಿಕ ಸನ್ನಿವೇಶಗಳೊಡನೆ ರಮಣೀಯವಾಗಿ ಕಾಣುವುದಕ್ಕೆ ಆಭ್ಯಂತರ ವುಂಟಾಗುವಂತೆ ಪ್ರತಿಬಂಧಕವನ್ನುಂಟುಮಾಡುವ ಅಸಮಿಂಜಸವಾದ ಕಟ್ಟಡಗಳನ್ನು ಇನ್ನು ಮುಂದಾದರೂ ಹೆಚ್ಚಿಸದೆ, ಆ ದೃಶ್ಯವು ಅನೂನ ಸೌಂದರ್ಯದಿಂದ ಸಂಗೋಭಿಸುವಂತೆ ನೀವುಗಳು ತಕ್ಕ ವರ್ತನೆಯನ್ನ ವಲಂಬಿಸುವಿರೆಂದು ನಾವು ಹಾರೈಸುವೆವು.

ಪೌರಸಭೆಯವರು, ತಾವು ಪ್ರತಿನಿಧಿಗಳಾಗಿರುವ ಪುರ ಜನರ ಸೌಕರ್ಯಗಳನ್ನು ಅಧಿಕಗೊಳಿಸುವ ಉದ್ದೇಶದಿಂದ, ಜಲವನ್ನು ಮತ್ತು ಪಟ್ಟಣದ ಕಕ್ಕಲ ಜಲನಿರ್ಗಮನದ ಜಲದಾರಿಗಳ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕೆಂದೂ ಸಂಚಾರಮಾರ್ಗಗಳಿಗೆ ಕೇಲೆನ್ಸೆ ಗಟ್ಟು ಮಾಡಿಸಬೇಕೆಂದೂ ಅರಿಕೆಮಾಡಿದ್ದಾರೆ. ಈ ಮೂರರಲ್ಲಿ ಜಲಪೂರೈಸುವ ವ್ಯವಸ್ಥೆಯನ್ನು ಬಿಟ್ಟು ಉಳಿದೆರಡರ ಸಂಬಂಧವಾದ ವಿಚಾರಾಡುಗಳು ನಮ್ಮ ಸರ್ಕಾರದವರ ಹರ್ಯಾಲೋಚನೆಗೆ ಇನ್ನೂ ಸಮರ್ಪಿತವಾಗಿಲ್ಲ. ಕಾತರಾಳು ಕೆರೆಯಿಂದ ನಿಮ್ಮ ಪಟ್ಟಣಕ್ಕೆ ಜಲಪತಿಯನ್ನೊದಗಿಸುವ ವಿಚಾರಿನ ತಿಮ್ಮದಾಸಿಯು ಅಂದಾಜಿಗೆ ಅನುವೋದನವು ಲಭಿಸಿದೆಯೆಂದೂ, ಕಾರ್ಯಾರಂಭಕ್ಕೆ ಅನುಮತಿಯೊಡನೆ ನಮ್ಮ ಸರ್ಕಾರದವರ ಆಜ್ಞಾಪತ್ರವು ಶೀಘ್ರವಾಗಿ ಹೊರಡುವುದಾಗಿದೆಯೆಂದೂ ಸೂಚಿಸುವುದು ಸಾಧ್ಯವಾಗಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಆದರೆ, ನಾವು ಒಂದು ವಿಚಾರದಲ್ಲಿ ನಿಮಗೆ ಎಚ್ಚರಿಕೆ ಹೇಳಬೇಕಾಗಿದೆ. ಮತ್ತಷ್ಟು ಅಧಿಕಕರವಾದ ಪ್ರಮಾಣದಲ್ಲಿ ಜಲನಷ್ಟವಾಗುವುದಾಗಿದೆಯೇ ನೀವುಗಳು ಮನಸ್ಸಿಟ್ಟು ಯಾಗಿ ನೀರನ್ನು ಪೋಲುಮಾಡಬಲ್ಲಂಥ ಪ್ರಮಿಸಕರಣದಿಂ ಬುದೇ ನಾವು ಕೊಡುವ ಎಚ್ಚರಿಕೆ. ನಮ್ಮ ಅನುಭವದಲ್ಲಿ ಮುಖ್ಯವಾಗಿ ಬೆಂಗಳೂರು ಮೈಸೂರು ನಗರಗಳಲ್ಲಿ ಲಭಿಸಿರುವ ಅನುಭವದಲ್ಲಿ—ನೀರನ್ನು ಪೋಲುಮಾಡುವುದರಿಂದ ಜನರ ಸಹಜ ಪ್ರವೃತ್ತಿಯಾಗಿರುವಂತೆ ತೋರಿಬಂದಿದೆ. ಹೀಗೆ ನೀರು ಪೋಲಾದರೆ ಅದರ ಪರಿಣಾಮವಾಗಿ ಸರ್ಕಾರವೂ ಮತ್ತು ಪ್ರಜೆಗಳೂ ಬಹಳ ಧನವ್ಯಯಮಾಡಬೇಕಾಗಿ ಬರುತ್ತದೆ. ಅಲ್ಲದೆ, ನೀರನ್ನು ಪೋಲುಮಾಡುವುದರಿಂದ ಆದರಲ್ಲಿಯೂ ಮುಖ್ಯವಾಗಿ ಹೆಚ್ಚು ನೀರು ಶೇಖರವಾದ ಅಲ್ಲಲ್ಲಿ ನಿಂತಿರಲು ಅವಕಾಶಕೊಟ್ಟರೆ—ಸೊಳ್ಳೆಗಳ ಪಡೆಗಳು ಹೆಚ್ಚಿ ಮಲೇರಿಯಾ ಜ್ವರವೂ, ತತ್ಸಂಬಂಧವಾದ ಇತರ ಜಾಡ್ಯಗಳೂ ಸಂಭವಿಸುವ ಅಪಾಯವೂ ಉಂಟು.

ನಿಮ್ಮ ಪಟ್ಟಣದಲ್ಲಿ ವಿದ್ಯುದ್ದೀಪೋತ್ಪತ್ತಿಯನ್ನು ನೆರವೇರಿಸುವುದಕ್ಕಾಗಿ ನೀವುಗಳು ನಮ್ಮನ್ನು ಅಹ್ವಾನಿಸಿರುವಿರಿ. ವಿದ್ಯುದ್ಶಕ್ತಿಯು ಉತ್ಪತ್ತಿಯಾಗುವ ತಿವನಸಮುದ್ರಕ್ಕೆ ನಿಮ್ಮ ಪಟ್ಟಣವು ಅತಿದೂರದಲ್ಲಿರುವ ಕಾರಣದಿಂದ ಸಂಸ್ಥಾನದ ಇತರ ಅನೇಕ ಸ್ಥಳಗಳಿಗೆ ವಿದ್ಯುದ್ದೀಪಗಳು ಲಭಿಸಿದ ಮೇಲೆ ಅವು ಇಲ್ಲಿಗೆ ಈಗ ಲಭಿಸಿವೆ. ವಿದ್ಯುಚ್ಛಕ್ತಿಯಿಂದ ನಿಮಗೆ ಪೂರ್ಣಪ್ರಯೋಜನವುಂಟಾಗಲೆಂದು ಹಾರೈಸುತ್ತೇವೆ. ಇಂದು ರಾತ್ರಿಯು ಸಮೀಪಿಸಿ ಅಂಧಕಾರಾವೃತವಾಗಲುಪಕ್ರಮಿಸುವ ವೇಳೆಯಲ್ಲಿ ನಾವು ಆತ್ಯಂತ ಸಂತೋಷದಿಂದ ವಿದ್ಯುದ್ದೀಪೋತ್ಪತ್ತವನ್ನು ನೆರವೇರಿಸುವೆವು.

ವರ್ತಮಾನಸಂಗ್ರಹ.

2000 ವರ್ಷಗಳ ವರೆಗೆ ಬದುಕಿರಬಹುದು !

ಹಾಲೆಂಡಿನ ಲೇರ್ಡ ವಿಶ್ವವಿದ್ಯಾನಿಲಯದ ಪ್ರೊಫೆಸರ ಒಬ್ಬರು, ಮನುಷ್ಯನು 2000 ವರ್ಷಗಳ ವರೆಗೆ ಬದುಕಿರುವಂತೆ ಒಂದು ಅದ್ಭುತವಾದ ಚಿಕಿತ್ಸಾಕ್ರಮವನ್ನು ಕೆಂಡು ಹಿಡಿದಿರುವರಂತೆ !

113 ವರ್ಷದ ವೃದ್ಧೆ

ರುಮೇನಿಯದಲ್ಲಿ ಸಾವಾಮಾಯಿಸಪೋಪ ಎಂಬಾಕೆಯು 113 ವರ್ಷ ಬದುಕಿದ್ದಳು. ಸಾಯುವದಿನ ಕೂಡ ಅವಳು ಹೊಲವನ್ನಲ್ಲಿ ಕೆಲಸಮಾಡಿ ಬಂದಳಂತೆ ! ಇಷ್ಟು ವಯಸ್ಸಾದರೂ ಕುದುರೆ ಸವಾರಿ ಮಾಡುತ್ತಿದ್ದಳಂತೆ !

ತುರ್ಕಿಯಲ್ಲಿ ಪುನಃ ಭೂಕಂಪ !

ಭೂಕಂಪ ಭೂತವು ತುರ್ಕಿಯನ್ನು ವಿಶೇಷ ಕಾಡಿಸಲು ಹತ್ತಿದೆ ತುರ್ಕಿ ದೇಶದ ಸೋಯಾಕಳ್ಳಿಯಲ್ಲಿ ಮತ್ತೆ ಭೂಕಂಪವಾಗಿ 80 ಜನರು ಸತ್ತರು. 22 ಜನರು ಗಾಯಗೊಂಡರು 10000 ಜನರು ಮನೆ ಮಠಗಳನ್ನು ಬಿಟ್ಟು ಬೈಲಿನಲ್ಲಿ ವಾಸಮಾಡುತ್ತಿದ್ದಾರೆ. ಕೆಲವು ಹಳ್ಳಿಗಳಲ್ಲಿ ಭೂಮಿಯು ಎಂಟು ಸಾರೆ ಕಂಪಿಸಿತೆಂದೂ 4 ಹಳ್ಳಿಗಳು ಹೇಳಹೆಸರಿಲ್ಲದಾದನೆಂದೂ, ಏಳು ದೊಡ್ಡ ನಗರಗಳಲ್ಲಿ ಮನೆ ಮಠಗಳು ಉರುಳಿಹೋದವೆಂದೂ ತಿಳಿದು ಬರುತ್ತದೆ.

ಪೂಜಾಪರಿಮಳ ದ್ರವ್ಯಗಳು.

ಮಹನೀಯರೇ ! ನಮ್ಮಲ್ಲಿ ದೇವರ ಪೂಜೆಗೆ ಬೇಕಾಗುವ ಪರಿಮಳ ದಕಾಂಗ, ಧೂಪದಗಟ್ಟಿ, ವೀಶೇಕರ್ಪೂರ, ರಕ್ಷವಾರು ಹಸಾದ ಉದಬತ್ತಿಗಳು ಯೋಗ್ಯಬೆಲೆಗೆ ದೊರೆಯುತ್ತವೆ. ಬೇಕಾದ ಸಾಮಾನುಗಳಿಗೆ ಬರೆದು ತರಿಸಿಕೊಳ್ಳಿರಿ.

ಸೈ. ಬಸಪ್ಪ,
ಊದುಬತ್ತಿ ದಕಾಂಗದ ಕಾರ್ಖಾನೆ.
[3] ಚಿಕ್ಕಪೇಟೆ, ಬೆಂಗಳೂರು.

ದಾವಣಗೆರೆಗೆ ಶ್ರೀಮನ್ಮಹಾರಾಜರವರ ಆಗಮನ.

ಶ್ರೀಮನ್ಮಹಾರಾಜಾಧಿರಾಜ ಶ್ರೀಶ್ರೀ ಚಾಮರಾಜವಡೆಯರವರು ತಮ್ಮ ೫೪ನೇ ಜನ್ಮದಿನ ವಿನಯ ರಾಜಧಾನಿಯಿಂದ ಶ್ರೀಕಾಲಿಂಗಾಂಕ ಹೊರಟು ೨೫ನೇ ಸೋಮವಾರ ಮಧ್ಯಾಹ್ನ ದಾವಣಗೆರೆಗೆ ತಲುಪಿದರು. ಅಲ್ಲಿ ಸ್ಟೇಷನ್‌ನಲ್ಲಿ ಸ್ವಾಗತಾರ್ಥವಾಗಿ ಸಕಲ ಅಧಿಕಾರಿಗಳೂ ಸಾರ್ವಜನಿಕರೂ ಸೇರಿದ್ದರು. ಮಹಾರಾಜರವರು ಸ್ಟೇಷನ್‌ನಲ್ಲಿ ಇಳಿದ ತಕ್ಷಣ ಅವರಿಗೆ ಪೂರ್ಣಕುಂಭ ಸ್ವಾಗತವನ್ನು ಕೊಡಲಾಯಿತು. ಅನಂತರ ಅವರು ಮೋಟಾರಿನಲ್ಲಿ ಕುಳಿತುಕೊಂಡು ಸ್ಟೇಷನ್‌ನಿಂದ ಹೊರಟು ಬರುವಾಗ ದಾರಿಯಲ್ಲಿ ಸಾರ್ವಜನಿಕರು ಅವರಿಗೆ ಪುಷ್ಪವೃಷ್ಟಿಯನ್ನು ಕರೆದರ

ಸೂರುಗಟ್ಟಿಲೆಯಾಗಿ–ಜೊನೆಗೆ ಸಾವಿರಗಟ್ಟಿಲೆಯಾಗಿ–ಬಿಲಿಯಾಗಿವೆ. ಅತ್ಯಂತ ಶೈತ್ಯಮಯವಾಗಿ ವಿಶೇಷ ಪ್ರತಿಕೂಲವಿಷಯಗಳಿರುವ ವಾತಾವರಣದಲ್ಲಿಯೂ ಮತ್ತು ಆಹಾರಾದಿಗಳಾವದೇ ಭೇದೋಪಚಿತ್ತಗಳಿಂದ ನಿರಂತರವಾಗಿರುವ ಆಹಾರಯಶರವಾದ ಸ್ಥಾನ ವೇಶದಲ್ಲಿಯೂ ಈಕೆದ ಐದು ತಿಂಗಳುಗಳಿಂದ ಅಹರ್ನಿಶಿಯಾಗಿ ಸಂತತವೂ ಬ್ರಿಟಿಷರ ಸಮರ ಶೌರ್ಯಗಳೂ ಮತ್ತು ಅವುಗಳೊಡನೆ ಸಹಕರಿಸಿ ಶತ್ರುಗಳ ಹಾವಳಿಯನ್ನಡಗಿಸುವ ವಿಮಾನಗಳೂ ಕಾವಲಿದ್ದು, ಪ್ರಪಂಚದ ನಾನಾ ದೇಶಗಳಿಗೂ ವ್ಯಾಪಾರಶೌಕೆಗಳು ಸಂಚರಿಸಿ ಪ್ರಯ್ಯವಸ್ತುಗಳ ಪರಸ್ಪರ ವಿನ್ಯಮಯವು ಸುಲಲಿತವಾಗಿ ನಡೆಯಲು ಸಮುದ್ರಮಾರ್ಗಗಳನ್ನು ಸುರಕ್ಷಿತವಾಗಿ ನೋಡಿಕೊಳ್ಳುತ್ತಿವೆ. ಹಾಗೆ ಸಮುದ್ರ ಮಾರ್ಗಗಳು ಸುರಕ್ಷಿತವಾಗಿರುವುದರಿಂದಲೇ ವಿದೇಶಗ ಕೊಡನೆಯೂ ವ್ಯಾಪಾರಮಾಡುವ ವರ್ತಕರುಗಳಾದ ನಿವುಗಳು ಲಾಭವನ್ನಾರ್ಜಿಸುವುದು ಸಾಧ್ಯವಾಗಿದೆ. ಹೀಗೆ ನಿಮಗೆ ಲಭಿಸಿರವ ಮಹತ್ತರ ಪ್ರಯೋಜನಗಳನ್ನು ಉರಿತು ಸ್ಮರಿಸಿದಾಗಲೆಲ್ಲಾ ಬ್ರಿಟಿಷ್ ನೌಕಾದಳಕ್ಕೂ ಮತ್ತು ಬ್ರಿಟಿಷ್ ವಿಮಾನದಳಕ್ಕೂ ಸೇರಿರತಕ್ಕ ವರಿಂದ ನಿಮಗೆ ಲಭಿಸಿರುವ ರಕ್ಷಣೆಯೇ ಆ ಪ್ರಯೋಜನಗಳಲ್ಲೆಲ್ಲಾ ಎಷ್ಟಿಷ್ಟು ಕಾರಣವಾಗಿ ಅದರ ಸಹಾಯದಿಂದ ಮಾತ್ರವೇ ಅವುಗಳು ಲಭಿಸಿರುಬಹುದೆನ್ನು ಪರ್ವಥಾ ಮರೆಯಬಾರದೆಂಬ ಅಂಶವನ್ನು, ನಿಮ್ಮ ಗಮನಕ್ಕೆ ತರಲಿಚ್ಛಿಸುವೆವು.

ಬಾಳೆಯ ಉಪಯೋಗ

ಬಾಳೆಯ ಗಿಡವು ಉಷ್ಣ ಪ್ರದೇಶದಲ್ಲಿ ಬೆಳೆಯುವ ಗಿಡವಾಗಿದೆ. ಇಂಡಿಯಾವಲ್ಲಿ ಎಲ್ಲೆಲ್ಲಿಯೂ ಇದು ಬೆಳೆಯುವದು. ಒಳ್ಳೆಯ ಪೋಷಣ ಗುಣವುಳ್ಳದ್ದಾಗಿ, ರುಚಿಯಾದ ಹಣ್ಣುಗಳಲ್ಲಿ ಸ್ರಮ್ಯಾತಿಗೊಂಡಿದೆ. ಇಂಡಿಯಾ ದೇಶದಲ್ಲಿ ಈ ಬಾಳೆಯ ಗಿಡದ ಬೇರೆ ಬೇರೆ ಉಪಯೋಗಗಳನ್ನೂ, ಮುಖ್ಯವಾಗಿ ಅದರಲ್ಲಿರುವ ಔಷಧಗಳನ್ನೂ ಇಲ್ಲಿ ಸಂಗ್ರಹವಾಗಿ ಹೇಳುವೆವು. ಇಂಡಿಯಾ ದೇಶದ ಅನೇಕ ಸ್ಥಳಗಳಲ್ಲಿ ಬೆಳೆಯುವ ಬಾಳೆಯ ಜಾತಿಗಳನ್ನೆಲ್ಲ ವರ್ಣವ್ಯತ್ಯಾಸದಿಂದ ನೂರು ಬಗೆಯಾಗಿ ಛಾಗಿಸಬಹುದು ಹಸರುಬಾಳೆ, ಏಲಿಸಬಾಳೆ ಮತ್ತು ಕೇಂಬಾಳೆ. ಈ ಒಂದೊಂದಕ್ಕೂ ರುಚಿಯಲ್ಲಿ ಭೇದವುಂಟು. ಬಾಳೆಯ ಗಿಡವು ಸಾಧಾರಣವಾಗಿ ೧೦ ರಿಂದ ೧೫ ಅಡಿಗಳ ವರೆಗೆ ಬೆಳೆಯುವದು. ನದೀ ತೀರದಲ್ಲಿ ಇನ್ನೂ ಹೆಚ್ಚು ಉದ್ದವಾಗಿ ಬೆಳೆಯುವುದುಂಟು. ಬಾಳೆಯಮರವೂ ಅದರಲ್ಲಿ ಹುಟ್ಟುವ ಕಾಯಿ ಮೊದಲಾದ ವಸ್ತುಗಳೂ ಅನೇಕ ವಿಧದಲ್ಲಿ ಉಪಯೋಗಿಸಲ್ಪಡುತ್ತವೆ. ಅವೆಲ್ಲಾ ಔಷಧಿಗಳಾಗಿಯೇ, ಆಥವಾ ಆಹಾರವಾಗಿಯೋ ಉಪಯೋಗವಾಗುವವು. ಈ ಗಿಡದ ಒಂದು ಭಾಗವಾದೂ ನಿರರ್ಥಕವಾದುದಲ್ಲ. ಇದರ ಉಪಯೋಗಗಳು ಎಲ್ಲರಿಗೂ ತಿಳಿದಿರುವದರಿಂದ, ಇಂತಿಯಾ ದೇಶದ ಬಯಲು ದೇಶಗಳಲ್ಲಿ ಒಂದೊಂದು ಗ್ರಾಮದಲ್ಲಿಯೂ, ಮತ್ತು ಒಂದೊಂದು ಚಿಕ್ಕ ಹಳ್ಳಿಯಲ್ಲಿಯೂ ಬಾಳೆಯು ಬೆಳೆಯಲ್ಪಡುವದು.

ಬಾಳೆಯಗಿಡ—ಬಾಳೆಯ ಕಂಬಗಳನ್ನು ಎಂದರೆ, ಬೇರನ್ನು ಬಿಟ್ಟು ಉಳಿದ ಭಾಗ ಗಿಡವನ್ನು ವಿವಾಹ ಮುಂತಾದ ವಿಶೇಷ ದಿವಸಗಳಲ್ಲಿ ಬಾಗಿಲಿಗೆ ಅಲಂಕಾರಕ್ಕಾಗಿ ಕಟ್ಟುವರು.

ಬೇರು—ಜ್ವಾಂಡೀಸಿಲ್ ವ್ಯಾಧಿಯ ಮತ್ತು ಗಂಡಮಾಲೆ ರೋಗದ ಚಿಕಿತ್ಸೆಗಾಗಿ ಇದು ಉಪಯೋಗವಾಗುವುದು. ಬೇರನ್ನು ಛಕ್ಕಮಾಡಿ ರಕ್ತಹೀನ ರೋಗಿ, ಮತ್ತು ಕಾಕೇಸ್ಸಿಯಾ ಎಂಬ ವ್ಯಾಧಿಗೂ ಚಿಕಿತ್ಸೆಗಾಗಿ ಉಪಯೋಗಿಸುವರು. ಅದರ ರಸವನ್ನು ಹಿಂಡಿ ಕಷಾಯವಾಗಿ ಕುಡಿದರೆ, ಮದ್ಯರಸದಿಂದಾದ ಅಮಲು ಇಳಿಯುವದು. ಎಳೇ ಬೇರಿನ ರಸವು ರಕ್ತಸ್ರಾವವನ್ನು ನಿಲ್ಲಿಸುವದಕ್ಕೆ ಉಪಯೋಗಿಸಲ್ಪಡುವದು. ಈ ಬೇರಿನ ರಸದಲ್ಲಿ ಸುಟ್ಟಬಳಿಗಾರ, ಕೆಟ್ಟುಹೋದ ಇವುಗಳನ್ನು ಅರಗಿಸಿ, ಮೂತ್ರವನ್ನು ನಿಲ್ಲಿಸುವದಕ್ಕಾಗಿ ಕೊಡುವರು. ಕಡೆದ ಬೆಣ್ಣೆಯನ್ನೂ ಸಕ್ಕರೆಯನ್ನೂ ಇದರೊಡನೆ ಸೇರಿಸಿ ವಟ್ಟು ರೋಗಕ್ಕೆ ಚಿಕಿತ್ಸೆ ಮಾಡುವರು.

ಹೂ—ಮೇಲು ಭಾಗದ ನಾರಿನ ರಸವನ್ನು ಹಿಂಡಿ ಮೂತ್ರ ವ್ಯಾಧಿಗಳಿಗೆ ಆದರಿಂದ ಚಿಕಿತ್ಸೆ ಮಾಡುವರು. ಮಳ್ಳಿಗೆ ಅಧಿಕವಾಗಿ ಉಪಯೋಗಿಸಲ್ಪಟ್ಟ ಸಂದರ್ಭದಲ್ಲಿ, ಅದಕ್ಕೆ ಉಪಶಮನವಾಗಿ ಇದರ ರಸವನ್ನು ಕೊಡುವರು. ಬಾಳೆಯ ನಾರಿನ ರಸವು ಹಾವಿನ ಕಡಿತಕ್ಕೂ ಔಷಧಿಯಾಗಿ ಉಪಯೋಗಿಸಲ್ಪಡುವುದು ನಾಗಹಾವಿನ ವಿಷವಿದ್ದಾಗಲೂ ಈ ರಸದಿಂದ ಅನೇಕ ಜನರಿಗೆ ಗುಣವಾಗಿದೆ. ಇದರ ಒಂದು ಔನ್ಸಿನಷ್ಟು ರಸವನ್ನು ತೆಗೆದುಕೊಂಡು ಅದರೊಡನೆ ಒಂದು ಔನ್ಸಿನ ಬೆಣ್ಣೆಯನ್ನು ಸೇರಿಸಿ ಕಡಿತ ಕೆಟ್ಟಿರೆ, ಚೆನ್ನಾಗಿ ಛೇದಿಯಾಗುವುದು. ಇದರ ಎಳೇನಾರನ್ನು ಬೇಹದ ಉಷ್ಣಾಂಶವನ್ನು ತಗ್ಗಿಸುವುದಕ್ಕಾಗಿ ತಲೆಯಮೇಲೆ ಕಟ್ಟುವುದುಂಟು. ಇದರ ನಾರನ್ನು ಪುಷ್ಪಗಳನ್ನು ಕಟ್ಟುವುದಕ್ಕೂ ಮಾಲೆಗಳನ್ನು ಪೋಣಿಸುವುದಕ್ಕೂ ಉಪಯೋಗಿಸುವರು. ಒಣಗಿದ ನಾರನ್ನು ರಸಾಯನವಸ್ತುಸಂಬಂಧದಿಂದ ಸಂಸ್ಕರಿಸಿ, ದೃಢವಾಗಿ ಮಾಡಿ, ಅದರಿಂದ ಬಟ್ಟೆಗಳನ್ನು ನೇಯುವರು. ಅನೇಕದೇಶಗಳಲ್ಲಿ ಇದೇ ಒಂದು ಪ್ರಧಾನವಾದ ಕೈಗಾರಿಕೆಯಾಗಿದೆ. ಇದರಿಂದ ತಯಾರಿಸಿದ ಬಟ್ಟೆಗಳು ಒಳ್ಳೇರೇಷ್ಮೆ ಬಟ್ಟೆಗಳಂತೆಯೇ ಅಂದವಾಗಿರುವುವು.

ಎಳೆದಿಂಡು:—ಮರದೊಳಗಿನ ಎಳೇದಂಟಿನ್ನು ದೇಹದ ಉಷ್ಣವನ್ನು ತಗ್ಗಿಸುವುದಕ್ಕಾಗಿ ತಲೆಯಮೇಲಿಟ್ಟು ಕಟ್ಟುವರು. ಇದನ್ನು ಅಡಿಗೆಗೂ ಉಪಯೋಗಿಸುವುದುಂಟು ಬಾಳೆದಿಂಡನ್ನು ಭೋಜನದಲ್ಲಿ ಉಪಯೋಗಿಸುವದರಿಂದ ಮೂತ್ರವು ಧಾರಾಳವಾಗಿ ಇಳಿಯುವುದು. ಇದರಿಂದ ಪಚ್ಚಡಿಯನ್ನು ಮಾಡುವರು. ನಾಣ್ಯಾದಿ ದುರ್ಗುಣಗಳನ್ನು ನೀಗಿಸುವದಕ್ಕಾಗಿಯೂ ಇದನ್ನುಪಯೋಗಿಸುವರು. ಪೂರ್ವಕಾಲದಲ್ಲಿ ಇದರ ಒಣಗಿದ ನಾರನ್ನೂ, ತರಗೆಲೆಗಳನ್ನೂ ಸುಟ್ಟು, ಆ ಬೂದಿಯಿಂದ ಪೋಟಾಸಿಯಂ ಕಾರ್ಬೋನೈಡ್ರೇಟನ್ನು ತೆಗೆಯುತ್ತಿದ್ದರು. ಬಾಳೆ ಎಲೆಗಳನ್ನೆ ಊಟಮಾಡುವ ತಟ್ಟೆಗಳಂತೆ ಉಪಯೋಗಿಸುವರು. ತರಗೆಲೆಗಳನ್ನು ಹೊಲಿದು ದೊನ್ನೆಗಳನ್ನಾಗಿ ಮಾಡುವರು. ಇದರ ಎಲೆಗಳನ್ನೂ, ದೊನ್ನೆಗಳನ್ನೂ ದಕ್ಷಿಣ ಇಂಡಿಯಾದಲ್ಲಿ ಅನೇಕ ಜನರು ಪ್ರತಿದಿನವೂ ವಿಶೇಷವಾಗಿ ಉಪಯೋಗಿಸುತ್ತಿರುವರು. ಸಳಿಗೆಗಳು, ಕತ್ತರಿಸಿ, ಸುಟ್ಟಗಾಯ, ಉರಿ ಮುಂತಾದವುಗಳ ಮೇಲೆ ಶೀತಲಕ್ಕಾಗಿ ಕಟ್ಟಿಹುವದುಂಟು. ಬೆಂದಹಣ್ಣವು ಹೋದಮೇಲೆ ವ್ರಣವು ಆರುವದಕ್ಕಾಗಿ ಈ ಬಾಳೆಯ ಎಲೆಗೆ ಎಣ್ಣೆಯನ್ನು ಸವರಿ, ವ್ರಣಗಳಮೇಲೆ ಕಟ್ಟುವರು ಬಲಿತ ಹಸೀ ಎಲೆಗಳನ್ನು ಕಣ್ಣುಗಳಿಗೆ ಮರೆಯಾಗಿಟ್ಟು ಕಟ್ಟುವದುಂಟು.

ಬಾಳೆಯ ಹೂ—ಇದರಿಂದ ವಿಧವಿಧವಾದ ಪಲ್ಯಗಳನ್ನು ಮಾಡುವದುಂಟು. ಮಧುಮೇಹ ವ್ಯಾಧಿಗೆ ಇದು ಗುಣಕಾರಿಯಾದುದು. ಬಾಳೆಯ ಹೂವನ್ನಿಡಿದು ರಸವನ್ನು ಹಿಂಡಿ, ಅದರೊಡನೆ ಮಜ್ಜಿಗೆಯನ್ನೂ ಸೇರಿಸಿ ಕೊಟ್ಟರೆ, ಹೆಂಗಸರಿಗೆ ಮುಟ್ಟುಗುವಾಗ ಹೊಟ್ಟೆಶೂಲೆ, ಅಶ್ವಮಾಸ್ರಾವ, ಮುಂತಾದ ಮುಷಸಂಬಂಧವ್ಯಾಧಿಗಳು ಗುಣವಾಗುವುವೆ.

ಬಾಳೆಕಾಯಿ:—ಇದು ಒಂದು ಒಳ್ಳೇ ಆಹಾರ ಪದಾರ್ಥವು. ಪಿತೋಸ್ಫಿಸಿಸ್, ಮತ್ತು ಮಧುಮೇಹ ವ್ಯಾಧಿ, ಇವುಗಳಂದ ನರಳುವವರಿಗೆ ಬಾಳೇಕಾಯಿ ಬಹಳ ಒಳ್ಳೆಯ ಔಷಧವು. ಇದನ್ನು ಒಣಗಿಸಿ ಸಕ್ಕರೆಯೊಡನೆ ಸೇರಿಸಿ ತಿಂದರೆ, ಕಫಿ, ತುರಿ, ಮುಂತಾದ ಚರ್ಮರೋಗಗಳು ನೀಗುವುವು. ಮಲೆಯಾಳದಲ್ಲಿ ಮತ್ತು ಪಶ್ಚಿಮ ಸಮುದ್ರತೀರಗಳಲ್ಲಿ ಒಂದುಬಗೆಯ ಬಾಳೆಯು ಬೆಳೆಸಲ್ಪಡುತ್ತದೆ. ಅದು ಕಾಯಿಯನ್ನು ತುಂಡುತುಂಡಾಗಿ ಮಾಡಿ, ತೆಂಗಿನ ಎಣ್ಣೆಯಲ್ಲಿಯಾಗಲಿ ಆಥವಾ ಬೆಣ್ಣೆಯಲ್ಲಿಯಾಗಲಿ ಹುರಿದಿಡುವರು. ಇದು ಬಹುದಿವಸಗಳವರೆಗೆ ಕೆಡುವುದಿಲ್ಲ ಇವನ್ನೇ ಬಿಸಿನೀರಿಲ್ಲಿ ಒಣಗಿಸಿ, ಹಿಟ್ಟುಮಾಡಿ, ಮಕ್ಕಳಿಗೆ ಆಹಾರವನ್ನಾಗಿ ಉಪಯೋಗಿಸುವರು. ಇದರಿಂದ ರೊಟ್ಟಿ ಮುಂತಾದವುಗಳನ್ನು ಮಾಡುವದುಂಟು: ಇದರ ಹಿಟ್ಟನ್ನು ಗಂಜಿಕಾಯಿಸಿ, ಹಾಲನ್ನು ಬೆರೆಸಿಕೊಡುವದರಿಂದ ಅರ್ಜೀರ್ಣಸಂಬಂಧವಾದ ಹೊಟ್ಟೇನೋವಿಗೆ ಇದು ಒಳ್ಳೆಯ ಚಿಕಿತ್ಸೆಯಾಗುವದು

ಬಾಳೆಹಣ್ಣು—ಇದು ಗಿಡದಲ್ಲಿರುವೇ ಮಾಗಿದರೆ ಒಳ್ಳೆಯದು ಹಾಗಿಲ್ಲದೆ ಗೊನೆಯನ್ನು ಕೊಯ್ದಮೇಲೆ ಹಣ್ಣಾದರೆ, ಅದರಲ್ಲಿ ಅಷ್ಟು ರುಚಿಯಿರುವದಿಲ್ಲ. ಬಾಳೆಯ ಹಣ್ಣಿನಲ್ಲಿ ಎ. ಬಿ. ಸಿ. ಎಂಬ ಮೂರುಬಗೆಯ ಜೀವಸತ್ವಗಳೂ ಸೇರಿವೆ. ಇದರಲ್ಲಿ ಕಬ್ಬಿಣದ ಅಂಶವೂ ಇರುವದರಿಂದ ರಕ್ತಬಲವಿಲ್ಲದವರಿಗೆ ಇದು ಅನುಕೂಲವಾಗುವದು. ದೀರ್ಘಕಾಲದ ಶೀತಭೇದಿ ಮತ್ತು ಭೇದಿ, ಇವುಗಳಿಗೆ ಇದು ಗುಣಕಾರಿ ಇದಕ್ಕೆ ಸಮತೂಕವಳ್ಳ ಹುಳಿಯನ್ನೂ ಸೇರಿಸಿ ಸ್ವಲ್ಪ ಉಪ್ಪುಹಾಕಿ ಕಲಿಸಿಕೊಡಬೇಕು. ಈ ಹಣ್ಣನ್ನು ಜೇನನ್ನು, ಸಮಪ್ರಮಾಣದಲ್ಲಿ ಬೆರಸಿ ಕದಡಿಕೊಟ್ಟರೆ ಮೂತ್ರದಲ್ಲಿ ಸಕ್ಕರೆಯು ತಗ್ಗುವದು. ಮಧು ಮೇಹವ್ಯಾಧಿಗೆ ಈ ಬಾಳೆಯಹಣ್ಣು ಒಳ್ಳೆಯದು. ಬಾಳೆಯ ಹಣ್ಣನ್ನು ಹಿಂಡಿ ಅದರ ರಸವನ್ನು ತೆಗೆದು ಅದನ್ನು ಹುಳಿಯುವದಕ್ಕಾಗಿ ಬಿಟ್ಟು, ಆಮೇಲೆ ಕೊಟ್ಟರೆ ಗುಲ್ಮವ್ಯಾಧಿಗೆ ಅದು ಒಳ್ಳೇ ಔಷಧವಾಗುವದು. ಬಾಳೆಯಹಣ್ಣನ್ನು ಚನ್ನಾಗಿ ತೊಳೆದು ನಾಲ್ಕು ಔನ್ಸು ಹಾಲಿನೊಡನೆ ಸೇರಿಸಿಕೊಟ್ಟರೆ, ಸ್ಯರ್ವಿ, ಭೇದಿ ಮುಂತಾದ ವ್ಯಾಧಿಗಳನ್ನು ನೀಗಿಸುವದು. ಬಾಳೆಯ ಕಾಯನ್ನು ಹುಳಿಮಾಡಿಯೂ ಇದಕ್ಕಾಗಿ ಉಪಯೋಗಿಸುವದುಟು.

ಬಾಳೆಯ ಬೀಜಗಳು—ಕೆಲವು ಜಾತಿಯ ಬಾಳೆಗೆ ಬೀಜಗಳುಟ್ಟು. ಈ ಬೀಜದ ರಸವು ಕೆಮ್ಮೆಬ್ಬಿಸುವಲ್ಲಿ ಕಾಣುವ ಉರಿಯನ್ನು ತಗ್ಗಿಸುವದು. ಭೇದಿಯಾಗುತ್ತಿರುವವರಿಗೂ ಇದು ಗುಣಕಾರಿ.

ಬಾಳೆಯಸಿಪ್ಪೆ—ಬಾಳೆಯ ಸಿಪ್ಪೆಯನ್ನು ಸುಟ್ಟಬೆ, ಅದರ ಬೂದಿಯಲ್ಲಿ ಸೋಡಾ ಇರುವದು. ಅದನ್ನು ಬಟ್ಟೆಗಳನ್ನೊಗೆಯುವದಕ್ಕಾಗಿ ಉಪಯೋಗಿಸಬಹುದು. ಬಾಳೆಯ ಮರವನ್ನೇ ಸುಟ್ಟರೆ ಅದರಲ್ಲಿ ಪೋಟಾಷ್ ಉಪ್ಪು ಗಳಿರುವವು. ಇದು ಮಾಂದ್ಯ, ಉರಿ, ಹೊಟ್ಟೆಕೂಲೆ, ಇವುಗಳನ್ನೆಲ್ಲ ತಗ್ಗಿಸುವದು.

" ಗು. ಹೆಲ್ತ್ "

ಸ್ವಧರ್ಮನಿಷ್ಠೆ ಮತ್ತು ಪರಧರ್ಮಸಹಿಷ್ಣುತೆ

ಪ್ರತಿಯೊಬ್ಬ ಮನುಷ್ಯನಿಗೂ ಸ್ವಧರ್ಮನಿಷ್ಠೆ ಮತ್ತು ಪರಧರ್ಮಸಹಿಷ್ಣತೆಗಳು ಮುಖ್ಯವಾದ ಬೇಕಾಗಿವೆ ಸ್ವಧರ್ಮನಿಷ್ಠೆಯಿಲ್ಲದವನಿಗೆ ಪರಧರ್ಮಸಹಿಷ್ಣತೆಯು ಇದಯಿಸದಂತೆ, ಪರಧರ್ಮಸಹಿಷ್ಣತೆಯಿಲ್ಲದವನಿಗೆ ಸ್ವಧರ್ಮನಿಷ್ಠೆಯೂ ಉದಯಿಸುವುದಿಲ್ಲ. ಒಂದು ಪಕ್ಷ ಇದ್ದರೂ ತೋರಿಕೆಗೆ ಮಾತ್ರ ಇರಬಹುದು. ಲಕ್ಷ್ಮೇಶ್ವರ ನಗರದಲ್ಲಿರುವ ಜೈನಸಮಾಜದವರು ಈ ಎರಡೂ ಗುಣಗಳಿಂದ ರಾರಾಜಿಸುತ್ತಿರುವುದು ಪ್ರತಿಯೊಬ್ಬರಿಗೂ ಪ್ರತ್ಯಕ್ಷಾರ್ಹವಾಗಿದೆ. ಬೆಂಗಳೂರು ಮಹಾಂತನಿಮಿಠದ ಶ್ರೀ ಗಂಗಾಧರ ತಿವಾರ್ಯ ಸ್ವಾಮಿಗಳವರು ಅಹೋರಾತ್ರಗಳಲ್ಲಿ ಅಮೃತ್ಯ ಸುತ್ತಿರುವ ಧರ್ಮೋದ್ಧಾರದ ತವಪ್ಸಿನಲ್ಲಿ ಸಹಾಯಾರ್ಥವಾಗಿ ಲಕ್ಷ್ಮೇಶ್ವರ ನಿವಾಸಿಗಳಾದ ಜೈನ ಸಮಾಜದವರು ೧೦೧ ರೂಪಾಯಿಗಳನ್ನು ಅಯಾಚಿತವಾಗಿಯೂ ಅಶ್ಚೇರಿತವಾಗಿಯೂ ಧರ್ಮ ಬುದ್ಧಿಯಿಂದ ಅರ್ಪಿಸಿರುವ ವಿಷಯವು ಪ್ರಶಂಸನೀಯವಾಗಿದೆ.

ಓಂ ಧರ್ಮಾಧಿಷ್ಠಾತ್ರಿ,
ಲಕ್ಷ್ಮೇಶ್ವರ.

ಪಂಚಾಚಾರ್ಯಪ್ರಭಾ.

೧೯೪೦ ನೆಯ ಫೆಬ್ರವರಿ ಹಾ॥ ೭೬ನೆಯ ಸೋಮವಾರ

ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ.

ವೀರಶೈವಮಹಾಮತಾಬ್ಧ್ಯನ್ತರ್ಗತಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಪ್ರತಿಯೊಂದು ಯುಗದಲ್ಲಿಯೂ ಶರಣನಿನ ತಪಸ್ಸಿಯ ನಿಧಿಯಾದ ಶಿವಲಿಂಗಮುಖದಿಂದ ಅವತರಿಸಿ ಲೋಕೋದ್ಧಾರವನ್ನು ನಡಿಸಿರುವ ವಿಷಯವು, ಸ್ವಾಯಂಭುವಾಗಮ, ಪ್ರವೇಶಾಗಮ, ವೀರಾಗಮ, ಪಾಶುಪತಶಾಸ್ತ್ರಾದಿಗಳಲ್ಲಿಯೂ, ಆ ಮಹಾತ್ಮರ ವಿಷಯಕವಾಗಿರುವ ಪವಿತ್ರಚರಿತ್ರೆಗಳಲ್ಲಿಯೂ ಸ್ಪಷ್ಟ ಸೋಷವಾಗಿ ಪ್ರತಿಪಾದಿಸಲ್ಪಟ್ಟಿರುವ ವಿಷಯವು ಪ್ರತಿಯೊಬ್ಬರಿಗೂ ನೇಯ್ಯನ ತಿಳಿಯಾಗಿದೆ. ಇಂತಹ ಸುಪ್ರಸಿದ್ಧ ವಿಷಯವನ್ನು ಮಿಕ್ತಾಭಿಪ್ರಾಯಗಳಾದ ಕೆಲವು ಕೆಲಜನ ಬಸವಪಂಥಿಗಳು ಮತೆಮಾಚಿ ಅಪಲಾಪಿಸಿಸೊಡಿಗಿರುವುದು ಅಜ್ಞಾನಿಕರವಾದ ಅನೂಯಾಂದಿಂದ ಚಿಂತನವಾಗಿರುವ ಈ ಕಾಲದಲ್ಲಿ ಪ್ರಾಚೀನರು ಅವಾಚೀನರಾಗಿದ್ದಾರೆ, ಅವಾಚೀನರು ಪ್ರಾಚೀನರಾಗಿದ್ದಾರೆ ಪೂಜ್ಯರು ಅಪೂಜ್ಯರಾಗಿದ್ದಾರೆ, ಅಪೂಜ್ಯರು ಪೂಜ್ಯರಾಗಿದ್ದಾರೆ ಪಂಡಿತರು ಪಾಮರರಾಗಿದ್ದಾರೆ ಪಾಮರರು ಪಂಡಿತರಾಗಿದ್ದಾರ ಇಮ ಕಾಲಸ್ಯಹ ವನಾಮ ಹೇಳಬೇಕಾಗಿದೆ ಯಾಪ ಬಸವಪಂಥಿಗಳ ಈ ಆಕಾರ್ಯಭ್ರಾಂತಿಗವರ ವಿಷಯದಲ್ಲಿ ಮನಸ್ಸಿಗೆ ಬಂದಂತೆ ಬರೆಯುತ್ತಾರೆಯೋ ಆವರು ಈ ನೆಲಂದ ಪ್ರತಿಪಾದಿಸಿರುವ ವಿಷಯವನ್ನು ನಿರ್ಮಲಮನಸ್ಸಿನಿಂದ ಗ್ರಹಿಸಿ ಯಥಾರ್ಥ ವಿಷಯವನ್ನು ತಿಳಿದು ಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ

ವಿರಕ್ತವರ್ಗಕ್ಕೆಲ್ಲಾ ಪರಮಪೂಜ್ಯರೂ, ನುಪ್ರತಪಸ್ವಿಗಳೂ, ಜಗದ್ವಿಖ್ಯಾತರೂ ಆಗಿರೋಗಿರುವ ಅನಾದಿ ತೋಟದ ಸಿದ್ಧಲಿಂಗೇಶ್ವರರು ತಮ್ಮಿಂದ ನಿರಚಿತವಾಗಿರುವ ಸಿದ್ಧೇಶ್ವರನಚಸದಲ್ಲಿ—

"ಆದಿಯಲ್ಲಿ ಶಿವತತ್ತ್ವದಲ್ಲಿ ರೇಣುಕನು ದಯನಾಗಿದ್ದರೆ ಇಲ್ಲಿ ಶಿವಲಿಂಗದಲ್ಲಿ ಉದಯವಾದ ಸರಿಯೆಂಕೊ ! ಆ ಶಿವಲಿಂಗದಲ್ಲಿಯೇ ಹುಟ್ಟಿ ಶಿವಲಿಂಗದಲ್ಲಿಯೇ ಲಯವಾದ ರೇವಣಸಿದ್ಧೇಶ್ವರನು ಆನಾದಿಮುಕ್ತನಲ್ಲ ಆದಿಮುಕ್ತನೆಂದು ಆಡುವ ಅಜ್ಞಾನಿಗಳಿಗೆ ನಾಯಕನರಕ ತಪ್ಪದು"

ಎಂದು ಉಲ್ಲೇಖಿಸಿದ್ದಾರೆ ಈ ವಿಷಯವಾಧಾರ ವಚನದಿಂದ ಶ್ರೀರೇಣುಕಾಚಾರ್ಯರು ಪವಿತ್ರವೂ ಪೂಜ್ಯವೂ ಶೈವ ಎಶ್ವರಸ್ವಿಗಿಂತಲೂ ಪೂರ್ವಕಾಲಾವಚ್ಛೇದಕನು ಸ್ವಿನಿಂದ ವಿಚಾರನಾಡಿಕೊಳ್ಳಬೇಕೆ ವಿಸ್ತರ ಮೂಲ ಪುರುಷರೇ ಈರೀತಿಯಾಗಿ ಪೂರ್ವಾವರದಾದ ಪೂಜ್ಯ ಬುದ್ಧಿಯಿಂದ ಶ್ರೀರೇಣುಕಭೃಗ್ವಜ್ಯರನ್ನು ಕೊಂಡಾಡಿರುವಾಗ ಅವರ ಆನುಯಾಯಿಗಳು ಅದಕ್ಕೆ ವಿರುದ್ಧವಾಗಿ ವರ್ತಿಸುವುದು ಅಧರ್ಮವಲ್ಲವೇ ? ದ್ವೇಷಬುದ್ಧಿಯಿಂದ ಮೂಲಾಚಾರ್ಯರ ಮೇಲೆಯೇ ಕುರವನ್ನೆತ್ತಿದರೆ ಆ ಗುರುದ್ವೇಷಾನ್ನಿಯು ಈ ವಿಧವಾದ ಜಠರ ವಂಶವನ್ನು ಸುಟ್ಟು ಧ್ವಂಸಮಾಡಲಿಕ್ಕಿಲ್ಲವೇ ? ಇದೀಂದ ಪರಲೋಕದಲ್ಲಿ ಘೋರವಾದ ಶಿಕ್ಷೆಯನ್ನು ಅನುಭವಿಸಲಿಕ್ಕಿಲ್ಲವೇ ! ಹಿಂದಕ್ಕೆ ಗುರುದ್ವೇಷವನ್ನು ಕಟ್ಟಿಕೊಂಡ ವೀರಾಧಿವೀರರ ವಂಶವೂ ಬಹ್ಯರ್ಯವೂ ನಷ್ಟವಾಗಿ ಇಂದಿಗೂ ಅವರ ಸಂತತಿಯವರು ಬಳಲುತ್ತಿರುವುದನ್ನು ನೋಡಿ ಲ್ಲವೇ ? ಗುರುದ್ವೇಷಿಗಳು ಇವನ್ನೆಲ್ಲ ಪೂರ್ವಾಪರಾಲೋಚನೆ ಮಾಡಿ ನೋಡಿ ತಮ್ಮ ವಕ್ರಮಾರ್ಗದಿಂದ ದೂರರಾಗಿ ಗುರುಸಾರ್ವಭೌಮರ ಕೃಪೆಗೆ ಪಾತ್ರರಾಬೇಕು

ಈ ಗುರುದ್ವೇಷಿಗಳು ತಮ್ಮ ಅನೂಯೆಯ ಭರಾಟೆಯಲ್ಲಿ ಶ್ರೀರೇಣುಕಾಚಾರ್ಯರು ೧೦ನೆಯ ಶತಮಾನ ವೆಲ್ಲಿನ್ದರೆಂದು ಸಾಧಿಸಹೊರಿಗಿರುವರು ಇವರ ಇತಿಹಾಸ ಜ್ಞಾನವನ್ನೂ, ವಿಚಾರಶಕ್ತಿಯನ್ನೂ ನೋಡಿ ವಿಚಾರ ಶೀಲಿಗಳು ನಗುತ್ತಿರುವರು ಇವರ ಒರವಣಿಗೆಯಲ್ಲಿ ಕೇವಲ ಅಸೂಯೆಯು ವ್ಯಕ್ತವಾಗುತ್ತಿರುವದಲ್ಲದೆ ಪತ್ತಾನ ವಿಷಯವೂ ವ್ಯಕ್ತವಾಗುವುದಿಲ್ಲ ಈ ಅಸೂಯೆಯಂಧರು ೧೦ನೆಯ ಶತಮಾನ ವೆಂದು ಬರೆದ ಮಾತ್ರಕ್ಕೆ ಅವರು ಆ ಶತಮಾನದವರಾಗಿಬಿಡುವರೇ ? ಯಾವನಾದರೂ ಹುಚ್ಚನು ೫೦ ವರ್ಷದವನಿಗೆ ೫೦ ವರ್ಷದವನೆಂದು ನುಡಿದರೆ ಆವನು ೫೦ ವರ್ಷದವನಾಗಿ ಬಿಬ್ಬನೇ ? ಆಸ್ತು ! ಕ್ರೈಸ್ತರಕಲ್ಕಿಂತಲೂ ಪೂರ್ವ ನಾಲ್ಕು ಶತಮಾನಗಳ ಮೊದಲು ಜನ್ಮನೆತ್ತಿದ ಶ್ರೀ ಶಂಕರಾಚಾರ್ಯರಿಗೆ ಶ್ರೀ ಚಂದ್ರಸೌಳೀಶ್ವರಲಿಂಗನನ್ನು ಅನುಗಹಿಸಿದವರು ಶ್ರೀರೇಣುಕಾಚಾರ್ಯರಲ್ಲವೇ ? ಈ ವಿಷಯವು ಶೃಂಗೇರಿಸೀಮೆಯ ವಂಶಾವಳಿಯನ್ನು ಪ್ರತಿಪಾದಿಸುವ "ಗುರುವಂಶಕಾವ್ಯ" ದಲ್ಲಿಯೂ, ವೀರಶೈವ ಮತವ ಅನೇಕ ಗ್ರಂಥಗಳಲ್ಲಿಯೂ ಉಕ್ತವಾಗಿಲ್ಲವೇ ?

ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ಉಜ್ಜಯಿನೀ ಸಪ್ತಪ್ರಾಣನ್ನಾಳುತ್ತಿದ್ದ ವಿಕ್ರಮ ಮಹಾರಾಜನಿಗೆ ಬಿಚ್ಚನನ್ನು ಅನುಗ್ರಹಿಸಿದವರು ಶ್ರೀರೇಣುಕಾಚಾರ್ಯರಲ್ಲವೇ ?

ಲೇಕಕಸ್ಯಸಿದ್ಧರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತಶಿಖಾಮಣಿಯನ್ನು ಉಪದೇಶಿಸಿದವರು ಇದೇ ಆಚಾರ್ಯರಲ್ಲವೇ ? ಇವೇ ನೋದಲ ಪ್ರಾಚೀನಚರಿತ್ರೆಗಳನ್ನು ಈ ವಿಚಾರವಿದ್ವಾಂಸರು ಏಕೆ ಉದಾಹರಿಸುವುದಿಲ್ಲವೋ ತಿಳಿಯದಾಗಿದೆ

ಈಗ್ಗೆ ೨ ಸಾವಿರ ವರ್ಷಗಳ ಪೂರ್ವದಲ್ಲಿ ವಿರಚಿತವಾಗಿರುವ ಸಿದ್ಧಾಂತಶಿಖಾಮಣಿಯಲ್ಲಿ ಶ್ರೀರೇಣುಕಾಚಾರ್ಯರ ಸ್ತೋಮನಾಧಲಿಂಗೈಕ್ಯರು ಉಕ್ತವಾಗಿರುವ ದನ್ನು ನೋಡಿ ಶಾಂತರಾಗಿರುವುದು ಒಳತಲ್ಲವೇ ?

ಶ್ರೀ ಶ ೧೧ನೆಯ ಶತಮಾನದಲ್ಲಿದ್ದರೆಂದು ತಿಳಿಸಾಸನದೊಂದು ಸಿದ್ಧವಾಗಿರುವ ಶ್ರೀಪತಿಪಂಡಿತಾರಾಧ್ಯರು ತವಿಂದ ವಿರಚಿತವಾಗಿರುವ ಶ್ರೀಕರಭಾಷ್ಯದ ಆದಿಯಲ್ಲಿ—

ಶ್ರೀಮಚ್ಛೈವಾಚಾರವಿಚಾರದೀಕ್ಷಂ
ಸ್ವಶಿಷ್ಯಸತ್ಕೀರ್ತಿಜನಪೂರ್ಣಪಕ್ಷಂ ।
ದುರ್ವಾರಕಾಮಾದಿವಿದಾರದಕ್ಷಂ
ಭಜಾವ್ಯಹಂ ರೇವಣಕಲ್ಪವೃಕ್ಷಂ ॥

ಎಂದು ಶ್ರೀ ರೇಣುಕ ಗುರುಸಾರ್ವಭೌಮರನ್ನು ಸ್ತುತಿಸಿದ್ದಾರೆ ಈ ವಿಷಯವನ್ನಾದರೂ ಈ ಪುಣ್ಯಾತ್ಮರು ಕಣ್ಣಿರಿದು ನೋಡಬಾರದೇ ?

ಇಂತಹ ಸುಪ್ರಸಿದ್ಧ ಪ್ರಮಾಣಗಳಿದ್ದರೂ ಇವುಗಳ ಸ್ಪದಾಹರಿಸದೆ ಕೇವಲ ಅಸೂಯಾಪೂರಿತಲೇಖಗಳನ್ನು ಬರೆಯುವುದರಿಂದ ಇವರಿಗೆ ಯಾವ ಪ್ರಯೋಜನವು ದೊರೆಯುವುದೋ ತಿಳಿಯದಾಗಿದೆ.

ಸುನಾರು ಶ್ರೆ ೮ನೆಯ ಶತಮಾನದಲ್ಲಿ ರೇವಣಗಣನಾಥನ ಹೆಸರನ್ನಿಟ್ಟುಕೊಂಡಿದ್ದ "ರೇವಣಸಾಹ್ಯ" ನೆಂಬ ರಾಜನ ಹೆಸರು ಚಿತ್ರದುರ್ಗ ತಾಲೂಕು ಬೇವಿನ ಹಳ್ಳಿಗ್ರಾಮದ ಹನುಮಂತದೇವರ ಗುಡಿಯ ಪ್ರಾಕಾರ ದಲ್ಲಿರುವ ಒಂದು ಶಾಸನದಲ್ಲಿ ಉಕ್ತವಾಗಿದೆ. (ಚಿತ್ರದುರ್ಗ ತಾ॥ ಶಾಸನ ನೆಂಬರು 74) ಇದಕ್ಕಾಗಿ ದರೂ ಈ ಮಹಾಮೇಧಾವಿಗಳು ನೋಡಬಾರದೇ ? ಪೂರ್ವಾಪರ ಯಾವುದನ್ನೂ ವಿಮರ್ಶಿಸದೆ ಮನಸ್ಸಿಗೆಬಂದಂತೆ ಪ್ರಲಪಿಸುತ್ತಿರುವುದು ಸರ್ವಥಾ ಭೂಷಣವಲ್ಲ ! ದುರಾಗ್ರಹಿಗಳು ಇನ್ನು ಮುಂದೆಯಾದರೂ ತಮ್ಮ ವಕ್ರಮಾರ್ಗವನ್ನು ಬಿಡಬಹುದೆಂದು ನಂಬಿದ್ದೇವೆ. ಒಟ್ಟಿಗೆ ರೇಣುಕಗಣನಾಥನಕಾಲವನ್ನು ನಿರ್ಣಯಿಸುವುದು ಯಾರಿಗೂ ಸಾಧ್ಯವಾದುದಲ್ಲ. ಈ ಪ್ರಮಥಪುಂಗವನ ಕಾಲಪ್ರಣಾಯ ಮಾಡಲು ಪ್ರಯತ್ನಿಸುವುದೂ, ಸಮುದ್ರದ ಮಳಲನ್ನು ಎಣಿಕೆಮಾಡಲು ಪ್ರಯತ್ನಿಸುವುದೂ ಎರಡೂ ಒಂದೇ ಮಾಲಿಕೆಯ ವಣಿಗಳಂತಿರುವುದರಿಂದ ಇಂತಹ ಅಸಾಧ್ಯವಾದ ಕಾರ್ಯದಲ್ಲಿ ಪ್ರವೇಶಿಸದಿರುವುದು ಬುದ್ಧಿವಂತರ ಲಕ್ಷಣವೆಂದು ಭಾವಿಸುತ್ತೇವೆ

ಯುದ್ಧವಾರ್ತೆ.

ಜರ್ಮನರು ಮುಂದೆನುಗ್ಗಲು ಪ್ರಯತ್ನಿಸಿದರು !

ಸಾರ್ ಪ್ರದೇಶದ ಪಶ್ಚಿಮದಲ್ಲಿ ಜರ್ಮನ್ ಸೈನ್ಯವು ಫ್ರೆಂಚ್ ಸೈನ್ಯದ ಮೇಲೆ ಬೀಳಲು ಪ್ರಯತ್ನಿಸಿತೆಂದೂ, ಆದರೆ ಅದರ ಪ್ರಯತ್ನವು ವಿಫಲಗೊಳಿಸಲ್ಪಟ್ಟಿತೆಂದೂ ತಿಳಿದುಬರುತ್ತದೆ

ಫಿರ್‌ಲೆಂಡಿಗೆ ಸಹಾಯಮಾಡಹೊರಟರು

ಫಿರ್‌ಲೆಂಡಿಗೆ ಸಹಾಯ ಮಾಡುವದಾದರೆ ತಾಟಸ್ಥ್ಯನೀತಿಯನ್ನು ಮುರಿದಂತೆ ಪರಿಗಣಿಸಿ ಸುವದೆಂದು ಜರ್ಮನಿಯು ನಾರ್ವೆ ಸ್ವೀಡನ್ನುಗಳಿಗೆ ಎಚ್ಚರಿಕೆ ಕೊಟ್ಟಿರೆಯೆಂದು ತಿಳಿದುಬಂದಿದೆ ಸೈನ್ಯಸಹಾಯವನ್ನು ಕೊಡಬೇಕೆಂದು ಫಿರ್‌ಲೆಂಡು ಮಾಡಿಕೊಂಡ ಪ್ರಾರ್ಥನೆಯನ್ನು ಸ್ವೀಡನ್ನು ಈ ಕಾರಣದಿಂದಲೇ ನಿರಾಕರಿಸಿರಬಹುದೆಂದು ತೋರುತ್ತದೆ

ಬ್ರಿಟಿಷ್ ಯುದ್ಧನೌಕೆ ಮುಳುಗಿತು

ಬ್ರಿಟಿಷರ "ಡೇರಿಂಗ್" ಎಂಬ ವಿಧ್ವಂಸಯುದ್ಧನೌಕೆಯನ್ನು ಜರ್ಮನರು ಮುಳುಗಿಸಿದರು ಈ ನೌಕೆಯನ್ನು 1932 ರಲ್ಲಿ ತಯಾರಿಸಿದ್ದರು ಅವರ ಕಮ್ಯಾಂಡರಾದ ಎಸ್ ಎ ಕಾರ್‌ರವರೂ, 3 ಜನಅಧಿಕಾರಿಗಳೂ 148 ಜನ ನಾವಿಕರೂ ಮೃತರಾದರು

ಪೋಲೆಂಡಿನವರ ದುರ್ದೈವ

ಜರ್ಮನಿಯು ಆಕ್ರಮಿಸಿರುವ ಪೋಲೆಂಡಿನ ಭಾಗದಲ್ಲಿ ನೆಲೆಸಿರುವ 30-40 ಸಾವಿರ ಉಕ್ರೇನಿಯನ್ನರನ್ನು ರಷ್ಯಕ್ಕೆ ವರ್ಗಾಯಿಸುವರೆಂದೂ, ರಷ್ಯವು ಆಕ್ರಮಿಸಿರುವ ಪೋಲೆಂಡ್ ಭಾಗಕ್ಕೆ ಓಡಿಹೋಗಿರುವ 60 ಸಾವಿರಪೋಲರನ್ನು ಜರ್ಮನಿಯು ಆಕ್ರಮಿಸಿರುವ ಭಾಗಕ್ಕೆ ವರ್ಗಾಯಿಸುವರೆಂದೂ ಗೊತ್ತಾಗುತ್ತದೆ. ಇದರಿಂದ ಪೋಲೆಂಡು ಪ್ರಜೆಗಳು ತಲ್ಲಣಿಸಿಹೋಗಿದ್ದಾರೆ

ಒಂದು ವಾರದಲ್ಲಿ ಯುದ್ಧ ದೇವಿಗೆ 4500 ರಷ್ಯರು ಬಲಿಯಾದರು

ಕರೇಲಿಯಾಇಸ್ತಮುಸ್‌ನಲ್ಲಿ ರಷ್ಯಾ ಸೈನಿಕರು ಮುಖ್ಯ ಫೈಲ್ಡ್ ಮಾರ್ಗದಲ್ಲಿ ಮುಂದುವರಿಯುತ್ತಿದ್ದಾರೆ ಅವರು ವೀಪುರಿಗೆ 18 ಮೈಲು ದೂರದಲ್ಲಿದ್ದಾರೆ. ಈ ಪ್ರದೇಶದಲ್ಲಿ ರಷ್ಯನರು ಹೊಡೆದಾಟವಾರಂಭಿಸಿದಂದಿನಿಂದ ಇಲ್ಲಿಯವರೆಗೆ 10 ಪೈಲಿಗಳವರೆಗೆ ನುಂದೆ ನುಗ್ಗಿದ್ದಾರೆ ಆದರೆ ಇದಕ್ಕಾಗಿ ವಿಶೇಷ ಪ್ರಾಣಹಾನಿಯಾಯಿತು. ಸಂಗ್ರಾಮ ಸಾಮಗ್ರಿಗಳು ಕೈವಶವಾಗಿಹೋದವು. ಈಗ ಕರೇಲಿಯಾಇಸ್ತಮುಸ್‌ನ ಆಕ್ರಮಣದಲ್ಲೂ ಹೊಡೆದಾಟಗಳಾಗುತ್ತಿವೆ. ಪೂರ್ವದಲ್ಲಿ ಫೈಲೊಲ್ ಹತ್ತರ ರಷ್ಯನರಿಗೆ ಸ್ವಲ್ಪವೂ ಜಯವಾಗಲಿಲ್ಲ. ಕಳೆದ ಒಂದು ವಾರದಲ್ಲಿ 4500 ರಷ್ಯಾ ಸೈನಿಕರು ಸತ್ತರೆಂದು ಪ್ರಕಟವಾಗಿದೆ.

ಜರ್ಮನ್ ವಿಮಾನಗಳ ನಾಶ

ಕಳೆದ 19 ನೆಯ ತಾರೀಖಿನದಿನ ಸ್ಕಾಟ್ಲೆಂಡಿನ ಈಶಾನ್ಯತೀರದಾಚೆ ಅನೇಕ ಬ್ರಿಟಿಶರುಗಳಮೇಲೆ ಜರ್ಮನ್ ವಿಮಾನಗಳು ನುಚ್ಚಿಗೆ ನಡೆಸಿದವು. ಬ್ರಿಟಿಷ್‌ವಿಮಾನಗಳು ಬಂದಕೂಡಲೆ ಓಡಿಹೋದವು. 22ನೇ ತಾರೀಖಿನ ದಿನವು ಉತ್ತರತೀರದಲ್ಲಿ ಮೂರು ಜರ್ಮನ್‌ವಿಮಾನಗಳನ್ನು ಬ್ರಿಟಿಷ್ ವಿಮಾನಗಳು ನಾಶಮಾಡಿದವು.

ಅಲ್ಮ್ಯಮಾರ್ಕ್‌ನೌಕೆಯು ನಾರ್ವೆಯ ಅಧೀನದಲ್ಲಿದೆ

ಬ್ರಿಟಿಷ್ ನಾವಿಕರನ್ನು 'ಬಂಧನದಲ್ಲಿಟ್ಟಿದ್ದ ಜರ್ಮನರ ಅಲ್ಮ್ಯಮಾರ್ಕ್‌ನೌಕೆಯು ಈಗ ನಾರ್ವೆ ಸರ್ಕಾರದ ಅಧೀನದಲ್ಲಿದೆ. ಬ್ರಿಟಿಷ್‌ನೌಕೆಗಳೊಡನೆ ನಡೆಯಿಸಿದ ಹೊಡೆದಾಟದ ಪರಿಣಾಮವಾಗಿ ಅದರ ಯಂತ್ರಗಳಿಗೆ ತೊಂಭ ನಷ್ಟ ಸಂಭವಿಸಿರುವದೆಂದು ತಿಳಿದುಬರುತ್ತದೆ

ಜರ್ಮನರ ಪ್ರಕಟಣೆ

ಅರ್ಧರಾತ್ರಿಯಮೇಲೆ ಹಲವು ಶತ್ರುವಿಮಾನಗಳು ತೆಲಿಗೊಲ್ಯಾಂಡ್ ಕಡೆಗೆ ನುಗ್ಗಿಬಂದವೆಂದೂ, ಅವು ಫ್ರಾಲೆಂಡಿನ ತಾಟಿನ್ಯತೀರವನ್ನು ಮುರಿದು ಪಶ್ಚಿಮ ಮತ್ತು ವಾಯುವ್ಯದಿಕ್ಕುಗಳಕಡೆ ನುಗ್ಗಿದವೆಂದೂ ಜರ್ಮನಿಯ ಒಂದು "ಯು ಬೋಟು" ಒಟ್ಟು 27000 ಟನ್ ತೂಕದ ಹಡಗುಗಳನ್ನು ಮುಳುಗಿಸಿ ಬಂದರಿಗೆ ಹಿಂತಿರುಗಿತೆಂದೂ ಜರ್ಮನರು ಪ್ರಕಟಿಸಿರುತ್ತಾರೆ ಆದರೆ ಈ ಪ್ರಕಟನೆಯನ್ನು ನಂಬಲು ಸಾಧ್ಯವಿಲ್ಲವೆಂದು ಬ್ರಿಟಿಷರು ಹೇಳುತ್ತಾರೆ.

ಫಿನ್‌ಲೆಂಡಿಗೆ ರಷ್ಯನರು ಹಾಕಿದ್ದ ಹರತ್ತುಗಳು

ಲಂಡನ್ನಿನಲ್ಲಿರುವ ಫಿನ್ನಿಷ್ ಸಚಿವರು ಸಂತೋಷ ಕೂಟವೊಂದರಲ್ಲಿ ಮಾತನಾಡುತ್ತ, " ಯು.ಎಸ್.ಆರ್.ಭಯಕ್ಕೆ ಮುಂಚೆ ರಷ್ಯನರು ಹಾಕಿದ್ದ ದೊಡ್ಡ ದೊಡ್ಡ ಹುತ್ತುಗಳಿಗೆಲ್ಲಾ ಫಿನ್‌ಲೆಂಡು ಒಪ್ಪಿಕೊಂಡಿತು ಆದರೆ ರಷ್ಯರು ಫಿನ್‌ಲೆಂಡಿನ ಮುಖ್ಯ ರಕ್ಷಣಾಕೋಟೆಯಾದ 'ಮ್ಯಾನರ್‌ಹೀಂ ಲೈನ್' ನ್ನು ಒಡೆಯಬೇಕೆಂದೂ, ಫಿನ್‌ಲೆಂಡಿನ ಮುಖ್ಯಬಂದರವನ್ನು ಬಿಟ್ಟುಕೊಡಬೇಕೆಂದೂ, ಎರಡು ನೌಕಾಮೂಲಗಳನ್ನೂ ಬಿಟ್ಟುಕೊಟ್ಟು ಫಿನ್‌ಲೆಂಡಿನಲ್ಲಿ ತಮ್ಮ ಸೈನ್ಯವಿಡಲು ಅವಕಾಶಕೊಡಬೇಕೆಂದೂ ಕೇಳಿದ್ದಂದ ಯುದ್ಧವು ಪ್ರಾರಂಭವಾಯಿತು

ಜರ್ಮನರ ವ್ಯಾಪಾರನೌಕೆಯೊಂದು ಪ್ರೆಜಿಲ್ಲಿನಿಂದ ಹೊರಹಲಿದೆ

14000 ಟನ್ ತೂಕದ ಒಂದು ಜರ್ಮನ್ ನೌಕೆಯು ಸುಮಾರು 10 ಲಕ್ಷ ಡಾಲರುಗಳ ಬೆಲೆಯ ಸಾಮಾನುಗಳನ್ನು ತುಂಬಿಕೊಂಡು ಬಾಹಿಯಾ ಎಂಬಲ್ಲಿಂದ ಹೊರಡಲು ಸಿದ್ಧವಾಗಿದೆಯೆಂದು "ಫ್ಯಾಯರ್‌ಪ್ಲೈಸ್" ಪತ್ರಿಕೆಯು ತಿಳಿಸಿರುತ್ತದೆ. ಈ ಹಡಗುಗಳನ್ನು ಶತ್ರುಗಳು ಹಿಡಿಯಲು ತವಕಾಶಕೊಡುವದಿಲ್ಲವೆಂದು ಅದರ ಕ್ಯಾಪ್ಟನ್ನರು ತಿಳಿಸಿರುವರಂತೆ!

ಸ್ವೀಡಿಷ್ ಹಳ್ಳಿಯಮೇಲೆ ಬಾಂಬು

ಫಿನ್‌ಲೆಂಡಿನ ಗಡಿಯಿಂದ ೬ ಮೈಲಿ ದೂರದಲ್ಲಿರುವ ಒಂದು ಹಳ್ಳಿಯ ಮೇಲೆ ರಷ್ಯವಿಮಾನಗಳು ಮುತ್ತಿಗೆ ಹಾಕಿದುದರಿಂದ ನಾಲ್ಕು ಭವನಗಳು ಭಸ್ಮವಾದವು 7 ವಿಮಾನಗಳು ಅಗ್ನಿವರ್ಷಗಳ ಬಾಂಬುಗಳನ್ನೆಸೆದುದರಿಂದ ೪ ಹಳ್ಳಿಯ ಮುಖ್ಯ ಬೀದಿಯು ಸಂಪೂರ್ಣ ನಾಶವಾಯಿತು. ಜನರಾರಿಗೂ ವಿಶೇಷ ಅಪಾಯವಾಗಿಲ್ಲ ಇದಕ್ಕಾಗಿ ಸ್ವೀಡಿಷ್ ಸರ್ಕಾರದವರು ರಷ್ಯಾ ಸರ್ಕಾರಕ್ಕೆ ಬಿಗ್ಗಸ್ತ್ರತಿಭಟನೆಯನ್ನು ಕಳುಹಿಸಿದ್ದಾರೆ.

ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನಿಯ ಯುದ್ಧ ನೌಕೆ

ಈಗ ಕೆಲವುದಿನಗಳ ಹಿಂದೆ ಅಟ್ಲಾಂಟಿಕ್ ಸಾಗರದಲ್ಲಿ ವ್ಯಾಪಾರಿ ಹಡಗುಗಳನ್ನು ನಾಶಮಾಡುತ್ತ ತಿರುಗುತ್ತಿದ್ದ ಜರ್ಮನರ ಧಾರಿ ಯುದ್ಧನೌಕೆಯಾದ ಗಾಫ್‌ಸ್ಪಿಯು ಶತ್ರು ಬ್ರಿಟಿಷ್ ಹಡಗುಗಳು ತಡೆದು ನಾಶವಾಗದಂತೆ ಮಾಡಿದವಷ್ಟೆ! ಅದರ ಸೇವೆಯನ್ನು ತೀರಿಸಿಕೊಳ್ಳಲು ಜರ್ಮನರು ಈಗ ಇನ್ನೊಂದುಧಾರಿ ನೌಕೆಯನ್ನು ಅಟ್ಲಾಂಟಿಕ್ ಸಾಗರಕ್ಕೆ ಕಳುಹಿಸಿರುವರಂತೆ! ಅದು ಅಟ್ಲಾಂಟಿಕ್ ಸಾಗರದಲ್ಲಿ ತಿರುಗುತ್ತ ವ್ಯಾಪಾರಿ ನೌಕೆಗಳಮೇಲೆ ಬೀಳಲು ಕಾದಿದೆ ಎಂದು ಕೆಲವು ಪತ್ರಿಕೆಗಳು ಪ್ರಕಟಿಸಿವೆ

ಫಿನ್‌ಲೆಂಡಿನಲ್ಲಿ ರಷ್ಯಸೈನ್ಯದ ನಾಶ!

ರಷ್ಯದ 18 ನೆಯ ಸೈನ್ಯಪಡೆಯು ಲಡೋಗಾ ಸರೋವರಕ್ಕೆ ಈಶಾನ್ಯದಲ್ಲಿ, ಸಂಪೂರ್ಣವಾಗಿ ನಾಶಮಾಡಲ್ಪಟ್ಟಿತೆಂದು ಫಿನ್‌ಲೆಂಡ್ ಸರ್ಕಾರವು ಪ್ರಕಟಿಸಿದೆ ಅದರಲ್ಲಿ 18400 ಮಂದಿ ಸೈನಿಕರು ಹೆಕರಾದರೆಂದು ತಿಳಿದುಬಂದುದಕ್ಕೆ ಫಿನ್‌ಲೆಂಡಿನ ವಿಮಾನಗಳು ಶತ್ರು ಸೈನ್ಯದ ಹಿಂಭಾಗದಮೇಲೆ ಪರೀಕ್ಷಾರ್ಥವಾಗಿ ಹಾರಿಂಡಿ ಬಾಂಬುಗಳನ್ನು ಹಾಕಿದವು ಎರಡುಮೂರು ಕಡೆ ಶತ್ರು ವಿಮಾನಗಳೊಡನೆ ಹೋರಾಟನಡೆಸಿ ಜಯವನ್ನು ಪಡೆದವು ರಣಪ್ರದೇಶದಲ್ಲೂ ಒಳಪ್ರದೇಶದಲ್ಲೂ ರಷ್ಯರ ಚಟುವಟಿಕೆಯು ಹೆಚ್ಚಾಗಿದೆ

ರಷ್ಯಾಸೈನ್ಯದ ದಿಗ್ಬಂಧನ

ಲಡೋಗಸರೋವರದ ಈಶಾನ್ಯದಲ್ಲಿ ಇನ್ನೊಂದು ರಷ್ಯಾಸೈನ್ಯಪಡೆಗೆ ರಷ್ಯದಕಡೆಯಿಂದ ಯಾವಸಂಬಂಧವೂ ಇರದಂತೆ ಫಿನ್ನಿಷರು ಬೇರ್ಪಡಿಸಿದ್ದಾರೆ ಅಸಹಾಯವಾದ ಈ ಪಡೆಗೆ ರಷ್ಯಾವಿಮಾನಗಳು ಅಂತರಿಕ್ಷದಿಂದ ಆಹಾರ ಮತ್ತು ಯುದ್ಧಸಾಮಗ್ರಿಗಳನ್ನು ಕಂದುಹಾಕುತ್ತಲಿವೆ ಈ ಪ್ರದೇಶದಲ್ಲಿರುವ ಇತರ ರಷ್ಯಪಡೆಗಳು ಕಷ್ಟನಷ್ಟಗಳಿಂದ ಹೆಣ್ಣಾಗಿವೆ ರಷ್ಯದ ದೊಡ್ಡ ಅಧಿಕಾರಿಯೊಬ್ಬನು ಅವನ ಕಡೆಯವರು ಸೆರೆಸಿಕ್ಕಿದ್ದಾರೆ ನಾತವಾದ 18ನೆಯ ರಷ್ಯಪಡೆಯ ಮುಖ್ಯಾಧಿಪತಿಯು ಫಿನ್ನಿಷರ ಹಸ್ತಗತವಾಗಿದೆ ಫಿನ್ನಿಷರ ದಂಡನಾಯಕರಾದ ಮಾರ್ಷಲ್‌ಮ್ಯಾನರ್‌ಹೀಂರವರು ರಷ್ಯಸೈನ್ಯಕ್ಕೆ ವಿಶೇಷ ಮೇಲೆ ವಿಶೇಷ ಎಚ್ಚರಿಕೆಯನ್ನು ಕೊಡುತ್ತಿದ್ದಾರೆ

ಫಿನ್‌ಲೆಂಡಿಗೆ ಸಹಾಯ

ಫಿನ್‌ಲೆಂಡಿನ ಸರ್ಕಾರದವರಿಗೆ ಯುದ್ಧೋಪಕರಣಗಳನ್ನೊದಗಿಸಿಕೊಡಲು ಬ್ರಿಟಿಷ್ ಸರ್ಕಾರದವರು ಇನ್ನೂ ವಿಶ್ವಾಸಗಳನ್ನು ಮಾಡುತ್ತಲಿದ್ದಾರೆ. ಈಗಾಗಲೇ ಅನೇಕವಾಗಿ ಸಹಾಯವನ್ನು ಒದಗಿಸಿರುತ್ತಾರೆ ವಿಮಾನಗಳನ್ನೂ ಸಹ ಕಳುಹಿಸಿಕೊಟ್ಟಿರುತ್ತಾರೆ

ಹಾಲೆಂಡಿನ ರೆಡ್-ಕ್ರಾಸ್ ಸಂಸ್ಥೆಯವರು, ಲಡೋಗ ಸರೋವರದ ಉತ್ತರದಿಗ್ಭಾಗದಲ್ಲಿರುವ ಫಿನ್‌ಲೆಂಡಿನ ಸೈನ್ಯ ಸಹಾಯಾರ್ಥವಾಗಿ ಮೂವರು ಶಸ್ತ್ರವೈದ್ಯರನ್ನೂ, ನಾಲ್ಕು ಮಂದಿ ಇತರ ವೈದ್ಯರನ್ನೂ 20 ಮಂದಿ ನರ್ಸ್‌ಗಳನ್ನೂ ಕಳುಹಿಸಿಕೊಡಲು ನಿಶ್ಚೈಸಿರುತ್ತಾರೆ

ನೋರ್ವೆಯು ಸ್ವಯಂ ಸೈನಿಕರ ಮತ್ತೊಂದು ತಂಡವು ಫಿನ್‌ಲೆಂಡಿನ ಸಹಾಯಾರ್ಥವಾಗಿ ಆ ದೇಶಕ್ಕೆ ಹೊರಟಿದೆ.

ಬ್ರಿಟಿಷ್ ಹಡಗುಗಳ ರಕ್ಷಣೋಪಯತ್ನ

ಬ್ರಿಟನ್ನಿನಿಂದ ಹೊರಹೊಮ್ಮುವ ಎಲ್ಲ ಬ್ರಿಟಿಷ್ ವ್ಯಾಪಾರ ಹಡಗುಗಳಲ್ಲಿಯೂ ಜರ್ಮನ್ ವಿಮಾನಗಳ ಗುಂಡಿನೇಟು ತಾಗಿಬರದಂತೆ ನೌಕೆಗಳಿಗೆ ತಗಲುವಂತೆ ಮಾಡಬೇಕೆಂದು ಬ್ರಿಟಿಷ್ ನೌಕಾಧಿಕಾರಿಗಳು ಆಜ್ಞೆಮಾಡಿದ್ದಾರೆ. ಉತ್ತರಸಾಗರದಲ್ಲಿ ಓಡಾಡುವ ಬ್ರಿಟಿಷ್ ಹಡಗುಗಳಲ್ಲಾ, ತಕ್ಕ ಶಸ್ತ್ರಾಸ್ತ್ರಗಳನ್ನಿಡಬೇಕೆಂದು ಬ್ರಿಟಿಷರು ಮಾಡಿರುವ ನಿರ್ಧಾರವು ಸರ್ವಮೆರ್ಚಿಂಟ್ ಯುದ್ಧದ ವಿಚಾರವಾಗಿ ಲಂಡನ್ನಿನಲ್ಲಾಗಿದ್ದ ಒಪ್ಪಂದಕ್ಕೆ ವಿರುದ್ಧವಾಗಿರುವದರಿಂದ ಪತ್ರಿಕೆಗಳು ಜರ್ಮನಿಯ ನೌಕೆಗಳ ವಿಚಾರದಲ್ಲಿ ಜರ್ಮನಿಯು ತೋರಿಸಬೇಕಾದ ವರ್ತನೆಯನ್ನು ಇನ್ನು ಮುಂದೆ ಯಾವ ಒಪ್ಪಂದವೂ ಬಂಧಿಸುವದಿಲ್ಲವೆಂದು ಜರ್ಮನಿಯು ವರ್ತಮಾನಸಂಸ್ಥೆಯು ತಿಳಿಸಿಸಿರುತ್ತದೆ ಜರ್ಮನ್ ಸರ್ಕಾರವು ಶಸ್ತ್ರಯುಕ್ತವಾದ ಬ್ರಿಟನ್ನಿನ ವ್ಯಾಪಾರನೌಕೆಗಳನ್ನೆಲ್ಲಾ ಮುಳುಗಿಸಬೇಕೆಂದು ತಮ್ಮ " ಯು ಬೋಟ್ " ಕಮ್ಮಾಂಡರುಗಳಿಗೆಲ್ಲಾ ಆಜ್ಞೆಮಾಡಿದೆ

ಜರ್ಮನ್ ನೌಕೆಯಲ್ಲಿ ಬಂಧಿಸಲ್ಪಟ್ಟಿ ಬ್ರಿಟಿಷರ ಬಿಡುಗಡೆ

"ಅಲ್ಮ್ಯಮಾರ್ಕ್' ಎಂಬ ಜರ್ಮನಿಯ ಹಡಗಿನಲ್ಲಿ ಬಂಧಿತರಾಗಿ ಹಿಂಸೆಗೊಳಗಾಗಿದ್ದ 400 ಜನ ಬ್ರಿಟಿಷ್ ವ್ಯಾಪಾರಿ ಹಡಗುಗಳ ನಾವಿಕರನ್ನು ಬ್ರಿಟಿಷ್ ಡಿಸ್ಟ್ರಾಯರ್ ನೌಕೆಗಳು ಬಂಧನದಿಂದ ತಪ್ಪಿಸಿ ರಕ್ಷಿಸಿವೆ. ಉತ್ತರ ಸಮುದ್ರದ ನಾರ್ವೇತೀರದಿಂದಾಚೆ ಅಲ್ಮ್ಯಮಾರ್ಕ್ ಎಂಬ ಜರ್ಮನಿಯ ಹಡಗವನ್ನು ಬ್ರಿಟಿಷ್ ಡಿಸ್ಟ್ರಾಯರುಗಳು ಕಡೆಯ ನಿಲ್ದಿಸಿದವು ಜರ್ಮನರು ಪ್ರತಿಭಟಿಸಿದರು ಬ್ರಿಟಿಷ್ ಡಿಸ್ಟ್ರಾಯರ್ 'ಕೊಸ್ಯಾಕ್' ಎಂಬುದು ಜರ್ಮನಿ ಹಡಗನ್ನು ಸೋಲಿಸಿತು ಬ್ರಿಟಿಷರು ಜರ್ಮನಿಯ ಹಡಗಿನ ಮೇಲೇರಿ ಬಂದಿಗಳನ್ನೆಲ್ಲಾ ಬಿಡುಗಡೆಮಾಡಿ, ಬ್ರಿಟಿಷ್ ಹಡಗಿಗೆ ಕಳುಹಿಸಿದರು. ಜರ್ಮನರು ಬಂದಿಗಳಿಗೆ ದಿಪಕ್ಕೆ ಒಂದೆರಡು ಲೋಟಾ ನೀರು ಮಾತ್ರ ಕೊಡತ್ತಿದ್ದರಂತೆ! ಆಹಾರವಂತೂ ಇಲ್ಲವೇಇಲ್ಲ ಎಲ್ಲರನ್ನೂ ಕುರಿಗಳನ್ನು ತುಂಬಿದಂತೆ ತುಂಬಿ ಚಿತ್ರಹಿಂಸೆ ಕೊಡುತ್ತಿದ್ದರಂತೆ! ಬಂದಿಗಳೆಲ್ಲರೂ ಸ್ಕಾಟ್ಲೆಂಡ್ ಬಂದರಿಗೆ ಬಂದಿಳಿದರು ಅವರಲ್ಲಿ ೫೫ ಜನ ಅಧಿಕಾರಿಗಳೂ 280 ಜನ ನಾವಿಕರೂ ಇದ್ದಾರೆ. ಈ ಜರ್ಮನಿಯ ಹಡಗು ನಾತವಾದ 'ಗ್ರಾಫ್‌ಸ್ಪಿ' ನೌಕೆಗೆ ಸಾಮಾನುಗಳನ್ನು ಒದಗಿಸುತ್ತಿತ್ತೆಂದೂ, ಗ್ರಾಫ್‌ಸ್ಪಿಯು ಸೆರೆಹಿಡಿಸಲಾರದ್ದೆಲ್ಲಾ ತಾನೆ. ಸೆರೆಯಲ್ಲಿ ಬ್ಬಿತ್ತೆಂದೂ ತಿಳಿದು ಬರುತ್ತದೆ

ಸ್ವೀಕಾರ.

ಬೆಳಗಾವ ತಾ|| ಶಹಪುರದಲ್ಲಿರುವ ಮಂ|| ರಾ|| ಅಂಕಲಗಿ ವೀರಪ್ಪನವರು ಜಗದ್ಗುರುಹದಿಂದ ತಮ್ಮ ತಾತ್ಪಾರ್ಥವು ನೆರವೇರಿದ ಸಂತೋಷಕ್ಕಾಗಿ ಪ್ರಭಾ ಪೋಷಣಕ್ಕೆಯ್ದಸ್ಸರ ಸಮರ್ಪಿಸಿದ ೫ ರೂ ಯು ವೀ|| ಹಿರೇಮಠದ ಗುರುಲಿಂಗಯ್ಯನವರ ದ್ವಾರಾ ಕಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಾಯೆಂದು ಹಾರೈಸುತ್ತೇನೆ

ನಮ್ಮ ಸಂಸ್ಥಾನದ ಮಹಾಜನರು ಯುದ್ಧ ಪರಿಹಾರ ನಿಧಿಗೆ ಯಥಾಶಕ್ತಿ ಧನಸಹಾಯ ಮಾಡಬೇಕೆಂದು ಪ್ರಾರ್ಥಿಸುವ ಉದ್ದೇಶದಿಂದ ಕಳೆದ ಶಾ|| 17 ನೇ ಶನಿವಾರ ಬೆಂಗಳೂರು ನಗರದ ಸರ್ ಪುಟ್ಟಣ್ಣಶೆಟ್ಟಿಯವರ ಪುರಭವನದಲ್ಲಿ ಮಹಾಜನರ ಸಭೆಯೊಂದು ನಡೆಯಿತು. ರಾಜಮಾತೆ ಶ್ರೀ ಜಯಚಾಮರಾಜ ಒಡೆಯರವರು ಅಗ್ರಸೀಟವನ್ನಲಂಕರಿಸಿದ್ದರು ನಮ್ಮ ಶ್ರೀಮನ್ಮಹಾರಾಜರವರು ವೈಸರಾಯರವರ ಯುದ್ಧ ಕಾರ್ಯಗಳ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನೂ, ಸೆಂಟ್ ಜಾನ್ ಅಂಬುಲೆನ್ಸ್ ನಿಧಿಗೆ 2,500 ರೂಪಾಯಿಗಳನ್ನೂ ದಯ ಪಾಲಿಸಿರುತ್ತಾರೆಂದು ತಿಳಿಯುತ್ತದೆ.

॥ ಓಂ ನಮೋ ಭಗವತೇ ಜಗನ್ಮರು ರೇಣುಕಾಚಾರ್ಯಾಯ ॥



ಜೇ[illegible]

ಯ [illegible]

ಶ್ರೀ ಸದ್ಗುರುಭ್ಯೋನ್ನಮಃ

ಸ್ವಸ್ತಿ ಶ್ರೀ ನಿಸ್ಸೀಮಾವಾಪ್ತನಿಷ್ಕಳಂಕ ಸಿಂಹಾಸನಾಧಿಪತಿಗಳಿಂದ ಪ್ರವರ್ತಿಸಲ್ಪಡುತ್ತಿರುವ ಸತ್ಪ್ರ ಸನ್ನ ಗುರುಪರಂಪರಾಗತ ಸಕಲ ಸಿದ್ಧಾಂತ ಸಂಸ್ಥಾಪನಾಚಾರ್ಯ ಸಮಸ್ತ ಸಂಸ್ಥಾನ ಸಿಂಹಾಸನಾಧಿಪತಿ ಸಕಲ ಸಿದ್ಧಾಂತ ಸಂಸ್ಥಾಪನಾಚಾರ್ಯ ಸಮಸ್ತ ಸಂಸ್ಥಾನ ರತ್ನಪೀಠ ವೀರಸಿಂಹಾಸನ ಮೂಲ ಪೀಠಾಧಿಷ್ಠಿತರಾಗಿ ಸಮಸ್ತ ಲೋಕಾನುಗ್ರಹಾರ್ಥವಾಗಿ ಜಗದ್ಗುರು ಬಂದಿರುವ ಶ್ರೀ ಮಹಾ ರೇಣುಕಾಚಾರ್ಯರವರು

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಪುಣ್ಯ ಸಾನಿಧ್ಯರು ಶಿಷ್ಯರ ಮನೆಗಳಲ್ಲಿದ್ದು, ಆ ಪುಣ್ಯಾಧಿಕಾರಿಗಳು ಏಮುವರ್ಷಕ್ಕೋ ಹತ್ತು ವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಆಗಬೇಕಾದುದನ್ನು ತೆಗೆದುಕೊಂಡು ಬರುತ್ತಿರುವರು ಅವರಿಗೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಗಕ್ಷೇಮ ವಿಚಾರಗಳನ್ನು ಬರೆದುಕೊಳ್ಳದೆ ಜ್ಞಾಪಕದಿಂದ ಮಾತ್ರ ತೆಗೆದುಕೊಂಡು ಹೋಗಿದಾಗುವರು ಈ ಅವ್ಯವಸ್ಥೆಯಿಂದ ಅನೇಕ ಮಂದಿಯವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ದೂರವಾಗುವುದಕ್ಕೋಸ್ಕರ ಶಿಷ್ಯರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಜ್ಞಾಪಿಗೆ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವಶ್ಯಕ್ಕನುಸರಿಸಿ ವಿವರವನ್ನೆಲ್ಲಾ ಬರೆದು ಪಂಕಜಾರುಹಪ್ರತಿಯಾಗಿ ಬಂದ ತಮ್ಮ ಶಿಷ್ಯರನ್ನು ಇಟ್ಟುಕೊಳ್ಳಬೇಕು ಇಷ್ಟಾಗಿ ಎಂದೂ ಕೆಡದಂಥ ಜ್ಞಾಪಕಗಳನ್ನು ಪಡೆದಂತಾಗುವುದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಯದಲ್ಲಿ ದೊರೆಯುವವು

ಔಷಧಿ ಹೆಸರು	ತೂಕ	ಕ್ರಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ಸ್ಪೆಶೇ ಸ್ಪೆಂಬರ್	೧	೮—೦—೦
ರಸಸಿಂಧೂರ	೧	೫—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಸ್ತಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಿಶ್ರಭಸ್ಮ	೧	೦—೧೫—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦

ನೋಟ—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಗಳು ಸರ್ವದೋಷಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,

ಆಯುರ್ವೇದಔಷಧಾಲಯ,

ಪೋಸ್ಟ್ ಓಮಿಷ್, ಜಿಲ್ಲಾ ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಪ್ರವರ್ತಕಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲದೆ ವೇದಮಂತ್ರಗಳಲ್ಲಿ ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ ಯಜುರ್ವೇದಗಳನ್ನೆಲ್ಲಿ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ತಿಳಿಯಬರುವುದು ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಪಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ವೀಕೃತವಾಗಿದೆ ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ **ಬೆಲೆ ೧೩ ಆಣೆ** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಯೀದೇಶದ ಸ್ವಪ್ರಧಾನರಾದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು, ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆದುಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಧರ್ಮಸ್ಥಾಪಕರಿವ ಶ್ರೀಮಜ್ಜಗದ್ಗುರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಪುಣ್ಯಾಶ್ರಯಗಳವರು ಈ ಗ್ರಂಥದ ಯೋಗ್ಯತೆಯನ್ನು ಕಂಡು ದೊರೆಸನ್ನಿಧಿಗೆ ಅರ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಏಳೋಜಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೮೪ ಪುಟಗಳಿಂದ ಕೂಡಿದ್ದು ಒಳ್ಳೆ ದೆಪ್ಪಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವಲ್ಲದೆ. ಬಹುಸುಂದರವಾದ ಕೈಂಕರ್ಯದಿಂದ ಹೊಲಿಸಿದೆ ಪಠಿಸಲ್ಪಟ್ಟಿರುವ ಸಿದ್ಧಾಂತದಲ್ಲಿ ವಿದ್ವಾಂಸರುಳ್ಳ ಪ್ರತಿಯೊಬ್ಬರೂ ಮಕ್ಕಳಕಜೆಗೆ ದೃಷ್ಟಿಯನ್ನಿತ್ತರೆ ಈ ಗ್ರಂಥಕರ್ತನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ಅ ಹೊತ್ತಾಗಲಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ಪಡಾ ಹೋಗಲಾಗಿ ೬ ರೂ. ಗೆ ದೊರೆಯುವುದು ವಿ ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಪೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಪೋಟೋ ಸೈಜು ೨೦×೧೪ ಬೆಲೆ ೧೫ ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ರೋಗನಿವಾರಕವಾದ ಅಗಸ್ತ್ಯ, ಧನ್ವಂತರಿ, ವ್ಯಾಸ, ಸಾನಂದ, ಪೂರ್ವಾಸ ಮಹರ್ಷಿಗಳಿಗೆ ಶಿವಬ್ರಹ್ಮಾಂತವನ್ನು ಪದೇಪದೇಸುವ ಪೋಟೋ ಸೈಜು ೧೦×೧೪ ಬೆಲೆ .. ೦—೧—೬

ಶ್ರೀಮತ್ ಪೀಠಾರೋಹಣಮಾಡಿರುವ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಪೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಪೋಟೋ ಸೈಜು ೧೪×೧೦ ಬೆಲೆ ೧೫ಕ್ಕೆ .. ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಪೋಟೋ ಸೈಜು ೧೦×೮ ಬೆಲೆ ೧೫ಕ್ಕೆ . ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂರ್ಭರದಿಂದ ಅವತರಿಸಿರುವ ಪೋಟೋ .. ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಪೋಟೋ ... ೦—೦—೯

ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ಲಂಕಾಪುರದಲ್ಲಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣೆಮಾಡಿ ಮೂಡಿಬೇಟೆ ಶಿವಲಿಂಗಗಳನ್ನು ಪ್ರತಿಷ್ಠಿಸುವ ಪೋಟೋ ೧೫ಕ್ಕೆ ... ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಪೋಟೋ ೦—೦—೯

ಶ್ರೀಕಾಶೀಕ್ಷೇತ್ರ ವಿಶ್ವಾರಾಧ್ಯ ಶ್ರೀ ಜಗದ್ಗುರು ವಿಶ್ವಾರಾಧ್ಯರ ಸುಂದರಮೂರ್ತಿಪಟದ ಪೋಟೋ .. ೦—೦—೯

ಶ್ರೀ ಇಷ್ಟೇ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಪೋಟೋ . ೦—೦—೯

ಶ್ರೀಮಜ್ಜಯೋ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪೋಟೋ .. ೦—೦—೯

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಪೋಟೋ .. ೦—೦—೯

ಶ್ರೀಮದ್ಜಯೋ ಜಗದ್ಗುರುಗಳವರ ಸ್ವಾಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಪೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಪೋಟೋ ಬೆಲೆ ೧೫ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯೋ ಸೀಮೆಯ ಮಹಾಪ್ರಾಚೀನ ಅತ್ಯಂತ ಸುಂದರವಾದ ಪೋಟೋ ೧೫ಕ್ಕೆ ... ೦—೦—೯

ಶ್ರೀ ಜಗದ್ಗುರು ಉಜ್ಜಯೋ ಸೀಮೆಯ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಪೋಟೋ ೧೫ಕ್ಕೆ ... ೦—೦—೯

ಶ್ರೀ ಜಗದ್ಗುರು ಕೇದಾರೇಶ್ವರಾಶ್ರಮದ ಅತ್ಯಂತ ಸುಂದರವಾದ ಗೋಪುರದ ಪೋಟೋ .... ೦—೦—೯

ಹಿಮಾವೃತ್ತ ಪರ್ವತದ ಉದ್ಭವಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಪೋಟೋ .... ೦—೦—೯

ಶ್ರೀಲಿಭಾಪುರೀ ಜಗದ್ಗುರುಗಳವರ ಸ್ವಾಧಿಯಲ್ಲಿ ಶ್ರೀಮನ್ಮಹಾದಾಜರವರು ವಿರಾಜಿಸುತ್ತಿರುವ ಪೋಟೋ .... ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾಪುರಿ ಜಗದ್ಗುರುಗಳ ಅಶ್ವಪಲ್ಲಕ್ಕಿ ಮಹೋತ್ಸವದ ಪೋಟೋ ೦—೦—೯

೫ ರೂಪಾಯಿಗಳ ಮೇಲೆ ತಂಡಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವಲ್ಲಿ ಕಂಪಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪತ್ರಿಕೆಗಳು ಉಪಯೋಗಿಸುತ್ತಾರೆ. ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜ಼ನ್ ಒಂದಕ್ಕೆ ಕ್ರಯ ರೂ. ೨-೮-೦. ವಿ.ಪಿ. ೮ ಆಣೆ.

ನಿಮ್ಮ ಅಡ್ರೆಸ್ಸನ್ನು ತಪ್ಪಿಲ್ಲದೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[43] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪ್ರವರ (ತೆಲುಗು ಅವೃತ್ತಿ)	....	೧ ಆಣೆ
ಸನ್ಯಾಸಾಶ್ರಮ ವಿಮರ್ಶ (ತೆಲುಗು ಅವೃತ್ತಿ ಸಂಸ್ಕೃತ)	.	೧ ಆಣೆ
ಪಂಚವಿಂಶತಿ ಪ್ರಶ್ನೋತ್ತರ (ತೆಲುಗು ಅವೃತ್ತಿ)	....	೧ ಆಣೆ
ಶ್ರೀಸೂರ್ಯನಾರಾಯಣ ವಿಜಯ (ತೆಲುಗು ಅವೃತ್ತಿ)	....	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (ತೆಲುಗು ಅವೃತ್ತಿ)		೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ	...	೨ ಆಣೆ
ಬಸವಾದಿಶಿವಶರಣ್ಯಾವಳಿ (ತೆಲುಗು ಅವೃತ್ತಿ)	...	೨ ಆಣೆ
ಶ್ರೀರೇಣುಕಾಜ್ಞಾವ್ಯಾಕರಣ (ತೆಲುಗು ಅವೃತ್ತಿ)	....	೨ ಆಣೆ
ಪಂಚಾಚಾರ್ಯಸ್ತವಭಾಷ್ಕರ	..	೨ ಆಣೆ
ಶ್ರೀಗುರುತತ್ತ್ವಪ್ರದರ್ಶಿ	...	೩ ಆಣೆ
ಶ್ರೀರೇಣುಸಹಿತವಾಜ್ಞಾರ್ಹಿತಕ	...	೩ ಆಣೆ
ವೀರಶೈವಮತಸಮೀಮಾಂಸಾ	...	೩ ಆಣೆ
ವೀರಶೈವಾಚಾರವಿಧಿ (ತೆಲುಗು ಅವೃತ್ತಿ)	....	೩ ಆಣೆ
ಲಿಂಗಧಾರಣವಿಧಿ	....	೪ ಆಣೆ
ವಿವಾಹವಿಧಿ (ತೆಲುಗು ಅವೃತ್ತಿ)		೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫೋರೀಕರಣ (ತೆಲುಗು ಅವೃತ್ತಿ)	....	೬ ಆಣೆ
ಸಿದ್ಧಾಂತ ಶಿವಾಮಣಿ (ಮೂಲಮಾತ್ರ ಚಿಕ್ಕಸೈಜು)	..	೬ ಆಣೆ
ವೀರಶೈವಮಹಾತ್ಮರು	....	೮ ಆಣೆ
ಅಷ್ಟಾವರಣಾಧ್ಯಾಂತವಿವಾರಕರ (ತೆಲುಗು ಅವೃತ್ತಿ)	....	೮ ಆಣೆ
ಶಿವಾದ್ವೈತಶತಸರಿಗಾಪಣಾ (ಸಂಸ್ಕೃತ)	....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)		**೮ ಆಣೆ**
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)		೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	....	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೨ ಆಣೆ
ಮಾಹೇಶ್ವರದೀಕ್ಷಾವಿಧಿ (ತೆಲುಗು ಅವೃತ್ತಿ)	....	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	....	೧೨ ಆಣೆ
ಶ್ರೀಕರಧಾಮ್ಯಂ (ತಮಿಳ್ಸ್ಕ್ರಿಪ್ಟ್)	....	೧ ರೂ.
ಸಚಿತ್ರ ರೇಣುಕವಿಜಯ (ತೆಲುಗು ಅವೃತ್ತಿ)	....	೧ ರೂ.
ವೀರಶೈವರತ್ನ (ಪಂಚಮಪೀಠಗಳ ಪೋಟೋಗಳುಸಹಿತ)	....	೧| ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	....	೨ ರೂ.
ವೀರಶೈವಸಿದ್ಧಾಂತಸುಧಾಕರ	..	೨ ರೂ.
ಶಿವಾವ್ಯೃತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ)	..	೮ ರೂ.
A brief life sketch of Pandit Sri Kashinatha Shastriji *(English)*		**4 As.**
The Philosophical Aspect of Virasaivism *(English)*	...	**8 As.**
Speeches by Pandit Shri Kashinatha Shastriji *English)*		**12 As.**
ವೀರಶೈವರತ್ನ (ಮರಾಠಿ)	... ...	.. **೧ ರೂ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		.. **೧ ರೂ.**
ವೀರಶೈವೇತಿಹಾಸ (ಸಂಸ್ಕೃತ)	...	... **೧ ರೂ.**
ಸಂದಿಗ್ಧಾರ್ಥಕಾರಿಕಾ (ಸಂಸ್ಕೃತ)	...	... **೨ ಆಣೆ**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	...	... **೩ ರೂ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ.
೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇದಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ श्रीजगद्गुरु पंचाचार्याभ्यां प्रसीदतम् ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತಪಶ್ರೀಪಂಚಲಿಂಗೋದ್ಭವರ್ ॥
ಪಂಚಾಜ್ಞಾಧರಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀ ಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ ನೈ. ಪರಸ್ಥಳದವರಿಗೆ ೨ ರೂ ೪ ಆಣೆ ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೪ ನೇ ಮಾರ್ಚಿ ೧೯೪೦ [ಸಂಚಿಕೆ ೪೫

॥ ಶ್ರೀಮದ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಪುಣ್ಯತಿಥಿ

ಸೊಲ್ಲಾಪುರದಲ್ಲಿರುವ ಶಂಕರರಾವ ದರ್ಗೋಪಾಟೀಲ ಇವರುಮಾಳಿ ಶು॥ ೧೦ ರವಿವಾರ ತಾ॥ ೧೩-೩-೧೯೪೦ ನೇ ದಿವಸ ತಮ್ಮ ತಂದೆಯವರಾದ ಕೈ॥ ಸಿದ್ಧ ರಾಮಪ್ಪನವರ ಪುಣ್ಯತಿಥಿಯನ್ನು ನೆರವೇರಿಸಿದರು. ಶಂಕರರಾವರವರು ಅದಿನ ಬೆಳ್ಗೆ ಶ್ರೀ॥ ಷ॥ ಬ್ರ॥ ಗುರು ಸ್ವಾಮಿಗಳು ಜೈನಾಪುರ ಇವರನ್ನು ತಮ್ಮ ಮನೆಗೆ ಆಮಂತ್ರಿಸಿಕೊಂಡು ಬಂದು ಅತ್ಯಂತ ಭಕ್ತಿಯಿಂದ ಪಾದ ಪೂಜೆಯನ್ನು ಮಾಡಿ ತನ್ನ ಶಕ್ತ್ಯನುಸಾರ ವೀರ ಮಾಹೇಶ್ವರರಿಗೆ ವಸ್ತ್ರ ದಾನವನ್ನೂ, ಅನ್ನ ಸಂತರ್ಪಣೆ ಯನ್ನೂ ಬಹಳ ವಿಜೃಂಭಣೆಯಿಂದ ಮಾಡಿದರು. ಶಂಕ ರರಾವರ ತಾಯಂದಿರಾದ ಕೈ॥ ಮುಕ್ತಾಬಾಯಿಯವರು ಮೇಲಿಂಮೆ ಮೇಲೆ ಮಗನಿಗೆ ಸಮೃದ್ಧಿಯನ್ನೀಯುತ್ತಿ ದ್ದುದರಿಂದ ಇವರು ಇಷ್ಟು ಗುರುಜಂಗಮರಲ್ಲಿ ಭಕ್ತಿಯು ಳ್ಳವರಾಗಲು ಕಾರಣವಾಯಿತು. ಮಕ್ಕಳು ಸದಾಚಾರಿ ಗಳೂ, ಸದ್ಗುಣಭರಿತರೂ, ಗುರುಭಕ್ತಿ ಪರಾಯಣರೂ ಆಗಬೇಕಾದರೆ ತಾಯಿಯವರು ಮೇಲಿಂದ ಮೇಲೆ ಸದ್ಬು ದ್ಧಿಯನ್ನೀಯಬೇಕು. ಶಿವಾಜಿಯು ತನ್ನ ಕೀರ್ತಿಯನ್ನು ಆಚಂದ್ರಾರ್ಕವಾಗಿ ಬೆಳಿಸಿಕೊಳ್ಳಬೇಕಾದರೆ ಮಾತೆ ಯಾದ ಜೀಜಾಬಾಯಿಯು ಸದ್ಬುದ್ಧಿಯನ್ನಿತ್ತುದೇ ಮೂಲಕಾರಣ! ಈಗಿನ ಮಾತೆಯರು ಸಪೆನಿಡಿಗಳನ್ನು ಬದಿಬಿಸಕತ್ತಿದ್ದಾರೆ. ಇವರಿಗೆ ಒಂದು ದಿವಸಕ್ಕೆ ೩-೪ ತರಹದ ಪ್ರೆಸ್ಸುಗಳು ಬೇಕಾಗುತ್ತವೆ. ಇವರಿಗೆ ಅಂದ ವಾದ ಉಡಿಗೆಗಳಲ್ಲದಿದ್ದರೆ ಮನಸ್ಸೇ ಸಮಾಧಾನ ವಿರುವುದಿಲ್ಲ. ಹಿಂದಿನ ದಯಮಾಂದಿಗೆ ಆಗಿದಾಗ್ಗೆ ಸಚ್ಚರಿತ್ರೆಗಳು ಬೇಕಾಗುತ್ತಿದ್ದವು. ಆದರೆ ಈಗಿನವರ ಚರಿತ್ರೆಯೇ ಬೇರೆ. ಇದೆಲ್ಲವೂ ಕಲಿಕಾಲ ಪ್ರಭಾವ! ಮಾತೃವರ್ಗವೇ! ನೀವು ಸುಧಾರಿಸಿದ ಹೊರತು ನಿಮ್ಮ ಪುತ್ರರು ಸುಧಾರಿಸಲಾರರು. ನಿಮ್ಮ ಕೀರ್ತಿಯು ಉಳಿ ಯಬೇಕಾದರೆ ಹಿರಿಯರ ಸನ್ಮಾರ್ಗಗಳನ್ನು ಅನುಸರಿಸ ಬೇಕೆಂದು ಪ್ರಾರ್ಥನೆ. ಅಸ್ತು!

ಶಂಕರರಾವರವರು ಪುಣ್ಯತಿಥಿಯ ಸಮಯದಲ್ಲಿ ಪ್ರಭಾಪೋಷಣಕ್ಕೆಂದೆಷ್ಟರ ೧೫ ರೂಪಾಯಿಯನ್ನು ಸಮರ್ಪಿಸಿದರು.. ಇವರಿಗೂ ಮಾತೃಶ್ರೀ॥ ತ್ರಿನೇತ್ರೇ ಬಾಯಿ ಮತ್ತು ಕಾರ್ತೀಬಾಯಿಯವರಿಗೂ ಇವರ ಬಂಧು ವರ್ಗದವರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಇದೇ ಪ್ರಕಾರ ಸದ್ಬುದ್ಧಿಯನ್ನೀಯಲೆಂದು ಹಾರ್ದಿಸುವ.

ನಾಗಭೂಷಣಾಲಂಪ್ರಿ, ದೇವಣಗಾವ.

ದಾವಣಗೆರೆಯ ಶ್ರೀಜಗದ್ಗುರು ಅಭಿನವರೇಣುಕ ಮಂದಿರದ ಪೆಂಡಾಲಿನಲ್ಲಿ ಶ್ರೀಮನ್ಮಹಾರಾಜ ಪ್ರಭುಗಳವರು.

ನಮ್ಮನ್ಯಾಳುವ ಮೈಸೂರು ಶ್ರೀಮನ್ಮಹಾರಾಜ ಪ್ರಭುಗಳವರು ತಾ॥ ೨೩-೨-೧೯೪೦ ನೆಯ ಗುರುವಾರ ದಾವಣಗೆರೆಯ ನಾಗರಿಕರು ಭವ್ಯವಾಗಿ ರಚಿಸಿದ್ದ ಅನೇಕ ಪೆಂಡಾಲುಗಳಲ್ಲಿ ಪ್ರಜಾಕೋಟಿಗೆ ಶುಭಸಂದರ್ಶನವನ್ನಿ ತ್ತರು. ಬಳಿಕ ಮಹಾಪ್ರಭುಗಳವರ ಸವಾರಿಯು ಶ್ರೀ ಜಗದ್ಗುರು ಅಭಿನವರೇಣುಕ ಮಂದಿರದ ಪೆಂಡಾಲಿಗೆ ೧೧ ಗಂಟೆಗೆ ದಯಮಾಡಿಸಿತು. ಶ್ರೀಮನ್ಮಹಾ ಪ್ರಭು ಗಳ ಎಡಗಡೆ ಶ್ರೀಮದ್ಯುವರಾಜ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರೂ, ಮುಂದುಗಡೆ ದಿವಾನ್ ಸಾಹೇಬರವರೂ ಪ್ರೈವೇಟ್ ಸೆಕ್ರೆಟರಿಯವರೂ ಮಂಡಿಸಿದ್ದರು. ಉತ್ಸವವು ಸದರಿ ಪೆಂಡಾಲಿಗೆ ಬರುತ್ತಲು ಶ್ರೀಜಗದ್ಗುರು ಅಭಿನವರೇಣುಕ ಮಂದಿರ ಸಂಘದವರು ಮಹಾಪ್ರಭುಗಳನ್ನು ಸಮಾಪಪೂರ್ವಕವಾಗಿ ಸ್ವಾಗತ ಿಸಿದರು. ಸಂಘದ ಪರವಾಗಿ ಸಮ್ಮಾನವನ್ನೊಪ್ಪಿಸಲೋಸ ುಗ ಮಾಗಾನಹಳ್ಳಿ ಪಡಕ್ಷರಪ್ಪನವರ ಪುತ್ರರಾದ ಶ್ರೀ ಪಣ್ಯಾಖಪ್ಪನವರೂ, ತಿರುಕಪ್ಪನವರ ಮಘದ ಶ್ರೀ ಹಾಲಯ್ಯನವರೂ ಹಾರ ತುರಾಯಿಗಳನ್ನು ಹಿಡಿಯು ಕೊಂಡು ನಿಂತಿದ್ದರು. ಶ್ರೀ ಜಗದ್ಗುರು ರೇಣುಕಾಪುರೀ ಮಹಾ ಸಂಸ್ಥಾನದ ನಿಜಂಟರವರೂ, ಹಿರೇಮಠದ ಶ್ರೀ ಶಿವಾನಂದಸ್ವಾಮಿಯವರೂ ಉಭಯಪಾರ್ಶ್ವಗಳಲ್ಲಿ ಪ್ರಭು ಗಳಿಗೆ ಒಪ್ಪಸಬೇಕಾಗಿದ್ದ ಫಲಗಳಿಂದ ತುಂಬಿದ ಬೆಳ್ಳಿಯ ದೊಡ್ಡ ತಟ್ಟೆಗಳನ್ನು ಹಿಡಿದುಕೊಂಡು ನಿಂತಿ ದ್ದರು. ಪ್ರಭುಗಳು ದಯಮಾಡಿಸುತ್ತಲೇ ಹೆಸರನ್ನುಚ್ಚರಿ ಸುವ ಮುಂತಾದ ಪರಿಪಾಟವನ್ನು ಕುರಿತು ಸ್ವತಃ ಪ್ರಸ್ತಾಪಿಸಿ ದರು. ಶ್ರೀಮಾನ್ ಪಣ್ಯಾಖಪ್ಪನವರು ಸೂಕ್ತವಾಗಿ ಉತ್ತರವನ್ನಿತ್ತರು. ಕಾವ್ಯತೀರ್ಥ, ಸಾಹಿತ್ಯಾಚಾರ್ಯ, ವೇದಾಂತಾಚಾರ್ಯ ಇತ್ಯಾದಿ ಬಿರುದಾಂಕಿತರಾದ ಮು॥ ಮು॥ ಶ್ರೀ ವಾಗೀಶವಿವಾಚಾರ್ಯರವರು ಆಶೀರ್ವಾದ ಮಂತ್ರವನ್ನುಪಠಿಸಿ, ಪ್ರಭುಗಳವರಿಗೆ ಮಂತ್ರಾಕ್ಷತೆಗಳನ್ನು ಒಪ್ಪಿಸಲು, ಮಹಾಪ್ರಭುಗಳವರು ಭಕ್ತಿಯುಕ್ತರಾಗಿ ಸ್ವೀಕರಿಸಿದರು. ಬಳಿಕ ಹಾರ-ತುರಾಯಿ-ಫಲಾದಿಗಳು ಸಮರ್ಪಿಸಲ್ಪಟ್ಟವು. ಶ್ರೀ ವಾಗೀಶವಿವಾಚಾರ್ಯರು "ಅಭ್ಯುದಯಾಸ್ಪದ" ವನ್ನು ಪ್ರಭುಗಳವರಿಗೆ ಸಮರ್ಪಿ ಸಿದರು. ಮಹಾಪ್ರಭುಗಳು ಅತ್ಯಾನಂದದಿಂದ ಸ್ವೀಕರಿಸಿ ಚಿತ್ತಾಗಿ ಅವಲೋಕಿಸುವೆವು ಎಂದು ಹೆಸರನ್ನುಪೇಗಾಗಿ ಅಪ್ಪಣೆ ಕೊಡಿಸಿ ಬಹಳ ಆನಂದವೆಂದು ಮತಿದರು. ಅಮೇಲೆ ಸವಾರಿಯು ಮುಂದಕ್ಕೆ ದಯಮಾಡಿಸಿತು.

ತಾ॥ ೨೫-೨-೪೦ ನೆಯ ಸುಧ್ಯಾಹ್ನ ಕೆಲ ಸದಸ್ಯರ ಹಿರೇಮಳದಲ್ಲಿ ಸೇರಿ ಶೀಘ್ರವಾಗಿ ಒಂದು ಕೆಮಿಟಿಯನ್ನು ರಚಿಯಬೇಕೆಂದೂ, ಶ್ರೀ ರೇಣುಕ ಮಂದಿರದ ಕಟ್ಟಡ ವನ್ನು ಪ್ರಾರಂಭಿಸಬೇಕೆಂದೂ ಆಲೋಚನೆಯನ್ನು ಮಾಡಿದರು. ಸಂಘದವರೆಲ್ಲರೂ ಏಕಮತ್ಯದಿಂದ ಕಾರ್ಯ ಮಾತುತ್ತ ಶ್ರೀ ರೇಣುಕರ ಸೇವೆಯಲ್ಲಿ ತನುಮನೋಧನ ಗಳನ್ನು ಸಮರ್ಪಿಸುತ್ತಿರುವುದು ಸ್ತೋತ್ರಾರ್ಹವಾದ ವಿಷಯ.

ಓರ್ವ ವೈಕ್ಷಕ, ದಾವಣಗೆರೆ.

ಜರ್ಮನಿ ಸಂಗ್ರಾಮ ನೌಕೆಯ ಬಂಧನ

"ಗಾಜೆ" ಎಂಬ 4709 ಟನ್ ತೂಕದ ಜರ್ಮನ್ ಸಂಗ್ರಾಮ ನೌಕೆಯನ್ನು ಬ್ರಿಟಿಷ್ ಸಂಗ್ರಾಮ ನೌಕೆಯು ಬಂಧಿಸಿ ಹಿಡಿದು ತಂದಿದೆ. ಜರ್ಮನಿ ನೌಕೆಯು ವಿಗೋ ಬಂದರಿನಿಂದ ಹೊರಟಿತ್ತು. ಜರ್ಮನಿ ನಾವಿಕರು ತಮ್ಮ ನೌಕೆಯು ಶತ್ರುಗಳ ಕೈಗೆ ಬೀಳದಂತೆ ನಾಶಪಡಿಸಲು ಪ್ರಯತ್ನಿಸಿದರೆಂದೂ ಆದರೆ ಬ್ರಿಟಿಷರು ಅದಕ್ಕೆ ಅವ ಕಾಶ ಕೊಡಲಿಲ್ಲವೆಂದೂ ತಿಳಿದು ಬರುತ್ತದೆ.

ವೀಪುರಿ ನಗರದಮೇಲೆ ಬಾಂಬ್!

ಕೊಯಿವಿಸ್ವೆಟ್ರೀಪುವು ರಷ್ಯನರ ಕೈಸೇರಿದ್ದರಿಂದ ಫಿನ್ನಿಷರಿಗೆ ಬಹಳ ನಷ್ಟವಾದಂತಾಯಿತು. ಅಲ್ಲಿದ್ದ ಬಲವಾದ-ಫಿರಂಗಿಗಳು ಇವರಿಗೆ ಶತ್ರುಗಳ ಮುಂದೋ ಟವನ್ನು ತಡೆದು ನಿಲ್ಲಿಸಿದ್ದವು. ಫಿನ್ನಿಷರು ಹಿಮ್ಮೆಟ್ಟು ವಾಗ ಆ ಸಿಂಗಿಗಳನ್ನೆಲ್ಲಾ ಹಾಳುಮಾಡಿಹೋಗಿದ್ದಾರೆ. ಈಗ ರಷ್ಯನರು ಇನ್ನೊಂದು ಬಹು ಮುಖ್ಯ ಆಯ ಕಟ್ಟಿನ ಸ್ಥಳವಾದ ವೀಪುರಿ ನಗರವನ್ನು ವಶಪಡಿಸಿಕೊ ಳ್ಳಲು ಬಿರುಸಾಗಿ ನುಗ್ಗುತ್ತಿದ್ದಾರೆ. ರಷ್ಯನ್ನರ ಸೈನ್ಯಗಳು ಸಮುದ್ರವಲಯಗಳಂತೆ ಒಂದರಹಿಂದೊಂದು ಬರುತ್ತವೆ. ರಷ್ಯನ್ನರ ಲೆಕ್ಕವಿಲ್ಲದಷ್ಟು ಬಾಲಬುಗಳ ಆಘಾತದಿಂದ ವೀಪುರಿಪಟ್ಟಣವೆಲ್ಲವೂ ನಾಶವಾಗಿದೆ.

ಪೂಜಾಪರಿಮಳ ದ್ರವ್ಯಗಳು.

ಮಹಶೀಯರೇ! ನಮ್ಮಲ್ಲಿ ದೇವರ ಪೂಜೆಗೆ ಬೇಕಾ ಗುವ ಪರಿಮಳ ದಕ್ಕಾಂಗ, ಧೂಪದಗಟ್ಟಿ, ದೇಶೀಕರ್ಪೂರ, ರಕಂವಾರು ಹಸರಾದ ಊದುಬತ್ತಿಗಳು ಯೋಗ್ಯಬೆಲೆಗೆ ದೊರೆಯುತ್ತವೆ. ಬೇಕಾದ ಸಾಮಾನುಗಳಿಗೆ ಬರೆದು ತರಿಸಿಕೊಳ್ಳಿರಿ.

ನೈ. ಬಸಪ್ಪ,
ಊದುಬತ್ತಿ ದಕ್ಕಾಗದ ಕಾರ್ಖಾನೆ.
[4] ಚಕ್ಕಪೇಟೆ, ಚೆಂಗಲ್‌ರಾಯಸಿಟಿ.

॥ ಶ್ರೀ ಜಗದ್ಗುರು ವಿಶ್ವಾರಾಧ್ಯೋ ವಿಜಯತೇ ॥

ಮಹಾಶಿವರಾತ್ರಿ ವ್ರತ.

ಲೇ ವಿಶ್ವಾರಂಭ್ಯ ಸಶ್ಯತ ಪಾಠಕಾಲಧ್ಯಕ್ಷ
ಶ್ರೀ ಗುರುಮೇನಹಳ್ಳಿ ಚಿಂತಾಮಣಿ

ಜಗತ್ತಿನಲ್ಲಿ ಮಾನವ ಪ್ರಾಣಿಗೆ ಸಂಸಸ್ಕೃವೃದ್ಧಿಯನ್ನುಂಟುಮಾಡುವ ಸ್ಮಾರ್ತ ವ್ರತಗಳಲ್ಲಿ ಶಿವರಾತ್ರಿವ್ರತವು ಬಹು ಎಲ್ಲ ನರ್ತಾಲ್ಲಿಯೂ ಮಿಗಿಲಾದದು ಬ್ರಹ್ಮಾಂಡವಿಷ್ಣು ಪಿಂಡ ಸ್ವಾಸ್ಥ್ಯ ಸ್ಮಾರ್ತ, ಲಿಕ ಸೌಂದರ್ಯಾಭಿವೃದ್ಧಿ ಸಂಪತ್ತಿ ಗಳು ಮಾನವನಾಗಿರುವ ಇವುಗಳಲ್ಲಿ ಬೇರೆ ಯಾವ ಮತನನ್ನೂ ನಲಂಬಿಸಿರಬಹುದು ಸಹಿಸಿ ಸಸ್ಯವಾದ ದೇವರು ತನ್ನ ತನ್ನ ಇಷ್ಟದೇವರನ್ನು ಬಿಟ್ಟು ಬೇರೆ ದೇವನನ್ನು ಪೂಜಿಸುವುದಿಲ್ಲ ಆದರೂ—

ಸ್ಮಾರ್ತಾನಾಂ ಶೈವಿಕಾನಾಂ ಚ ಪ್ರಾಯೇಣಾಚಾರ್ಯಭೇದತಃ ।
ಸಮಾನಫಲದಾತ್ರೀತಿ ಶಿವರಾತ್ರಿ ರ್ಮಹಾಮಖಃ ॥

ಎಂಬ ಪದ್ಯಪ್ರಮಾಣದ ಉಕ್ತಿಯಿಂತೆ ಎಲ್ಲ ಪಕ್ಷ ದಾಯದವರೂ ಮಹಾಶಿವರಾತ್ರಿ ವ್ರತವನ್ನು ಸರ್ವತ್ರ ಆಚರಿಸುವರು ಕಂಡುಬರುತ್ತದೆ ಈ ಪ್ರಕಾರವಾಗಿ ಸರ್ವವಾಶ್ಮವಾದ ಶಿವರಾತ್ರಿ ವ್ರತಾಚರಣೆಯಲ್ಲಿ ಎಷ್ಟು ಮಹತ್ವವಿರುತ್ತದೆಂಬುದು ಮುಂದಿನ ವಿವರಣದಿಂದ ವಿದಿತವಾಗುವದು ಶಿವರಾತ್ರಿ ವ್ರತ ಎಂಬಲ್ಲಿ ಶಿವ ಎಂದರೇನು? ರಾತ್ರಿಯೆ ವರೇನು? ವ್ರತವೆಂದರೇನು? ಎಲ್ಲ ಸಂಗತಿಗಳನ್ನು ಕೆಲವು ಆದಾರಗಳಿಂದ ಇಲ್ಲಿ ಏನೇ ಚಿಸುವದು ಗುವುದು

ಶಿವ

"ಶಿತೇ ತಿಷ್ಠತಿ ಸರ್ವಂ ಜಗತ್ ಯಸ್ಮಿನ್ ಸ ಶಿವಃ ಪ್ರಭಾ ।
ವಿಶ್ವ ರಕರಿಕಃ

ಜಗತ್ಪಾರಾತ್ಮಕವಾದೀ ಜಗತ್ತು ಯಾವನಲ್ಲಿ ಲಯ ಯಾಗಿರುತ್ತದೆಯೋ ಅವನೇ ಶಿವನು ಆ ಶಿವನ ವಿಕಾರ ಹಿತನಾಗಿದ್ದಾನೆ ದಯಾಳು ನಿಸ್ವಾರ್ಥ ಶಿವನು ತನ್ನನ್ನು ನೆನೆಸುವ ಭಕ್ತರಿಗೆ ಶೀಘ್ರವಾಗಿ ಅನುಗ್ರಹವನ್ನುಂಟು ಮಾಡುವುದರಿಂದ "ಆಶುತೋಷ ನೆಬ ಬಿರುದನ್ನು ಪಡೆದಿದ್ದಾನೆ ಸಂಸಾರಬೆಂಬ ಕಾಡುಗಿಚ್ಚಿನಲ್ಲಿ ಬೆಂದು ಬಿಡುವ ಮಾನವರ ತಾಪತ್ರಯವನ್ನು ದೂರಮಾಡಿ ಶಿವಸಾಗರವನ್ನು ಹೊಂದಿಸಿಕೊಡುವನಿಗಿದ್ದಾನೆ ಏತಕ್ಕೆ ಶಿವನನ್ನೆ ಕೀರ್ತಿಸಲು ನಾನಾ ಪ್ರಕಾರವಾಗಿ ಎಸಿರತ್ತೆ

ರಾತ್ರಿ

ಪ್ರ ಮಾಣಿಕ ಪ್ರತಿಪಾದಿತ ರಾತ್ರಿ
ಸ್ವಾಭಾವಿಕ ಸ್ವರೂಪ ಬಿಡಿಸಿ ಹೇಳಿ
ಸ್ವಾಭಾವಿಕ ಸ್ವರೂಪವೆಂದರೆ ಪ್ರಕೃತಿಯೇ
ಸಹಜ ಸಾತ್ವಿಕ ಸ್ವರೂಪವೆಂದಿತ್ತೆಯೇ
ಸಹಜ ಸಾತ್ವಿಕ ಸ್ವರೂಪ

ಕಾಲಾತ್ಮಕತ್ವಾದ್ಭಿನ್ನ ವೃತ್ತಿವ ಕ
ಎಂಬಂತೆ (೩೪)

ಎಂಬಂತಾಗಿ ಬಿನ್ನೆದಿ ಸಲಿಕೆಯು ರಾತ್ರಿಯನ್ನು ವಿಶೇಷವಾಗಿ ವರ್ಣಿಸಿರುತ್ತದೆ ಪ್ರಾಣಿಗಳ ಆರೋಗ್ಯ ಭಿವೃದ್ಧಿಯೂ ಗಿಡಬಳ್ಳಿಗಳ ಅಭಿವೃದ್ಧಿಯೂ ರಾತ್ರಿ ಯಿಂದಲೇ ಆಗುತ್ತದೆ ರಾತ್ರಿಯಿಲ್ಲದಿದ್ದರೆ ಜಗತ್ತಿನ ವ್ಯವಹಾರವು ಸಾಗುವದಿಲ್ಲವೆಂಬುದು ಸರ್ವರಿಗೂ ಅನುಭವಸಿದ್ಧವಾಗಿದೆ ಆದುದರಿಂದಲೇ ಶಾಸ್ತ್ರವು ರಾತ್ರಿಗೆ "ಸದಾ ಆನಂದದಾಯಿನಿ' ಎಂದು ಹೇಳಿರುತ್ತದೆ ಈ ರಾತ್ರಿಯನ್ನು ಕೆಲವರು ಶಿವಾದೇವಿಯೆಂದೂ, ಕಾಲಿ ದೇವಿಯೆಂದೂ ಸ್ತೋತ್ರಮಾಡಿದ್ದಾರೆ ಶ್ರೀ ಮಾಧವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟ 'ಕಾಲಮಾಧವ' ಎಂಬ ಗ್ರಂಥದಲ್ಲಿ ಶಿವರಾತ್ರಿಗೆ ಈ ಪ್ರಕಾರವಾಗಿ ವ್ಯಾಖ್ಯಾನವನ್ನು ಬರೆದಿದ್ದಾನೆ

"ಶಿವಸ್ಯ ಪ್ರಿಯಾ ರಾತ್ರಿಃ ಯಸ್ಮಿನ್ ವ್ರತೇ ಅಂಗತ್ವೇನ ನಿಷಿತಾ ತದ್ವ್ರತಂ ಶಿವರಾತ್ರ್ಯಾಖ್ಯಂ"

ಶಿವನಿಗೆ ಪ್ರಿಯವಾಗಿರುವ ರಾತ್ರಿಯು ವ್ರತಕ್ಕೆ ಅಂಗ ಭೂತವಾ ಗಿರುವುದರಿಂದ ಶಿವರಾತ್ರಿ ಎಂದು ಪ್ರಸಿದ್ಧ ವಾಗಿದೆ ಈ ಶಿವರಾತ್ರಿಯು ಮಾಘ ಬಹುಳ ಚತುರ್ದ ಶಿಯ ದಿವಸ ಪ್ರಾಪ್ತವಾಗುತ್ತದೆ ಆ ದಿವಸ ಶಿವಪೂಜೆ ಯನ್ನು ಮಾಡುವನೇ ಮಹಾ ವ್ರತವು ಈ ಶಿವರಾತ್ರಿಯು ಕುರಿತು ಸಂದ ಪುರಾಣದಲ್ಲಿ ವಿಶೇಷವಾಗಿ ವರ್ಣಿ ಸಲ್ಪಟ್ಟಿದೆ

ಪರಾತ್ಪರತರಂ ನಾಸ್ತಿ ಶಿವರಾತ್ರ್ಯಾತ್ತರಂ ।
ನ ಪೂಜಯತಿ ಭಕ್ತ್ಯೇಶಂ ಯಾವ್ಯಂ ತ್ರಿಭುವನೇಶ್ವರಂ ॥
ಈ ತ ಜನ್ಮಸಹಸ್ರೇಷು ಪ್ರೈಯತೇ ನಾತ್ರ ಸಂಶಯಃ ।
ಶಿವಂ ತು ಪೂಜಯಿತ್ವಾ ಯೋ ಜಾಗರ್ತಿ ಚ ಚತುರ್ಪಶೀಂ ।
ಸೋಽಪಿ ಪಯೋಧರಸರಂ ನ ಪೀತ್ವಾ ಸ ಕದಾಚನ ॥

ಶಿವರಾತ್ರಿ ವ್ರತವು ಎಲ್ಲ ವ್ರತಗಳಲ್ಲಿಯೂ ಅಗ್ರ ಸ್ಥಾನವನ್ನು ಹೊಂದಿರುವದು ಯಾವನು ಮಾಘಿ ಬಹುಳ ಚತುರ್ದಶಿಯ ದಿವಸ ಶಿವನನ್ನು ಪೂಜಿಸುವ ದಿಲ್ಲವೋ ಜಾಗರಣೆಯನ್ನು ಮಾಡುವದಿಲ್ಲವೋ, ಅವನು ಈ ಭವಸಾಗರದಲ್ಲಿ ಸಾವಿರಾರು ಸಾರಿ ಮರಳಿ ಮರಳಿ ಜನ್ಮ ಪಾಲುವನು ಯಾವನು ಆ ದಿವಸ ಭಕ್ತಿಭಾವ ದಿಂದ ಶಿವನನ್ನು ಆರಾದಿಸುವನೋ ಅವನು ಪುನಃ ತಾಯಿ ಯ ಎದೆ ಹಾಲನ್ನು ಕುಡಿಯುವದಿಲ್ಲ ಅರ್ಥಾತ್ ಮುಕ್ತನಾಗುವನೆಂದು ಭಾವವು

ವ್ರತ

ವೈದಿಕ ಸಾಹಿತ್ಯದಲ್ಲಿ ವ್ರತ ಶಬ್ದಕ್ಕೆ ಇಚ್ಛಿತ ಫಲವನ್ನು ಹೊಂದಿರತಕ್ಕ ಕರ್ಮವೆಂದು ಹೇಳಲ್ಪಟ್ಟಿದೆ ಅಮರಕೋಶದಲ್ಲಿ ವ್ರತ' ಶಬ್ದಕ್ಕೆ ನಿಯಮವೆಂದು ಹೇಳಲ್ಪಟ್ಟಿದೆ ಯಾವನು ತನ್ನ ಇಷ್ಟಫಲ ಪ್ರಾಪ್ತಿ ಗೋಸ್ಕರ ಕ್ರಿಕರಣ ಪೂರ್ವಕವಾಗಿ ಕರ್ಮವನ್ನಾಚರಿಸು ವನೋ ಅದೇ ವ್ರತವು

ವೀರಶೈವರು ಶಿವಪೂಜಾದಿ ಕ್ರಿಯೆಗಳನ್ನು ಮಾಡ ಬೇಕಾದರೆ ನಿಷ್ಠಾವು ಬುದ್ಧಿಯಿಂದ ಮಾಡಬೇಕೆಂದು ದರ್ಶಿಸಿರುವು ನರುವದು ನಿಜ! ಆದರೆ ಕೆಲವರು ವ್ರತಗಳನ್ನು ಆಚರಿಸಬೇಡೆಂದು ಹೇಳ ವರು ಇದು ಶಾಸ್ತ್ರವಿರುದ್ಧವೂ ಲೋಕ ವಿರುದ್ಧವೂ ಆಗುತ್ತದೆ ವೀರ ಶೈವರು ಧನಕನಕಾದಿ ನಶ್ವರ ಸುಖಪ್ರಾಪ್ತಿಗೋಸ್ಕರ ವ್ರತವನ್ನಾಚರಿಸದೆ ಶಿವಸಾನ್ನಿಧ್ಯವನ್ನು ಹೊಂದುವ ದಕ್ಕೋಸ್ಕರ ವ್ರತವನ್ನು ಅವಶ್ಯವಾಗಿ ಆಚರಿಸಲೇ ಬೇಕು ಎಲ್ಲ ರಾತ್ರಿಗಳನ್ನೂ ಬಿಟ್ಟು ಮಾಘ ಬಹುಳ ಚತುರ್ದಶಿಯ ರಾತ್ರಿಗೆ ಶಿವರಾತ್ರಿ ಎಂಬ ಹೆಸರು ಏಕೆ ಬಂದಿದೆ? ಆ ದಿವಸ ರಾತ್ರಿಯಲ್ಲಿಯೇ ವ್ರತವನ್ನು ಏಕೆ ಆಚರಿಸಬೇಕು? ಎಂಬ ಶಂಕೆಯು ಕಲವರನ್ನು ಬಾಧಿಸಬಹುದು ಈ ಬಗ್ಗೆ ಆಕಾಶ ಸಂಹಿತೆ ಯಲ್ಲಿ ಈ ರೀತಿಯಾಗಿ ಹೇಳಲ್ಪಟ್ಟಿದೆ

"ಮಾಘೇಕೃಷ್ಣ ಚತುರ್ದಶ್ಯಾಮಾದಿತೇಯೋ ಮಹಾನಿಶಿ ।
ಶಿವಲಿಂಗತಯೋದ್ಭೂತಃ ಕೋಟಿಸೂರ್ಯಸಮಪ್ರಭಃ ॥
ತತ್ಕಾಲವ್ಯಾಪಿನೀ ಗ್ರಾಹ್ಯಾ ಶಿವರಾತ್ರಿವ್ರತೇ ತಿಥಿಃ"॥

ಮಾಘಮಾಸದ ಕೃಷ್ಣಪಕ್ಷ ಚತುರ್ದಶಿಯ ಮಹಾ ರಾತ್ರಿಯಲ್ಲಿ, ಮಹಾದೇವನು ಕೋಟಿಸೂರ್ಯರಂತೆ ಪ್ರಕಾಶಮಾನನಾಗಿ ಲಿಂಗರೂಪದಿಂದ ಅವಿರ್ಭವಿಸಿ ದನು ಆದ್ದರಿಂದ ಚತುರ್ದಶಿಯ ಮಹಾರಾತ್ರಿಯ ಲ್ಲಿಯೇ ವ್ರತವನ್ನು ಆಚರಿಸಬೇಕು ಮೇಲಿನ ಶ್ಲೋಕ ದಲ್ಲಿರುವ (ಮಹಾನಿಶಿ) ಎಂಬ ಶಬ್ದವು ವಿಶೇಷಾರ್ಥ ವನ್ನು ಬೋಧಿಸುತ್ತದೆ

ಮಾಘೇ ಮೇ ಕೃಷ್ಣಪಕ್ಷಸ್ಯ ಯಾ ತಿಥಿಃ ಸ್ಯಾತ್ಚತುರ್ದಶೀ ।
ತಸ್ಯಾಂ ಯಾ ತಾಮಸೀ ರಾತ್ರಿಃ ಸೋಚ್ಯತೇ ಶಿವರಾತ್ರಿಕಾ ॥
ತತ್ರೋಪವಾಸಂ ಕರ್ತವ್ಯಾಗಾಃ ಪ್ರಸೀದಂತಿ ಮಾಂ ಧ್ರುವಂ ।
ನ ಸ್ನಾನೇನ ನ ವಸ್ತ್ರೇಣ ನ ಧೂಪೇನ ಕೇಶವಾರ್ಚನಾ ।
ತುಷ್ಯಾಮಿ ನ ತಥಾ ಪುಷ್ಪೈರ್ಯಥಾ ಶಕ್ತ್ಯುಪವಾಸತಃ ।

ಮಾಘಮಾಸ ಕೃಷ್ಣಪಕ್ಷ ಚತುರ್ದಶಿಯ ರಾತ್ರಿಗೆ ಶಿವ ರಾತ್ರಿಯೆಂಬ ಅಭಿಧಾನವುಂಟು. ಆ ದಿವಸ ಯಾವ ಮಾನವನು ಉಪವಾಸವನ್ನು ಮಾಡುವನೋ ಅವನಿಗೆ ನಾನು ತೀವ್ರಪ್ರಸನ್ನನಾಗುವೆನು, ಎಂದು ಶಂಕರಪ ಹೇಳಿದ್ದಾನೆ ಆ ದಿವಸ ಪಶ್ಚಮಪ್ಪಧೂಪದೀಪಾದಿಗಳ ಅರ್ಪಣಕ್ಕಿಂತಲೂ ಉಪವಾಸಕ್ಕೆ ಹೆಚ್ಚು ಅಧಿಕ್ಯವನ್ನು ತೋರಿಸಿರುವುದು ಮೇಲಿನ ಪರಮಾತ್ಮನ ಉಕ್ತಿಯಿಂದ ವ್ಯಕ್ತವಾಗುತ್ತದೆ ಹೀಗೆ ಶಿವೋಕ್ತಿಯಿದ್ದರೂ ಈಗ ಕೆಲವರು ಉಪವಾಸಮಾಡದಾರದೆಂತಲೂ ಉಪವಾಸ ದಿಂದ ಮನಸ್ಸು ಚಂಚಲವಾಗಿ ಪರಮಾತ್ಮನ ಪೂಜೆಯು ಚೆನ್ನಾಗಿ ಆಗುವದಿಲ್ಲವೆನೆಂತಲೂ ನುಡಿಯುತ್ತ ಶಿವರಾತ್ರಿಯ ದಿವಸ ಮುಂಜಾನೆ ಏಳುತ್ತಲೇ ಮೂವತ್ತು ಬಾಳೇಹಣ್ಣು ಗಳನ್ನು ತಿಂದು ಮೇಲೆ ಮೂರುಹೊತ್ತಿಗೆ ಹಾಲುಕುಡಿಯು ವರು ಸಂಯಮಿಗಳು ಇದಕ್ಕೆ ಸಾಲ್ಯಂಪಟ್ಟು ಆಹಾರ ವನ್ನು ಸ್ವೀಕರಿಸಿ ನಾವು ಈ ಹೊತ್ತು ಶಿವರಾತ್ರಿಯಷ್ಟೆ ಆಚರಿಸುತ್ತೇವೆಂದು ಹೇಳುತ್ತ ಬೆಳಿಗನವರೆಗೂ ನಿದ್ರೆ ಮಾಡುವರು ಇದನ್ನೆ ನೋಡಿದರೆ ಮಾಘೇ ತಾಸೇ ವ್ಯಸನವೆನಿಸಲಿಲ್ಲವೆ? ಶಿವರಾತ್ರಿಯ ದಿವಸ ಉಪವಾಸ ಮಾಡದಿದ್ದವರಿಗೆ ಉಪವಾಸ ಶಬ್ದದ ರಹಸ್ಯವು ತಿಳಿಯದಿರುವದೇ ಮೂಲಕಾರಣವಾಗಿದೆ ಆದ್ದರಿಂದ ಸರ್ವರೂ ಕೆಳಗಿನ ವಿಷಯದಲ್ಲಿ ಚೆನ್ನಾಗಿ ಲಕ್ಷವಿಡಬೇಕಾಗಿ ಆಗ್ರಹ ಪೂರ್ವಕ ಕೋರಿಕೆ

ಉಪವಾಸ

ಉಪ ಸಮೀಪೇ ಯೋ ನಾಸಃ ಜೀವಾತ್ಮಪರಮಾತ್ಮನೋ, ।
ಉಪವಾಸಃ ಸ ವಿಜ್ಞೇಯ ॥
(ವರಾಹೋಪನಿಷತ್)

ಉಪ—ಪರಮಾತ್ಮನ ಸಮೀಪದಲ್ಲಿ ನಾಸ ವಾಸವು ಉಪವಾಸ ಎಂಬ ಶಬ್ದದ ವ್ಯುತ್ಪತ್ತಿಯು ನಿವ್ವಣವಾಗುತ್ತದೆ ಸರ್ವಭೋಗಗಳನ್ನು ದೂರಮಾಡಿ ಪರಮಾತ್ಮನ ಧ್ಯಾನ ಮತ್ತು ಜಪಸತ್ಕಥಾಶ್ರವಣಾದಿಗಳಲ್ಲಿ ಮನಸ್ಸು ನಿಟ್ಟು ಕಾಲವನ್ನು ಕಳೆಯುವುದೇ ಉಪವಾಸವು ಕೆಲವು ಗ್ರಂಥಗಳಲ್ಲಿ 'ಉಪವಾಸ" ಶಬ್ದಕ್ಕೆ ಆಹಾರದ ಬಿಡು ಗಡೆಯೆಂಬು ಸ್ಪಷ್ಟವಾಗಿ ಕೇಳಿಬರುತ್ತದೆ "ಆಹಾರ ನಿವೃತ್ತಿರುಪವಾಸ " ನಿರಾಹಾರದಿಂದಿರುವುದೇ " ಉಪ ವಾಸ " ವೆನಿಸುವುದು

ನಾವು ಪರಮಾತ್ಮನ ಸಮೀಪದಲ್ಲಿ ವಾಸನೆಯಾಡುವ ದಾದರೆ ಅಂದರೆ ಜೀವಾತ್ಮನನ್ನು ಪರಮಾತ್ಮನ ಸಮೀಪದಲ್ಲಿರಿಸುವದಾದರೆ ಸೂಕ್ಷ್ಮ ಮತ್ತು ಸ್ಥೂಲವಾದ ಆಹಾರವು ಸ್ವಾಭಾವಿಕವಾಗಿ ನಾಶವನ್ನು ಹೊಂದುತ್ತದೆ ಆದುದರಿಂದ " ಉಪವಾಸ" ಎಂಬ ಶಬ್ದವು ಆಹಾರ ನಿವೃತ್ತಿಯೆಂಬ ಅರ್ಥವನ್ನು ತೋರಿಸುತ್ತದೆ ಒಟ್ಟಿನ ವೇಲೆ ಎಲ್ಲರಿಗೂ ಸುಲಭವಾಗಿ ತಿಳಿಯಬೇಕಾದ ಅರ್ಥ ವೆಂದರೆ ನಾವು ಚತ್ತುಬರಿಯುವ ಕೆಲಸವನ್ನಾಗಲೀ ಅಥವಾ ಬೇರೆ ಯಾವುದಾದರೊಂದು ಕೆಲಸವನ್ನಾಗಲೀ ಲಕ್ಷ್ಯಗೊಟ್ಟು ಮಾಡಲಿಕ್ಕೆ ಹತ್ತಿದರೆ ನಮ್ಮ ಮನಸ್ಸು ಆಹಾರದ ಕಡೆಗೆ ಎಳೆಸುವದಿಲ್ಲವು ಇದು ಸರ್ವ ನುಭವಸಿದ್ಧವಾಗಿದೆ ಆದರಂತೆಯೇ ನಮ್ಮ ಮನಸ್ಸನ್ನು ನಾವು ವಿಶಚಿತ್ತದಿಂದ ಪರಮಾತ್ಮನಲ್ಲಿರಿಸಿದ್ದಾದರೆ, ಆಹಾರ ಮೊದಲಾದವುಗಳು ಜಾನಾಗಿಯೇ ನುರುಳು ಹೋಗುತ್ತವೆ ಶಿವರಾತ್ರಿಯದಿವಸ ಯಥೇಚ್ಛವಾಗಿ ಸೇವಿಸುವದರಿಂದ ಅನ್ನವಲ್ಲಿದ್ದ ತಾಮಸಗುಣದಿಂದ ಮನುಷ್ಯನಿಗೆ ನಿದ್ರೆಯು ಬರುವದು ಸಹಜವಾಗಿದೆ ಈ ಅವಸ್ಥೆಯಲ್ಲಿ ಎಷ್ಟು ಜಪಗಳನ್ನು ಮಾಡಿದರೂ ತಪಸ್ಸನ್ನಾಚರಿಸಿದರೂ ಬೂದಿಯಲ್ಲಿ ಹೋಮಮಾಡಿದಂತೆ ಯೇ ಸರಿ! ಆದ್ದರಿಂದ ಮಹಾಶಿವರಾತ್ರಿಯದಿವಸ ಉಪ ವಾಸವನ್ನು ಮಾತಿ ಕೇವಲ ಶಿವನಪೂಜೆಯಲ್ಲಿಯೇ ಕಾಲ ವನ್ನು ಕಳೆದ ಸರ್ವರೂ ಧನ್ಯರಾಗಬೇಕು

ಮದ್ರಾಸ್ ಸಂಸ್ಕೃತ ಕಾಲೇಜಿನಲ್ಲಿ ಮೈಸೂರು ದಿವಾನರಾಗಿರುವ

ಸರ್. ಮಿರ್ಜಾರವರ ಅಮೂಲ್ಯ ಭಾಷಣ.

ಈ ಸಂಸ್ಕೃತ ಮಹಾ ಪಾಠಕಾಲೆಯನ್ನು ಸ್ಥಾಪಿಸಿದ ಮಹಾಶಯರ ಉದಾರಾದನ್ನ ಸ್ಮರಿಸಿ ಗೌರವ ತೋರಿಸುವ ಇಂದಿನ ಉತ್ಸವದಲ್ಲಿ ನಿಮ್ಮೊಡನೆ ಸೇರಲು ನನ್ನನ್ನು ಆಹ್ವಾನಿಸಿರುವುದಕ್ಕಾಗಿ ನಾನು ಶ್ರೀಮಾನ್ ಬಾಲಸುಬ್ರಹ್ಮಣ್ಯ ಅಯ್ಯರವರಿಗೆ ಬಹಳ ಕೃತಜ್ಞನಾಗಿದ್ದೇನೆ

ಈ ಸಂಸ್ಕೃತ ಮಹಾಪಾಠಶಾಲೆಯ ಸ್ಥಾಪಕರಾದ ಶ್ರೀಮಾನ್ ವಿ ಕೃಷ್ಣಸ್ವಾಮಿ ಅಯ್ಯರವರ ದೊಡ್ಡ ವಕೀಲರಾಗಿದ್ದರು, ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಶ್ರೇಷ್ಠ ಪಾಂಡಿತ್ಯವುಳ್ಳವರಾಗಿದ್ದರು ಅವರ ಜೀವಂತ ರಾಗಿದ್ದಾಗ್ಗೆ ಎಷ್ಟು ಗಣ್ಯವಾದ ರೀತಿಯಲ್ಲಿ ಭರತ ಎಂಡದ ರಾಜಕೀಯ ಜೀವನ ಕ್ಷೇತ್ರದಲ್ಲಿ ಭಾಗಿಗಳಾಗಿ ಕೆಲಸ ಮಾಡಿದರೆಂಬುದನ್ನು ಸಾರ್ವಲೌ ಮಿಟ್ಟೋ ಸುಧಾರಣೆಗಳ ಮೇರೆಗೆ ಮದರಾಸ್ ಗವರ್ನರವರ ಮಂತ್ರಾಲೋಚನಾ ಸಭೆಯ ಸದಸ್ಯರಾಗಿ ಕೊಂಚ ಕಾಲವೇ ಕೆಲಸಮಾಡಿದರೂ ಎಷ್ಟು ಯಶಸ್ವಿಯಾದ ರೀತಿಯಲ್ಲಿ ಅವರು ಕೆಲಸ ಮಾಡಿದರೆಂಬುದನ್ನೂ ನಾನೆ ಒಪ್ಪಿಸಿ ಅವರ ಸದ್ಗುಣಗಳನ್ನೂವರ್ತು ಪಾಂಡಿತ್ಯವನ್ನೂ ನೆನೆಗಿಂಡಲೂ ಹೆಚ್ಚಿಗೆ ಬಲ್ಲವರಾಗಿ ನಿನಗಿಂತಲೂ ಹೆಚ್ಚಿನ ಅಧಿಕ ರ ವ ಣಿ ಯ ಂದ ಮಾತನಾಡಬಹುದಾದವರು ಅನೇಕರು ಈ ಸಭೆಯಲ್ಲಿದ್ದಾರೆಂಬುದರಲ್ಲಿ ಸಂದೇಹವಿಲ್ಲ ಆದಾಗ್ಯೂ ಶ್ರೀಮಾನ್ ಕೃಷ್ಣಸ್ವಾಮಿ ಅಯ್ಯರವರು ಎಂಥ ಮಹನೀಯರೆಂಬ ವಿಷಯವಲ್ಲಿಯೂ ನಮ್ಮ ಅನಿಸಿಕೆಯು ದಯಾಮಯರಾದ ದಾನಶೀಲರೆಂಬ ವಿಷಯದಲ್ಲಿಯೂ ನಾನು ಅನೇಕ ಸಂಗತಿಗಳನ್ನು ಕೇಳಿದ್ದೇನೆ ಅದರ ಆಧಾರದ ಮೇಲೆ ಭಾಷಣಮಾಡಿ ಅವರಲ್ಲಿ ಗೌರವ ತೋರುವ ಸಾಹಸದಲ್ಲಿ ತೊಡಗಿದ್ದೇನೆ

ಅವರು ಸಮಾಜಕ್ಕೆ ಮಾಡಿದ ಉಪಕಾರಗಳಲ್ಲಿ ಈ ಸಂಸ್ಕೃತ ಮಹಾಪಾಠಶಾಲೆಯ ಸ್ಥಾಪನೆಯೂ ಒಂದು ಇಲ್ಲಿ ಪ್ರಾಚೀನ ಸಂಪ್ರದಾಯಕ್ಕೆನುಸಾರವಾದ ವಿಧಾನದಲ್ಲಿ ಸಂಸ್ಕೃತ ವಿದ್ಯಾಭ್ಯಾಸವು ನಡೆಯುತ್ತಿದೆ ಪ್ರಮುಖ ತರದ ಪಂಡಿತ ಶ್ರೇಷ್ಠರು ಅಧ್ಯಾಪಕರಾಗಿದ್ದಾರೆ ಹೀಗೆಗೆ ಈ ಬಗೆಯ ಪಂಡಿತರ ಸಂಖ್ಯೆಯು ಬಹಳವೆಂಬ ಕಡಮೆಯಾಗುತ್ತಿರುವುದು ವಿಷಾದಕರವಾಗಿದೆ

ಹಿಂದೂ ಸಮಾಜದಲ್ಲಿ ಸಂಸ್ಕೃತ ಭಾಷೆಗೆ ಅಸಾಧಾರಣವಾದ ಗೌರವ ಸ್ಥಾನವಿರುವ ಅಂಶವನ್ನು ಕುರಿತು ನಾನು ವಿಶದವಾಗಿ ಪ್ರಸ್ತಾಪಿಸಬೇಕಾದ ಅವಶ್ಯಕತೆ ಯೇನೂ ಇಲ್ಲ ಅವರ ವಿದ್ಯೆ ಬೌದ್ಧಿಸಿಮೆಯಲ್ಲಿ ಮತ್ತು ಮತಧರ್ಮಾನುಷ್ಠಾನ ಸಂಬಂಧದಲ್ಲಿ ಸಹ ಸಂಸ್ಕೃತ ಭಾಷೆಗೆಷ್ಟು ಶ್ರೇಷ್ಠವಾದ ಸ್ಥಾನವಿದೆಯೆಂಬ ವಿಷಯವನ್ನು ಕುರಿತೂ ನಾನು ವಿಶದವಾಗಿ ಪ್ರಸ್ತಾಪಿಸಬೇಕಾದ ಅವಶ್ಯಕತೆಯಿಲ್ಲ

ಸಂಸ್ಕೃತ ಭಾಷೆಯು ಮೃತಭಾಷೆಯೆಂಬುದೊಂದು ಹೇಳಿಕೆಯೂ ಉಂಟು ಅದು ಮೃತಭಾಷೆಯೆಂಬುದು ಒಂದು ದೃಷ್ಟಿಯಿಂದ ಮಾತ್ರ ನಿಜ, ಅದು ಜನಗಳು ಮಾತನಾಡುವ ಭಾಷೆಯಾಗಿ ಬಳಕೆಯಲ್ಲಿಲ್ಲವೆಂಬ ದೃಷ್ಟಿಯಿಂದ ಮಾತ್ರವೇ ಅದು ನಿಜ. ಅದಕ್ಕಿಂತಲೂ ಶ್ರೇಷ್ಠವೂ ಸಾರವರವೂ ಆದ ದೃಷ್ಟಿಯಿಂದ ಎಂದಿದೆ, ಪ್ರಭಾವಶಾಲಿಯಾಗಿರುವ ದೃಷ್ಟಿಯಿಂದ ಇಂದಿಗೂ ಸಚೇತನವಾಗಿ ಸತ್ಪ್ರಯುಕ್ತವಾಗಿಯೇ ಇರುವ ಭಾಷೆ. ಏಕೆಂದರೆ, ಇಂದಿಗೂ ಕೂಡ ಬಳಕೆಯಲ್ಲಿರುವ ಭಾರತೀಯ ಭಾಷೆಗಳಲ್ಲಿ ಅನೇಕ ಭಾಷೆಗಳು ಸಂಸ್ಕೃತ ಭಾಷೆಯ ಅಗಾಧವಾದ ಸಾಹಿತ್ಯ ಭಂಡಾರದಿಂದ ಈಗಲೂ ಪೋಷಿಸಲ್ಪಡಬೇಕಾಗಿರುವುದಿಲ್ಲವೆ? ಅನೇಕ ಕೋಟಿ ಜನ ಹಿಂದುಗಳಿಗೆ ಪ್ರಪಂಚದ ಯಾವ ಸಾಹಿತ್ಯದಲ್ಲಿಯೂ ಲಭಿಸದ ಪ್ರಶಸ್ತವಾದ ಭಾವಗಳು-ದೂರ ಉದಾತ್ತವಾದ ಧ್ಯೇಯ ಗಳಿಂದಲೂ ಸಂಸ್ಕೃತ ಭಾಷೆಯು ಸ್ಫೂರ್ತಿಯನ್ನೆಬ್ಬಿಸುವುದಿಲ್ಲವೆ? ಸನಾತನ ಧರ್ಮವು ಉಳಿದಿರುವವರೆಗೂ ಸಂಸ್ಕೃತ ಭಾಷೆಯು ಅದೇ ರೀತಿ ಸ್ಫೂರ್ತಿಯನ್ನೆಬ್ಬಿಸುವುದಿಲ್ಲವೆ? ಸಂಸ್ಕೃತ ಸಾಹಿತ್ಯ ಭಂಡಾರವು ಅಪರಿಮಿತವೆನಿಸಿ ಅಗಾಧವಾಗಿದೆ ಹೆಚ್ಚು ಹೆಚ್ಚು ಜನರು ಸಂಸ್ಕೃತ ಸಾಹಿತ್ಯವನ್ನು ವ್ಯಾಸಂಗಮಾಡಿ ತಮ್ಮ ಜೀವನಕ್ಕೆ ಸಂಸ್ಕಾರವನ್ನು ತಂದುಕೊಳ್ಳುವುದು ಅವಶ್ಯಕವೆಂದು ಹೇಳಬಹುದಾಗಿದೆ

ಈಗ ಭರತಖಂಡದಲ್ಲಿ ಸಂಸ್ಕೃತ ವ್ಯಾಸಂಗವು ಪರಿಸ್ಥಿತಿಯಾಗಿ ಭಿನ್ನಭಿನ್ನವಾದ ಎರಡು ವಿಧಾನಗಳಲ್ಲಿ ನಡೆಯುತ್ತಿದೆ ಮೊದಲನೆಯದಾಗಿ, ಶ್ರೀಮಾನ್ ಕೃಷ್ಣಸ್ವಾಮಿ ಅಯ್ಯರವರು ಸ್ಥಾಪಿಸಿರುವ ಈ ಮಹಾಪಾಠಶಾಲೆಯಂತಿರುವ ಪಾಠಶಾಲೆಗಳದೇ ಒಂದು ಗುಂಪು. ಇವುಗಳಲ್ಲಿ ಪ್ರಾಚೀನ ಸಂಪ್ರದಾಯಕ್ಕನುಸಾರವಾಗಿ ಸಂಸ್ಕೃತ ವ್ಯಾಸಂಗವು ನಡೆಯುತ್ತಿದೆ, ಆದರೆ ಅದನ್ನು ಪೂರ್ತಿಗೊಳಿಸಿದ ಪಂಡಿತರಿಗೆ ಉದ್ಯೋಗಗಳು ದೊರೆಯುವ ಅವಕಾಶಗಳು ಪರಿಮಿತವಾಗಿವೆ. ಎರಡನೆಯದಾಗಿ, ನಮ್ಮ ಸ್ಕೂಲುಗಳಲ್ಲಿ ತುಸು ಕಾಲೇಜುಗಳಲ್ಲಿ ಸಹ ಸಂಸ್ಕೃತ ವ್ಯಾಸಂಗವು ನಡೆಯುತ್ತಿದೆ ಅಲ್ಲಿ ಬಹುಕ ಭಾಷೆಗಳ ಗುಂಪಿನ ಇಂಡಿಕ್ ಭಾಷೆಗಳಲ್ಲಿ ಅರಿಸಿಕೊಂಡು ದ್ವಿತೀಯ ಭಾಷೆಯಾಗಿ ಸಂಸ್ಕೃತವನ್ನು ವ್ಯಾಸಂಗ ಮಾಡಲು ಅವಕಾಶವಿದೆ, ಅಲ್ಲದೆ, ನಿರ್ಬಂಧವಾದ ವ್ಯಾಸಂಗ ವಿಷಯಗಳಲ್ಲೊಂದಾಗಿ ಆರಿಸಿಕೊಂಡು ಸಂಸ್ಕೃತ ಭಾಷೆಯನ್ನು ವ್ಯಾಸಂಗ ಮಾಡಲೂ ಅವಕಾಶವಿದೆ ವಿಶ್ವವಿದ್ಯಾಲಯದ ವ್ಯಾಸಂಗದಲ್ಲಿ ಸಂಸ್ಕೃತವನ್ನು ತೆಗೆದುಕೊಳ್ಳತಕ್ಕವರಲ್ಲಿ ಕೆಲವರೇನೋ ಸಂಸ್ಕೃತ ಭಾಷಾ ಪ್ರವೀಣರಾಗಿ ಹೈಸ್ಕೂಲುಗಳ ಉಪಾಧ್ಯಾಯರು ಗಳೂ ಆಧ್ಯಾ ವಿಶ್ವವಿದ್ಯಾಲಯದಲ್ಲಿ ಲೆಕ್ಚರರುಗಳೂ ಮತ್ತು ಪ್ರೊಫೆಸರುಗಳೂ ಆಗಬಹುದಾಗಿದೆ ಆದರೆ, ಅವರುಗಳ ಸಂಖ್ಯೆಯು ಪರಿಮಿತವಾಗಿಯೇ ಇರಬೇಕಾಗುತ್ತದೆಂಬುದೂ ಸ್ಪಷ್ಟವಾಗಿಯೇ ಇದೆ. ಅವರುಗಳನ್ನು ಬಿಟ್ಟು ಉಳಿದ ಬಹು ಜನರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಕ್ಕೆ ಎಷ್ಟು ಬೇಕೋ ಅಷ್ಟು ಮಟ್ಟಿಗೆ ಪರಿಶ್ರಮವನ್ನು ಪಡೆದರೆ ಸಾಕೆಂಬ ದೃಷ್ಟಿಯಿಂದ ಮಾತ್ರವೇ ಸಂಸ್ಕೃತ ಭಾಷೆಯನ್ನು ವ್ಯಾಸಂಗಮಾಡುತ್ತಾರೆ ದ್ವಿತೀಯ ಭಾಷೆಯಾಗಿ ಆರಿಸಿಕೊಂಡು ಸಂಸ್ಕೃತಭಾಷೆಯನ್ನು ವ್ಯಾಸಂಗ ಮಾಡುವವರ ಸಂಖ್ಯೆಯು ಸ್ವಲ್ಪ ವಷ್ಟಿಗೆ ಹೆಚ್ಚಾಗಿದೆಯೆಂದು ನಾನು ನಂಬಿದ್ದೇನೆ ಆದರೆ "ಪಾಸ್ ಡಿಗ್ರಿ ಪ್ರಶಸ್ತಿಗಾಗಿಯಷ್ಟಾ "ಆನರ್ಸ್ ಡಿಗ್ರಿ" ಪ್ರಶಸ್ತಿಗಾಗಿ ಇಟ್ಟಿಗೆ ವಿಷಯಗಳಲ್ಲೊಂದಾಗಿ ಸಂಸ್ಕೃತವನ್ನು ಆರಿಸಿಕೊಂಡು ವ್ಯಾಸಗ ಮಾಡತಕ್ಕವರ ಸಂಖ್ಯೆಯು ಅತ್ಯಂತ ಕಡಿಮೆ

ಆದರೆ, ಈಗಿರುವಂತೆ ನಾನಾ ಪ್ರಥಾ ಪರೀಕ್ಷೆಗಳಿಗೂ ವಚ್ಛಿಕ ವಿಷಯಗಳಲ್ಲೊಂದಾಗಿ ಸಂಸ್ಕೃತವನ್ನು ತೆಗೆದು ಕೊಳ್ಳಬಹುದೆಂದು ಈಗಿರುವ ಸೌಕರ್ಯವನ್ನು ತೆಗೆದು ಹಾಕುವುದಾಗಿ "ಬಬ್ಲಿಕ್ ಸರ್ವಿಸ್ ಕಮಿಷನ್" ಸಭೆಯವರು ತೀರ್ಮಾನಿಸಿದ ಪಕ್ಷದಲ್ಲಿ ಇಪ್ಪ ಜನ ದರೂ ಸಂಸ್ಕೃತವನ್ನು ಆರಿಸಿಕೊಂಡು ವ್ಯಾಸಂಗ ಮಾಡಿಯಾರೇ—ಎಂಬುದು ನನಗೇನೋ ಸಂದೇಹ ವಾಗಿದೆ

ಆದಕಾರಣ ಸರಸ್ವರ ವಿರುದ್ಧ ಪರಿಣಾಮವುಳ್ಳ ಈಗಿನ ಸನ್ನಿವೇಶಗಳೆರಡನ್ನೂ ಪರಿಗಣಿಸಿ ಅನುಕೂಲವುಂಟಾಗುವಂತೆ ಕೆಲಸ ನಡೆಯಿಸಬೇಕಾಗುತ್ತದೆ ಮೊದಲಿನಂತೆ ದಾಗಿ ಜನಾಂಗದ ಜನಜೀವನದಲ್ಲಿ ಸಂಸ್ಕೃತಕ್ಕೆರಬೇಕಾದ ಮುಖ್ಯಸ್ಥಾನವು ದೊರೆಯಬೇಕಾದರೆ ಸಂಸ್ಕೃತ ಭಾಷಾ ವ್ಯಾಸಂಗ ಮಾಡತಕ್ಕವರ ಸಂಖ್ಯೆಯು ಹೆಚ್ಚು ಬೇಕು ಈಗ ವಿಶ್ವವಿದ್ಯಾಲಯಗಳಲ್ಲಾಗಲಿ ಅಥವಾ ಪಾಠಶಾಲೆಗಳಲ್ಲಾಗಲಿ ಸಂಸ್ಕೃತ ಭಾಷೆಯನ್ನು ಶ್ರೇಷ್ಠ ರೀತಿಯಲ್ಲಿ ವ್ಯಾಸಂಗಮಾಡತಕ್ಕವರ ಸಂಖ್ಯೆಯು ಕಡಿಮೆ ಯಾಗಿರುವುದಷ್ಟಲ್ಲದೆ ಇಳಮಟ್ಟುವಾಗಿಯೂ ಇದೆ ಆದುದರಿಂದ, ಅವರ ಸಂಖ್ಯೆಯು ಹೆಚ್ಚುವಂತೆ ಮಾಡುವ ದೊಡ್ಡ ಜವಾಬ್ದಾರಿಯು ಹಿಂದೂ ಸಮಾಜದ ಮುಂದಾ ಳಿಗೆ ಬೀಳಿದೆ, ವಿಶೇಷವಾಗಿ ಸಂಸ್ಕೃತ ಭಾಷಾ ಪ್ರೇಮವನ್ನೂ ಕಾರ್ಯಕ ತೋರಿಸುವ ಸಾಧನ ಸಂಪತ್ತಿಗಳನ್ನು ಪಡೆದಿರುವ ಪುಣ್ಯಾತ್ಮರ ಮೇಲೆ ಆ ಜವಾಬ್ದಾರಿಯಿದೆ ಈ ರೀತಿ ಸಂಸ್ಕೃತ ವ್ಯಾಸಂಗವನ್ನು ಹೆಚ್ಚಿಸಿ ಅನುಕೂಲಪಡಿಸುವ ವಿಷಯದಲ್ಲಿ ನಾನಾ ಮಹಿಗಳ ಮೇಲೆ ವಿಶೇಷ ರೀತಿಯ ಜವಾಬ್ದಾರಿಯಿದೆ ಸಂಸ್ಕೃತ ಭಾಷೆಯ ವ್ಯಾಸಂಗವನ್ನು ಹೆಚ್ಚಿಸುವುದಕ್ಕಾಗಿ ಮಠಗಳಿಂದ ಬಹಳ ದ್ರವ್ಯವು ವೆಚ್ಚವಾಗುತ್ತಿದೆಯೆಂದು ನಾನು ನಂಬಿದ್ದೇನೆ ಅದರ ಇನ್ನೂ ಹೆಚ್ಚು ಹಣವು ವೆಚ್ಚವಾಗಲಿಅಂಕೂಲಿಸಲಿ ನಂತೆ ಆಯಾ ದ್ರವ್ಯಾಯ ಕೂಲತೆಯನ್ನು ಮತ್ತಷ್ಟು ಉತ್ತಮಪಡಿಸುವುದು ಅವಶ್ಯಕ ಹಿಂದುಗಳಲ್ಲಿ ಸಂಸ್ಕೃತರೂ ದೇಶಾಭಿಮಾನವುಳ್ಳವರೂ ಇದಕ್ಕೆ ಗಮನಕೊಡಬೇಕಾದುದು ಅವಶ್ಯಕ

ಯೂರೋಪು ಖಂಡದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳು ಅಲ್ಲಿಯ ಜನಜೀವನಕ್ಕೆ ಸಂಬಂಧವಿಲ್ಲದೆಯೇ ಉಳಿದಿರುವಂತೆ, ನಮ್ಮ ದೇಶದಲ್ಲಿ ಸಂಸ್ಕೃತ ಭಾಷೆಯು ಜನಜೀವನಕ್ಕೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಉಳಿದು ಹೋಗುವಂತಾಗುವ ಸನ್ನಿವೇಶವುಂಟಾಗುವಾದರೆ ಅದನ್ನು ಕುರಿತು ಉದ್ವೇಗಗೊಳ್ಳದೆ ಶಾಂತಚಿತ್ತರಾಗಿರುವುದು ಯಾರಿಂದಲೂ ಸಾಧ್ಯವಿಲ್ಲ ಆದರೆ ಆ ಬಗೆಯ ಸನ್ನಿವೇಶವುಂಟಾಗುವ ಸಂಭವವಿಲ್ಲದಿರುವುದೊಂದು ಸುಯೋಗ ಆ ಬಗೆಯ ಸನ್ನಿವೇಶವೇನಾದರೂ ಉಂಟಾದಲ್ಲಿ ಭಾರತೀಯರ ಜೀವನದ ಒಂದು ತೇಜಸ್ಸೇ ಹೋದಂತೆ ಪ್ರಪಂಚದ ಅಲೋಚನಾವೃತ ಭಂಡಾರದಲ್ಲಿ ಹಿಂದೂ ಸಂಸ್ಕೃತಿಗೂ ಮಾನ್ಯಸ್ಥಾನ ದೊರೆತಿರುವುದಕ್ಕೆ ಕಾರಣವಾಗಿರುವ ವೈಶಿಷ್ಟ್ಯದಂಶವೂ ಸಲ್ಲುಕ್ಷಣಗಳೇ ಅಗ್ಗೆ ಭರತಖಂಡದ ಜನಜೀವನದಿಂದ ಮಾಯವಾಗು ತ್ತವೆ ಹಾಗಾಗುವುದಾದರೆ ಭರತಖಂಡಕ್ಕೂ ಮತ್ತು ಒಟ್ಟು ಪ್ರಪಂಚಕ್ಕೂ ದೊಡ್ಡ ಅವಘಡಕಾರಿ, ದೊಡ್ಡ ನಷ್ಟ ಆದಕಾರಣ ಹಿಂದೆ ದೀರ್ಘದೃಷ್ಟಿಯಿಂದ ಕೂಡಿ ಸಂಸ್ಕೃತ ವ್ಯಾಸಂಗಕ್ಕಾಗಿ ಈ ಮಹಾಪಾಠಾಲೆಯ ಸ್ಥಾಪನೆಯಾದಂತೆ ಇತರ ಪಾಠಶಾಲೆಗಳನ್ನೂ ಸ್ಥಾಪಿಸಿಕೊಟ್ಟ ಮಹಾಶಯರುಗಳ ಉಪಕಾರವನ್ನು ನಾವು ವಿಶೇಷ ಗೌರವದಿಂದಲೂ ಕೃತಜ್ಞತೆಯಿಂದಲೂ ಸ್ಮರಿಸುವುದು ಯಕ್ತವಾಗಿದೆ ಆ ಉಪಕಾರಿಗಳಲ್ಲಿ ಈ ಮಹಾಪಾಠಶಾಲೆಯ ಸ್ಥಾಪಕರೂ ಸಹ ಒಬ್ಬರು

ನಮ್ಮ ಮೈಸೂರು ಸಂಸ್ಥಾನದಲ್ಲಿ ಹಿಂದಿನಿಂದಲೂ ಸಹ, ಸರ್ಕಾರವರು ಸಂಸ್ಕೃತ ಭಾಷೆಯು ಉಮೂಲ್ಯ ವಾದುದೆಂಬುವನ್ನು ಮನಗಂಡು ಅದರ ವಿಚಾರಕ್ಕೆ ವಿಶೇಷ ರೀತಿಯಲ್ಲಿ ಗಮನ ಕೊಟ್ಟುಕೊಂಡ ಒಂದಿದ್ದಾರೆ ಶ್ರೀಮನ್ಮಹಾರಾಜರವರು ಸಂಸ್ಕೃತ ಭಾಷಾ ಪಾರಂಗತರು, ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಅಭಿಮಾನ ವಿರಕ್ಕವರು ಮೈಸೂರು ಬೆಂಗಳೂರು ನಗರಗಳಲ್ಲಿ ಪೂರ್ಣ ಸಾಧನಸಂಪತ್ತಿಗಳುಳ್ಳ ಮತ್ತು ಉದ್ದಾಮ ಪಂಡಿತರುಗಳು ಅಧ್ಯಾಪಕರಾಗಿರುವ ಎರಡು ಸಂಸ್ಕೃತ ಮಹಾಪಾಠಶಾಲೆಗಳನ್ನು ಸ್ಥಾಪಿಸಿ ಸಂಸ್ಕೃತ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಪರೀಕ್ಷೆಗಳನ್ನು ಏರ್ಪಡಿಸಿ ಪ್ರಶಸ್ತಿಗಳನ್ನು ಕೊಡುವ ಏರ್ಪಾಟನ್ನು ಸಹ ಮಾಡಿದ್ದಾರೆ ಈ ಎಲ್ಲ ಕಾರಣಗಳಿಂದ ಸಂಸ್ಕೃತ ಭಾಷೆಯ ವ್ಯಾಸಂಗಕ್ಕೆ ಮೈಸೂರು ಸಂಸ್ಥಾನವು ಒಂದು ಪ್ರಶಸ್ತವಾದ ಸ್ಥಳವಾಗಿದೆ ಈ ಮಹಾಪಾಠಶಾಲೆಯ ಅಧಿಕಾರಿಗಳು ಮೈಸೂರು ಸಂಸ್ಥಾನದಲ್ಲಿ ಸಂಸ್ಕೃತ ವ್ಯಾಸಂಗವನ್ನು ಹೆಚ್ಚಿಸಲು ಮಾಡಿರುವ ಏರ್ಪಾಟುಗಳನ್ನು ಕುರಿತು ಸಂಪೂರ್ಣವಾಗಿ ತಿಳಿದುಕೊಂಡು ಅಲ್ಲಿಯ ಪದ್ಧತಿಗಳನ್ನು ಅನುಸರಿಸಿ ಕೆಲಸ ಮಾಡಿದರೆ ಒಳ್ಳೆಯದಾಗುವುದೆಂದು ನಾನು ಸೂಚಿಸುತ್ತೇನೆ

ಸಂಸ್ಕೃತ ಭಾಷೆಯ ವ್ಯಾಸಂಗವನ್ನು ಹೆಚ್ಚಿಸಲು ಮಾಡಿರುವ ಏರ್ಪಾಟುಗಳಲ್ಲಿ ಒಂದು ಮುಖ್ಯವಾದ ಏರ್ಪಾಟು ಸಂಸ್ಕೃತ ಭಾಷೆಯಲ್ಲಿ ಪರೀಕ್ಷೆಗಳನ್ನು ಏರ್ಪಡಿಸಿ ಪ್ರಶಸ್ತಿಗಳನ್ನು ಕೊಡುವುದು ಈ ಏರ್ಪಾಟಿನಿಂದ ಸಂಸ್ಕೃತ ಭಾಷೆಯಲ್ಲಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಉದ್ಯೋಗಗಳು ದೊರೆಯುವಂತೆ ಮಾಡಿದರೆ ಸಂಸ್ಕೃತ ವ್ಯಾಸಂಗವು ಹೆಚ್ಚುವುದೆಂಬುದು ನನ್ನ ಅಭಿಪ್ರಾಯ ಈ ಬಗೆಯ ಏರ್ಪಾಟುಗಳಿಂದ ಸಂಸ್ಕೃತ ಭಾಷೆಯ ವ್ಯಾಸಂಗವು ಹೆಚ್ಚಿದರೆ ಅದರಿಂದ ಸಂಸ್ಕೃತ ಭಾಷೆಯ ಅಗಾಧವಾದ ಸಾಹಿತ್ಯ ಭಂಡಾರವು ಹೆಚ್ಚು ಹೆಚ್ಚು ಜನರಿಗೆ ಉಪಯೋಗವಾಗುವುದಲ್ಲವೆ? ಸಂಸ್ಕೃತ ಭಾಷೆಯ ಅಗಾಧವಾದ ಸಾಹಿತ್ಯ ಭಂಡಾರದಿಂದ ಈಗಲೂ ಪೋಷಿಸಲ್ಪಡಬೇಕಾಗಿರುವುದಿಲ್ಲವೆ? ಅನೇಕ ಕೋಟಿ ಜನ ಹಿಂದುಗಳಿಗೆ ಪ್ರಪಂಚದ ಯಾವ ಸಾಹಿತ್ಯದಲ್ಲಿಯೂ ಲಭಿಸದ ಪ್ರಶಸ್ತವಾದ ಭಾವಗಳು-ದೂರ ಉದಾತ್ತವಾದ ಧ್ಯೇಯ ಗಳಿಂದಲೂ ಸಂಸ್ಕೃತ ಭಾಷೆಯು ಸ್ಫೂರ್ತಿಯನ್ನೆಬ್ಬಿಸುವುದಿಲ್ಲವೆ? ಸನಾತನ ಧರ್ಮವು ಉಳಿದಿರುವವರೆಗೂ ಸಂಸ್ಕೃತ ಭಾಷೆಯು ಅದೇ ರೀತಿ ಸ್ಫೂರ್ತಿಯನ್ನೆಬ್ಬಿಸುವುದಿಲ್ಲವೆ? ಸಂಸ್ಕೃತ ಸಾಹಿತ್ಯ ಭಂಡಾರವು ಅಪರಿಮಿತವೆನಿಸಿ ಅಗಾಧವಾಗಿದೆ ಹೆಚ್ಚು ಹೆಚ್ಚು ಜನರು ಸಂಸ್ಕೃತ ಸಾಹಿತ್ಯವನ್ನು ವ್ಯಾಸಂಗಮಾಡಿ ತಮ್ಮ ಜೀವನಕ್ಕೆ ಸಂಸ್ಕಾರವನ್ನು ತಂದುಕೊಳ್ಳುವುದು ಅವಶ್ಯಕವೆಂದು ಹೇಳಬಹುದಾಗಿದೆ

ಈಗ ಭರತಖಂಡದಲ್ಲಿ ಸಂಸ್ಕೃತ ವ್ಯಾಸಂಗವು ಪರಿಸ್ಥಿತಿಯಾಗಿ ಭಿನ್ನಭಿನ್ನವಾದ ಎರಡು ವಿಧಾನಗಳಲ್ಲಿ ನಡೆಯುತ್ತಿದೆ ಮೊದಲನೆಯದಾಗಿ, ಶ್ರೀಮಾನ್ ಕೃಷ್ಣಸ್ವಾಮಿ ಅಯ್ಯರವರು ಸ್ಥಾಪಿಸಿರುವ ಈ ಮಹಾಪಾಠಶಾಲೆಯಂತಿರುವ ಪಾಠಶಾಲೆಗಳದೇ ಒಂದು ಗುಂಪು. ಇವುಗಳಲ್ಲಿ ಪ್ರಾಚೀನ ಸಂಪ್ರದಾಯಕ್ಕನುಸಾರವಾಗಿ ಸಂಸ್ಕೃತ ವ್ಯಾಸಂಗವು ನಡೆಯುತ್ತಿದೆ, ಆದರೆ ಅದನ್ನು ಪೂರ್ತಿಗೊಳಿಸಿದ ಪಂಡಿತರಿಗೆ ಉದ್ಯೋಗಗಳು ದೊರೆಯುವ ಅವಕಾಶಗಳು ಪರಿಮಿತವಾಗಿವೆ. ಎರಡನೆಯದಾಗಿ, ನಮ್ಮ ಸ್ಕೂಲುಗಳಲ್ಲಿ ತುಸು ಕಾಲೇಜುಗಳಲ್ಲಿ ಸಹ ಸಂಸ್ಕೃತ ವ್ಯಾಸಂಗವು ನಡೆಯುತ್ತಿದೆ ಅಲ್ಲಿ ಬಹುಕ ಭಾಷೆಗಳ ಗುಂಪಿನ ಇಂಡಿಕ್ ಭಾಷೆಗಳಲ್ಲಿ ಅರಿಸಿಕೊಂಡು ದ್ವಿತೀಯ ಭಾಷೆಯಾಗಿ ಸಂಸ್ಕೃತವನ್ನು ವ್ಯಾಸಂಗ ಮಾಡಲು ಅವಕಾಶವಿದೆ, ಅಲ್ಲದೆ, ನಿರ್ಬಂಧವಾದ ವ್ಯಾಸಂಗ ವಿಷಯಗಳಲ್ಲೊಂದಾಗಿ ಆರಿಸಿಕೊಂಡು ಸಂಸ್ಕೃತ ಭಾಷೆಯನ್ನು ವ್ಯಾಸಂಗ ಮಾಡಲೂ ಅವಕಾಶವಿದೆ ವಿಶ್ವವಿದ್ಯಾಲಯದ ವ್ಯಾಸಂಗದಲ್ಲಿ ಸಂಸ್ಕೃತವನ್ನು ತೆಗೆದುಕೊಳ್ಳತಕ್ಕವರಲ್ಲಿ ಕೆಲವರೇನೋ ಸಂಸ್ಕೃತ ಭಾಷಾ ಪ್ರವೀಣರಾಗಿ ಹೈಸ್ಕೂಲುಗಳ ಉಪಾಧ್ಯಾಯರು ಗಳೂ ಆಧ್ಯಾ ವಿಶ್ವವಿದ್ಯಾಲಯದಲ್ಲಿ ಲೆಕ್ಚರರುಗಳೂ ಮತ್ತು ಪ್ರೊಫೆಸರುಗಳೂ ಆಗಬಹುದಾಗಿದೆ ಆದರೆ, ಅವರುಗಳ ಸಂಖ್ಯೆಯು ಪರಿಮಿತವಾಗಿಯೇ ಇರಬೇಕಾಗುತ್ತದೆಂಬುದೂ ಸ್ಪಷ್ಟವಾಗಿಯೇ ಇದೆ. ಅವರುಗಳನ್ನು ಬಿಟ್ಟು ಉಳಿದ ಬಹು ಜನರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಕ್ಕೆ ಎಷ್ಟು ಬೇಕೋ ಅಷ್ಟು ಮಟ್ಟಿಗೆ ಪರಿಶ್ರಮವನ್ನು ಪಡೆದರೆ ಸಾಕೆಂಬ ದೃಷ್ಟಿಯಿಂದ ಮಾತ್ರವೇ ಸಂಸ್ಕೃತ ಭಾಷೆಯನ್ನು ವ್ಯಾಸಂಗಮಾಡುತ್ತಾರೆ ದ್ವಿತೀಯ ಭಾಷೆಯಾಗಿ ಆರಿಸಿಕೊಂಡು ಸಂಸ್ಕೃತಭಾಷೆಯನ್ನು ವ್ಯಾಸಂಗ ಮಾಡುವವರ ಸಂಖ್ಯೆಯು ಸ್ವಲ್ಪ ವಷ್ಟಿಗೆ ಹೆಚ್ಚಾಗಿದೆಯೆಂದು ನಾನು ನಂಬಿದ್ದೇನೆ ಆದರೆ "ಪಾಸ್ ಡಿಗ್ರಿ ಪ್ರಶಸ್ತಿಗಾಗಿಯಷ್ಟಾ "ಆನರ್

ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ.



ಬರತಖಂಡದಲ್ಲಿರುವ ಸಮಸ್ತ ವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಆಚರಿಸಿ ದಸ್ಯರಾಗಬೇಕು. ಮಕಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಹೇಶ್ವರ ಲಿಂಗಕಮತಾನುಯಾಯಿಗಳ ಮುಖ್ಯಧರ್ಮವಾಗಿದೆ. ಮತಪ್ರತಿಷ್ಠಾಪನಾಚಾರ್ಯರ ಬಗ್ಗೆ ಆಯನ್ನು ದೊಡ್ಡಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು ಆ ದಿವಸವೇ ಈ ಪೂಜ್ಯವಾದ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು!

ಸೂಚನೆ.

ಪ್ರತಿವರ್ಷದ ಪದ್ಧತಿಯನ್ನೇಗೆ ಮಹಾಶಿವರಾತ್ರಿಯ ನಿಮಿತ್ತವಾಗಿ ಮುಂದಿನ ಮಾರ್ಚ್ ೧೧ ನೆಯ ತಾರೀಖಿನ ಪತ್ರಿಕೆಯು ಹೊರಡುವುದಿಲ್ಲವೆಂಬ ವಿಷಯವನ್ನು ಚಂದಾದಾರರೆಲ್ಲರೂ ತಿಳಿಯತಕ್ಕದ್ದು.

ಸಂ.

ಯುದ್ಧವಾರ್ತೆ.

ಫಿರಲೆಂಡಿಗೆ ಅಮೇರಿಕೆಯ ಯುದ್ಧಸಾಮಗ್ರಿ!

ಫಿರಂಗಿಗಳನ್ನೂ ಮತ್ತು ಮದ್ದುಗುಂಡುಗಳನ್ನೂ ತುಂಬಿದ ಅನೇಕ ಹಡಗು ಇಷ್ಟರಲ್ಲಿಯೇ ಫಿರಲೆಂಡಿಗೆ ತಲಪಲಿದೆಯೆಂದು ತಿಳಿದುಬರುತ್ತದೆ

ಫಿನ್‌ಲೆಂಡಿನಲ್ಲಿ ರಷ್ಯದ ಆಹಾರ ಸೈನ್ಯ

ಫಿನ್‌ಲೆಂಡಿನ ಕರೇಲಿಯನ್ ಇಸ್ತ್ಮಸ್ ರಣರಂಗಕ್ಕೆ ರಷ್ಯದಿಂದ ಆಹಾರ ಸೈನ್ಯವು ಕಳುಹಿಸಲ್ಪಡುತ್ತಿರುವದಾಗಿಯೂ, ವೀಪುರಿ ರಣರಂಗದಲ್ಲಿಯೇ ಸುಮಾರು 1,75,000 ರಷ್ಯಾ ಸೈನಿಕರು ಕೂಡಿರುವ ದಾಗಿಯೂ ತಿಳಿದುಬರುತ್ತದೆ

ಬ್ರಿಟಿಷ್ ವಿಮಾನಗಳ ಧೈರ್ಯ!

ಬ್ರಿಟಿಷ್ ಆರ್ ಎ ಎಫ್ ವಿಮಾನಗಳು ಜರ್ಮನಿಯ ಮೇಲೆ ಹಾರಿಬಂದವು ಹೆಲಿಗೊಲ್ಯಾಂಡ್, ಜರ್ಮನಿಯ ಉತ್ತರತೀರ, ಪಶ್ಚಿಮಜರ್ಮನಿಯ ಒಳಪ್ರದೇಶ ಈ ಎಲ್ಲ ಕಡೆಯಲ್ಲೂ ಪರೀಕ್ಷಾರ್ಥವಾಗಿ ಹಾರಾಡಿ, ಜರ್ಮನಿಯ ಮುಖ್ಯಪಟ್ಟಣವಾದ ಬರ್ಲಿನವರೆಗೂ ಹೋಗಿದ್ದು ಎಲ್ಲ ವಿಮಾನಗಳೂ ಸುರಕ್ಷಿತವಾಗಿ ಹಿಂದಿರುಗಿದವು

ಹಡಗುಗಳ ನಾಶ

ಫೆಬ್ರವರಿ 25 ನೆಯ ತಾರೀಖಿನ ವರೆಗೆ ಶತ್ರುಗಳ ಮತ್ತು ತಾಟಸ್ಥ್ಯ ರಾಷ್ಟ್ರಗಳ ಒಟ್ಟು 496 ಹಡಗುಗಳನ್ನು ಮುಳುಗಿಸಿರುವದಾಗಿ ಜರ್ಮನಿ ಸರ್ಕಾರವು ಹೇಳಿಕೊಳ್ಳುತ್ತಿದೆ ಆದರೆ ಸಾಮಾನ್ಯ ಎಣಿಕೆಯಂತೆ ಸೆಪ್ಟೆಂಬರ 20 ನೆಯ ತಾರೀಖಿನ ವರೆಗೆ ಜರ್ಮನಿಯು 318 ಹಡಗುಗಳನ್ನು ನಾಶಮಾಡಿದೆಯೆಂದೂ, ಅವುಗಳಲ್ಲಿ 135 ಬ್ರಿಟನ್ನಿನವೆಂದೂ, 149 ತಾಟಸ್ಥ್ಯ ರಾಷ್ಟ್ರಗಳಿಗೆ ಸೇರಿದವೆಂದೂ, 14 ಫ್ರಾನ್ಸ್ ಮತ್ತು ಪೋಲೆಂಡಿನವೆಂದೂ ತಿಳಿದುಬರುತ್ತದೆ

ಫಿರಲೆಂಡಿನ ಕೋಚಪಕೀಯ ಸ್ಥಿತಿ!

ಇಲ್ಲಿಯವರೆಗೂ ಒಳಾಢ್ಯ ರಾಷ್ಟ್ರವಾದ ರಷ್ಯವನ್ನು ಧೈರ್ಯದಿಂದ ಎದುರಿಸಿ ಹಿಮ್ಮೆಟ್ಟಿಸಿದ ಫಿರಲೆಂಡಿನ ಸ್ಥಿತಿಯು ಈಗ ಚಿಂತಾಜನಕವಾಗಿದೆ. ವೀಪುರಿ ನಗರವನ್ನು ಮ್ಯಾನರ್‌ಹೀಂ ಲೈನಿನ ರಕ್ಷಣದಲ್ಲಿ ರಕ್ಷಿಸುತ್ತಿದ್ದ ಫಿನ್ನಿಷ್ ಸೈನ್ಯವು ರಷ್ಯದ ಸೈನ್ಯ ಬಾಹುಳ್ಯದಿಂದ ಹಿಮ್ಮೆಟ್ಟಬೇಕಾಯಿತು ಸೈನೇರಿಯಾ ಸಮಾಪದಲ್ಲಿ ಫಿರಲೆಂಡ್ ಸೈನಿಕರು ಧೈರ್ಯದಿಂದ ಹೋರಾಡುತ್ತಿದ್ದಾರೆ ಆದರೆ ವೀಪುರಿ ನಗರವು ರಷ್ಯನರ ಕೈಸೇರಿದರೆ, ಆ ಸೈನಿಕರಿಗೆ ಹಿಂದಿನಿಂದ ಆಪಾಯ ತಪ್ಪುವದೆಂಬ ಭೀತಿಯು-ಹುಗಿದೆ

ಮ್ಯೂನಿಚ್ ಸಭ್ಟಣದಲ್ಲಿ ಹಿಟ್ಲರರ ಭಾಷಣ.

ಯೂರೋಪಿನ ಮಜಾಯುದ್ಧವಾದ ಮೇಲೆ ವಿಶ್ವದ ನಾನಾ ದೇಶದವರು ಜರ್ಮನಿಗೆ ಛಾಟಿ ಮೋಸ ಮಾಡಿದರು. ನಮಗೊಬ್ಬರಿಗೇ ಅಲ್ಲ, ಇಟಲಿಗೂ ಮೋಸ ಮಾಡಿದರು. ಪ್ರಟಿನ್ಸಿಗೆ ಜಯವಾದರೆ ಛಾರತಕ್ಕೆ ಸ್ವಾತಂತ್ರ್ಯ ಕೊಡುವುದಾಗಿ ಮಾತುಕೊಟ್ಟು ಅನಂತರ ಛಾರತಕ್ಕೆ ಮೋಸಮಾಡಿದರು. ಅರಬರಿಗೆ ಮೋಸ ಮಾಡಿದರು ಯಿತೂದ್ಯರಿಗೂ ಕೂಡ ಸುಳ್ಳು ಹೇಳಿದರು.

ಇಂತಿಯಾದೇಶವೆಲ್ಲವೂ ಈಗ ಚೇಂಬ್ಲೈನರಿಗೆ ವಿರುದ್ಧವಾಗಿ ಹೊಡೆದಾಡುತ್ತಿದೆ ಅರಬರು ಕೂಡ ಅವರನ್ನು ಎದುರಿಸಿ ನಿಂತಿದ್ದಾರೆ ಹೀಗಿರುವಲ್ಲಿ ಜರ್ಮನಿಯು ವಿಶ್ವಹಿತ್ಪೈಷಿಯು ಬಲವಂತದಿಂದ ಅಕ್ರಮಿಸದಂತೆ ಮಾಡಲು ನಾವು ಹೊಡೆದಾಡುತ್ತಿರುವುದಾಗಿ ಚೇಂಬ್ಲೈನರು ನಟಿಸುತ್ತಿದ್ದಾರೆ. ಬ್ರಿಟಿಷರಿಗೊಬ್ಬರಿಗಾಗಿಯೇ ದೇವರು ಈ ಪ್ರಪಂಚವನ್ನು ಸೃಷ್ಟಿಸಿಲ್ಲ ಪ್ರಪಂಚದ ಮುಕ್ಯಾಲು ಛಾಗವನ್ನೆಲ್ಲ ಒಂದೇ ಒಂದು ಜನಾಂಗ ದವರು ಆಳಬೇಕೆಂಬುದು ದೇವರ ಇಚ್ಛೆಯಲ್ಲ ಅಂತರ ರಾಷ್ಟ್ರೀಯ ವಿಷಕಾರಿಯ ಫಲವಾಗಿ ನಮ್ಮಿಂದ ಕಿತ್ತು ಕೊಂಡ ಛಾಗಗಳನ್ನು ಹಿಂದಕ್ಕೆ ಕೊಡಬೇಕೆಂದು ನಾವು ಕೇಳುತ್ತೀವೆ ನಾನು ನನ್ನನ್ನೆಷ್ಟುಂಬಿರುವ ಅಂತರ ರಾಷ್ಟ್ರೀಯರ ರಾಜಕಾರಣವೇತ್ತರ ಕಡೆ ನೋಡಿದಾಗ, ಅನಾಮಧೇಯರೊಹನೆ ನಾನು ಹೊಡೆದಾಡುತ್ತಿದ್ದೇನೆಂದು ಹೇಳಬೇಕಾಗುತ್ತದೆ ಈ ಜನರು ಪ್ರಪಂಚದಲ್ಲಿ ಅತ್ಯಂತ ದೊಡ್ಡ ಸಾಮ್ರಾಜ್ಯವನ್ನು ಆಳುತ್ತಿದ್ದಾರೆ ಆದರೆ ಅವರು ತಮ್ಮ ದೇಶದಲ್ಲಿ ನಿರುದ್ಯೋಗವನ್ನು ನಿವಾರಿಸಲು ಕೂಡ ಶಕ್ತರಾಗಿಲ್ಲ

ನನ್ನನ್ನು ದ್ವೇಷಿಸುವುದಾಗಿ ಶ್ರೀ ಚರ್ಚಿಲ್ಲರು ಹೇಳುವುದಾದರೆ ಅದಕ್ಕಾಗಿ ನಾನವರನ್ನು ಅಭಿನಂದಿಸುತ್ತೇನೆ ನನ್ನನ್ನು ನಂಬಲು ಸಾಧ್ಯವಿಲ್ಲವೆಂದು ಶ್ರೀ ಚೇಂಬ್ಲೈನರು ಹೇಳಿದರೆ ಅದಕ್ಕಾಗಿ ನಾನು ಹರ್ಷಿಸುತ್ತೇನೆ ಯಾಕೆಂದರೆ, ಜರ್ಮನಿ ಜನಾಂಗಕ್ಕೆ ನಾನು ದ್ರೋಹ ಮಾಡಿದ್ದೇನೆಂದು ಬಯ್ಯಲು ಚೇಂಬ್ಲೈನರಿಗೆ ಅವಕಾಶ ಸಿಗುವುದಿಲ್ಲ ಏರ್, ಹೋರ್, ಬೆಲಿಷಾ ಮುಂತಾದ ವರು ನನ್ನನ್ನು ದಿಟ್ಟ ಮನುಷ್ಯನೆನ್ನುವುದಾದರೆ, ನಾನು ಅವರ ಮಿತ್ರವರ್ಗದಲ್ಲಿಲ್ಲವಲ್ಲಾ ಎಂದು ಹರ್ಷಿಸುತ್ತೇನೆ

ಜರ್ಮನಿಗೂ ಮತ್ತು ಇಟಲಿಗೂ ಗಾಢವಾದ ಮೈತ್ರಿಯಿದೆ ಮುಂದೆ ಪರಸ್ಪರ ಸಹಕರಿಸಿ ಬರ್ತಿಸಬೇಕೆಂಬುದು ನಮ್ಮಿಬ್ಬರಿಗೂ ತಿಳಿದಿದೆ ಆದರೆ ನಮ್ಮಿಬ್ಬರ ಮತ್ತು ರಷ್ಯದ ಸಂಬಂಧವು ಮಾತ್ರ ವ್ಯತ್ಯಾಸವಾಗಿದೆ ನಾವು ಒಬ್ಬರ ತಲೆಯನ್ನು ಮತ್ತೊಬ್ಬರು ಕಡಿದು, ಲಂಡನ್ನಿನಲ್ಲಿರುವ ಯೆಹೂದ್ಯ ಸ್ಟಾಕ್ ಬ್ರೋಕರುಗಳ ಜೇಬು ತುಂಬುವತ್ನು ಅವಿವೇಕಿಗಳಲ್ಲ. ಜಪಾನು ಕೂಡ ನಮ್ಮೊಹನೆ ಮೈತ್ರೀಭಾವವನ್ನು ವಹಿಸಿದೆ ಇದರಿಂದ ಬಲಯುತ ರಾಷ್ಟ್ರಗಳು ದುರ್ಬೀದ್ಯವಾದ ಗುಂಪೊಂದನ್ನು ಮಾಡಿಕೊಂಡಿವೆಯೆಂದಾಯಿತು ನಮ್ಮ ಸೈನ್ಯದಲ್ಲಿ ಅದರ ನಾಯಕರ ಸೃಷ್ಟಿಕರ್ತಿಯು ತಾಂಡವವಾಡುತ್ತಿದೆ. ಆರ್ಥಿಕ ಕ್ಷೇತ್ರದಲ್ಲಿ ಕೂಡ ನಾವು ನಮ್ಮ ಶತ್ರುಗಳಿಗಿಂತ ಉತ್ತಮಪರಿಸ್ಥಿತಿಯಲ್ಲಿ ನಿದ್ದೆಗೆಳೆಸಿ ಮಾಡಿಕೊಂಡಿದ್ದೇವೆ. ಜರ್ಮನಿಯ ಸುತ್ತ ಆಕ್ಸಿಡಿಸ್ಟಂಧನ ಹಾಕಿಬಿಟ್ಟರೆ ಎಲ್ಲ ಆಯತೆಂದು ನಮ್ಮ ಶತ್ರುಗಳು ನಂಬಿದ್ದಾರೆ ಈ ಆಕ್ಸಿಡಿಸ್ಟಂಧನವು ಅಲ್ಲಲ್ಲಿ ಸಡಿಲವಾಗುವುದು ನಿಶ್ಚಯ! ಅದು ಹೇಗೇ ಇರಲಿ, ನಾವು ಯಾವ ಆಕ್ಸಿಡಿಸ್ಟಂಧನ ಗಳಿಗೂ ಹೆದರುವವರಲ್ಲ ಆರ್ಥಿಕ ಕ್ಷೇತ್ರದಲ್ಲಿಯಾಗಲಿ, ಸೈನ್ಯ ಕ್ಷೇತ್ರದಲ್ಲಿಯಾಗಲಿ ಜರ್ಮನಿಯನ್ನು ಯಾರೂ ಮಣಿಸಲಾರರು

ಜರ್ಮನ್ ಜನಾಂಗವು ಇಂದು ಎಂದಿಗಿಂತ ಉತ್ತಮವಾದ ಹೊಡೆದಾಟಕ್ಕೆ ಸಿದ್ಧವಾಗಿದೆ. ಜನಾಂಗಗಳನ್ನು ಸೃಷ್ಟಿಸಿ, ಅವಕ್ಕೆಲ್ಲ ಸಮಾನವಾದ ಹಕ್ಕು ಬಾಧ್ಯತೆಗಳನ್ನು ಕೊಟ್ಟ ದೇವರೊಬ್ಬನಿವ್ವಾನೆಂದು ನಾನು ನಂಬಿದ್ದೇನೆ ನಮ್ಮ ಜನಾಂಗವು ನಾಶವಾಗಿದಿಪಡೇಕೆಂಬುದು ವಿಧಿನಿಯಮವೆಂದು ನಾನು ತಿಂದಿದ್ದೇನೆ. ೩೦ ವರ್ಷಗಳ ಹಿಂದೆ ನನಗೆ ಈ ನಂಬಿಕೆಯಿತ್ತು. ಇಂದೂ ಕೂಡ ಅದೇ ನಂಬಿಕೆಯಿದೆ ನಾವು ಜಯ ಸಂಪಾದಿಸಲೇ ಬೇಕು ಈ ವಿಶ್ವವು ದಿವ್ವಗಳಿಂದ ತುಂಬಿದ್ದರೂ ಕೂಡ ನಾವು ಜಯ ಸಂಪಾದಿಸಲೇ ಬೇಕು

ಜರ್ಮನಿಯ ಬೇಡಿತೆಗಳನ್ನು ನಾನು ಮುಂದಿಡುತ್ತೇನೆ ನಮ್ಮ ಜೀವನಕ್ಕೆ ಬೇಕಾದಷ್ಟು ಪ್ರದೇಶವು ಸುರಕ್ಷಿತವಾಗಿರಬೇಕು. ಮಧ್ಯ ಯೂರೋಪಿನಲ್ಲಿ ಇದು ವರೆಗೆ ಬ್ರಿಟನ್ನಿನ ಪ್ರಭಾವವು ಸ್ವಲ್ಪವೂ ಇಲ್ಲ ಮಧ್ಯ ಯೂರೋಪಿನನ್ನು ಅಭಿವೃದ್ಧಿ ಪಡಿಸಿರುವುದು ಜರ್ಮನಿ. ಜರ್ಮನಿಯ ಈ 'ಜೀವನ ಕ್ಷೇತ್ರ' ದಲ್ಲಿ ನಮ್ಮ ಜೀವನಕ್ಕೆ ಪ್ರತಿಬಂಧಕವುಂಟುಮಾಡುವುದನ್ನು ನಾವು ಸಹಿಸಲಾರವು ಈ ಕ್ಷೇತ್ರದಲ್ಲಿ ಬೇರೆ ಬೇರೆ ರಾಷ್ಟ್ರಗಳು ಒಂದೂ ನಮ್ಮ ಮೇಲೆ ಬೀಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ ಧನಾಢ್ಯರು ನಮ್ಮಿಂದ ಸೂರೆ ಮಾಡಿದ ಕ್ಷೇತ್ರಗಳನ್ನೆಲ್ಲ ಮತ್ತೆ ಬಿಟ್ಟುಕೊಡಬೇಕೆಂದು ಸಹ ನಾವು ಹೇಳುತ್ತೇವೆ ಇವು ಹೆಚ್ಚಿನ ಬೇಡಿತೆಗಳೇನೂ ಅಲ್ಲ ಎಂದು ಛಾಷಣ ಮಾಡಿದರು

ನಿಮರ್ಶೆ

ನಿಘಂಟು—ತೆಲುಗುಛಾಷೆಯ ಈ ಮಾಸಪತ್ರಿಕೆಯು ಈಗ್ಗೆ ೧ ವರ್ಷದಿಂದ ವೇ|| ಪಂಡಿತ ಚಿದರೆಮಳದ ವೀರಭದ್ರಶಾಸ್ತ್ರಿಗಳವರ ಸಂಪಾದಕತ್ವದಲ್ಲಿ ಸಿಕ-ದರಾಬಾದಿಂದ ಪ್ರಕಟವಾಗುತ್ತಿರುವುದು ಈ ಪತ್ರಿಕೆಯು ಧಾರ್ಮಿಕ, ನೈತಿಕ, ಐತಿಹಾಸಿಕ ವಿಷಯಗಳಂದ ಕೂಡಿ ರಾರಾಜಿಸುತ್ತಿರುವುದು ಈ ಮಾಸಪತ್ರಿಕೆಯಿಂದ ಆಂಧ್ರ ದೇಶದ ವಿದ್ಯೆಗೆವರಲ್ಲಿ ವಿದ್ವೇಷ ಜಾಗೃತಿಯುಟ್ಟಾಗಿದೆ ೨ನೆಯ ವರ್ಷದ ಪ್ರಥಮ ಸಂಚಿಕೆಯು ನಮ್ಮ ಕರಗತ ನಾಗಿದೆ ಈ ಸಂಚಿಕೆಯು ಅನೇಕ ಮಹತ್ವದ ವಿಷಯ ಗಳಿಂದ ಕೂಡಿರುವುದಲ್ಲದೆ, ಮನೋಹರವಾದ ೨೨ ಚಿತ್ರ ಗಳಿಂದ ಯುಕ್ತವಾಗಿರುವುದು ಸಂಪಾದಕರು ಈ ಪತ್ರಿಕೆಯ ಅಭಿವೃದ್ಧಿಗಾಗಿ ಬಹು ಕಷ್ಟಪಡುತ್ತಿರುವರು ಆಗುದರಿಂದ ಆಂಧ್ರ ಭಾಷೆಯನ್ನು ಬಲ್ಲ ವೀರಶೈವ ರೆಲ್ಲರೂ ಈ ಪತ್ರಿಕೆಯನ್ನು ಅವಶ್ಯವಾಗಿ ತರಿಸಿಕೊಂಡು ಅದರಲ್ಲಿ ಪ್ರಕಾಶಿಸಾಗತಕ್ಕ ಸರ್ವೋತ್ತಮ ವಿಷಯ ಗಳನ್ನು ಓದಿನೋಡಿ ಧನ್ಯರಾಗಬೇಕೆಂದಾಶಿಸುತ್ತೇನೆ

ವಾರ್ಷಿಕ ಚಂದಾ ೨-೪-೦

ಪಂಚಾಂಗ—ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ಯವ ಪಂಚಾಂಗನುಂಟಿದರ ವಿ ರಾಮಕೃಷ್ಣಶಾಸ್ತ್ರೀ ಅಂಡ್ ಬ್ರದರ್ಸರವರು ಪ್ರಕಾಶಪಡಿಸಿರುವ ವಿಕ್ರಮ ಸಂವತ್ಸರದ ಮೈಸೂರು ಪಂಚಾಂಗವು ನಮ್ಮ ಕಡೆಗೆ ಬಂದಿದೆ ಈ ಪಂಚಾಂಗದಲ್ಲಿ ಜನೋಪಯುಕ್ತವಾದ ಅನೇಕ ವಿಷಯಗಳು ಸಮ್ಮಿಲಿತವಾಗಿರುವುದರಿಂದ ಪಂ ಚಾಂಗವು ಸರ್ವಸಂಗ್ರಾಹ್ಯವಾಗಿದೆ

ಪ್ರೇಮವಾಣಿ—ಇದೊಂದು ವಾರಪತ್ರಿಕೆ ಪ್ರತಿ ಗುರುವಾರ ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವುದು ಈ ಪತ್ರಿಕೆಯ ಏದು ಸಂಚಿಕೆಗಳು ನಮ್ಮ ಕರಗತ ವಾಗಿರುವುದು. ಪತ್ರಿಕೆಯಲ್ಲಿ ಸಾಮಾಜಿಕ, ನೈತಿಕ, ಐತಿಹಾಸಿಕ, ರಾಜಕೀಯ ವಿಷಯಗಳು ಪ್ರಕಟವಾಗು ತ್ತಿರುವವು ವಾರ್ಷಿಕ ಚಂದಾ ೨-೪-೦

ಸ್ವೀಕಾರ.

ಸೊಣ್ಣಾಪುರ ಟವರ್ ನಿವಾಸಿಗಳಾದ ಶ್ರೀಮಂತ ಮಹಿವಾಳಪ್ಪ ತುಮಕೆ ಇವರು ತೂತನ ಗೃಹಪ್ರವೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ ೨ ರೂ. ಮಃ ರಾ|| ಶಂಕರರಾವ ದರೋಷಾಪೀಲ ಇವರು ತಮ್ಮ ತಂದೆಯವರ ಪುಣ್ಯ ತಿಥಿಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ ೨ ೪ ೦ ರೂ ಒಟ್ಟು ೨-೪-೦ ರೂ ಗಳು ಶ್ರೀ|| ಹಗ ಬ್ರಗ ವೈಕಾಪುರ ಗುರುಸ್ವಾಮಿ ಹಿರೇಮಠದ ಚರಮೂರ್ತಿ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಟವರ್ ನಿವಾಸಿಗಳಾದ ವೇ|| ಸೋಮ ಲಿಂಗಯ್ಯ ಹಿರೇಮಠ ಇವರ ಪುತ್ರ ಚಿ|| ರಾಜಶೇಖರ ಯ್ಯನ ಮತ್ತು ಇವರ ಮೊಮ್ಮಗ ಚಿ|| ಸಿದ್ಧರಾಮಯ್ಯನ ದೀಕ್ಷೋತ್ಸವಸಮಯದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೨ ರೂ ಗಳು ಶ್ರೀ|| ಹಗ ಬ್ರಗ ಪಟ್ಟಿದ ಸ್ವಾಮಿಗಳು ಹಿರೇಮಠ ಶುಕ್ರವಾರಪೇಟೆ ಧಾರವಾಡ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ|| ಹುವ್ವಿನಹಡಗಲಿ ತಾಲೂಕು ಹೊಳ ಗುಂದಿ ಗ್ರಾಮವಾಸಿಗಳಾದ ವೇ|| ಹಿರೇಮಠದ ಮತಾ ಲಿಂಗಯ್ಯನವರ ಇಷ್ಟಾರ್ಥವು ಜಗದಾಚಾರ್ಯರೆ ಅನು ಗ್ರಹದಿಂದ ನೆರವೇರಿದ ಸಂತೋಷಕ್ಕಾಗಿ, ಬೆಳಗೇರಿ ಪುರವರ್ಗಮಠದ ಯರೆಹಂಚಿನಾಳ ಆರ್ ಪಿ ಹಿರೇ ಮಠ ಇವರು ಪ್ರಭಾಪೋಷಣಕ್ಕೋಸ್ಕರ ನೆಗೆಯಿ ಸಿದ ೨ ರೂ ಯು ಹುವ್ವಿನಹಡಗಲಿ ಗುರುಸೇವಾರಿಂಗಳ ಶ್ರೀಯುತ ಸೂಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಡಿ|| ದರೋಜಿಗ್ರಾಮದಲ್ಲಿರುವ ವೇ|| ಬಳ ಗಾನೂರು ಮಠದ ಚಿತ್ರವಾಡಿಗಿ ವಿರೂಪಾಕ್ಷಯ್ಯನವರ ಪುತ್ರ ಚಿ|| ಶರಭಯ್ಯನಿಗೆ ಎತ್ತಿನಬೂದಿಹಾಳ ಗ್ರಾಮದ ಹಿರೇತುಂಬಳ ಮಠದ ವೇ|| ವೀರಯ್ಯನವರ ಪುತ್ರಿ ಚಿ|| ನೌ|| ವಿಶಾಲಾಕ್ಷಿಯನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೨ ೪-೦ ರೂ ಮೆಟ್ರಿ ಹಿರೇಮಠದ ವೇ|| ಅಮರಯ್ಯ ನವರ ದ್ವಾರಾ ತಲ್ಪಿರುತ್ತದೆ

ಈ ಯೋಜ್ಯಂಡ ಮಹಾಪಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಏಕ್ಯಮಂಗಲವನ್ನೊಯ ಲೆಂದು ಹಾರೈಸುತ್ತೇವೆ

ಪ್ರಟಿನ್ಸಿನ ನೌಕಾಶಾಖೆ

ಪ್ರಟಿನ್ಸಿನ ನೌಕಾಶಾಖೆಯ ಆಯವ್ಯಯದ ವಿಷಯ ವಲ್ಲಿ ಶ್ರೀ ಚರ್ಚಿಲ್ಲರವರು ಕಾಮನ್ಸ್‌ಸಭೆಯಲ್ಲಿ ಛಾಷಣಮಾಡುತ್ತ—" ಬೇಸಿಗೆಯು ಮುಂದುವರಿಂ ತೆಲ್ಲಾ ಯು ಬೋಟುಗಳ ನಿರ್ಮಾಣ ಕಾರ್ಯವು ಹೆಚ್ಚುತ್ತ ಹೋಗ ವದರಿಂದ ಅವುಗಳನ್ನು ನಾಶಮಾ ಡಲು ಶತ್ರು ನೌಕೆಗಳನ್ನು ನಿರ್ಮಿಸಬೇಕಾಗುವದೆಂದೂ, ಅಲ್ಲದೆ ಯು ಬೋಟ್ ಹಾವಳಿಯಿಂದ ನಾಶವಾದ ವ್ಯಾಪಾರಿ ಹಡಗುಗಳಿಗೆ ಪ್ರತಿಯಾಗಿ ಬೇರೆ ಹಡಗು ಗಳನ್ನು ಶೀಘ್ರ ಕಟ್ಟಲಾಗುವುದೆಂದೂ, ಕಳೆದ ಯುದ್ಧ ದಲ್ಲಿ ಶತ್ರುನೌಕೆಗಳನ್ನೆದುರಿಸಲು ಪ್ರಟಿನ್ನು ಯಾವಾ ಗಲೂ 30-40 ಸಂಗ್ರಾಮ ನೌಕೆಗಳನ್ನು ಸಿದ್ಧವಾಗಿಟ್ಟಿರ ಬೇಕಾಗಿತ್ತೆಂದೂ, ಈಗ ಶತ್ರುಗಳ ಹತ್ತರ ಎರಡೇ ದೊಡ್ಡ ಸಂಗ್ರಾಮ ನೌಕೆಗಳಿರುವದರಿಂದ ನಾವು ಹೆಚ್ಚು ಯುದ್ಧನೌಕೆಗಳನ್ನು ಒಟ್ಟಗೆ ಕೂಡಿಸಿಟ್ಟರೂ ಪ್ರಯೋ ಯವಿಲ್ಲವೆಂದೂ, ಆದ್ದರಿಂದ ಅವುಗಳಲ್ಲಿ ಬೇರೆಬೇರೆ ಕಡೆಗಳಲ್ಲಿಟ್ಟು ಶತ್ರುಗಳೊಹನೆ ಸಮಯದಲ್ಲಿ ಹೋರಾ ಡಲು ಸಾಕಾಗುವಷ್ಟನ್ನು ಮಾತ್ರ ಸಿದ್ಧವಾಗಿಟ್ಟಿರಲಾಗಿದೆ ಯೆಂದೂ" ಹೇಳಿದರು

[೩ನೆಯ ಪುಟದಿಂದ ಮುಂದುವರಿದುದು]

ಹೇಳುತ್ತೇನೆ ಆಗ್ಗೆ ಆ ಮಹಾಪಾಠಶಾಲೆಯ ಅಧ್ಯಾಪಕರುಗಳೊಡನೆಯೂ ಮತ್ತು ವಿದ್ಯಾರ್ಥಿಗಳೊಡನೆಯೂ ಸ್ನಿಗ್ಧ ಸಂಬಂಧವನ್ನು ಪಡೆಯುವ ಅವಕಾಶಗಳು ನನಗೆ ಲಭಿಸುತ್ತಿದ್ದುವು. ಮೈಸೂರು ಬೆಂಗಳೂರು ನಗರಗಳಲ್ಲಿರುವ ಸಂಸ್ಕೃತ ಮಹಾಪಾಠಶಾಲೆಗಳಿಗಾಗಿಯೇ ಸಂಸ್ಥಾನದಿಂದ ಪ್ರತಿವರ್ಷವೂ ಸುಮಾರು ೪೦,೦೦೦ ರೂಪಾಯಿಗಳು ವೆಚ್ಚವಾಗುತ್ತಿವೆ ಅಲ್ಲದೆ ಅನೇಕ ಖಾಸಗೀ ಸಂಸ್ಕೃತ ಪಾಠಶಾಲೆಗಳಿಗೆ ಸರ್ಕಾರದವರು ಪ್ರತಿವರ್ಷವೂ ವಿಶೇಷ ಸಹಾಯ ದ್ರವ್ಯವನ್ನು ಕೊಡುತ್ತಿದ್ದಾರೆ ವರ್ಷಕ್ಕೊಂದು ಸಲ ಪರೀಕ್ಷೆಗಳು ನಡೆಯುತ್ತವೆ ಜಯಶೀಲರಾದ ವಿದ್ಯಾರ್ಥಿಗಳಿಗೆ ದಸರಾ ಉತ್ಸವಕಾಲದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರೇ ಬಹುಮಾನಗಳನ್ನು ದಯಪಾಲಿಸುತ್ತಾರೆ ಸಂಸ್ಕೃತ ಪಾಂಡಿತ್ಯ ಸಂಸ್ಕೃತಿಗಳ ಪ್ರಭಾವವು ಎಷ್ಟರಮಟ್ಟಿಗಾದರೂ ಬೆಳಗುತ್ತಿರುವಂತೆ ಮಾಡಲು ಈ ರೀತಿ ಸಮಸ್ತ ಪ್ರಯತ್ನಗಳೂ ನಡೆಯುತ್ತಿವೆ

ನಿಮ್ಮ ಮಹಾಪಾಠಶಾಲೆಯಲ್ಲಿ ಸಹ ನನ್ನ ಪಾಠಶಾಲೆಯಂತೆಯೇ ಪ್ರಾಚೀನ ಸಂಪ್ರದಾಯಕ್ಕನುಸಾರವಾಗಿ ಸಂಸ್ಕೃತ ವ್ಯಾಸಂಗವು ನಡೆಯುತ್ತಿದೆಯೆಂದು ತಾನು. ನಂಬಿದ್ದೇನೆ ಅನೇಕ ಗ್ರಂಥಗಳು ವಾಙ್ಮೋ ವಿಧೇಯವಾಗಿರುವಂತೆ ಕಂಠಪಾಠ ಮಾಡುವುದು ಆ ಬಗೆಯ ವ್ಯಾಸಂಗದ ಲಕ್ಷಣಾದಿಕಾರಣ, ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿಯು ಅತ್ಯಧಿಕವಾಗಿರಬೇಕು ವಿದ್ಯಾರ್ಥಿಗಳು ಅನೇಕ ಗ್ರಂಥಸ್ಥಭಾಗಗಳನ್ನು ಕಂಠಪಾಠ ಮಾಡಬೇಕಾಗುತ್ತವೆ ಎಂದಾಗ್ಯೂ ಸರ್ವಥಾ ಕಂಠಪಾಠ ಮಾಡಿಯೇ ವ್ಯಾಸಂಗ ಮಾಡಬೇಕಾಗುತ್ತವೆ ಇದು ಶಾಶ್ವತ ದೇಶೀಯ ಬೋಧನವಿಧಾನದ ಒಂದು ವಿಶಿಷ್ಟತ್ವ ಇದರಲ್ಲಿ ನನಗೆ ಬಹಳ ಇಷ್ಟ ಈ ವಿಧಾನವನ್ನು ನಿಮ್ಮವರು ಎಂದಿಗೂ ಕೈಬಿಡದೆ ನಡೆಯಿಸಿಕೊಂಡು ಬರುವರೆಂದು ನಾನು ನಂಬಿದ್ದೇನೆ

ನಾನು ಹಿಂದೂ ಪಂಗಡಕ್ಕೆ ಸೇರಿದವನೆಲ್ಲವಾದರೂ, ನನ್ನ ಹಿಂದೂ ದೇಶಬಾಂಧವರ ಸನಾತನ ದರ್ಮದಲ್ಲಿಯೂ ಸಂಸ್ಕೃತಿಯಲ್ಲಿಯೂ ಮತ್ತು ಅವರ ಪವಿತ್ರವಾದ ಸಂಸ್ಕೃತ ಭಾಷೆಯಲ್ಲಿಯೂ ನನಗೆ ತೀವ್ರಾಸಕ್ತಿಯುಂಟು ಅಲ್ಲದೆ ಅವುಗಳ ಸಂಬಂಧದಲ್ಲಿ ನನ್ನಿಂದ ಸಾಧ್ಯವಿರುವ ಮಟ್ಟಿಗೂ ಸೇವೆಯನ್ನು ಸಮರ್ಪಿಸುವುದು ನನ್ನ ವಂಶ ಪೂರ್ವಕರಾದ ಪ್ರಯತ್ನಗಳಿಂದ ಭಾರತೀಯನೊಬ್ಬನು ತನ್ನ ಪೂರ್ವಕ ಆತ್ಮತೃಪ್ತಿಯಾದ ಸೇವೆಯನ್ನು ಸಮರ್ಪಿಸುವ ಅವಕಾಶವಿರುವುದು ಈ ಮೂಲಕವೇ ಪ್ರಸ್ತುತವಾಗಿ ನೋಡಿದರೆ, ನಿಜವಾದ ಭಾರತೀಯರು ಭರತ ಖಂಡದ ಸಮಸ್ತ ಸತ್ಸಂಗಪ್ರಿಯರೂ ಪೂಜ್ಯಭಾವನೆಗಳನ್ನು ಸ್ಪಿಟ್ಟುಕೊಳ್ಳುವುದೇ ಅವರ ಧರ್ಮ ಹಾಗೆ ಮಾಡಿದವನ್ನು ಆಸರಿಗೆ ಯಾರಲ್ಲಿಯೂ ದ್ವೇಷವಿರುವುದಿಲ್ಲ, ಸರ್ವರಲ್ಲಿಯೂ ಸೌಹಾರ್ದದಿಂದ ವರ್ತಿಸುವುದೇ ಅವರ ಪಲ್ಲಕ್ಷಣವಾಗುತ್ತದೆ

ನನ್ನ ಭಾಷಣವನ್ನು ಪರಿಸಮಾಪ್ತಿಗೊಳಿಸುವುದಕ್ಕು ಮುಂಚೆತಾಗಿ, ನಾನು ಒಂದು ಅಂಶವನ್ನು ಸೂಚಿಸಲಿಚ್ಛಿಸುವೆನು ನನ್ನನ್ನು ಈ ದಿನ ಇಷ್ಟಿಗೆ ಒದಗಿಸಿದುದಕ್ಕಾಗಿ ನಾನು ವಿಶೇಷ ಕೃತಜ್ಞನಾಗಿದ್ದೇನೆಂಬ ದನ್ನು ಮತ್ತೊಮ್ಮೆ ಸೂಚಿಸುವುದೇ ಆ ಅಂಶ ಇದರಿಂದ ನನಗೆ ಎರಡು ರೀತಿಗಳಲ್ಲಿ ಸುಯೋಗವು ಲಭಿಸಿದಂತಾಯಿತು ಮೊದಲನೆಯದಾಗಿ ನಿಮ್ಮ ದೇಶಬಾಂಧವರಲ್ಲಿ ಶ್ರೀಷ್ಠರಾದವರೊಬ್ಬರಾದ ಈ ಸಂಸ್ಥಾನ ಸ್ಥಾಪಕರ ವಿಷಯದಲ್ಲಿ ನನ್ನ ಗೌರವವನ್ನು ಸೂಚಿಸಲು ಸುಯೋಗ ಎರಡನೆಯದಾಗಿ, ಎಷ್ಟೇ ಅಲ್ಪವಾಗಿದ್ದಾದರೂ ಸಹ, ಹಿಂದೂ ಪಂಗಡದ ನನ್ನ ದೇಶಬಾಂಧವರೊಡನೆ ಸೇರಿ, ಘನವಾದ ಅವರ ಸಂಸ್ಕೃತಿಧಾಮಗೊ, ಅದರಲ್ಲಿ ನೆಲೆಗೊಂಡಿರುವ ಅವರ ಉದಾತ್ತ ಸಂಸ್ಕೃತಿ, ಕರ್ತೃತ್ವಶಾಸ್ತ್ರ ಮತ್ತು ಪವಿತ್ರಸಂಪ್ರದಾಯಗಳಿಗೂ ನನ್ನ ಪ್ರೀತಿ ಗೌರವಗಳನ್ನು ಸಮರ್ಪಿಸುವ ಸುಯೋಗ ಇನೊಂದೂ ನನಗೆ ಲಭಿಸಿರುವುದಕ್ಕಾಗಿ ಕೃತಜ್ಞನಾಗಿದ್ದೇನೆ ಆದರೆ, ನನಗೆ ಸಂಸ್ಕೃತ ಭಾಷಾಪರಿಚಯವಿಲ್ಲದಿರುವುದಕ್ಕಾಗಿ ವಿಷಾದಿಯಿತ್ತೇನೆ ಆದಾಗ್ಯೂ, ಸಂಸ್ಕೃತ ಭಾಷೆಯ ಛೇಸ್ಸೂ ನನಗೆ ವಿಶೇಷ ಮೆಚ್ಚುಕೆಯೂ ವಿಶ್ವಾಸವೂ ಇವೆ ಸಂಸ್ಕೃತ ಭಾಷಾಭಿಮಾನಿಯಾಗಿ ಮಾತ್ರವೇ ನಾನು ಈ ದಿನ ತಮ್ಮೊಡನೆ ಸೇರಿ, ಇಂದಿನ ಉತ್ಸವದಲ್ಲಿ ಭಾಗಿಯಾಗಿ, ಬಹಳವಾಗಿ ಆನಂದಿಸುತ್ತಿದ್ದೇನೆ

ಪ್ರಾಥಮಿಕ ಶಾಲಾ ಪ್ರವೇಶೋತ್ಸವ
ಅರೇಹಳ್ಳಿ

ಈ ಶಾಲಾ ಪ್ರವೇಶೋತ್ಸವವು ತಾ|| ೧೪ ೩ ೪೦ ರಲ್ಲಿ ಚನ್ನಗಿರಿ ರೇಂಜ್ ಸ್ಕೂಲ್ ಬೋರ್ಡ್ ಆಸಿಸ್ಟಂಟ್ ರವರಾದ ಶ್ರೀಮಾನ್ ಎಸ್ ಪಿ ರುದ್ರಯ್ಯ ಬಿ ಎ ಯವರ ಅಧ್ಯಕ್ಷತೆಯಲ್ಲಿ ಈ ಕೆಳಗಿನ ಕಂಡ ಪ್ರೋಗ್ರಾಂ ನೇರವೆಗೆ ನಡೆಯಿಸಲ್ಪಟ್ಟಿತು.

ಗಾಣಾಳಿಮಾನಿಗಳು ಬಾಜಾಭಜಂತ್ರಿಗಳೊಡನೆ ಅಧ್ಯಕ್ಷರನ್ನು ನೂತನ ಕಟ್ಟಡದ ಪ್ರವೇಶೋತ್ಸವದ ಮಂಟಪಕ್ಕೆ ಕರೆತಂದ ಮೇಲೆ ಸ್ಕೂಲ್ ಬಾಲಕರಿಂದ ವೇವತಾ ಸ್ತೋತ್ರವು ನಡೆಯಿತು ನಂತರ ಕಾರ್ಯಕ್ರಮವು ಪ್ರಾರಂಭವಾಯಿತು

ಕರ್ತೃಲೆಗೆರೆ ಆಗಿ ಮೊಸ್ಟರ್ ಕೆ ಎಮ್ ಚಿನ್ನಬಸವಯ್ಯನವರಿಂದ ರಚಿತವಾಗಿದ್ದ ಸ್ವಾಗತ ಪದ್ಯಗಳನ್ನು ಮಿ|| ರಾ|| ಪಟೇಲ್ ಮಹಾದೇವಪ್ಪನವರು ಓದಿ ಅರ್ಪಿಸಿದರು.

ಅರೇಹಳ್ಳಿ ಸ್ಕೂಲ್ ಮಾಸ್ಟರ್ ಪಿ ಸಿದ್ಧಪ್ಪನವರು ಅಧ್ಯಕ್ಷರಿಗೂ ಸಭಿಕರಿಗೂ ಸ್ವಾಗತವನ್ನು ಬಯಸಿದರು ಮಿ|| ರಾ|| ತಿಮ್ಮಯ್ಯನವರು ಸ್ಕೂಲ್ ರಿಪೋರ್ಟನ್ನು ಓದಿದರ

ಅಧ್ಯಕ್ಷರಿಂದ ನೂತನ ಸ್ಕೂಲ್ ಕಟ್ಟಡದ ಪ್ರವೇಶೋತ್ಸವವೂ ಪಭಿಕರೊಡನೆ ಲಂಗಳಾಚರಣೆಯೂ, ವೈಭವದಿಂದ ನಡೆಯಲ್ಪಟ್ಟಿತು

ತ್ಯಾವಣಿಗೆ ಯು ಪಿ ಬಿ ಸ್ಕೂಲ್ ಆಗಿ ಮಾಸ್ಟರ್ ಮಿ|| ರಾ|| ಎಮ್ ಗಿರಿಯಪ್ಪನವರು ವಿದ್ಯಾಭ್ಯಾಸದ ವಿಷಯವಾಗಿಯೂ ಪೋಷಕರ ಕರ್ತವ್ಯವೆಂಬ ವಿಚಾರವಾಗಿಯೂ, ತ್ಯಾವಣಿಗೆ ಯು ಪಿ ಬಿ ಸ್ಕೂಲ್ ಹೆಡ್ಮಾಸ್ಟರ್, ಮಿ|| ರಾ|| ಪೆಚ್ ಎಂ ಚನ್ನವೀರಯ್ಯನವರು ಹಿಂದಿನ ಮತ್ತು ಈಗಿನ ವಿದ್ಯಾಭ್ಯಾಸದ ಹೋಲಿಕೆ, ಗುರುಕುಲವಾಸ, ಆಧುನಿಕ ವಿದ್ಯಾಭ್ಯಾಸ, ಜನಗಳ ಕರ್ತವ್ಯ, ಇವುಗಳ ವಿಚಾರವಾಗಿಯೂ, ಕರ್ತೃಲೆಗೆರೆ ಯು ಪಿ ಬಿ ಸ್ಕೂಲ್ ಆ| ಮಾಸ್ಟರ್ ಮಿ|| ರಾ|| ಕ ಎಂ ಚನ್ನಬಸವಯ್ಯನವರು ಬಾಲಕಾಬಲಿಕೆಯರ ವಿದ್ಯಾಭ್ಯಾಸದ ವಿಷಯವಾಗಿಯೂ, ಮಿಶಾಯಾಪುರದ ಪಿ ಎಸ್ ಮಾಸ್ಟರ್ ಮಿ|| ರಾ|| ಎಂ ವೆಂಕಯ್ಯನವರು ಪೋಷಕ ಬೋಧಕರ ಕರ್ತವ್ಯದ ವಿಷಯವಾಗಿಯೂ, ತ್ಯಾವಣಿಗೆ ಯು ಪಿ ಬಿ ಸ್ಕೂಲ್ ಆ| ಮಾಸ್ಟರ್ ಮಿ|| ಕೆ ಚಂದ್ರಶೇಖರದಾಸಾಖಾವರವರು ಕೈಗಾರಿಗೆ ವಿಷಯವಾಗಿಯೂ ಭಾಷಣಮಾಡಿದರು

ಅಧ್ಯಕ್ಷರುಗಳು ವಿದ್ಯಾಭ್ಯಾಸದ ಮಹಿಮೆ, ದೇಶಸೇವಾದಿ ಉಪಯೋಗ, ಹಳ್ಳಿಯಲ್ಲಿ ಹುಟ್ಟಿದರೂ ಮಹಾತ್ಮರಾಗಬಹುದಾದ ಬಗೆ, ಮಕ್ಕಳನ್ನು ಮುಂದುವರಿಸುವ, ಸತ್ಪುರುಷರನ್ನಾಗಿ ಮಾಡುವ, ಮಾರ್ಗ, ಸ್ತ್ರೀಶಿಕ್ಷಣದ ಆವಶ್ಯಕತೆ, ಮಕ್ಕಳ ಅನುಕರಣಶಕ್ತಿಯನ್ನು ಬೆಳೆಯಿಸುವ ಕ್ರಮ, ನಡತೆಯನ್ನು ತಿದ್ದುವುದು, ಶ್ರೀಮನ್ಮಹಾರಾಜರವರು, ದಿವಾನ್‌ಸಾಹೇಬರವರ ಉದಾರತೆಯ ಸ್ಮರಣೆ, ಅರೇಹಳ್ಳಿಗ್ರಾಮದವರ ಉತ್ಸಾಹ, ವಿದ್ಯಾಭಿಮಾನ, ಗ್ರಾಮಗಳು ಮುಂದುವರಿಯಬೇಕಾದ ಅವಶ್ಯಕತೆ, ಈ ಗ್ರಾಮದ ಮಿ|| ರಾ|| ಇಟ್ಟಿಗೆ ನಾಗಪ್ಪನವರ ಗುಣಕಥನ, ಈ ಸ್ಕೂಲಿನ ಶ್ರೀಯೋಭಿವೃದ್ಧಿ, ದೇಶ ಸೇವೆಗೆ ಪರಮಾತ್ಮನ ಪ್ರಸನ್ನತೆ, ಮುಂತಾದ ವಿಚಾರಗಳಲ್ಲಿ ಬೋಧಪ್ರದವಾದ ಭಾಷಣವನ್ನು ಮಾಡಿದರು ಅನಂತರ ಶ್ರೀಮನ್ಮಹಾರಾಜರವರ ಶ್ರೀಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು

ಓರ್ವ ಸಭಿಕ.

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ನೂತನ ಗೃಹಪ್ರವೇಶೋತ್ಸವ

ಸೊಲ್ಲಾಪುರ ನಗರ ನಿವಾಸಿಗಳಾದ ಶ್ರೀಮಂತ ಮಡಿವಾಳಪ್ಪ ಹುಮಣಿ ಇವರು ತಾ|| 21-2 40 ನೇ ಬುಧವಾರ ಬೆಳಗ್ಗೆ ಗೃಹಪ್ರವೇಶ ವಿಧಿಯನ್ನು ವೇ|| ವಿರೂಪಯ್ಯ ಶಾಸ್ತ್ರಿಗಳ ವೈದಿಕತ್ವದಲ್ಲಿ ಅತ್ಯಂತ ವೈಭವದಿಂದ ನೆರವೇರಿಸಿದರು ಮಡಿವಾಳಪ್ಪನವರು ಆ ದಿನ ಪ್ರಾತಃಕಾಲ ಜೈನಾಪುರ ಶ್ರೀ ಸಿ ಬ್ರಿ ಗುರುಸ್ವಾಮಿಗಳನ್ನು ಗೌರವ ಪೂರ್ವಕವಾಗಿ ತಳಿರು ತೋರಣಗಳಿಂದ ಅಲಂಕೃತವಾದ ನೂತನ ಗೃಹಕ್ಕೆ ಕರೆದುಕೊಂಡುಬಂದು ಅತ್ಯಂತ ಭಕ್ತಿಯಿಂದ ಪಾದಪೂಜೆಯನ್ನು ಮಾಡಿದರು ಪಾದಪೂಜಾ ಸಮಯದಲ್ಲಿ ಇಷ್ಟಿಯ ವಾರದ ಶಾಕಶಾಲೆಯ ವಿದ್ಯಾರ್ಥಿಗಳು ಸುಸ್ವರದಿಂದ ವೇದಪಠನವನ್ನು ಮಾಡುತ್ತಿದ್ದುದರಿಂದಲೂ, ಮೇಲಿದಮೇಲೆ ಮಂಜುಳವಾದ ಧ್ವನಿಯಿಂದ ಜಗದಾಚಾರ್ಯರ ಸ್ತೋತ್ರಗಳನ್ನು ಹಾಡುತ್ತಿದ್ದುದರಿಂದಲೂ ಅಗ್ರಹವು ಸಾಕ್ಷಾತ್ ಶಿವನಸ್ಥಗಳಿದಂತೆ ತೋರುತ್ತಿತ್ತು ಮಿ|| ರಾ|| ಮಡಿವಾಳಪ್ಪನವರು ವೀರಭೋತ್ಪತ್ತಿ ಕೈಸೇರಿದವರಾಗಿದ್ದಾರೆ ಇವರು ಧನಿಕರಾಗಿದ್ದು ಈಗಿನ ಆಮಂಗಲ ಚಳವಳಿಗೆ ಸೇರದೆ ಸದಾಚಾರಿಗಳಾಗಿಯೂ, ಸದ್ಗುಣ ಭರಿತರಾಗಿಯೂ, ಗುರು ಭಕ್ತೆಯಳ್ಳವರಾಗಿಯೂ, ಇರುವರು ಈ ಶುಭ ಸಮಯದಲ್ಲಿ ಜೈನಾಪುರ ಶ್ರೀಗಳ ಆಜ್ಞೆಯಮೇರೆಗೆ ಪುಭಾಪೋಷಣಕ್ಕೋಸ್ಕರ ೧೦೧ ರೂಪಾಯಿಯ ಸಮರ್ಪಿಸಲ್ಪಟ್ಟಿತು ಶ್ರೀಮಂತ ಮಡಿವಾಳಪ್ಪನವರಿಗೂ ಇವರ ಪುತ್ರಪೌತ್ರಾದಿಗಳಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ಆಯುರಾರೋಗ್ಯ ಭಾಗ್ಯಾದಿಗಳನ್ನಿತ್ತು ಪ್ರಾರ್ಥಿಸುವ

ಓರ್ವ ಮತಾಭಿಮಾನಿ

ಕೋಲಾರಟೌನ್ ಮುನಿಸಿಪಾಲಿಟಿ.
ಶ್ರೀ ಕೋಲಾರಮ್ಮನವರ (ಶ್ರೀಆಮುಂಡೇಶ್ವರಿ)
ಜಾತ್ರೆ ಸಂಬಂಧವಾದ
ದನಗಳ ವರಿಪೆ

ತಾ|| 17-3 40 ನಿಂದ 23-3 40 ರ ವರೆಗೆ ಶ್ರೀಮತ್ಪ್ರಮಾಥಿ ಸಂವತ್ಸರದ ಫಾಲ್ಗುಣ ಶುದ್ಧ ಅಷ್ಟಮಿ ಭಾನುವಾರ ಮೊದಲ್ಗೊಂಡು ಪೌರ್ಣಮಿ ಶನಿವಾರ ಪರ್ಯಂತವೂ ನಡೆಯುತ್ತಿದೆ ದನಗಳೂ, ಗಾಡಿಗಳೂ, ಸುಂಕವಿಲ್ಲ ವ್ಯವಸಾಯ ಮತ್ತು ಕೈಗಾರಿಕೆಗಳ ಮಸ್ತು ಪ್ರದರ್ಶನ ಸಹ ವರ್ಷಾಶಿಸಲ್ಪಟ್ಟಿದೆ ಡಿಸ್ಟ್ರಿಕ್ಟಿಗೆ ಮುಖ್ಯ ಪಟ್ಟಣವಾದ ಕೋಲಾರದಲ್ಲಿ ನಡೆಯುವ ಈ ಪರಿಪೆಯಲ್ಲಿ ಜನರಿಗೆ ಪರಿಶುದ್ಧವಾದ ಕುಡಿಯುವ ನೀರು, ದನಕರುಗಳಿಗೆ ನೆರಳು, ಯಥೇಚ್ಛವಾದ ನೀರಿನ ಹೌಕ್ಯ ಮತ್ತು ಸ್ವಚ್ಛವಾಸಕ, ವಿದ್ಯುಚ್ಛಕ್ತಿಯ ದೀಪಗಳ ಸೌಕರ್ಯ, ಪ್ರಯಾಣಿಕರಿಗೆ ಅನುಕೂಲವಾದ ಭತ್ತಗಳು, ವ್ಯಾಪಾರಸ್ಥರಿಗೆ ಅಗತ್ಯವಾದ ಸೌಲಭ್ಯಗಳು, ಜಾತ್ರೆಯ ವೈದಾನದಲ್ಲಿ ವಿಶೇಷತಃ ಪಾರೀಜಾ ವಿರ್ಪಾಟು, ಇತ್ಯಾದಿ ವಿಷಯಗಳಿಗೆ ಹೆಚ್ಚು ಗಮನಕೊಡಲಾಗುವುದು

ಯಂ. ಸ್ವಾಮಿನಾಯಕ್ ಜೆ. ಬಿ. ಮಲ್ಲಾರಾಧ್ಯ
ಕೆ ವಿ. ಮುನಿವೆಂಕಟಸ್ವಾಮಿ ಪೌರಸಭಾಧ್ಯಕ್ಷರು, ಮತ್ತು
ಗಾಡಿ ಕಾರ್ಯದರ್ಶಿಗಳು ಪ್ರದರ್ಶನ ಸಮಿತಿಯ ಅಧ್ಯಕ್ಷರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡವಲ್ಲಿರುವ ಪತ್ತಿಯೊಂದು ಗುರುಪರಂಪರೆಯ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಸುಕ್ಷೇತ್ರಗಳಿಗೆ ಪಟ್ಟಾಧಿಕಾರಿಗಳಾದ ಪಟ್ಟಾಚಾರ್ಯರೋ ಪಟ್ಟಾಚಾರ್ಯರೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಗುಣವಾಗಿ ಶಿಷ್ಯರ ಯಾವುದು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವರು ಈ ಅವ್ಯವಸ್ಥೆಯಿಂದ ಅನೇಕ ಮಠವಪರಿಗೆ ತಮ್ಮ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿದೆ ಇದನ್ನು ಪೂರೈಸಬಹುದುದಕ್ಕೋಸ್ಕರ ಶಿಷ್ಯರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುಪರಂಪರೆಯವರೂ ತರಿಸಿಕೊಂಡು ಅದರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಪಂಚಾಚಾರಂಪರ್ವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ತೆಪ್ಪಮಂಜ ಕಾಗದಗಳನ್ನು ಉಪಯೋಗಿಸುವಷ್ಟುದೆ ಸುಂದರವಾದ ಪಾಕ್ಕು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರೇಸ್ವಾಮಿಯವರ ರಸಾಯನ ಶಾಲೆಯಲ್ಲಿ ತಯಾರಾಗುತ್ತಿರುವ ರಸಾಯನ ಔಷಧಿಗಳು ಅತಿ ಸುಲಭಕ್ರಮದಲ್ಲಿ ದೊರೆಯುವವು

ಔಷಧಿ ಹೆಸರು	ತೂಕ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ೨ ನೇ ನಂಬರ್	೧	೪—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣಾವಗಿ	೧	೩—೦—೦
ತ್ರಿವಂಗ	೧	೧—೦—೦
ಭಸ್ಮಗಳು		
ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೩—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಏತ್ತಾಳೆಭಸ್ಮ	೧	೦—೮—೦
ಕಂಚಿಭಸ್ಮ	೧	೦—೮—೦
ಜಪ್ಪಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೩—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦

ನೋಟು—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರರು,
ಆಯುರ್ವೇದರಸಾಯನಶಾಲಾ,
ಪ್ರೋಪ್ರೈ ಪಿಜಿಮರ, ಜಲ್ಲ ಗಡ್ಡಮಲ್ ಯ್ಯಾ. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಭ್ಯುದ್ಧಾರಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಅನೇಕರು ಆ ಅಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ. ಅಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಹೀನವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಲಹರಿ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂತೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ. **ಬೆಲೆ ೧೫ ಆಣೆ.** ವಿ ಪಿ ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಸ್ಥಗೃಹಸ್ಥರಲ್ಲಿಲ್ಲ ತಿಪ್ಪಾರಕ್ಕಮದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಸರಣಿಯು ಬಹುಶಬ್ದಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳೆಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ವಿದ್ವಾಂಸಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಏಮೋಚಿಸುವುದಕ್ಕೋಸ್ಕರ ಶಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇದಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಆವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೨೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯಿಷ್ಟಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು ವಿ ಪಿ. ಚಾರ್ಜು ೧ ರೂ ೫ ಆಣೆ ಪ್ರತ್ಯೇಕ.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಲೀಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೯ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಆಕ್ಟ್ರೆಸ್, ದಢೀಚಿ, ವ್ಯಾಸ, ಶಾಂಪ, ಮೊದಲಾದ ಮಹರ್ಷಿಗಳಿಗೆ ಶಿವತತ್ವಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧೦—೦

ಪಕ್ಕ: ಶೀಕಾಶೀಮಹಾಮಾನಿಪತಿಗಳ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧೦—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೯ಕ್ಕೆ ೦—೧೦—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧೯ಕ್ಕೆ ೦—೦—೮

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಧೂರ್ಜಟಿಯಿಂದ ೬ ತತ್ತಿಯುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾ ಸೇಲ್ ಮಾಡುವ ಫೋಟೋ ೦—೦—೮

ಶ್ರೀ ರೇಣುಕಾಚಾರ್ಯರು ಸಿದ್ಧೇಶ್ವರನಿಗೆ ಪ್ರಾರ್ಥನಾನುಸಾರವಾಗಿ ಏಕಕ ವಿದ್ಯೆಯೇ ಸೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸಿದ ಫೋಟೋ ೦—೦—೮

ಶ್ರೀ ಗಂಗಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಅಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೮

ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಪ್ರತಿಮಾ ಫೋಟೋ ೦—೦—೮

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೮

ಶ್ರೀಮಜ್ಜಗದ್ಗುರು ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೮

ಶ್ರೀಮದ್ವೈಭವಪುರೀ ಸಿಂಹಾಸನಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೮

ಶ್ರೀಮಜ್ಜಗದ್ಗುರುಗಳು ಸಪ್ತಸ್ಥಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೮

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೯ಕ್ಕೆ ೦—೮—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೯ಕ್ಕೆ ೦—೦—೮

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಆಸ್ಥಾನ ಪ್ರಾಚೀನ ಶಿಷ್ಟಪದದ ಸುಂದರ ಫೋಟೋ ೧೯ಕ್ಕೆ ೦—೦—೮

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೮

ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೮

ಶ್ರೀರಂಭಾಪುರೀ ಜಗದ್ಗುರುಗಳವರ ಸಪ್ತಸ್ಥಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೦—೮

ಬೆಂಗಳೂರು ಕಂಟೊನ್ಮೆಂಟ್‌ದಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಷ್ಟಸಲ್ಲಕ್ಕಿ ಪಾದೋತ್ಸವದ ಫೋಟೋ ೦—೦—೮

* ರೂಪಾಯಿಗೆ ಮೇಲೆ ತರಿಸಿಕೊಳ್ಳುವವರು ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಹಾಸ್ಯರ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವುದು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ —ಪೀನಸಿ, ಒಂಟಿ ತಲೆನೋವು, ತಲೆಯ ಜಿಮ ದೋಗಗಳು, ಕಣ್ಣಿಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಜೆಟ್ಟುಮಾಡುತ್ತದೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ. ಡಜ್ ಒಂದಕ್ಕೆ ಕ್ರಯ ರೂ ೨-೮-೦. ವಿ.ಪಿ. ೮ ಆಣೆ.

(Registered Trade Mark)

ನಿಮ್ಮ ಆಜ್ಞೆಸ್ಸನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,

[44] ಪೋ. ಬಾ ನಂ೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (ಸಿನೆಯ ಆವೃತ್ತಿ)	...	೧	ಆಣೆ
ಸತ್ಯಾಶಾಸ್ತ್ರಮವಿಮರ್ಶ (ಸಿನೆಯ ಆವೃತ್ತಿ ಸಂಸ್ಕೃತ)		೧	ಆಣೆ
ಪಂಚವಿಂಶತಿ ಪ್ರಸ್ಥಪ್ರಕಾಶ (೩ನೆಯ ಆವೃತ್ತಿ)		೧	ಆಣೆ
ಶ್ರೀಪಂಚಾಚಾರ್ಯ ಪಂಗಲ್ಲೂತ್ರಾವಳಿ (೮ನೆಯ ಆವೃತ್ತಿ)		೧	ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)		೧	ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ		೩	ಆಣೆ
ಬಸವಾದಿಪ್ರಮಥತತ್ವವಿವರ್ಧಿನಿ (೮ನೆಯ ಆವೃತ್ತಿ)	.	೩	ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	...	೩	ಆಣೆ
ಪಂಚಾಚಾರ್ಯಪ್ರಭಾಕರ		೩	ಆಣೆ
ಶ್ರೀಗುರುತತ್ತ್ವಪದಗಳು	.	೩	ಆಣೆ
ಶ್ರೀರುದ್ರಮುಖಿಶಿವಾಚಾರ್ಯಶತಕ	.	೩	ಆಣೆ
ವೀರಶೈವಮತಮಿಮಾಂಸಾ		೩	ಆಣೆ
ವೀರಶೈವಾಚಾರವಿಧಿ (೩ ನೆಯ ಆವೃತ್ತಿ)	...	೩	ಆಣೆ
ಲಿಂಗಧಾರಣವಿಧಿ	..	೪	ಆಣೆ
ವಿವಾಹವಿಧಿ (೩ನೆಯ ಆವೃತ್ತಿ)		೪	ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	....	೪	ಆಣೆ
ಸತ್ಯಾಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬	ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಕ್ಕಸ್ಕಿಯು)	....	೬	ಆಣೆ
ವೀರಶೈವಮಹಾತ್ಮರು	..	೮	ಆಣೆ
ಬಸವಧ್ವಾಂತವಿವಾಕರ (೨ನೆಯ ಆವೃತ್ತಿ)	....	೮	ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	....	೮	ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲುಗು)		೪	ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ಥರುಮಾತ್ರವಾದ ಅತ್ಯಂತ ಸುಂದರಮುದ್ರಣ)		೧೩	ಆಣೆ
ಸಿದ್ಧಾಂತಶಿಖಾಮಣಿ (ಶ್ರೀಲೋಚನಶಿವಾಚಾರ್ಯಕೃತ)	....	೧೩	ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	....	೧೩	ಆಣೆ
ನೂಪೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	....	೧೩	ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	..	೧೩	ಆಣೆ
ಶ್ರೀಕರಭಾಷ್ಯಂ (ಚಾಮ್ಸೂಸ್ತ್ರಿ)	..	೧	ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	...	೧	ರೂ
ವೀರಶೈವರತ್ನ (೩ನೆಯ ಆವೃತ್ತಿ, ೪೦ಮಹತ್ವದ ಫೋಟೋಗಳಿರುವುವು)	...	೧	ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)		೧	ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	....	೧	ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	....	೧	ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	..	೨	ರೂ.
ವೀರಶೈವಸಿದ್ಧಾಂತಸುಧಾಕರ	....	೨	ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨ ಪುಟ)	....	೪	ರೂ
A brief life sketch of Pandit Sri Kashinatha Shastriji (*English*)		4	As.
The Philosophical Aspect of Virasaivism (*English*)	..	8	As.
Speeches by Pandit Shri Kashinatha Shastriji *English*)		12	As.
ವೀರಶೈವರು (ಅರಬಿ)	... .	೧	ಕ.
ಮಹಾಚಾರಚಂದ್ರಿಕೆ (ವೀರಶೈವಾಚಾರ-ಸಂಸ್ಕೃತ)		೧	ಕ.
ವೀರಶೈವತತ್ವಶೇಖರ (ಸಂಸ್ಕೃತ)	... ...	೧	ಕ.
ಸಂಧಿಕೌಮುದಕಾರಿಕಾ (ಸಂಸ್ಕೃತ)	... ...	೨	ಆಣೆ.
ಲಿಂಗಾಚಾರಚಂದ್ರಿಕಾ (ಸಂಸ್ಕೃತ)	... ...	೩	ಕ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಂಸ್ಥಾನದ ರೋಡಿನೆರಿಯವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ ನಲ್ಲಿ ಸಂಸ್ಥಾನದವರಾದ ನೇಟಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರಾಜ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿಕರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಮಾಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಪ್ರತಿ ಪ್ರತಿ ೧೧ಕ್ಕೆ ೬ ಕೈ. ಪರಸ್ಥಳದವರಿಗೆ ೨ ರೂ. ೪ ಆಣೆ ೨ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ ನೇ ಮಾರ್ಚಿ ೧೯೬೦ [ಸಂಚಿಕೆ ೬೫

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ದೀಕ್ಷಾ ಸನಾರಂಭ ಮುಹೂರ್ತ

ನಾಂದೇಡ ಜಿಲ್ಲಾ ಮುಹೇತದಲ್ಲಿರುವ ನೇ॥ ಕರಬಸವಜ್ಜ ರೇಣಯ್ಯ ಹಿರೇಮಠ ಇವರ ಮನೆಯಲ್ಲಿ ಮಾಘ ಬ॥ ೪ ಮಂಗಳವಾರ ತಾ॥ ೨೭ ೨ ೪೦ ನೇ ದಿವಸ ದೀಕ್ಷಾ ಮಹೋತ್ಸವವು ಅಸ್ಮದಂತಃ ವಿದ್ವಾಂಸರಿಯೆಂದ ಶೆರವೇರಿತು ದೀಕ್ಷಾ ಮಂಟಪವು ತೋರಣಗಳಿಂದಲೂ, ರಂಗವಲ್ಲಿಗಳಿಂದಲೂ ಅಲಂಕೃತವಾಗಿತ್ತು. ಶ್ರೀ॥ ಷ॥ ಬ್ರ॥ ಗುರುಸಿದ್ಧ ಶಿವಾಚಾರ್ಯರು ಭೂಸನೂರು, ಶಾಲಶಪಸ್ಸು ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯರು ಹೋಟಗಿ, ಶ್ರೀ॥ ಷ॥ ಬ್ರ॥ ಗುರುಸ್ವಾಮಿಗಳು ಹೈನಾಪುರ, ಶ್ರೀ॥ ಷ॥ ಬ್ರ॥ ಧೇನುಕಣ್ಣಶಿವಾಚಾರ್ಯರು ಸೊಲ್ಲಾಪುರ, ಶ್ರೀ॥ ಸಿದ್ಧರಾಮಯ್ಯ ದೇಶಿಕೇಂದ್ರಮಠೀಕ ವೇ॥ ಗಂಗಾಧರಯ್ಯ ಹಿರೇಮಠ ವಾಗಿ ಇವರೇ ಮೊದಲಾದವರು ಉಚಿತಾಸನವನ್ನು ಅಲಂಕರಿಸಿದ್ದರು. ವಾರದ ಸಂಸ್ಕೃತ ಪಾಠಶಾಲಾ ಪ್ರಧಾನಾಧ್ಯಾಪಕರಾದ ವೇ॥ ಪಲ್ಲಿ ಜಗದೀಶಶಾಸ್ತ್ರಿಗಳು ವೈದಿಕ ಶೈವಸ್ಥ ವಹಿಸಿದ್ದರು. ರೇವಣಸಿದ್ಧಶರ್ಮರು, ಶಂಕರ ಶರ್ಮಾ, ಚನ್ನಬಸವಶರ್ಮಾ, ಮಹಾರುದ್ರಶರ್ಮಾ, ಗಂಗಾಧರಶರ್ಮಾ ಇವರೇ ಮೊದಲಾದ ವಟುಗಳಿಗೆ ಮಾಹೇಶ್ವರ ದೀಕ್ಷೆಯೂ, ಇಷ್ಟುಳಿದ ೩೦ ಜನರಿಗೆ ಭಕ್ತ ದೀಕ್ಷಾ ಸಂಸ್ಕಾರವೂ ಸಾಂಗವಾಗಿ ನೆರವೇರಿಸಲ್ಪಟ್ಟಿತು. ನಮ್ಮ ಮತಕ್ಕೆ ಇಷ್ಟು ದಿವಸ ಮುಂದಾಳ್ವಿದ್ದ ಇದ್ದ ದಿಂದ ಮತವು ಹೀನಾವಸ್ಥೆಯಲ್ಲಿತ್ತು. ಈಗ ಬಾಲಬ್ರಹ್ಮಚಾರಿಗಳಾಗಿ ತಮಗೆ ಅನೇಕ ಕಷ್ಟಗಳು ಬಂದರೂ ಅವುಗಳಿಗೆ ಲಕ್ಷ್ಯಗೊಡದೆ ವೀರಶೈವ ಸಾಮ್ರಾಜ್ಯದ ಸೈರ್ಯಾಧಿಪತಿತ್ವವನ್ನು ವಹಿಸಿ ಜಗಲೂ ರಾತ್ರಿಯೂ ದುಡಿಯುತ್ತ ಅವಿವೇಕಿಗಳಿಗೆ ವಿವೇಕಿಗಳನ್ನಾಗಿಯೂ, ಗರ್ವಿಷ್ಠರನ್ನು ವಿನಮ್ರರನ್ನಾಗಿಯೂ, ವಾದಿಗಳನ್ನು ನಿರ್ವಾದಿಗಳನ್ನಾಗಿಯೂ ಮಾಡಿ ಈ ಮಹಾ ಸಾಮ್ರಾಜ್ಯದ ವೈಭವವನ್ನು ವೃದ್ಧಿಗೊಳಿಸುತ್ತಿರುವ ಹಿರಿಯ ಪಲ್ಲಿ ಶ್ರೀ ಶಾಸ್ತ್ರೀಸಾರ್ವಭೌಮ ಶಾಸ್ತ್ರಿಗಳವರಿಗೆ ವೀರಶೈವ ಮತೀಯರು ಅತ್ಯಂತ ಕೃತಜ್ಞತೆಯಿಂದ ಎಷ್ಟು ವಂದನೆಗಳನ್ನರ್ಪಿಸಿದರೂ ಅಲ್ಪವೆಂದೇ ಹೇಳಬೇಕಾಗಿದೆ.

ಯಾವ ಮಹಾತಯರು ನಮ್ಮ ಮತದ ಸೆಲುವಾಗಿ ಜಗಲೂ ರಾತ್ರಿಯೂ ದುಡಿಯಲು ಬದ್ಧಕಂಕಣರಾಗಿರುವರೋ ಆ ಮಹಾತಯ ಶ್ರೀ ಶಾಶೀಶಾಸ್ತ್ರಿಗಳವರ ಕಾರ್ಯಗಳು ನಿರ್ವಿಘ್ನವಾಗಿ ಸಾಗಲೆಂದೂ ಮತ್ತು ಅವರಿಗೆ ಆಯುರಾರೋಗ್ಯ ಭಾಗ್ಯವು ಇನ್ನೂ ಹೆಚ್ಚು ಲೆಂದೂ ಸರ್ವರೂ ಜಗದ್ಗುರುವನ್ನು ಪ್ರಾರ್ಥಿಸಿದರು. ಆಸ್ತು !

ವೇ॥ ಕರಬಸವಯ್ಯ ರೇಣಯ್ಯ ಹಿರೇಮಠ ಇವರು ದೀಕ್ಷಾ ಸನಾರಂಭವಲ್ಲಿ ಶ್ರೀ॥ ಷ॥ ಬ್ರ॥ ಗುರುಸ್ವಾಮಿಗಳು ಹೈನಾಪುರ ಇವರ ಅಪ್ಪಣೆಯ ಮೇರೆಗೆ ಪ್ರಭಾ ಪತ್ರಿಕೆಗೆ ಆಜಂದಾದಾರರಾಗಲು ಒಪ್ಪಿದ್ದಲ್ಲದೆ ಪ್ರಭಾ ಪೋಷಣಾರ್ಥವಾಗಿ ೨ ರೂಪಾಯಿಗಳನ್ನು ಸಮರ್ಪಿಸಿದರು. ನೇ॥ ಕರಬಸವಯ್ಯನವರಿಗೂ ಅವರ ಪುತ್ರಪೌತ್ರಾದಿ ಬಂಧುವರ್ಗದವರಿಗೂ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುವ— ರಾಜಪ್ಪ ಮಾಳಿ

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಜೋಳಕರ್ಮಾವಾಹೋತ್ಸವ, ವಾಗಿ

ವೇ॥ ಗಂಗಾಧರಯ್ಯ ವಾಗಿ ಹಿರೇಮಠ ಇವರು ತಮ್ಮ ಪುತ್ರನ ಜೋಳಕರ್ಮವನ್ನು ವಾಗಿಯಲ್ಲಿ ತಾ॥ ೬ ೩-೧೯೬೦ ನೆಯ ಬುಧವಾರ ವಿಧಿವತ್ತಾಗಿ ನೆರವೇರಿಸಿದರು ಆಗ್ಗೆ ಶ್ರೀ॥ ಷ॥ ಬ್ರ॥ ಗುರುಸ್ವಾಮಿ ಹೈನಾಪುರ ಹಿರೇಮಠ ಇವರು ವೇ॥ ಗಂಗಾಧರಯ್ಯನವರ ಆಮಂತ್ರಣದ ಪ್ರಕಾರ ವಾಗಿಗೆ ದಯಮಾಡಿಸಿದ್ದರು ವಾರದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ವೇ॥ ಗಂಗಾಧರಶರ್ಮಾ ಹೊನಗೋಡ ಇವರು ಶ್ರೀ ಗವಿಸಿದ್ಧ ಮಹಾರಾಜರ ಮೂಲ ಆತ್ಮ ಗದ್ದುಗೆಗೆ ರುದ್ರಾಭಿಷೇಕವನ್ನು ಮಾಡಿದರು ಗವಿಸಿದ್ಧ ಮಹಾರಾಜರು ಮಹಾ ತಪಸ್ವಿಗಳಾಗಿದ್ದರು ಇವರು ಯಾವಾಗಲೂ ಶಿಷ್ಯೋದ್ಧಾರದಲ್ಲಿದ್ದೇ ನಿರತರಾಗಿರುತ್ತಿದ್ದರು ಇವರು ಆಗಿಂದಾಗ್ಗೆ ಶಿಷ್ಯರ ಮನೆಗಳಿಗೆ ಹೋಗಿ ಶಿಷ್ಯ ರಲ್ಲಿರುವ ಆಚಾಹಾರವನ್ನು ಹೊಡೆದೋಡಿಸಿ ಸದಾಚಾರ ಬೀಜವನ್ನು ಬಿತ್ತುತ್ತಿದ್ದರು ಗವಿಸಿದ್ಧ ಮಹಾರಾಜರ ಗವಿಯು ಈಗಲೂ ವಾಗಿಯಲ್ಲಿ ವಿರಾಜಮಾನವಾಗಿರುವುದು ಈ ಗವಿಗೆ ಸ್ವಯಂಭೀಯರೂ ಪರಮತೀಯರೂ ಅತ್ಯಂತ ಭಯಭಕ್ತಿಯಿಂದ ನಡೆದುಕೊಳ್ಳುತ್ತಿರುವರು

ಈ ಗವಿಸಿದ್ಧ ಮಹಾರಾಜರ ವಂಶನವರೇ ವೇ॥ ಗಂಗಾಧರಯ್ಯನವರು ಇವರು ನಂದಿಗೋತ್ರಸ್ಥೆ ಸೇರಿದ ವರು. ಇವರಿಂದೂ ಮಠದ ಗೌರವವನ್ನು ಕಾಪಾ ಡುತ್ತ, ಸದಾಚಾರಿಗಳಾಗಿಯೂ, ಗುರುವಿನಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿಯೂ ಇರುವರು ಇವರ ಪತ್ನಿಯವರಾದ ಕುಂ॥ ಸೌ॥ ಗಂಗಾದೇವಿಯವರು ಪತಿಭಕ್ತೆ ಪರಾಯಣೆಯರಾಗಿದ್ದು ಜಗದ್ಗುರು ಪಂಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟಿರುವರು. ಈ ವಾಗೀಣಮಠಕ್ಕೆ ಅನೇಕ ಗ್ರಾಮಗಳಲ್ಲಿ ಕಾಶಾವೆ.ಕಗಳಿರುವವು. ಈ ಜೋಳಕರ್ಮ ಸಮಯದಲ್ಲಿ ವೇ॥ ಗಂಗಾಧರಯ್ಯನವರು ಶ್ರೀ॥ ಷ॥ ಬ್ರ॥ ಶೈನಾಪುರ ಶ್ರೀಗಳ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕೈಸ್ಥರ ೧ ರೂಪಾಯಿಯನ್ನು ಸಮರ್ಪಿಸಿದರು ಈ ದಂಪತಿಗಳಿಗೂ ಇವರ ಬಂಧು ಬಾಂಧವರಿಗೂ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯವನ್ನೀಯಲೆಂದು ಪ್ರಾರ್ಥಿಸುವ ಮಲ್ಲಯ್ಯ ಮತಪತ್ರಿ, ವಾಗಿ

ಶರ್ ಮೈಕೇಲ್ ಓಡ್ವೈಯವರ ಕೊಲೆ

ಕಳೆದ 13 ನೆಯ ತಾರೀಖಿನ ರಾತ್ರಿ ಲಂಡನ್ನಿನ ಕಾಕ್ಸ್‌ಟನ್ ಹಾಲಿನಲ್ಲಿ ಈಸ್ಟ್ ಇಂಡಿಯಾ ಸಂಘದ ಸಭೆಯು ನಡೆಯುತ್ತಿದ್ದಾಗ ಭಾರತೀಯ ಯುವಕನೆಂ ಬ್ಬನು ಪತ್ರಿಕಾ ಸುದ್ದಿಗಾರರ ಮೇಜಿನ ಬಳಿ ಬಂದು ನಿಂತು ರಿವಾಲ್ವರಿನಿಂದ ಆರು ಸಾರಿ ಗುಂಡು ಹಾರಿ ದನು ಸರ್ ಓಡ್ವೈಯರ್‌ರವರು ಕೂಡಲೆ ಮೃತರಾದರು ಅಧ್ಯಕ್ಷರಾಗಿದ್ದ ಲಾರ್ಡ್ ಜೆಟ್ಲೆಂಡರು ಸ್ವಲ್ಪ ಗಾಯ ಗೊಂಡು ಉರುಳಿದರು. ಲಾರ್ಡ್ ಲ್ಯಾಮಿಂಗ್ಟ ಮತ್ತು ಸರ್ ಲೂಯಿಡೇನ್ಸಂಗೆ ಏಟು ಬಿದ್ದು ಕೈ ಮೂ ಮುರಿದಿರುವದಾಗಿ ತಿಳಿದು ಬರುತ್ತದೆ ಹೆಚ್ಚಕಮ ತಿ ರುತ್ತಿನೆ ಆವನ ಹೆಸರು ಮೋಹನ್‌ಸಿಂಗ್, ವಯಸ್ಸು 37 ಈ ಬಂಗಾಳಿ ಯುವಕನು ಇಂಜನಿಯರಶಿಕ್ಷ ತಿಳಿದು ಬರುತ್ತದೆ. ಇವನು ಪೋಲೀಸಿನವರ ಜೀಪಿ ಕೊಡುತ್ತಾ "ನನಗೆ ಎಂ ಓಡ್ವೈಯರ್‌ರವರನ್ನ ಕೊಲ್ಲುವ ಉದ್ದೇಶವಿರಲಿಲ್ಲ. ನನ್ನ ಪ್ರತಿಭಟನೆ ತೋ ಸಲು ನಾನು ಹಾಗೆ ಮಾಡಿದೆ ಯಾರಮ್ಮ ಕೊಲ್ಲು ಉದ್ದೇಶ ನನಗಿರಲಿಲ್ಲ" ಎಂದು ತಿಳಿಸಿದ್ದಾನೆ ಮುಂದಿ ಶೋಧವು ನಡೆಯುತ್ತಲಿದೆ

ಧಕಾಯತರ ಬಂಧನ!

ದಕ್ಷಿಣ ವಜೀರಿಸ್ತಾನದ ಪೊಲಿಟಿಕಲ್ ಏಜಂಟರ ಧಕಾಯತರನ್ನು ಹಿಡಿಯುವದೆಕ್ಕಾಗಿ ರೂಕ್ಷಜನರೇ ವೇಷವನ್ನು ಹಾಕಿದ ಕೆಲವು ಸೈನಿಕರನ್ನು ಆ ಸೈಳ ಟ್ಯಾಕ್ಸಿಗಳಲ್ಲಿ ಕಳುಹಿಸಿದರು ಟ್ಯಾಕ್ಸಿಗಳನ್ನು ಕಂ ಕೂಡಲೆ ರೂಕ್ಷಜನರು ಅವುಗಳನ್ನು ಮುತ್ತಿದರು. ವೇ ಧಾರಿ ಸೈನಿಕರು ಕೂಡಲೆ ಹೊರಗೆಳದು, ಆಶ್ಚರ್ಯವ ಗುವ ರೀತಿಯಲ್ಲಿ ಧಕಾಯತರನ್ನು ಬಂಧಿಸಿದರೆಂದ ತಿಳಿದುಬರುತ್ತದೆ

ಶಿವರಾತ್ರಿಯದಿವಸ ಶಿವಸ್ತೋತ್ರಪೂಜಿಸುತ್ತಿರ್ದಾಗ್ಗೆ ಮರಣ

ಮಲೆಯಾಳದೇಶದ ಪೆರಿಯಾರ್ ಎಂಬ ಗ್ರಾಮದ ಲ್ಲಿರ್ದ್ದ ಕಾಂತರಂ ಎಂಬ 70 ವರ್ಷ ವಯಸ್ಸಿನ ವೃದ್ಧ ಭಕ್ತನು ಕಳೆದ ಶಿವರಾತ್ರಿಯ ರಾತ್ರಿ ಪರಿಶೀಲದಲ್ಲಿ ಅಸಾಧಾರಣ ಭಕ್ತಿಯಿಂದ ಶಿವಕಥಾಸ್ತೋತ್ರವನ್ನ ಮಾಡುತ್ತಿದ್ದಂತೆಯೇ ಪರಧಾಮವನ್ನೈದಿದನಂತೆ ಈ ಪುಣ್ಯಪುರುಷನ ಭಾಗ್ಯಕ್ಕೆ ಎಣೆಯೇ ?

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವ.

——

ಸೊಲ್ಲಾಪುರ

ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯ ಮತ್ತು ಜಗದ್ಗುರು ವಿಶ್ವಾರಾಧ್ಯರ ಜಯಂತಿ. ಶ್ರೀಸಿದ್ಧೇಶ್ವರ ಬಜಾರ ಮತ್ತು ಅಕ್ಕಲಕೋಟ ಸ್ವಾಮಿಮಠದ ನೆರವೇರಿಸಲ್ಪಟ್ಟಿತು. ಅದಿನ ಪ್ರಾತಃಕಾಲ ಜಗದ್ಗುರುಗಳವರ ಲಿಂಗಾರ್ಚನಪೂಜಾನಂತರ ಶ್ರೀಮಠದಲ್ಲಿ ಶ್ರೀ ಜಗದ್ಗುರು ರಾಜಾಧ್ಯರ ಪಾದಪೂಜೆಯನ್ನು ಸಕಲ ವಾದ್ಯಗಳೊಂದಿಗೆ ಸಕಲ ಕಟ್ಟಾಪ ಕಲಾಂತಾಗಿ ನೇಪ ಪಲ್ಲಕ್ಕಿ ಜಗದ್ಗುರುಸ್ವಾಮಿಗಳ ಮಾಡಿಸಿ, ವೇದ ಪಠಣ ಜಗದ್ಗುರು ಶಾಸ್ತ್ರಿಗಳು ಸಾಲ್ವಾನ, ಶ್ರೀ ಹಿರೇಮಠ ವಕೀಲರು, ಶ್ರೀ ಪಟ್ಟಣಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಸಭೆಯ ಪ್ರಾರಂಭದಲ್ಲಿ ಶ್ರೀ ಜಗದ್ಗುರು ರಾಜಾಧ್ಯರ ಸ್ತೋತ್ರವನ್ನು ಹಾಡಿ ಸಭಿಕರಿಗೆ ಪಾನಕ ಕೊಡಲಾಯಿತು. ಆಮೇಲೆ ಶ್ರೀ ಜಗದ್ಗುರು ಶಾಸ್ತ್ರಿಗಳು ಸಾಲ್ವಾನ, ಶ್ರೀ ಹಿರೇಮಠ ವಕೀಲರು, ಶ್ರೀ ಪಟ್ಟಣಶೆಟ್ಟಿ ಇವರು ಜಗದ್ಗುರುಗಳವರ ಹೋಗಿಬಂದ ಇತಿಹಾಸವನ್ನು ಸಂಕ್ಷೇಪವಾಗಿ ಭಾಷಣ ಮಾಡಿದರು. ಆಮೇಲೆ ಅಧ್ಯಕ್ಷರು ಶ್ರೀ ಪಟ್ಟಣಶೆಟ್ಟಿ ಇವರು ಸಂಕ್ಷೇಪವಾಗಿ ಭಾಷಣ ಮಾಡಿದರು. ಆಮೇಲೆ ಶ್ರೀ ಜಗದ್ಗುರು ಶಾಸ್ತ್ರಿಗಳು ಸಾಲ್ವಾನ, ಶ್ರೀ ಹಿರೇಮಠ ವಕೀಲರು, ಶ್ರೀ ಪಟ್ಟಣಶೆಟ್ಟಿ ಇವರಿಗೆ ಹಾರತುರಾಯಿ ಕೊಟ್ಟು ಸತ್ಕರಿಸಲಾಯಿತು. ಆಮೇಲೆ ಸಭೆಯು ವಿಸರ್ಜನೆಯಾಯಿತು.

——

ಸೊಲ್ಲಾಪುರ

ಶ್ರೀ ಪಟ್ಟಣಶೆಟ್ಟಿ ಫೌಂಡೇಶನ್ ಶಿರಾಚಾರ್ಯ ಜೋಡಭಾವಿಮಠ ಹುಬ್ಬಳ್ಳಿ ವರವಧು ಶ್ರೀ ಜಗದ್ಗುರು ಪಂಡಿತಾರಾಧ್ಯರ ಜಯಂತೀ ಮಹೋತ್ಸವವು ಪೌಷ ಶುದ್ಧ ಪೂರ್ಣಿಮೆ ಶುಕ್ರವಾರ ದಿವಸ ವೈಭವದಿಂದ ನೆರವೇರಿತು. ಶ್ರೀ ಪಟ್ಟಣಶೆಟ್ಟಿ ಚನ್ನವೀರಶಿವಾಚಾರ್ಯರು ಹೋಗಿಬಂದ ಇತಿಹಾಸವನ್ನು ಸಂಕ್ಷೇಪವಾಗಿ ಭಾಷಣ ಮಾಡಿದರು. ಆಮೇಲೆ ಶ್ರೀ ಪಟ್ಟಣಶೆಟ್ಟಿ ಚನ್ನವೀರಶಿವಾಚಾರ್ಯರು ಅಧ್ಯಕ್ಷರಾಗಿ ಸಭೆಯು ಕೂಡಿತು. ಜಗದ್ಗುರು ಪಂಡಿತಾರಾಧ್ಯರ ಮತ್ತು ಜಗದ್ಗುರು ವಿಶ್ವಾರಾಧ್ಯರ ಜಯಂತೀ ಮಹೋತ್ಸವವು ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು ಪ್ರಥಮದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಭಾವಚಿತ್ರವನ್ನು ಉತ್ಸವಸಮಾರಂಭದಲ್ಲಿ ಮೂರ್ತ ಮಾಡಿಸಿ ಪೂಜೋಪಚಾರದಿಂದ ಪೂಜಿಸಿದ ನಂತರ ಇಪ್ಪತ್ತು ಸದಾಚಾರ ಬಾಲಿಕಾ ಸಮಾಜದ ಕುಮಾರಿಯರ ಜಗದ್ಗುರುಗಳವರ ಸ್ತೋತ್ರವನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ ಕುಮಾರಿಯರು ತಮ್ಮ ಟಾಲಭಾಷೆಯಿಂದ ಜಗದ್ಗುರುಗಳವರ ಅವತಾರದ ವಿಷಯವಾಗಿ ಭಾಷಣ ಮಾಡುವಾಗ್ಗೆ ಸಭಿಕರ ಮನಸ್ಸಿನ ಆನಂದಕ್ಕೆ ಪಾರವೇ ಇರಲಿಲ್ಲ ಆವರು ಹಾಡುವ ಜೋಗುಳ ಪದವು ಎಂತಹ ನಾಸ್ತಿಕರಿಗೂ ಭಕ್ತಿ ಹುಟ್ಟುವಂತಿದ್ದವು. ಆಮೇಲೆ ಸೌ॥ ಮಾನ್ಯವತಿ ಹಿರೇಮಠರು, ದೊಡ್ಡಪಾಠ ಶಾಲಾ ಸೌ॥ ಭಾಗಿರಥಿಬಾಯಿ ಕಟಾಸ, ಇವರ ಸಮಯೋಚಿತವಾದ ಭಾಷಣವಾದ ಮೇಲೆ ಶ್ರೀ॥ ಪಟ್ಟಣಶೆಟ್ಟಿ ಜೈನಾಪುರ ಶ್ರೀ॥ ಪಟ್ಟಣಶೆಟ್ಟಿ ಬಾಲತಪಸ್ವಿ ಚನ್ನವೀರಶಿವಾಚಾರ್ಯರು ಬೃಹದ್ಗುರು ಪಂಡಿತಾರಾಧ್ಯರ ಪೂಜ್ಯರು ಆಕಸ್ಮಿಕವಾದ ರೂಪ ಪಾದ ಪದ್ಯೋಧ್ಯೆಯನ್ನು ಮಾಡಿದರು. ಆ ಮೇಲೆ ಕಾಯಿ ಕರ್ಪೂರ ಮಂಗಲಾರತಿಯಾಗಿ ಜಗದ್ಗುರುಗಳವರ ಸಂಸ್ಮರಣೋತ್ಸವವು ಸಮಾಪ್ತವಾಯಿತು.

ಉಭಯ ಜಗದ್ಗುರುಗಳವರ ಜಯಘೋಷದೊಡನೆ ಸರ್ವರಿಗೂ ವಂದನ ಪ್ರಸಾದವನ್ನು ಸ್ವೀಕರಿಸಿ ತಮ್ಮ ತಮ್ಮ ಗೃಹಕ್ಕೆ ತೆರಳಿತು. ಶಿವನಾಮ ಹಾಗೂ ಗುರುನಾಮ ಸ್ಮರಣೆಯಿಂದ ಮಹಾ ಶಿವರಾತ್ರಿಯ ದಿವಸ ಮಾಡಬೇಕಾದ ಜಾಗರಣೆಯು ಬಹು ಸಿಸ್ಸಾಗಿ ನೆರವೇರಿತು. ಅತಿಥಾದರಣ ಶಿವಭಕ್ತಿಯಿಂದಲೂ ಗುರು ಭಕ್ತಿಯಿಂದಲೂ ಜಯಂತಿಯನ್ನು ಮಾಡಿದ ಮಹಾಶಯರಿಗೆ ಪರಶಿವನು ಉತ್ತರೋತ್ತರ ಕಲ್ಯಾಣವನ್ನೊಂಟು ಮಾಡಲೆಂದು ಹಾರೈಸುತ್ತೇನೆ. ಓಂ ಗುರುಭಕ್ತ.

ಕುಂಡಗೋಳ

ಜನಮಂದಿ ಸ್ವೀಟ್ ಕುಂದಗೋಳದ ಪಂಚಗೃಹ ಹಿರೇಮಠದಲ್ಲಿ ಮಹಾಶಿವರಾತ್ರಿ ದಿವಸ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತಿಯು ಒಳ್ಳೇ ವೈಭವದಿಂದ ಜರಗಿತು. ಶ್ರೀ ಜಗದ್ಗುರುಗಳಲ್ಲಿ ಅಪಾರ ಭಕ್ತಿ ಪಡಿಸಿದ ವೀರಶೈವ ಭಕ್ತರು ೪ ದಿವಸ ಸಾಯಂಕಾಲ ಹಿರೇಮಠದಲ್ಲಿ ಸೇರುತ್ತಿದ್ದರು. ಸರ್ವ ಭಕ್ತ ಸಮುದಾಯದ ಮಧ್ಯದಲ್ಲಿ ಶ್ರೀಜಗದ್ಗುರು ವಿಶ್ವಾರಾಧ್ಯರ ವಿಗ್ರಹಕ್ಕೆ ಅಭಿಷೇಕವು ಮಾಡಲ್ಪಟ್ಟಿತು. ರಾತ್ರಿ ೯ ಘಂಟೆಗೆ ಪಂಚಾಚಾರ್ಯರ ಜಯಘೋಷದೊಡನೆ ಶ್ರೀ ಜಗದ್ಗುರುಗಳ ವಿಗ್ರಹದ ಪಲ್ಲಕ್ಕಿ ಮಹೋತ್ಸವವು ಜರಗಿತು. ಗ್ರಾಮದ ಪ್ರಮುಖ ಭಕ್ತರೆಲ್ಲರೂ ಉತ್ಸವದಲ್ಲಿ ಭಾಗಿಗಳಾಗಿದ್ದರು. ಉತ್ಸವವು ಪುರದ ಮುಖ್ಯ ಮುಖ್ಯ ಬೀದಿಗಳಲ್ಲಿ ಹಾಯ್ದು ೪.೪೬ಕ್ಕೆ ರಾತ್ರಿ ೧೨ ಘಂಟೆಗೆ ತಲ್ಪಿತು

ಬಳಿಕ ಮಹಾಶಿವರಾತ್ರಿಯ ಜಾಗರಣೆಯ ನಿಮಿತ್ತವಾಗಿ ಮತ್ತು ಜಗದ್ಗುರುಗಳ ಲೀಲೆಗಳನ್ನು ಶ್ರವಣ ಮಾಡಿ ತನ್ಮ ಜನ್ಮವನ್ನು ಸಫಲಮಾಡಿಕೊಳ್ಳಬೇಕೆಂದು ಅನೇಕ ವೀರಶೈವ ಭಕ್ತರು ಮಠದಲ್ಲಿ ಸೇರಿದರು. ವೇ॥ ಪ್ರವಚನ ಪಟು ಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ, ಇವರು ತಮ್ಮ ಅಸ್ಖಲಿತ ಮತ್ತು ಇಂಪಾದ ಶೈಲಿಯಿಂದ "ಗುರುಮಹಿಮೆ" ಮತ್ತು "ಶಿವಕಥಾ" ಇವುಗಳನ್ನು ಹೃದಯಂಗಮವಾಗುವಂತೆ ಬೋಧಿಸಿದರು. ಅಮೇಲೆ ಆಚಾರ್ಯರ ಮಂಗಳ ಮತ್ತು ಜಯಘೋಷದೊಡನೆ ದಿನದ ಕಾರ್ಯವು ಪೂರ್ತಿಗೊಂಡಿತು.

ಜಗದ್ಗುರುಗಳ ಜಯಂತೀ ಮಹೋತ್ಸವಕ್ಕಾಗಿ ಪಂಚ ಗೃಹ ಹಿರೇಮಠದ ಅಧಿಕಾರಿಗಳಾದ ಶ್ರೀ ಚರಮೂರ್ತಿ ಸ್ವಾಮಿಗಳವರು ವಿಶೇಷ ಶ್ರಮವಹಿಸಿ ವೀರಶೈವರಲ್ಲಿ ಭವಜ್ಞೆ ಹತ್ತಿಸಿ ಸಂಭ್ರಮದಿಂದ ಮಾಡಿ ನಮ್ಮೆಲ್ಲರನ್ನು ಉದ್ಧಾರ ಮಾಡಿದ್ದಕ್ಕೆ ಸರ್ವರೂ ಕೃತಜ್ಞರಾಗಿದ್ದಾರೆ.

ಮಹಾದೇವಪ್ಪ, ಕೋಳಿವಾಡ.

॥ ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ಜಯಘೋಷೇಣ ಮಹೋತ್ಸವ ಮುಖೇಣ

ನಿಜಾಮ ಸ್ಟೇಟು ನಾಂದೇಡ ಜಿಲ್ಲಾ ಕಂದಾರ ತಾ॥ ಮುಖೇಡ ಗ್ರಾಮದಲ್ಲಿ ಶ್ರೀ ಜಗದ್ಗುರು ಉಜ್ಜಯಿನೀ ಶಾಖಾಮಠ (ಹಿರೇಮಠ) ವಿದ್ದು ಆ ಮಠಕ್ಕೆ ಪೂರ್ವ ದಿಂದಲೂ ಅನೇಕ ತಪಸ್ವಿಗಳು ಪಟ್ಟಾಭಿಷಿಕ್ತರಾಗಿ ಸಮಾಜೋನ್ನತಿಯನ್ನು ಮಾಡಿರುವರಲ್ಲದೆ ಮಠದ ಮಹತ್ವವನ್ನು ವೃದ್ಧಿಗೊಳಿಸಿದ್ದಾರೆ. ಈ ಕಾಲಾಂತರ ಗಣಾಚಾರಿಯ ಬಾಬ್ಲಿಪ್ಪನು ಈ ಮಠದ ಅಧಿಪತ್ಯಕ್ಕೆ ಒಳಪಟ್ಟಿದ್ದಾನಿದೆ. ಶ್ರೀ ॥ ಜಗದ್ಗುರು ಪಂಚಾಚಾರ್ಯ ಸ್ವಾಮಿ ಚರಪಟ್ಟಾಧ್ಯಕ್ಷರು ವಯೋವೃದ್ಧರಾಗಿದ್ದು ತೇವಲ ಶಾಖಾಮಠಾಧಿಗಳೂ ಸನಾತನ ತತ್ವವಿಚಾರ ಪರರೂ ಆಗಿದ್ದಾರೆ. ಅವರು ತಮ್ಮ ತರುವಾಯ ಮಠದ ಅಧಿಪತ್ಯವನ್ನು ವಹಿಸಲಿಕ್ಕೆ ಯೋಗ್ಯವಾದ ವಟುವನ್ನು ಹುಡುಕುತ್ತಾ ಶ್ರೀ॥ ಮಹಾಲಿಂಗಸ್ವಾಮಿ ಕಾತಿಕರ್, ಮಂ॥ ರಾಚಪ್ಪಸ್ವಾಮಿ ಇವರೊಡನೆ ಸೊಲ್ಲಾಪುರಕ್ಕೆ ಆಗಮಿಸಿ ಅಲ್ಲಿ ಶ್ರೀಮದ್ವೀರಶೈವ ವಾರದ ಸಂಸ್ಕೃತ ಪಾಠಶಾಲಾ ಪ್ರಧಾನಾಧ್ಯಾಪಕರಾದ ವೇ॥ ಸಂ॥ ಜಗದೀಶಶಾಸ್ತ್ರಿಗಳು ತಾಲ್ಲಾರ ಇವರಲ್ಲಿ ತಮ್ಮ ವಿಚಾರವನ್ನು ತಿಳುಹಿಸಲಾಗಿ ಸದರಿ ಪಂಡಿತರು ತಮ್ಮಲ್ಲಿರುವೆ ೨ ಶಿಷ್ಯರನ್ನು ಹೊಂದುತ್ತಿರುವ ಹುಳಗೇರಿ ಹಿರೇಮಠದ ಶ್ರೀ॥ ಸೋಮಶೇಖರಶರ್ಮಾ ಎಂಬ ವಟುವನ್ನು ಆರಿಸಿದರು. ಇವರು ತಾಂತ್ರಮೂರ್ತಿಗಳೂ, ಗುರುಶ್ರ ಲಕ್ಷಣಜ್ಞಿ ಅರ್ಹರೂ, ಸದ್ವಂಶೀಯರೂ, ವಿದ್ಯಾವಂತರೂ, ಸುಜ್ಞಾನಿಗಳೂ, ಆಗಿರುವುದರಿಂದ ಶ್ರೀ॥ ಪಟ್ಟಾ ಬ್ರಾ॥ ಹಾಮಯ್ಯ ಸ್ವಾಮಿಗಳಿಗೆ ಒಪ್ಪಿಗೆಯಾಗಿ ತಮ್ಮೊತನೆಯೇ ತಮ್ಮ ಆಶ್ರಮಕ್ಕೆ ಕರದೊಯ್ದು ೪-೬ ತಿಂಗಳು ವಟುವಿನ ಗುಣಾದಿಗಳನ್ನು ಪರೀಕ್ಷಿಸಿ ಸಂಪೂರ್ಣ ಮನದಟ್ಟಾದ ಮೇಲೆ ಇದೇ ಪ್ರಮಾಥಿಸಾಮ ಸಂವತ್ಸರ ಮಾಘ ಬ॥ ೨ ರವಿವಾರಕ್ಕೆ ಪಟ್ಟಾಭಿಷೇಕ ಮಹೋತ್ಸವ್ಹವನ್ನು ನಿಶ್ಚಯಿಸಿದರು. ಪಟ್ಟಾಭಿಷೇಕ ಮಹೋತ್ಸವಕ್ಕೆ ಸೊಲ್ಲಾಪುರದಿಂದ ಶ್ರೀ॥ ಪಟ್ಟಾ ಬ್ರಾ॥ ಬಾಲಕಪಟ್ಟಿ ಚನ್ನವೀರ ಶಿವಾಚಾರ್ಯರು ಹೋಟಗಿ, ಶ್ರೀ॥ ಪಟ್ಟಾ ಬ್ರಾ॥ ಗುರು ಸ್ವಾಮಿಗಳು ಜೈನಾಪುರ, ಶ್ರೀ॥ ಪಟ್ಟಾ ಬ್ರಾ॥ ಗುರುಸಿದ್ಧ ಶಿವಾಚಾರ್ಯರು ಭೂಸನೂರು, ಶ್ರೀ॥ ಪಟ್ಟಾ ಬ್ರಾ॥ ಧೀಮ ಕಣ್ಣಶಿವಾಚಾರ್ಯರು ಸೊಲ್ಲಾಪುರ, ವೇ॥ ಪಂ॥ ಜಗದೀಶಶಾಸ್ತ್ರಿಗಳು ತಾಲ್ಲಾರ, ವೇ॥ ಗಂಗಾಧರಶಾಸ್ತ್ರಿಗಳು ವಾಂಗಿ ಹಿರೇಮಠ, ಸೌ॥ ಭಾಗೀರಥೀಬಾಯಿ ಕಟೂಪ ಇವರೇ ಮುಂತಾದವರನ್ನು ಸ್ವೆಷಲ್ ಸೋಷಲಾದಿಂದ ೨ ದಿವಸ ಮುಂಚಿತವಾಗಿ ಕರೆಯಿಸಿಕೊಂಡುಹೋದರು. ಮಾಘ ಬ॥ ೨ ರವಿವಾರ ಪ್ರಾತಃಕಾಲ ೮ ಘಂಟೆಗೆ ವೇ॥ ಪಂ॥ ಜಗದೀಶಶಾಸ್ತ್ರಿಗಳವರ ನೈದಿಕತ್ವದಲ್ಲಿಯೂ, ಮೇಲ್ಕಂಡ ಶ್ರೀಗಳವರ ಸಾನ್ನಿಧ್ಯದಲ್ಲಿಯೂ ಪಂಚಕಲಶಕ್ಕಾಪನ ಮುಂತಾದ ಕಾರ್ಯಕ್ರಮಪೂರ್ವಕ ಯಥಾ ಶಾಸ್ತ್ರವಾಗಿ ಸಾಯಂಕಾಲ ೫ ಘಂಟೆಗೆ ಪಟ್ಟಾಭಿಷೇಕವಿಧಿಯು ಪೂರ್ತಿ ಪಟ್ಟಿತ್ತು. ಅನಂತರ ಪಿಲಾರೋಹಣವಾಗಿ ಪಟ್ಟಿ ಬಂಧನವು ಪೂರ್ತಿಪಟ್ಟಿತ್ತು. ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಸಿದ್ಧಾಂತ ಶಿಖಾಮಣಿಯು ಪಂಚಮುದ್ರಿಗಳೊಡನೆ ಶ್ರೀ॥ ಪಟ್ಟಾ ಬ್ರಾ॥ ಚನ್ನವೀರಶಿವಾಚಾರ್ಯರಿಂದ ನೂತನ ಪಟ್ಟಾಧಿಕಾರಿಗಳಿಗೆ ಆರ್ಪಿಸಲ್ಪಟ್ಟಿತು. ಅನಂತರ ವೇ॥ ಪಂ॥ ಜಗದೀಶಶಾಸ್ತ್ರಿಗಳು "ಗುರುತ್ವಾದಿ ಕಾರಮಹತ್ವ" ದ ಮೇಲೂ ಶ್ರೀ॥ ಪಟ್ಟಾ ಬ್ರಾ॥ ಚನ್ನವೀರ ಶಿವಾಚಾರ್ಯರು "ಗುರುಶಿಷ್ಯಭಾವ" ದ ಮೇಲೂ ಭಾಷಣ ಮಾಡಿದರು. ನೂತನ ಪಟ್ಟಾಧಿಕಾರಿಗಳ ಮೊದಲನೇ ಪೀಠದ ಬದಲಾಯಿಸಿ ಶ್ರೀ॥ ಪಟ್ಟಾ ನಿರೂಪಾಕ್ಷ ಶಿವಾಚಾರ್ಯ ಎಂಬ ಅಭಿಧಾನವು ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಇಡಲ್ಪಟ್ಟಿತು ಅಮೇಲೆ ನೂತನ ಪಟ್ಟಾಧಿಕಾರಿಗಳು ತಮ್ಮ ಅಮೃತ ವಾಣಿಯಿಂದ "ಸ್ವಕರ್ತವ್ಯದಕ್ಷತೆ" ಎಂಬ ವಿಷಯದಲ್ಲಿ ತಮ್ಮ ಅಧಿಕಾರಕ್ಕೆ ಒಪ್ಪುವಂತೆ ಮನೋಹರವಾಗಿ ಭಾಷಣಮಾಡಿದರು. ಅನಂತರ ಸಮಾರಾಧನೆಯು ನೆರವೇರಿಸಲ್ಪಟ್ಟಿತು. ಮಾರನೇ ದಿವಸ ೨೩ಗಿ ಜನ ಶ್ರೀ ಪುರುಸರಿಗೆ ಪಂಚಶಾಖೆಯ ಗುರುಗಳ ಗುರುತ್ವದಲ್ಲಿ ದೀಕ್ಷಾ ಸಮಾರಂಭವು ನೆರವೇರಿತು. ೩-೪ ದಿವಸಗಳ ವರೆಗೆ ಎಲ್ಲ ಸ್ವಾಮಿಗಳವರ, ಶಾಸ್ತ್ರಿಗಳವರ ಭಾಷಣ ಗಳಾದವು. ಸೌ॥ ಭಾಗೀರಥೀಬಾಯಿ ಕಟೂಪ ಇವರ ಭಾಷಣದಿಂದಂತೂ ವಿಶೇಷವಾದ ಪರಿಣಾಮವಾಯಿತು. ಈ ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಹಳ್ಳಿಗಳಲ್ಲಿಯ ಭಕ್ತ ಮಾಹೇಶ್ವರರು ೫-೬ ಸಾವಿರದವರೆಗೆ ನೆರೆದಿದ್ದರು ಸರ್ಕಲ್ ಆಫೀಸ್ ಸಾಹೇಬ, ವಕೀಲರೇ ಮುಂತಾದ ಅಧಿಕಾರಿಗಳು ಆಗಮಿಸಿದ್ದರಿಂದ ಕಾರ್ಯಕ್ಕೆ ವಿಶೇಷ ಶೋಭೆಯುಂಟಾಗಿತ್ತು. ನೂತನ ಶ್ರೀಗಳಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಸರ್ವತೋಮುಖವಾಗಿ ಅಭಿವೃದ್ಧಿಯನ್ನಿಯಲೆಂದು ಹಾರೈಸುವ,

ವಿರೂಪಾಕ್ಷತರ್ಕಶರ್ಮಾ,
ಅಧ್ಯಕ್ಷಮಠ, ಪಾವಡಗೆರೆ.

ಶಿವಪಠಣ ಅಜ್ಜಂಪುರದ ಉ-ಪಾಧ್ಯಾಯರ ಸಂಘ, ಗಿರಿಯಾಪುರ.

ಕಡೂರು ರೇಂಜ್ ಶಿವಪೇಕ್ಷ ಅಜ್ಜಂಪುರದ ಉಪಾಧ್ಯಾಯರ ಸಂಘದ ಸಭೆಯು ಕಡೂರು ತಾಲೂಕು ಗಿರಿಯಾಪುರದಲ್ಲಿ ಬಹಳ ವೈಭವದಿಂದ ನೆರವೇರಿತು. ಗಿರಿಯಾಪುರದ ಲೋಯರ್ ಪ್ರೈಮರಿ ಸ್ಕೂಲಿನ ಕಟ್ಟಡವು ಶಕರಿತೋರಣ ರಂಭಾಸ್ತಂಭಗಳಿಂದ ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಮ.ಧ್ಯಾಹ್ನ ೧ ಘಂಟೆಗೆ ಅನೇಕ ಜನ ಉಪಾಧ್ಯಾಯರು ಶಾಲಾಕಟ್ಟಡಕ್ಕೆ ಆಗಮಿಸಿದ್ದರು. ೩ ಘಂಟೆಗೆ ಸಭೆಯು ಸೇರಿತು. ಸಕ್ಕರಾಯಪಟ್ಟಣದ ಸೌ॥ ಬ್ರಾ॥ ಶ್ರೀ ಸದಾಶಿವ ಶಿವಾಚಾರ್ಯರು ಸರ್ವಾನುಮತಿಯಿಂದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಈ ಗ್ರಾಮದ ಸರ್ವಮಾನ್ಯ ಮುಖಂಡರು ದಯಮಾಡಿ ಸಿದ್ದರು ಈ ಗ್ರಾಮವು ಎಲ್ಲ ಭಾಗಗಳಲ್ಲೂ ಮುಂದು ವರಿದಿದೆ ಎಂದರೆ ಅತಿಶಯೋಕ್ತಿಯಲ್ಲ.

ಪ್ರಥಮದಲ್ಲಿ ದೇವತಾಪ್ರಾರ್ಥನೆಯು ನಡೆಯಿತು. ಬಳಿಕ ಮಾತಾ-ಪಿತೃ ಆಧ್ಯಾಪಕ-ಬಾಲಕರು ವಿದ್ಯಾಭ್ಯಾಸಕ್ಕೆ ಎಕೀಕರಿಸಿ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ವೇ॥ ಎಸ್. ಎಸ್. ಮರುಳಸಿದ್ಧಯ್ಯ ಹಿರೇ ಮಾ॥ ಕಾಟೇನಹಳ್ಳಿ ಇವರು ಅನೇಕ ಲೌಕಿಕ-ವೈದಿಕ ಉದಾಹರಣೆಗಳಿಂದ ಮನಸ್ಕಾಶ್ರ ರೀತಿಯಾಗಿ ಸರ್ವರೂ ಆನಂದ ವಾಗುವಂತೆ ಉಪನ್ಯಾಸವನ್ನಿತ್ತರು. ಆನಂತರ ಮಿ॥ ರಾ॥ ಅಶ್ವತ್ಥ ಹೆ॥ ಮಾ॥ ಲೋ॥ ಪ್ರೈ॥ ಸ್ಕೂಲಿ ಅಜ್ಜಂಪುರ ಇವರು ಗ್ರಾಮಗಳ ಪುನರುಜ್ಜೀವನ ಎಂಬ ಬಗ್ಗೆ ಬಹು ಸ್ವಾರಸ್ಯವಾಗಿ ಭಾಷಣಮಾಡಿದರು ಅನಂತರ ಅಜ್ಜಂಪುರದ ಲೋ॥ ಸ್ಕೂ॥ ಅ॥ ಮಾ॥ ಮಿ॥ ರಾ॥ ಕರಿಯಾಚಾರ್ಯರು ಮೇಲ್ಕಂಡ ವಿಚಾರಗಳನ್ನೇ ಪುಷ್ಟೀಕರಿಸಿ ಮಾತನಾಡಿದರು

ಆನಂತರ ಗಿರಿಯಾಪುರದ ಲೋಯರ್ ಪ್ರೈಮರಿ ಸ್ಕೂಲ್ ಡಿ. ಶಂಕರಪ್ಪ ಮಾಸ್ಟರ್‌ರವರ, ಕಾಲಾ ಬಾಲಕರಿಂದ "ಈಶೀರನ ಜನನ" ಎಂಬ ನಾಟಕವನ್ನು ಅಭಿನಯಿಸಿದರು, ಪ್ರೇಕ್ಷಕರು ಬಹು ಆನಂದಪಟ್ಟರು.

ಆನಂತರ ಅಧ್ಯಕ್ಷರ—ಪ್ರೋಪಕರ ಬೋಧಕರ ಬಾಲಕರ ಎಕೀಕರಣವು ವಿದ್ಯಾಭ್ಯಾಸಕ್ಕೆ ಹೇಗೆ ಪ್ರಯೋಜನವಾಗಿದೆ ಎಂಬುದನ್ನು ಅನೇಕ ಉದಾಹರಣೆಗಳಿಂದ ಸರ್ವರಿಗೂ ಹೃದಯಂಗಮವಾಗುವಂತೆ ಗಂಭೀರವಾಗಿ ಸಂಭಾಷಿಸಿದರು

ಅನಂತರ ನವ್ಯನ್ಯಾಳುವ ಶ್ರೀಮನ್ಮಹಾರಾಜರರ ಶ್ರೀಯಃಪ್ರಾರ್ಥನೆಯೊಡನೆ ಸಭಾವಿಸರ್ಜನೆಯಾಯಿತು.

ಓಂ ವಿದ್ಯಾಭಿವೃದ್ಧಿ.

ಮುಖವಾರ್ತೆ

ಹಾಸನ ತಾ॥ ಆಲೂರು ಟೌನ್ಷಿನ ಗಣ್ಯ ವ್ಯಕ್ತಿಗಳೂ, ಆರ್. ಎ ಮತ್ತು ತಾ॥ ಬೋ॥ ಮೆಂಬರರೂ, ಸ್ಥಳೀಯ ಪಟೇಲರೂ, ರೈಸ್‌ಮಿಲ್ ಮಾಲೀಕರೂ, ಬಹಪರಾಧಾರಿಗಳೂ, ಪ್ರಜಾಹಿತಚಿಂತಕರೂ, ದೊಡ್ಡ ಕುಟುಂಬಿಗಳೂ ಆಗಿದ್ದ ಶ್ರೀಮಾನ್ ಎ. ಪಿ. ಮಲ್ಲೇಶಗೌಡರು ತಾ॥ ೨೮-೨-೪೦ ರ ರಾತ್ರಿ ಶಿವಾಧೀನರಾದರೆಂಬ ವಿಷಯವನ್ನು ಬಲಿಯಲು ಬಹಳ ವಿಷಾದದಿನಿಸುತ್ತದೆ. ಮೃತರ ಸಹೋದರರುಗಳಾದ ಕಾಫಿಕ್ಯೂರರ್ ಗುರು ಲಿಂಗೇಗೌಡರು, ವೈಸ್॥ ಪ್ರೆ॥ ಎ. ಪಿ.. ಬಸವಲಿಂಗೇ ಗೌಡರು, ಹೊಸ ಮಿಲ್ ಮಾಲೀಕರು ಎ. ನಂಜಪ್ಪ ಉರುಫ್. ಸ್ಟೀಮ್ಮಿಮ್ಮೈಗೌಡರು ಅಂತ್ಯಕ್ರಿಯೆಗಳನ್ನು ವಿಧ್ಯುಕ್ತರೀತಿಯಿಂದ ನೆರವೇರಿಸಿದರು. ಮೃತರಿಗಾದಿರುವ ಈ ಪ್ರಾಂತದವರಿಗೆಲ್ಲಾ ಮಹಾ ವ್ಯಸನವುಂಟಾಗಿದೆ. ಈಶ್ವರೇಚ್ಛೆಗೆ ಅಡಾಯಿಷ್ಟಿ. ಶ್ರೀ ಜಗದಾಚಾರ್ಯರು ಮೃತರ ಆತ್ಮಕ್ಕೆ ಶಾಂತಿಯನ್ನಿಯಲೆಂದು ಪ್ರಾರ್ಥಿಸುವೆ,

ಓಂ ಶುಭಾಭಾಗಿ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ

ಫಾಲ್ಗುನ ಶುದ್ಧ ತ್ರಯೋದಶಿ (21-3-40) ಗುರುವಾರ

ಶ್ರೀ ಕೊಲ್ಲಿಪಾಕಿ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ತ್ರಯೋದಶಿ ಗುರುವಾರ (21-3-40) ದಿವಸ ಭರತ ಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸನ್ಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನುದ್ಧರಿಸಿದವರು. ಲೋಕಚಕ್ರ ವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ನಿಳಕಾಲದಲ್ಲಿಯೇ ಮೊರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಪದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷ ದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣು ಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ಶ್ರೀಮದ್ಯುವರಾಜರವರ ನಿಧನ.

ಶ್ರೀಮನ್ಮಹಾರಾಜರವರ ಸಹೋದರರಾದ ಶ್ರೀ ಕಂಠೀರವರೀಂದ್ರಜಾಜ ಒಡೆಯರ್ ಬಹದ್ದೂರವರು ಇಹೇತಿಂಗಳು ೧೦ ನೆಯ ತಾರೀಖು ರವಿವಾರ ರಾತ್ರಿ ೩॥ ಘಂಟೆಗೆ ಬೊಂಬಾಯಿ ನಗರದಲ್ಲಿ ಪರಂಧಾಮವನ್ನೈದಿದರೆಂಬ ಮಹಾದುಃಖವಾರ್ತೆಯನ್ನು ಕೇಳಿ ವ್ಯೆಸೂರು ಸಂಸ್ಥಾನವೇ ಮಃಖಸಾಗರದಲ್ಲಿ ಮುಳುಗಿಹೋಗಿದೆ. ಶ್ರೀಮ.ಯುವರಾಜರವರಿಗೆ ಅವಸಾನಕಾಲದಲ್ಲಿ ೫೨ ವರ್ಷಗಳಾಗಿದ್ದವು. ಇವರು ೧೯೨೮ ನೆಯ ಇಸ್ವಿಯ ಮಧ್ಯಭಾಗದಲ್ಲಿ ಸತ್ಕೀರ್ತಿಪುತ್ರಾದಿಸಕಲಪರಿವಾರದೊಡನೆ ಯೂರೋಪಿಗೆ ಪ್ರಯಾಣಮಾಡಿದ್ದರು. ಇಂಗ್ಲೆಂಡಿನಿಂದ ಕಳೆದ ಜನವರಿ ೨ ನೆಯ ತಾರೀಖಿನ ದಿವಸ ಬೊಂಬಾಯಿಗೆ ಆಗಮಿಸಿ, ಆರೋಗ್ಯಧಾಗ್ಯತ್ಯಾಗಿ ಅಲ್ಲಿಯೇ ವಾಸಮಾಡಿದರು. ಬರಬರುತ್ತ ಅವರ ಪ್ರಕೃತಿಯು ಸುಧಾರಿಸಲಿಲ್ಲ. ಕೊನೆಗೆ ೧೦ ನೆಯ ತಾರೀಖಿನ ದಿವಸ ಇಹಲೋಕಯಾತ್ರೆಯನ್ನೇ ಪೂರೈಸಿದರು. ೧೧ ನೆಯ ತಾರೀಖಿನ ದಿವಸ ದುಃಖಕರವಾದೀ ವಾರ್ತೆಯು ಸಂಸ್ಥಾನದಾದ್ಯಂತವಲ್ಲೂ ಕಾಡ್ಗಿಚ್ಚಿನಂತೆ ಹರಡಿತು. ಸಂಸ್ಥಾನದ ಪ್ರಜೆಗಳೆಲ್ಲರೂ ದುಃಖಾಬ್ಧಿಯಲ್ಲಿ ಮುಳುಗಿದರು. ಸಮಸ್ತಪ್ರಜಾವ್ಯಾವಹಾರವೂ ಅವರ ಆಕಸ್ಮಿಕ ಶಾಂತಿಯನ್ನು ಕೋರಿತು. ಸರ್ವತ್ರ ಸಂತಾಪಸಭೆಗಳು ನೆರವೇರಿದವು. ಅಂತ್ಯಸಂಸ್ಕಾರವು ಬೋಬಾಯಿಯಲ್ಲಿಯೇ ನೆರವೇರಿತು. ೧೪ ನೆಯ ತಾರೀಖಿನ ದಿವಸ ಅವರ ಅಸ್ಥಿಗಳು ರಾಜಮರ್ಯಾದೆಗಳೊಡನೆ ರಾಜಧಾನಿಗೆ ತರಲ್ಪಟ್ಟು ಸುಧಾವವದಲ್ಲಿ ಸ್ಥಾಪಿಸಲ್ಪಟ್ಟವು. ಒಟ್ಟಿಗೆ ನೈಸೂರು ದೇಶವು ಒಂದು ಅಮೂಲ್ಯವಾದ ರತ್ನವನ್ನು ಕಳೆದುಕೊಂಡಿತೆಂದು ಬಹುವಿಷಾದದಿಂದ ಹೇಳಬೇಕಾಗಿದೆ

ಶ್ರೀಮದ್ಯುವರಾಜರವರು ೧೮೮೮ ನೆಯ ಇಸ್ವಿ ಜೂಲೈ ೫ ನೆಯ ತಾರೀಖಿನ ದಿವಸ ಜನ್ಮವೆತ್ತಿದರು. ನವ್ಯ ಮಹಾಪ್ರಭುಗಳವರಿಗಾಗಿ ಅರಮನೆಯಲ್ಲಿ ವಿದ್ಯಾಭಿನ್ನೆ ಪಾಠಶಾಲೆಯಲ್ಲಿಯೇ ಉತ್ತಮ ಶಿಕ್ಷಣವನ್ನು ಪಡೆದರು. ಇವರು ಇಂಗ್ಲೀಷ್ ಭಾಷೆಯಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡಿದ್ದರಲ್ಲದೆ, ರಾಜತಂತ್ರದಲ್ಲಿಯೂ ಸಹ ಅಸಮಾನವಾದ ನೈಪುಣ್ಯವನ್ನು ಪಡೆದಿದ್ದರು. ಕನ್ನಡ ಭಾಷೆಯ ಮೇಲೆ ಇವರಿಗೆ ಅಪರಿಮಿತವಾದ ಪ್ರೇಮವಿತ್ತು. ಇವರು ಅತ್ಯಂತವಯಸ್ಕರು ಸ್ವಭಾವದವರಾಗಿದ್ದರಲ್ಲದೆ ಪರಮಾನುರಾಗಿಗಳೂ, ಉದಾರಹೃದಯರೂ, ಧೀರೋದಾತ್ತಚರಿತ್ರರೂ ಆಗಿದ್ದರು. ಶ್ರೀ ಚಾಮರಾಜೇಶ್ವರಿ ಇಂತಹ ಅಮೂಲ್ಯ ಗುಣಗಣ ಭೂಷಿತವಾದ ವಸ್ತುವಿನ ಅಕ್ಷಯ್ಯ ಶಾಂತಿಯನ್ನೀಯಲೆಂದೂ, ಶ್ರೀಮನ್ಮಹಾರಾಜರವರಿಗೂ, ಶ್ರೀಮದ್ಯುವರಾಣಿಯವರಿಗೂ, ಶ್ರೀ ಜಯಚಾಮರಾಜ ಒಡೆಯರವರಿಗೂ ಉಂಟಾಗಿರುವ ಮಹಾದುಃಖವನ್ನು ಕಮನಗೊಳಿಸಲೆಂದೂ ಆ ಜಗನ್ಮಾಯಾಮಹಿನೆಯನ್ನು ಪ್ರಾರ್ಥಿಸುತ್ತೇವೆ.

ಅಮೆರಿಕೆಯ ವಿಮಾನಗಳನ್ನು ಕೊಳ್ಳುವ ವಿಚಾರ

ಅಮೆರಿಕೆಯ ಹೊಸ ಮಾದರಿಯ ಯುದ್ಧ ವಿಮಾನಗಳನ್ನು ಮಿತ್ರ ರಾಷ್ಟ್ರಗಳು (ಫ್ರಾನ್ಸ್ ಮತ್ತು ಬ್ರಿಟನ್) ಕೊಂಡುಕೊಳ್ಳುವ ವಿಚಾರದಲ್ಲಿ ನಡೆಯುತ್ತಿದ್ದ ಸಂಧಾನ ಪ್ರಯತ್ನಗಳು ಕಾರ್ಯಾಲಿಕವಾಗಿ ನಿಲ್ಲಿಸಲ್ಪಟ್ಟಿವೆ. ಯುದ್ಧದಲ್ಲಿ ಭಾಗವಹಿಸಿರುವ ಏಡೋಷ್ಟ ರಾಷ್ಟ್ರಗಳಿಗೆ ವಿಮಾನಗಳನ್ನು ಮಾರುವ ವಿಚಾರದಲ್ಲಿ ವಿಚಾರಣೆ ನಡೆಸಲು ಕಾಂಗ್ರೆಸ್ ವಿಚಾರಣ ಸಮಿತಿಯನ್ನು ನೇಮಿಸಿರುವದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಈ ಸಮಿತಿಯ ವಿಚಾರಣೆಯು ಇತ್ತೀಚ್ಚೆಗೇ ಆರಂಭವಾಗಲಿದೆ.

ಯುದ್ಧವಾರ್ತೆ.

ಫಿನ್‌ಲೆಂಡಿನವರ ವೈಶಿಷ್ಟ

ಸ್ವೀಡ್ಸ್ಸಿನ ಮಧ್ಯಸ್ಥಿಕೆಯ ಮೇಲೆ ರಷ್ಯವು ಫಿನ್‌ಲೆಂಡಿನ ಮುಂದಿಟ್ಟ ಷರತ್ತುಗಳನ್ನು ಒಪ್ಪಬೇಕಾಗಿ ಬಂದುದಕ್ಕಾಗಿ ಫಿನ್ನಿಷ್ ಪ್ರಜೆಗಳು ಸಂತಪ್ತರಾಗಿದ್ದಾರೆ. ಇಂತಹ ಕಠಿನ ಪರಿಸ್ಥಿತಿಗಳ ನಡೇಲೆ ಸಂಧಾನ ನಡೆಸಲು ಸ್ವೀಡಿಷರು ಮುಂದೆ ಬಂದದಕ್ಕಾಗಿ ವೈಶಿಷ್ಟವನ್ನು ವ್ಯಕ್ತಪಡಿಸಲಾಗಿದೆ

ಫ್ರೆಂಚರು ಜರ್ಮನ್ ಹಡಗನ್ನು ತಡೆದರು! –

ಕಳೆದ ೬ ನೆಯ ತಾರೀಖಿನದಿವಸ ಮಧ್ಯಾಹ್ನ ಫ್ರೆಂಚರು 'ಟಾಂಕಾರ್‌ಮಾರ್' ಎಂಬ ಜರ್ಮನ್ ಹಡಗನ್ನು ತಡೆದು, ಅದರಲ್ಲಿದ್ದ ಜರ್ಮನಿಗೆ ಹೋಗುವ ಟಪಾಲುಗಳನ್ನೆಲ್ಲಾ ವಶಪಡಿಸಿಕೊಂಡರು

ನೈಸ್‌ಗೆಲೆಂದ ರಕ್ಷಣೆ

ಜರ್ಮನಿಯು ಸಮುದ್ರದಲ್ಲಿ ಹುಕಿರುವ ಮೈನ್ಸುಗಳ್ಳಿಂದ ಅಗುತ್ತಿರುವ ಅನಾಹುತದಿಂದ ಹಡಗುಗಳನ್ನು ರಕ್ಷಿಸಲು ಬ್ರಿಟನ್ನಿನ ನೂರಾರು ವ್ಯಾಪಾರ ಹಡಗುಗಳೂ ಸಂಗ್ರಾಮ ನೌಕೆಗಳೂ "ನಾನ್ ಮ್ಯಾಗ್ನೆಟಿಟ್" ಬೆಲ್ಟುಗಳನ್ನು ಹಾಕಲಾಗುತ್ತಿದೆಯೆಂದು ತಿಳಿಬರುತ್ತದೆ ಆದರೆ ಇದು ಸಂಪೂರ್ಣವಾಗಿ ವೈಜ್ಞಾನಾಹುತವನ್ನು ತಪ್ಪಿಸುವುದೆಂದ ಹೇಳಲು ಸಾಧ್ಯವಿಲ್ಲವಾದೂರೂ, ಈ ಬೆಲ್ಟುಗಳನ್ನು ಕೊಟ್ಟು ಯಾವ ಹಡಗೂ ಇಪಾಯಕ್ಕೆ ಒಳಗಾಗಿಲ್ಲವೆಂದು ತಿಳಿಬರುತ್ತದೆ

ಇಟಲಿಗೆ ಜರ್ಮನಿಯ ಕಲ್ಲಿದ್ದಲು

ಜರ್ಮನಿಯಿಂದ ಇಟಲಿಗೆ ಕಲ್ಲಿದ್ದಲನ್ನು ತುಂಬಿಕೊಂಡು ಹೋಗುತ್ತಿದ್ದ ಇಟಲಿ ಹಡಗುಗಳನ್ನು ತಡೆದು ನಿಲ್ಲಿಸಿದ ವಿಚಾರವಾಗಿ ಕಾಮನ್ಸ್ ಸಭೆಯಲ್ಲಿ ಹಾಕಿದ ಪ್ರಶ್ನೆಗೆ ಮಹಾ ಪ್ರಧಾನರು ಉತ್ತರಕೊಡುತ್ತ—"ಆ ಸಂಬಂಧವಾಗಿ ಮಾರ್ಚಿ 8 ನೆಯ ತಾರೀಖಿನ ದಿವಸ ಇಟಲಿ ಇಂಗ್ಲೆಂಡುಗಳಿಗೆ ಸಮಾಧಾನಕರವಾದ ಒಪ್ಪಂದ ವಾಗಿರುತ್ತದೆ ಈಗ ತಡೆಯಲ್ಪಟ್ಟಿರುವ ಇಟಲಿ ಹಡಗುಗಳು ಹೋಗುವವಕ್ಕೆ ಅವಕಾಶಕೊಡಲಾಗುವದು ಇನ್ನುಮುಂದೆ ಆ ಧಾಗದಿಂದ ಇಟಲಿಯು ಹಡಗುಗಳು ಜರ್ಮನಿಯು ಕಲ್ಲಿದ್ದಲನ್ನು ಸಾಗಿಸಲು ಅವಕಾಶಕೊಡುವದಿಲ್ಲ" ಎಂದು ಹೇಳಿದರು

ಫಿನ್‌ಲೆಂಡ್ ರಷ್ಯಾಯುದ್ಧವು ಕೊನೆಗೊಂಡಿತು!

ಫಿನ್‌ಲೆಂಡಿನ ಯುದ್ಧವನ್ನೂ ಕೊನೆಗಾಣಿಸಲು ಸ್ವೀಡ್ಸ್, ಜರ್ಮನಿ, ರಷ್ಯಾ ಮತ್ತು ಫಿನ್‌ಲೆಂಡ್ ಪ್ರತಿನಿಧಿಗಳು ಕೂಡಿ ಕರೇಲಿಯರ್ ಇತ್ತ್ಮಸ್ ಲಡೋಗ ಸರೋವರ ಪೆಟ್ಸುನೊಬಂದರು ಮತ್ತು ಹ್ಯಾಂಗೋಬಂದರುಗಳನ್ನೆಕ್ಕೆ ಳಗೊಂಡ ಉತ್ತರಪ್ರದೇಶಗಳನ್ನು ಬಿಟ್ಟುಕೊಡಬೇಕೆಂಬ ರಷ್ಯನರ ಬೇಡಿಕೆಗಳನ್ನು ಆಧಾರವಾಗಿಟ್ಟುಕೊಂಡು ಸಂಧಾನ ನಡೆಯಿಸಿ, ರಷ್ಯಕ್ಕೂ ಫಿರ್‌ಲೆಂಡಿಗೂ ಆದ ಒಪ್ಪಂದವನ್ನು ಜರ್ಮನಿಯ ವಾರ್ತಾಸಂಸ್ಥೆಗೆ ತಿಳಿಸಿಹಿರುತ್ತಾರೆ. ಮುಖ್ಯ ಷರತ್ತುಗಳಾವುವೆಂದರೆ—(1) ಎರಡು ಕಡೆಯ ವರೂ ಇಮುವರೆಗೆ ನಡೆಸುತ್ತಿದ್ದ ಹೋರಾಟವನ್ನು ನಿಲ್ಲಿಸ ಬೇಕು. (2) ಕರೇಲಿಯರ್ ಇತ್ತ್ಮಸ್ ಪ್ರದೇಶವನ್ನು ವಿಸ್ತರಿಸಿಹ ರಷ್ಯಕ್ಕೆ ಬಿಟ್ಟುಕೊಡಬೇಕು (3) ಸ್ವೈಕ್ಯ ದೈಷ್ಟಿಯಿಂದ ಮುಖ್ಯಪ್ರದೇಶವೆನಿಸಿದ ಹ್ಯಾಂಗೋಪ್ರೇಶ್ವರ್ತವನ್ನು ರಷ್ಯಕ್ಕೆ ಬಿಟ್ಟುಕೊಡಬೇಕು ಯುದ್ಧವು 13 ನೆಯ ತಾರೀಖಿನ ಮಧ್ಯಾಹ್ನ ನಿಲ್ಲಿಸಲ್ಪಟ್ಟಿತು.

ಸ್ವೀಕಾರ.

ನಿಜಾಮ ತಾಲೂಕಾ ನಾಂದೇಡ ಡಿ॥ ಮುಖೇಡ ಗ್ರಾಮದ ಹಿರಿಯಮಕ್ಕಳಲ್ಲಿ ನೆರವೇರಿದ ಪಟ್ಟಾಧಿಕಾರ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 4 ರೂ ಗಳು ಶ್ರೀಗಿ ಹೋಟಿಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಗದಗ ಬೆಟಿಗೇರಿ ಶಹರ ನಿವಾಸಿಗಳಾದ ಮೃ॥ ರಾ॥ ಹೊನಗುಡಿ ಬಸಪ್ಪನವರ ಪುತ್ರ ಚಿ॥ ತೋಟಪ್ಪನಿಗೆ ಶೀಲವತಿಗ್ರಾಮದ ಮೃ॥ ರಾ॥ ಹಳ್ಳದಕೇರಿ ಬಸಪ್ಪನವರ ಪುತ್ರಿ ಚಿ॥ ಸೌ॥ ನೀಲವ್ವನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕಾಗಿ ವರನ ಕಡೆಯವರು ಸಮರ್ಪಿಸಿದ 2 ರೂ ವಧುವಿನ ಕಡೆಯವರು ಸಮರ್ಪಿಸಿದ 1 ರೂ ಒಟ್ಟು 3 ರೂ. ಗಳು ಶ್ರೀಮಂತ ಸಂಗನಬಸಪ್ಪ ಕಾಶಪ್ಪ ಬೇಲೇರಿ ಇವರ ದ್ವಾರಾ ತಲ್ಪಿರುತ್ತವೆ

ನಾಂದೇಡ ಡಿ॥ ಮುಖೇಡ ಗ್ರಾಮದ ಹಿರೇಮಠದ ವೇ॥ ಕರಬಸವಯ್ಯನವರ ಗೃಹದಲ್ಲಿ ನೆರವೇರಿದ ದೀಕ್ಷಾ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಮತ್ತು ಸೊಲ್ಲಾಪುರ ಡಿ॥ ವಾಂಗಿ ಹಿರಿಯ ಮಠದ ವೇ॥ ಗಂಗಾಧರಯ್ಯನವರ ಪುತ್ರನ ಜ್ಞಾಲಕರ್ಮ ಸಮಯದಲ್ಲಿ ತೆಗೆಯಿಸಿದ 1 ರೂ ಒಟ್ಟು 3 ರೂ ಗಳು ಶ್ರೀ ಜೈನಾಪುರ ಚಾರುಕೀರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ॥ ಗದಗ ಶಹರನಿವಾಸಿಗಳಾದ ವೇ॥ ಶಿವಲಿಂಗಾಚಾರ್ಯ ಸದಾಶಿವಾರ್ಯ ಗುರುಸ್ವಾಮಿಮಠರ ಇವರ ಪುತ್ರ ಚಿ॥ ಶ್ರೀಕರನಿಗೆ ನಾಲ್ಕು ಶುದ್ಧ ಪ್ರತಿಷದೆಗೆ ೧೩ ವರ್ಷಗಳು ತುಂಬಿ ೧೪ ನೆಯ ವರ್ಷವು ಪ್ರಾರಂಭವಾದ ಮುತ್ತ ನೆರವೇರಿದ ವರ್ಧಂತೀ ಸಮಾರಾಧನ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ವೇ॥ ಮುಳಗುಂದ ಹಿರಿಯಮಠದ ಪೂರದಯ್ಯನವರ ದ್ವಾರಾ ತಲ್ಪಿರುತ್ತವೆ

ಲಕ್ಷ್ಮೇಶ್ವರತಾಲೂಕು ಆಲಸಗ್ಯಾಮದಲ್ಲಿ ನೆರವೇರಿದ ಆಮಾನ್ಯನ ಮತ್ತು ಪುರಾಣಪ್ರವಚನ ಸಮಾಪ್ತಿಸಮಯದಲ್ಲಿ ಬೆಂಗಳೂರು ಮಹಾಂತಸಮರದ ಶ್ರೀಗಳವರ ಅಪ್ಪಣೆಯಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ ಯು ಬಿ ಎಸ್ ರುದ್ರಯ್ಯನವರ ದ್ವಾರಾ ತಲ್ಪಿರುತ್ತದೆ

ಚಳ್ಳಕೆರೆ ತಾ॥ ಕೋರ್ಲಕುಂಟೆ ಗ್ರಾಮದ ಮೃ॥ ರಾ॥ ಗಾರೆಮನೆ ಚನ್ನಮಲ್ಲಪ್ಪನವರ ತಮ್ಮಂದಿರಾದ ಚಿ॥ ಚಿ॥ ಮಾ॥ ತಿಪ್ಪೆರುದ್ರಪ್ಪನವರ ಪುತ್ರ ಚಿ॥ ಶ್ರೀಕರ್ಷ ಮತ್ತು ಪುತ್ರಿ ಚಿ॥ ಸೌ॥ ನಂಜಮ್ಮ ಇವರ ವಿವಾಹವು ಬಹುಧಾನ್ಯ ಸಂ॥ ದಲ್ಲಿ ನಡೆದುಗ್ಗೆ ಕಾಲ್ಕು ಧರ್ಮಾರ್ಥ ವಿವಾಹಗಳನ್ನು ನೆರವೇರಿಸಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಮೇಲ್ಕಂಡವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಇಟಲಿಯ ವಿಮಾನ ವಿನಿರ್ಮಾಣ ಕಾರ್ಯ

ಹಿಂದೆ ತಯಾರಿಸುತ್ತಿದ್ದುದಕ್ಕಿಂತ ಅಧಿಕ ಸಂಖ್ಯೆಯಲ್ಲಿ ಈಗ ಇಟಲಿಯು ವಿಮಾನಗಳನ್ನು ತಯಾರಿಸಲು ತೊಡಗಿದೆ. ಇನ್ನು ಕೆಲವು ತಿಂಗಳಲ್ಲಿ ಈ ವಿಮಾನ ನಿರ್ಮಾಣ ಕಾರ್ಯವು ದ್ವಿಗುಣಿತವಾಗುವುದೆಂದು ವಿಮಾನ ತಾಮೆಯ ಕಾರ್ಯದರ್ಶಿಗಳಾದ ಶ್ರೀ ಪ್ರಿಕಾಲೋರವರು "ಫ್ಲೇಬರ್" ಸಭೆಯಲ್ಲಿ ಹೇಳಿಕೆಯನ್ನಿತ್ತರು.

ಮಾನವಶರೀರ ತತ್ತ್ವನಿರೂಪಣೆ

ಲೇಖಕ, ಕನ್ನಡಕವಿ ಆಸ್ಥಾನವಿದ್ವಾನ್, ಅನಂಪಟ್ಟರಾಮರಾಯರು

ಪರಮಾತ್ಮನು ಪೂರ್ವಜನ್ಮ ಸುಕೃತದಿಂದ ಮಾನವ ಜನ್ಮೆ ಈ ವಿಚಿತ್ರ ಶರೀರವನ್ನು ದಯಪಾಲಿಸಿರುವನು ಈ ಶರೀರವಾದರೋ ಪಾಂಚಭೌತಿಕ ಸಂಬಂಧವುಳ್ಳದು ನಾಗಿರುವುದು ಇಂತಹ ಶರೀರದ ಸಹಾಯದಿಂದಲೇ ಮಾನವನು ಸಂಸಾರದಿಂದ ಪಾರಾಗಬೇಕಾಗಿರುವುದು ಸಂಸಾರದೆಂದರೆ ಪರಮಾತ್ಮನ ಆಜ್ಞೆಯಂತೆಯೇ ಜೀವನ ಹಿಂದಣ ಜನ್ಮದ ಕರ್ಮಾನುಸಾರವಾಗಿ ಈ ಪ್ರಪಂಚದಲ್ಲಿ ಜನಿಸುವುದು, ಸಾಯುವುದು ಇದಕ್ಕೆ ಸಂಸಾರವೆಂದು ಹೆಸರು

ಈ ಮಾನವ ಶರೀರದಲ್ಲಿ ಜೀವಾತ್ಮನೂ ಪರಮಾತ್ಮನೂ ಇದ್ದಾರೆ ಹೊವಿನಲ್ಲಿ ಕೇಸರವು ಹೇಗಿರುವುದೋ ಹಾಗೆಯೇ ಜೀವಾತ್ಮನಲ್ಲಿ ಪರಮಾತ್ಮನು ನೆಲಸಿರುತ್ತಾ ಜೀವಾತ್ಮನಿಂದ ಎಂತಹ ಕಾರ್ಯಗಳನ್ನು ಮಾಡಿ ಸುಖದುಃಖಗಳನ್ನು ಹೊಂದಿಸಬೇಕಾಗಿರುವುದೋ ಹಾಗೆಯೇ ಪರಮಾತ್ಮನ ಪ್ರೇರಣೆಯಿಂದ ಜೀವನು ವಿಚಿತ್ರ ಕಾರ್ಯಗಳನ್ನು ಮಾಡಿಸಿ ಸುಖ, ದುಃಖಗಳನ್ನು ಹೊಂದಿಸುತ್ತಿರುವನೆಂದು ಶಾಸ್ತ್ರವು ನಿರೂಪಿಸುವುದು ಈ ಸಂಬಂಧವಲ್ಲಿ ಪರಮಾತ್ಮನು ಮಾತ್ರ ನಿರ್ಲಿಪ್ತನಾಗಿರುವನೆಂಬ ತಿಳಿಯಬೇಕು ನಕ್ಷತ್ರವಾದ ಈ ಶರೀರವನ್ನು ನಂಬಿರುವ ಈ ಜೀವನ, ಸಂಸಾರಕ್ಕೆ ಸಿಲುಕವೆ ಮೋಕ್ಷ ಹೊಂದಲು ಮಾರ್ಗವಾವುದಿರುವುದೆಂದು ಮೊದಲು ತಿಳಿಯಬೇಕಲ್ಲವೆ? ಅಂತಹ ಸಾಧನ ಸಾಮಗ್ರಿಗಳನ್ನು ಪರಮಾತ್ಮನು ಈ ಜೀವಿಗಾ ಶರೀರದಲ್ಲಿಯೇ ಒಡಗಿಸಿಕೊಟ್ಟಿರುವನೆಂಬುದಕ್ಕೆ ಇವನಿಗೆ ದಯಪಾಲಿಸಿರುವ ವಿವೇಕವೇ ದೃಷ್ಟಾಂತವು

ಈ ಶರೀರವು ಸುಜ್ಞೇಂದ್ರಿಯಗಳಿಂದ ಕೂಡಿದೆ ಈ ಶರೀರವೆಂಬುದು ಒಂದು ರಥವು ಈ ರಥದಲ್ಲಿ ಜೀವನು ರಥಿಕನು ರಥವನ್ನು ನಡೆಸುವವನೇ ವಿವೇಕ ಮನಸ್ಸಂಬುದು ಕಡಿವಾಣವು ಪಂಚೇಂದ್ರಿಯಗಳೇ ರಥಕ್ಕೆ ಕಟ್ಟಿರುವ ಕುದುರೆಗಳು ಈ ಕುದುರೆಗಳು ಅರಿಷಡ್ವರ್ಗಗಳೆಂಬುವ ದೇಶಗಳಲ್ಲಿ ಸಂಚರಿಸುವುದು ಕಡಿವಾಣದಿಂದ ಕುದುರೆಗಳನ್ನು ಬಂಧಿಸಿ, ಹತ್ತೋಟಿಯಲ್ಲಿಟ್ಟುಕೊಳ್ಳದೆ ಹೋದ ಪಾದರೆ ಜೀವಾತ್ಮನಿಗೆ ನಾನಾ ಕಷ್ಟಗಳು ಪ್ರಾಪ್ತವಾಗಿ ಕೊನೆಗೆ ರಥವೆಂಬ ದೇಹವು ಮುರಿದು ಬಿದ್ದುಹೋಗುವುದು ಅಂದರೆ ಮನಸ್ಸು ವಿಷಯಲಂಪಟವಾದ ಕಟ್ಟುಹೋಗಿ, ಜೀವಾತ್ಮನು ಇಷ್ಟನ ಮರಣರೂಪ ಸಂಸಾರದಲ್ಲಿ ಬಿದ್ದು ಘೋರಯಾತನೆಗಳನ್ನು ಅನುಭವಿಸಬೇಕಾಗಿ ಬರುವುದು ಈ ಶರೀರದಲ್ಲಿ ಜೀವಾತ್ಮ, ವಿವೇಕ, ಮನಸ್ಸು, ಇಂದ್ರಿಯಗಳು, ಶಬ್ದಾದಿ ವಿಷಯಗಳು ಇವೆ ಇವುಗಳಲ್ಲಿ ಒಂದು ಮತ್ತೊಂದಕ್ಕೆ ಪರಸ್ಪರ ಸಂಬಂಧವಿಳ್ಳುರ್ದಾರುವಂದೆಂದು ಸೃಷ್ಟಿಯಾಗಿ ತೋರಿಬರುವುದು ಇವುಗಳಲ್ಲಿ ಒಂದು ಹತ್ತೋಟಿ ತಪ್ಪಿದರೆ ಎಲ್ಲವೂ ಕೆಟ್ಟುಹೋಗುವುದಂ ಟು

ಮಾನವನು ಪ್ರಕೃತ್ಯ ಆನುಭವಿಸುತ್ತಿರುವ ಸುಖಗಳು ಸತ್ಯವಲ್ಲ. ಶಾಶ್ವತ ಸುಖವೇ ಮೋಕ್ಷವು ಎಂಬ ಜ್ಞಾನವು ಹುಟ್ಟಿದ ನೀಲೆ ಜೀವನ ನೈತ್ಯಯೇ ಒಂದು ವಿಚಿತ್ರ ವಾಗುವುದೆಂಬುದಕ್ಕೆ ಅನೇಕ ಭಗವದ್ಭಕ್ತರ ಜೀವನ ಚರಿತ್ರಗಳೇ ದೃಷ್ಟಾಂತವಾಗಿರುವುವು.

ಎಲ್ಲೆ ಮಾನವನೆ! ಅಂತಹ ಸದ್ಭಕ್ತರ ವೃತ್ತಿಯಂತೆ ಸತ್ಸಾಗ್ಗವನ್ನವಲಂಬಿಸಬೇಕಾದರೆ ಭಗವಂತನು ನಮಗಾಗಿ ದಯಪಾಲಿಸಿರುವ ವೇದಗಳನ್ನು ಗುರುಸ್ಸನ್ನಿಧಿಯಲ್ಲಿ ಓದಿ, ಅವುಗಳಲ್ಲಿ ನಿರೂಪಿಸಿರುವಂತೆ ನಡೆದು, ವಿಷಯಗಳನ್ನು ಮನಸ್ಸ ಮಾಡಿಕೊಂಡು, ತೀರಿದಿರುವ ಸದ್ವಿಷಯಗಳನ್ನು ಆಚರಣೆಯಲ್ಲಿ ತರುತ್ತಾ ಬರುವುದಾದರೆ, ಹೊಳೆಯಿಂದ ತುಂಬಿರುವ ಕನ್ನಡಿಯನ್ನು ನೀರಿನಿಂದ ತೊಳೆದು ಶುಚಿಮಾಡುವಂತೆ ಆ ಪರಮಾತ್ಮನ ಜ್ಞಾನವು ಜೀವನಿಗುಂಟಾಗಿ, ಅನಂತರ ಭಗವಂತನ ಕೃಪೆಯು ನಮ್ಮಮೇಲೆ ಉಂಟಾಗುವುದು ಆನಂತರ ಭಗವಂತನು ಜೀವನಿಗೆ ಶಾಶ್ವತ ಸುಖವನ್ನೂ ನೋಕ್ಷವನ್ನೂ ಕೊಡುವುದರಲ್ಲಿ ಸಂದೇಹವಿಲ್ಲವೆಂದು ಶಾಸ್ತ್ರವು ನಿರೂಪಿಸುವುದು ಇಂತಹ ಶಿಸ್ತಿನ ಸೌಖ್ಯವನ್ನು ಹೊಂದಲೆಂದೇ ಭಗವಂತನು ಮಾನವನನ್ನು ಸೃಷ್ಟಿಸಿರುವನೆಂದು ತಿಳಿಯಬೇಕು ಇದೇ ಮಾನವ ಶರೀರ ತತ್ತ್ವದ ಮುಖ್ಯಾಂಶವು

ಶ್ರೀಜಗನ್ನಾಥ ಪಂಚಾಚಾರ್ಯಾಃ ಪ್ರಸೀದಂತು ॥

ಅನುಷ್ಠಾನವರಿಣಾಮಪ್ರವಚನೋಪನ್ಯಾಸಸಮಾಪ್ತಿ

ಮಹೋತ್ಸವ

ಕಳಸ

ದುಃಖಿತನಾದ ಜೀವಾತ್ಮನು ಹಗಲಿರುಳು ಮುಖವಿಮಾರ್ಜನೋಪಾಯಗಳನ್ನೇ ಹುಡುಕುತ್ತಿರುವನು ದುಃಖವಿನೋಚನೆಯಾಗಬೇಕಾದರೆ ತಕ್ಕ ಉಪಾಯಗಳು ಬೇಕು ರೋಗಕ್ಕೆ ಸರಿಯಾದ ಔಷಧವಿಲ್ಲದಿದ್ದರೆ ರೋಗ ನಿವೃತ್ತಿಯಾಗಲಾರದು ಇಂತಹ ಸಾಧನೆಗಳು ಸತ್ಸಂಗವಿನಿಂ ಸಾನ್ನಿಧ್ಯದಿಂದಲೇ ದೊರೆಯುವವು ಅನಂತ ಸಹಸ್ರ ಸೂರ್ಯ ಚಂದ್ರರು ಏಕ ಕಾಲದಲ್ಲಿಯೇ ಉದಯಿಸಿ ಆವಿಲ ಬೃಹ್ಮಾಂಡವನ್ನು ಪ್ರಕಾಶಗೊಳಿಸಿದರೂ ಶ್ರೀಗುರೂಪದೇಶವಿಲ್ಲದೆ ಜೀವನ ಮೌಢ್ಯವು ದೂರಾಗಲಾರದು ಈ ಬಗ್ಗೆ ಶ್ರೀ ಜಗದ್ಗುರು ರೇಣುಕಭಗವತ್ಪಾದರು "ನಬುದ್ಧ್ಯಬಿಗದೋರ್ವಾಕ್ಯಂವಿನಾಶಿತ್ಯಸ್ಯಮಾನಸಂ" ಶ್ರೀಗುರುವಾಕ್ಯ ಸಹಾಯವಿಲ್ಲದಿದ್ದರೆ ಶಿಷ್ಯನ ಹೃದಯವು ವಿಕಾಸಗೊಳ್ಳಲಾರದೆಂದು ಆಗತ್ತ್ವರಿಗುರ ವೇಶಿರುವರು ದುಃಖ ನಿವೃತ್ತಿಯ ಉಪಾಯಗಳನ್ನು ಸದ್ಗುರುವಿನಿಂದಲೇ ಪಡೆಯಬೇಕೆಂದು ವೇದಾಗಮಾದಿಗಳು ಸಿಂಹಸೆರ್ಜನೆಯಸ್ಸು ಮಾಡುತ್ತಿರುವರು ಮೋಕ್ಷ ಮಂದಿರವನ್ನು ಪ್ರವೇಶಿಸಲು ಅನಂತ ಮಾರ್ಗಗಳಿರುವವೆ ಅವನೆ-ಆ ಮಾರ್ಗಗಳಲ್ಲಿ ನಡೆಯಲು ಎಲ್ಲರಿಗೂ ಸಾಧ್ಯವಿಲ್ಲವು ಮಂತ್ರ, ಲಯ, ಮೊದಲಾದ ಯೋಗ ಮಾರ್ಗದಲ್ಲಿ ಪ್ರವೇಶಿಸಿ ಪರಿಧಾಮವನ್ನು ಪಡೆಯಬೇಕಾದರೆ ಬಹು ಕಷ್ಟಕರಗಳಾದ ಯೋಗಾಂಗಳೆ ಫಲವೇಗಳಲ್ಲಿಯೂ ಪಾರಂಗತನಾಗಬೇಕಾಗುವುದು ಓಂ ದಂಗದಲ್ಲಿ ಕೊಂಚ ಕೊರತೆಯುಂಟಾದರೂ ಫಲ ಪ್ರಾಪ್ತಿಯಾಗದು ಸಾಧನೆ ಶುದ್ಧಿಯಲ್ಲಿಯೇ ಅನಂತ ವರ್ಷಗಳನ್ನಲ್ಲ, ಅನಂತ ಜನ್ಮಗಳನ್ನೇ ಕಳೆಯಬೇಕಾಗಬಹುದು ಆದರೆ ಸರ್ವ ಮುಕ್ತಿ ಮಾರ್ಗಗಳಿಗೂ ತಳಹದಿಯಂತಿರುವ ಭಕ್ತಿ ಮಾರ್ಗವು ಮಾತ್ರ ಸರ್ವರಿಗೂ ಸಾಧ್ಯವೆನಿರುವುದು ಹಾಗೂ "ಮೋಕ್ಷಸಾಧನಸಾಮಗ್ರ್ಯಾಂಭಕ್ತಿ ರೇವ ಗರೀಯಸಿ" ಎಂಬ ಶ್ರುಮಾಣಾನುಸಾರವಾಗಿ ಸರ್ವ ಮೋಕ್ಷೋಪಾಯಗಳಲ್ಲಿಯೂ ಭಕ್ತಿಯೇ ಮೊದಲನೆಯ ದಾಗಿರುವುದೆಂದು ತಿಳಿದುಬರುತ್ತದೆ ಪ್ರೇಮಬೀಜದಲ್ಲಿ ಭಕ್ತಿ ಕಲ್ಪಲತೆಯು ಗೂಢವಾಗಿ ನಿಕ್ಷಿಪ್ತವಾಗಿರುವುದು. ಸುವರ್ಣದಲ್ಲಿ ಕಾಂತಿಯಿರುವ ಹಾಗೆ ಪ್ರೇಮವಲ್ಲಿ ಭಕ್ತಿ ಇರುವುದು ಕಲ್ಲಿನಲ್ಲಿರುವ ಚಿನ್ನದ ಅಗುರುಗಳನ್ನು ಉಸಾಯೋಂಕರದಿಂದ ಹೊಕ್ಕ ಚಿನ್ನದ ರೂಪದಲ್ಲಿಳುವ ಹಾಗೆ, ಸಾಂಸಾರಿಕವಾಸನಾಶೂಂಕರದಲ್ಲಿ ಗಾಢಲೀನವಾಗಿರುವ ಪ್ರೇಮ ಪೂಜವನ್ನು "ಗುರುರುಪಾಯಃ" ಎಂಬ ಪ್ರಮಾಣದಂತೆ ಶ್ರೀಗುರೂಪದಿಷ್ಟಮಾರ್ಗದಿಂದ ಶುದ್ಧೀಕರಿಸಿ ಶ್ರೀಪರಮಾತ್ಮನ ಕಡೆಗೆ ಹಾಗಿಸುವುದೇ ಭಕ್ತಿ ಭಾಗೀರಥಿಯ ಪ್ರಥಮಾವಿರ್ಭಾವವು! ಅಂಕುರೋದ್ಗಮವು ಬೀಜಾಗಳಲ್ಲಿರುವ ದೀಪಗಿಯಂತೆ ವಾಸನಾಮಯ ವಿಘಾತ ವಿಶೇಷದಲ್ಲಿ ಸಮುಚಿತ ರಕ್ಷಕ ಪೋಕ್ಷಕ ಸಹಾಯವಿಲ್ಲದೆ ಬದುಕಲಾರದು. ಸಸ್ಯಗಳು ಕಾಕ್ಕಟ್ಟಿಗೆಡಾದರೆ ಬೆಳೆದು ಹೆಮ್ಮರವಾದ ಮೇಲೆ ಫಲಾವಸ್ಥೆಗಳಕ್ಕೂ ಆಳ.ಕದೆ ಆಶಲದಂತಿದ್ದು ಅನಂತ ಫಲಗಳನ್ನೀಯುವಂತೆ ಶರೀರಾಶ್ರಯದ ಹೃದಯ ಭೂಮಿಯಲ್ಲಿ ಪ್ರೇಮ ಬೀಜದಿಂದಾವಿರ್ಭವಿಸಿದ ಭಕ್ತ್ಯಂಕುರವನ್ನು ದುರ್ವಿಷಯಾಸಕ್ತಿ ರೂಪಾಗ್ನಿಯಿಂದ ಸಾಹಾಡಿದರೆ, ಆಶ್ರಯದ ಶರೀರ ವ್ಯಾಪಿಯಾಗಿ ಬೆಳೆದು ಮಹಾವೃಕ್ಷವಾಗಿ ಅನಂತ ಶಕ್ತಿಲಗಳನ್ನೀಯುವುದು. ಈಜಲರಿಯದ ಶಕ್ತಿಹೀನನು ಪ್ರವಾಹದಲ್ಲಿ ತೇಲುತ್ತ ಮುಳುಗುತ್ತ ಕಷ್ಟಲ ನೀರನ್ನೇ ಕುಡಿಯುತ್ತ ಮೊಸಳೆ ಮೊದಲಾದ ಭೀಕರ ಜಲಜಂತುಗಳಿಗೆ ಆಂಜುತ್ತ ಅತಿಶಯ ಶ್ರಮಗೊಂಡು ಹೇಗೆ ಒಂದು ಆಶ್ರಯವಾದ ಆಶ್ರಯವನ್ನು ಬಯಸುವನೋ ಹಾಗೆಯೇ ಅನಿಮಿಷೇಗ ವಾಹಿಯಾದ ಘೋರ ಸಂಸಾರಾಗಾರ ನದಿಯಲ್ಲಿ ಬಿದ್ದು ಈಜಲು ಅಸಮರ್ಥನಾಗಿ ತನ್ನನ್ನೇ ನುಂಗಿ ನೀರು ಕುಡಿಯಲಿಚ್ಛಿಸುವ ಅನಂತ ವಸ್ತುಗಳನ್ನಾಶ್ರಯಿಸಿ ಸುಖ ಲೇಶವನ್ನು ಕಾಣದೆ ಬಯಗೊಂಡ ಜೀವನು ಪರಮ ಕಾರುಣಿಕನಾದ ಶ್ರೀ ಪರಮಾತ್ಮನ ಕಡೆಗೆ ತಿರುಗುವುದೇ ಭಕ್ತಿಗೆ ಆರಂಭವು ಇಂತಹ ಎಳೆಯ ಅಂಕುರವು ಬೆಳೆಯಬೇಕಾದರೆ ದೊಡ್ಡ ಆಹಾರವನ್ನು ಸ್ವೀಕರಿಸಲಾರದು ಮಿತ, ಮಧುರ, ವೃದುವಾದ, ಸಾತ್ವಿಕ ಆಹಾರದಿಂದಲೇ ಅದು ಮುಂದುವರಿಯುವದು ಪ್ರೇಮಬೀಜದಿಂದ ಹೊರ ಹೊಮ್ಮಿದ ಭಕ್ತ್ಯಂಕುರವು ನೊಳ್ಳುಮೆಯಾದ (ಶಿವಕಥಾ) ಶ್ರವಣ ರೂಪವಾದ ಸೂಕ್ಷ್ಮಾಹಾರದಿಂದಲೇ ಮುಂದಿಯನ್ನಿಡುತ್ತ ಆತ್ಮಾನಿವೇದನ ಪರ್ಯಂತವೂ ಸಾಗುವುದು ಶ್ರವಣಾದಿನವವಿಧ ಭಕ್ತಿಸಮೂಹದಲ್ಲಿ ಪ್ರೇಮವು ಮೊದಲು ಶ್ರವಣದಲ್ಲಿ ಪ್ರವೇಶಿಸಿ ತನ್ಮಯ [illegible] ಮುಂದುವರಿಯುವುದು ಸಾಧ್ಯವಿಲ್ಲ, ಹೋದರೂ ಫಲವಿಲ್ಲ ಸರ್ವಕ್ಕೂ ಶ್ರವಣನೇ ಪ್ರಥಮ ಕಾರಣವಾಗಿದೆ ಶ್ರೀ ಪರಮಾತ್ಮನು ಅನೆಕ್ಕೆ ಗತಿಕರಾದ ಭಕ್ತರನ್ನುನ್ಮಂಥಿಸಿ ಸಚ್ಚರಿತ್ರೆಗಳನ್ನು ಕೃಪ್ಪಿಯಿಂದ ಕೇಳುವುದೇ ಶ್ರವಣ ಭಕ್ತಿಯು ವಸ್ತುವಿನ ಗುಣದೋಷಗಳನ್ನು ತಿಳಿದ ಹೊರತು ಆ ವಸ್ತುವಿನಲ್ಲಿ ರಾಗವಾಗಲಿ, ವಿರಾಗವಾಗಲಿ, ಉದಯಿಸಲಾರವು

ಕೆನೆಮೊಸರನ್ನುಳಿದು ಹೂಬೆಣ್ಣೆಯು ಹೊರಡದಂತೆ ಶಿವಕಥಾಶ್ರವಣವಿಲ್ಲದಿದ್ದರೆ ಯಾವ ಸೌಭಾಗ್ಯ ಸಿದ್ಧಿಯೂ ಸಿಗದು ಈ ಬಗ್ಗೆ ನ್ಯಾಸವು "ಸರ್ವೇಷಾಂ ಶ್ರೇಯಸಾಂ ಬೀಜಂ ಸಕೃದ್ಭಾಶ್ರವಣಂ" ಅಂದರೆ ಎಲ್ಲಾ ಶ್ರೇಯಸ್ಸುಗಳಿಗೂ ಸಕೃದ್ಭಾಶ್ರವಣನೇ ಮೂಲವೆಂದು ಹೇಳಿರುವನು. ಬೆಲ್ಲದಲ್ಲಿ ಮಾಧುರ್ಯವು ತುಂಬಿರುವಂತೆ ಹಾಲಿ ಶಿವಕಥೆಯಲ್ಲಿ ಶಿವಮಹಿಮೆಯು ತುಂಬಿರುವುದು. ಪ್ರತ್ಯೇಕ ದೇವಭಕ್ತನು ಸ್ವೇಷ್ಟ ದೇವತೆಯ ಚರಿತ್ರವನ್ನು ಶ್ರವಣ ಮಾಡಿದರೆ ಅದರಿಂದಲೂ ಅವರಿಗೆ ಬೀಜವೇ ಅಮೃತಮಧುರವಾಗಿರುವಾಗ ಫಲದ ಸ್ವಾದವನ್ನು ವರ್ಣಿಸುವುದೇನು? ಇಷ್ಟದೇವತಾ ಚರಿತ್ರರೂಪ ಫಲಕ್ಕೆ ನಾಮವೇ ಬೀಜವಾಗಿರುವುದು. "ಶಿವ" ಎಂಬ ನಾಮವೇ ಸೀಮಾತೀತ ಮಾಧುರ್ಯ ಗರ್ಭಿತವಾಗಿರುವಾಗ ಚರಿತ್ರ ಫಲವು ಇನ್ನೆಷ್ಟು ಸಿಹಿಯಾಗಿರಬೇಕು? ಸಮುದ್ರ ಮಥನ ಸಂಭೂತವಾದ ಅಮೃತವನ್ನು ಕುಡಿಯುವುದರಿಂದ ಮುಕ್ತಿಯು ದೊರೆಯದು ಶಿವಕಥಾಮೃತ ಪಾನದಿಂದ ಚತುರ್ವಿಧ ಮುಕ್ತಿಯು ಮನೆಯ ಪಾಸಿಯಾಗುವುದು. ಪುರಾಣಶ್ರವಣದಿಂದ ಸತ್ಸಾಗ್ಗ ಚ್ಯುತವಾದವನು ಎಚ್ಚತ್ತು ತಪ್ಪ ಕಾಣಿಯನ್ನು ಹಿಡಿಯುವನು. ಪುರಾಣಗಳು ಶ್ರುತ್ಯಾಗಮಗಳ ರಹಸ್ಯವನ್ನು ಬೋಧಿಸುತ್ತಿರುವವು ಶ್ರುತಿ ಸ್ಮೃತಿ ವಿರೋಧಗಳಾದ ಪುರಾಣಗಳನ್ನು ಕೇಳುವುದರಿಂದ ಮನುಷ್ಯನು ದುರ್ಗತಿಯ ದಾರಿಯನ್ನು ಪಿಡಿಯನೆಂದೇ ಅರ್ಥವು ತಿಳಿಯಬೇಕು. ಜನ ಸಾಮಾನ್ಯಕ್ಕೆ ವೇದಾದಿಗಳ ರಹಸ್ಯವನ್ನರುಹಲು ಶ್ರೀ ವೇದವ್ಯಾಸರು ಹದಿನೆಂಟು ಪುರಾಣಗಳನ್ನು ಬರೆದಿರುವರು. ಅವುಗಳಲ್ಲಿ ಶಿವಮಹಾಪುರಾಣವು ಮಸ್ತಕಮಣಿಯಂತಿರುವುದು. ಅದರಲ್ಲಿರುವ ಚರಿತ್ರವು ಶಿವಪ್ರಾಣವಾಗಿರುವ ಅಮೃತವಾಗಿರುವುದು. ಈ ಅಮೃತವನ್ನು ಸವಿಯುತ್ತ ಸುಯೋಗವು ಸುಕೃತಿಗಳಿಗೆ ಮಾತ್ರ ಇರುವುದು. ಶಿವ

ಜರಿತ್ರಗಳನ್ನು ಬೋಧಿಸಿ ಶಿಷ್ಯರನ್ನು ಶಿವಭಕ್ತಿ ಪರಾಯಣರನ್ನಾಗಿ ಮಾಡಿಹೆದ್ದುವುದು ಸದ್ಗುರುಗಳ ಪ್ರಥಮ ಕರ್ತವ್ಯವಾಗಿದೆ. ವಿದ್ಯಾವಂತರಾದ ಗುರುಗಳು ಶಿಷ್ಯ ಸುಧಾರಣೆಗಾಗಿ ಸರ್ವಸ್ವವನ್ನೂ ತೊರೆಯಬಹುದೇಕು ನೀರು ತುಂಬಿದ ಮೋಡಗಳು ಆಕಾಶದಲ್ಲಿ ಹಾರಾಡಿದರೆ ಭೂಮಿಯಲ್ಲಿ ಸುಭಿಕ್ಷೆಯುಂಟಾಗಲಾರದು ಶಿಷ್ಯೋದ್ಧಾರ ಪರಾಯಣರೂ ಶ್ರೀ ಜಗದ್ಗುರು ರಂಭಾಪುರೀ ವೀರ ಸಿಂಹಾಸನ ಶಾಖಾ ಶ್ರೀಮದ್ವಿಭೂತಿಪುರ ಮಠ ಮತ್ತು ಬೆಂಗಳೂರು ಒಟ್ಟಿ ಚಿಕ್ಕಪೇಟೆ ಮಹೇಶ್ವರಿನ ಮಹಾಧರ್ಮ ಕ್ಷೇತ್ರ, ಶಿವಯೋಗಿ ಧುರೀಣರೂ, ವೈರಾಗ್ಯ ಶಿಲರೂ ಆದ ಭೀಷ್ಮ ಬ್ರಹ್ಮಚಾರಿ ಶ್ರೀಗಿ ಹಿ ಬ್ರಗಿ ಗಂಗಾಧರ ಶಿವಾಚಾರ್ಯರು, ಅಲ್ಲಲ್ಲಿ ಸಂಚರಿಸಿ ಶಿಸ್ಯಕೋಟಿಯನ್ನು ವೃದ್ಧಿಸುತ್ತಿರುವುದು ಸರಿಯಷ್ಟೆ! ಶ್ರೀಗಳು ಸುತ್ತಾನಪುರ, ಲಕ್ಷ್ಮೀಶ್ವರ ನಿವಾಸಿಗಳ ಪ್ರಾರ್ಥನೆಯನ್ನನ್ವೀಕರಿಸಿ ಅಸ್ಖಾನ ವಿದ್ವಾನ್ ಪುರಾಣಶಿಕ್ಷ ವೇಗಿ ಪಂಗಿ ವೃಷಭಲಿಂಗ ಶಾಸ್ತ್ರಿಗಳವರೊಡನೆ ಆ ಗ್ರಾಮಗಳಿಗೆ ದಯಮಾಡಿಸಿ ಪುರಾಣಪ್ರವಚನೋಪನ್ಯಾಸಾದಿಗಳಿಂದ ಆಲ್ಲಿಯ ಸುಕೃದಯ ಭಗವದ್ಭೀಮಿಗಳನ್ನು ಸಂತೋಷಗೊಳಿಸಿ ಧಾರವಾಡ ಹಿರೇಮರದ ಸಬ್ ಓವರ್‌ಸೀಯರ್, ಯಸ್. ಯಸ್ ವೇಗಿ ಸೋಮಲಿಂಗಯ್ಯನವರ ಪುತ್ರರ ದೀಕ್ಷಾ ಕಾರ್ಯವನ್ನು ನೆರವೇರಿಸಿ ಧಾರವಾಡ ಜಿಲ್ಲೆಗೆ ಸೇರಿದ ಕಳಸ ಗ್ರಾಮದ ಸದ್ಭಕ್ತ ಮಾಹೇಶ್ವರರ ಪ್ರಾರ್ಥನೆಯನ್ನು ಸ್ವೀಕರಿಸಿ ತಾ|| ೩೨-೭ ೪೦ ನೇ ಗುರುವಾರ ಸಾಯಂಕಾಲಕ್ಕೆ ಕಳಸಕ್ಕೆ ಆಗಮಿಸಿದರು ಆ ದಿನವೇ ಅನುಷ್ಠಾನ ಪುರಾಣ ಪ್ರವಚನೋಪನ್ಯಾಸಗಳಿಗೆ ಅರಂಭವಾಯಿತು. ಊರ ಹಿರಿಯ ಮಹದಲ್ಲಿಯೇ ಸಕಲ ಕಾರ್ಯಗಳು ನಡೆಯುತ್ತಿದ್ದವು. ಪ್ರಾತಃಕಾಲದ ಪೂಜೆಗೆ ಸ್ಥಳಪರಶ್ಯಲದ ಅನೇಕ ಸ್ತ್ರೀಪುರುಷರು ಆಗಮಿಸಿ ಪೂಜಾದರ್ಶನ ತೀರ್ಥಪ್ರಸಾದಾದಿಗಳಿಂದ ಆನಂದಿಸುತ್ತಿದ್ದರು ಸಾಯಂಕಾಲದ ಪುರಾಣ ಪ್ರವಚನೋಪನ್ಯಾಸಗಳಿಗೆ ಸಕಲ ಮಹೀಯ ಸಾವಿರಾರು ಸ್ತ್ರೀ ಪುರುಷರು ನೆರೆಯುತ್ತಿದ್ದರು ಸಮಯವನ್ನತಿಕ್ರಮಿಸದೆ ಸುತ್ತಮುತ್ತಣ ಹಳ್ಳಿಯ ಜನರು ತಂಡತಂಡವಾಗಿ ಸೇರುತ್ತಿದ್ದರು. ಭಜನಾ ಸಂಘಗಳ ಎಡೆಯಾಟ ದಿಂದಲೂ, ಶಿವಪೂಜಾ ಗುರುಪೂಜಾ ವೈಭವದಿಂದಲೂ, ಕಳಸವು ಭೂಕೈಲಾಸವೆಂಬತ್ತು., ಆನಂದವನ್ನು ಇನ್ನೂ ಕೆಲವು ದಿನಗಳ ವರೆಗೆ ಅನುಭವಿಸಬೇಕೆಂದು ಪ್ರೌಢ ವರ್ಗವು ಶುಕ್ಲಪಕ್ಷದ ಸಮುದ್ರನಂತೆ ದಿನೇ ದಿನೇ ಬೆಳೆಯುವುದರಲ್ಲಿದ್ದಿತು. ಪರಂತು ಶ್ರೀಗಳು ಮುಂದಕ್ಕೆ ಪ್ರಯಾಣವನ್ನಿಟ್ಟುಕೊಂಡಿದ್ದುದರಿಂದ ಪ್ರೌಢ ಸಮುದಾಯದ ಸಂಕಲ್ಪವು ಕೊನೆಗೆಂತು ಮನದಾಸ್ತೆಯು ಪೂರ್ಣವಾಗಲಿಲ್ಲ. ಸನಾಪ್ತಿ ಸೂಚಕವಾದ ಮಹಾಮಂಗಳಾರತಿ ಮಹೇಶ್ವರವು ಮಾಳಿ ಬಿ ೯ ಶನಿವಾರ ವೈಭವದೊಡನೆ ನೆರವೇರಿತು. ಪ್ರಾತಃಕಾಲದಲ್ಲಿ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶ್ರೀ ಗುರುಪಾದ ಪೂಜಾದ್ಯುತ್ಸವಗಳು ಸಾಂಗವಾಗಿ ನೆರವೇರಿ ಮಧ್ಯಾಹ್ನ ಅನ್ನಸಂತರ್ಪಣೆಯು ವಿಶೇಷವಾಗಿ ನೆರವೇರಿತು.

ಸಾಯಂಕಾಲಕ್ಕೆ ಪಂಡಿತರಿಂದ ಶ್ರೀ ಶಿವಮಹಾಪುರಾಣ ಶ್ರವಣಫಲಶಕ್ತನರೂಪವಾದ ಪ್ರವಚನವು ನಡೆದುದಲ್ಲದೆ ಶ್ರೀಗಳವರು ಲದಿಯಿಂದ ಎಲ್ಲಾ ವಿಷಯಗಳನ್ನು ಕ್ರೋಢೀಕರಿಸಿ ಸರ್ವರಿಗೂ ಧರ್ಮಜ್ಞಾನವುಂಟಾಗುವ ಹಾಗೆ ಬೋಧಿಸಿದರು. ಬಳಿಕ ಮಹಾಮಂಗಳಾರತಿಯಾಗಿ ಪ್ರಸಾದ ವಿಧಿಯೋಗವಾದಮೇಲೆ ಸಭಾವಿಸರ್ಜನೆಯಾಯಿತು. ಅಂದಿನ ಕಾರ್ಯಕ್ಕೆ ನಾಲ್ಕು ಸಾವಿರದ ತರೆಗೆ ಜನರು ಸೇರಿರಬಹುದು ಸರ್ವರೂ ಹರಗುರುಗಳನ್ನು ಸ್ಮರಿಸಿ ಜಯಧ್ವನಿಸ್ಫೋಯಿಸುತ್ತಾ ಸ್ವಸ್ಥಲಗಳಿಗೆ ತೆರಳಿದರು. ಜೋಜೋ, ಸದ್ಗುರು, ಶಂಕರ, ರುದ್ರ, ವೇದಬೋಧಿತ ಸಕಾತನ ಧರ್ಮರಕ್ಷಿ, ಜೈ.

ಒರ ಪ್ರತ್ಯಕ್ಷದರ್ಶಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾನುಪ್ರಕಾಶಯಂತ್ರದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಆಶುದ್ಧವಾಗಿ ಬಿದ್ದಿವೆ. ಅನೇಕರು ಆ ಆಶುದ್ಧಮಂತ್ರಗಳನ್ನೇ ಪಠಿಸುತ್ತಿರುವರು ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಅಲ್ಲಿತೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಶೂನ್ಯವಾಗಿ ಉಚ್ಚರಿಸಬಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗೊಳಿಸಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪದವಿಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಸಣ್ಣಬಸ್ವಿ ನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವಿನಿಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದ ಕೋರಿಕೆ

ಬೆಲೆ ೧೨ ಆಣೆ ವಿ ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಸಮಸ್ತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿಸಲ್ಪಟ್ಟಿದೆ ಈ ಗ್ರಂಥದ ಪರಿಚಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತನಿಗಲಿಗೂ ಕೂಡಾ ಆಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವನ್ನು ಪ್ರತಿಯೊಬ್ಬರೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ ಈ ಮೂಲ ಗ್ರಂಥವು ಕೇವಲ ೩೮ ಪುಟಗಳಲ್ಲಿರಲು ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ ಈ ಮಹಾಗ್ರಂಥಮದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೋಷಣೆಯಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಹಿರೇಷಷ್ಟಾಗಿ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ನಿರೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇವರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅವರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗಲೆಂಬುದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೬೪ ಪುಟಗಳಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ -ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೪ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಹಾ ಹೋಗಲಾಗಿ ೩ ರೂ. ೫ ಆಣೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೩೦×೨೪ ಬೆಲೆ ೧ಕ್ಕೆ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಕ್ಕಾಗಿ ಅಗಸ್ತ್ಯ, ವಧಿಚಿಚಿ, ವ್ಯಾಸ, ಸನಂದ, ನೂರ್ವಾಸ ಮುನಿಶ್ರೇಷ್ಠರಿಗೆ ಶಿವಸಿದ್ಧಾಂತವನ್ನು ಪಡೆದೀಸಿದ ಫೋಟೋ ಸೈಜು ೧೦×೧೪ ಬೆಲೆ .. ೦—೧—೬

ಸತ್ಯಃ ಶೀಜಗದ್ಗುರು ಪಂಚಾಚಾರ್ಯರು ಐದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ . ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ . ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಆವತರಿಸಿದ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿದ ಫೋಟೋ ... ೦—೦—೯

ಶ್ರೀ ರೇಣುಕಾಚಾರ್ಯರು ವಿಧ್ಯುಕ್ತದಿಂದ ಪ್ರಾರ್ಥನಾಸಮಾನವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ಇಕ್ಕೆ . ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಚಾರಿತ್ರೈತ್ರವಿರಾಜಮಾನ ಶ್ರೀ ಜಗದ್ಗುರು ನಿಶ್ವಾರಾಧ್ಯರ ಮೂಲಪ್ರತಿಷ್ಠೆಯ ಫೋಟೋ .. ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಶಿವಾಚಾರ್ಯರ ಫೋಟೋ .. ೦—೦—೯

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರಾಚಾರ್ಯರ ಫೋಟೋ .. ೦—೦—೯

ಶ್ರೀಮದ್ರಂಭಾಪುರೀ ಸೀತಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .. ೦—೦—೯

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ . ೦—೮—೯

ಶ್ರೀ ಜಗದ್ಗುರು ಉಜ್ಜಯಿನೀ ಸೀತಿಪೀಠ ಮಹಾವ್ಯಾಪ್ತಿಯ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಸೀತಿಪೀಠ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ . ೦—೦—೯

ಶ್ರೀ ಜಗದ್ಗುರು ಕೇದಾರನಿಲಯಸನಿಧಿ ಅತ್ಯಂತ ಸುಂದರವಾದ ಗೋಪುರದ ಫೋಟೋ . ೦—೦—೯

ಹಿಮಾಚಲ ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಸುಂದರವಾದ ಫೋಟೋ .. ೦—೦—೯

ಶ್ರೀರಂಗಾಪುರ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮಚ್ಛಾಕಾರಾಜರವರು ವಿರಾಜಮಾನರಾಗಿರುವ ಫೋಟೋ ... ೦—೦—೯

ಬೆಂಗಳೂರು ತಂಬ್ಯೂಸ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅದ್ದ ಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾರಿರಾಯಮೆಂದಿಗಳು ಇದನ್ನು ಉಪಯೋಗಿಸಿ ಸಾರಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿದವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸಿ, ಹಿಂಟಿ, ತಲೆನೋವು, ತಲೆಯ ಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂರಕ್ಕೆ ನೀಲ್ಬಿಳ್ಳು ಇತ್ಯಾದಿ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತದೆ. ಮೂರುಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ. ಮೊನರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ. ೨-೪-೦. ವಿ.ಪಿ. ೮ ಆಣೆ.

(Registered Trade Mark)

ನಿಮ್ಮ ಅಡ್ರೆಸ್ಸನ್ನು ತಿಳಿಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್,
[46] ಪೋ. ಬಾ. ೫೧೦, ಮದರಾಸು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ
ಸತ್ಯಾಶಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) .. ೧ ಆಣೆ
ಪಂಚಪಂಚತಿ ಪ್ರಸ್ಫುಟಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಲಿ (೮ನೆಯ ಆವೃತ್ತಿ) ... ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ) .. .. ೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ
ಭಸವಾದಿಸಿಷಿತತ್ವವರ್ಣನ (೪ನೆಯ ಆವೃತ್ತಿ) .... ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) .... ೨ ಆಣೆ
ಪಂಚಾಚಾರ್ಯಪ್ರಭಾಕರ .. .. ೨ ಆಣೆ
ಶ್ರೀಗುರುತತ್ತ್ವಪದಗಳು .... ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ... . ೨ ಆಣೆ
ವೀರಶೈವಮತವಿಮಾನಾರೂಢ .... ೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ
ಲಿಂಗಧಾರಣವಿಧಿ .... ೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ) .... ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ
ಸತ್ಯಾಶಾಸ್ತ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) .... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೬ ಆಣೆ
ವೀರಶೈವಮಹಾಕೃರು .... ೮ ಆಣೆ
ಭಸವಾಧ್ಯಾಂತದಿವಾಕರ (೩ನೆಯ ಆವೃತ್ತಿ) .... ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) .... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಧಾಷಣಮು (ತೆಲಗು) ೮ ಆಣೆ
ವೈದಿಕತಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀರೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ... ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ) ... ... ೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ ... ... ೧೨ ಆಣೆ
ಶ್ರೀಕರಧಾನ್ಯಂ (ಚಚಿಸೂತ್ರೀಃ) .... ೧ ರೂ.
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ) .... ೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೭೦ಮಹತ್ವದ ಫೋಟೋಗಳಿರುವುವು) .... ೧| ರೂ.
ಸಿದ್ಧಾಂತಶಿಖಾಮಣಿಸಟ್ (ಕನ್ನಡ ಟೀಕಾಸಹಿತ) .... ೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದ) .... ೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೩ ರೂ.
ವೀರಶೈವಸಿದ್ಧಾಂತಸುಧಾಕರ .... ೩ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೬೨ ಪುಟ) .... ೪ ರೂ.
A brief life-sketch of Pandit Sri Kashinatha Shastriji (*English*) 4 As.
The Philosophical Aspect of Virasaivism (*English*) .... 8 As.
Speeches by Pandit Shri Kashinatha Shastriji *English*) 12 As.
ವೀರಶೈವರತ್ನ (ಅರಬಿ) ... ... ೧ ರೂ.
ಸಹಗಾರಾಚಾರಸೋಪನಿಷತ್ (ವೀರಶೈವಾಚಾರ-ಸಂಸ್ಕೃತ) ... ೧ ರೂ.
ವೀರಶೈವಭೂಷಣ (ಸಂಸ್ಕೃತ) ... ... ೧ ರೂ.
ಸಂಧಿಕೌಮುದಕಾರಿಕಾ (ಸಂಸ್ಕೃತ) ... ... ೨ ಆಣೆ
ನಿಘಂಟುರಾಜಸಂಜೀವಿನಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಂತಕ್ಕೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿಕರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ ಪರಶರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧಿಯಾಮಕರ ಪರಿಲಪತ್ಪಂಚಾಕ್ಷರೀಮೋದಕರ । ಪಂಚಾಚಾರ್ಯಜಗದ್ಗುರೂತ್ತಮವರರ್ ಹಾಲಿಪ್ಪುದೀಲೋಕಮಂ ॥

ಸ್ವಕಥವರಿಗೆ ೧ ರೂ. ೧೧ ಆಣೆ. ಬಿಡಿ ಪ್ರತಿ ೧೫ಕ್ಕೆ ೬ ಪೈ. ಪರಸ್ಥಳದವರಿಗೆ ೨ ರೂ. ೮ ಆಣೆ. ವಿ. ಪಿ. ಚಾರ್ಜು ಪ್ರತ್ಯೇಕ.

ಸಂಪುಟ ೧೩.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ ನೇ ಮಾರ್ಚಿ ೧೯೪೦ [ಸಂಚಿಕೆ ೪೮

ಶ್ರೀ ಜಗದ್ಗುರುಗಳವರ ಜಯಂತೀಮಹೋತ್ಸವ

ನಾಂದೇಡ ಡಿ॥ ಮುಖೇಡ ಹಿರೇಮಠಾಧ್ಯಕ್ಷರಾದ ಶ್ರೀ॥ ಪಜ್ಞ ಬ್ರ॥ ವಿರೂಪಾಕ್ಷ ಶಿವಾಚಾರ್ಯರು ತಮ್ಮ ನೇತೃತ್ವದಲ್ಲಿ ಶ್ರೀ ಜಗದ್ಗುರುಗಳವರ ಜಯಂತೀ ಮಹೋತ್ಸವವನ್ನು ಒಳ್ಳೇ ವೈಭವದಿಂದ ನೆರವೇರಿಸಿದರು. ಶಿವರಾತ್ರಿ ಮೊದಲ್ಗೊಂಡು ಪ್ರತಿನಿತ್ಯದಲ್ಲಿಯೂ ಸಿದ್ಧಾಂತ ಶಿಖಾಮಣಿಯನ್ನು ಉಪದೇಶಿಸುತ್ತಿರುವರು. ಸದರಿ ಶ್ರೀಗಳಿಗೆ ಅವರ ಹಿರಿಯ ಸ್ವಾಮಿಗಳಾದ ಶ್ರೀ॥ ಪಜ್ಞ ಬ್ರ॥ ಹಾಲಯ್ಯಸ್ವಾಮಿಗಳವರು ಒಳ್ಳೆ ಉತ್ಸುಕತೆಯಿಂದ ಅನುಕೂಲತೆಯನ್ನು ಒದಗಿಸಿಕೊಡುತ್ತಿರುವದರಿಂದ ಸರ್ವವೂ ಸುಗಮವಾಗಿ ಸಾಗುತ್ತಿರುವದು. ನೂತನ ಶ್ರೀಗಳು ಚಿಕ್ಕವರಾದರೂ ಒಳ್ಳೆ ಶಾಂತರೂ, ಗುರು ವರ್ಗಭಿಮಾನಿಗಳೂ, ವಿದ್ವಾಂಸರೂ ಆಗಿದ್ದಾರೆ. ಶ್ರೀ ಜಗದ್ಗುರುಗಳವರು ಸದರಿ ಶ್ರೀಗಳಿಗೆ ಇನ್ನೂ ಹೆಚ್ಚಾದ ಶಕ್ತಿಯನ್ನಿತ್ತು ಕಾಪಾಡಿಲೆಂದು ಪ್ರಾರ್ಥಿಸುವೆವು.

ಶ್ರೀ॥ ಪಜ್ಞ ಬ್ರ॥ ವಿರೂಪಾಕ್ಷ ಶಿವಾಚಾರ್ಯರಿಗೆ ನೂತನಾಧಿಕಾರವು ಕೊಡಲ್ಪಟ್ಟಕಷ್ಟೆ! ಆ ಕಾಲಕ್ಕೆ ಅಂದರೆ ಇಲೇ ಮಾಘ ಬಹುಳ ೨ ರವಿವಾರಕ್ಕೆ ನಿಜಾಮ ಪ್ರಭುಗಳ ಹುಟ್ಟುಂ ದೊರೆಯದೆ ಇದ್ದುದರಿಂದ ಮೆರ ವಣಿಗೆಯು ಆಗಲಿಲ್ಲ. ಪುನಃ ನಿಜಾಮ ಪ್ರಭುಗಳ ಹಕುಮಿನ ಪ್ರಕಾರ ಮಾಘ ಬಹುಳ ೧೦ ಸೋಮವಾರ ದಿವಸ ನೂತನ ಶ್ರೀಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಮೂರ್ತಿ ಗೊಳಿಸಿ ಸಕಲ ವೈಭವದಿಂದಲೂ, ಆಟ್ಟುಹಾಸದಿಂದಲೂ, ಕಾಂತರೀತಿಯಿಂದಲೂ ಮೆರವಣಿಗೆಯನ್ನು ಸರ್ವಮತೀ ಯರೂ ಸೇರಿ ನೆರವೇರಿಸಿದರು. ಆ ಕಾಲಕ್ಕೆ ಸರಕಾರಿ ಪೋಲೀಸ ಸಿಬ್ಬಂದಿಯವರು ಬಹು ಉತ್ತಮ ವ್ಯವಸ್ಥೆ ಯನ್ನಿಟ್ಟಿದ್ದರು.

ಸಮಸ್ತ ದೈವಮಂಡಳಿ, ಮುಖೇಡ.

ಶ್ರೀ ಶರಣಬಸವೇಶ್ವರ ಯಾತ್ರಾ ಮಹೋತ್ಸವ.

ಶರಣರೇಣ್ಯರಾದ ಶ್ರೀ ಶರಣಬಸವೇಶ್ವರ ಸಾಧು ಮಹಾರಾಜರು ಈ ಪುಣ್ಯಾಶ್ರಯದಲ್ಲಿ ವಾಸಿಸಿ ತಮ್ಮ ಶಾಶ್ವತಿಕ ತಪೋಬಲದ ಪ್ರಭೆಯಿಂದ ಅನೇಕ ಪವಾಡ ಗಳನ್ನು ತೋರಿಸಿ ತಮ್ಮ ದಿವ್ಯ ಉಪದೇಶಾಮೃತದಿಂದ ಧಾವಿಕ ಭಕ್ತರಲ್ಲಿ ಭಕ್ತಿ ಭಾವೆಗಳನ್ನು ಜಾಗೃತಗೊಳಿಸಿ ಅತಿಥಿ, ಅಭ್ಯಾಗತರನ್ನು ಸಂತೈಸಿ ಅವರ ಇಷ್ಟಾರ್ಥ ವನ್ನು ಪರಿಪೂರ್ಣಮಾಡಿದ ವಿಷಯವು ಸರ್ವರಿಗೂ ವಿದಿತವಿದೆಯಷ್ಟೆ! ಇಂಥ ಪುಣ್ಯ ವಿಭೂತಿಯ ಸ್ಮರಣಾ ರ್ಥವಾಗಿ ಜರಗುವ ಈ ಯಾತ್ರಾಮಹೋತ್ಸವಕ್ಕೆ ಆಮಂತ್ರ ವ್ಯವಸ್ಥರಾದ ಶ್ರೀಪುರುಷರೆಲ್ಲರೂ ಅಗತ್ಯವಾಗಿ ಬಂದು ಶ್ರೀ ಶರಣರೇಣ್ಯರ ದರ್ಶನಾಶೀರ್ವಾದಗಳನ್ನು ಹೊಂದಿ ಕೃತಾರ್ಥರಾಗಬೇಕೆಂದು ವಿನಂತಿ.

ಕಾರ್ಯಕ್ರಮವು ವಿವರ— ಮಿತಿ ಫಾಲ್ಗುಣ ಬಹುಳ ೧ ಆದಿತ್ಯವಾರದಿಂದ ೩॥ ೫ ಗುರುವಾರದವರೆಗೆ ಪಲ್ಲಕ್ಕಿ ಮೆರವಣಿಗೆ, ೪ ಬ॥ಶುಕ್ರವಾರ ರಾತ್ರಿ ಉಚ್ಚಾಯಿಯ ಮೆರ ವಣಿಗೆ, ೬ ಗುರುವಾರ ರಥೋತ್ಸವ (ತೇರು), ೬ ಶುಕ್ರ ವಾರ ಹೆಗಲು ಕುಸ್ತಿ ದನಗಳ ಪ್ರದರ್ಶನ, ರಾತ್ರಿ ಮದ್ದು, ಶಾಹೀರ ಮುಂತಾದವ್ದು. ಇದಲ್ಲದೆ ಪ್ರತಿದಿನ ಭಜನೆ, ಪೂಜನೆ, ಪ್ರವಚನ, ಗಾಯನ, ವಾದನ ಮೊದಲಾದು ವುಗಳು ಪೇಳೆ ನೇಳೆಗೆ ಜರಗುತ್ತವೆ. ಆದಿಲ್ಲವನ್ನೂ ಆಗಾಗ್ಗೆ ಪ್ರಕಟನೆಯಿಂದ ತಿಳಿಸಲಾಗುತ್ತದೆ. ಉಪಕಾರ್ಯಾ ಸಕರು, ಕೀರ್ತನಕಾರರೂ, ಗವಾಯಿಗಳೇ ಮೊದಲಾದ ನರೂ ಈ ಸುಸಂಧಿಯನ್ನು ಕಳೆದುಕೊಳ್ಳದೆ ಅಗತ್ಯವಾಗಿ ಬಂದು ಬೋಧಾಮೃತವೇ ಗೈದು ಧರ್ಮಚಿಂತ್ಯತೆಯ ನ್ನುಂಟುಮಾಡಿ ಪುಣ್ಯ ಸಂಪಾದಿಸಬೇಕು.

ಪ್ರತಿ ವರ್ಷ ಪದ್ಧತಿಯಂತೆ ದನಗಳ ಪ್ರದರ್ಶನ ವನ್ನು ಏರ್ಪಡಿಸಲಾಗುವುದು. ಯೋಗ್ಯ ಶ್ರೇಷ್ಠ ದನ ಗಳಿಗೆ ಬಹುಮಾನ ಕೊಡಲಾಗುತ್ತದೆ. ಆದುದರಿಂದ ಉತ್ತಮ ದನಗಳನ್ನು ಪ್ರದರ್ಶನಕ್ಕೆ ತಪ್ಪದೆ ತರ ಬೇಕಾಗಿ ವಿನಂತಿ.

ಗುಲಬರ್ಗಾ ಸೆಕ್ರೆಟರಿ,
೧೧-೩-೧೯೪೦ ಶ್ರೀ ಶರಣಬಸವೇಶ್ವರ ಪಂಚಕಮಿಟಿ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ವಿವಾಹಮಹೋತ್ಸವ

ತಾ॥ ೧೪-೩-೧೯೪೦ ರಲ್ಲಿ ಚಿಕ್ಕಮಗಳೂರು ತಾ॥ ನರ್ಸಾರೆ ಗ್ರಾಮದ ನಂಜೇಗೌಡರ ಕುಮಾರ ಚಿ॥ ಲಿಂಗಪ್ಪಗೌಡನಿಗೆ ಇದೇ ಕಾಲೂರು ಖಾಂಡ್ಯ ಮಾಗಣಿ ಬಸಾಪುರ ಗ್ರಾಮದ ಗಿಡ್ಡೇಗೌಡರು ತಮ್ಮ ಪುತ್ರಿ ಚಿ॥ ಸೌ॥ ಪುಟ್ಟಮ್ಮನವ್ವನ್ನು ಕೊಟ್ಟು ಕನ್ಯಾದಾನ ಮಾಡಿರುವುದು ನಮ್ಮ ಸಮಾಜಕ್ಕೆ ತುಂಬಾ ಯಶಸ್ಕಾಗಿದೆ. ಮ॥ ರಾ॥ ಶ್ರೀ ಪಟೇಲ್ ಜೋಡೇಗೌಡರು, ನಿರ್ವಾಣಿ ಗೌಡರು ಮತ್ತು ತಿಪ್ಪಣ್ಣಗೌಡರು ಕಾರ್ಯದರ್ಶಿಗಳಾಗಿ ನಿಂತು ಈ ಕಾರ್ಯವನ್ನು ಸಾಂಗವಾಗಿ ನೆರವೇರಿಸಿದರು. ಮ॥ ನಂದಿ ಕೆರೆ ಸಿ॥ ಮಲ್ಲೇಗೌಡರು ಶ್ರೀಮಾನ್ ವೀರಶೆಟ್ಟರು ಮತ್ತು ಅಣಾರು ಪಟೇಲ್ ಹೇಡಮಾಳ ಜಣ್ಣೇ ಗೌಡರು, ಕೋಗೋಡು ಮ॥ ಕಾಫಿ ಪ್ಲಾಂಟರು ಶಿವೇ ಗೌಡರು ಮತ್ತು ನಮ್ಮ ಮಹಾಸಂಸ್ಥಾನದ ವಿಜಂಟರಾದ ಸಿದ್ಧಬಸವಯ್ಯನವರು, ನಂಜೇಗೌಡರು ಇನ್ನೂ ಮುಂತಾ ದವರು ಕಾರ್ಯವನ್ನು ಅಗಮಾಡಿಸಿ, ಶ್ರೀ ಜಗದ್ಗುರು ಪಂಚಾಚಾರ್ಯರು ನೂತನ ವಧೂವರರಿಗೆ ಆಯುರಾ ರೋಗ್ಯೈಶ್ವರ್ಯಾದಿಗಳನ್ನು ಆಸುಗ್ರಹಿಸಲೆಂದು ಪ್ರಾರ್ಥಿ ಸಿದರು. ಇನ್ನುಮುಂದೆ ನಮ್ಮ ವೀರಶೈವ ಸಮಾಜ ದಲ್ಲಿ ಈ ಮೇಲ್ಕಂಡಂತೆ ವಿವಾಹ ಕಾರ್ಯವನ್ನು ನೆರವೇ ರಿಸಲೇಕಾಗಿ ಪ್ರಾರ್ಥನೆ.

ಈ ವಿವಾಹ ಸಮಾರಂಭದಲ್ಲಿ ವಧೂವರರಿಂದ ಪ್ರಭಾ ಪೋಷಣಕ್ಕಾಗಿ ೧ ರೂ. ಸಮರ್ಪಿಸಲ್ಪಟ್ಟಿತು. ಇದೇ ದಿವಸ ಮೇಲ್ಕಂಡ ಗ್ರಾಮದ ಮಡಿವಾಳಕೆ ಪದುಮ ಯ್ಯನ ಮಗ ರಂಗಯ್ಯನು ನಡೆಯಿಸಿದ ಹೊಸಮನೆ ಗೃಹ ಪ್ರವೇಶ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ೧ ರೂ ಯು ಸಮರ್ಪಿಸಲ್ಪಟ್ಟಿತು.

ಪಟೇಲ ಜೋಡೇಗೌಡ ವಸ್ತಾರೆ.

ಸ್ವೀಕಾರ.

ಚಿಕ್ಕಮಗಳೂರು ತಾ॥ ವಸ್ತಾರೆ ಗ್ರಾಮದ ಮ॥ ರಾ॥ ನಂಜೇಗೌಡರ ಪುತ್ರ ಚಿ॥ ಲಿಂಗಪ್ಪಗೌಡನಿಗೆ ಬಸಾಪುರ ಗ್ರಾಮದ ಮ॥ ರಾ॥ ಗಿಡ್ಡೇಗೌಡರ ಪುತ್ರಿ ಚಿ॥ ಸೌ॥ ಪುಟ್ಟಮ್ಮನವ್ವನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯ ದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ ೧ ರೂ. ಇದೇ ಗ್ರಾಮದ ಮಡಿವಾಳಕೆ ಪದುಮಯ್ಯನ ಮಗ ರಂಗಯ್ಯನು ನೂತನಿರ್ಮಿತ ಹೊಸಮನೆ ಮಾಡಿದ ಸಮಯ ದಲ್ಲಿ ಸಮರ್ಪಿಸಿದ ೧ ರೂ. ಒಟ್ಟು 2 ರೂ. ಗಳು ಮ॥ರಾ॥ ವಸ್ತಾರೆಪಟೇಲ ಜೋಡೇಗೌಡರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾರಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾಪೈಸುತ್ತೇವೆ.

ಪೂಜಾಪರಿಮಳ ದ್ರವ್ಯಗಳು.

ಮಹಶೀಯರೇ! ನಮ್ಮಲ್ಲಿ ದೇವರ ಪೂಜೆಗೆ ಬೇಕಾ ಗುವ ಪರಿಮಳ ದಕ್ಕಾಂಗ, ಧೂಪವರ್ಗಿಟ್ಟು, ದೇಶೀಕರ್ಪೂರ, ರಕಂಪಾರು ಹಸನಾದ ಊದುಬತ್ತಿಗಳು ಯೋಗ್ಯಬೆಲೆಗೆ ದೊರೆಯುತ್ತವೆ. ಬೇಕಾದ ಸಾಮಾನುಗಳಿಗೆ ಬರೆದು ತರಿಸಿಕೊಳ್ಳಿರಿ.

ವೈ. ಬಸಪ್ಪ,
ಊದುಬತ್ತಿ ದಕ್ಕಾಂಗದ ಕಾರ್ಖಾನೆ.
[೬] ಚಿಕ್ಕಪೇಟೆ, ಬೆಂಗಳೂರುಸಿಟಿ.

ರಾಮಘಡದಲ್ಲಿ ನೆರವೇರಿದ ೫೬ ನೆಯ ಕಾಂಗ್ರೆಸ್ ಅಧಿವೇಶನ.

ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಲಾಂ ಆಜಾದರ ಭಾಷಣ

ಶ್ರೀ ಆಜಾದರು ೧೯೨೨ ರಲ್ಲಿ ತಮ್ಮನ್ನು ಅಧ್ಯಕ್ಷ ರನ್ನಾಗಿ ನಿಯಮಿಸಿದ್ದ ಸಂಗತಿಯನ್ನು ಮೊದಲು ಹೇಳಿ ಈಗ ಎರಡನೆಯ ಸಾರೆ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಆರಿಸಿರುವುದಕ್ಕಾಗಿ ವಂದಿಸಿ ತಮ್ಮ ಭಾಷಣವನ್ನು ಆರಂ ಭಿಸಿದರು. ಕಳೆದ ೧೬ ವರ್ಷಗಳಲ್ಲಿ ಭಾರತವು ಬಹಳ ಬದಲಾವಣೆಗಳನ್ನು ಹೊಂದಿರುವುದೆಂದೂ, ೧೯೨೩ ರಲ್ಲಿದ್ದ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಅರ್ಥಾತ್ ಸಂಬಂಧವೇ ಇಲ್ಲವೆಂದೂ ೧೯೩೨ ರಲ್ಲಿ ಸ್ವರಾಜ್ಯವು ಇನ್ನೂ ಬಹಳ ದೂರದಲ್ಲಿತ್ತೆಂದೂ, ಈಗ ಭಾರತವು ಸ್ವರಾಜ್ಯದ ಸನ್ನಿಹಿತದಲ್ಲಿರುವುದೆಂದೂ ಸೂಚಿಸಿದರು. "ಭಟನಾಪಳಗಳು ವಿದ್ಯುದ್ವೇಗದಿಂದ ನಡೆಯುತ್ತ ನಾವು ಸ್ವರಾಜ್ಯ ಧ್ಯೇಯದ ಸಮಿಾಪಕ್ಕೆ ಸರಿಯುತ್ತ ಬಂದಿದ್ದರೂ ಹೊಸ ಹೊಸ ಸಮಸ್ಯೆಗಳು ತಲೆ ಹಾಕಿವೆ. ಇಂದು ನಾವು ಬಹಳ ವಿಶಿಷ್ಟ ಸಾಹಿದಿಯಲ್ಲಿ ಸಿಕ್ಕಿ ಬಿದ್ದಿದ್ದೇವೆ. ಸರಿಯಾದ ಹಾದಿಯಲ್ಲಿ ಈಗ ಮುಂದುಸರಿದರೆ ನಮಗೆ ಸ್ವಾತಂತ್ರ್ಯವು ಬೇಗನೆ ಲಭಿಸಬಹುದು. ಇಲ್ಲದೇ ತಪ್ಪು ದಾರಿಯನ್ನು ತುಳಿದರೆ ಸ್ವಾತಂತ್ರ್ಯವು ಹಿಂದಕ್ಕೆ ಸರಿಯಬಹುದು. ಇಂತಹ ಪರ್ವ ಸಮಯ ವಿದು" ಎಂಬುದಾಗಿ ನುಡಿದರು.

"ನಮ್ಮ ಮುಂದಿರುವ ನಿಜವಾದ ಸಮಸ್ಯೆಯೇನು ? ೧೯೩೯ ನೇ ವರ್ಷದ ಸೆಪ್ಟಂಬರ್ ತಿಂಗಳು ೩ ನೇ ತಾರೀಖಿನ ದಿನ ಬ್ರಿಟನ್ನು ಆರಂಭಿಸಿದ ಸಂಗ್ರಾಮವು ನಮ್ಮನ್ನು ಎಲ್ಲಿಗೊಯ್ಯಲಿದೆ" ಎಂಬುದಾಗಿ ಪ್ರಶ್ನೆ ಹಾಕಿ ಕೋಡು ಉತ್ತರವನ್ನು ಪರಿಶೀಲಿಸಲಾರಂಭಿಸಿದರು. ೧೯೩೬ ನೇ ವರ್ಷದಲ್ಲಿ ಲಕ್ನೋ ನಗರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಬಹಳ ಮುಖ್ಯವಾದುದೆಂದೂ, ಆ ಅಧಿವೇಶನದಲ್ಲಿಯೇ ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ವಿಮರ್ಶಿಸಿದಾಗ ಸಾರ್ವಜನಿಕರಿಗೆ ಮುಂದೆ ನಿರ್ಣಾಮರೂಪವಾಗಿ ಇಡಲಾ ಯಿತೆಂದೂ, ಭಾರತವು ಅಂತರ ರಾಷ್ಟ್ರೀಯ ಸ್ಥಿತಿಗತಿ ಗಳಿಂದ ಮಾಮಾಗಿ ತನ್ನ ಪಾಡಿಗೆ ತಾನು ತೆಪ್ಪಗೆ ಕುಳಿ ತುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದೂ, ಅಂತರ ರಾಷ್ಟ್ರೀಯ ಸ್ಥಿತಿಗತಿಗಳನ್ವಯ ಪರಿಶೀಲಿಸಿ ಅವುಗಳನ್ನು ಧಾರಣೆ ಬಿಡಿಸಿಕೊಳ್ಳುವ ಪ್ರಯತ್ನ ವನ್ನು ಕಾಂಗ್ರೆಸ್ ಮಾಡುವುದೆಂದೂ ನಿರ್ಣಯದಲ್ಲಿ ವಿವರಿಸಲಾಗಿತ್ತೆಂದೂ, ಹೇಳಿದರು. ನಾಜಿ ಮತ್ತು ಫಾಸಿಸ್ಟ್ ತತ್ವಗಳನ್ನು ಖಂಡಿಸಿ ಭಾರತವು ಸ್ವಾತಂತ್ರ್ಯ ಪ್ರೇಮಿಯೆಂಬುದನ್ನೂ ಜಗತ್ತಿಗೆ ಸಾರಿತ್ತೆಂದೂ ಈಗ ನಾಜಿ ಮತ್ತು ಫಾಸಿಸ್ಟ್ ಪುಸೋದರ್ಯಗಳು ತಲೆ ಎತ್ತಿಕೊಂಡು ಜಗತ್ತಿನ ಶಾಂತಿಗೆ ಭಂಗ ತಂದಿರುವೆ ಯೆಂದೂ ಸೂಚಿಸಿ ತಮ್ಮ ಭಾಷಣವನ್ನು ಮುಂದುಸರಿಸಿ ದರು:—

"ಫಾಸಿಸ್ಟ್ ಮತ್ತು ನಾಜಿ ಧ್ಯೇಯಗಳಿಂದ ಜಗ ತ್ತಿಗೆ ಹಾಸಿ ಶಟ್ಟುತ್ತಿರುವ ವಿಷಾದವನ್ನು ನಾವು ಸರಿಪಡಿ ಲಿಸುವಾಗ್ಗೆ ಇವುಗಳಿಗಿಂತಲೂ ಹೆಚ್ಚು ಹಾನಿಕರವಾದ ಇನ್ನೊಂದು ವಿಷಯವನ್ನು ನಾವು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಬ್ರಿಟನ್ನಿನ "ಇಂಪೀರಿಯ ಲಿಜಂ" ತತ್ವ. ಈ ಇಂಪೀರಿಯಲಿಜಂ ತತ್ವವನ್ನು ನಾವು ದೂರದಿಂದ ನೋಡುತ್ತ ಕುಳಿತಿಲ್ಲ. ಅದರ ಫಲವನ್ನು ಅನುಭವಿಸುತ್ತಿದ್ದೇವೆ. ನಮ್ಮ ಮನೆಯನ್ನು ಅದು ಪ್ರವೇಶಮಾಡಿ ಯಾಜಮಾನ್ಯವನ್ನು ವಹಿಸಿದೆ. ಈ ಉದ್ದೇಶದಿಂದಲೇ ಭಾರತವು ಈ ಸಂಗ್ರಾಮದಲ್ಲಿ ಭಾಗ ವಹಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬಯಸಿತ್ತು. ತನ್ನ ಸ್ವತಂತ್ರ ಇಚ್ಛೆಯಿಂದ ನಿರ್ಧಾರವನ್ನು ತೆಗೆದುಕೊಳ್ಳು ವುದಕ್ಕೆ ಸಮರ್ಥವಾಗುವವರೆಗೂ ಈ ಪ್ರಶ್ನೆಯನ್ನು ಭಾರತವು ಇತ್ಯರ್ಥಮಾಡುವಹಾಗಿಲ್ಲ. ಭಾರತವು ನಾಜಿ ಪ್ರಭುತ್ವವನ್ನಾಗಲೀ ಫ್ಯಾಸಿಸ್ಟ್ ಪ್ರಭುತ್ವಸಂಗಲೀ ಅಪೇಕ್ಷಿಸುವುದಿಲ್ಲ. ಆದರೆ ಅದಕ್ಕಿಂತ ಹೆಚ್ಚಾಗಿ ಇಂದು ಬ್ರಿಟನ್ನಿನ "ಇಂಪೀರಿಯಲಿಜಂ" ತತ್ವದಿಂದ ಜೀಸರ ಗೊಂಡಿದೆ. ಭಾರತಕ್ಕೆ ನ್ಯಾಯವಾಗಿ ಸಲ್ಲಬೇಕಾಗಿರುವ ಸ್ವಾತಂತ್ರ್ಯದ ಹಕ್ಕನ್ನು ಕೊಡದೆ ಹೋಗುವುದಾದರೆ ಬ್ರಿಟನ್ ತನ್ನ ಸಾಮ್ರಾಜ್ಯ ನೀತಿಯನ್ನು ಬಿಟ್ಟುಕೊಡಲು ಸಿದ್ಧವಾಗಿಲ್ಲವೆಂಬುದು ಜಿನ್ನಾಗಿ ವ್ಯಕ್ತಪಡುವುದು. ಅಂ ತಹ ಸಂದರ್ಭದಲ್ಲಿ ಭಾರತವು ಬ್ರಿಟಿನ್ನಿಗೆ ಸಹಾಯ ನೀಡುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಇಕ್ಕೂ ಕಾಂಗ್ರೆಸ್ಸು ನಲ್ಲಾದ ನಿರ್ಣಯದಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ." ಎಂಬುದಾಗಿ ಸೂಚಿಸಿದರು.

ಕಾಂಗ್ರೆಸ್ಸಿನ ಈ ಸ್ಪಷ್ಟ ನಿರ್ಣಯವೂ ಹೇಳಿಕೆಯೂ ಬ್ರಿಟಿಷ್ ಸರ್ಕಾರದ ಮುಂದಿದ್ದರೂ ಕೂಡ ೧೯೩೯ ನೇ ವರ್ಷದ ಸಪ್ಟೆಂಬರ್ ತಿಂಗಳಲ್ಲಿ ಭಾರತದ ಇಚ್ಛೆಗೆ ವಿರು ದ್ಧವಾಗಿ ಅದನ್ನು ಕೇಳದೆಯೇ ಸಂಗ್ರಾಮವನ್ನು ಆರಂಭ ಸಲಾಯಿತೆಂದು ಸೂಚಿಸಿ ೧೯೪೦ ನೇ ವರ್ಷದ ಆಗಸ್ಟ್ ತಿಂಗಳಲ್ಲಿವ್ವಿ ಪರಿಸ್ಥಿತಿಯನ್ನು ವಿಶದವಾಗಿ ವರ್ಣಿಸಿದರು. ಆ ತಿಂಗಳಲ್ಲಿ ಯುದ್ಧದ ಕಾರ್ಯೋಡಗಳು ಕವಿದವೆಂದೂ ಯುದ್ಧ ಸಂಭವಿಸಿದರೆ ಅದರಲ್ಲಿ ಭಾಗವಹಿಸಬೇಕೇ ಬೇಡವೇ ಎಂಬುದನ್ನು ಬ್ರಿಟಿಷ್ ಸಾಮ್ರಾಜ್ಯದ ದೇಶ ಗಳು ಪರಿಶೀಲಿಸಲು ಅರಂಭಿಸಿದವೆಂದೂ, ಏಲ್ಲೆಂಡ್ ದೇಶವು ಪಾರ್ಶ್ವ್ಯ ನೀತಿಯನ್ನು ಅನುಸರಿಸುವುದಾಗಿ ನಿರ್ಧರಿಸಿದಾಗ ಕೊಂಚವಾದರೂ ಆಶ್ಚರ್ಯವನ್ನು ವ್ಯಕ್ತ ಪಡಿಸಲಿಲ್ಲವೆಂದೂ ಸೂಚಿಸಿ, ಭಾರತದ ಸಲಹೆಯನ್ನು ಕೂಡ ಬ್ರಿಟಿಷ್ ಸರ್ಕಾರವು ಕೇಳಲಿಲ್ಲವೆಂದು ಆಕ್ಷೇಪಿಸಿ ದರು.

೧೯೧೪ ರಲ್ಲಿ ಯೂರೋಪಿನಲ್ಲಿ ಯುದ್ಧವು ಆರಂಭ ವಾದಾಗಲೂ ಕೂಡ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶ ಗಳು ಸಣ್ಣಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯ ಪ್ರಶ್ನೆಯನ್ನು ಎತ್ತಿದವೆಂದೂ, ಅನಂತರ ಅಮೇರಿಕೆಯ ರಾಜಾಧ್ಯಕ್ಷರು ಕೂಡ ತಮ್ಮ ೧೪ ಸೂತ್ರಗಳಲ್ಲಿ ಆ ಪ್ರಶ್ನೆಯನ್ನು ಎತ್ತಿದ್ದರೆಂದೂ, ಸಂಗ್ರಾಮವು ಮುಗಿದ ಮೇಲೆ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಅನುಸರಿಸಿದ ನೀತಿಯ ಫಲ ವಾಗಿ ಜರ್ಮನಿಯಲ್ಲಿ ನಾಜಿ ತತ್ವವೂ ಇಟಲಿಯಲ್ಲಿ 'ಫಾಸಿಸ್ಟ್' ತತ್ವವೂ ತಲೆ ಹಾಕಿದವೆಂದೂ ನುಡಿದರು.

ಸೆಪ್ಟೆಂಬರ್ ೩ ನೇ ತಾರೀಖಿನ ದಿನ ಸಂಗ್ರಾಮವು ಆರಂಭವಾದ ತರುವಾಯ ಸೆಪ್ಟಂಬರ್ ೬ ನೇ ತಾರೀಖಿನ ದಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಾರ್ಧಾ ದಲ್ಲಿ ಸೇರಿ ಅನುಮೋದಿಸಿದ ನಿರ್ಣಯವನ್ನು ಸಭಿಕರ ಗಮನಕ್ಕೆ ತರುತ್ತ—ಬ್ರಿಟನ್ನಿನ ನಿಜವಾದ ಸಂಗ್ರಾಮ ನೀತಿಯೇನೆಂಬುದನ್ನು ಆ ನಿರ್ಣಯದಲ್ಲಿ ಕಾಂಗ್ರೆಸ್ ಕೇಳಿತು. ಆ ಪ್ರಶ್ನೆಯ ಮೇಲೆಯೇ ಭಾರತದ ಶಾಂತಿ ಸುಖಗಳು ಮಾತ್ರವಲ್ಲ ಇಡೀ ಜಗತ್ತಿನ ಶಾಂತಿಯು ನೆಲಸಿತ್ತು. ಭಾರತವು ಸಂಗ್ರಾಮದಲ್ಲಿ ಭಾಗವಹಿಸಬೇಕಾದೀ ದಸ್ಸು ಕೇಳುವುದಕ್ಕೆ ಅದಕ್ಕೆ ಹಕ್ಕಿದೆ ಹಿಂದಿನ ಸಂಗ್ರಾ ಮದ ತರುವಾಯ ಭಾರತಕ್ಕೆ ಉಟ್ಟಾದ ಫಲವು ಅಲ್ಪ ಸಾರೆಯೂ ಆಗಿದೆ. ಜಗತ್ತಿನಲ್ಲಿ ನಿಜವಾಗಿಯೂ ಹೆಮ್ಮಾ ಕ್ರಸಿ, ಮತ್ತು ಸ್ವಾತಂತ್ರ್ಯಗಳ ರಕ್ಷಣೆಯಾಗುವ ಭರ ವಸೆಯು ಉಂಟಾಗುವುದಾದರೆ ಅದರ ಪರಿಣಾಮ ಭಾರ ತದ ಮೇಲೆ ಎಷ್ಟೊಮಟ್ಟಿಗೆ ಉಂಟಾಗುವುದೆಂಬುದನ್ನು ಅರಿಯುವುದಕ್ಕೆ ಭಾರತಕ್ಕೆ ಹಕ್ಕಿದೆ ಎಂಬುದಾಗಿ ನುಡಿದರು.

"೩೫ ವರ್ಷಗಳ ಕೆಳಗೆ ಘೋರ ಸಂಗ್ರಾಮವು ನಡೆದು ಅಪರ್ಮಿತ ಶರೀರಹಾನಿಯು ಸಂಭವಿಸಿತು. ರಕ್ತದ ಕಾಲುವೆಯು ಹರಿಯಿತು. ಸಣ್ಣ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ, ಸಾಮೂಹಿಕ ಭದ್ರತೆ, ಸ್ವಯಂ ನಿರ್ಣಯಾಧಿಕಾರ, ಲೀಗ್ ಸಂಸ್ಥೆ, ಅಂತರ ರಾಷ್ಟ್ರೀಯ ನ್ಯಾಯ, ಇತ್ಯಾದಿ ಪದಗಳ ಘೋಷಣೆಯಿಂದ ಜನರು ನಿಜವಾಗಿಯೂ ಭ್ರಾಂತರಾಗಿದ್ದರು. ಪ್ರತಿಯೊಂದು ಘೋಷ ಣೆಯೂ ಸುಳ್ಳಾಗಿ ಪರಿಣಮಿಸಿತು. ಈಗ- ಮತ್ತೆ ರಾಷ್ಟ್ರ ಗಳು ಸೈರ ಹೋರಾಟಕ್ಕೆ ಆರಂಭಿಸಿವೆ. ಈ ಹೋರಾ ಟದಲ್ಲಿ ಧುಮುಕುವುದಕ್ಕಿಂತ ಮುಂಚೆ ಹಾಗೇಕೆ ಆಯಿ ತೆಂಬುದನ್ನೂ, ಇದರಿಂದ ಭಾರತದ ಭವಿಷ್ಯವು ಎಷ್ಟರ ಮಟ್ಟಿಗೆ ಬದಲಾವಣೆ ಹೊಂದುವುದೆಂಬುದನ್ನು ಕೇಳು ವುದನ್ನು ಕೂಡ ಸರಿತು ಬಿಡುವಷ್ಟು ಅವಿವೇಕಿಗಳಾಗ ಬೇಕೆ ?" ಎಂಬುದಾಗಿ ನುಡಿದರು.

ಅನಂತರ ಕಾಂಗ್ರೆಸ್ಸಿನ ಬೇಡಿಕೆಗೆ ಬ್ರಿಟಿಷ್ ಸರ್ಕಾ ರವು ಇತ್ತ ಉತ್ತರವನ್ನು ವಿಮರ್ಶಿಸಿದರು. ಆ ಉತ್ತರ ಗಳು ಸಮರ್ಪಕವಾಗಿಲ್ಲದೆ ಇದ್ದ ಪ್ರಯುಕ್ತ ಎಂಟು ಪ್ರಾಂತ್ಯಗಳ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಟ್ಟರೆಂದು ಸೂಚಿಸಿ "ನೈಸರಾಯರು ಇತ್ತಿರುವ ಹೇಳಿಕೆಯಲ್ಲಿರುವುದೇನೆಂಬುದನ್ನು ನಾವೆಲ್ಲ ಬಲ್ಲವರಾಗಿ ದ್ದೇವೆ. ತೀರ ಸ್ವಲ್ಪ ಕಾಲದಲ್ಲಿ ಭಾರತವು ಡೊಮಿನಿ ಯನ್ ಸ್ಟೇಟುಸ್ ಸ್ಥಾನವನ್ನು ಪಡೆಯಬೇಕೆಂಬುದು ಬ್ರಿಟಿಷ್ ಸರ್ಕಾರದ ಉದ್ದೇಶವೆಂದು ಅವರು ಸೂಚಿಸಿ ದ್ದಾರೆ. ಆದರೆ ಹೊರಗಿನವರ ಕೈವಾಡವಿಲ್ಲದೆ ಭಾರ ತಕ್ಕೆ ಸ್ವಯಂ ನಿರ್ಣಯಾಧಿಕಾರವನ್ನು ಕೊಟ್ಟು ತನ್ನ ರಾಜ್ಯಾಂಗ ವ್ಯವಸ್ಥೆಯನ್ನು ತಾನು ರೂಪುಗೊಳಿಸಿಕೊಳ್ಳು ವುದಕ್ಕೆ ಮಾತ್ರ ಬ್ರಿಟಿಷ್ ಸರ್ಕಾರವು ಅವಕಾಶ ಕೊಡು ವುದಿಲ್ಲ. ಸ್ವಪ್ನವಾಗಿ ಹೇಳುವುದಾದರೆ ಭಾರತಕ್ಕೆ ಸ್ವಯಂ ನಿರ್ಣಯಾಧಿಕಾರ ಹಕ್ಕಿರುವುದೆಂಬ ಆಂಶವನ್ನು ಬ್ರಿಟಿಷ್ ಸರ್ಕಾರವು ಒಪ್ಪಿಕೊಳ್ಳುವುದಿಲ್ಲ" ಎಂಬುದಾಗಿ ಹೇಳಿದರು.

ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ಪಶಿಮ ತ್ರಿಯನ್ನು ಸ್ವಾತಂತ್ರ್ಯ ಮಂತ್ರವು ಯೂರೋಪಿನ ರಾಷ್ಟ್ರ ಗಳಿಗೆ ಮಾತ್ರ ಅನ್ವಯಿಸುವುದೆಂದೂ ಭಾರತಕ್ಕೆ ಅದು ಅನ್ವಯಿಸುವುದಿಲ್ಲವೆಂಬುದೂ ಈ ಸ್ವಾತಂತ್ರ್ಯದ ಆಕೆ ಯನ್ನು ವಿಸ್ತಯ ಮತ್ತು ಅಫ್ರಿಕ ದೇಶಗಳು ಇಟ್ಟುಕೊಳ್ಳ ಕೂಡದೆಂಬುದೂ ಶ್ರೀ ಛೇಂಬರ್ಲೀನರು ಬರ್ಮಿಂಗ್ ಹ್ಯಾಮ್ ನಗರದಲ್ಲಿ ಫೆಬ್ರವರಿ ೨೪ ನೇ ತಾರೀಖಿನ ದಿನ ಮಾಡಿದ ಭಾಷಣದಿಂದ ಸ್ಪಷ್ಟವಾಗುವುದೆಂದು ಸೂಚಿಸುತ್ತ "ಶ್ರೀ ಛೇಂಬರ್ಲೀನರು ವ್ಯಕ್ತಪಡಿಸುವ ಅಭಿ ಪ್ರಾಯವು ಬ್ರಿಟಿಷ್ ಸರ್ಕಾರಕ್ಕೆ ಮಾತ್ರ ಅಪ್ರಯೋಜ ನವುದಲ್ಲ. ಯೂರೋಪಿನ ಮನೋಧರ್ಮವೇ ಈಗಿತ್ತಿ ಇದೆ" ಎಂಬುದಾಗಿ ಅಭಿಪ್ರಾಯಪಟ್ಟರು. ಅನಂತರ "ಬ್ರಿಟಿನ್ನಿನ ಸಂಗ್ರಾಮ ನೀತಿಯೇನೆಂಬುದನ್ನು ನಾವು ಪ್ರಶ್ನಿಸಿದಾಗ ೧೯೧೯ ನೇ ವರ್ಷದಲ್ಲಿ ಬ್ರಿಟಿನ್ನಿನ ನೀತಿ ಯೇನಿತ್ತೆಂಬುದನ್ನು ನಾವು ಮರೆತಿರಲಿಲ್ಲ. ೧೯೩೯ ರಲ್ಲಿ ಇಂಗ್ಲೆಂಡಿನ ನೀತಿಯೇನೆಂಬುದನ್ನು ನಾವು ಪ್ರಶ್ನಿಸಿದೆವು. ೧೯೧೯ ರಲ್ಲಿ ಇದ್ದ ಮನೋಧರ್ಮವೆ ೧೯೩೯ ರಲ್ಲಿ ಬದಲಾವಣೆ ಹೊಂದಿದೆಯೇ ! ಎಂಬುದನ್ನು ತಿಳಿದು ಕೊಳ್ಳಲು ಆಕೇಕ್ಷಿಸಿದ್ದುವು. ಅದು ಬದಲಾವಣೆ ಹೊಂದಿ ಲ್ಲವೆಂಬ ಉತ್ತರವು ಸ್ಪಷ್ಟವಾಗಿ ಎದಿತು. ಭಾರತಕ್ಕೆ ಡೊಮಿನಿಯನ್ ಸ್ಟೇಟುಸ್ ಪದವಿಯನ್ನು ಅದಷ್ಟು ಬೇಗನೆ ಕೊಡಲಾಗುವುದೆಂಬುದನ್ನು ನಂಬಬೇಕೆಂದು ನಮಗೆ ಹೇಳಲಾಯಿತು. ಆ ರೀತಿ ಬ್ರಿಟಿಷ್ ಸರ್ಕಾರ ದವರು ಹೇಳುವುದರ್ಕಂತ ಮುಂಚಿತವಾಗಿಯೇ ಉತ್ತ ರವು ಏನು ಬರುವುದೆಂಬುದು ನಮಗೆ ತಿಳಿದಿತ್ತು. ಈಗ ನಮ್ಮ ಮುಂದಿರುವ ವಿಷಯವು ಬ್ರಿಟಿಷ್ ಸರ್ಕಾರದ ಅಪೇಕ್ಷೆಯು ಎಷ್ಟುದೂರ ಹೋಗಬಹುದೆಂಬುದಲ್ಲ. ಭಾರತದ ಹಕ್ಕಿನ ಪ್ರಶ್ನೆಯೇ ಮುಂದಿರುವುದು. ಭಾರತವು ತನ್ನ ಭವಿಷ್ಯವನ್ನು ರೂಪುಗೊಳಿಸಿಕೊಳ್ಳುವ ಹಕ್ಕು ಅದಕ್ಕಿದೆಯೇ ಇಲ್ಲವೇ ಎಂಬುದೇ ಈಗ ಮುಂದಿರುವ ಪ್ರಶ್ನೆ. ಈ ಪ್ರಶ್ನೆಯ ಭಾರತದ ಜೀವಾಳವೆನಿಸಿದೆ. ಭಾರತದ ಭವಿಷ್ಯದ ತಳಹದಿಯೇ ಅದು. ಅದನ್ನು ತೆಗೆದು ಹಾಕುವುದಕ್ಕೆ ಭಾರತವು ಎಂದಿಗೂ ಅವಕಾಶ ಕೊಡುವುದಿಲ್ಲ. ಏಕೆಂದರೆ ಆ ತಳಹದಿಯನ್ನು ತೆಗೆದು

ಹಾಕಿದರೆ ಭಾರತದ ರಾಷ್ಟ್ರೀಯ ಕಟ್ಟುಪಡೆಗೆ ಕುಸಿದು ಬೀಳುವುದು. ಸಂಘಾಸದ ವಿಷಯವಾಗಿ ನಮ್ಮ ಉದ್ದೇಶವು ಸ್ಪಷ್ಟವಾಗಿದೆ. ಕಳೆದ ಸಂಗ್ರಾಮದಲ್ಲಿ ನೋಡಿದಂತೆ ಬ್ರಿಟನ್ನಿನ 'ಇಂಪೀರಿಯಲ್ ಜಾ' ಶೈಲಿಯನ್ನು ಈ ಯುದ್ಧದಲ್ಲಿ ನಾವು ಸ್ಪಷ್ಟವಾಗಿ ಕಂಡಿದ್ದೇವೆ. ಅದಕ್ಕೆ ಜಯವಾಗಲು ನಾವೆಂದಿಗೂ ಸಹಾಯ ನೀಡುವುದಿಲ್ಲ. ಬ್ರಿಟಿಷ್ ಸಾಮ್ರಾಜ್ಯ ನೀತಿಗೆ ಜಯವಾಗಿ ತನ್ಮೂಲಕ ನಮ್ಮ ಗುಲಾಮಗಿರಿಯ ಅವಧಿಯು ಇನ್ನೂ ದೀರ್ಘವಾಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ನಮ್ಮ ದಾರಿಯು ಭಿನ್ನವಾಗಿದೆ. ಆ ಮಾರ್ಗವನ್ನು ಬಿಟ್ಟು ವಿರುದ್ಧಮಾರ್ಗದಲ್ಲಿ ಹೋಗುವುದಾಗಿದೆ."

೧೯೩೭ ರಲ್ಲಿ ತಾತ್ಕಾಲಿಕವಾಗಿಯೂ ಅರ್ಧಮಟ್ಟಿಗೂ ಬ್ರಿಟಿಷ್ ಸರ್ಕಾರಕ್ಕೆ ಸಹಾಯ ನೀಡಿದುದನ್ನು ಸಂಗ್ರಾಮವು ಅರಂಭವಾದಮೇಲೆ ಹಿಂದಕ್ಕೆ ತೆಗೆದುಕೊಂಡೆವು. ಆನಂತರ ಬೇರೆ ದಾರಿ ಕಾಣದೆ ಅಸಹಕಾರ ಮಾರ್ಗದಲ್ಲಿ ಮುಂದಡಿ ಇಟ್ಟೆವು. ಆದೇ ದಾರಿಯಲ್ಲಿಯೇ ಮುಂದುವರಿಯಬೇಕೇ ಇಲ್ಲವೇ ಎಂಬುದನ್ನು ಈಗ ಇತ್ಯರ್ಥಗೊಳಿಸಬೇಕಾಗಿದೆ. ನಿರ್ಧಾರವನ್ನು ಒಮ್ಮೆ ತೆಗೆದುಕೊಂಡಾದ ತರುವಾಯ ಪಿಲ್ಲುವ ಸಂದರ್ಭವೇ ಇಲ್ಲ. ನಿಲ್ಲಬೇಕೆಂದು ಹೇಳುವುದಾದರೆ ಹಿಮ್ಮೆಟ್ಟಬೇಕೆಂದು ಹೇಳಿದ ಹಾಗಾಯಿತು. ನಾವು ಹಿಮ್ಮೆಟ್ಟುವುದಕ್ಕೆ ಒಪ್ಪುವುದಿಲ್ಲ. ಅದರಿಂದ ನಾವು ಮುಂದುವರಿಯಲೇ ಬೇಕು. ಮುಂದಕ್ಕೆ ಹೋಗುವುದಾಗಿ ನಾನು ಹೇಳುವಾಗ ಎಲ್ಲರೂ ಅದನ್ನು ಅನುಮೋದಿಸುವಿರೆಂದು ನಾನು ನಂಬಿದ್ದೇನೆ" ಎಂದು ಮಾಗಿ ಸೂಚಿಸಿದರು. ಆನಂತರ ಆಲ್ ಸಂಖ್ಯಾತರ ವಿಚಾರದಲ್ಲಿ ಕಳೆದ ಸೆಪ್ಟಂಬರಿನಲ್ಲಿ ಕಾಂಗ್ರೆಸ್ಸು ಬ್ರಿಟಿಷ್ ಸರ್ಕಾರದಿಂದ ಸ್ಪಷ್ಟವಾದ ವಿವರಣೆಯನ್ನು ಕೇಳಿತೆಂದೂ ಇದಕ್ಕೆ ಭಾರತದ ಯಾವುದೇ ಗುಂಪಿನವರು ಕೂಡ ವಿರೋಧ ತೋರಿಸುವಂತಿಲ್ಲವೆಂದೂ ಹೇಳಿ " ಕಾಂಗ್ರೆಸ್ಸಿನೊಂದಿಗೆ ಮುಂದೆ ನುಗ್ಗಲು ಹಲವರಿಗೆ ಇಷ್ಟವಿಲ್ಲದಿರಬಹುದು. ಆದರೆ ಭಾರತದ ಸ್ವಾತಂತ್ರ್ಯವನ್ನು ಮಾತ್ರ ವಿರೋಧಿಸಲು ಎದೆ ಯಾರಿಗೂ ಇಲ್ಲ " ಎಂದರು.

ಆನಂತರ ಎಲ್ಲರ ಮನಸ್ಸನ್ನೂ ಆಕರ್ಷಿಸಿರುವ ಕೋಮುವಾರು ಪ್ರಶ್ನೆಯ ವಿಚಾರವೆತ್ತಿದರು. " ೧೫೦ ವರ್ಷಗಳಿಂದ ಬ್ರಿಟಿಷರು ಭಾರತವನ್ನು ಛಿದ್ರಗೊಳಿಸಿ ಆಳುವ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಅವರು ತಮ್ಮ ಅಧಿಕಾರವನ್ನು ಬಲಪಡಿಸಿಕೊಳ್ಳಲು ಒಬ್ಬರಮೇಲೆ ಒಬ್ಬರನ್ನು ಎತ್ತಿಕಟ್ಟುತ್ತಿದ್ದಾರೆ. ಇದಕ್ಕಾಗಿ ನಾವು ತೋಪುಗೊಳ್ಳಬೇಕಾಗಿಲ್ಲ. ಅಧೀನ ರಾಷ್ಟ್ರವೊಂದರಲ್ಲಿ ವಿದೇಶಿ ಸರ್ಕಾರವು ಎಂದಿಗೂ ಒಳ ವಿಕಮಕ್ಯಕ್ಕೆ ಉತ್ತೇಜನವಿಯುವುದಿಲ್ಲ. ಅನ್ಯೈಕಮತ್ಯವೇ ಆ ವಿದೇಶಿ ಸರ್ಕಾರದ ಜೀವಾಳ!

ಭರತಖಂಡದಲ್ಲಲ್ಲಿ ಸಹ ಎಲ್ಲ ದೇಶಗಳಂತೆ ಒಳ ಸಮಸ್ಯೆಗಳು ಇದ್ದೇ ಇವೆ. ಅವುಗಳಲ್ಲಿ ಕೋಮುವಾರು ಪ್ರಶ್ನೆ ಮುಖ್ಯವಾದುದು. ಅದನ್ನು ನಾವು ಮರೆತು ಮುಂದಿಟ್ಟು ಪ್ರಶ್ನೆ ಹಿಜ್ಜೆಯನ್ನೂ ತಪ್ಪು ಹೆಜ್ಜೆಯೆಂದೇ ಪರಿಗಣಿಸಬೇಕು. 'ಕೋಮುವಾರು ಪ್ರಶ್ನೆ ಇದೆಯೆಂದ ಮಾತ್ರಕ್ಕೆ ಭಾರತದ ಸ್ವಾತಂತ್ರ್ಯಕ್ಕೆ ಅದು ಅಡ್ಡಿಯಾಗುವಂತೆ ಮಾಡಬೇಕೆಂಬುದು ಅರ್ಥವಲ್ಲ. ಆದರೆ ಬ್ರಿಟಿಷ್ ಸರ್ಕಾರವು ಮಾತ್ರ ಹಿಂದಿನಿಂದ ಕೋಮುವಾರು ಪ್ರಶ್ನೆಯನ್ನು ತನ್ನ ಸ್ವಾರ್ಥಸಾಧನೆಗೆ ಉಸಯೋಗಿಸುತ್ತ ಬರುತ್ತಿದೆ. ಭರತಖಂಡದಲ್ಲಿ ಬ್ರಿಟನ್ನು ತನ್ನ ಇತಿಹಾಸವನ್ನು ಕೊನೆಗಾಣಿಸಬೇಕೆಂದು ಇಷ್ಟಪಡುವುದಾದರೆ ಅದು ತನ್ನ ಇಷ್ಟವನ್ನು ಕಾರ್ಯತಃ ಕೋಮುವಾರು ಪ್ರಶ್ನೆಯ ಸಂಬಂಧದಲ್ಲಿ ತೋರಿಸಬೇಕು.

ಕಾಂಗ್ರೆಸ್ಸು ಕೋಮುವಾರು ಪ್ರಶ್ನೆಯಿಲ್ಲವೆಂದಾಗಲಿ, ಅದು ಮುಖ್ಯವಲ್ಲವೆಂದಾಗಲಿ ಯಾವಾಗಲೂ ಹೇಳಲ್ಲ. ಆ ಸಂಬಂಧದಲ್ಲಿ ಅತ್ಯುತ್ತಮವೆನಿಸಿದ ಮಾರ್ಗವನ್ನು ಅನುಸರಿಸುತ್ತಿದೆ. ಈ ಸಂಬಂಧವಾಗಿ ಕಾಂಗ್ರೆಸ್ಸು ಎರಡು ತತ್ವಗಳನ್ನನುಸರಿಸುತ್ತಿದೆ.

(೧) ಭರತಖಂಡಕ್ಕೆ ಯಾವುದೇ ರಾಜ್ಯಾಂಗ ವ್ಯವಸ್ಥೆಯು ರೂಪಿಸಲ್ಪಟ್ಟರೂ ಆದರಲ್ಲಿ ಅಲ್ಪ ಸಂಖ್ಯಾಕರ ಹಕ್ಕುಬಾಧ್ಯತೆಗಳು ಸಂಪೂರ್ಣವಾಗಿ ಸಂರಕ್ಷಿಸಲ್ಪಡಬೇಕು.

(೨) ತಮ್ಮ ಹಿತಸಂರಕ್ಷಣೆಗೆ ಬೇಕಾದ ರಕ್ಷಣೆಗಳನ್ನು ಅಲ್ಪ ಸಂಖ್ಯಾತರೇ ನಿರ್ಧರಿಸಬೇಕು. ಬಹು ಸಂಖ್ಯಾತರು ಇದರಲ್ಲಿ ಕೈಹಾಕಬಾರದು.

ಅಲ್ಪ ಸಂಖ್ಯಾಕರ ಪ್ರಶ್ನೆಯು ಭಾರತಕ್ಕೆ ಹೊಸದಲ್ಲ. ವಿಶ್ವದ ಇತರ ಕಡೆಗಳಲ್ಲೂ ಇದೆ. ಈ ವಿಚಾರದಲ್ಲಿ ಕಾಂಗ್ರೆಸು ಅನುಸರಿಸುವುದಕ್ಕಿಂತ ಸಾಧುವೆನಿಸಿದ ನೀತಿಯು ಇನ್ನಾವುದಾದರೂ ಇದೆಯೆ-ಎಂದು ನಾನೀದಿವಸ ಈ ವೇದಿಕೆಯಮೇಲೆ ನಿಂತು ಇಡೀ ವಿಶ್ವಕ್ಕೆ ಪ್ರಶ್ನೆ ಹಾಕುತ್ತೇನೆ. ೧೯ ವರ್ಷಗಳಿಂದ ನಾನು ಕಾಂಗ್ರೆಸ್ಸಿನ ಲ್ಲಿದ್ದೇನೆ. ಆದರೆ ಯಾವುದೇ ನಿರ್ಧಾರದಲ್ಲೂ ನಾನು ಭಾಗವಹಿಸದೇ ಇಲ್ಲ. ಈ ೧೯ ವರ್ಷಗಳಲ್ಲಿ ಕಾಂಗ್ರೆಸು ಮೇಲೆ ತಿಳಿಸಿದ ರೀತಿ ಹೊರತು ಮತ್ತಾವುದೇ ಮಾರ್ಗದಲ್ಲೂ ಕೋಮುವಾರು ಸಮಸ್ಯೆಯನ್ನು ಬಿಡಿಸುವ ಸ್ಪಯತ್ನಕ್ಕೆ ಕೈಹಾಕಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಕಾಂಗ್ರೆಸಿನ ಈ ನೀತಿಯು ಬಂಡೆಯಂತೆ ಅನಿಚಲವಾದುದು.

ರಾಷ್ಟ್ರಕೂಟದ ವಿಚಾರದಲ್ಲಿ ಕಾಂಗ್ರೆಸು ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ ಕಾಂಗ್ರೆಸಿನ ಉದ್ದೇಶವು ಸ್ಪಷ್ಟವಾಗುತ್ತದೆ. ಐಂಗೀಕರಿಸಲ್ಪಟ್ಟ ಅಲ್ಪ ಸಂಖ್ಯಾಕರು ತಮ್ಮ ಪ್ರತಿನಿಧಿಗಳನ್ನು ತಾವೇ ರಾಷ್ಟ್ರ ಕೂಟಕ್ಕೆ ಆರಿಸಬಹುದೆಂಬುದು ಕಾಂಗ್ರೆಸ್ಸು ತಿಳಿಸಿದೆ. ರಾಷ್ಟ್ರಕೂಟದಲ್ಲಿ ಅಲ್ಪ ಸಂಖ್ಯಾಕರ ಪ್ರಶ್ನೆಯನ್ನು ಬಹು ಸಂಖ್ಯಾತರ ಒಟ್ಟಿನಿಂದ ನಿರ್ಧರಿಸುವುದಿಲ್ಲ. ಯಾವುದಾದರೂ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದರೆ ಅಲ್ಪ ಸಂಖ್ಯಾತರು ಒಪ್ಪತಕ್ಕಂತಹ ಪಂಚಾಯಿತಿಗೆ ಒಪ್ಪಿಸಲಾಗುತ್ತದೆ.

ಕಾಂಗ್ರೆಸ್ಸು ಈ ತತ್ವಗಳನ್ವಯಿಸಿ ಕೆಲಸ ಮಾಡುತ್ತಿದ್ದರೂ ಬ್ರಿಟಿಷ್ ರಾಜಕಾರಣ ಧುರೀಣರು ಕೋಮು ನಾಶ ಸಮಸ್ಯೆಯನ್ನೇ ಮೇಲಿಂದಮೇಲೆ ನಮ್ಮ ಜ್ಞಾಪಕಕ್ಕೆ ತರುತ್ತ ಅದೇ ಭಾರತದ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವುದೆಂದು ವಿಶ್ವವು ನಂಬುವಂತೆ ಸುಯತ್ನಿಸುವುದಾದರೂ ಏಕೆ? ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟು ಬಿಡಲಿ. ನಮ್ಮ ನವ್ಯಲ್ಲಿ ಎಲ್ಲ ಸರಿಹೋಗುತ್ತದೆ. ನಮ್ಮಲ್ಲಿ ಹೊರಗಿನವರು ಛಿನ್ನಾಭಿಪ್ರಾಯಗಳನ್ನು ಬಿತ್ತಿ ಬೆಳೆಸುತ್ತಿದ್ದಾರೆ. ಕೋಮುವಾರು ಘರ್ಷಣೆಗಳನ್ನು ಕೊನೆಗಾಣಿಸಿರೆಂದು ನಮಗೆ ಬುದ್ಧಿವಾದ ಹೇಳುವರು. ಆದರೆ ಹಾಗೆ ಮಾಡಲು ಅವಕಾಶವನ್ನು ಮಾತ್ರ ಕೊಡುವುದಿಲ್ಲ. ಆದರೆ ಎಷ್ಟೇ ಕಸ್ಟ ಬಂದರೂ ನಾವು ಧೈರ್ಯಗೆಡುವುದಿಲ್ಲ. ನವ್ಯ ನೂರ್ಗವರೆಗೇ ಕಲ್ಲು ಮುಳ್ಳುಗಳಿಂದ ತುಂಬಿದೆ. ಆದರೆ ನಮ್ಮ ದೃಢಸಂಕಲ್ಪದ ಮುಂದೆ ಅವು ನಿಲ್ಲುವುದಿಲ್ಲ" ಎಂಬುದಾಗಿ ಸೂಚಿಸಿದರು.

" ಭಾರತದ ಅಲ್ಪಸಂಖ್ಯಾಕರ ಪ್ರಶ್ನೆಯನ್ನು ಪರಿಶೀಲಿಸಿದ್ದಾಯಿತು. ಆದರೆ ತಮ್ಮ ಭವಿಷ್ಯದ ವಿಚಾರದಲ್ಲಿ ಭಯದಿಂದ ಕೂಡಿರುವಷ್ಟು ಮಟ್ಟಿಗೆ ಮುಸ್ಲಿಮರು ಅಲ್ಪಸಂಖ್ಯಾಕರೇನು? ಖಂಡಿತ ಇಲ್ಲ. ಭಾರತೀಯ ಮುಸ್ಲಿಮರು ರಾಜಕೀಯದಲ್ಲಿ ಅಲ್ಪ ಸಂಖ್ಯಾಕರೆನ್ನುವ ವಕ್ಕೆಂತ ಅಸಹ್ಯವಾದ ನುಡಿ ಬೇರೆ ಇಲ್ಲ. ಸ್ವತಂತ್ರ ಭಾರತದಲ್ಲಿ ಅವರು ತಮ್ಮ ಹಕ್ಕು ಬಾಧ್ಯತೆಗಳನ್ನು ಕುರಿತು ಸ್ವಲ್ಪವೂ ಹೆದರಬೇಕಾಗಿಲ್ಲ. ಮುಸ್ಲಿಮರಲ್ಲಿ ಭಯ ಸಂಶಯಗಳನ್ನು ಬಿತ್ತಿದವರು ಬ್ರಿಟಿಷರು. ಭಾರತದಲ್ಲಿ ಆರಂಭವಾದ ರಾಜಕೀಯ ಪ್ರಜ್ಞೆಯ ಪ್ರವಾಹವನ್ನು ತಡೆಗಟ್ಟುಲೋಸುಗ ಬ್ರಿಟಿಷರು ಮುಸ್ಲಿಮರಲ್ಲಿ ಅಜ್ಞಾನವನ್ನು ಬಿತ್ತುತ್ತ ಬಂದರು. ಇದರಲ್ಲಿ ಎರಡು ಮುಖ್ಯಾಂಶಗಳಿಗೆ ಗಮನ ಕೊಡಲಾಯಿತು.

(೧) ಭರತಖಂಡದಲ್ಲಿ ಹಿಂದೂ, ಮುಸಲ್ಮಾನರೆಂಬ ಎರಡು ಭಿನ್ನವಾದ ಕೋಮುಗಳಿವೆ. ಅದ್ದರಿಂದ ಏಕ ಜನಾಂಗದ ಹೊರನಲ್ಲಿ ಅವರು ಯಾವ ಬೇಡಿಕೆಯನ್ನು ಮುಂದಿಡಲು ಸಾಧ್ಯವಿಲ್ಲ.

(೨) ಹಿಂದುಗಳಗಿಂತ ಮುಸ್ಲಿಮರು ಕಡಿಮೆ. ಭಾರತದಲ್ಲಿ ಸಾಂಕುಶ ಪ್ರಭುತ್ವ ಸ್ಥಾಪನೆಯಾಯಿತೆಂದರೆ ಹಿಂದೂ ರಾಜ್ಯ ಸ್ಥಾಪನೆಯಾದಂತೆ! ಆಗ ಮುಸ್ಲಿಮರ ಇರುಬಿಕೆಗೇ ಸಂಚಕಾರ ಬರುತ್ತದೆ.

ಈ ರೀತಿಯಾಗಿ ಬ್ರಿಟಿಷ್ ಸಾಮ್ರಾಜ್ಯ ಧುರೀಣರು ಭಾರತದ ಭೂಮಿಯಲ್ಲಿ ಅನ್ಯೈಕಮತ್ಯದ ಬೀಜಗಳನ್ನು ಬಿತ್ತಿದರು. ಇದು ಗಿಡವಾಗಿ, ಮರವಾಗುವಂತೆ ವ್ಯವಸಾಯಮಾಡಿದರು. ಆ ಮರದ ಕೊಂಬೆಗಳು ನಾನಾ ದಿಕ್ಕುಗಳಿಗೂ ಚಾಚಿದವು. ಈಗಲೂ ಅದರ ಬೇರು ಬಲವಾಗಿಯೇ ಇವೆ.

ಸಂಖ್ಯೆಯಲ್ಲಿ ಸ್ವಲ್ಪ ಕಡಿಮೆಯಾಗಿದ್ದರೆ ಆ ಗುಂಪಿಗೆ ಅಲ್ಪ ಸಂಖ್ಯಾಕರೆಂದು ಅರ್ಥವಾಗುವುದಿಲ್ಲ. ಸಂಖ್ಯೆಯಲ್ಲಿ ಬಹಳ ಕಡಿಮೆಯಿದ್ದು, ಆದರ ರಕ್ಷಣೆಯೂ, ಅನರೇ ನೆರವೇರಿಸಿಕೊಳ್ಳುವ ನಂಬಿಕೆಯಲ್ಲಿದ್ದರೆ ಅವರಿಗೆ ಅಲ್ಪಸಂಖ್ಯಾಕರೆನ್ನಬಹುದು. ಒಂದು ದೇಶದಲ್ಲಿ ಎರಡು ಮುಖ್ಯ ಕೋಮುಗಳವೆಯೆನ್ನೋಣ. ಒಂದು ಕೋಮಿನವರ ಬಲ ೨೦ ಲಕ್ಷ; ಇನ್ನೊಂದು ಕೋಮಿನ ಬಲ ೧೦ ಲಕ್ಷ. ಹೀಗಿದ್ದರೂ ೧೦ ಲಕ್ಷ ಮಂದಿಯಿರುವ ಕೋಮನ್ನು ಅಲ್ಪಸಂಖ್ಯಾಕರೆನ್ನಲಾಗದು. ಈ ಪರೀಕ್ಷೆಯನ್ನು ಮುಸ್ಲಿಮರಿಗೆ ಅನ್ವಯಿಸೋಣ. ಭರತಖಂಡದಲ್ಲಿ ೪-೯ ಕೋಟಿ ಮುಸಲ್ಮಾನರಿದ್ದಾರೆ. ಒಟ್ಟು ಜನ ಸಂಖ್ಯೆಯಲ್ಲಿ ಅವರು ಸಾಲ್ಕನೇ ಒಂದು ಪಾಲಿನಷ್ಟು ಇದ್ದಾರೆಂಬುದೇನೋ ನಿಜ. ಆದರೆ ಆ ಸಂಖ್ಯೆಯು ಕಡಿಮೆಯೇನಲ್ಲ. ಅಲ್ಲದೆ ಅವರ ಹಿಂದೆ ಅಪಾರ ಬಲವಿದೆ. ಅಶ್ಯ ಅಪಾರವಾದ ಜನ ಸಮುದಾಯವು ತನ್ನ ಹಿತಕ್ಕೆ ಕುಂದಕಬರುವುದೆಂದು ಹೆದರಲು ಕಾರಣವೇನಿದೆ? ಬ್ರಿಟಿಷ್ ಬೆಲೂಚಿಸ್ತಾನವನ್ನು ಸೇರಿಸಿಕೊಂಡರೆ ಮುಸ್ಲಿಮರು ಬಹು ಸಂಖ್ಯಾಕರಿರುವ ೫ ಪ್ರಾಂತ್ಯಗಳಿಗೆ. ಅವರು ೨ ಪ್ರಾಂತ್ಯಗಳಲ್ಲಿ ಅಲ್ಪ ಸಂಖ್ಯಾಕರಾಗಿದ್ದಾರೆ ಅಷ್ಟೆ. ಅಂದ ಮಾತ್ರಕ್ಕೇ ಮುಸ್ಲಿಮರು ಅಲ್ಪ ಸಂಖ್ಯಾಕರೆಂದು ಭಾವಿಸಲು ಕಾರಣವೇ ಇಲ್ಲ. ನಾವು ನದಿಯ ದಡದಲ್ಲಿ ನಿಂತಿದ್ದೇವೆ. ಈಜಬೇಕೆಂಬ ಆಸೆಯೇನೋ ಇದೆ. ಆದರೆ ನೀರಿಗೆ ಇಳಿಯಲು ಹಿಂದು ಮುಂದು ನೋಡುತ್ತಿದ್ದೇವೆ. ನಾವು ನಿರ್ಧಾರವಾಗಿ ಧುಮುಕಬೇಕು. ನಮ್ಮ ಭಯವೆಲ್ಲ ಪೊಳ್ಳೆಂಬುದು ಆಗ ಗೊತ್ತಾಗುತ್ತದೆ. ಭಾರತ ಸ್ವಾತಂತ್ರ್ಯದಿಂದ ಮುಸ್ಲಿಮರು ದೂರವಾಗಿ ನಿಲ್ಲಲಾರರು. ಆವರು ಸ್ವಿತಾಂತ್ರವನ್ನು ಗ್ರಹಿಸುವುದಾದರೆ ಈಗಿನ ಕಾರ್ಯೋತ್ಸವ ಕರಗಿ ಹೋಗುತ್ತದೆ.

ನಾನೊಬ್ಬ ಮುಸಲ್ಮಾನ ಅವಕಾಶಾಗಿ ನಾನು ಹೆಮ್ಮೆ ಪಡುವೆನು ಇಸ್ಲಾಂ ಧರ್ಮವು ೧೩೦೦ ವರ್ಷಗಳ ಅದ್ಭುತ ಸಂಪ್ರದಾಯಗಳು ನನ್ನ ಆಸ್ತಿ. ಅದರಲ್ಲಿ ಉಳ್ಳಸ್ಪತ್ತು ಬಿಡಲು ನಾನು ಸಿದ್ಧನಾಗಿಲ್ಲ. ಇಸ್ಲಾಂ ಬೋಧೆ ಮತ್ತು ಇತಿಹಾಸ, ಅದರ ಕಲೆ ಮತ್ತು ನಾಗರಿಕತೆ ನನ್ನ ಸಂಪತ್ತು. ಅದನ್ನು ರಕ್ಷಿಸುವುದು ನನ್ನ ಕರ್ತವ್ಯ. ಇಸ್ಲಾಂ ಧರ್ಮದಲ್ಲಿ ಮುಸ್ಲಿಮನಾದ ನನಗೆ ವಿಶೇಷ ಆಸಕ್ತಿಯಿದೆ. ಯಾರು ಇದಕ್ಕೆ ಅಡ್ಡಿಯುಟುಮಾಡಿದರೂ ನಾನದೆನ್ನು ಸಹಿಸಲಾರೆ-ಆದರೆ, ನೈಜಸ್ಫೂರ್ತಿಗತಿಗಳ ಫಲವಾಗಿ ನನ್ನ ಮನಸ್ಸನ್ನಾಕರ್ಷಿಸಿರುವ ಇತರ ಭಾವನೆಗಳು ಹಲವಿವೆ. ಇವ್ಹಾಂ ಸ್ಫೂರ್ತಿಯು ಈ ಭಾವನೆಗಳಿಗೆ ಅಡ್ಡಿ ಬರುವುದಿಲ್ಲ; ಸಹಾಯ ಮಾಡುತ್ತದೆ. ಭಾರತೀಯನೆಂದುಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ. ಭಾರತ ಜನಾಂಗದಲ್ಲಿ ನಾನೊಂದು ಭಾಗ. ನನ್ನನ್ನು ಆ ಜನಾಂಗದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಭಾರತ ಜನಾಂಗದ ಅಮೋಘ ರಚನೆಯು ನಾವಿಲ್ಲದೆ ಪೂರ್ಣವಾಗುವುದಿಲ್ಲ.

[೬ನೆಯ ಪುಟವನ್ನು ನೋಡಿ.]

ಪಂಚಾಚಾರ್ಯಪ್ರಭಾ.

೧೯೪೦ ನೆಯ ಮಾರ್ಚಿ ತಾ|| ೭೫ನೆಯ ಸೋಮವಾರ

ರೇಣುಕಾಚಾರ್ಯರ ಕಾಲವನ್ನು ಕಂಡುಹಿಡಿಯುವುದು ಸಾಧ್ಯವೇ?

ಕಳೆದ ಪೆಬ್ರವರಿ ೩೦ನೆಯ ತಾರೀಖಿನ ನನ್ನಿಗೆ ಪತ್ರಿಕೆಯಲ್ಲಿ "ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ" ಎಂಬ ಹೆಸರಿನಿಂದ ಒಬ್ಬರೇಖನವನ್ನು ಒದಿ ಪ್ರಸಿದ್ಧಿಸಿರುವುದನ್ನು ವಾಚಕರೂಹಿಸಿ ನೋಡಿರುಹ್ಹ ಆ ಲೇಖನದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಬಹ ಪ್ರಾಚೀನಕಾಲದವರೆಂಬ ಬಗ್ಗೆ ಅನೇಕ ಪ್ರಮಾಣಗಳನ್ನು ಉದಾಹರಿಸಿ, ಕೊನೆಗೆ ಚಿತ್ರದುರ್ಗ ತಾಲೂಕಿಗೆ ಶೇರಿದ ಜೀವಿನಹಳ್ಳಿ ಗ್ರಾಮದಲ್ಲಿ ಪ್ರತಿವರ್ಷವೂ ಪ ಪಾರ ವಿಷಯವನ್ನು ಉಲ್ಲೇಖಿಸಿದ್ದಿವ್ವೆ ಅದರಪಾರ ಪ್ರತ್ಯಕ್ಷ ವಿವರಣವನ್ನು ಮಾಡಿದವರೆ ಲೇಕಕೋಪಾಧ್ಯಾಯರಾಗಿ ವೆ ದೆಂದು ಅನೇಕರು ನಮಗೆ ಪತ್ರಗಳನ್ನು ಒವಿದು ವುದರಿಂದ ಸದ್ಯಃ ಆ ವಿಷಯವನ್ನೇ ಪ್ರತಿಪಾದಿಸ ವ್ಯವಹರಿಸುವುದು.

ಕ್ರಿಸ್ತಶಕ ೧೦೨೫ನೆಯ ಇರತಮಾನದಲ್ಲಿ ಚಾಲುಕ್ಯವಂಶದ ಕೊಟ್ಟೆಗದೇವ (ನಿತ್ಯವರ್ಷ)ನೆಂಬ ರಾಜನು ಮೈಸೂರಿನ (ಮಾನ್ಯಖೇಟ) ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವನ್ನಾಳುತ್ತಿದ್ದ ಸಮಯದಲ್ಲಿ, ಪಂಡಿಗನೆಂಬ ರಾಜನು ಅವನ ಮಾಂಡಲಿಕ ರಾಜನಾಗಿ ಕರ್ನಾಟಕ ದೇಶವನ್ನಾಳಿ ಶ್ರಿದ್ದನು ಈ ಪಂಡಿಗರಾಜನಿಗೆ "ಜಕ್ಕಿಸುಂದರಿ" ಎಂಬ ಹೆಂಡತಿಯಿದ್ದಳು ಈ ಜಕ್ಕಿ ಸುಂದರಿಯು ವಾಲಿವಾಹನರಕ ಲಕ್ಷಣದಲ್ಲಿ ಪ್ರಭವನಾಮ ಸಂವತ್ಸರ ಪುಷ್ಯಮಾಸ ಸಿತ್ರಾಯಣ ಪುಣ್ಯಕಾಲ ಸಂಕ್ರಾಂತಿಯ ದಿವಸ ದಾನಧರ್ಮಾದಿಗಳ ವಿಷಯವು ಚಿತ್ರದುರ್ಗ ತಾ|| ಜೀವಿನಹಳ್ಳಿ ಗ್ರಾಮದ ಹನುಮಂತ ದೇವರ ಗುಡಿಯ ಪ್ರಾಕಾರವಲ್ಲಿರುವ ಶಿಲಾಶಾಸನದಲ್ಲಿ ಹೇಳಲ್ಪಟ್ಟಿದೆ ಪೂರ್ವದಲ್ಲಿ ವೈಸೂರು ಗವರ್ನಮೆಂಟಿನ ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ರಾ ರೈಸ್ ಸಾಹೇಬರವರು ಈ ಶಾಸನವನ್ನು ಶೋಧಿಸಿ ಮುದ್ರಿಸಿರುವರು ಇದು ಚಿತ್ರದುರ್ಗ ತಾಲೂಕಿನ ೭೪ ನೆಯ ನಂಬರಿನ ಶಾಸನವಾಗಿರುವುದ ಈ ಶಾಸನದಲ್ಲಿ ಪಂಡಿಗ ರಾಜನ ಪ್ರಾಚೀನ ವಂಶಾವಳಿಯು ವರ್ಣಿಸಲ್ಪಟ್ಟಿರು ವುದು ಈ ವಂಶಾವಳಿಯಲ್ಲಿ ಪಂಡಿಗರಾಜನಿಗೆ ಆರನೆಯ ತಲೆಯವನಾದ "ರೇವಣನಾಥ" ನೆಂಬ ರಾಜನ ಹೆಸರು ಉಲ್ಲಿಖಿತವಾಗಿರುವುದು ಆ ಶಾಸನದಲ್ಲಿ ಈ ಕೆಳಗೆ ಉವಾಹರಿಸಿರುವ ಪದ್ಯಗಳು ತೆಕ್ಕಲ್ಲಲ್ಲಿವೆ

ಆ ವಿಧಾಗುತ್ಪಜಂ ನೆಯಿ ಪುಟ್ಟಿದ ಪುಟ್ಟದ ಸಿಳ್ಳನಮ್ಯುಂ ।
ತಾ ಜಕ್ಷಾನಿಧಿಗಳಿಗೆ ತನಯಂ ಕಲಿಕೋಲಕಣದೇವರು ಭೃ ।
ಜ್ಞಾನವಂಗಿ ಕೀರ್ತಿಯಂತನಗ್ರಜಾತನ ಸೂನು ವಾಣಿ ತಾ ।
ರೇವಣನಾಥನಾಸ ಮಗಂ ಸೆಗ್ಗುಂ ಸಲೆ ರಾಜಭೂಮಿಜಂ ॥

ಆತಂಗೆ ವಿಕ್ಕಿಯಣ್ಣಂ ।
ವಾತಾತ್ಮಜ ಸತ್ಯತ್ರಸ ಸುಪುತ್ರಂ ಸುತಂ ।
ನೀತಗುಣಂ ಗೊಗ್ಗಿ ಗೊಗ್ಗಿಗ ।
ವೀತಂ ಶ್ರೀಕೊಪ್ಪಕಾಂಕವಾತಂಗೆ ಮಗಂ ॥
ಸುಂದ ಮಹಾಸಾಮಂತಂ ,
ಪಂಡಿಗಸತ್ತಿತ್ತುಮಿರಿಗುವೀ ಜಗದೊಳ್ ಸಂ ॥
ಕ್ರುಂದನನಂದನಸತ್ಯಕಂ ।
ಪಿಂದಂ ಪಿಣಿದಾಜ್ಯಶವನಿಯೊಳ್ ಸುಬಿದಿಂದಂ ॥

ಈ ಪದ್ಯಗಳಿಂದ ಪಂಡಿಗರಾಜನ ತಂದೆಯು "ಸೂತ್ರ ಕಾಂಕ"ನೆಂದೂ, ತವನ ತಂದೆಯು "ಗೊಗ್ಗಿ"ಯೆಂದೂ, ಅವನ ತಂದೆಯು "ವಿಕ್ಕಿಯಣ್ಣ"ನೆಂದೂ, ಅವನ ತಂದೆಯು "ರಾಜಭೂಮಿಜ"ನೆಂದೂ, ಅವನ ತಂದೆಯು "ರೇವಣನಾಥ" ನೆಂದೂ ಸ್ಪಷ್ಟವಾ ಗಿವುದು ರೇಣುಕಾಚಾರ್ಯರ ಹೆಸರನ್ನಿಟ್ಟುಕೊಂಡಿದ್ದ "ರೇವಣನಾಥ" ನಬ್ಬ ರಾಜನು ಪಂಡಿಗರಾಜನಿಗೆ ಒಂಬತೆಯ ತಲೆಯವನಾಗಿದ್ದಾನೆ ಪ್ರತಿಯೊಬ್ಬರಿಗೆ ಒಂ ದರ್ವಗಳಂತೆ ಲಬ್ಧಿಸಿದರೂ, ಪಂಡಿಗರಾಜನಿಗಿಂತ ರೇವಣನಾಥರಾಜನು ೧೮೦ ವರ್ಷಗಳ ಪೂರ್ವದಲ್ಲಿ ದ್ದನೆಂದು ಸ್ಪಷ್ಟವಾಗಿವುದು ಪಂಡಿಗರಾಜನು ಶಾಲಿ ವಾಹನಶಕ ೯೯೦ ಅಂದರೆ (ಕ್ರಿ ಶಕ ೧೦೬೮)ರಲ್ಲಿದ್ದ ನೆಂಬ ಒಪ್ಪವು ಈ ಶಾಸನದಿಂದ ತೀ ತಿಳಿದು ಬರುವುದ. ಇದರಿಂದ ಪಂಡಿಗರಾಜನಿಗೆ ೬ನೆಯ ತಲೆಯವನ ದ ರೇವಣನಾಥರಾಜನು ಸುಮಾರು ಕ್ರಿ ಶ ೮೮೮ ರಲ್ಲಿದ್ದನೆಂಬ ತೀರ್ಮಾನಿಸಬಹುದು ಈಗ್ಗೆ ಸುಮಾರು ೧೪೦೦ ವರ್ಷಗಳ ಪೂರ್ವದಲ್ಲಿದ್ದ ರಾಜರು ಈ ಪ್ರಾಚೀನ ಪ್ರಾಚಾರ್ಯರ ಹೆಸರನ್ನಿಟ್ಟುಕೊಳ್ಳುವುದಾದರೆ, ಆ ಕಾಲದಲ್ಲಿ ಈ ಪ್ರಾಚಾರ್ಯರ ತೇಜಸ್ಸು ಪ್ರಭಂಜದಲ್ಲೆಲ್ಲಿ ವ್ಯಾಪಿಸಿತ್ತೆಂದು ಧಾರಾಳವಾಗಿ ಹೇಳಬಹುದಾಗಿದೆ ಶ್ರೀರೇಣಕಾಚಾರ್ಯರ ಸನಿತ್ರನಾಮವು ಸಾವಿರಾರು ವರ್ಷಗಳ ಪೂರ್ವದಲ್ಲಿ ರಚಿಸಲ್ಪಟ್ಟಿರುವ ಅನೇಕ ಗ್ರಂಥ ಗಳಲ್ಲಿ ಉಲ್ಲೇಖವಾಗಿದ್ದರೂ, ಅವು ಈ ಕಾಲದ ಕಲವರಿಗೆ ಪರಿಚಯವಿಲ್ಲ ಆದುಗಿಂ ಮುಖ್ಯವಾಗಿ ವೀರಾದಪನಲ್ಲಿ ರಚಿಸಲ್ಪಟ್ಟಿರುವ ಶಿವತತ್ವಚಿಂತಾಮಣಿಯಲ್ಲಿ ಕೋರಿಸಿರುವ ಶಿವತತ್ವಚಿಂತಾಮಣಿಯಲ್ಲಿಯೂ ಕೋರಿಸಿರುವ ತಾತ್ಪರ್ಯವನ್ನು ಮುಂದಿನ ಜಲಶಾಸನವನ್ನು ತೋರಿಸಬೇಕೆಂದು ನಡಿಯುತ್ತಿರಬೇಕೋ ಹೇಗೆ ನೋಡಬೇಕು ಅಷ್ಟೆ! ಈ ಸರ್ವಜ್ಞಮೂರ್ತಿಗಳು ಇನ್ನು ಮುಂದಾದರೂ ತಮ್ಮ ಪಕ್ಕಮಾರ್ಗವನ್ನು ಬಿಟ್ಟು ಸರಳ ಮಾರ್ಗವನ್ನವಲಂಬಿಸುವರೆಂದು ಪೂರ್ಣ ನಂಬಿದ್ದೇವೆ ಯಾವುದಾದರೂ ಒಂದು ವಿಷಯವನ್ನು ವಿಮರ್ಶಮಾಡಬೇಕಾದರೆ ಕೇವಲ ಶುದ್ಧ ಹೃದಯದಿಂದ ಮಾತಾಡಬೇಕು. ಇವನ್ನು ಬಿಟ್ಟು ಕಲುಷಿತಹೃದಯದಿಂದ ಮಾಡಿತ್ತ ಹೋದರೆ ಎಲ್ಲವೂ ತಲೆ ಕೆಳಗಾಗುವುದೆಂಬ ವಿಷ್ಯ ಹೇಳಬೇಕಾಗಿಲ್ಲ ಒಬ್ಬಗೆ ವೀರಶೈವವ ರಾಚಾರ್ಯರು ಬಹ ಪ್ರಾಚೀನರು ಈ ಮಹಾತ್ಮರು ಸ್ವತಂತ್ರರೊಂದು ಗವರ್ನಮೆಂಟಿಗೂ ಅವಶಕ್ತರಿಸಿ ಲೋಕೋದ್ಧಾರವನು ಮಾಡಿ ರವರು ಇವರು ಇತ್ತೀಚಿನವರಂದೆ ಸಡಿಸಿ ತ ದೆ ರುಹಿಸಾಧನದಿಂದ ಸಾಧಿಸತೊಡಗುವುದು ಸಾರ್ವಜನಿಕ ವಲ್ಲದೆ ಬೇರೆಯಲ್ಲ! ಪ್ರಮಥಪುಂಗವರ ಕಾಲವನ್ನು ಕಂಡುಹಿಡಿಯುತ್ತೇನೆಂದು ಪ್ರಲಪಿಸ ವುದು, ಪರಬ್ರಹ್ಮನ ಕಾಲವನ್ನು ಕಂಡುಹಿಡಿಯುತ್ತೇನೆಂದು ಪ್ರಲಪಿಸಿದಂತೆ ಹುಚ್ಚರ ವರ್ಗಕ್ಕೆ ಶೇರಿದವರ ನಡತಿನಂತಿರತ್ತದೆ ಅಷ್ಟು!

ಇದಲ್ಲದೆ ಶ್ರೀಶಂಕರರು ಕಿರಾತವೇಷವನ್ನು ತಾಳಿ ಅರ್ಜುನನೊಡನೆ ಯುದ್ಧಮಾಡಿದ ಸಮಯದಲ್ಲಿ, ರಂಕರ ಸಂಗಡವಿದ್ದ ಪ್ರಮಥಪುರಾವದಲ್ಲಿ ಶ್ರೀರೇಣಾಕರೂ ಇದ್ದನೆಂಬ ವಿಷಯವು **ಮಹಾಭಾರತ**ದಿಂದ ತಿಳಿದು ಬರುವುದು ಮಹಾಭಾರತವನ್ನು ಕುಮಾರವ್ಯಾಸನೆಂಬ ಲೋಕಪ್ರಸಿದ್ಧನಾದ ಕವಿಯು ಕನ್ನಡಿಸಿರುವನು. ಆ ಕವಿಯು ಹರಿಕಥೆಯನ್ನು ಕೇಳದ ಕನ್ನಡಿಗನೇ ಇರುವುದಿಲ್ಲ ಈ ಕವಿಯು ಪರಮತೀಯನು ಅತನು ತನ್ನಿಂದ ವಿರಚಿತವಾಗಿರುವ ಸುಯಾಧನಚರಿತ ಆದಿಪರ್ವದ ೫ನೆಯ ಸಂಧಿಯಲ್ಲಿ —

ದೇವಾ ನೀವೊಪ್ಪುವಿರೆಲಿ ನಂದರು ।
ದೇವಾ ಯರು ಗುಹಗಣಗಳಿಗೆಲಿ ।
ಲ್ಲಾ ನಿನೋದವ ನೋಡಿ ಧರಿಸಿದರೊಲಿದು ಶಾಖರವ ।

ಆ ವಿಗಡನಂದೀಶ ವೀರಕ ।
ದೇವಲಕ **ರೇಣುಕ** ಮಹೋದ್ರು ।
ರಾವಿಬಿಸಮೂಖ ವೀರಭದ್ರಾದ್ಯಖಿಲಭೂತಗಣ ॥೧೦॥

ರಂಕರನು ಅರ್ಜುನನೊಡನೆ ಯುದ್ಧಮಾಡುವ ಸಮಯದಲ್ಲಿ ಶಬರವೇಷವನ್ನು ಧರಿಸಿದಂತೆ, ಶಕ್ತಿ, ಷಣ್ಮುಖ, ಗಣಪತಿ, ನಂದೀಶ್ವರ, ವೀರಕ, **ದೇವಲಕ, ರೇಣುಕ** ಮಹೋದರ, ದಾವಶಿಖಿ, ವೀರಭದ್ರ ಮುಕ್ತು ಸಮಸ್ತ ಭೂತಸಮುದಾಯ ಇವರೆಲ್ಲರೂ ವಿಷೋದದಿಂದ ಶಬರ ವೇಷವನ್ನು ಧರಿಸಿದರೆಂದು ವರ್ಣಿಸಿದ್ದಾನೆ ಇದರಿಂದ ರೇಣುಕರು ಮಾಂಡಲರ ಕಾಲದಲ್ಲಿಯೂ ಇದ್ದರೆಂಬುದು ಸ್ಪಷ್ಟವಾಗುತ್ತದೆ ಅಷ್ಟು!

ಇದಲ್ಲದೆ ಕ್ರಿ ಶ. ೧೦೫೦ರಲ್ಲಿ ಭರತಭೂಮಿಯನ್ನು ಲಂಕರಿಸಿದ್ದ ಕ್ಷೇಮೇಂದ್ರನೆಂಬ ಮಹಾಕವಿಯು "**ಭಾರತ ಮಂಜರಿ**" ಎಂಬ ಮಹಾಕಾವ್ಯವನ್ನು ರಚಿಸಿದ್ದಾನೆ. ಈ ಮಹಾಕವಿಯು ಸುಹಾಭಾರತದ ವಿಷಯವನ್ನೇ ತನ್ನ ಗ್ರಂಥದಲ್ಲಿ ವಿವರಿಸಿರುತ್ತಾನೆ ಈ ಮಹಾಕಾವ್ಯದ ಆರಣ್ಯಪರ್ವದಲ್ಲಿ ೬೦೫ನೆಯ ಶ್ಲೋಕದಿಂದ ೬೬೩ನೆಯ ಶ್ಲೋಕದವರೆಗೆ ತೀರ್ಥಯಾತ್ರೆಗಳ ವರ್ಣನೆಯಿದೆ ಇದರಲ್ಲುಕ್ತವಾಗಿರುವ "ಶಗಸ್ತ್ಯತೀರ್ಥ, ರುದ್ರತೀರ್ಥ, ಸ್ಕಂದತೀರ್ಥ, ರುದ್ರಕೋಟಿತೀರ್ಥ" ಇತ್ಯಾದಿ ತೀರ್ಥಗಳ ಮಧ್ಯದಲ್ಲಿ,— "**ರೇಣುಕತೀರ್ಥ**"ದ ನಾಮವೂ ಉಲ್ಲೇಖಿಸಲ್ಪಟ್ಟಿರುವುದು

ಬ್ರಸ್ಮತುಂಗಸ ಕಾಮಾಂಶ **ರೇಣುಕಂ** ಬಸ ಸರೋವರಂ॥೦೯॥

ಇತ್ಯಾದಿಸಾಗಿ ಕ್ಷೇಮೇಂದ್ರನು ಉಲ್ಲೇಖಿಸಿರುವನು ಇವೇ ತೀರ್ಥಕ್ಷೇತ್ರಗಳಿಗೆ ಅನೇಕ ಪ್ರಾಚೀನ ಗ್ರಂಥಗಳಲ್ಲಿ ವೀರಶೈವಮತಾಚಾರ್ಯರ ನಾಮೋಲ್ಲೇಖವು ಕಂಡುಬರುವುದು ಇವನೆಲ್ಲಾ ಪಂಡಿತಂಮನ್ಯರು ತಲ್ಲೀನರಿದು ನೋಡದೆ, ಕಲ್ಪಿತಹೃದಯದಿಂದ ಕೂಡಿ ಅಯರ್ಥವಾಗಿ ಪ್ರಲಪಿಸುತ್ತ ಹೋಗುವುದು ಎನ್ನುವ ಶ್ರೇಯಸ್ಸುವಲ್ಲವೆನೆಂದೂ, ಇನ್ನಮುಂದಾದರೂ ಸನ್ಮಾರ್ಗಗಾಮಿಗಳಾಗಬಗೆಂದೂ ಆಶಿಸುತ್ತೇವೆ ಒಟ್ಟಿಗೆ ವೀರಶೈವಮತಾಚಾರ್ಯರ ಕಾಲವು ಇದೇ ಎಂದು ಕಂಡುಹಿಡಿಯಲು ಸಾಧ್ಯವಿಲ್ಲವೆನೆಬುದೇ ಸಿದ್ಧಾಂತವು

ಒಳದೇಶದ ವೃತ್ತಾಂತಗಳು.

ಶ್ರೀವೀರಭದ್ರೇಶ ಜಗದ್ಗುರುಗಳವರು ರಹೋತ್ಸವ ನಿವಿತ್ತವಾಗಿ ಸಂಸ್ಥಾನ ಪುರಕ್ಕೆ ದಯಮಾಡಿಸಿದ್ದಾರೆ ಮುಂದಿನ ತಿಂಗಳು ೧೪ ನೆಯ ತಾರೀಖಿನವರೆಗೆ ಅಲ್ಲಿಯೇ ಇರುವರು ತಿಳಿದುಬಂದ್ದತ್ತದೆ

ಎಲ್ಲಿ ಇಮ ಹೊಂದಿ ತತಕ್ಕೆ ಸ್ಥ

ಮೈಸೂರು ಮಾಹಾರಾಜರ ಉಪಾಧ್ಯಕ್ಷರೂ ಚುನಾವಣೆಯ ಕಳೆದ ೧೫ ನೆಯ ತಾರೀಖಿನ ದಿವಸ ನಡೆದು, ಶ್ರೀ ಎನ್ ಸಿ ದೇವರಾಜ ಅರಸರು ಬಹುಮಂದಿನ ಅರಸಲ್ಪಟ್ಟರು.

ಸೈಸೂರು ಕಾಂಗ್ರೆಸ್ ಸದಸ್ಯರಾಗಿ ಶಾಸನಭಂಗ ಚಳವಳಿಯಲ್ಲಿ ಜಾಗವಹಿಸಿದ್ದ ಅಡ್ವೊಕೇಟರುಗಳಾದ ಮಾ ಕೆ ಟಿ ಭಾಷ್ಯಂ, ಎಸ್ ರಂಗರಾಮಯ್ಯ ಇವರುಗಳ ಹೆಸರುಗಳನ್ನು ವೈಸೂರು ಸಂಸ್ಥಾನದ ವೆತೇಲರುಗಳ ಪಟ್ಟಿಯಿಂದ ತೆಗೆದು ಹಾಕತಕ್ಕದ್ದೆಂದು ಹೈ ಕೋರ್ಟು ನ್ಯಾಯಾಧೀಶರು ತೀರ್ಮಾನವಿತ್ತಿರುತ್ತಾರೆ. ಇದೇ ವಿಷಯವಾಗಿಯೇ ಮೆ|| ಗಳುದ ಎಚ್ ಸಿ ದಾಸಪ್ಪ, ಗೋವಿಂದೆಡ್ಡಿ, ಚಂಗಲರಾಯರೆಡ್ಡಿ ಇವರುಗಳ ಮೇಲೆ ನಡೆಯುತ್ತಿರುವ ಮೊಕದ್ದಮೆಗಳು ಇಪ್ಪರಲ್ಲೇ ವಿಚಾರಣೆಗೆ ಬರಲಿರುವವು

ವೈಸೂರು ಸಂಸ್ಥಾನದಲ್ಲಿ ತಿಕ್ಕುವ ಚಿನ್ನವಮೇಲೆ ವಿಶೇಷ ತೆರಿಗೆಯನ್ನು ಹಾಕುವುದಕ್ಕಾಗಿ ಸರ್ಕಾರದವರು ಒಂದು ಶಾಸನವನ್ನು ರಚಿಸಿದ್ದಾರೆ. ಅದಕ್ಕೆ ಶ್ರೀಮನ್ಮಹಾರಾಜರವರು ಫೆಬ್ರವರಿ 29 ನೆಯ ತಾರೀಖಿನ ದಿವಸ ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರು. ಬಂಗಾರದ ಕಾರ್ಖಾನೆಯ ಮಾಲೀಕರೆಲ್ಲಾ 1940 ನೆಯ ವರ್ಷದ ಮಾರ್ಚಿ 22 ನೆಯ ತಾರೀಖಿನಿಂದ ಈ ಶಾಸನವನ್ನನುಸರಿಸಿ ಚಿನ್ನದ ತೆರಿಗೆಯನ್ನು ಕೊಡಬೇಕಾಗುವದು ಸರ್ಕಾರದ ಸೂಚನೆಯ ಮೇರೆಗೆ ಕಾರ್ಖಾನೆಯವರು ಚಿನ್ನವನ್ನು ಮಾರಬೇಕು. ನಿಯಮಗಳಿಗೆ ತಪ್ಪಿದರೆ 1000 ರೂ ಗಳ ವರೆಗೂ ದಂಡವು ವಿಧಿಸಲ್ಪಡುವದು ಕಾರ್ಖಾನೆಯವರು ತಕ್ಕ ಲೆಖ್ಖಗಳನ್ನಿಡವದಕ್ಕೂ ಕಾರ್ಖಾನೆಯನ್ನು ಪರಿಶೀಲಿಸುವದಕ್ಕೂ ಸರ್ಕಾರದವರು ತಕ್ಕ ವಿಧಿಗಳನ್ನು ಮಾಡತಕ್ಕವರಿದ್ದಾರೆ.

ಯುದ್ಧವಾರ್ತೆ.

ಯೂರೋಪಿನ ಶಾಂತಿಗೆ ಜರ್ಮನಿಯ ಸಲಹೆಗಳು !

ಯೂರೋಪಿನಲ್ಲಿ ಶಾಂತಿಪಾತಾವರಣವನ್ನು ಕಲ್ಪಿಸಬೇಕೆಂಬುದಕ್ಕಾಗಿ ಅವೆರಿಕೆಯಿಂದ ಕಳುಹಿಸಲ್ಪಟ್ಟಿದ್ದ ಪ್ರತಿನಿಧಿ, ಮಿಃ ಸಮ್ನರ್‌ವೆಲ್ಸ್‌ರವರನ್ನು ಹೆರ್‌ಮನ್ ರಿಬಟ್ರಾಪರು ರೋಮ್‌ನಗರದಲ್ಲಿ ಸಂಧಿಸಿ ಕೆಳಗೆ ಕೂಟ್ಟಿರುವ ಹೆರ್ ಹಿಟ್ಲರರ ಸಲಹೆಗಳನ್ನು ತಿಳುಹಿಸಿದರು. (1) ಭೂ, ಜಲ ಮತ್ತು ವಾಯು ಬಲಗಳನ್ನು ಒಟ್ಟಿಗೆ ಕಡಿಮೆಮಾಡಬೇಕು. (2) ನಾಲ್ಕು ರಾಷ್ಟ್ರಗಳ ಒಪ್ಪಂದ ವಾಗಿ ಯೂರೋಪಿನ ಯಾವ ಯಾವ ಭಾಗಗಳು ಯಾವ ಯಾವ ದೇಶದ ಪ್ರಭುವಶಕ್ಕೆ ಒಳಗಾಗಿರಬೇಕೆಂಬುದನ್ನು ನಿರ್ಧರಿಸಬೇಕು ಯುದ್ಧವನ್ನಾರಂಭ ಮಾಡಿರುವವನ್ನು 'ಕಮ್ಮುನಿಜಂ'ನಿಂದ ಉದ್ಧರಿಸಬೇಕು (3) ಜರ್ಮನಿಯ ಯಹೂದ್ಯರೆಲ್ಲಾ ಪ್ಯಾಲಸ್ತೈನಿಗೂ, ಇಟಲಿ ಯಹೂದ್ಯರೆಲ್ಲಾ ಅಬಿಸೀನಿಯಕ್ಕೂ ಮತ್ತು ಫ್ರಾನ್ಸಿನ ಯಹೂದ್ಯರೆಲ್ಲಾ ಮಡಗಾಸ್ಕರ್ ದ್ವೀಪಕ್ಕೂ ಹೋಗಬೇಮೇಲೆ ಪೂರ್ಣ ಧಾರ್ಮಿಕ ಸ್ವಾತಂತ್ರ್ಯವು ಕೊಡಲ್ಪಡಬೇಕು (4) ಪೂರ್ಣ ವಾಣಿಜ್ಯ ಸ್ವಾತಂತ್ರ್ಯವಿದ್ದು ಎಲ್ಲರಿಗೂ ಅಪೂರ್ಣವಸ್ತುಗಳು ದೊರೆಯುವಂತಿರಬೇಕು ಜರ್ಮನಿ ಮತ್ತು ಇಟಲಿಜನರು ವಲಸೆಹೋಗುವದಕ್ಕೂ ಅರ್ಧಿಕ ಸಹಾಯಕ್ಕೂ ಅನುಕೂಲವಿರುವಂತೆ ಅಮೆರಿಕ ಯೊಡನೆ ನಿಕಟಸಂಬಂಧ ಬೆಳಸಬೇಕು (5) 20 ವರ್ಷಗಳಲ್ಲಿ ಜರ್ಮನಿ ಪಶಾಹತುಗಳನ್ನೆಲ್ಲಾ ಬಿಟ್ಟು ಕೊಡಬೇಕು ಆಫ್ರಿಕಾ ಖಂಡಕ್ಕೆ ಶಕ್ತಳಾದ ಬೇರೆ ಪ್ರದೇಶಗಳನ್ನು ಕೊಡಬೇಕು. (6) ಒಂದುಕೋಟಿ ಪ್ರಜಾ ಸಂಖ್ಯೆಗೆ ಮೀರಿರದ ಸ್ವತಂತ್ರ ಪೋಲೆಂಡಿನ ಪುನರ್ವ್ಯವಸ್ಥೆ ಯಾಗಬೇಕು. ಸಿಡ್ಡಿಯವು ಪೋಲೆಂಡಿನ ಸ್ವತಂತ್ರ ಬಂದರುಗಳಾಗಿರಬೇಕು. ಡಾನ್ಜಿಗ್‌ಮೂಲಕ ಪೋಲೀಷರ ವ್ಯಾಪಾರಕ್ಕೆ ಅವಕಾಶಕೊಡಬೇಕು (7) ಜಕ್ಕರು ಸ್ಲೋವೇಕರು ಮತ್ತು ಮ್ಯಾಗ್ಯಾರ್‌ಗಳು ಇವರನ್ನೆಲ್ಲಿ ಸೇರಿಸಿ ಒಂದು ರಾಷ್ಟ್ರವನ್ನು ಸ್ಥಾಪಿಸಬೇಕು ಇದು ಜರ್ಮನಿಯ ಆಶ್ರಯದಲ್ಲಿರಬೇಕು ಅದರಲ್ಲಿ ಜರ್ಮನಿಗೆ ವಿಶೇಷ ಹಕ್ಕುಗಳಿರಬೇಕು. (8) ಆಸ್ಟ್ರಿಯವು ಜರ್ಮನಿಯೊಳಗೇ ಇರಬೇಕು (9) ದೊಡ್ಡ ಮತ್ತು ಸಣ್ಣ ದೇಶಗಳ ಹಿತಸಾಧನೆಗಾಗಿ ಆರ್ಮನ್ರಿ, ಇಟಲಿ, ಯುಗೊಸ್ಲಾನಿಯ, ರುಮೇನಿಯ, ಬೊಹಿಮಿಯ, ಸ್ಲೊವೇಕಿಯ ಮತ್ತು ಹಂಗೇರಿಗಳ ಡ್ಯಾನ್ಯೂಬ್ಯು ಫೆಡರೇಷನ್ ಒಂದನ್ನು ಸ್ಥಾಪಿಸಬೇಕು (10) ಬಾಲ್ಕ್ ರಾಷ್ಟ್ರಗಳ ಸ್ವಾತಂತ್ರ್ಯವನ್ನು ರಕ್ಷಿಸಬೇಕು (11) ಜಿಬ್ರೂಆಮಾರ್ಗವಾಗಿ ಇಟಲಿ ಪಶ್ಚಿಮಗಳು ಸುಂಕವಿಲ್ಲದೆ ಹೋಗಲು ಅನುಮತಿಸಬೇಕು. 1945 ರಲ್ಲಿ ಸೂಯೆಜ್ ಒಪ್ಪಂದವು ಮುಗಿದೊಡನೆ ಸುಂಕವಿಲ್ಲದೆ ಹಡಗುಗಳು ಓಡಾಡುವಂತಾಗಬೇಕು. ಟ್ಯೂನಿಸ್‌ನಲ್ಲಿರುವ ಇಟಾಲಿಯನ್ನರಿಗಾಗಿ ಹೊಸ ಶಾಸನವಾಗಬೇಕು. ಈ ಪರಸ್ಪರಗಳೊಡನೆ ಕೂಡಿದ ಶಾಂತಿಪ್ರಸ್ತಾವನೆಯ ಸಫಲವಾಗದಿದ್ದರೆ ಮುಂದಿನ ಕರಡ್ಡತುವಿನಲ್ಲಿ ಪೋಲ್ ಯುದ್ಧಾರಂಭವಾಗುವದೆಂದು ರಿಬ್ಬಂಟ್ರಾಪರು ತಿಳುಹಿಸಿದರು ಈ ಶರತ್ತುಗಳನ್ನು ಅಂಗೀಕರಿಸುವ ಸಂಭವವೇ ಇಲ್ಲವೆಂಬುದನ್ನು ಸಮ್ನರ್‌ವೆಲ್ಸ್‌ರವರು ಮುಸ್ಸೊಲಿನಿಯವರಿಗೆ ಮನಗಾಣಿಸಿದರೆಂದೂ, ಮುಸ್ಸೊಲಿನಿಯವರು, ಹೆರ್ ಹಿಟ್ಲರರನ್ನು ಕಂಡು ಆ ಸರತ್ತುಗಳನ್ನು ಬದಲಾಯಿಸಿಮಾಡಲು ಪ್ರಯತ್ನಿಸಿದರೆಂದೂ ತಿಳಿಯುತ್ತದೆ

ಜರ್ಮನಿಯಲ್ಲಿ ಲೋಹದ ಅಭಾವ

ಜರ್ಮನಿ ಸರ್ಕಾರದವರು ದೇವಾಲಯಗಳ ಗಂಟೆಗಳ ಸ್ಟೆಲ್ಲಾ ಸರ್ಕಾರಕ್ಕೆ ಒಪ್ಪಿಸಿಬಿಡಬೇಕೆಂದು ಆಜ್ಞೆ ಮಾಡಿ ರುತ್ತಾರೆ ಈ ಗಂಟೆಗಳನ್ನೆಲ್ಲಾ ಪುಡಿಮಾಡಿ ಯುದ್ಧ ಸಾಮಗ್ರಿಗಳನ್ನು ತಯಾರಿಸುತ್ತಿರ ಪರು

ಹಿಟ್ಲರ್ ಮುಸ್ಸೋಲಿನಿ ಭೇಟ್ಟಿ

ಹೆರ್ ಹಿಟ್ಲರರು ಹೆರ್ಮಾ ರಿಬ್ಬಂಟ್ರಾಫ್ರರವ ರೊಡನೆ ಕಳೆದ 18 ನೆಯ ತಾರೀಖಿನ ಬೆಳಗ್ಗೆ 10 ಸೆಂಟಿಗೆ ಬ್ರೆನ್ನರ್ ಛತ್ರಿಯ ಬಳಿಯ ಅಲ್ಲಿಂದ ಹಿಟ್ಲರರು ಮುಸ್ಸೋಲಿನಿಯವರ ವೈಲಿಗೆ ಹೋದರು ಅಲ್ಲಿ ಮುಸ್ಸೋಲಿನಿಯವರು ಅವರಿಗೆ ಸ್ವಾಗತವಿತ್ತರು ಬ್ರೆನ್ನರ್ ಗಡಿ ಸ್ಟೇಷನ್ನಿನಲ್ಲಿ ಇಬ್ಬರಿಗೂ ಎರಡು ಘಂಟೆಗಳ ಕಾಲ ಮಾತುಕತೆಗಳು ನಡೆದವು ಸುತ್ತ ಸೈನಿಕರನ್ನು ಕಾವಲು ಹಾಕಲಾಗಿತ್ತು ಸ್ಟೇಷನ್ನನ್ನು ಇಟಲಿ ಮತ್ತು ಜರ್ಮನಿ ಧ್ವಜಗಳಿಂದ ಅಲಂಕರಿಸಲಾಗಿತ್ತು ಚರ್ಚಿಸಲ್ಪಟ್ಟ ವಿಷಯಗಳೇನೆಂಬುದು ತಿಳಿದು ಬಂದಿಲ್ಲ

ಜರ್ಮನಿಯ ದೂರಾಲೋಚನೆ

ಯೂರೋಪನ್ನು ಮುಖ್ಯವಾಗಿ ಬಾಲ್ಕ್ ರಾಷ್ಟ್ರ ಗಳನ್ನು ಹದ್ದಿನಕ್ಷಿಚ್ಚಿಗಲು ಜರ್ಮನಿ-ಇಟಲಿ ರಷ್ಯಾ ಗಳನ್ನು ಒಂದುಗೂಡಿಸಬೇಕೆಂಬ ಜರ್ಮನಿಯ ರಾಜ ಕಾರಣ ಪಟುಗಳು ಸರ್ವ ಪ್ರಯತ್ನಗಳನ್ನು ಮಾಡುತ್ತಿ ದ್ದಾರೆಂಬುದು ನಿರ್ವಿವಾದ ನಿಶ್ಚಯವಾಗಿದೆ ಆಸೆರಿ ಕೆಯ ಪ್ರತಿನಿಧಿ ಶ್ರೀ ಸಮ್ನರ್‌ವೆಲ್ಸ್‌ರವರು ಬಂದಿರು ವಾಗಲೇ ಈ ಪ್ರಯತ್ನದಲ್ಲಿ ನಾಜಿಗಳು ತೊಡಗಿರುವದು, ಯಾವ ಆಧಾರದ ಮೇಲೆ ಜರ್ಮನಿಯು ಶಾಂತಿಗೆ ಸಿದ್ಧ ವಾಗಿದೆ ಎಂಬುದನ್ನು ತಿಳಿಯಪಡಿಸುವದಕ್ಕೆಂದೇ ಕಾಣು ತ್ತದೆ. ಸ್ಕಾಂಡಿನೇವಿಯಾ ರಾಷ್ಟ್ರಗಳು ಬ್ರಿಟ್ ಮತ್ತು ಫ್ರಾನ್ಸ್‌ಗಳ ಪ್ರಭಾವದಿಂದ ದೂರ ಸರಿದೆದ್ದರಿಂದ ಬ್ರಿಟನ್ನೂ ಫ್ರಾನ್ಸೂ ಈಗ ಸಂದಿಗ್ಧಾವಿ ಮುಂದೆ ಬರ ಬಹುದೆಂದು ಹಿಟ್ಲರನು ಎಣಿಕೆ ಹಾಕುತ್ತಿದ್ದಾನೆಂದು ತೋರುತ್ತದೆ ಇದು ಹೇಗಾದರೂ ಪೂರ್ವ ಯೂರೋಪನ್ನು ಭದ್ರಪಡಿಸಲು ಹಿಟ್ಲರನು ತೊಡಗಿದ್ದಾನೆ ಪೋಲೆಂಡ್ ಎಮರು ಬಿದ್ದಂತೆ ಮತ್ತಾವ ದೇಶವೂ ಎದುರು ಬೀಳದಂತೆ ವ್ಯವಸ್ಥೆ ಮಾಡಬೇಕೆಂಬುದೇ ಆತನ ಪ್ರಯತ್ನವೆಂದು ಯೋಚಿಸಲಾಗಿದೆ

ಶ್ರೀ ಸಮ್ನರ್‌ವೆಲ್ಸ್‌ರವರ ಸ್ವದಾಸದ ಪರಿಣಾಮ

ಅಮೆರಿಕೆಯ ಪ್ರತಿನಿಧಿಗಳಾದ ಶ್ರೀ ಸಮ್ನರ್‌ವೆಲ್ಸ್ ರವರು ಕೈಗೊಂಡ ಯೂರೋಪ್ ಪ್ರವಾಸವನ್ನು ಕುರಿತು ಶ್ರೀ ಛೇಂಬ್ಲೈನರು ಕಾಮನ್ಸ್ ಸಭೆಯಲ್ಲಿ ಭಾಷಣ ಮಾಡುತ್ತ "ಶ್ರೀ ಸಮ್ನರ್ ವೆಲ್ಸ್‌ರವರಿಗೆ ಬ್ರಿಟಿಷ್ ಸರ್ಕಾರದವರು ಸುನ್ನಾಗತವಿತ್ತು, ತಮ್ಮ ಹೃದ್ಭಾವನೆ ಸ್ಟೆಲ್ಲಾ ಮುಚ್ಚುಮರೆಯಿಲ್ಲದೆ ತಿಳುಹಿಸಿದರು ಸಮ್ನರ್ ವೆಲ್ಸ್‌ರವರು ಇಟಲಿಗೆ ಹೋದಾಗ ಸರ್ವಾಧಿಕಾರಿಗಳಿಗೆ ಬ್ರಿಟ್ ಭೇಟ್ಟಿಯನ್ನೂ ಮಾಡಿದರು. ಈ ಭೇಟ್ಟಿಯು ವಿಚಾರವಾಗಿ ಅನೇಕ ಊಹೆಗಳಿದ್ದಿವೆ. ಈ ಭೇಟ್ಟಿಯು ಹೊಸ ಶಾಂತಿಸಲಹೆಗಳನ್ನು ಮುಂದಿಡುವದಕ್ಕಾಗಿ ನಡೆಯಿತೆಂದು ಹೇಳಲಾಗಿದೆ. ಆದರೆ ಇದರ ನಿಜಾಂಶವೇನೆಂಬುದು ತಿಳಿದಿಲ್ಲ ಆದರೆ ಪರಿಣಾಮವಾಗಿ ಎಂತಹ ಸಂಸ್ಕೃತಿ ಯೊಡನಿವರೂ ಅದನ್ನೆ ಬಾರಲು ನಾವು ಸಿದ್ಧರಾಗಿ ದ್ದೇವೆ ಯಾವ ಉದ್ದೇಶಸಾಧನೆಗಾಗಿ ನಾವು ಸಂಗ್ರಾಮವನ್ನಾರಂಭಿಸಿದ್ದೇವೋ ಅದರಿಂದ ನಾವು ವಿಮುಖರಾಗುವುದಿಲ್ಲ" ಎಂದು ಹೇಳಿದರು

ಬ್ರಿಟಿಷ್ ವಿಮಾನಗಳ ಮುತ್ತಿಗೆ

ಜರ್ಮನಿಯ ಪಶ್ಚಿಮತೀರದಲ್ಲಿರುವ ಹಿಲ್ಲ್ಯಾಂಡ್ ದ್ವೀಪದ ಮೇಲೆ 60 ಬ್ರಿಟಿಷ್ ವಿಮಾನಗಳು ಮುತ್ತಿಗೆ ಹಾಕಿದವು ಆ ದ್ವೀಪದಲ್ಲಿರುವ ಜರ್ಮನ್ ವಿಮಾನಗಳ ನಿಲ್ದಾಣದ ಮೇಲೂ, ಒಂದು ಧೈಲ್ ಮಾರ್ಗದ ಮೇಲೂ, ಸೈನಿಕರ ಬ್ಯಾರಕ್ ಮೇಲೂ ಬಾಂಬುಗಳನ್ನು ಸುರಿಸಿದವು ವಿಮಾನಗಳು ನಿಲ್ದಾಣೇಪಡಿಸಿರುವ ಎಂಡು ಹ್ಯಾಂಗರುಗಳು ಉರಿಯುತ್ತಿರುವದನ್ನು ವೈಮಾನಿಕರು ನೋಡಿದರೆಂದೂ. ಆದರೆ ಶತ್ರುವಿಮಾನಗಳು ಪ್ರತಿಘಟಿಸಲಿಲ್ಲವೆಂದೂ, ವಿಮಾನ ದ್ವಂಸಕ ಪಿರಂಗಿಗಳು ಮಾತ್ರ ಗುಂಡು ಹಾರಿಸಿದವೆಂದೂ ವರದಿಯಾಗಿದೆ ಮುತ್ತಿಗೆಯು ನಡೆದನೇಲೆ ಎರಡು ಬ್ರಿಟಿಷ್ ವಿಮಾನ ಗಳು ಆ ದ್ವೀಪದ ಮೇಲೆ ಹಾರಿ ಆಗಿರುವ ನಷ್ಟವನ್ನು ತಿಳಿಯಲು ಫೋಟೋಗಳನ್ನು ತೆಗೆದುಕೊಂಡುಬಂದ ನೆಂದೂ ಈ ಮುತ್ತಿಗೆಯು 19 ನೆಯ ತಾರೀಖಿನ ರಾತ್ರಿ 8 ಘಂಟೆಯಿಂದ ಬೆಳಗ್ಗೆ 3 ಘಂಟೆಯ ವರೆಗೂ ನಡೆಯಿ ತೆಂದೂ ಪ್ರಕಟವಾಗಿದೆ

ಅಕ್ಕಸಾಲಿಗನ ಉಪಾಯ !

ಸೋರೀಬಿದನೂರು ಜಾಲಾಕೆಸ ಒಂದು ಗ್ರಾಮದಲ್ಲಿ ಒಬ್ಬ ಅಕ್ಕಸಾಲಿಗರನಿದ್ದಾನೆ ಅವನಿಗೆ ೩೫ ವರ್ಷ ವಯಸ್ಸು ಈತನ ಹೆಂಡತಿಯ ತೌರುಮನೆ, ಹತ್ತರವೇ ಒಂದು ಹಳ್ಳಿ ಆಕೆಯು ಗಂಡನ ಮನೆಯಲ್ಲಿ ನಿಲ್ಲದೆ ಪದೇ ಪದೇ ತೌರುಮನೆಗೆ ಹೋಗುತ್ತಿದ್ದಳು. ಈ ಸಾರೆಯೂ ಹೋದಳು ಗಂಡನು ಎಷ್ಟು ಹೇಳಿಕಳುಹಿಸಿದರೂ ಬರಲೇ ಇಲ್ಲ ಅದಕ್ಕಾಗಿ ಅವನು ಮಾಡಿದ ಉಪಾಯವು ಬಹು ಸ್ವಾರಸ್ಯವಾಗಿದೆ ಈಗ್ಗೆ ಸುಮಾರು ೨ ತಾರೀದ ಹಿಂದೆ ಗೋರೀಬಿದನೂರು ಪೋಲೀಸ್ ಸ್ಟೇಷನ್ನಿಗೆ ಮೇಲ್ಕಂಡ ಗ್ರಾಮದಲ್ಲಿ ಆ ಅಕ್ಕಸಾಲಿಗ ರವನು ನೇಣು ಹಾಕಿಕೊಂಡು ಸತ್ತುಹೋಗಿದ್ದಾನೆಂಬು ದಾಗಿ ವರ್ತಮಾನ ಬಂದಿತು ಪೋಲೀಸ್ ಇನ್ಸ್‌ಪೆಕ್ಟರು ಇನ್ಸ್‌ಪೆಕ್ಷನ್ನಿಗಾಗಿ ಊರಿಗೆ ನೋಡಿದಾಗ ಆ ಮನೆಯ ಒಂದು ಚಿಕ್ಕ ಕೋಣೆಯಲ್ಲಿ ಒಂದು ಹೆಣದ ಆಕಾರವು ನೇತಾಡುತ್ತಿತ್ತು ಒಳಗಡೆ ಬಾಗಿಲು ಚಿಲಕ ಹಾಕಿತ್ತು ಹೆಣದ ಮುಖಕ್ಕೆ ಮುಸುಕು ಹಾಕಿತ್ತು. ಅಕ್ಕಸಾಲಿಗನು ಊರುವ ಸಣಿಹೊಯ ಮತ್ತು ಪಟೋ ಮೈಮೇಲೆ ಇದ್ದುವು ಇನ್‌ಸ್ಪೆಕ್ಟರು ಮಹಜರು ನಡೆಸು ವುದಕ್ಕಾಗಿ ಬಾಗಿಲನ್ನು ತೆಗೆಯಿಸಿ ಹೆಣವನ್ನು ಪರೀಕ್ಷಿಸ ಲಾಗಿ ಅದು ಒಂದು ಮನುಷ್ಯಾಕಾರದ ಚೀಲವೋಗೆ ಹೊಟ್ಟಿನ್ನು ತುಂಬಿ ಮುಖಕ್ಕೆ ಮುಸುಕುಹಾಕಿ ನೀರು ಸೇದುವ ಹಗ್ಗದಿಂದ ನೇತುಹಾಕಿದ್ದಿತು

ಆ ಸಮಯದಲ್ಲಿ ಆ ಅಕ್ಕಸಾಲಿಗನೆ ಹೆಂಡತಿ ಮತ್ತು ಬಂಧುಬಳಗದವರು ಬಂದಿದ್ದರು ಪೋಲೀಸಿನವರು ಮಹಜರು ನಡೆಯಿಸಿ ಆ ಕಳೇಬರವನ್ನು ಸ್ವಾಧೀನಪಡಿಸಿ ಮುಂದಿನ ತನಿಖೆಗಾಗಿ ತರುವ ವೇಳೆಗೆ ಎಲ್ಲಿಯೋ ಅಡಗಿಕೂಡಿದ್ದ ಅಕ್ಕಸಾಲಿಗನು ಬಂದು, ನಿಜಾಂಶ ವನ್ನೆಲ್ಲಾ ಹೇಳಿ ತಾನು ತನ್ನ ಹೆಂಡತಿಯನ್ನು ಈ ರೀತಿಯಿಂದ ಬರಮಾಡಿಕೊಂಡು ಪಂಚಾಯಿತಿಕ ಮೂಲಕ ಅವಳಿಗೆ ಬುದ್ಧಿ ಹೇಳಿ ಮನೆಗೆ ಸೇರಿಸಿಕೊಳ್ಳುವೆನೆಂದು ಮಾಡಿದನಂತೆ! ಸಂಯಾದ ಉಪಾಯ!

[೩ ನೆಯ ಪುಟದಿಂದ ಮುಂದುವರೆದುದು]

ಭಾರತದ ಇತಿಹಾಸವು ಅತ್ಯುತ್ತವಾದುದು. ಬೇರೆ ಬೇರೆ ಕುಲಗಳ, ಸಂಸ್ಕೃತಿಗಳ ಮತ್ತು ಧರ್ಮಗಳ ಪ್ರವಾಹವು ಭಾರತಕ್ಕೆ ಹರಿಯಲಿಂತು. ಭಾರತವ ಪಲತ್ತಾವ ಭೂಮಿಯಲ್ಲಿ ಅಪ್ರಮ ಮೊರೆತಿತು ಬಂದವರಿಗೆ ಭಾಂತ ಭೂಮಿಯ ಸ್ವಾಗತ ನೀಡಿತು. ಬಿಗೆಗಿ ಬಂದವರಿಗೆಲ್ಲ ಇಸ್ಲಾಂ ಧರ್ಮವು ಬಂದು. ಇವರಿಂದ ಅನಕ್ಕೆ ಒಳ್ಳೆಯದಾಯಿತಾ ಎಂಬು ಬೇರೆ ಕೋಮುಗಳ ಸಾಮಾನ್ಯಕೀಕರಣವು ಬೆಳೆಯುವುದಾಯಿತು. ಗಂಗಾ ಯಮುನಾ ಸರಸ್ವತಿ ಅವು ಮೊದಲು ಪ್ರತ್ಯೇಕವಾಗಿ ಹರಿದಿದ್ದ ಅವರೆ ಪ್ರಯಾಗದ ಬಳಿ ಸಂಗಮವಾದಂತೆ ಈ ಸಂಯೋಜನವು ಇತಿಹಾಸದ ಅಪೂರ್ವವಾದ ಘಟನೆಯೇ ಆಗಿ ಅದು ನಿಜ ಪ್ರಕೃತಿಯು ಸೃಷ್ಟಿಸಿದ ನವಚೈತನ್ಯವನ್ನು ಬಾಳು ನೋಡುತ್ತಿದೆ ವಾಸ್ತವಾಸೆಗೆ ನವ್ಯ ಸಂಪತ್ತನ್ನು ತಂದಿವೆ ಭಾರತ ಕೂತ ಸಂಸ್ಕೃತಿಗೆ ಕಡಿಮೆಯಿಲ್ಲ ನಾವು ಸಮ್ಮಾನ್ಯ ಭಾರತಕ್ಕೆ ಕೊಟ್ಟಿವು ಇವಕ್ಕೆ ಸೃತಿಯಾ ಭಾರತದ ಸ್ವ ಸಾಂಸ್ಕೃತಿಕ ಭಂಡಾರವನ್ನು ನನಗೆ ಲಭಿಸಿತು ಭಾರತಕ್ಕೆ ಅತ್ಯಗತ್ಯವಾಗಿ ಬೇಕಾಗಿದ್ದ ಸಾಹಸ ಸ್ಫೂರ್ತಿ ಸಂದೇಶವನ್ನು ಮಾನವ ಸಮಾನತ್ವದ ಭಾವೈಕ್ಯವನ್ನು ನಾವು ಕೊಟ್ಟೆವು. ಅಂದಿನ ನಿಮಿಷಗಳಿಗೆ ಇತಿಹಾಸಗಳು ಉರುಳಿದವು. ಇಂದು ಇಸ್ಲಾಂ ಧರ್ಮವು ಹಿಂದೂ ಧರ್ಮದಷ್ಟೇ ಪ್ರಬುದ್ಧವಾಗಿದೆ. ಹಿಂದೂಗಳು ಭಾರತೀಯರೆಂದು ಹೇಳತ್ತ ಹಿಂದೂ ಧರ್ಮವನ್ನು ಅಳಿಸಿಬಿಡಬೇಕೆಂದೇ ಮಾತ್ರವಿಲ್ಲ ಭಾರತೀಯರಾಗಿ ಹೇಳುತ್ತ ಇಸ್ಲಾಂ ಧರ್ಮವನ್ನು ಹೆಚ್ಚಿಸಿಬಿಡಬಹುದು. ಈ ಸಾಮರಸ್ಯವು ಕೂಡ ಸಾಗಿದೆ ಹೇಳಬಹುದು.

೧೯೦೦ ವರ್ಷಗಳ ಈ ಜೀವನದ ಮೇಲೆ ಹಿಂದೂ ಮುಸಲ್ಮಾನರಿಬ್ಬರ ಸಾಮ್ರಾಜ್ಯಗಳು ಎದ್ದು ಕಾಣುತ್ತಿವೆ. ನಾವೀಗ ಒಂದೇ ಜನಾಂಗ. ಸ್ವತಂತ್ರ ರೀತಿಯಲ್ಲಿ ಈ ಸಂಯೋಜನವು ಅಸಾಧ್ಯ. ಇದು ಪ್ರಕೃತಿಯ ಕೆಲಸ. ಅಚ್ಚು ಈಗ ಸಿದ್ಧವಾಗಿದೆ. ನಾವು ಇಷ್ಟಪಡಲಿ ಪಡದಿರಲಿ. ನಾವೀಗ ಬಾರತ ಜನಾಂಗ! ಈ ಏಕಸಾಮ್ಯವನ್ನು ಯಾರೂ ಭೇದಿಸಲಾರರು

ಸಮಾಜಸ್ತ್ರೀಮಿಗಳ ಸಂಚಾರ

ವೀರಶೈವ ಮಹಾಮತಪ್ರಚಾರಕರಾದ ಶ್ರೀಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಜಯಂತೀ ಮಹೋತ್ಸವ ವರ್ಗಳು ಭರತಖಂಡದಲ್ಲಿ ಸರ್ವ ಸೀರೆಬ್ಬರಿಂದಲೂ ಒಳ್ಳೆ ಅಟ್ಟಹಾಸದಿಂದ ನೆರವೇರಿಸಲ್ಪಟ್ಟವಾಸ್ಟೆ! ಆ ಸಮಯ ದಲ್ಲಿ ನಾನಾ ದೇಶಗಳಿಂದ ಅನೇಕ ಪಂಡಿತರನ್ನೂ ನಿಮಿಷಿಗರನ್ನೂ ಒಸಗೂಡಿಕೊಂಡು ಅವರ ಮೂಲಕ ಮಹಾ ಜಾಗ್ರಂ ಲೀಲೆಗಳನ್ನೂ, ವಿಗೀರ್ಯವ ಶಕ್ತ್ಯವನ್ನೂ ಅರಿತು ಕೊಂಡು ಧನ್ಯರಾಗುತ್ತಿರುವದನ್ನು ಸರ್ವರೂ ಬಲ್ಲಂತರ ಆಗಿದ್ದಾರೆ ಈಗಿಗಂತೂ ಈ ಉತ್ಸವಗಳ ವೈಭವಕ್ಕೆ ಮೇರೆಯೇ ಇಲ್ಲದಾಗಿದೆ. ಈ ಕೃತಿಯಲ್ಲಿ ಪಂಡಿತರೂ, ಸ್ವಾಮಿಗಳೂ, ಜಾಕ್ಷರರೂ, ವಕೀಲರೂ, ಸರಕಾರಿ ಆಧಿಕಾರಿಗಳೂ, ಬಾಲರೂ, ತರುಣರೂ, ವೃದ್ಧರೂ, ಬಾಲೆಯರೂ, ಯುವತಿಯರೂ ಒಮ್ಮನಸ್ಸಿನಿಂದಲೂ, ಆನಂದ ದಿಂದಲೂ, ಸ್ವಯಂಸ್ಫೂರ್ತಿಯಿಂದಲೂ ಭಾಗವಹಿಸುತ್ತಿರುವದನ್ನು ನೋಡಿದರ ಯಾವ ಆಸ್ತಿಕನಿಗೆ ಆನಂದಾಶ್ರುಗಳು ಸುರಿಯದೆ ಬಿಟ್ಟಾವು! ಈ ವಿಧವಾದ ಸರ್ವ ಶ್ರೇಯಸ್ಸಿಗೂ ಕಾರಣೀಭೂತವಾದ ವಿಭೂತಿ ಯಾವುದೆಂದು ಹೇಳುವ ಕಾರಣವೇ ಇಲ್ಲ. ಅವರೂ ಆ ಮೂರ್ತಿಯ ಪಾದೋಚ್ಚಾದಿಂದ ತನ್ನ ಮುಖವನ್ನೂ ಪವಿತ್ರವನ್ನಾಗಿ ಮಾಡಿಕೊಳ್ಳಲಿಚ್ಛಿಸುವ ನನ್ನ ಲೇಖನೀ ದೇವಿಯನ್ನಾ ದರೂ ನಾನೇಕೆ ತಡೆಯಲೆಂದೂಹಿಸಿ, ಪಂ॥ ಶ್ರೀ ಕಾಶೀ ನಾಥಶಾಸ್ತ್ರಿಗಳೇ ಕಾರಣರೆಂದು ಮುಕ್ತಕಂಠದಿಂದ ನೇಳಿಬಿಡುವೆನು. ಅಸ್ತು!

ಶ್ರೀಮಂತ ಬಂಡೆಪ್ಪರೇವಣಸಿದ್ಧಪ್ಪ ಝುಂಜೆ ವಕೀಲ, ಸೊಲ್ಲಾಪುರ.

ಶ್ರೀಜಗನ್ಮುರು ರೇಣುಕಭಗವತ್ಪಾದಾಚಾರ್ಯರ ಜಯಂತೀ ಮಹೋತ್ಸವಕ್ಕೋಸ್ಕರ ಸದರೀ ವಕೀಲ ಸಾಹೇಬರು ಕರ್ನಾಟಕದೇಶಕ್ಕೆ ಹೋಗಿದ್ದಾರೆ. ಸದರೀ ವಕೀಲ ಸಾಹೇಬರು ಆಗರ್ಭ ಶ್ರೀಮಂತರೂ, ವಿದ್ವಾಂಸರೂ, ಸುಗುಣಿಗಳೂ, ಸದಾಚಾರನಿಷ್ಠರೂ, ಸನಾತನ ಸತ್ಪ್ರ ಪ್ರಸಾರಕರೂ, ಗುರುಭಕ್ತಿಯುಕ್ತರೂ, ದಯಾಳು ಹೃದಯರೂ ಆಗಿದ್ದಾರೆ. ಇವರು ವಕೀಲರಾದರೂ ಈಗ ನನರಂತೆ ಕಂಡಲ್ಲಿ ತಿಮ್ಮುತ್ತ ತಲೆಯಲ್ಲಿ ಕ್ಯಾಪನ್ನು ಬೆಳೆಯಿಸಿ ಸ್ವೇಚ್ಛಾಚಾರಪದಿಂದ ವರ್ತಿಸುವದಿಲ್ಲ. ಹಸಿ ಬಿಸಿ ಜವರನ್ನು ಬಿಸಿ ಬಿಸಿ ಉಪದೇಶಗಳಿಂದ ಸನ್ಮಾರ್ಗಗಾಮಿ ಗಳಾಗುವ ಹಾಗೆ ಮಾಡುತ್ತಿರುವರು. ಇದು ಪರಮ ವ್ಯಾಕ್ಯ ವಿಷಯವು. ಸದರಿ ವಕೀಲರು ಶ್ರೀಮಂತರಾದರೂ ನಿಗರ್ವಿಗಳಾಗಿದ್ದಾರೆ. " ಕಾವ್ಯತಾತ್ಪರ್ಯನಿರ್ಣಯದೇನಿ ಶಾಲೋ ಗಚ್ಛತಿ ಧೀಮತಾಂ " ಎಂಬಂತೆ ಯಾವಾ ಗಲೂ ವೇದಾಂತ ವಿಚಾರದಲ್ಲಿಯೂ, ಧರ್ಮೂಚರಣೆಗಳ ಲ್ಲಿಯೂ, ಸಮಾಜೋನ್ನತಿಯಲ್ಲಿಯೂ ಕಾಲವನ್ನು ಕಳೆ ಯುತ್ತಿರುವರು. ಮೊನ್ನೆ ಇವರು ತಮ್ಮ ಪುತ್ರನ ಏಷಾಣ ಸಮಾರಂಭ ಕಾಲದಲ್ಲಿ ಲಕ್ಷಂ ರೂಪಾಯಿಗಳನ್ನೆಲ್ಲ ಎಷ್ಟೋ ಸಂಸ್ಥೆಗಳಿಗೆ ಉದಾರಾಂತಃಕರಣದಿಂದರ್ಪಿಸಿದ ವಿಷಯವು ಸರ್ವರಲ್ಲಿಯೂ ವಿದಿತವಾಸ್ಟೇ! ಆಧುನಿಕರಲ್ಲಿ ವಿದ್ಯಾಪಂತ ರಾದವರು ಬಹುಶಃ ಗುರುಭಕ್ತಿ ಕ್ಷೂನ್ಯರಾಗಿರುತ್ತಾರೆ. ನಮ್ಮವರು ಹಾಗಲ್ಲ ಗುರುಭಕ್ತ್ಯಾಗ್ರಗಣ್ಯರಾಗಿದ್ದಾರೆ. ಯಾರಾದರೂ ಪತ್ರಿಕೆಗಳಲ್ಲಿ ಗುರುನಿಂದಾತ್ಮಕ ಲೇಖನ ಗಳನ್ನು ಪ್ರಕಟಿಸಿದರೆ, ಅದಕ್ಕೆ ತರ್ತ್ವಪೂರ್ಣವೇ ಉತ್ತರವನ್ನೀ ಯುವರು. ಇವರು ನಮ್ಮ ವೀರಶೈವರಲ್ಲಿ ಮಹಾದಾಢ್ಯ ಭಾಗದವರಲ್ಲಿಯೆ ಲೇಖಕರಲ್ಲಿ ಪ್ರಮುಖ ಸ್ಥಾನವನ್ನು ಪಡೆದಿ ದ್ದಾರೆ ಇವರು ಕೇಸರಿ, ಜ್ಞಾನಸಕ್ತಿಕಾಶ, ಸವಾಕಾಲ, ತ್ರಿಕಾಶ. ವೀರಶೈವ ಸಂಜೀವನಿ, ವೀರಶೈವಸಜ್ಜನ ಮೊದಲಾದ ಪತ್ರಿಕೆಗಳಲ್ಲಿ ತಮ್ಮ ಮನೋಗತಾಭಿಪ್ರಾ ಯವನ್ನು ಪ್ರಕಟಿಸುತ್ತಾರೆ. ಇವರಿಗೆ ಮರಾಠಿ, ಇಂಗ್ಲಿಷ್ ಹಿಂದೀ ಭಾಷಾಜ್ಞಾನವು ಚೆನ್ನಾಗಿರುತ್ತದೆ. ಒಟ್ಟಿನ ಮೇಲೆ ಹೇಳುವುದೇನಂದರೆ ಇಂತಹ ವಕೀಲರು ದೊರೆ ಯುವುದು ಈಗಿನ ಕಾಲದಲ್ಲಿ ಬಹು ಕಷ್ಟವು. ಇಂತಹ ಸಜ್ಜನರು ಈಗ ಕರ್ನಾಟಕ ಪ್ರಾಂತದಲ್ಲಿ ಸಂಚಾರವನ್ನಿ ಟ್ಟಿದ್ದಾರೆ. ಈ ಸಮಯವನ್ನು ಯಾರೂ ಕಳೆದುಕೊಳ್ಳದೆ ಲಾಭವನ್ನು ಸಂಪಾದಿಸಿಕೊಳ್ಳಬೇಕೆಂದು ನಮ್ಮ ವರ್ಗದ ಪರವಲ್ಲಿ ಕೋರಿಕೆ.

ಸೌ॥ ಭಾಗೀರಥೀದೇವಿ ಕಟ್ಟಾಪೆ, ಸೊಲ್ಲಾಪುರ.

ಈ ಮಾತೃವಿನಿಂಧ ಮಾತೃವು ದೊರೆಯುವುದು ಬಹುಶಃ ಶಕ್ಯವೇ ಇಲ್ಲ. ಇವರು ಶ್ರೀ ವರ್ಗದ ಉನ್ನತಿ ಗಾಗಿ ವಿಶ್ವಪ್ರಯತ್ನ ಪತಿತ್ವಲಿದ್ದಾರೆ. ಇವರಲ್ಲಿಯ ಶಾಂತಿ, ದಾಂತಿ, ನಯ ಭಯಾದಿ ಸುಗುಣಗಳು ಅನು ಕರಣೀಯವಾಗಿವೆ. ಇವರು ಕನ್ನಡದಲ್ಲಿ ಒಳ್ಳೆ ಪಾಂಡಿ ತ್ಯವನ್ನು ಸಂಪಾದಿಸಿದ್ದಾರೆ. ಮರಾಠಿ, ಇಂಗ್ಲೀಷ್, ತೆಲಗು ಭಾಷಾಜ್ಞಾನವನ್ನು ಸಹ ಸಂಪಾದಿಸಿದ್ದಾರೆ. ಇವರ ಭಾಷಣಶೈಲಿಯೇ ಬಹು ವಿಚಿತ್ರವಾಗಿದೆ- ತಾಯಿಯು ತನ್ನ ಮುಕ್ಕಳಿಗೆ ಯಾವುವಾದರೊಂದು ಹೊಸ ವಸ್ತುವಿನ ಜ್ಞಾನವನ್ನು ಮಾಡಿಕೊಡುವದಿವರೆದೆ, ಹೇಗೆ ಸರಳ ಭಾ ಷೆಯಲ್ಲಿ ತಿಳಿಸುವಳೋ ಹಾಗೆಯೇ ಈ ಮಾತೃವು ಕೂಡ ಎಂತಹ ಗಹನ ವಿಷಯಗಳಿದ್ದರೂ ಅವುಗಳನ್ನು ಅತ್ಯಂತ ಸುಲಭ ಭಾಷೆಯಲ್ಲಿ ತಿಳಿಸುವರು. ಇವರಲ್ಲಿಯ ಗುರುಭ ಕ್ತಿಯು ಅಪದ್ಯಕರವಾದುದು. ಈರೀತಿ ವಿದ್ಯಾವತಿಯಾ ದರೂ, ಎಳ್ಳಷ್ಟೂ ಗರ್ವವಿಲ್ಲ ಇವರನ್ನು ಕಂಡ ಮಾತ್ರ ದಿಂದ ಇವರು ವಿದ್ಯಾವತಿಯರೆಂದು ತೋರುವದಿಲ್ಲ, ಭಾಷಣ, ಪುರಾಣ, ಕೀರ್ತನ ಲೇಖನಾದಿಗಳಲ್ಲಿ ಮಾತ್ರ ಸರ್ವರೂ ಬೆರಳು ಕಚ್ಚಿಕೊಳ್ಳುವೆ ಇರುವದಿಲ್ಲ.

ಈ ತಾಯಿಯವರು ಈಗೊಂದೈ ಕರ್ನಾಟಕ ಸಂಚಾ ರದಲ್ಲಿದ್ದಾಗ್ಗೆ ಒರ್ವ ವಿದ್ಯಾವತಿಯರು ಇವರ ಭೆಟ್ಟಿಗೆ ಬಂದು ' ಸೊಲ್ಲಾಪುರದಿಂದ ಭಾಗೀರಥೀಬಾಯಿಯವರು ಬಂದಿದ್ದಾರಂತೆ, ಎಲ್ಲಿದ್ದಾರೆಂದು ಇವರಲ್ಲೇ ಕೇಳಿದರಂತೆ! ಈ ಮಾತೃಶ್ರೀಯವರು ಮೌನವನ್ನು ತಾಳಿದರು. ಆಗ ಇವರು ಇದ್ದ ಮನೆಯವರು ಇವರೇ ನೀವು ಕೇಳುವ ತಾಯಿಯವರೆಂದು ಹೇಳಲು, ಆಗ ಅವರು ತಮ್ಮೊಳಗೇ ನಾಚಿಕೊಂಡರು. ಅವರು ಭಾಗೀರಥೀಬಾಯಿಯವರೊ ದನೆ ಅಡಿಗೆ ಮಾಡಲಿಕ್ಕೆ ಬಂದ ಅಡಿಗೆಯ ಹೆಂಗಸಿರ ಬಹುದೆಂದು ತಿಳಿದಿದ್ದರಂತೆ! ಪಾಪ! ಅವರೇನು ಬಲ್ಲರು! ಈ ಭಾಗೀರಥೀಬಾಯಿಯವರು ಜಗತ್ತಿಗೇ ಉಪದೇಶಾ ನ್ಯತರೂಪವಾದ ಅಡಿಗೆಯನ್ನು ಮಾಡಿ ಶೃಪ್ತಿಪಡಿಸುವ ವರಿದ್ದಾರೆಂಬುದನ್ನು. ಅಸ್ತು! ಕೆಲ ಶ್ರೀಯರು ಸ್ವಲ್ಪ ವಿದ್ಯಾವತಿಯರಾದರೆ ಆವರಿಗೆ ಪಾಕಶಾಸ್ತ್ರವಂತೂ ಬಹು ದೂರ ಬರುವುದಿಲ್ಲ. ತಮ್ಮ ಪತಿಯನ್ನು ಕೇವಲ ಸಾಕಿದ ನಾಯಿಯಂತೆ ತಿಳಿಯುವ ಹೊಸ ಬಗೆಯ ವಿದ್ಯಾವತಿ ಯರೂ ಹೊರಟಿದ್ದಾರೆ. ಪರಂತು ನಮ್ಮ ತಾಯಿಯ ವರು ಅಂತಹವರಲ್ಲ. ಪತಿಯ ಆಜ್ಞೆಯನ್ನು ಏಷ್ಟೂ ಮೀರುವುದಿಲ್ಲ. ಅವರ ಆಜ್ಞೆಯಾದರೇನೇ ಎಲ್ಲಿಗಾದರೂ ಭಾಷಣಕ್ಕೆ ಹೋಗುವರು. ಇಲ್ಲವಾದರೆ ಎಂತಹ ಮಹತ್ವ ದಕಾರ್ಯವಿದ್ದರೂ ಹೋಗುವುದಿಲ್ಲ. ಇವರಲ್ಲಿ ಪತಿಭಕ್ತಿಯು ಅನ್ಯಾದೃಶವಾಗಿರುವದು. ಈ ವೃತ್ತಿಯನ್ನು ಮಾತ್ರ ಪ್ರತಿಯೊಬ್ಬ ಸ್ತ್ರೀಯೂ ಅತ್ಯವಶ್ಯಕವಾಗಿ ಕಲಿಯಬೇ ಕೆಂದು ಎಲ್ಲಾ ಮಾತೃವರ್ಗಕ್ಕೂ ನನ್ನ ಆಗ್ರಹದ ಸೂಚನೆಯು.

ಈ ವರ್ಷದ ಶ್ರೀಜಗದ್ಗುರು ರೇಣುಕಭಗವತ್ಪಾದರ ಜಯಂತ್ಯುತ್ಸವಕ್ಕೆ ಕರ್ನಾಟಕದೇಶದವರು ಈ ಮಾತೃವಿನನ್ನು ಬರಮಾಡಿಕೊಂಡಿದ್ದಾರೆ. ಇವರು ತಿಪಟೂರು ಮತ್ತು ಬೆಳವಣಿಕೆ (ಧಾರವಾಡ) ಯವರ ಆಮಂತ್ರಣಮೇರೆಗೆ ಹೋಗುವವರಿದ್ದಾರೆ. ಆಯಾ ಭಾಗ ದವರು ಈ ಸುಸಮಯವನ್ನು ಕಳೆದುಕೊಳ್ಳದೆ, ಲೌಕಿಕ, ಪಾರಮಾರ್ಥಿಕ, ಮಾರ್ಗದ ಸುಖವನ್ನು ಸಂಪಾದಿಸ ಬೇಕೆಂದು ನನಿಸಿಯ ಪ್ರಾರ್ಥನೆ.

ಸದರಿ ವಕೀಲ ಸಾಹೇಬರೂ, ಸದರಿ ಮಾತೃಶ್ರೀಯ ವರೂ, ಗೃಹಸ್ಥರಾದರೂ ತಮ್ಮ ಗೃಹಕೃತ್ಯಗಳನ್ನು ಬದಿ ಗಿಟ್ಟು, ಸಮಾಜೋದ್ಧಾರಕ್ಕಾಗಿ ಸಂಚರಿಸುತ್ತಿದ್ದಾರೆ. ಆವರೆ ಸಮಾಜೋದ್ಧಾರಕ್ಕೋಸ್ಕರವೇ ಪಟ್ಟೆಬದ್ಧರಾದ, ಪಟ್ಟಾಧ್ಯಕ್ಷ ಚರಮೂರ್ತಿಸ್ವಾಮಿಗಳೇ! ಇವರನ್ನು ನೋಡಿ ನಿಮ್ಮ ನಿತ್ಯಾನನವಾದ ಮೂಲೆಯನ್ನು ಬಿಡುವಿರಾ?

ಒರ್ವ ಸಮಾಜಸ್ತ್ರೀಮಿ, ಸೊಲ್ಲಾಪುರ.

ಶ್ರೀಕೇದಾರೇಶ್ವರನ ಕವಾಟೋದ್ಘಾಟನ.

ಪ್ರಾಚೀನ ಪದ್ಧತಿಯಂತೆ ಮಹಾತಿವರಾತ್ರಿಯ ದಿವಸ ಶ್ರೀ ಕೇದಾರೇಶ್ವರನ ಕವಾಟ ಪೂಜೆಯು ವೈದಿಕ ಸಂಪ್ರ ದಾಯಕ್ಕನುಸರಿಸಿ ಮಂಗಲ ವಾದ್ಯದೊಡನೆ ವಿಶೇಷ ವೈಭವದಿಂದ ನೆರವೇರಿತು. ಫಾಲ್ಗುಣ ಶು॥ ೩ (ತಾ॥ ೧೦-೩-೧೯೪೦) ದಿವಸ ಅವ್ಯಕ್ತ ವೇಳೆಯಲ್ಲಿ ಕವಾ ಟೋದ್ಘಾಟನ ಸಮಾರಂಭವು ನೆರವೇರುವುದು. ಈ ವರ್ಷ ಮಂಜಿನಗಡ್ಡೆಯು ವಿಶೇಷವಾಗಿ ಹೆಪ್ಪುಗೊಂಡಿ ರುವುದಿಲ್ಲ. ವಾರ್ಗವು ಸರಿಯಾಗಿದೆ. ಸಾಮಾನ್ಯರಿಗು ಸರಿಯಾದ ಧಾರಣಿಯಲ್ಲಿವೆ. ಯಾತ್ರಿಕರು ಈ ಸಮ ಯಕ್ಕೆ ಆಗಮಿಸಿ, ಮಹಾಜ್ಯೋತಿಯ ದರ್ಶನವನ್ನು ಮಾಡಿಕೊಂಡು ಶ್ರೀ ಕೇದಾರೇಶ್ವರನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರಿಕೆ.

ಮ್ಯಾನೇಜರ್
ಶ್ರೀ ಕೇದಾರನಾಥಮಂದಿರ, ಹಿಮಾಲಯ.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಶಕ್ತಿಯಂಥಾ ಗುರುವರ್ಗದ ಮತಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿಮ್ಮ, ೮ ಮಹಾಧಿಕಾರಿಗಳು ಇದುವರೆಗೆಲ್ಲಾ ೫೪ ವರ್ಷಗಳಿಗ್ಗೇ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯೋಚನ್ನು ಏಳನು ಗ್ರಹಣ ಬರಿಮತ್ತೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬರುವರು ಈ ಅತ್ಯವಶ್ಯಕವಾದ ಅರೇ ಮತದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ. ಇವನ್ನು ಪೂರೈಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದೆಲ್ಲಿ ಬರೆಯುವ ವಿಧಾನಗಳ ಸೂಚನೆಯನ್ನು ಚೆನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಿಕ್ಷಿಸಿದಂತೆ ವಿಷಯವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಇಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನು ಹಂಚಿಕೊಳಿಸುವುದಿಲ್ಲ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ.

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ನ್ಯೆಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭಕ್ರಮದಲ್ಲಿ ದೊರೆಯುವವು.

ಔಷಧಿ ಹೆಸರು	ತೊಲಿ	ಮೂಲ್ಯ
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ನೆಂ ನಂಬರ್	೧	೮—೦—೦
ರಸಸಿಂಧೂರ	೧	೨—೦—೦
ನುಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೮—೦
ಲೋಹಭಸ್ಮ	೧	೦—೧೨—೦
ವಂಗಭಸ್ಮ	೧	೦—೮—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೮—೦
ಕಂಚಿನಭಸ್ಮ	೧	೦—೮—೦
ಜಪ್ಪುಭಸ್ಮ	೧	೦—೮—೦
ಮಂಡೂರಭಸ್ಮ	೧	೦—೮—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೨—೦
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವರೋಗಗಳಿಗೆ ದೊರೆಯುವುವು.

ವಿಳಾಸ—ಮ್ಯಾನೇಜರ,
ಆಯುರ್ವೇದ ರಸಾಯನಶಾಲಾ,
ಪೋಸ್ಟ್ ಓಮಿಮಟ, ಜಿಲ್ಲಾ, ಗಢವಾಲ್ ಯು. ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಸೋಲ್ಕಂಡ ಗ್ರಂಥವು ವೇ|| ಬಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯಾಸ್ಫೂರ್ತಿಶಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಆನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ. ಆದರೆ ಮುದ್ರಾಸಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ. ಆನೇಕರು ಆ ಅಶುದ್ಧಮಂತ್ರಗಳಷ್ಟೇ ಪಠಿಸುತ್ತಿರುವರು. ಇದು ಅತ್ಯಂತ ಸ್ಯಸನಕರವಾದ ವಿಷಯವಾಗಿದೆ. ಅಲ್ಲದೆ ನೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಬೇಕಲ್ಲದೆ ಸ್ವರಕೂನ್ಯವಾಗಿ ಉಚ್ಚರಿಸುವಾರದಷ್ಟೆ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪವಮಾಭಾಗವೂ ಮಾಡಲ್ಪಟ್ಟಿಲ್ಲ. ಈ ಶಿವಪೂಜಾವಿಧಿಯಲ್ಲಿ ಈ ದೊರತೆಯು ದೂರಮಾಡಲ್ಪಟ್ಟಿದೆ. ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಯೆಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಸಂಚಿಕೆಗೆ ಮಹೋಪಕಾರವನ್ನು ಮಾಡಿದ್ದಾರೆ ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ. ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥದ ಮಹತ್ವವು ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕವಚ, ಪಾರ್ವತೀದೇವೀನಾಮಾವಳಿ, ನೀರಥದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ, ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಿಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇವರೆಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದೆ ಕೋರಿಕೆ. **ಬೆಲೆ ೧೨ ಆಣೆ.** ವಿ. ಪಿ. ಚಾರ್ಜು ಪ್ರತ್ಯೇಕ.

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ನ್ಯೆಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನದಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾಷಾನಂದ ಶಿವಾಚಾರ್ಯರೆಂಬ ಪ್ರಾಚೀನಾಚಾರ್ಯರು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಸ್ಪಷ್ಟವಾದಿ ಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇವರ ರಹಸ್ಯವನ್ನು ತಿಳಿಯಲು ಪಂಡಿತಜನಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವು ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಶಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೬೮ ಪುಟಗಳಿಂದ ಕೂಡಿದ್ದರೂ ಇವಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಕ್ಕಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ. ಇಂಥ ದೊಡ್ಡ ಸಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾರಾಜ್ಞುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತರುವರಲ್ಲದೆ, ಈ ಗ್ರಂಥದಲ್ಲಿ ನಿರೂಪಿಸಲ್ಪಟ್ಟಿರುವುದೆಲ್ಲವೂ ಸತ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿರುವರು. ಇವರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿಮತೊಂಡು ಧನ್ಯರಾಗಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೪೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದ ವಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತವಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿಕೊಂಡೇ ತೀರಬೇಕು. ಈ ಮಹಾಗ್ರಂಥದ ಬೆಲೆ ೮ ರೂಪಾಯಿಗಳು. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೬ ರೂ. ೫ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ನ್ಯೆಸೂರು.**

ಮನಸೋಹರವಾದ ಫೋಟೋಗಳು.

ಶ್ರೀ ವೀರಾಚಾರ್ಯರ ಒಂಭತ್ತು ಅನ್ನುತರೆಯಿಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ೨—೦

ಶ್ರೀ ರೇಣುಕಾಚಾರ್ಯರು ಲೋಕಕಲ್ಯಾಣಾರ್ಥವಾಗಿ ಅಗ್ನ್ಯಾ ವಹಿಸಿ, ಪ್ಯಾಸ, ಸಾಹಿತ್ಯ ಪೂರ್ಣಾಸ ಮಹಸಿಂಹಾಸನಾಧಿಪತಿಗಳಾಗಿ ವಿರಾಜಿಸುವ ಫೋಟೋ ಸೈಜು ೧೧×೧೪ ಬೆಲೆ ೦—೧—೬

ಸದ್ಭಕ್ತ ಶಿರೋಮಣಿಗಳಾದ ಶ್ರೀ ಅಲಗೂರು ಮಲ್ಲಾರಿಗೌಡರು ಅವರು ಆಚಾರ್ಯರು ಒಂಬತ್ತಿಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ರಿಂಗಾಸನದ ಫೋಟೋ ಸೈಜು ೧೪×೧೦ ಬೆಲೆ ೧೫ ೦—೧—೬

ಶ್ರೀ ಜಗದ್ಗುರು ಪಂಚಾಚಾರ್ಯರ ರಿಂಗಾಸನದ ಫೋಟೋ ೦×೪ ಬೆಲೆ ೧೫ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರ ಭೂಗರ್ಭದಿಂದ ಅವತರಿಸಿರುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ಮಿತ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೨—೦—೯

ಶ್ರೀ ರೇಣುಕಾಚಾರ್ಯರು ವಿಧೇಯರಾಗಿ ಸ್ವಾರ್ಥಾನುಸಾರವಾಗಿ ಏಕಕಾಲ ವಲ್ಲಿಯೇ ಮೂರುಸೋಟಿ ಗುರುರೂಪವನ್ನು ಧಾರಣೆಮಾಡಿ ಮೂರು ಸೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧೫ ೦—೦—೯

ಶ್ರೀ ಶ್ರೀ ಶ್ರೀ ಕಾಶೀಪೀಠಾರೂಢರಾದ ಶ್ರೀ ಶಾಶ್ವತಾಚಾರ್ಯರಿಂದ ಪೂಜ್ಯಮಾದಲಿಂಗೇಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀ ಶ್ರೀ ಶ್ರೀ ಕಾಶೀಪೀಠಾರೂಢರಾದ ಶ್ರೀ ಜಗದ್ಗುರು ಪಂಚಾಚಾರ್ಯರ ಸಿಂಹಾಸನಾರೂಢ ಫೋಟೋ ೦—೦—೯

ಶ್ರೀಮದ್ಭಾಷ್ಯಕಾರರಾದ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಫೋಟೋ ೦—೦—೯

ಶ್ರೀಮದ್ಭಾಷ್ಯಕಾರರಾದ ಶ್ರೀ ಜಗದ್ಗುರು ಶಿವಾನಂದಾಚಾರ್ಯ ಸ್ವಾಮಿಗಳವರ ಫೋಟೋ ೦—೦—೯

ಶ್ರೀಮದ್ಭಾಷ್ಯಕಾರ ಜಗದ್ಗುರು ಸ್ಮರಣೆಯಲ್ಲಿ ಶ್ರೀ ಕಾ ನಾಗಭೂಷಣಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಶ್ರೀಪತಿಶಾಸ್ತ್ರಿಗಳು ಫೋಟೋ ಬೆಲೆ ೧೫ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಅತ್ಯಂತ ಸುಂದರವಾದ ಫೋಟೋ ೧೫ ೦—೦—೯

ಶ್ರೀ ಜಗದ್ಗುರು ಪಂಚಾಚಾರ್ಯರ ಅತ್ಯಂತ ಪ್ರಾಚೀನ ಕಲ್ಪಿಸಿದ ಸುಂದರ ಫೋಟೋ ೧೫ ೦—೦—೯

ಶ್ರೀ ಜಗದ್ಗುರು ಕೇದಾರ ಪಾಸಣದ ಅತ್ಯಂತ ಸುಂದರವಾದ ಕೇತ್ರದ ಫೋಟೋ ೦—೦—೯

ಶಿವಾಚಾರ್ಯರ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೯

ಶ್ರೀ ಪಂಚಾಚಾರ್ಯ ಜಗದ್ಗುರುಗಳ ಸ್ಮರಣೆಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ವಿರಾಜಿಸುತ್ತಿರುವ ಫೋಟೋ ೮—೦—೯

ಲೋಕಕಲ್ಯಾಣಾರ್ಥವಾಗಿ ಶಿವಪ್ರತಿಷ್ಠೆ ಮಾಡಿರುವ ಜಗದ್ಗುರುಗಳ ೪ ಪ್ರತಿಷ್ಠೆಗಳ ಫೋಟೋ ೦—೦—೯

೪ ಮೇಲ್ಪಟ್ಟು ಮೇಲೆ ತಿಳಿಸಿರುವ ಪ್ರಕಾರ ೧೦ ರೂ ಗೆ ೧ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಬಿ. ಜಿ. ಯವರ

ಸುಗಂಧ ನಶ್ಯದಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾನಿರಾರುಗಳಾಗಿ, ಯೋಗ್ಯತಾಪತ್ರಗಳನ್ನು ಕೊಟ್ಟಿರುವುದು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ನ್ಪಸ್ಯವಾಗುವ ವ್ಯಾಧಿಗಳು ಯಾವವೆಂದರೆ —ಸೀನಶಿ, ಒಂಟಿ ತಲೆನೋವು, ತಲೆಯಲ್ಲಿಯ ಯೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲಮೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವರೆಗೆ ಕಂಠಕ್ಕೆ ಮೆಲ್ಲುಟ್ಟು ೯೬ ವ್ಯಾಧಿಗಳನ್ನು ಸ್ಪಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಸಹ ಹೆಚ್ಚುಮಾಡುತ್ತವೆ ಮೂರುಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು ಇದನ್ನು ಅನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ. ಬುಡ್ಡಿ ಒಂದಕ್ಕೆ ೪ ಆಣೆ. ಡಜನ್ ಒಂದಕ್ಕೆ ಕ್ರಯ ರೂ ೨-೮-೦ ವಿ ಪಿ ೪ ಆಣೆ

[Registered Trade Mark]

ನಿಮ್ಮ ಅಡ್ರೆಸ್ಸನ್ನು ಏಳಿಯುವಂತೆ ಬರೆಯಿರಿ

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,
[16] ಪೋ ಬಾ ೫೧೦, ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಾಲು (ತೆಲುಗು ಅನುವೃತ್ತಿ)	೧ ಆಣೆ
ಸತ್ಯಾಸ್ತ್ರವಿವೇಕ (ಸಂಸ್ಕೃತ ಅನುವೃತ್ತಿ ಸಂಸ್ಕೃತ)	೧ ಆಣೆ
ಪಂಚಲಿಂಗತತ್ವ ಪ್ರಕಾಶಿಕಾ (ಸಂಸ್ಕೃತ ಅನುವೃತ್ತಿ)	೧ ಆಣೆ
ಶ್ರೀಸಿದ್ಧಾಂತಾಚಾರ್ಯ ಸಂಗ್ರಹಸಿದ್ಧಾಂತ (ಸಂಸ್ಕೃತ ಅನುವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಧರ್ಮಪದ್ಧತಿ (ಸಂಸ್ಕೃತ ಅನುವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಸಂಕ್ಷಿಪ್ತ ಚರಿತ್ರೆ	೨ ಆಣೆ
ಬಸವಾದಿ ಶರಣ್ಯರ ಜೀವನ ಚರಿತ್ರೆ	೨ ಆಣೆ
ಶ್ರೀರೇಣುಕಾಚಾರ್ಯ ಚರಿತ್ರೆ (ತೆಲುಗು ಅನುವೃತ್ತಿ)	೨ ಆಣೆ
ಪಂಚಾಚಾರ್ಯಪ್ರಶ್ನೋತ್ತರ	೨ ಆಣೆ
ಶ್ರೀಗುರುತತ್ತ್ವ ದರ್ಪಣ	೨ ಆಣೆ
ಶ್ರೀಗುರುಮಹಿಷಿಕಾಚಾರ್ಯ ಸಂಗ್ರಹ	೨ ಆಣೆ
ವೀರಶೈವಸಂಗ್ರಹ	೩ ಆಣೆ
ವೀರಶೈವಮತಪ್ರವೇಶ	೩ ಆಣೆ
ವೀರಶೈವಾಚಾರವಿಧಿ (ತೆಲುಗು ಅನುವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (ತೆಲುಗು ಅನುವೃತ್ತಿ)	೪ ಆಣೆ
ಶ್ರೀಪತಿಶಂಕರಾಧ್ವರ ಕಾಶೀಯಾತ್ರೆ	೪ ಆಣೆ
ಸತ್ಯಾಸ್ತ್ರವಿವೇಚಕತತ್ತ್ವ ಶುದ್ಧೀಕರಣ (ತೆಲುಗು ಅನುವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಪ್ರಮಾಣಾತ್ಮ ಭಾಗ್ಯಸ್ಥಾನ)	೬ ಆಣೆ
ವೀರಶೈವಮಹತ್ವರ	೮ ಆಣೆ
ಬಸವಾಧ್ಯಾಂತವಿವೇಕರ (ತೆಲುಗು ಅನುವೃತ್ತಿ)	೮ ಆಣೆ
ಶಿವಾದ್ವೈತವಿವರಣ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳಿಂದ ಬರೆಯಲ್ಪಟ್ಟಿರುವ ಗ್ರಂಥಗಳು	
ವೈದಿಕಶಿವಪೂಜಾವಿಧಿ (ಸ್ವಯಂಸ್ಪಷ್ಟವಾದ ಅತ್ಯಂತ ಸರಳವಾದ ಸಂಸ್ಕೃತ ಗದ್ಯರೂಪ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಯೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (ತೆಲುಗು ಅನುವೃತ್ತಿ) ..	೧೩ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೧ ರೂ
ಸಚಿತ್ರ ರೇಣುಕಚರಿತ್ರೆ (ತೆಲುಗು ಅನುವೃತ್ತಿ)	೧ ರೂ.
ವೀರಶೈವವರತ್ನ (ತೆಲುಗು ಅನುವೃತ್ತಿ, ೪೦ಮಾಸ್ತರ್ಸದ ಫೋಟೋಗಳುಸಹಿತ) ..	೧| ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೧ ರೂ
ಕರ್ಮೋಪಸಿನಿತ್ (ಕನ್ನಡ ಟೀಕಾಸಹಿತ) . ..	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ..	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೫೦೦ ಪುಟ) .	೮ ರೂ.
A brief life sketch of Pandit Sri Kashinatha Shastriji (*English*)	**4 As.**
The Philosophical Aspect of Virasaivism (*English*) ..	**8 As.**
Speeches by Pandit Shri Kashinatha Shastriji (*English*)	**12 As.**
ವೀರಾಗಮರತ್ನ (ಮರಾಠಿ)	**೧ ರೂ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	**೧ ರೂ.**
ವೀರಶೈವೆತಿಹಾಸರ (ಸಂಸ್ಕೃತ) ..	**೧ ರೂ**
ನವಿಕೇಶ್ವರಕಾರಿಕಾ (ಸಂಸ್ಕೃತ) .	**೨ ಆಣೆ.**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	**೩ ರೂ.**

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧೦ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸರ್ಯೂಟಿಂಗ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ನೇಕಾ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯೋ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಸಂಚಾಸ್ಯತೀವಾಧಿಸರ್ । ಪಂಚಕ್ಲೇಪವಿನಿವಾರಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪ್ರತಿ ಮಾನವನೂ ಅನೇಕ ಕಾರ್ಯಗಳನ್ನು ನಡೆಯು ಸುತ್ತಿರುವನಲ್ಲೆ! ಮಾನವನು ಮಾಡುವ ಕಾರ್ಯದಲ್ಲಿ ಇದು ಯೋಗ್ಯ, ಇದು ಅಯೋಗ್ಯವೆಂಬುದನ್ನು ಮನಸ್ಸಿಗೆ ತಂದುಕೊಳ್ಳದೆ ಮಾಡುವ ಯಾವ ಕಾರ್ಯವಾಗಲಿ ನಿಷ್ಫಲವು. ಇದು ಅಯೋಗ್ಯವೆಂಬ ಭಾವವು ಮಾಡುವವನಿಗೆ ಮೊದಲು ತೋರುವುದಾದರೆ ಅಂತಹ ಕಾರ್ಯವನ್ನು ಯಾರೂ ಕೈಗೊಳ್ಳುವುದಿಲ್ಲ ಮೊದಲು ಯೋಚಿಸದೆ ಹಾಗೆಯೇ ಯೋಚಿಸಿದ ವಿಷಯಗಳನ್ನು ಕಾರ್ಯದಲ್ಲಿ ಮಾಡಿ ತೋರಿಸಬೇಕು ಯೋಜನೆಗೂ ಆಕಾರಕ್ಕೂ ಸಂಬಂಧವಿದ್ದು ಫಲವುಂಟಾಗುವುದಾದರೆ, ಕೈಕೊಂಡ ಕಾರ್ಯವು ಯೋಗ್ಯವೇಬ ಭಾವನೆಯುಂಟಾಗುವುದು ಇಂತಹ ಭಾವನೆಗೆ ಮನಸ್ಸೇ ಮುಖ್ಯ ಕಾರಣ. ಮನಸ್ಸಿಗೆ ಒಪ್ಪಿ ನಡೆಸುವ ಕಾರ್ಯವು ಮನಸ್ಸಾಕ್ಷಿಕವೆಂದು ಹೇಳಿಸಿಕೊಳ್ಳುವುದು

ಮನಸ್ಸಾಕ್ಷಿ ಎಂಬುದು ಸರ್ವ ಮಾನವರಿಗೆ ಸಮಾನ ವಾಗಿರುವುದು. ಮನಸ್ಸಾಕ್ಷಿಗೆ ಒಪ್ಪಿ ವರ್ತಿಸುವ ಕಾರ್ಯವು ತನ್ನ ಸ್ವಾತಂತ್ರ್ಯದಲ್ಲಿರುವುದು. ಇಂತಹ ಮನಸ್ಸು

[ಒಳಿಯ ಪುಟವನ್ನು ನೋಡಿ]

ಶ್ರೀಮಜ್ಜಗದ್ಗುರುಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಶುಕ್ರವಾರ. ವೈಶಾಖ ಶು॥ ೫ ಭಾನುವಾರ.



ಯಾವ ಮಹಾತ್ಮರು ಭರತಖಂಡವಲ್ಲಿರತರಕ್ಕೆ ಸಮಸ್ತಪವಿತ್ರಕ್ಷೇತ್ರ ಮಸ್ತಕಮಣೀಭೂತರಗಳಾದ ಶ್ರೀಸಿಮನಶ್ಯೇವಾರ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀರಾಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಂದವರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೩ ಶುಕ್ರವಾರ ತಾ॥ ೧೦-೫-೧೯೪೦** ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೫ ಭಾನುವಾರ ತಾ॥ ೧೨-೫-೧೯೪೦** ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡವಲ್ಲಿರುವ ಲಕ್ಷೋಪಲಕ್ಷ ಜಸ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉಚ್ಚಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಯುದ್ಧವಾರ್ತೆ.

ಜರ್ಮನರ ಸಿದ್ಧತೆ

ಜರ್ಮನಿಯು ಬಾಲ್ಟಿಕ್ ಸಮುದ್ರತೀರದಲ್ಲಿ ಆಕಾಶ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಸೈನಿಕರು ಶಸ್ತ್ರಾಸ್ತ್ರಗಳೊಡನೆ ಬಂದು ಸೇರುತ್ತಿದ್ದಾರೆ.

ಜರ್ಮನರು ಹಿಮ್ಮೆಟ್ಟಿದರು!

ನಾರ್ವೆಯ ಸೈನಿಕರು ಕಳೆದ 30 ನೆಯ ತಾರೀಖಿನ ದಿವಸ ಕೋರಾನ್ ನಗರವನ್ನು ಪ್ರವೇಶಿಸಿದರೆಂದೂ, ಅಲ್ಲಿದ್ದ ಜರ್ಮನ್ ಸೈನಿಕರು ಹಿಂದಕ್ಕೆ ಸರಿದು ಬೇರೆ ಕಡೆಗೆ ಹೋದರೆಂದೂ ನಾರ್ವೆಯ ಟೆಲಿಗ್ರಾಫ್ ಏಜನ್ಸಿಯು ಪ್ರಕಟಿಸಿದೆ.

ಇಟಲಿಯಲ್ಲಿ ಯುದ್ಧ ಸಿದ್ಧತೆ

ಇಟಲಿಸರ್ಕಾರದವರು ಯುದ್ಧಕಾಲದಲ್ಲಿ ಟೆಲಿಫೋನ್, ಟೆಲಿಗ್ರಾಫ್ ಮತ್ತು ರೇಡಿಯೋ ವರ್ತಮಾನ ಸೌಕರ್ಯಗಳನ್ನು ಹದ್ದಿನಲ್ಲಿರಿಸಬೇಕಾದ ಸಂಬಂಧದಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಕುರಿತು ವರದಿ ಮಾಡಲು ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ.

ಹಾಲೆಂಡಿನ ನಾಜಿಗಳು ಜರ್ಮನಿಗೆ ಸಹಾಯ ಮಾಡುವುದಿಲ್ಲವಂತೆ!

ಜರ್ಮನಿಯೇನಾದರೂ ಹಾಲೆಂಡಿಗೆ ಮುತ್ತಿಗೆ ಹಾಕಿ ವ್ಯಾಪಕ ಹಾಲೆಂಡಿನಲ್ಲಿರುವ ನಾಜಿಗಳು ಯಾರಕಜೆಗೂ ಸಹಾಯಮಾಡದೆ ತಟಸ್ಥರಾಗಿರುವುದಾಗಿ ನಾಜಿ ನಾಯಕರಾದ ಅಂಟಮಸ್ಸೆಟ್ಟಾರವರು ತಿಳಿಸಿಹಿದರು. ಇದರಿಂದ ಬಹಳ ಕೋಲಾಹಲವುಂಟಾಗಿದೆ.

ಬ್ರಿಟಿಷ್ ಸಬ್‌ಮೆರೀನುಗಳ ಪಾತ

ಟಾರ್ಪನ್ ಮತ್ತು 'ಸ್ವರ್‌ಲೆಂಟ್' ಎಂಬ ಎರಡು ಬ್ರಿಟಿಷ್ ಸಬ್‌ಮೆರೀನುಗಳು ನಿಯಮಿತ ಸ್ಥಳಗಳಿಗೆ ಹಿಂದಿರುಗಿ ಬರಲಿಲ್ಲವಾದುದರಿಂದ ಅವುಗಳು ಮುಳುಗಿ ಹೋಗಿರಬೇಕೆಂದು ಭಾವಿಸಲಾಗಿದೆ. ಇದಲ್ಲದೆ ಎರಡು "ಟಾಲರು" ನೌಕೆಗಳು ಬಾಂಬಿಗೆ ತುತ್ತಾಗಿ ಮುಳುಗಿ ಹೋದವೆಂದು ಪ್ರಕಟವಾಗಿದೆ.

ಬ್ರಿಟಿಷ್ ಹಡಗುಗಳು ಮೆಡಿಟೇರಿಯನ್ ಸಮುದ್ರ ಮಾರ್ಗವಾಗಿ ಪ್ರಯಾಣಮಾಡುವುದಿಲ್ಲ

ಬ್ರಿಟಿಷರು ಇಟಲಿಯ ಅಧಿಕಾರಿಗಳು ಪ್ರಕಟಿಸಿರುವ ಹೇಳಿಕೆಗಳನ್ನೂ, ಇಟಲಿಯ ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅಂಶಗಳನ್ನೂ ಪರಿಶೀಲಿಸಿ, ಇನ್ನುಮುಂದೆ ಬ್ರಿಟಿಷ್ ಹಡಗುಗಳನ್ನು ಭೂಮಧ್ಯಸಮುದ್ರ ಮಾರ್ಗವಾಗಿ ಕಳುಹಿಸದೆ ಆಫ್ರಿಕಾಖಂಡವನ್ನು ಸುತ್ತಿಕೊಂಡು ಬರುವಂತೆ ಆಜ್ಞೆಮಾಡಿದ್ದಾರೆಂದು ತಿಳಿದುಬರುತ್ತದೆ.

ನಾಗರಿಕರಮೇಲೆ ಬಾಂಬುಗಳು

ಕಳೆದ ವಾರಾಂತ್ಯದಲ್ಲಿ ಜರ್ಮನರು ರಕ್ಷಣರಹಿತ ನಗರಗಳಮೇಲೆ ಮತ್ತೆ ವಾಯುಮುತ್ತಿಗೆ ನಡೆಯಿಸಿದರೆಂದೂ, ಎರೆಂ ಆಲ್‌ಸಂಡ್ ನಗರದ ಮೇಲೆ ಎರಡುಘಂಟೆಗಳ ಕಾಲ ಉಗ್ರಮುತ್ತಿಗೆ ನಡೆಯಿಸಿದರೆಂದೂ, ಅನೇಕ ಖಾಸಗಿ ಮನೆಗಳು ನಾಶವಾದವೆಂದೂ, ಬೀದಿಗಳಲ್ಲಿ ತಿರುಗಾಡುತ್ತಿದ್ದವರ ಮೇಲೆ ಗುಂಡುಹಾರಿಸಿದರೆಂದೂ, ಗಾಯಗೊಂಡವರ ಸಹಾಯಕ್ಕೆ ಹೋದ ರೆಡ್‌ಕ್ರಾಸ್ ಸೇವಕರು ಗುಂಡಿನೇಟಿನ ದೆಸೆಯಿಂದ ಹಿಂದಿರುಗಬೇಕಾಯಿತೆಂದೂ ನಾರ್ವೆ ವರ್ತಮಾನಸಂಸ್ಥೆಯು ಪ್ರಕಟಿಸಿದೆ.

ನಾರ್ವೆಗೆ ಬ್ರಿಟಿಷ್ ಯೋಧರು.

ಗುಡ್‌ಬ್ರಾನ್ಸ್ ಡಲ್ ಕಣಿವೆಯಲ್ಲಿ ಜರ್ಮನರು ಬ್ರಿಟಿಷ್ ಸ್ಥಾನಗಳ ಮೇಲೆ ಆಕ್ರಮಣಮಾಡಿದರು. ಆದರೆ ಅವರು ಹಿಂದಕ್ಕೆಬ್ಬಿಲ್ಪಟ್ಟರು. ಆಂಡಲ್ಸ್‌ನಾಸ್ ಮೇಲೂ ಬ್ರಿಟಿಷ್ ವರ್ತಮಾನ ನಾರ್ವಗಳ ಮೇಲೂ ಶತ್ರುಗಳು ಬಾಂಬುಗಳನ್ನು ಹಾಕುತ್ತಿದ್ದರೂ ಕೂಡ ಬ್ರಿಟಿಷ್ ಸೈನಿಕರು ಹೆಚ್ಚಾಗಿ ಬಂದಿಳಿದರು. ಶತ್ರುವಿಮಾನಗಳ ಚಟುವಟಿಕೆಯು ನಾರ್ವಿ ಕ್ಷೇತ್ರದಲ್ಲಿ ಸ್ವಲ್ಪ ಮಟ್ಟಿಗಿದ್ದರೂ ಆದರಿಂದ ಮಿತ್ರರಾಷ್ಟ್ರಗಳ ಸೈನಿಕರ ಕಾರ್ಯಶ್ರಮಕ್ಕೆ ಅಡ್ಡಿಯುಂಟಾಗಿಲ್ಲ.

ಜರ್ಮನರಿಗೆ ಪದಾರ್ಥಗಳು ಬರುವುದಿಲ್ಲ

ಕಾಮನ್ಸ್ ಸಭೆಯಲ್ಲಿ ಶ್ರೀ ಕ್ರಾಸ್‌ರವರು " ಜರ್ಮನರು ನಾರ್ವೆ ಮತ್ತು ಡೆನ್ಮಾರ್ಕುಗಳಿಗೆ ಮುತ್ತಿಗೆ ಹಾಕಿದಂದಿನಿಂದ, ಜರ್ಮನರು ಆಕ್ರಮಿಸಿರುವ ಬಂದರುಗಳಿಗೆ ಸಾಮಾನು ಹಡಗುಗಳು ಹೋಗಲು ಅವಕಾಶ ಕೊಟ್ಟಿರುವುವೆಂದೂ, ಡೆನ್ಮಾರ್ಕಿಗೆ ಸಾಮಾನು ತುಂಬಿಕೊಂಡು ಹೋಗುತ್ತಿದ್ದ ಹಡಗುಗಳನ್ನೆಲ್ಲ ಹಡೆದು. ಸಾಮಾನುಗಳನ್ನು ವಶಪಡಿಸಿಕೊಳ್ಳಲಾಗಿದೆಯೆಂದೂ, ನಾರ್ವೆಗೆ ಹೋಗುವ ಸಾಮಾನುಗಳು ತಡೆಯಲ್ಪಟ್ಟಿವೆಯೆಂದೂ, ಲಂಡನ್ನಿನಲ್ಲಿರುವ ನಾರ್ವೆಹಡಗು ವ್ಯಾಪಾರಸಂಸ್ಥೆಯವರು ಬ್ರಿಟಿಷ್ ಸರ್ಕಾರದ ಸಲಹೆಯಂತೆ ಅವುಗಳ ವ್ಯವಸ್ಥೆಯನ್ನು ಮಾಡುವರೆಂದೂ ಹೇಳಿದರು.

ಜರ್ಮನರ ಹೇಳಿಕೆ!

ಜರ್ಮನ್ ಸೈನ್ಯಕಾರ್ಯವರು ಹೊರಡಿಸಿದ ಒಂದು ಪ್ರಕಟನೆಯಲ್ಲಿ " ಜರ್ಮನರು ನಾರ್ವೆಯಲ್ಲಿ ಮುಂದುವರಿಯುತ್ತಿದ್ದಾರೆ. ಶತ್ರುಗಳನ್ನು ಸೋಲಿಸಿರುವರು. ಬರ್ಗೆನ್ ಪೂರ್ವದಲ್ಲಿರುವ ವೋಸ್ ಎಂಬ ಊರನ್ನು ನಮ್ಮ ಸೈನಿಕರು ವಶಪಡಿಸಿಕೊಂಡಿರುವರಲ್ಲದೆ ಹಲವು ಬ್ರಿಟಿಷ್ ವೈಮಾನಿಕರೂ ಸೇರಿ 241 ಅಧಿಕಾರಿಗಳನ್ನು ಸೆರೆ ಹಿಡಿದಿರುವರು; ಸ್ವೆನೆಂಜರ್ ಕ್ಷೇತ್ರದಲ್ಲಿ 2021 ಮಂದಿಯನ್ನು ಸೆರೆಹಿಡಿಯಲಾಗಿದೆ. ನಾರ್ವಿಕ್ ಆಚೆ ಒಂದು ಬ್ರಿಟಿಷ್ ಕ್ರೂಯಿಜರ್ ನೌಕೆಯಮೇಲೆ ಬಾಂಬನ್ನು ಹಾಕಲಾಯಿತು. ವಿಮಾನಗಳನ್ನು ಒಯ್ಯುವ ಇನ್ನೊಂದು ನೌಕೆಗೆ ಬೆಟ್ಟಿಬಿತ್ತು. ವೋಲ್ಡ್‌ಫ್ಜೋರ್ಡ್‌ನಲ್ಲಿ 3 ಬ್ರಿಟಿಷ್ ನೌಕೆಗಳನ್ನು ಮುಳುಗಿಸಲಾಯಿತು. ಇತರ ನಾಲ್ಕು ನೌಕೆಗಳಿಗೆ ನಷ್ಟವುಂಟಾಗಿದೆ" ಎಂದು ತಿಳುಸಿದಿದ್ದಾರೆ.

ಬ್ರಿಟಿಷರ ಮೇಲೆ ಜರ್ಮನಿಯ ಆಪಾದನೆ

ಜರ್ಮನಿಯ ಪ್ರಭುತ್ವಭವನದಲ್ಲಿ ಸೇರಿದ್ದ ಸಭೆಯೊಂದರಲ್ಲಿ ಜರ್ಮನಿಯ ವಿದೇಶಾಂಗ ಸಚಿವರಾದ ಹರ್ ವಾರಿಚ್ ರಿಬ್ಬಾಪರು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ವಾಕ್ಪಕಾಶಮಾಡುತ್ತಾ " ಸಕಲ ಪ್ರಪಂಚಕ್ಕೂ, ಸಾರ್ವಜನಿಕರಿಗೂ, ಮುಖ್ಯ ತಾಟಸ್ಥ್ಯ ರಾಷ್ಟ್ರಗಳ ಸರಕಾರಗಳಿಗೂ ಅತ್ಯಂತ ಮುಖ್ಯವಾದ ವಿಷಯವನ್ನು ತಿಳುಹಿಸಲು ಇಂದು ವಿದೇಶೀಯ ರಾಯಭಾರಿಗಳನ್ನೂ ಪತ್ರಿಕಾ ಪ್ರತಿನಿಧಿಗಳನ್ನೂ ಇಲ್ಲಿಗೆ ಕರೆಯಿಸಿರುತ್ತೇನೆ. ಜರ್ಮನಿಯ ಪಶ್ಚಿಮ ಗಡಿಯಲ್ಲಿ ತನ್ನ ಆಟ ನೇನೂ ಸಾಗುವಿಲ್ಲವೆಂಬುದು ಬ್ರಿಟ್ ಮತ್ತು ಫ್ರಾನ್ಸುಗಳಿಗೆ ಮೊದಲೇ ಗೊತ್ತಿದ್ದಿತು. ಆದಕ್ಕಾಗಿ ಅವರು ಪೋಲೆಂಡು ಸೋತನಮೇಲೆ ಮತ್ತೊಂದು ದೇಶವನ್ನು ಯುದ್ಧಕ್ಕೆ ಎಳೆಯೋಣವೆಂದು ಯೋಚಿಸುತ್ತಾ ಬಂದರು. ಯುದ್ಧಾರಂಭದಾದಂದಿನಿಂದ ಮಿತ್ರ ರಾಷ್ಟ್ರಗಳವರು ಹೊಸ ಹೊಸ ದೇಶಗಳನ್ನು ಸಂಗ್ರಾಮದಲ್ಲಿ ನೂಕಲು ಬಹಳ ಸಾಹಸ ಪಡುತ್ತಿದ್ದಾರೆ. ಮಿತ್ರ ರಾಷ್ಟ್ರಗಳವರು ಜರ್ಮನಿಯ ಮೇಲೆ ಯುದ್ಧವನ್ನಾರಂಭಿಸಲು ಕಾರಣವೇ ಇರಲಿಲ್ಲ. ಬ್ರಿಟಿಷ್ ಮತ್ತು ಫ್ರೆಂಚ್ ಜನತಾಂಗಗಳೊಂದಿಗೆ ಶಾಂತಿಯಿಂದಲೂ ಮತ್ತು ಸ್ನೇಹದಿಂದಲೂ ಜೀವಿಸಲು ತಾನು ಕಿತಾಬುವಾಗಿದೆಯೆಂಬ ಅಂಶವನ್ನು ಜರ್ಮನಿಯು ಸ್ಪಷ್ಟಪಡಿಸಿದೆ. ಆದರೆ ಮಿತ್ರ ರಾಷ್ಟ್ರಗಳವರು ನಮ್ಮಮೇಲೆ ಶತ್ರುಕಟ್ಟಿಸ್ಥಂದಿಂದ ನಾವು ಆವರನ್ನು ಎದುರಿಸಬೇಕಾಯಿತು. ಜರ್ಮನಿಯ ಜನತಾಂಗವನ್ನು ಭಿನ್ನಮಾಡಿ ಆದಕ್ಕೆರುವ ರಾಜಕೀಯ ಹಕ್ಕು ಮತ್ತು ಆರ್ಥಿಕ ಅವಕಾರಗಳನ್ನು ಕಿತ್ತುಕೊಳ್ಳಲು ಮಿತ್ರ ರಾಷ್ಟ್ರಗಳವರು ಮಾಡುವ ಪ್ರಯತ್ನವನ್ನು ನಮ್ಮ ಶಕ್ತಿ ವಿಾರಿ ಎದುರಿಸುತ್ತೇವೆ. ಯುದ್ಧ ಕ್ಷೇತ್ರವನ್ನು ವಿಸ್ತರಿಸಲು ಸಣ್ಣ ಪುಟ್ಟ ವರ್ತೋಷ್ಣ ರಾಷ್ಟ್ರಗಳು ಒಳ್ಳೆಯ ಅವಕಾಶ ಕೊಡುವವೆಂದು ಮಿತ್ರ ರಾಷ್ಟ್ರಗಳವರು ಭಾವಿಸಿ ತಾಟಸ್ಥ್ಯರಾಷ್ಟ್ರಗಳಮೇಲೆ ಪ್ರಹಾರವನ್ನು ಆರಂಭಿಸಿದ್ದಾರೆ." ಎಂದು ಹೇಳಿದರು.

ನಾರ್ವೆಯಲ್ಲಿ ಜರ್ಮನರ ಕಷ್ಟ.

ನಾಮೆಸಾಸ್ ರಣರಂಗದಲ್ಲಿ ಬ್ರಿಟಿಷರು ತಮ್ಮ ಸ್ಥಾನಗಳನ್ನು ಬಲಪಡಿಸಿಕೊಂಡಿದ್ದಲ್ಲದೆ ಹಲವು ಜರ್ಮನ್ ನೆಲೆಯನ್ನು ವಶಪಡಿಸಿರುವರು. ಜೋಂಬಾಪ್ ಪ್ರದೇಶದಲ್ಲಿ ಶತ್ರುಗಳು ಬ್ರಿಟಿಷರ ಮೇಲೆ ಬಿದ್ದರು. ಆದರೆ ಬಹಳ ನಷ್ಟಗೊಂಡು, ಹಿಂತಿರುಗಬೇಕಾಯಿತು. ಅನಂತರ ಶತ್ರುಗಳು ಬ್ರಿಟಿಷ್ ಸೈನಿಕರ ಮೇಲೆ ಗುಂಡಿನ ಮಳೆಗೆರೆದರು. ಇದರಿಂದ ಬ್ರಿಟಿಷರು ಸುರಕ್ಷಿತ ಸ್ಥಳಕ್ಕೆ ಜಿಗ್ಯೆಟ್ಟಬೇಕಾಯಿತು. ಬರ್ಗ್‌ನ್ಸಿಗೆ ಪೂರ್ವದಲ್ಲಿ ನಾರ್ವೀಜಿಯನ್ನರು ಜರ್ಮನ್ನರನ್ನು ಎದುರಿಸುತ್ತಿದ್ದಾರೆ. ಜರ್ಮನರು ನಾರ್ವೆಗೆ ಸೈನಿಕರನ್ನು ವಿಮಾನಗಳಲ್ಲಿ ತುಂಬಿಕೊಂಡು ಬಂದು ವ್ಯಾಪಾರಿಯಲ್ಲಿ ಮೂಲಕ ನೆಲಕ್ಕೆ ಇಳಿಸುತ್ತಿರುವ ಕಾರ್ಯವು ಆಸ್ಮ ಯಶಸ್ವಿಯಾಗಿ ನಡೆಯುತ್ತಿಲ್ಲವೆಂದೂ ಹಾಗೆ ಇಳಿವವರಲ್ಲಿ ಅನೇಕರು ಮಂಜುಗಡ್ಡೆಗಳಲ್ಲಿ ಸಿಕ್ಕಿ ಪ್ರಾಣಬಿಟ್ಟಿರೆಂದೂ ಪ್ರಕಟವಾಗಿದೆ.

ಬಾಲ್ಟಿಸ್ ರಾಷ್ಟ್ರಗಳನ್ನೆಲ್ಲಾ ಕೂಡಿಸಲು ಸುರ್ಕಯ ಪ್ರಯತ್ನ.

ಯುದ್ಧವು ನೀತಾ ಭೀತಿಯ ತೊಲಗುವ ವರೆಗೆ ಗ್ರೀಸ್, ಬಲ್ಗೇರಿಯಾ, ಯುಗೋಸ್ಲಾವಿಯ ರುಮೇನಿಯಾ ಮತ್ತು ತುರ್ಕಿ ಇವುಗಳು ಪರಸ್ಪರ ಮಿಲಿಟರಿ ಸಹಾಯದ ಒಪ್ಪಂದವನ್ನು ಮಾಡಿಕೊಳ್ಳುವಂತೆ ತುರ್ಕಿಯು ಸಂಧಾನ ನಡೆಯಿಸುತ್ತಿವೆ. ಈ ವಿಷಯವಾಗಿ ತುರ್ಕಿಯ ಪ್ರತಿನಿಧಿಗಳೊಬ್ಬರು " ಬಾಲ್ಟಿಕ್ ರಾಷ್ಟ್ರಗಳನ್ನೂ ಮತ್ತು ತ್ರಾನ್ಸಿಲ್ವೇನಿಯಾ ರಾಷ್ಟ್ರಗಳನ್ನೂ ನೇರಿಸಿ ಒಂದು ಶೇಕರೇಸರ್ ರಚಿಸುವದು ಆಗತ್ಯವೆಂದೂ, ಆನಂತರ ಸಭ್ಯ ಮಿಲಿಟರಿ ಸಂಬಂಧನವನ್ನು ಕಲ್ಪಿಸಿಕೊಂಡರೆ ಸಾಕಾಗುವೆಯೆಂದೂ, ಬಾಲ್ಟಿಕ್ ಮತ್ತು ತ್ರಾನ್ಸಿಲ್ವೇನಿಯಾ ರಾಷ್ಟ್ರಗಳಲ್ಲಿ ಯಾವುದೊಂದರ ಮೇಲೆ ರತ್ನುಗಳು ಬಿದ್ದರೂ ತನ್ನೆಲ್ಲಿರ ಮೇಲೂ ಯುದ್ಧಾರಂಭವಾದಂತೆ ಪರಿಗಣಿಸುವಂತಾಗಬೇಕೇಂದೂ" ಒಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ನಾರ್ವೆಯಲ್ಲಿ ಯುದ್ಧವು ಮುಗಿದಂತಾಯಿತು.

ನಾರ್ವೆಯಲ್ಲಿ ಜರ್ಮನರ ಪೈ ಮೇಲಾಧುದರಿಂದ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಆ ದೇಶವನ್ನು ಬಿಟ್ಟು ಕನ್ಯ ದೇಶಕ್ಕೆ ಹಿಂದಿರುಗಿದವೆಂದು ಪ್ರಕಟವಾಗಿದೆ. " ಮಿತ್ರರಾಷ್ಟ್ರಗಳು ನಾರ್ವೆಯಿಂದ ಹಿಂದಿರುಗಿದು ನೆನ್ನ ಕಂತು ಜನರಿಗೆ ಸಿಡಿಲು ಬಡಿದಂತಾಗಿದೆ. ಇದರಿಂದ ವಿಶ್ವದಲ್ಲೆಲ್ಲ ಬ್ರಿಟಿಷರ ಗೌರವಕ್ಕೆ ಹಾನಿಯುಂಟಾಗಿದೆ." ಎಂದು ಡೇಲಿಮೆರಾಲ್ಡ್ ಪತ್ರಿಕೆಯು ಬರೆದಿದೆ.

ವರ್ತಮಾನಸಂಗ್ರಹ.

ಜೋಧ್‌ಪುರ ಮಹಾರಾಜರ ಸಹಾಯ

ಜೋಧ್‌ಪುರದ ಮಹಾರಾಜರವರು ವಿಮಾನರಾಮೆಯ ಧರ್ಮಾಧಿಧಿಗೆ 500 ಪೌಂಡುಗಳನ್ನು ಕೊಟ್ಟುರುವರೆಂದು ವಿಮಾನ ಕಾಬೆಯುವರು ಪ್ರಕಟಿಸಿದ್ದಾರೆ.

ದೈವಲೀಲೆಯು ಅದ್ಭುತವಾದುದು

ಸಾಲಿಗ್ರಾಮದ ಸಮೀಪದಲ್ಲಿ ಈಗ್ಗೆ 10-12 ದಿವಸಗಳ ಹಿಂದೆ ಅತ್ಯಾಶ್ಚರ್ಯಕರವಾದ ಒಂದು ಪ್ರಸಂಗವು ನಡೆಯಿತು. ಸಾಲಿಗ್ರಾಮದ ಸಮೀಪದ ಕಳ್ಳಿಯಂದ ಒಬ್ಬ ಯುವತಿಯು ಸಂಧ್ಯಾಕಾಲದಲ್ಲಿ ತನ್ನ ಅತ್ತೆಯ ಮನೆಯಿಂದ ಬೀಳರೂಡದವಳಾಗಿ ತನ್ನ ತವರುಮನೆಗೆ ನೋಗುತ್ತಿದ್ದಳಂತೆ! ದಾರಿಯಲ್ಲಿ ಹೋಗುತ್ತಿರುವಾಗ ಒಬ್ಬ ಗಾಡಿಯವನು ಆಕೆಯನ್ನು ಕಂಡು ಅವಳ ವೈಯ್ಯಾರವನ್ನು ಆಕರ್ಷಿಸಬೇಕೆಂದು ಆ ಯುವತಿಯನ್ನು ತನ್ನ ಗಾಡಿಯ ಮೇಲಕ್ಕೆ ಹಾಕಿಸಿದನೆಂದೂ, ಅವಳು ಕೂಗಾಡಿದಂತೆ ಬಾಯಿಗೆ ಬಟ್ಟೆಯನ್ನಿಟ್ಟು ಒಡವೆಗಳನ್ನೆಲ್ಲಾ ತೆಗೆದುಕೊಂಡು ಗಂಟುಕಟ್ಟಿ ಅವಳ ವ್ಯಾಪಾರವನ್ನೂ ಸಹ ತೆಗೆಯಬೇಕೆಂದು ಆಲೋಚಿಸಿ ಒಂದು ಕಲ್ಲುಬಂಡೆಯನ್ನು ಅವಳ ಮೇಲೆ ಹಾಕಲು ಪ್ರಯತ್ನಿಸಿದನೆಂದೂ, ವಿಧಿವಶಾತ್ ಬಂಡೆಯು ಅಡಿಯಲ್ಲೇ ಇದ್ದ ಒಂದು ಸಾಗರಹಾವು ಕಚ್ಚಿತೆಂದೂ, ಒಡನೆಯೇ ವಿಷವು ವ್ಯಾಪಿಸಿ ಗಾಡಿಯವನು ನೃತಸಟ್ಟಿ ನೆಂದೂ ಹುಡುಗಿಯು ಹಗ್ಗಗಳಿಂದ ಕಟ್ಟಲ್ಪಟ್ಟು ಮಾತ ನಾಡುವುದಕ್ಕೆ ಸಾಮರ್ಥ್ಯವಿಲ್ಲದೆ ಒದ್ದಾಡುತ್ತಿರುವಲ್ಲಿ ದೈವವಶಾತ್ ಯಾರೋ ಪ್ರಯಾಣಿಕರು ಈ ಹೃದಯ ದ್ರಾವಕ ದೃಶ್ಯವನ್ನು ಕಂಡು ಅವಳನ್ನು ಬಂಧನದಿಂದ ಬಿಡಿಸಿ ಪೋಲೀಸಿಗೆ ವರದಿ ಮಾಡಿದರೆಂದೂ ತಿಳಿದು ಬರುತ್ತದೆ.

ಮಗಳನ್ನೇ ಮೋಹಿಸಿದ ದುರಾತ್ಮನಿಗೆ ಕಠಿನಶಿಕ್ಷೆ.

"ಸಾಕ್ಸಾತ್ ತಂದೆಯೇ ಮಗಳನೋಲೆ ಬಿದ್ದು ಮತ್ತು ಸ್ಥಗದಂತೆ ಮಗಳ ಮಾನಭಂಗಮಾಡಿದ್ದಾನೆ. ತನ್ನ ಮಗಳನ್ನು ಸುಗಳ್ಳಪೆನ್ನುತ್ತಾನೆ. ಇಂತಹ ದೌರ್ಜನ್ಯಕ್ಕೆ ಕ್ರೂರಶಿಕ್ಷೆಯನ್ನು ವಿಧಿಸಲೇ ಬೇಕು" ಎಂಬುದಾಗಿ ಬರ್ಮಾದೇಶದ ಬಕ್ಷಿನಿನ ಮಾಜಿಸ್ಟ್ರೇಟರು ಟೌಸೀ ಎಂಬ ೪೧ ವರ್ಷದ ಬರ್ಮೀಯನಿಗೆ ಏಳು ವರ್ಷಗಳ ಕಠಿನ ಕಾರಾಗೃಹವಾಸವನ್ನೂ, ಮೂವತ್ತು ಛಡೀ ಏಟುಗಳನ್ನೂ ವಿಧಿಸಿದರು.

ಈ ಮೊಖದ್ದಮೆಯ ವಿವರಗಳು ಈ ರೀತಿವೆ:— " ಮಾಸೀರ್‌ವಿನೆ ಎಂಬಾಕೆಗೆ ಎರಡು ವರ್ಷಗಳ ಹಿಂದೆ ಮಾಸ್ಟೆನಿಯೋಗ ಮಾಯಿತು. ಅಂದಿನಿಂದ ತಂದೆಯ ರಕ್ಷಣೆಯಲ್ಲಿಯೇ ಇವ್ವಳು. ಯುವತಿಯು ರೂಪಲಾವಣ್ಯಗಳಲ್ಲಿ ರತಿಗೆ ಸಮಾನಳಾಗಿದ್ದುದರಿಂದ ತಂದೆಗೆ ಮಗಳ ಮೇಲೆಯೇ ಮೋಹ ಹುಟ್ಟಿತು. ಒಂದು ದಿನ ಬಲತ್ಕಾರವಾಗಿ ಆಕೆಯನ್ನು ಕೆಡಿಸಿದನು ಈ ಅವಮಾನವನ್ನು ಸಹಿಸಲಾರದೆ ಮಗಳು ಆಫೀಮನ್ನು ತಿಂದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದಳು. ತಂದೆಯು ಈ ನೀಚವೃತ್ತಿಯು ಸಂಬಂಧಿಕರಿಗೆ ತಿಳಿದು ಅವರು ಈ ವಿಷಯವನ್ನು ಪೋಲೀಸಿನವರಿಗೆ ತಿಳುಹಿಸಿದರು. ಮ್ಯಾಜಸ್ಟ್ರೇಟರು ಆಪಾದಿತನನ್ನು ಕಠಿನ ಶಿಕ್ಷೆಗೆ ಗುರಿಪಡಿಸಿದರು " ಮಗಳ ಮೇಲೆ ತಂದೆಯು ಈ ರೀತಿ ಮಾಡುವುದು ಅತ್ಯಂತ ಘೋರವಾದ ಕೃತ್ಯ. ಇಂತಹ ನುಮುಷ್ಯನು ಸಾಗನ ಸಮಾಜದಲ್ಲಿರಲು ಕೂಡ ಅನರ್ಹನು. ಅವನು ಮತ್ತು ಮೃಗಗಳೊಂದಿಗೆ ವಾಸಮಾಡುವುದೇ ಲೇಸು. ಮತ್ತು ಹುಲ್ಲನ್ನು ತಿನ್ನುವಂತೆ ಮಾಡಬೇಕು.' ಎಂದು ಹೇಳಿದರು.

[೩ ನೆಯ ಪುಟದಿಂದ ಮುಂದುವರೆದುದು]

ಜಾಂಚಿಲ್ಯಕ್ಕೆ ಈಡಾಗಿಸುವ ಇತರ ವಿಧವಾದ ಯೋಚನೆಗಳನ್ನು ಧ್ವಂಸಮಾಡುವುದು ಪ್ರತಿಯೊಬ್ಬನೂ ತನ್ನ ಯೋಗ್ಯತೆಯನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಂಡು, ಜೀವಿತ ಕಾಲವನ್ನು ಮಾನ್ಯ ರೀತಿಯಲ್ಲಿ ನಡೆಸಿಕೊಂಡು ಬರುವುದಾದರೆ, ಇವನ ಮನಸ್ಸು ಎಂತಹ ನೀಚರಿಗೂ ಹೆದರದ ಲೋಕೋಪಕಾರದಲ್ಲಿಯೇ ತೊಡಗಿ ವಿಶ್ರಾಂತಿಯನ್ನು ಹೊಂದುವನು ಅಂತಹ ಮಹಿಷೀಯೋ ಲೋಕೋದ್ಧಾರಕರೆಂದು ಹೇಳಿಕೊಂಡ ಲೂಕವನ್ನು ಉತ್ತಮ ಸ್ಥಿತಿಗೆ ತರಲು ಮೇರಿ ಏಂಟ್ವಿಯಾ ಮರೆಂದಕ್ಕ ಮಹಾಜ್ಞಾನಿಯಾದ ಕ್ರಿಸ್ಟಿಸ್ ಎಂಬಾತನ ಚರಿತ್ರೆಯೇ ದೃಷ್ಟಾಂತವು

ಪರಮಜ್ಞಾನಿಯೆನಿಸಿ, ಪರೋಪಕಾರ ನಿರತನಾಗಿ ವಿಮುಕ್ತತನಾಗಿರುವ ಸಾಕ್ರಟೀಸ್ ಎಂಬಾತನು ಕ್ರಿ ಪೂ 408 ನೇ ಸಂವತ್ಸರದಲ್ಲಿ ಆರ್ಥೆನ್ಸ್ ಎಂಬ ಸ್ಥಳದಲ್ಲಿ ವಾಸಿಸಿದನು ಈತನು ಯೋಗ್ಯವಾದ ಕಲೆಗಳಲ್ಲಿ ಅಪೂರ್ವ ನಿಪುಣತೆಯನ್ನು ಸಂಪಾದಿಸಿಕೊಂಡು ವಿಖ್ಯಾತನಾಗಿದ್ದನು ಈತನು ಕಲ್ಲುಕಲಸವನ್ನು ಮೊದಲು ಕಲತಿದ್ದನಲ್ಲದೆ ಯುದ್ಧದಲ್ಲಿ ಪ್ರಾಣಬಿಡಲು ಸಿದ್ಧರಾಗಿದ್ದವರನ್ನು ನೋಡಿ ಕನಿಕರದಿಂದ ಅವರಿಗೆ ತನ್ನ ಕೈಯಿಂದ ಬೆದ್ದಿತ್ತಿ ಕೊಂಡು ಕಾಪಾಡಿದನು ಇದೂ ಅಲ್ಲದೆ ತನ್ನ ರಾಜ್ಯ ಸಂರಕ್ಷಣಾರ್ಥವಾಗಿ ಯುದ್ಧಮಾಡಿದ ಪರಾಕ್ರಮಿಯು ಈತನ ಜಾಣ್ಮೆಯನ್ನು ನಿವಾಡಿಸಿಮಾಡಿ, ಯೋಧ್ಯರನ್ನಾಗಿಯಾಗಲೆ ರಾಜಬೀಧಿಯಲ್ಲಿಯೇ ನಿಂತು ಯೋಧ್ಯಾಕಾರ್ಯಗಳನ್ನು ಜರಿದಿಸುತ್ತಿದ್ದನು ಎಲ್ಲರನ್ನೂ ತನ್ನ ಜೋಧಾಮೃತವಿಂದ ತೃಪ್ತಿಪಡಿಸಿದ್ದನು ಇನ್ನು ರಿಂಗಣದ್ಲಿ ಕೆಲಸಮಾಡಿ ಪ್ರಸಿದ್ಧನಾದ ಒಂದು ಕಾಸಿನ ಫಲಾಪೇಕ್ಷೆಯೂ ಮನಸ್ಸಿನಲ್ಲಿ ಕಾಡಿಸುತ್ತಿರಲಿಲ್ಲ ಈತನ ಯೋಚನೆಗೂ, ನಡೆಸುವ ಕಾರ್ಯಕ್ಕೂ ಬಹಳ ಸಂತೋಷವೊಂದಿವೆ ಅನೇಕ ಮಹನೀಯರೂ, ಇತರ ಜನರೂ ಈತನ ಶಿಷ್ಯತ್ವವನ್ನು ಪಡೆಯಲ್ಲಿರುತ್ತಾ ಈತನ ಜೋಪಾಯಂತೆ ನಡೆಯುತ್ತಿದ್ದರು ಈ ಮಹನೀಯನು ತನ್ನಿಂದ ಪರೋಪಕಾರವು ಬೆರೆ ಬ್ಗೆ ತಾನು ಧನ್ಯನಾದನೆಂದು ಹೇಳಿಕೊಳ್ಳುತ್ತಿದ್ದನು

ಈತನು 72 ನೇ ವರುಷ ವಯಸ್ಸಿನಲ್ಲಿದ್ದಾಗ್ಗೆ ಈತನ ಮತವು ಕೆಲವರಿಗೆ ಸರಿಬೀಳದೆ ಆವರು ಸರ್ಕಾರಕ್ಕೆ ತಿಳಿಹಿಸಲು, ಅವರು ಕೋರ್ಟಿಗೆ ಹಿಡಿತರಿಸಿ ಜಡ್ಜಿಯು ಕೆಲವು ಪತ್ರಿಗಳನ್ನು ಹಾಕಲು ಈತನು ಹೇಳುವ ಉತ್ತರಕ್ಕೆ ನ್ಯಾಯಾಧಿಪತಿಯು ರಾಜಾ ತೀರ್ಮಾನವನ್ನೂ ಹೇಳಲಸಾಧ್ಯವಾಗಿ ಕೊನೆಗೆ— ಎಲ್ಲೆ ' ಸಾಕ್ರಟೀಸ್ ನಿನ್ನೆಷ್ಟಕ್ಕಿಪೀನೇ ಸಾಯಬೇಕು ಎಂದು ಹೇಳಿದನು ಇವನ್ನು ಕೇಳಿದ ಮೇಲೆ ಮನಸ್ಸಿನಲ್ಲಿ ಅಯೋಗ್ಯರ ಸಮೀಪದಲ್ಲಿರುವುದಕ್ಕಿಂತ ಪ್ರಾಣತ್ಯಾಗವೇ ಸರ್ವೋತ್ತಮ ವೆಂದು ಭಾವಿಸಿ, ಇವನೆ ಕೈಗೆ ತಂದುಕೊಟ್ಟ ವಿಷಪೂರಿತವಾದ ಒಟ್ಟಲನ್ನು ಎತ್ತಿಕುಡಿದು ಕೊನೆಗೆ ಪ್ರಾಣ ಬಿಟ್ಟನು

ಮಾಚಿಕಮಹಾಶಯರೇ ! ಮುಖ್ಯವಾಗಿ ಯೋಗ್ಯರು ತಾವು ತಿಳಿದು ನಡೆಯುತ್ತಿರುವ ಯೋಗ್ಯತಾಕಾರ್ಯಗಳನ್ನು ಬಿಡದೆ ಸನ್ಮಾರ್ಗದಲ್ಲಿ ನಡೆಯುತ್ತಿರುವುದೇ ಆವರ ದೃಢಸಂಕಲ್ಪವು ಇದರಿಂದ ಅವರು ಆತ್ಮನನ್ನು ಭಗವಂತನಲ್ಲಿ ಅರ್ಪಿಸುವುದಕ್ಕೆ ಲೇಶವೂ ಸಂಕಟಪಡುವವರಲ್ಲ ಮಾನಸನ ಜೀವಿತವು ಅಲ್ಪವು ಇಪರಲ್ಲಿ ಯೋಗ್ಯನೆಂದೆನಿಸಿಕೊಂಡು ಪರೋಪಕಾರದಲ್ಲಿಯೇ ಮಗ್ನಮಾನಸನಾಗಿ ಕಾರ್ಯಗಳನ್ನುನಾಡಿ ವಿಖ್ಯಾತ ಪಡೆಯುವುದಾದರೆ ಅವನು ಇಹದಲ್ಲಿಯೂ, ಪರವಲ್ಲಿಯೂ ಖ್ಯಾತಿ ಮೋಕ್ಷಗಳನ್ನು ಹೊಂದುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲವೆಂಬುದು ಇಪರಿಂದ ಮುಖ್ಯ ತಿಳಿಯ ಬೇಕಾದ ಅಂಶವೆಂದು ತಿಳಿದು ಫಲಿಯುತ್ತಿರಬೇಕು

ಶ್ರೀಮತಿ ಚಿಕ್ಕಬಸಮ್ಮಯ್ಯನವರ ಭಕ್ತಿ

ಬಾಮರಾಜಪೇಟೆ ಮೈಸೂರು

— —

1910 11 ನೆ ಸುಲಿಪಲ್ಲಿ ಈ ಧರ್ಮಭಕ್ತಿಕ್ಕೆ ಸೇರಿದ ವಿದ್ಯಾ ವ್ಯಾಸಂಗಮಾಡಲು ಇಷ್ಟವುಳ್ಳ ವೀರಶೈವ ಒಡವಿದ್ಯಾರ್ಥಿಗಳು ಈ ಕೆಳಗಿ ರುಜುಮಾಡಿರುವವರಿಗೆ ವೀ ಮಾಡಿ ತೀರ್ಥ ೨೨ ರೊಳಗೆ ವಿಧಾಯಕವಾದ ಸಾರಂಶವಲ್ಲಿ ಅಪ್ಲಿಕೇಷನ್ ಒರೆದ ಕಾಗ್ಗ ತಕ್ಕದ್ದು

ಕ ಅತಿತನಾಗಿ ಒರ ಪ ಮತ್ತು ವಿಧಾಯಕ ಫಾರಂನಲ್ಲಿ ಬರದುಕೊಟ್ಟಿರುವ ಅಪ್ಲಿಕೇಷನ್‌ಗಳಿಗೆ ನಿಗಾ ಕೊಡುವುದಿಲ್ಲ

ಅಪ್ಲಿಕೇಷನ್ ಫಾರಂ ಜೀತಾದವರು ಒಂದು ಆಣೆ ಸ್ಟಾ ಪ್ರರವಾನಿಸತಕ್ಕದ್ದು

ಮೈಸೂರು ಎಂ ಪಿ ಚೆನ್ನಪ್ಪ
1—೬—1940 ಕಸ್ಟೋಸರ್

ಲಿಂಬೇರಸದ ವ್ಯಾಪಾರ

— —

ನಮ್ಮ ದೇಶದಲ್ಲಿ ಲಿಂಬೆಹಣ್ಣಾನ್ನು ಬಳೆಯುವುದಕ್ಕೆ ಬೇಕಾದ ಪಷ್ಟ ಅನುಕೂಲಗಳನ್ನೆ ಆವರೆಪಲವು ಮುಳಗಾಲದಲ್ಲಿ ಬರ ಪುದರಿಂದ ಅದಕ್ಕ ಸರಿಯಾದ ಬೆಲೆ ಬರುವುದಿಲ್ಲ ಆದ್ದರಿಂದ, ಕಣ್ಣಿನ ರಸ್ಸನ್ನು ಸಗಳಲ್ಲಿ ತಂಬಿ, ವರ್ಷವೆಲ್ಲಾ ಬಳಸಬಹುದು ಲಿಂಬಹಣ್ಣಿನಲ್ಲಿ ಯಾವ ಬಾಗವೂ ನಸ್ಟವಾಗುವುದಿಲ್ಲ ಆವರ ರಸವನ್ನು ಕೆಡದಂತೆ ಹ ರಿಗಿ ಶೀಸೆಗಳಲ್ಲಿ ತುಂಬಿಟ್ಟು ದ ಸ್ತಾನುಮಾಡಬಹುದು ಈ ರಸವನ್ನು ಶೇಖರಿಸಿಡುವುದೆಕ್ಕೆ ರಾಸಾಯನಿಕ ವಸ್ತುಗಳನ್ನು ಉಪಯೋಗಿಸಬೇಕಾಗಿಲ್ಲ ಸರ್ಕಾರದವರು ರೈತರಿಗೆ ತಕ್ಕ ಸಲಹೆ ಸಹಾಯಗಳನ್ನು ಒದಗಿಸುವುದಾದರೆ ಈ ಬೆಳೆಯು ಸ್ವವಸಾಯ ಪು ಹೆಚ್ಚಿ ವ್ಯಾಪಾರವು ಬೆಳೆಯ ಪುವರಲ್ಲಿ ಸಂಶಯವಿಲ್ಲ

ನಪ್ಪ ವಾಡಿನಲ್ಲಿ ಲಿಂಬೆರಸಕ್ಕೆ ಹೆಚ್ಚು ಗಿರಾಕಿಯರು ವ್ಯದರಿಂದ ಇದರ ಕೈಗಾರಿಕೆಯನ್ನು ಪುತ್ಯಕ್ಷ ಪ್ಪದಿ ಪಡಿಸಬಹುದು ಇದಕ್ಕೆ ಕ್ರಮಬದ್ಧವಾದ ವಿಷಾಟಿ ಬಹಳ ಅವಶ್ಯಕ ಆದರೆ ಈಗಾಗಲೇ ಹೊರಯುತ್ತಿರುವ ಲಿಂಬಹಣ್ಣಾನ್ನು ಉಪಯೋಗಿಸಿಕೊಳ್ಳುವುದು ಹೇಗೆ ಎಂಬುದು ಒಂದು ಸಮಸ್ಯೆ

ಲಿಂಬೆಹಣ್ಣಿನ ರಸದ ವ್ಯಾಪಾರವು ಬೆನ್ನಾಗಿ ಕುದುರಿ ಕೊಳ್ಳಬೇಕಾದರೆ ಈ ವ್ಯಾಪಾರಕ್ಕೆ ಸಂಬಂಧಪಟ್ಟ ಸಾಮಾನುಗಳು ಒಂದು ಸೊತ್ತಾಪ ಪಟ್ಟಿಲ್ಲಿ ಬರುವಂತೆ ತುರಾರಾಗಬೇಕು ಲಿಂಬೆಹಣ್ಣು ಮತ್ತು ಆವರ ರಸದ ಲ್ಲಿರುವ ಹುಳಿಯ ಅಂಶವು ಕಾಲ, ಭೂಗುಣ, ನೀರು, ವಾಯುಗುಣ ಮತ್ತು ವ್ಯವಸಾಯ ಕ್ರಮ—ಇವನ್ನನುಸರಿಸಿ ವೈತ್ಯಾಸವಾಗುತ್ತಿರುತ್ತದೆ ಮಳೆಗಾಲದಲ್ಲಿ ಬೆಳೆದ ಲಿಂಬೆಹಣ್ಣಿನ ರಸದಲ್ಲಿ ಶೇಕಡ ೫ ಆಥವಾ ೬ ರಷ್ಟು ಹುಳಿಯಿರುತ್ತದೆ ಆದರೆ ಬೇಸಗೆಯಲ್ಲಿ ಬೆಳೆದ ಲಿಂಬೆ ಹಣ್ಣಿನ ರಸದಲ್ಲಿ ಪುಗೂರು ಶೇಕಡ ೬ ಭಾಗ ಹುಳಿಯಿರುತ್ತದೆ ಆದ್ದರಿಂದ ಬೇರೆಬೇರೆ ಕಾಲಗಳಲ್ಲಿ ತಯಾರಿಸಿದ ರಸದಲ್ಲಿರುವ ಹುಳಿಯ ಅಂಶವು ವೈತ್ಯಾಸವಾಗಿರುವುದು ಸ್ವಾಭಾವಿಕ

ಲಿಂಬೆರಸದ ನಸುಹಸುರು ಬಣ್ಣಹೋಗಿ ಕಂದುಬಣ್ಣ ತಿರಿಗುವುದಕ್ಕೆ ಆಯಾ ಪ್ರದೇಶದ ತಾಪವು ಕಾರಣವಾಗಿರುತ್ತದೆ ತೀತದ ಪೆಟ್ಟಿಗೆಗಳಲ್ಲಿ (Refrigerators) ಇಟ್ಟ ರಸದ ಬಣ್ಣ, ಸುವಾಸನೆ—ಇವು ಕೆಡುವುದಿಲ್ಲ

ಶೀಸೆಗಳಲ್ಲಿ ತುಂಬಿದ ರಸವನ್ನು ಮುಂದಿನ ಟೀಸನೆಯವರೆಗೆ ಶೇಖರಿಸಿಟ್ಟು ಮಾರಬಹುದು ಬೆಳಕುಬಿದ್ದರೆ ರಸದ ಬಣ್ಣವು ಕೆಡುವುದರಿಂದ ಕತ್ತಲೆ ಪೆಸಿಗಳಲ್ಲಿ ಶೀಸೆಗಳನ್ನು ಇಡುವುದು ಒಳ್ಳೆಯದು ಒಂದು ತಿಂಗಳಿಂತ ಹೆಚ್ಚಾಗಿ ಲಿಂಬೆರಸವನ್ನು ಬೆಳಕಿನಲ್ಲಿಟ್ಟರೆ ಅದರ ಬಣ್ಣ ಬದಲಾಯಿಸುತ್ತದೆ ಕತ್ತಲಿನಲ್ಲಿ ಶೇಖರಿಸಿಟ್ಟರೆ ಅದರ ಸ್ವಾಭಾವಿಕವಾದ ಬಣ್ಣವು ಅನೇಕ ತಿಂಗಳುಗಳ ಕಾಲ ಬದಲಾಯಿಸುವುದಿಲ್ಲ ದೊಡ್ಡ ದೊಡ್ಡ ಗಡಂಗುಗಳಲ್ಲಿ ಲಿಂಬೆಹಣ್ಣಿನ ರಸ ತುಂಬಿ ಶೀಸೆಗಳನ್ನು ತೆಬಿಸಿಡಲು ಕತ್ತಲಾಗ, ಜೊಕ್ಕಟವಾದ, ತಂಪಾಗಿರುವ ಮತ್ತು ಗಾಳಿಯಲ್ಲಿ ಆವೆಯಿಲ್ಲದ ಸ್ಥಳಗಳನ್ನೇರ್ಪಡಿಸಬೇಕು ಸಣ್ಣ ಸಣ್ಣ ಅಂಗಡಿಗಳಲ್ಲಿ ವರದ ಪೆಟ್ಟಿಗೆಗಳನ್ನು ಈ ಕೆಲಸಕ್ಕೆ ಉಪಯೋಗಿಸಬಹುದು

ಕೃತಕ ಲಿಂಬೆರಸಕ್ಕೆ ಲಿಂಬೆಹಣ್ಣಿನ ಕುಸುಮಗಳನ್ನು ಹಾಕಿಟ್ಟರೆ ರಸವು ಕೆಡುವುದಿಲ್ಲ

ರಸವು ಕೆಡದಂತೆ ಹೆಚ್ಚುಕಾಲ ನಿಲ್ಲಬೇಕಾದರೆ ತದನ್ನು ಡುವ ರೀತಿಯು ಬಾಯಿಯನ್ನು ಚೆನ್ನಾಗಿ ಮೊಹರುಮಾಡ ಬೇಕು ಅಂದರೆ ಶೀಸೆಗಳಲ್ಲಿ ತುಂಬಿದ ರಸವನ್ನು ಗೊತ್ತಾದ ಒಂದು ಕೆದಕ್ಕೆ ಬಿಸಿನೀರಿನ ಪಟ್ಟಿಗೆಯಲ್ಲಿ ತಟ್ಟನೆ ಅರಿಸುವಾಗ ಹೊರಗಿನ ಗಾಳಿ ಬೀಸಿ ಕೆಡದಂತಾಗಿ ಕೂಡಲೆ ಶೀಸೆಯ ಬಾಯಿಯನ್ನು ಮುಚ್ಚಬೇಕು ಹೀಗೆ ಮಾಡಿದ ಪುದರಿಂದ ಸರಕಿಗೆ ಒಳ್ಳೆಯ ಗಿರಾಕಿಯುಂಟು

ರಾಸಾಯನಿಕ ವಸ್ತುಗಳನ್ನೂ ಸೀರನ್ನೂ ಉಪಯೋಗಿಸಿ ತಯಾರಿಸಿದ ಲಿಂಬೆರಸದ ವಿಷಯದಲ್ಲಿ ಇಷ್ಟು ಎಚ್ಚರಿಕೆ ತೆಗೆದುಕೊಳ್ಳಬೇಕಾದುದಿಲ್ಲ, ಏಕೆಂದರೆ ಕೃತಕ ಲಿಂಬೆರಸದಲ್ಲಿ—

೧ ಯಾವ ವಿಧವಾದ ಬೂಷ್ಮೆಯು ಬರುವುದಕ್ಕೂ ಅವಕಾಶವಿಲ್ಲದಂತೆ ಸಾಕಾದಷ್ಟು ಹುಳಿ ಇರುತ್ತದೆ

೨ ಸಾಮಾನ್ಯವಾಗಿರುವ ಬಹು ಪಟ್ಟಿಗೆ ಕಡಿಮೆ ಇರುತ್ತದೆ ಆದರಿಂದ ಶೀಲೀಂಧ್ರಗಳ ಜೀವನದೆಗೆಗೆ ಎಡೆಯು ರುವುದಿಲ್ಲ

೩. ರಸವನ್ನು ಸಾಮಾನ್ಯವಾಗಿ ಗಂದಕದ ಜೊಗ ಯೊಂದಿಗೆ ಶೇಖರಿಸಿಡುವುದುಂಟು

ಸರಕುಗಳನ್ನೂ ನೋಟಿಯ ಸ್ಥಳಗಳಿಗೆ ಮಾರಾಟಕ್ಕೆ ಕಳಸಬೇಕಾದರೆ ನೋಟಿಕ್ಕೆ ಅಂದವಾಗಿರುವ ಪಾತ್ರೆಗಳಲ್ಲಿ ತುಂಬಬೇಕು ರಸ ತುಂಬುವುದಕ್ಕೆ ಉಪಯೋಗಿಸುವ ಶೀಸೆಗಳು ಅಂದವಾಗಿದ್ದರೆ ಬೇಗನೆ ಗಿರಾಕಿ ಬರುತ್ತದೆ ಆದ್ದರಿಂದ ಈ ಶೀಸೆಗಳಿಗಾಗಿ ಸ್ವಲ್ಪ ಹಣ ಹೆಚ್ಚುಮಾಡುವುದು ಲಾಭಕರ ಶೀಸೆಗಳು ಸುಲಭವಾಗಿ ಬಾಯಿಮುಚ್ಚಿ ಪೆಟ್ಟಿಗೆಗಳಲ್ಲಿ ಅಡಕುವುದಕ್ಕೆ ಯೋಗ್ಯವಾಗಿರುವಂತಿರಬೇಕು ೨೪ ಔನ್ಸಿನ ಶೀಸೆಗಳಲ್ಲಿ ತುಂಬುವುದು ಉತ್ತಮ ೧೨ ಔನ್ಸಿನ ಶೀಸೆಗಳಿಗೆ ಗಿರಾಕಿ ಹೆಚ್ಚಾಗಿರುವುದರಿಂದ ಅಂತಹ ಶೀಸೆಗಳಲ್ಲಿ ರಸವನ್ನು ಮಾರಾಟಕ್ಕಿಡಬಹುದು

ಭೋಜನಶಾಲೆಗಳು, ಫಲಾಹಾರ ಮಂದಿರಗಳು ಮುಂತಾದ ಕಡೆಗಳಿಗೆ ಒಟ್ಟೊಟ್ಟಾಗಿ ದೊಡ್ಡ ದೊಡ್ಡ ಜಾಡಿಗಳಲ್ಲಿ ಲಿಂಬೆರಸ ತುಂಬಿ ಸರಬರಾಯಿ ಮಾಡಬಹುದು ಜಾಡಿಗಳಿಂದ ರಸವನ್ನು ಬಗ್ಗಿಸಿಕೊಂಡು ಅವನ್ನು ಚೊಕ್ಕಟವಾಗಿ ತೊಳೆದು ಪುನಃ ರಸ ತುಂಬಬಹುದು ಇಲ್ಲದಿದ್ದರೆ ರಸದಲ್ಲಿ ಹುಳ ಬಿದ್ದು ಕೆಟ್ಟ ನಾತ ಹೊಡೆಯಲವಕಾಶವುಂಟು ದೊಡ್ಡ ದೊಡ್ಡ ಕಾರ್ಖಾನೆಗಳ ಉಪಯೋಗಕ್ಕಾಗಿ ಇಂಗ್ಲೆಂಡಿಗೆ ಪಶ್ಚಿಮ ಇಂಡೀಸ್, ಜಮೈಕಾ ಮತ್ತು ಆಫ್ರಿಕಾಗಳಿಂದ ಲಿಂಬೆರಸವು ಪೀಪಾಯಿಗಳಲ್ಲಿ ಭರ್ತಿಯಾಗಿ ರಫ್ತಾಗುತ್ತದೆ ಸ್ಥಳೀಯ ಗಿರಾಕಿಗಳಿಗಾಗಿ ಲಿಂಬೆರಸವನ್ನು ೨೦ ಆಥವಾ ೨೪ ಔನ್ಸಿನ ಶೀಷಿಯುನ ಕಪ್ಪು ಶೀಸೆಗಳಲ್ಲಿ ತುಂಬಿ ಮಾರಾಟಕ್ಕಿಡಬಹುದು ಅನುಕೂಲವಿರತಕ್ಕವರು ತಮ್ಮ ಇಷ್ಟಾನುಸಾರ ಶೀಸೆಗಳಲ್ಲಿ ತುಂಬಿ ಮಾರಾಟಕ್ಕಿಡಬಹುದು.

(" ಆಗ್ರಿಕಲ್ಚರ್ ಅಂಡ್ ಲೈವಾಸ್ಟಾಕ್ ಇನ್ ಇಂಡಿಯಾ ")

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ರಂಭಾಪುರಪಟ್ಟದಲ್ಲಿರುವ ಸದ್ಗುರುಗಳಾದ ಪೂಜ್ಯಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಶಿಷ್ಯರ ಮನೆಗಳಲ್ಲಿ ಸಂಚರಿಸಿ ಶಿಷ್ಯರ ಮನೆಗಳಲ್ಲಿ ಆಗಾಗ್ಗೆ ಸಂಭವಿಸುವ ಜನನ ಮರಣ ವಿವಾಹ ಮುಂತಾದ ಸಂಗತಿಗಳನ್ನು ಸಂಗ್ರಹಿಸಿ ಅವುಗಳನ್ನು ಒಂದು ರಿಜಿಸ್ಟರ್ ಪುಸ್ತಕದಲ್ಲಿ ಬರೆದಿಡುವ ಕೆಲಸವನ್ನು ಕೈಗೊಂಡಿರುವ ಸಂಗತಿಯು ಸರ್ವರಿಗೂ ತಿಳಿದಿರುವ ವಿಷಯವಾಗಿದೆ. ಈ ಕೆಲಸವು ಸಾಂಗವಾಗಿ ನೆರವೇರಿ ಪೂರ್ಣಗೊಳ್ಳಲು ಸುಮಾರು ಹತ್ತು ವರ್ಷಗಳಾದರೂ ಬೇಕಾಗಬಹುದು. ಈ ಕೆಲಸವು ಪೂರ್ಣಗೊಂಡ ಮೇಲೆ ಈ ಪುಸ್ತಕವು ಸಾರ್ವಜನಿಕರಿಗೆ ಲಭ್ಯವಾಗುವುದು. ಈ ಪುಸ್ತಕವು ಪ್ರಕಟವಾಗುವ ಮುಂಚೆಯೇ ಇದರ ಪ್ರತಿಗಳಿಗಾಗಿ ಅನೇಕರು ಬೇಡಿಕೆ ಸಲ್ಲಿಸಿರುವರು. ಈ ಪುಸ್ತಕವು ಪ್ರಕಟವಾಗುವ ಮುಂಚೆಯೇ ಇದರ ಪ್ರತಿಗಳಿಗಾಗಿ ಅನೇಕರು ಬೇಡಿಕೆ ಸಲ್ಲಿಸಿರುವರು.

ಮನೋಹರವಾದ ಫೋಟೋಗಳು.

ಶ್ರೀ ವೀರಾರಣಾರ್ಯರ ಒಂಥತ್ತು ಆಮ್ರತಲೀಜೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ ೦—೩—೦

ಶ್ರೀ ವೀಣುಕಾದಿ ಪಂಚಾಚಾರ್ಯರು ಲೋಕಮಿಥ್ಯಾತಾದಿ ಅಗಸ್ತ್ಯ, ದಧೀಚಿ, ವ್ಯಾಸ ಸಾನಂದ, ಪೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧—೬

ಸಪ್ಯೆ ಲಿಂಗಾರೋಹಣಮಾಡಿರತಕ್ಕ ಅವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ ೦—೧—೬

ಶ್ರೀ ಜಗದ್ಗುರು ಸಂಘಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ ೦—೧—೬

ಶ್ರೀ ಜಂಗಮ್ಗುರು ಪಂಡಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ ೦—೦—೯

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ನಡಸುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ವಿಘ್ನೇಶ್ವರನ ಪ್ರಾರ್ಥನಾನುಸಾರವಾಗಿ ಏಕಕಾಲದಲ್ಲಿಯೇ ನೂರುಕೋಟಿ ಗುರುರೂಪವನ್ನು ಧಾರಣಮಾಡಿ ನೂರುಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ ೦—೦—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಕಾಶೀಕ್ಷೇತ್ರನಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಪೀಠಾರೋಹಣದ ಫೋಟೋ .. ೦—೦—೯

ಶ್ರೀ ಕಾಶೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೦—೯

ಶ್ರೀಮಹ್ಮಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೦—೯

ಶ್ರೀ ಚಂದ್ರಾಪುರೀ ಪೀಠಾಧೀಶ್ವರ ಜಗದ್ಗುರು ವಿಷಾದಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮತ ಪಂಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧ಕ್ಕೆ ೦—೪—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾವ್ಯಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ ೦—೦—೯

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .. ೦—೦—೯

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೯

ಹಿಮವತ್ಪರ್ವತದ ಉಪ್ಪರಿಗೆಯಲ್ಲಿ ಕೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ .. ೦—೦—೯

ಶ್ರೀರಂಭಾಪುರೀ ಪೀಠಾರೋಹಣದ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ . ೦—೦—೯

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಗೊಂಡಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೦—೯

೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಡಾಕ್ಟರ್ ಬಿ. ಜಿ ಯವರ

ಸುಗಂಧ ನಸ್ಯದಪುಡಿ.

ಶೋಕಪ್ರಸಿದ್ಧವಾದ ಈ ಸುಗಂಧ ನಸ್ಯದಪುಡಿಯು ಕಂಡುಹಿಡಿಯಲ್ಪಟ್ಟಿದ್ದು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ,

(Registered Trade Mark)

ಯೋಗ್ಯತಾಪತ್ರಗಳನ್ನು ಕೊಟ್ಟಿರುವ ಈ ಪ್ರಸಿದ್ಧವಾದ ಸುಗಂಧ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ:—ಪೀನಸ, ಒಂಟಿ ತಲೆನೋವು, ತಲೆಯ ಜಿಡ್ಡಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂದರ್ಪೆ ಮೇಲ್ಪಟ್ಟು ೯೬ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ. ಮೂರುಚಿಟಿಕೆಸ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದಪುಡಿಯಲ್ಲಿ ಒಂದು ಚಿಟಿಕೆಯನ್ನು ನಿಶ್ಚಯಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಅನೇಕಪ್ರಬುಗಳು ಉಪಯೋಗಿಸುತ್ತಾರೆ ಮಾನವಿ ಸೀಸೆ ಪ್ರೈ. ಬುಡ್ಡಿ ಒಂದಕ್ಕೆ ೪ ಆಣೆ ಡಜ್ ಒಂದಕ್ಕೆ ಕ್ರಯ ರೂ ೩-೮-೦ ವಿ.ಪಿ ಆಗಿ.

ನಿಮ್ಮ ವಿಳಾಸವನ್ನು ತಿಳಿಯುವಂತೆ ಬರೆಯಿರಿ

ಗುರುಬಸವ ಆಂಡ್ ಕಂಪೆನಿ ಲಿಮಿಟೆಡ್,

[೨೨] ಫೋ ಬಾ ೫೧೦. ಮದರಾಸು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ) .... ೧ ಆಣೆ

ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) . ೧ ಆಣೆ

ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ) .... ೧ ಆಣೆ

ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೮ನೆಯ ಆವೃತ್ತಿ) .... ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ) ೧ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ .... ೨ ಆಣೆ

ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ) .... ೨ ಆಣೆ

ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) .... ೨ ಆಣೆ

ಪಂಚಾಚಾರ್ಯಪ್ರಭಾಕರ .... ೨ ಆಣೆ

ಶ್ರೀಗುರುತತ್ತ್ವಪದಗಳು .... ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ .... ೨ ಆಣೆ

ವೀರಶೈವಮತಮಿಮಾಂಸಾ .. .... ೩ ಆಣೆ

ವೀರಶೈವಾಚಾರವಿಧಿ (೩ನೆಯ ಆವೃತ್ತಿ) .... ೩ ಆಣೆ

ಲಿಂಗಧಾರಣವಿಧಿ .... ೪ ಆಣೆ

ವಿವಾಹವಿಧಿ (೩ನೆಯ ಆವೃತ್ತಿ) .... . ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... .. ೪ ಆಣೆ

ಸನ್ಯಾಸಾಶ್ರಮನಿಮರ್ಶತತ್ತ್ವಸ್ಫೀಕರಣ (೩ನೆಯ ಆವೃತ್ತಿ) .... ೪ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) .... ೪ ಆಣೆ

ವೀರಶೈವಮಹಾತ್ಮರು .... ೪ ಆಣೆ

ಬಸವಧ್ವಾಂತದಿವಾಕರ (೩ನೆಯ ಆವೃತ್ತಿ) .... ೪ ಆಣೆ

ಶಿವಾದ್ವೈತಪರಿಭಾಷಾ (ಸಂಸ್ಕೃತ) .... ೪ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಮು (ತೆಲಗು) ೪ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) ೧೨ ಆಣೆ

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) .... ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ... ೧೨ ಆಣೆ

ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ... ೧೨ ಆಣೆ

ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ

ಶ್ರೀಕರಭಾಷ್ಯಂ (ಚತುಸ್ಸೂತ್ರೀ) .... ೧ ರೂ

ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ) .... ೧ ರೂ.

ವೀರಶೈವರತ್ನ (೫ನೆಯ ಆವೃತ್ತಿ, ೩೦ಮಹತ್ವದ ಫೋಟೋಗಳಿರುವುದು) .... ೧೫ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ೧ ರೂ.

ಕೇನೋಪನಿಷತ್ (ಕನ್ನಡ ಟೀಕಾಸಹಿತ) .... ೧ ರೂ.

ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) .... ೧ ರೂ.

ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) .... ೨ ರೂ

ವೀರಶೈವಸಿದ್ಧಾಂತಸುಧಾಕರ .... ೨ ರೂ.

ಶಿವಾಧ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೨೩ ಪುಟ) .... ೪ ರೂ.

A brief life-sketch of Pandit Sri Kashinatha Shastriji (*English*) 4 As.

The Philosophical Aspect of Virasaivism (*English*) .... 8 As.

Speeches by Pandit Shri Kashinatha Shastriji (*English*) 12 As.

ವೀರಶೈವರತ್ನ (ಮರಾಠೀ) ... ... ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) . ೧ ರೂ.

ವೀರಶೈವೈಕ್ಯಶೇಖರ (ಸಂಸ್ಕೃತ) ... ... ೧ ರೂ.

ನದಿಕೇಶ್ವರಕಾರಿಕಾ (ಸಂಸ್ಕೃತ) .. ... ೨ ಆಣೆ

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ... ... ೩ ರೂ.

೧ ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಸಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ ಪುಸ್ತಕ ವ್ಯಾಪಾರಿಗಳಿಗೂ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ) ೧೨ ಆಣೆ
ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿ





REGISTERED No. M. 2200 ॥ ತ್ರೈಜಗದ್ಬಂಧು ಪಂಚಾಚಾರ್ಯಸ್ವಾಮಿ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಸಂಜಾಸ್ಯಪೀಠಾಧಿಸರ್ । ಪಂಚಕ್ಲೇಶವಿನಾಶಕರ್ ವರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರನರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೧ ಆಣೆ. ಬಿಡಿ ಸ್ವತಿ ೧೫½ ಪೈ ಪರಸ್ಥಳದವರಿಗೆ ೨ ರೂ. ೪ ಆಣೆ ವಿ. ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೪.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ ನೇ ಮೇ ೧೯೪೦ [ಸಂಚಿಕೆ ೧

ಹೋಳ್ಳಗುಂದಂರವರ ಕೊಲೆಯ ವಿಚಾರಣೆಯು ಮುಗಿಯಿತು.

ಪಬ್ಲಿಕ್ ಪ್ರಾಸಿಕ್ಯೂಟರ ವಾದ

ಇವರ "ಸೇಕೇಸಲು" ವಿಚಾರಣೆಯು ಬಹಳಾಗಿಯೂ ನಡೆದಿದ್ದು, ಈ ಗುರ್ತಿಯ ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟಿದ್ದು ಸಹ ಆಗಿರುವುದು. ಆದ್ದರಿಂದ ಈ ಮೊಕದ್ದಮೆಯ ವಿಷಯವಾಗಿ ಹೆಚ್ಚಿಗೆ ಬರೆಯುವ ಅವಶ್ಯಕತೆಯಿಲ್ಲವೆಂದು ಭಾವಿಸಿ ಸುಮ್ಮನಿರಲು ಆಲೋಚಿಸಿದ್ದೆವು. ಆದರೆ ಮೊನ್ನೆ ಮೊನ್ನೆ ಕೆಲವು ಮಹನೀಯರು ಆಫೀಸಿಗೆಬಂದು ಈ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಕೇಳಿದ್ದರಿಂದ ಮತ್ತು ಅವರಲ್ಲಿ ಕೆಲವರು ಈ ಮೊಕದ್ದಮೆಯ ಪ್ರಾಸಿಕ್ಯೂಟರ್ ಆಗಿದ್ದ ಶ್ರೀ ಪೈ ಕೋರ್ಟಿನಲ್ಲಿ ವಿಚಾರಣೆ ಆದಂತೆ ಆರೋಪಿಗಳ ಮೇಲೆ ಪ್ರಾಸಿಕ್ಯೂಷನ್ ಸಮರು ಹೊರಿಸಿದ ಆಪಾದನೆಗಳಿಗೆ ಬಿಡುವಿನಿಂದ ಉತ್ತರ ಗಮನಿಸುವುದಕ್ಕಿಂತ ನಾವು ಕ್ರಾಸ್ ಮಾಡಿದ್ದೇವೆ.

ಅಪ್ರೂವರು, ನಿಲ್ ಬರೆದರೂ, ಅಕ್ಷೇಪ್ಯವಾಗಿರುವ ಪತ್ರ ಮಾತ್ರ ಗಿರಾಕಿಗೆ ಪ್ರಾಮಿಸ್ಸರಿ ಪತ್ರ ಸಕ್ಸೆಸ್ಟಿಗೆ ಎಂದು ಇರುವ ಇಷ್ಟೆ ಅಕ್ಷರಗಳ ಹಾಳೆಯಾಗಿ ಮಾಡಿಲ್ಲ ಅಮಾಯಿಂದ ಹೊಸದಾಗಿ ಮುಂಬರುವ ಸಾಕ್ಷ್ಯವಿಂದ ಆಪಾದಿಗಳು ಕಪ್ಪುಮೂರ್ತಿಯವರು ಪ್ರತ್ಯಾನುಪ್ರವೇಶ (ಶ್ರೀ ವಿ. ಇ. ಶ್ರೀನಿವಾಸಯ್ಯಂಗಾರ್ಯರು ಓಯ್ ಸವಿಯಲ್ಲಿನೆಂದರು.) ಡಿಫೆನ್ಸಿನವರು ಆವರ ಸಾಕ್ಷ್ಯವನ್ನು ಪಡೆಯಬೇಕೆಂದಿದ್ದಕ್ಕೆ ಕೋರ್ಟಿನ ಮುಂದೆ ಯಾವ ವಿಷಯವನ್ನೂ ಇಟ್ಟಿಲ್ಲ. ಇಂತಹ ದೊಡ್ಡ ಹೊಣೆಸ್ಥಮೆಯಲ್ಲಿ ಸತ್ಯಕ್ಕನ್ನು ಕಂಡುಹಿಡಿಯುವುದಕ್ಕಾಗಿ ಅಪ್ರೂವನ್ನು ತೆಗೆದುಕೊಂಡ ಕಾರಣ ಕೊಳ್ಳಬಹುದಿತ್ತು. ಅಪ್ರೂವನ್ನು ತೆಗೆದುಕೊಂಡ ಆಕಾರ ಸ್ವಲ್ಪಾ ಭಿಕ್ಷೆ ಕೊಡುವುದರಿಂದ ಸತ್ಯವನ್ನು ನ್ಯಾಯ ಕೋರ್ಟಿನಲ್ಲಿ ಎಷ್ಟರ ಮಟ್ಟಿಗೆ ಸಾಧಿಸಬಹುದೆಂಬ ಈ ಕೋರ್ಟಿಗೆ ಅಭಿಪ್ರಾಯವನ್ನು ಕೊಡಲಿಕ್ಕೆ ಸಮಿತಿ ನವಾಗಿದ್ದೇವೆ. ಈ ಮೊಕದ್ದಮೆಯಲ್ಲಿ ಸಾಕ್ಷಿಗಳ ಸಂಖ್ಯೆಯನ್ನು ಕಡಿಮೆ ಕಡಿಮೆ ಇರಬೇಕೆಂಬ ಸಲಹೆಯನ್ನು ಸಹ ಕೊಡಲಿಲ್ಲವೆಂದು ಹೇಳಿದರು. ಪ್ರಾಸಿಕ್ಯೂಷನ್ನಿನವರು ಯಾವ ಸಾಕ್ಷಿಗಳನ್ನು ಹಾಜರುಪಡಿಸಬೇಕೆಂಬುದು ಅವರ ಇಷ್ಟಕ್ಕೆ ಬಿಟ್ಟ ವಿಷಯವೆಂದು ಹೇಳಿದರು. ಆಪಾದಿಗಳ ಪರವಾಗಿ ಸಾಕ್ಷಿಗಳನ್ನು ಕರೆಯಿಸಿದ್ದು ಅವರ ಸಾಕ್ಷ್ಯವು ಪ್ರಾಸಿಕ್ಯೂಷನ್ ಸಾಕ್ಷ್ಯಕ್ಕೆ ವಿರುದ್ಧವಾಗಿರುವುದರಿಂದ ಅವರ ಸಾಕ್ಷ್ಯವನ್ನು ಪರಿಶೀಲಿಸಿ ಅಭಿಪ್ರಾಯ ಕೊಡಬೇಕ

॥ ಶ್ರೀಜಗದ್ಗುರು ಹಾರುಕ್ಕಾಚಾರ್ಯಾಯನಮಃ ॥

ಪುಷ್ಪಾಂಜಲಿ

ಬಹು ಸುಂದರವಾದ ವರ್ಣ ಮತ್ತು ಆಕಾರಗಳಿಂದಲೂ ಪರಿಮಳಾಸನೆಯಿಂದಲೂ ಕೂಡಿರುವ ಪುಷ್ಪಗಳು ಸುಖಸಂತಸಗಳಿಕೆಗಳನ್ನುಂಟು ಮಾಡುವವಲ್ಲವೆ! ನಾವು ಯೋಚಿಸುವ ಉತ್ತಮ ಯೋಚನೆಗಳೂ ಮಾಡುವ ಉತ್ತಮ ಕಾರ್ಯಗಳೂ ನಮ್ಮಗಳ ಮನೋ ಮಂದಿರದಲ್ಲಿ ಸರ್ವಾಂತರ್ಯಾಮಿಯಾದ ಪುಷ್ಪಗಳಿಂದ ಪರಿಣಮಿಸುವುವು. ಅಂತಹ ಸುಂದರವೂ ಆತಿಪವಿತ್ರ ಇಹಪರ ಶ್ರೇಯಸ್ಸುಗಳಿಗೆ ಸಾಧಕೀಭೂತವೂ ಆದ ಮನೋರಾಜ್ಯವನ್ನು ತಮ್ಮ ಸ್ವಂತವಾದ ಸ ಎಣ ಪುಷ್ಪಗಳಿಂದ ಭವಭಂಜಕನಾದ ದಕ್ಷಿಣಾಮೂರ್ತಿ ಯನ್ನು ಪೂಜಿಸುವ ಮಾನವನ ಭಾಗ್ಯವು ಅತಿ ವಿಶೇಷವಾಗಿರುವುದು.

ಆಹಿಂಸಾಪ್ರಥಮಾಭಿಷ್ಟಪುಷ್ಪಮಿಂದ್ರಿಯನಿಗ್ರಹಃ ॥
ಸರ್ವಪ್ರಾಣಿದಯಾಪುಷ್ಪಂ ಕ್ಷಮಾಪುಷ್ಪಂ ವಿಶೇಷತಃ ॥
ಶಾಂತಿಪುಷ್ಪಂ ತಪಃಪುಷ್ಪಂ ಧ್ಯಾನಪುಷ್ಪಂ ತಥೈವಚ ॥
ಸತ್ಯಾಸ್ಟಪುಷ್ಪಮಷ್ಟಾಂಗಂ ಶಿವಪ್ರೀತಕರಂಸದಾ ॥

"ಅಸ್ಯರ ದೇಹಾವಯವಗಳಿಗೆ ತ್ರಿಕರಣಗಳಿಂದಲೂ ಅಹಿತವೆಲ್ಲ ನೂಹಿಸಿಬಿಡುವವೋ ಸಂಧಿಯು ಹೂವು; ಎಲರು ನೆಯವೆ. ಇಂದ್ರಿಯ ನಿಗ್ರಹವು; "ಅತ್ಯತಪ್ರೀತಿಭೋಜನ" ಎಂಬಂತೆ ಸಮಸ್ತ ಪ್ರಾಣಿಗಳಲ್ಲಿ ದಯಾಪರವಾಗಿರುವದು. ಮೂರನೆಯ ಹೂವು; ತನಗೆ ಮಾಡಿದ ಕೇಡನ್ನು ಪುಷ್ಪಿಸುವುದು ಸಾಲ್ಗುನೆಯ ಹೂವು: ಶಾಂತಿ ಪುಷ್ಪವು ಐದನೆಯದು; ಆರನೆಯದು ತಪಃ ಪುಷ್ಪವು; ಧ್ಯಾನ ಪುಷ್ಪವು ಏಳನೆಯದು; ಸತ್ಯವು ಎಂಟನೆಯ ಪುಷ್ಪವು; ಈ ವಿಧವಾದ ದಿವ್ಯ ಪುಷ್ಪಗಳು ಸಾಂಬಮೂರ್ತಿಗೆ ಯಾವಾಗಲೂ ಪ್ರಿತಿಕರ ಅವಂದವನ್ನುಂಟುಮಾಡುವ ತಕ್ಕವುಗಳು" ಎಂದು ಆದ್ಯರಿಂದ ಹೇಳಲ್ಪಟ್ಟಿರುವವು. ಆದಪ್ರಯುಕ್ತವಾಗಿ ನಾವು ಯೋಚಿಸುವ ಸ್ತುತಿಯೊಂದು ಒಳ್ಳೆಯ ಯೋಚನೆಯೂ ಒಂದು ಒಳ್ಳೆಯ ಪುಷ್ಪವೆಂತಿರುವುದು.

(೧) ನಮಗಿಂತ ದೊಡ್ಡವರು ನಮಗೆ ನೆರವಾಗಬೇಕೆಂದು ನಾವು ಇಚ್ಛಿಸುವರಾದರೆ, ನಮಗಿಂತ ಕಿರಿಯರಿಗೆ ನಾವು ಸಹಾಯಕರಾಗಬೇಕು. ತಕ್ಕ ಅನುಕೂಲತೆಗಳಿಲ್ಲದೆ ಸಹಾಯಮಾಡಿರೆಂದು ಆರ್ತನ್ನಪಿಯಿಂದ ನಮ್ಮ ಕಡೆಗೆ ಕೈನೀಡಿ. ಅಂಗಲಾಚಿ ಬೇಡುತ್ತಿರುವ ಭಿಕ್ಷುವರಿಗೆ ನೆರವಾಗದ ನನಗೆ ನನ್ನ ಪೊರೆಯಸ್ಸು ಕೇಳಿ ದಯಮಿಂತಾಯಾ ದೊಡ್ಡವರಾದವರು ನನ್ನ ಬಾಸ್ಕೆಯಂ ಪೂರೈಸುವ ಏಗೆ ಹೇಗೆ? ನಾವು ಹಸುವಿಗೆ ಹುಲ್ಲು ನೀಡಿಗಳಂದ ಆಲೈಕೆಮಾಡಿದರೆ ಹಾಲು ಕೊಡುವುದು; ಅವನ್ನೇ ಅಶ್ರದ್ಧೆ ಮಾಡಿದರೆ ಹಾಲು ಕೊಡುವುದೇ? ಈ ಸಂದರ್ಭದಲ್ಲಿ " Love begets love " ಎಂಬ ನಾಣ್ಣುನ್ನು ಮರೆಯಲಾಗದು.

(೨) ಹೊರಗಿನ ದಿನಮಣಿಯ ಪ್ರಕಾಶವು ಮನೆಯೊಳಗಿಗೆ ಪ್ರವೇಶಿಸಬೇಕಾದರೆ ಕಿಡಕಿಗಳನ್ನು ತೆರೆಯಿ ಬೇಕು. ತೆರೆದಷ್ಟೂ ಹೆಚ್ಚು ಬೆಳಕು ಬರುವದು. ಮುಚ್ಚಿದಷ್ಟೂ ಅಂಧಕಾರವಾಗುವದು. ಆದರಂತೆಯೇ ಆತ್ಮನೆಂಬ ಸೂರ್ಯನ ತೇಜಸ್ಸು ನಮ್ಮ ಸುತ್ತಲೂ ಎಲ್ಲೆಯೆಯಲ್ಲಿಯೂ ವ್ಯಾಪಿಸಿರುವದು. ಅದು ನಮ್ಮ ಹೃದಯವೆಂಬ ಗೃಹದೊಳಗೆ ಪ್ರವೇಶಿಸಬೇಕಾದರೆ ಸ್ವಾರ್ಥತೆಯಿಂದ ಮುಚ್ಚಿರುವ ಕದ ತೆಡೆದಿಗಳನ್ನು ಪರಾರ್ಥತೆಯಿಂದ ತೆರೆದಷ್ಟೂ ಆತ್ಮತೇಜಸ್ಸು ಹೆಚ್ಚಾಗಿ ಅಂತರಂಗದಲ್ಲಿ ಪ್ರವೇಶಿಸಿ ಅಜ್ಞಾನವೆಂಬ ಅಂಧಕಾರವೂ ಕಡಿಮೆ ಮಾಡುವದು. ಗವಾಕ್ಷದ ಬಣ್ಣ ಆಕಾರಗಳಿಗೆ ತಕ್ಕಂತೆ ಒಳಕ್ಕೆ ಬರುವ ಸೂರ್ಯರಶ್ಮಿಯು ಇರುವದು. ಗಾಜು ನೀಲ (ಭಕ್ತಿ) ವರ್ಣದ್ದಾದರೆ ಒಳಕ್ಕೆ ಬರುವ ಪ್ರಭೆಯು ನೀಲ (ಭಕ್ತಿ) ವರ್ಣವಾಗಿರುವದು. ಗಾಜು ಅರುಣಗೆಂಪು (ಸ್ನೇಹ)ಬಣ್ಣವಾಗಿದ್ದರೆ ಒಳಗೆ ಬರುವ ಪ್ರಭೆಯೂ ಅಂತಹವಾಗಿರುವದು. ಗಾಜು ಕಪ್ಪು (ಸ್ವಾರ್ಥತೆ) ಬಣ್ಣದಿಂದ ಕೂಡಿದ್ದಾದರೆ ಒಳಗೆ ಪ್ರವೇಶಿಸುವ ತೇಜಸ್ಸೂ ಕಪ್ಪಗೆ ಮಲಿನವಾಗಿ ದುಷ್ಪವಾಸವ್ಯಾಗಿರುವದು. ಇತರವಾದವುಗಳೂ ಇದರಂತೆಯೆ.

(೩) ಮಾನವನ ಹೃದಯವೆಂಬ ಮಂದಿರಕ್ಕೆ ಅನೇಕ ಗವಾಕ್ಷಗಳಿರುವವು. ಉಚಿತವನ್ನು ಹೆದುರಿಸಿ ಮಾಡುವ ಪ್ರತಿಯೊಂದು ಕಾರ್ಯವೂ ಒಂದೊಂದು ಅಂತರಂಗ ಗವಾಕ್ಷವು. ಸ್ವಾರ್ಥವೂ ಪರಾರ್ಥವೂ ಹೊತೆತು ಪರಾರ್ಥಕ್ಕಾಗಿ ಹೊಣಗುವ ಯೋಚನೆಯು ಒಂದು ಗವಾಕ್ಷವು. ಅಸ್ಯರ ದೇಹ ಮಸ್ಸಿನ ಯಾತನೆಯೂ ತಪ್ಪುಸುವನೆಕ್ಕಾಗಿ ಮಾಡುವ ಕೆಲಸವು ಇನ್ನೊಂದು ಇತರರ ಹಸಿವು ತೃಷೆಗಳನ್ನರಿಗಸಲು ಮಾಡುವ ಪ್ರಯತ್ನವು ಮತ್ತೊಂದು. ಇತರರ ಅಜ್ಞಾನಾಂಧಕಾರವು ತೊಲಗಿಸಿ ಸುಜ್ಞಾನ ಸೂರ್ಯ ಪ್ರಭೆಯೂ ಪ್ರಚಾರಗೊಳಿಸಲು ಸಾಧಿಸುವ ಪ್ರಯತ್ನವು ಮಗದೊಂದು. ಇತರರ ಮಾನಾಪಮಾನಕ್ಕಾಗಿ ಚಿಂತಿಸದ ಹಾಗೆ ಇನ್ನೊಂದು. ದೇವಾಜ್ಞಾ ಗುರುಹಿರಿಯರಲ್ಲಿ ಭಕ್ತಿಯಿಂದ ಬಾಳುವಂತೆ ಮಾಡುವ ಯೋಚನೆಯು ಭಕ್ತಿಯ ಭವ್ಯಮಂದಿರವನ್ನು ತೋರಿಸುವ ಪ್ರವೇಶದ್ವಾರವೆನಿಸುವುದು. ಈ ಇವಿಲಿ ಜನಾಧಾರ ಮತ್ತು ವಿಶ್ವದಲ್ಲಿ ಯಾವ ಎತ್ತರಸ್ಥ ಸ್ಥೈರ್ಯವೇ ಎನಿಸೊಪ್ಪುವಿರ ವಿಚಾರಿಸಿದರೆ ನಿಸ್ಸಂಶಯವಾಗಿ ಈ ಸೋಪಾನಗಳೇ ಆಗಿರುವುದು. ಈ ಸೋಪಾನಗಳನ್ನು ಅತ್ಯಲಾಭ್ಯವಾಗಿ ಹಾಗೂ ಅತ್ಯಾಯಾಸವಾಗಿ ಏರಲು ಅನುಕೂಲವಾಗುವಂತೆ ಹೃದಯ ಮಂದಿರದಲ್ಲಿ ಸ್ಥಾಪಿಸಿಕೊಳ್ಳುವುದೇ ಆತ್ಮಸಾಕ್ಷಾತ್ಕಾರಕ್ಕೆ ಹೃದಯ ಶುದ್ಧಿಯೆಂದು ಹೇಳಲ್ಪಟ್ಟಿರುವುದು. ಈ ಸೋಪಾನಗಳನ್ನು ಏರಲು ಅನುಕೂಲವಾಗುವಂತೆ ಮಾಡಿಕೊಳ್ಳುವುದೇ ಸಾಧನೆಯೆಂದು ಹೇಳಲ್ಪಟ್ಟಿರುವುದು. ಈ ಸಾಧನೆಯಲ್ಲಿ ಸಾಧಕರಿಗೆ ಸಹಾಯಕರಾಗಿರುವ ಸಾಧನಗಳೇ ಪುಷ್ಪಗಳು. ಈ ಪುಷ್ಪಗಳಿಂದ ಪೂಜಿಸಲ್ಪಡುವ ಪರಮಾತ್ಮನೇ ಅಸ್ಯರ ಭಗವಂತನೂ ಕೃಪಾಕರನೂ ಆಗಿರುವನು.

ಲೋಕ ಚಕ್ರದ! ನಿತ್ಯನಿಯಮವಾದ ಕೆಲಸಗಳಿಗೆ ಹೊಗೆ ಸುತ್ತಿಕೊಂಡಂತೆ ನಮ್ಮ ಮನಸಿನೆಲ ದರ್ಪಣಕ್ಕೆ ಕಾಲು ಕ್ರೋಧ ಲೋಭಗಳೆಂಬ ಹೊಗೆಗಳು ಧೂಳಾ ಆವರಿಸಿ ಕೊಂಡು ಬೆಳಕು ಕಸ್ಪಡಿಯು ಮೂಲಕ ಸ್ಪಷ್ಟರೇಖೆಯಿಂದ ಮಬ್ಬು ಮಾಡಿದ ಪಕ್ಷಾತಾತನೆಯು ಜಜ್ಞಪಕ್ಕದಿಂದ ಆವರಿಸಿ ಬಿಳಿಯ ವಿಶಾಸನ್ನ ಕೆಂಪಾಗಿಯೂ ಇನ್ನೂ ನಾನಾ ರೀತಿಯಾಗಿ ಕೆಡಿಸಿಬಿಡುವ ಮತ್ತು ಭೂತಾಗ್ನಿ ದಿಯಂತೆ ಸ್ಪಷ್ಟ ನಿಸರ್ಗಗಳನ್ನೂ ಸೊಪ್ಪಡಿಸಿಗಿಯೂ ದೊಡ್ಡ ವನ್ನು ವಣ್ಣಾಗಿಯೂ ಸೇರಿಸಿದಂತೆ ಸಕ್ರ ನಾಗಿಯೂ ವಿಧವಿಧವಾಗಿ ವ್ಯತ್ಯಾಸವ ಕಾಣಿಸಿಬಿಡುವ ಶೇರಿಯಿತ್ತಿದೆ. ಇಂತಹ ಹೀನ ಮನಸ್ಸಾಕ್ಷಿಗಳಿಗೆ ಮೋಘಕರ ಬೋಧವು "ಜ್ವರ ಬಂದ ಮನುಜರಿಗೆ ಸೊರೆಯಾ ವಿಸವಲ್ಲ" ಎಂಬಂತೆ ವ್ಯರ್ಥವಾಗಿ ತೋರುವುದು. ಮತ್ತು ಜ್ಞಾನಿಗಳು 'ಆಸತ್ಯವಂ ಬಿಟ್ಟು ಸತ್ಯವನ್ನಾತರಿಸಿ' ಎಂದು ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದರೂ, ಇವರು ತಮಗೆ ಸತ್ಯವೆಂದು ತೋರುವುದೇನೋ ಸರ್ವಥಾ ಆಚರಿಸುತ್ತಲೇ ಇರುವರು. ಆಧ್ಯರು ಸತ್ಯ ನೆಯ ಸಾರುತ್ತಿರುವ ವಿಸಯಗಳು ಇನ್ನೂ ಸ್ಪಷ್ಟವಂತೆ ಅಸತ್ಯವಾಗಿರುವವು. ತಾವು ಆಚರಿಸುತ್ತಿರುವ ಇಹಲೋಕವ ಆಡಕತನೇ (ಸಿದ್ಧಾಹಾರ ಮೈಥುನ) ಆನರಿಗೆ ಜಾಗ್ರದವಸ್ಥೆಯಂತೆ ದೃಢವಾಗಿಯೂ ಸತ್ಯವಾಗಿಯೂ ತೋರುವುದು. ಅದುಕಾರಣವೇ ಆವರು ಲೌಕಿಕ ವ್ಯವ ಹಾರದಲ್ಲಿ ಅತ್ಯಾಸಕ್ತರಾಗಿದ್ದುಕೊಂಡು ಜಡದೇಹವನ್ನೇ ಆತ್ಮನೆನ್ನಾಗಿ ಭಾವಿಸಿಕೊಂಡು ಸಪಾ ಊಟಕೂಟಗಳಿಂದ ಅದರ ಹಿತವನ್ನೇ ಬಯಸುತ್ತಿರುವರು. ಸ್ವರ್ಗ, ನರಕಗಳು, ಜನ್ಮಾಂತರಗಳು, ಸತ್ಯವೆಂದು ಬಾಯಿಯಲ್ಲಿ ಮಾತ್ರ ಒಪ್ಪಿಕೊಳ್ಳುತ್ತಾರೆ. ಮನಸ್ಸಿನಲ್ಲಿ ಇವರು ನಂಬಿರುವಂತೆ ತೋರುವದಿಲ್ಲವು

ಅಂತು ಇವರ ಮನಸ್ಸು ನೀರಿಯನಾಗಲೂ ತಗ್ಗಿನ ಕಡೆಗೇ ಸ್ವಯಹಸುವಂತೆ ಹೀನವೃತ್ತಿಗಳಕಡೆಗೇ ಹರಿಯುವುದು. ಈ ನುಂದಾಧಿಕಾರಿಗಳ ಹೃದಯದಲ್ಲಿ ಸದ ಸತ್ಯಗಳಿಂತಲೂ, ಇಷ್ಟಾನಿಸ್ಟ ಗಳಿಂತಲೂ, ಯುಕ್ತಾಯುಕ್ತಗಳಿಂತಲೂ, ಕಲ್ಪನೆಗಳೆಂಬ ಕಪಿಗಳು ನಾಟ್ಯ ನಾಮತ್ತಿರುವಲ್ಲಿ ಅನರ ಚಿತ್ತವೆಂಬ ವೃಕ್ಷದಲ್ಲಿ ನಿರಾಶಕ್ತಿ-ನಿರವೇಕ್ಷತ್ವ-ನಿತ್ಯತ್ವ-ಸಮಷಿ-ವ್ಯಾಪ್ತಿಯ್ಯ ನಿಷ್ಕ್ರಿಯತ್ವ -ನಿರ್ಮಮತ್ವ ನಿರ್ವಿಕಲ್ಪತ್ವ-, ಧೈರ್ಯ, ಸ್ಥೈರ್ಯ-ಸೌಹಾರ್ದ ಸಂಯೋಗ-ಮೃದುತ್ವ ಮೃದುಸಾದಿತ್ವಗಳೇ ಮೊದಲಾದ ಸನ್ಮಾಣಗಳೆಂಬ ಪುಷ್ಪಗಳುದಯಿಸಿ ಫಲಗಳು ಹುಟ್ಟಲಾರವು. ಆದಪ್ರಯುಕ್ತ ಜ್ಞಾನಾನಾದವನು ಆಜ್ಞಾಸಿದ್ಧವಾದ ಜಡಾತ್ಮಭಾವವಂ ಬಿಟ್ಟು ಸಜ್ಜನುಪಾದಿಂದ ನುಸ್ಯಹೀತವಾಗಿ ವಿಚಾರಬಲದಿಂದ ಪೂರ್ಣಭಾವವಂ ಹಿಂದು ಸಮುಖಾವಂ ಹೇಯೋಪಾಧೇಯ ವಿವೇಕವನ್ನು ಪಡೆದು ದರ್ಪಣದಂತೆ ಬಂದಪ್ಪೆಲ್ಲನಂ ಗ್ರಹಿಸುತ್ತಾ ಅದರ ಹಾಶಿವೈದ್ಧಿಗಳಲ್ಲಿ ಹರ್ಷಾಮರ್ಷಗಳಗೊಳಗಾಗದೆ ಆತ್ಮೋದ್ಧಾರಮಾಡಿಕೊಂಡು ಮಾನವ ಜನ್ಮವನ್ನು ಸಾರ್ಥಕಮಾಡಿಕೊಳ್ಳುವಲ್ಲಿ ಧನ್ಯರೂ ಮಾನ್ಯರೂ ಆಗುವರು. ಆದರೆ, ಹೀನಮನಸ್ಸುಳ್ಳವರ ವಿಚಾರದಲ್ಲಿ ಜ್ಞಾನಿಗಳು—ಉಪದೇಶಲಿ ಮಲಮೂತ್ರಗಳಬಚ್ಚಿಡಿ ವೃಥಾ ಕೆಲಸಮುಧ್ಯಾಪ್ಪದಲಿ ವೃಥಿ ಕ್ಲುಪ್ತಿಗೆಳಲಿಬೇಡಿ ವಿಜಿ ಕೋಟಲೆಗೊಂಬುದೇಕಿಲಸಿ ಅರಿಶುಂಬದಬಳಿ ಕಕಾಮನಕಳಿದನೆದಲಿರಾತ್ರಿಯಸುಕಳೀನ ! ಯಧಸುಂಗಿ ಪೇಳಿದಿರುಮರೆದಿಯಸುಭವಾವ್ಯತವ ॥ ಎಂದುಸಾರಿರು ವನು ಯೋಗ್ಯವೇ ಇರುವದು.

ಶ್ರೀ "ಜಗದ್ಗುರು ರೇಣುಕಾದಿ ಪಂಚಾಚಾರ್ಯ ಸಂಸ್ಕೃತ ಕಾಲೇಜ್ ಫ್ರೀ ಬೋರ್ಡಿಂಗ್,
ಶ್ರೀ ನಂಜುಂಡಸ್ವಾಮಿ ಚಿತ್ರಮಂದಿರ, ಚಿಕ್ಕಪೇಟೆ,
ಬೆಂಗಳೂರು ಸಿಟಿ.

ಈ ಬೋರ್ಡಿಂಗು ಮಾಮೂಲಿನಂತೆ ಜೂನ್ ಒಂದನೆಯ ತಾರೀಖಿನ ದಿವಸ ತೆರೆಯಲ್ಪಡುವುದು.

ಈ ಬೋರ್ಡಿಂಗಿಗೆ ಸೇರಲು ಇಷ್ಟವಹುವ, ವೇದಾಭ್ಯಾಸಿಗಳು ಮತ್ತು ಬೆಂಗಳೂರು ಶ್ರೀ ಜಾಮರಾಜೇಂದ್ರ ಸಂಸ್ಕೃತ ಕಾಲೇಜಿನಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳು ಇವೇ ವರ್ಷದ ಮೇ ಮಾಹೆ 20 ನೆಯ ತಾರೀಖಿನೊಳಗಾಗಿ ತಮ್ಮ ಅಪ್ಲಿಕೇಷನ್‌ಗಳನ್ನು ಪ್ರಿಂಟಾದ ಫಾರಮ್ಮುಗಳಲ್ಲಿ ಕ್ರಮವಾಗಿ ಭರ್ತಮಾಡಿ, ಬಡವನೆಂಬ ಜಗ್ಗೆಯೂ, ನಡತೆ ಸರ್ಟಿಫಿಕೇಟುಗಳೊಡನೆ ಸಂಭಂದ ಸಕ್ಕೆಟರಿಯವರ ಆಫೀಸಿಗೆ ಕಳುಹಿಸತಕ್ಕದ್ದು. ಸಂಭಂದವರು ಕಲಿತು ಗೊತ್ತುಮಾಡಿದ ವಿದ್ಯಾರ್ಥಿಗಳು ಮಾತ್ರ ಬೋರ್ಡಿಂಗಿಗೆ ಸೇರಿಸಲ್ಪಡುವರು. ಕಮಿಟಿಯು ವರು ಮಂಜೂರುಮಾಡಿದ ನಿದ್ಯಾರ್ಥಿಗಳ ಲಿಸ್ಟು ಬೋರ್ಡಿಂಗಿನ ನೋಟೀಸ್ ಬೋರ್ಡಿಗೆ ಮೇ 25 ನೆಯ ತಾರೀಖಿನ ದಿನ ಹಾಕ್ಕಲ್ಪಡುವುದು. ಮಂಜೂರಾದ ವಿದ್ಯಾರ್ಥಿಗಳು ಜೂನ್ 3 ನೆಯ ತಾರೀಖಿನೊಳಗಾಗಿ ಹಾಜರಾಗಿ ಮ್ಯಾನೇಜರರಿಗೆ ರಿಪೋರ್ಟ್‌ಮಾಡಿಕೊಳ್ಳತಕ್ಕದ್ದು. ಕಾಲಾತೀತವಾದ ಅಪ್ಲಿಕೇಷನ್‌ಗಳಿಗೆ ನಿಗಾ ಕೊಡಲಾಗುವುದಿಲ್ಲ.

1. ಹಿಂದಿನ ವಿದ್ಯಾರ್ಥಿಗಳೂ ಕೂಡ ಹೊಸಬರಂತೆಯೇ ಅಪ್ಲಿಕೇಷನ್ ಕಳುಹಿಸತಕ್ಕದ್ದು.

2. ಅಪ್ಲಿಕೇಷನ್ ಫಾರಮ್ಮುಗಳನ್ನು ಸೆಕ್ರೆಟರಿಯವರ ಆಫೀಸಿಗೆ ಒಂದಾಣೆ ಸ್ಟ್ಯಾಂಪುಕಳಿಸಿ ತರಿಸಿಕೊಳ್ಳಬಹುದು.

3. ಕಳೆದ ವರ್ಷ ಉತ್ತೀರ್ಣರಾಗದವರಿಗೆ ಸೀಟು ದೊರೆಯಲಾರದು.

4. ವಿದ್ಯಾರ್ಥಿಗಳು ತಮ್ಮ ಸಂಗಡ ಕಂಬಳಿ, ಹಾಸಿಗೆ ಹೊದಿಕೆಗಳನ್ನು ತರಬೇಕು.

5. ಮ್ಯಾನೇಜರವರಿಗೆ ಕ್ರಮವಾಗಿ ಮುಚ್ಚಳಿಕೆ ಬರೆದುಕೊಟ್ಟು, ಅವರು ತೋರಿಸುವ ರೂಮಿನಲ್ಲಿದ್ದು ವ್ಯಾಸಂಗಮಾಡಬೇಕು.

6. ಅಪ್ಲಿಕೇಷನ್ ಫಾರಂಗಳಲ್ಲಿ ಸುಳ್ಳುಬರವಣಿಗೆಗಳನ್ನು ಬರೆದವರೂ, ಬೋರ್ಡಿಂಗ್‌ರೂಲ್ಸ್‌ಗಳಿಗೆ ವ್ಯತಿರಿಕ್ತವಾಗಿ ನಡೆಯುವವರೂ, ಪ್ರೈಸಿಡೆಂಟರವರ ಗಮನಕ್ಕೆ ತರಲ್ಪಡುವವರಾಗಿ ಬೋರ್ಡಿಂಗಿನಿಂದ ವಜಾಮಾಡಲ್ಪಡುವರು..

7. ಕ್ರಮವಾದ ಫ್ರೆಂಟಿಷ್ ಫಾರಮಿನಲ್ಲಲ್ಲದೆ ಇತರ ಆಗದಗಳಲ್ಲಿ ಬರೆದ ಅಪ್ಲಿಕೇಷನ್‌ಗಳಿಗೆ ನಿಗಾಕೊಡಲಾಗುವುದಿಲ್ಲ. ಕಾಲಾತೀತವಾದ ಅಪ್ಲಿಕೇಷನ್‌ಗಳನ್ನು ಅಂಗೀಕರಿಸಲಾಗುವುದಿಲ್ಲ.

8. ಸಂಪೂರ್ಣವರು ವಿದ್ಯಾರ್ಥಿಗಳ ಊಟ ಮತ್ತು ವಸತಿಗಳಿಗೆ ಉಚಿತವಾಗಿ ಅನುಕೂಲಪಡಿಸುವರು.

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪ್ರೈಸಿಡೆಂಟರವರ ಆಫೀಸಿನಿಂದ. ಎನ್. ರುದ್ರಯ್ಯ,
2—5—1940. ಸೆಕ್ರೆಟರಿ.

ಚಿಕ್ಕಪೇಟೆ, ಶ್ರೀ ಜಗದ್ಗುರು ರೇಣುಕಾದಿ,
ಬೆಂಗಳೂರು ಸಿಟಿ. ಪಂಚಾಚಾರ್ಯ ಸಂಸ್ಕೃತ
ಕಾಲೇಜ್ ಫ್ರೀ ಬೋರ್ಡಿಂಗ್
ಸಂಸ್ಥೆ, ಶ್ರೀ ಮಹಂತಿನಮಠ.

॥ ಶ್ರೀ ಮಹಾಂತೇಶಾಯನಮಃ ॥

ಶ್ರೀ ಮಹಾಂತೇಶ್ವರ ರಥೋತ್ಸವ, ಬಿಜ್ಜಾಲಿ.

ಜ|| ರಾಯಚೂರು ಬಿಜ್ಜಾಲಿ ಗ್ರಾಮದ ಶ್ರೀ ಸಾವಿರ ದೇವರ ಮಠದಲ್ಲಿ ಶ್ರೀಮಹಾಂತೇಶ್ವರ ರಥೋತ್ಸವವು ಪದ್ಮತಿಯಂತೆ ಇದೇ ಸಂ||ರದ ಜ್ಯೈಷ್ಠ ಶು|| ೫ ಶುಕ್ರವಾರ ಅತಿ ವೈಭವದಿಂದ ಜರುಗಿತು. ಈ ವರ್ಷ ಕುರುಡಿ, ಹಾಲ್ವಿ, ಕೋಡಿಗಿ, ಸುಲೇಪೇಟಿ, ಮಟಮರಿ, ರಾಯಚೂರು, ಬೂದೂರು ದೊಡ್ಡಬಸವ ಸುತ್ತಲು ಗ್ರಾಮಗಳಿಂದ ವಿಶೇಷ ಜನಸಂದಣಿಯು ಕೂಡಿದ್ದಿತು. ಜ್ಯೈಷ್ಠ ಶು||ಳಿಗುರುವಾರ ಉದಯ ೮ ಗಂಟೆಗೆ ಶ್ರೀಮಹಾಂತೇಶ್ವರ ಮೂರ್ತಿಗೆ ಮಹಾರುದ್ರಾಭಿಷೇಕ ಪೀಠದರ್ಚೋಪಚಾರಗಳಿಂದ ಪೂಜೆಯು ಜರುಗಿ ಅದೇ ದಿನ ಸುಧ್ಯಾಹ್ನ ೧೨ ಗಂಟೆಗೆ ಮಹಾಗಣಪ್ಪತ್ಸಿಯು ಯಥೋಕ್ತವಾಗಿ ಸಾಗಿತು. ಮರುದಿನ ಶುಕ್ರವಾರ ಉದಯ ೪ ಗಂಟೆಯಿಂದ ೧೦ ವರೆಗೆ ಸಂಗೀತವಿದ್ವಾನಿಧಿ ರಾಯಚೂರು ರಾಜಪ್ಪನವರ ಮನೋಹರವಾದ ಪಿಟೀಲ್ ವಾದ್ಯದೊಡನೆ ವೇ|| ಸಂಗೀತವಿದ್ಯಾ ಮಟಮರಿ ಹಂಪಯ್ಯನವರು, ಸಂ|| ವಿದ್ವಾ ದೇವದುರ್ಗದ ರಾಚಯ್ಯನವರು ಇವರ ಗಾನ ಕಲಾ ಪ್ರದರ್ಶನವು ಸಭಿಕರ ಚಿತ್ತಾಕರ್ಷಕವಾಗುವಂತೆ ಜರುಗಿತು. ಅನಂತರ ಯಾತ್ರಿಕರ ಊಟೋಪಚಾರಗಳು ಜರುಗಿ ಅದೇ ದಿನ ಮಧ್ಯಾಹ್ನ ೪ ಗಂಟೆಗೆ ಸಕಲ ಬಿರುದಾವಳಿ ಸಮೇತ ಪೋಲಿಸ್ ಸಿಬ್ಬಂದಿಯೊಡನೆ ರಥೋತ್ಸವಕಾರ್ಯವು ಸಾಂಗವಾಗಿ ಜರುಗಿತು. ಮರುದಿನ ಶನಿವಾರ ಉದಯ ೭ ಗಂಟೆಗೆ ಸದರಿ ಮಾಧಿಪತಿಗಳಾದ ಸಾಹಿತ್ಯರತ್ನ (ತರ್ಕರತ್ನ) ಶ್ರೀಚನ್ನವೀರಪಿಟ್ಟಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಲ್ಲಿ ಮಿರ್ಜಾಪುರ ಬಸವರಾಜಶಾಸ್ತ್ರಿಗಳ ಪ್ರಾಸ್ತಾವಿಕ ಭಾಷಣವಾಯಿತು. ಬಳಿಕ ಶ್ರೀ ವೀರಣಸಿದ್ದಪ್ಪ ಸುಲೇಪೇಟಿ ಇವರು (ವೀರಶೈವಮತ ಪ್ರಾಮುಖ್ಯತೆ) ಎಂಬ ಬಗ್ಗೆ ೧॥ ಗಂಟೆ ಭಾಷಣಮಾಡಿದರು. ಇವರ ಅಪೂರ್ವವಾದ ಭಾಷಣದ ಸರಣಿಯನ್ನು ಕೇಳಿ ಸಭಿಕರೆಲ್ಲರೂ ಚಕಿತರಾದರು. ಅತಿ ಪ್ರಾಚೀನಕಾಲದಿಂದ ಬಂದ ವೈದಿಕ ಮತ್ತು ವೀರಶೈವಮತಗಳ ಅಧಿಪತ್ಯವು ಪಂಚಪೀಠಾಚಾರ್ಯರಿಗೆ ಸಲ್ಲುವದೆಂಬುದಾಗಿ ಸಪ್ರಮಾಣವಾಗಿ ವಿವರಿಸಿ ನಿರ್ದರನೆಗಳಿಂದ ಚೆನ್ನಾಗಿ ಪ್ರತಿಪಾದಿಸಿ ಕಡೆಗೆ ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರ ಅದ್ಭುತವಾದ ಸಾಹಸ, ಚಟುಪಟಿಕೆಗಳನ್ನು ಮುಕ್ತ ಕಂಠದಿಂದ ಹೊಗಳಿದರು. ಅವಗೆಲೆ ಚಂದ್ರಶೇಖರಯ್ಯ ನವರು ವಿದ್ಯೆಯ ಮಹತ್ವವನ್ನು ಹೇಳಿದರು. ವೇ|| ಹೊಪಯ್ಯ ಮಟಮರಿ ಇವರ ಸಾಮಾಜಿಕ ಉಪನ್ಯಾಸ ನಾದ ಬಳಿಕ ಅಧ್ಯಕ್ಷರು ದೀಕ್ಷಾಸಂಸ್ಕಾರದಬಗ್ಗೆ ಅಮೃತ ವಾಣಿಯಿಂದದರು. ಬಳಿಕ ಅಪ್ಪಣೆ ಕೊಡಿಸಿ ವಿದ್ವತ್ಸಂ ದಲಿಗೆ ಯಥೋಚಿತ ಸಂಭಾವನೆಯು ಕೊಡಲ್ಪಟ್ಟು ಆಚಾರ್ಯರ ಜಯಘೋಷಗಳೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಗುರುಭಕ್ತ.

॥ ಶ್ರೀಜಗದ್ಗುರು ಪಂಚಾಚಾರ್ಯಾ ಭ್ಯಸೀಮಂತ ॥

ಶ್ರೀ ಮದ್ವೀರಶೈವ ಮಹಾಮತಸ್ಥಾಪನಾಚಾರ್ಯ
ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ
ಶ್ರೀ ೧೦೮ ಜಗದ್ಗುರುಸಿದ್ಧೇಶ್ವರ ರಾಜದೇಶಿಕೇಂದ್ರ
ಮಹಾಸ್ವಾಮಿನಾಂ ಜ್ಞಾಪ ಗುರುಸ್ಥಾನೇನ

ಮದ್ರಾಸ್, ಮುಂಬೈ, ನಿಜಾಂ, ಮೈಸೂರು ಮುಂತಾದ ಪ್ರಾಂತದ ಪ್ರಜ ಗ್ರಾಮಗಳ ಘನಲಿಂಗಿಗಳಾದ ಪಟ್ಟಚಾರ್ಯಾಕಾರಾಗಳು, ಪುರ, ಪುಹತ್ತು, ಪುಪತ್ತಿ ಶೆಟ್ಟಿ, ಯಜಮಾನ, ಜಣಕಾರ, ಗೌಡ, ಶ್ಯಾನಭೋಗ ಮುಂತಾದ ಸಮಸ್ತ ಶಿವಭಕ್ತಾವಳಿಗೆ ಸನ್ಮಂಗಲಾಶೀರ್ವಾದಪೂರ್ವಕವಾಗಿ.

ಹಿಂದಿನ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರಿಂದ ಶ್ರೀಜಗದ್ಗುರು ಸಂಸ್ಥಾನ ಮಠ ದಲ್ಲಿ 1922 ಜೂನ್ 22ರಲ್ಲಿ ಸ್ಥಾಪಿಸಿದ ಮಹಾನವಿದ್ಯಾಲಯಕ್ಕಾಗಿ ಸಂಗ್ರಹಿಸಿದ ವಿದ್ಯಾನಿಧಿಯನ್ನು ಆದರವ್ಯವ ಸ್ಥೆಗಾಗಿ 1930 ರಿಂದ 32 ವರೆವಿಗೂ ಬರೆದ ನಿಯಮಾವಳಿಯಂತೆ ಪರಿವರ್ತಿಸಿ ವ್ಯವಸ್ಥೆ ಗೊಳಿಸುವದಕ್ಕಾಗಿ ಈಸಾಲಿ (12-5-10)ರಿಂದಸಮಾಮ ಸಂವತ್ಸರದ ವೈಶಾಖ ಶು|| ೫ ಭಾನುವಾರದಲ್ಲಿ ಮಹಾಪೀಠದಲ್ಲಿ ನೆರವೇರುವ ಮೂಲಾಚಾರ್ಯರ ರಥೋತ್ಸವ ಸಮಯಕ್ಕೆ ತಾರೀಖು (15-5-40) ಬುಧವಾರ ಮಹಾಜಪಗಳಾದ ನೀವೆಲ್ಲರೂ ಸೇರಿ ಪರ್ಯಾಲೋಚನೆಯಿಂದ ಸಂಸ್ಥಾನದ ಅಪ್ಪಣೆ ಯಂತೆ ವ್ಯವಸ್ಥೆಗೊಳಿಸಿ ಸನ್ನಿಧಿಯ ದರ್ಶನಾಶೀರ್ವಾದಕ್ಕೆ ಪಾತ್ರರಾಗಿ ಇಹ ಪರಲಲ್ಲಿ ಕೀರ್ತಿಭಾಜನರಾಗತ ಕ್ಕದ್ದು. ಈಬಗ್ಗೆ ಗುರುವಾಜ್ಞಾ ತೀಲರಿಗೆ ವಿಶೇಷ ಅಪ್ಪಣೆಮಾಡುವರೆನಿಸಿದೆ.

24-4-40. ಇತ್ಯಾಶಿಷಃ

ಆರೋಗ್ಯಭಾಗ್ಯ

ಜನಾರೋಗ್ಯವೆಂದರೇನು? ಅದು ಒಂದು ಜನಾಂಗದಲ್ಲಿ ಆ ಜನಾಂಗದ ಆರೋಗ್ಯ ಸ್ಥಿತಿ, ಒಟ್ಟಿನಲ್ಲಿ ಯಾವ ಆಕಂಕ್ಷೆಗಳಿದೆ ಎಂಬುದೇ ಜನಾರೋಗ್ಯ.

ಒಂದು ಜನಾಂಗದ ಪ್ರತಿಯೊಬ್ಬ ವ್ಯಕ್ತಿಯು ತನ್ನ ದೇಹಾರೋಗ್ಯಕ್ಕೂ ಮಾನಸಿಕ ಸೌಖ್ಯಕ್ಕೂ ಅತ್ಯಾವಶ್ಯ ಕವಾಗಿರುವ ಕೆಲವು ನಿಬಂಧನೆಗಳನ್ನು ದೃಢಮನಸ್ಸಿನಿಂದ ಆಚರಿಸಿದ್ದೇ ಆದರೆ ಆ ಜನಾಂಗದ ಆರೋಗ್ಯ ಮತ್ತು ಏಳಿಗೆಯನ್ನು ನಿಶ್ಚಯಿಸುವುದಲ್ಲದೆ ಆ ಜನಾಂಗದ ಸಮೂಹದ ಕಾರ್ಯಗಳಿಂದ ಆದರ ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅಂತಸ್ಸನ್ನು ಕೂಡ ವೃದ್ಧಿಪಡಿಸಬಹುದು. ಇಂಥ ಸಮೂಹದ ಕಾರ್ಯಗಳಿಗೆ "ಜನಾಂಗದ ಆರೋಗ್ಯ ಸುಧಾರಣೆ" ಎಂಬುದಾಗಿ ಹೆಸರು. ಈ ಸುಧಾರಣೆಗಳನ್ನು ಮೂರು ವರ್ಗಗಳಲ್ಲಾಗಿ ವಿಂಗಡಿಸಬಹುದು—

(೧) ಪ್ರತಿಯೊಬ್ಬರೂ ಅನುಸರಿಸಬೇಕಾದ ಸುಧಾರಣೆಗಳು.

(೨) ಪ್ರತಿಯೊಂದು ಸಂಸಾರವೂ ಅನುಸರಿಸಬೇಕಾದ ಸುಧಾರಣೆಗಳು

(೩) ಜನಾಂಗದ ಒಟ್ಟು ಸಮುದಾಯದಿಂದ ಆಚರಿಸಲ್ಪಡತಕ್ಕ ಸುಧಾರಣೆಗಳು.

ಈ ಮೊದಲನೇ ಸುಧಾರಣೆಗಳಲ್ಲಿ ಶರೀರ ಶುಚಿತ್ವ ಆಭ್ಯಾಸ ಕಲಿಯೋಣ, ಉಡುವು, ವ್ಯಾಯಾಮ, ವಿಶ್ರಾಂತಿ ಮೊದಲಾದುವು ಮುಖ್ಯ ಸುಧಾರಣೆಗಳು.

ವಾಸದ ಸೌಕರ್ಯ, ಮನೆಗೆ ಒಳ್ಳೆಯ ಕುಡಿಯುವ ನೀರು ಮತ್ತು ಆಹಾರದ ವಿಸಾರಿಯ, ಮನೆಯ ಕಲ್ಮಷ ಗಳನ್ನೆಲ್ಲಾ ಸರಿಯಾದ ರೀತಿಯಲ್ಲಿ ನಾಶಪಡಿಸುವುದು ಇವೇ ಮೊದಲಾದವುಗಳು ಎರಡನೇ ಹಂಗಡದ ಮುಖ್ಯ ಸುಧಾರಣೆಗಳು.

ಮೂರನೆ ಭಾಗದ ಸುಧಾರಣೆಗಳಲ್ಲಿ, ಆ ಸಮುದಾಯ ಕ್ಕೆಲ್ಲಾ ಬೇಕಾದಮ್ಮು ಒಳ್ಳೆಯ ನೀರಿನ ಸರಪರಾಜು, ಒಳ್ಳೆಯ ಜಂಂಡಿಗಳು, ಊರಿನ ಕಲ್ಮಷವನ್ನು ಸಂಯಾದ ರೀತಿಯಲ್ಲಿ ನಾಶಪಡಿಸುವ ವಿಚಾರ, ಸೊಳ್ಳೆ ಮತ್ತು ನೊಣಗಳ ನಾಶದ ಕಾರ್ಯಕ್ರಮ, ಒಳ್ಳೆಯ ರಸ್ತೆಗಳು, ಒಳ್ಳೆಯ ಸ್ಕೂಲುಗಳು, ಹೆರಿಗೆಯ ಮನೆ ಮತ್ತು ತರಬೇತಿ ಪಾದ ಸೂಲಗಿತ್ತಿಗಳನ್ನು ಒಪಗಿಸೋಣ ಇವೇ ಮೊದ ಲಾದವುಗಳು ಮುಖ್ಯವಾದ ಸುಧಾರಣೆಗಳು.

ಈಗ ಮೇಲೆ ಹೇಳಿದ ಸುಧಾರಣೆಗಳನ್ನು ಒಂದೊಂ ದಾಗಿ ತೆಗೆದುಕೊಂಡು, ಜನರು ಅವುಗಳ ವಿಷಯದಲ್ಲಿ ಕನಿಷ್ಠವೆಷ್ಟ ಎಷ್ಟು ತಿಳುವಳಿಕೆಯನ್ನು ಹೊಂದಬೇಳು. ಎಂಬುದಾಗಿ ವಿಚಾರಮಾಡೋಣ. ಇದರಲ್ಲೆಲ್ಲಾ ಮುಖ್ಯವಾದದ್ದು ಶಾರೀರಕ ನೈರ್ಮಲ್ಯ. ಮನುಷ್ಯರು ಶುಚಿಯಾಗಿರುವುದಕ್ಕೆ ಸಾಧಾರಣವಾಗಿ ಎರಡು ಕಾರಣ ಗಳುಂಟು. ಇದರಲ್ಲಿ ಮೊದಲನೆಯದು ಸಮಾಜಜ್ಞಾನಿ ಶುಚಿಯಾಗಿರುವುದು. ಒಬ್ಬ ಮನುಷ್ಯನು ಹೇಗೆ ಕಾಣಿ ಸಿಕೊಳ್ಳುತ್ತಾನೆಂಗೂ ಅದೇ ಅವನ ಮರ್ಯಾದೆಗೆ ಮೊದ ಲನೆ ಗುರ್ತು. ಅನಮು ತನ್ನ ಸಮಾನಸ್ಥರಲ್ಲಿ ತಲೆ ಎತ್ತಿ ನಿಲ್ಲಬೇಕಾದರೆ ತನ್ನ ದೇಹವನ್ನು ಅವನು ರುಚಿಯಾಗಿ ಟ್ಟುಕೊಂಡಿರಲೇ ಬೇಕು. ಶುಚಿಯಾದ ಬಟ್ಟೆಗಳನ್ನೇ ಧರಿಸಬೇಕು. ಮತ್ತು ಇಂಥಾ ಇತರ ರೂಢಿಕರವಾದ ಸ್ವಭಾವಗಳನ್ನೇ ಅನುಸರಿಸಬೇಕು. ಶರೀರ ಶುಚಿಗೆ ಎರ ಡನೆ ಮತ್ತು ಅತಿ ಮುಖ್ಯಕಾರಣ ಸಾಧಾರಣವಾಗಿ ಎಲ್ಲರ ತಿಳಿವಳಿಕೆಗೂ ಬಂದಿಲ್ಲ. ಅದು ಆರೋಗ್ಯವಾಗಿ ರುವುದಕ್ಕೂ ಮತ್ತು ಕಣ್ಣಿಗೆ ಕಾಣಿಸುವ ಮತ್ತು ಕಣ್ಣಿಗೆ ಕಾಣಿಸದ ಕೊಳೆ ಮತ್ತು ಕ್ರಿಮಿಗಳ ನಾಶಕ್ಕೆ ವ್ಯಾಧಿಯ ನ್ಯೂಟ್ರಮಾಡುವ ಶ್ರೀಮಗಳು ಕಣ್ಣಿಗೆ ಕಾಣಿಸುವುದಿಲ್ಲ. ಆದ್ದರಿಂದ ಜವುಗಳ ಇವುನಿತೆಯು ನಮಗೆ ಯಾವಾ ಗಲೂ ನೆನಪಿನಲ್ಲಿರುವುದಿಲ್ಲ. ನಮ್ಮ ಚರ್ಮವು ಶರೀರದಲ್ಲಿ ಬಿಸಾಕಲ್ಪಡತಕ್ಕಂಥಾ ಕೆಟ್ಟ ಪದಾರ್ಥಗಳನ್ನು ಸದಾ ಕಾಲವಲ್ಲಿಯೂ ಹೊರಕ್ಕೆ ತಳ್ಳುತ್ತಿರುತ್ತದೆ. ಇದು ನಮ್ಮ ಬೆವರಿನಲ್ಲೂ ಇರುತ್ತದೆ. ಬೆವರು ಹೆಚ್ಚು ಹೆಚ್ಚಾಗಿ ಸಣ್ಣ ಸಣ್ಣ ತುಂತುರು ಹನಿಗಳೋಪಾದಿಯಾಗಿ ಚರ್ಮದ ಮೇಲೆ ನಿಂತಿದ್ದರೆ ಆಗಮಾತ್ರ ಬೆವರುವುದಾಗಿ ಸಾಮಾ ನ್ಯರ ತಿಳಿವಳಿಕೆ. ನಿಜವಾಗಿಯೂ ನಮ್ಮ ಮೈ ಯಾವಾ ಗಲೂ ಬೆವರುತ್ತಿರುತ್ತದೆ. ಆದರೆ ಆ ಬೆವರು ಆವಿಯಾ ಗಿಯೋ ಅಥವ ಬಟ್ಟೆ ಹರಿಕೆಗಳು ಬೆವರಿಂದೆಲೋ ನಮ್ಮ ಗಮನಕ್ಕೆ ಬರುವುದಿಲ್ಲ. ಬೆವರಿನಲ್ಲಿ ನೀರು ಸ್ವಲ್ಪ ಜಿಡ್ಡು, ಸ್ವಲ್ಪಸ್ವಲ್ಪ ಶರೀರದಿಂದ ಬಿಸಾಡಲ್ಪಟ್ಟಿ ಕಲ್ಮಷ ಮತ್ತು ಸತ್ಯುಹೋದ ಚರ್ಮದ ಕಣಗಳು ಇರು

[೩ನೆಯ ಪುಟವನ್ನು ನೋಡಿ.]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶುಕ್ಲ ಪಂಚಮಿಗೆ ಹದಿಮೂರು ವರ್ಷಗಳು ತುಂಬಿ ೧೪ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಿಗೂ ವಿ. ಪಿ. ಮಾಡಬೇಕಾಗುತ್ತದೆ ನಿ ವಿ ಮಾಡುವುದರಿಂದ ನಮಗೂ ತೊಂದರೆಯಾಗುವುದು. ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು. ಆದುದರಿಂದ ಚಂದಾದಾರರೆಲ್ಲರೂ ಕೂಡಲೇ ೨ ರೂ ೮ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ವಿ. ಪಿ. ಮಾಡಿದರೆ ೩ ರೂ ೧೩ ಆಣೆ ಬೀಳುವುದು. ಗ್ರಾಮ ಗ್ರಾಮದಲ್ಲಿ ವಿಶೇಷ ಚಂದಾದಾರರುಗಳೂ ಆ ಗ್ರಾಮವನ್ನಲ್ಲಿರುವ ಅಭಿಮಾನಿಗಳು ಚಂದಾಮಾಸಿಕ ವಿಜ್ಞಾಪನೆಯನ್ನೆಲ್ಲ ಒಟ್ಟುಗೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ ಸರ್ಕಾರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರು ಸಕ್ಕದಲ್ಲಿರುವ ನಂಬರನ್ನು ಮಾತ್ರ ಮನಿಆರ್ಡರ್ ಮೇಲೆ ತಿಳಿಸಬೇಕು.

ಮಾನೇಜರ

ಪಂಚಾಚಾರ್ಯಪ್ರಭಾ

೧೩ನೆಯ ವರ್ಷದ ಸಮಾಪ್ತಿ

೧೩ನೆಯ ವರ್ಷದ ಸಮಾಪ್ತಿ.

ಪಂಚಾಚಾರ್ಯ ಪ್ರಭಾಪತ್ರಿಕೆಯ ಜನ್ಮವೆತ್ತಿ ನಿನ್ನೆ ವೈಶಾಖ ಶುಕ್ಲ ಪಂಚಮಿಗೆ ೧೩ ವರ್ಷಗಳು ಸಂಪೂರ್ಣವಾಗಿ ಸಮಸ್ತ ಗಿಳಿಯು ವರ್ಷವು ಪ್ರಾರಂಭವಾಗಿ ನಿನ್ನೆಯ ದಿನ ವರ್ಷವಲ್ಲಿಯೂ ಸಹ ಪ್ರಭಾಪತ್ರಿಕೆಯ ಶ್ರೀಜಗದ್ಗುರು ಪಂಚಾಚಾರ್ಯರ ಆಶೀರ್ವಾದಬಲದಿಂದ ಜಗತ್ತಿನಲ್ಲೆಲ್ಲ ತನ್ನ ದರ್ಮಸ್ಫೂರ್ತಿಯನ್ನು ಹರಿಡಿ ಧರ್ಮಾಂಧರಾಗಿರುವವರನ್ನು ಧರ್ಮಮಾರ್ಗದಲ್ಲಿ ನಿರತರನ್ನಾಗಿ ಮಾಡಿಸಿ ಕಾರ್ಯದಲ್ಲಿ ತೊಡಗಿದ್ದೇವು ಪಾಠಕರು, ಸರ್ಕಾರಿ ಆದರೆ ಅವಿರೋಧವಾಗಿ ಮನ್ನು ತೋರಿಬೇಕಾಗಿ ಪ್ರಾರ್ಥಿಸಿ ಧರ್ಮವನ್ನೇ ತನ್ನ ಸರ್ವಸ್ವವನ್ನಾಗಿ ತಿಳಿದು ಜಗದಂತೆ ಪತಿಸುಪತ್ನಿಯರು ದರ್ಮಾನುಷ್ಠಾನದಲ್ಲಿ ಸಮನಸೀಸಲು ಸಿದ್ಧರಿದ್ದರು ದರ್ಮಾ ರಕ್ಷಿತಿ ರಕ್ಷಿತ ಎಂಬ ಮಹೋಕ್ತಿಗನ್ಯಾ ನಂಬಿ ಜಗದಂತೆ ನಡೆಯುತ್ತಿದ್ದರು ಆದರೆ ಈ ಕಾಲದಲ್ಲಿ ತದ್ವಿರುದ್ಧವೂ ತಲೆಕೆಳಗಾಗಿರುಗಿದ ಎಲ್ಲಿನೋಡಿದರೂ ಅವನ ಸ್ವಾರ್ಥ ಅನ್ಯಾಯ-ಅನೀತಿ ಇನ್ನೇ ತಾಂಡವವಾಡುತ್ತಿರುವ ಜಗತ್ತಿನಲ್ಲಿ ಒಬ್ಬ ಜನರು ನಮಗಿ ಇವುಗಳ ಉಸುಸಾಹಸೆಯನ್ನು ಮಾಡುತ್ತ, ದುಡಿಯಲು ಶಕ್ತಿಯಿಲ್ಲದೆ ವರ್ಷದಿಂದ ಪ್ರತ್ಯಾಜ್ಞನ್ನೆ ಪಡಾಹರ ಕಾರ್ಯದಲ್ಲಿ ನಿರತರಾಗಿದ್ದಾರೆ ಜಗನ್ಮಾಯಾ ಪ್ರಭಾ ಇಂತಹ ಪಾಪಿಗಳಿಗೆ ಸರಿಯಾದ ಶಿಕ್ಷೆಯನ್ನು ಕೊಡುವುದೇಂಬುದನ್ನು ಬೇರೆ ಹೇಳಬೇಕಾಗಿಲ್ಲ ಅಸ್ತು!

ಕಲಿಕಾಲಪ್ರಭಾವದಿಂದ ಈಗ ಸರ್ವಮತೀಯರಲ್ಲಿಯೂ ಧರ್ಮದ ಬಗ್ಗೆ ಅನಾದರ ಬುದ್ಧಿಯು ಬೆಳೆಯುತ್ತಿರುವಂತೆ ವೀರಶೈವರಲ್ಲಿಯೂ ಬೆಳೆಯಹತ್ತಿರುವುದು. ವೀರಧರ್ಮಸಂಸ್ಥಾಪಕರಿಂ ವೀರಶೈವರೆಂಬ ಪ್ರಸಿದ್ಧರಾಗಿದ್ದವರ ವಂಶದಲ್ಲಿ ಧರ್ಮಾಭಿಮಾನವೂರು ಉದಯಾಗುತ್ತಿರುವುದನ್ನು ನೋಡಿದರೆ ಬಹಳ ವಿಮಾನವಿಸುವುದೆ ಸಹಜವಾಲಕರಾದ ಗುರುವರ್ಗದವರಲ್ಲಿಯೂ ತಮ್ಮಂದ ಪಿಯಾಗಿಯು ಬೀಸಪತ್ರಿಸುವುದು ಇನ್ನೂ ಹೆಚ್ಚಿನ ಅವಶ್ಯಕತೆಗಾ ಕಾರಣವಾಗಿದೆ ದರ್ಮವೀರರಾದ ವೀರಶೈವರಲ್ಲಿಂಗಾಗಿರವ ಅದರ್ಮದ ಬೇರನ್ನೆ ಕಿತ್ತು ಹಾಕಬೇಕೆಂಬ ಉದ್ದೇಶದಿಂದಲೇ ನಾವು ಈ ಸಂಚಾತಿಯಲ್ಲಿ ಈ ಪ್ರಭಾಪತ್ರಿಕೆಯನ್ನು ಸ್ಥಾಪಿಸಿದೆವು ಯಾವುದೇ ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಕಾರ್ಯಕ್ಕೆ ಇಳಿದಾಗ ಅದಕ್ಕೆ ಅನೇಕ ವಿಘ್ನಗಳು ಬರುವುದು ಸಹಜವಾಗಿದೆ. ಈ ಪ್ರಭಾಪತ್ರಿಕೆಯು ಜನ್ಮವೆತ್ತಿ ಇಲ್ಲಿಗೆ ೧೩ ವರ್ಷಗಳಾದವು. ಈ ಅವಧಿಯಲ್ಲಿ ಅನೇಕ ವಿಘ್ನಗಳು ಬಂದೊದಗಿದವು. ಅವುಗಳನ್ನೆಲ್ಲ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಬಲದಿಂದ ಪರಿಹರಿಸಿಕೊಂಡು ಬಂದಿದ್ದೇವೆ. ಆದರೆ ಈ ವರ್ಷದಲ್ಲಿ ಬಂದೊದಗಿದ ವಿಘ್ನಗಳು ಅಷ್ಟಿಷ್ಟಲ್ಲ. ಅವುಗಳನ್ನು ಪರಿಹರಿಸಿಕೊಳ್ಳಲು ನಮ್ಮ ಶಕ್ತಿಯು ಸಾಲದೆಂದು ಕಂಡುಬಂದಿತು. ಆದರೆ ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪಾಬಲದಿಂದ ಅವುಗಳನ್ನೆಲ್ಲ ಪರಿಹರಿಸಿಕೊಂಡು ಬಂದಿದ್ದೇವ

ಬೆಲ್ಜಿಯಂ ಮತ್ತು ಹಾಲೆಂಡ್ ದೇಶಗಳಿಗೆ ಜರ್ಮನಿಯ ಎಚ್ಚರಿಕೆ!

ಜರ್ಮನಿ ಸರ್ಕಾರವು ಬೆಲ್ಜಿಯಂ ಮತ್ತು ಹಾಲೆಂಡ್ ಸರ್ಕಾರಗಳಿಗೆ ಒಂದು 'ಮೆಮೊರಾಂಡಂ' ಕಳುಹಿಸಿ ಆದರಲ್ಲಿ "ಬ್ರಿಟಿಷರು ಮತ್ತು ಫ್ರೆಂಚರು ಬೆಲ್ಜಿಯಂ ಮತ್ತು ಹಾಲೆಂಡುಗಳ ಮೂಲಕ ಜರ್ಮನಿಯನ್ನು ಮುತ್ತುವ ಪ್ರಯತ್ನಮಾಡುವವರಾಗಿರುವುದರಿಂದ ಈ ದೇಶಗಳ ತಾಟಸ್ಥ್ಯನೀತಿಯನ್ನು ಸರ್ವರೀತಿಯಿಂದಲೂ ರಕ್ಷಿಸಬೇಕೆಂದು ಜರ್ಮನಿಯು ತನ್ನ ಸೈನಿಕರಿಗೆ ಆಜ್ಞೆಯಿತ್ತಿ ದೆ." ಎಂದು ತಿಳಿಸಿದೆ ಮತ್ತು ಲಕ್ಸಂಬರ್ಗಿಗೆ ಇನ್ನೊಂದು ಮೆಮೊರಾಂಡಂ ಕಳುಹಿಸಿ, "ಮಿತ್ರರಾಷ್ಟ್ರ ಗಳ ಕಾರ್ಯಕ್ರಮವನ್ನೆಲ್ಲ ಪರಿಶೀಲಿಸಲು ಜರ್ಮನಿಯು ಲಕ್ಷ್ಯಂ ಒಗ್ಗನ್ನು ಆಕ್ರಮಿಸುವುದು" ಎಂದು ಸೂಚನೆ ಕೊಟ್ಟಿದೆ

ಹಾಲೆಂಡಿನಮೇಲೆ ಮುತ್ತಿಗೆ!

ಜರ್ಮನಿಯವರು ಹಾಲೆಂಡಿನ ಮೇಲೆ ಮುತ್ತಿಗೆ ಯನ್ನು ಆರಂಭಿಸಿದೆಯೆಂದೂ, ಜರ್ಮನಿ ಸೈನಿಕರು ರಟ್ಟರ್ ಡೋಜೆಗೆ ಕೆಳಿತು ಬೆಳ್ಳನಮಿಯ ದಡದಲ್ಲಿ ಇಳಿದ ರೆಂದೂ, ಹೇಗ್‌ನಗರದಿಂದ 12 ಮೈಲುಗಳ ದೂರದಲ್ಲಿ ಜರ್ಮನ್ ಸೈನಿಕರು ವಿಮಾನಗಳಲ್ಲಿ ಬಂದು ಜ್ಯಾರುಚೂ ಟ್‌ಗಳ ಮೂಲಕ ಇಳಿದಂಡೂ ಶ್ರಕಟಿಸಾಗಿದೆ

ಹಾಲೆಂಡಿನಲ್ಲಿ ಸಿದ್ಧತೆ

ಹಾಲೆಂಡಿನಲ್ಲಿ ಶತ್ರುಗಳನ್ನು ಎದುರಿಸುವ ಸಿದ್ಧತೆ ಗಳು ನಡೆದಿವೆ ಹಾಲೆಂಡಿನವರು ತಮ್ಮ ದೇಶವನ್ನು ರಕ್ಷಿಸಿಕೊಳ್ಳುವ ಸಂಕಲ್ಪವನ್ನು ಮಾಡಿದ್ದಾರೆ

ಐಸ್‌ಲೆಂಡ್ ಆಕ್ರಮಣ

ಐಸ್‌ಲೆಂಡಿಗೆ ಬ್ರಿಟಿಷ್ ಸೈನಿಕರು ಬಂದಿಳಿದರು. "ಜರ್ಮನರು ಐಸ್ಲೆಂಡಿನ ಮುತ್ತಿಗೆಹಾಕಿ ಒದರ ಸ್ವಾತಂ ತ್ರ್ಯವನ್ನುಹರಿಸಿದನೆದನ್ನು ತಪ್ಪಿಸುವುದಕ್ಕಾಗಿ ಬ್ರಿಟಿಷ್ ಸರ್ಕಾರವವರು ಈ ಕಾರ್ಯಕ್ರಮವನ್ನು ಕೈಗೊಂಡಿದ್ದಾ ದೆಂದೂ, ಜರ್ಮನಿಯ ಮುತ್ತಿಗೆಯಿಂದ ಐಸ್ಲೆಂಡನ್ನುಳಿ ಸಲು ಮಾತ್ರವೇ ಈ ಕಾರ್ಯಕ್ರಮವನ್ನು ಕೈಗೊಂಡಿ ರುವೆದೆಂದೂ, ಮುಂದೆ ಯಾವ ಕಾರ್ಯಕ್ರವವನ್ನು ಕೈಗೊಂಡೂ ಅವಕ್ಕೆ ಈ ಉನ್ನೈತ್ಯವೇ ಆಧಾರವಾಗಿ ರುವದೆಂದೂ" ಬ್ರಿಟಿಷ್ ಸರ್ಕಾರವವರು ಐಸ್ಲೆಂಡ್ ಸರ್ಕಾರಕ್ಕೆ ಭರವಸೆಕೊಟ್ಟಿದ್ದಾರೆ.

ನಾರ್ವೆಯಲ್ಲಿ ಜರ್ಮನರ ಮುಂದೋಟ!

ನಾರ್ವೆಯಲ್ಲಿ ಜರ್ಮನಿಯ ಸೈನಿಕರು ಮುತ್ತಿಕ್ಕಿದ ಹೆಗ್ಗೆಕೋಟೆಯು ಜರ್ಮನರ ವಶವಾಯಿತು ಎಲ್ಲಿವ್ವ 15 ಮಂದಿ ನಾರ್ವೆ ಅಧಿಕಾರಿಗಳು 160 ಮಂದಿ ಸೈನಿ ಕರೂ ಶರಣಾಗತರಾದರು ಟ್ರೋಂಹ್ ನಗರವನ್ನು ಜರ್ಮನಿಯ ಸೈನಿಕರು ಆಕ್ರಮಿಸಿದರು

ನಾರ್ವೆಯುದ್ಧದಲ್ಲಾದ ನಷ್ಟ!

ಕಳೆದ ನಾಲ್ಕುವಾರಗಳಿಂದಲೂ ನಾರ್ವೆಯುದ್ಧದಲ್ಲಿ ಬ್ರಿಟನ್ನಿನ ಕಡೆ 18 ವಿಮಾನಗಳು ನಾಶನಾದವೆಂದೂ, ಜರ್ಮನಿಯ ಕಡೆ 168 ವಿಮಾನಗಳು ನಾಶವಾದುವೆಂದೂ ತೀರ್ಮಾನಿಸಲ್ಪಟ್ಟಿವೆ! ಜರ್ಮನರು ನಾರ್ವೆಯ ಒಹುಬಾಗ ವನ್ನು ಆಕ್ರಮಿಸಿರುವರು ಆದರೆ ಇವಕ್ಕಾಗಿ ಬಹು ಜಪ ಸೈನಿಕರನ್ನು ಬಲಿ ಕೊಡಬೇಕಾಗಿ ಬಂದಿತು

ನೆದರ್‌ಲೆಂಡ್ ಮಿತ್ರರಾಷ್ಟ್ರಗಳೊಡನೆ ಸೇರಿತು.

ನೆದರ್‌ಲೆಂಡ್ ಮಿತ್ರರಾಷ್ಟ್ರಗಳೊಡನೆ ಸೇರಿದೆಯೆಂದು ಲಂಡನ್ನಿನಲ್ಲಿರುವ ನೆದರ್‌ಲೆಂಡ್ ಪ್ರತಿನಿಧಿಗಳು ತಿಳಿಸಿರುವರು.

ಮಿತ್ರರಾಷ್ಟ್ರಗಳಿಗಾದ ನಷ್ಟ!

ನಾರ್ವೆಗೆ ಕಳುಹಿಸಲ್ಪಟ್ಟಿದ್ದ ಮಿತ್ರರಾಷ್ಟ್ರಗಳ ಸೈನಿ ಕರಲ್ಲಿ 1800 ಜನರು ಸತ್ತರು ಮತ್ತು ಗಾಯಗೊಂಡ ರೆಂದು ಅಮೆರಿಕೆಯ ಪತ್ರಿಕೆಗಳು ಪ್ರಕಟಿಸಿರುತ್ತವೆ.

ನಾರ್ವೆಯಲ್ಲಿ ಜರ್ಮನರ ನಷ್ಟ

ಜರ್ಮನ್ ಅಂಂಗಳು ಸತ್ತ ಮತ್ತು ಗಾಯಗೊಂಡ ಸೈನಿಕರನ್ನು ಹೊತ್ತು ಒಸ್ಲೋನಗರಕ್ಕೆ ತರುತ್ತಿರುವ ವೆಂದೂ, ಹೊಡೆದಾಟದಲ್ಲಿ ಜರ್ಮನರ ಕಡೆ ಆಪಾರ ನಷ್ಟವಾಗಿದೆಯೆಂದೂ, ಸತ್ತವರನ್ನೆಲ್ಲಾ 30 ರಂತೆ ರಾಶಿಹಾಕಿ ಸಮಾಧಿಗೊಡುತ್ತಿರುವರೆಂದೂ ತಿಳಿದು ಬರುತ್ತದೆ

ಬ್ರಿಟನ್ನಿನಲ್ಲಿ 3ಜಲಕ್ಷ ಹೊಸ ಸೈನ್ಯ

ಇದೇ ಮೇ 9 ನೆಯ ತಾರೀಖಿಗೆ 10 ವರ್ಷ ತುಂಬುವ ಮತ್ತು 47 ವರ್ಷ ತುಂಬದ ಎಲ್ಲ ಬ್ರಿಟಿಷ್ ಪುರುಷರೂ ಸೈನ್ಯಕ್ಕೆ ಸೇರಲು ಸಿದ್ಧರಾಗಬೇಕೆಂದು ಬ್ರಿಟಿಷ್ ಸಾರ್ವ ಭೌಮರು ಆಜ್ಞೆಮಾಡಿದ್ದಾರೆ ಈ ಆಜ್ಞೆಯು 23 ಲಕ್ಷ ಕ್ಕಿಂತ ಹೆಚ್ಚು ಜನರಿಗೆ ಅನ್ವಯಿಸುವದೆಂದು ಭಾವಿಸ ಲಾಗಿದೆ

ಶ್ರೀ ಆಯಿರ್ಜಾರ್ಜರ ಖಂಡನ

ಶ್ರೀ ಲಯಿರ್ಜಾರ್ಜರು ಕಾರ್ಮನ್ ಸಭೆಯಲ್ಲಿ ಮಾತನಾಡುತ್ತ ಸರ್ಕಾರದ ಕಾರ್ಯಕ್ರಮವನ್ನು ಖಂಡಿಸಿ ದರು. "ಮೊದಲು ನಾರ್ವೆಗೆ ಕಳುಹಿಸಲ್ಪಟ್ಟ ಸೈನಿಕರು ಅರಿಕಲ್ಪಟ್ಟ ಯೋಧರಾಗಿಬೇಕಾಗಿತ್ತ ಹಲಬೇಕೆಯು ತಕ್ಷಿಪ್ತವಾ ಸೈನ್ಯವನ್ನು ಕಳುಹಿಸಬಾರದಾಗಿತ್ತು ಸಮ್ಯ ವಸ್ತೆ ಇಲ್ಲದ ಆರ್ಡಿನೆನ್ಸಿನಿಂದ ಬ್ರಿಟಿಷ್ ಸೈನಿಕರ ಪ್ರಯತ್ನಕ್ಕೆ ಧಕ್ಕೆಬಾರದೆ ಸಂಬಂಧವೇ ಇರಲಿಲ್ಲ ಬ್ರಿಟಿಷರು ನಿಜವಾದ ಕಾರ್ಯಕ್ರಮವನ್ನೇನೂ ಕೈಗೊಳ್ಳಲಿಲ್ಲ ಆವರ ಪ್ರೌಳ್ಳು ಕಾರ್ಯಕ್ರಮವು ನಿಸ್ಸಹಾಯಕತೆ ಜಿಕೊಸ್ಕ್ಯೂವೇಕಿಯನಂತಹ ದೇಶವನ್ನು ನಾವು ಶತ್ರುಗ ಳಿಗೆ ಕೊಟ್ಟೆವು ಯೂರೋಪಿನಲ್ಲಿ ಆತ್ಯಂತ ಸಾಹಸಿಗಳೆ ನಿಸಿವೆ 10 ಲಕ್ಷ ಸೈನಿಕರನ್ನು ಕಳೆದುಕೊಂದೆವು ರಷ್ಯಾ ಪಡಗುಗಳೀಗ ಎನ್ನೆದಿಯನ್ನು ಹೊತ್ತು ಕಲ್ಲು ಕಡಲಿನ್ನು ದಾಟಿ ಜರ್ಮನಿಯ ನಿರ್ಮಾನಗಳಿಗೆ ಎನ್ನೆ ಯನ್ನು ಒದಗಿಸುತ್ತವೆ ಕ.ಮೀಲ್ಗಿಯವರಂತಾ ಜರ್ಮನಿ ಯ ಕೈಕೆಳಗಿನ್ನ್ಯಂತೆಯೇ ಆಗಿವೆ ಜರ್ಮನರು ನಾರ್ವೆ ಯನ್ನು ಹಿಡಿವ ಪರ ಫಲವಾಗಿ ನಾಜಿ ವಿಮಾನಗಳೂ ಮತ್ತು ಸರ್ಮನೇಗಳಿಗೂ ನಮ್ಮ ತೀರದ ಕಡೆಗೆ 200 ಮೈಲು ಸಮೀಪಕ್ಕೆ ಬಂದಿಂತಾಯಿತ. ಪೋಲೆಂಡ್, ಸ್ಲೀಲೆಂಡ್ ಮತ್ತು ನಾರ್ವೆಗಳಿಗೆ ನಾವು ಮಾತು ಕೊಟ್ಟುಯಿತು ಆ ಚರವನೆ ಪತ್ರಗಳ ಕೆಲಸಕ್ಕೆ ಬಾರದ ವುಗಳಾಗಿ ನಮ್ಮ ಮುಂದೆ ಬಿದ್ದಿವೆ" ಎಂಬುದಾಗಿ ಜೀಳಿ ದರು

ಪರಿಷದವಲ್ಲಿ ಬಸವಜಯಂತಿಯ ಬಗ್ಗೆ ಹೊಡೆದಾಟ.

ಹರಿಹರದಲ್ಲಿ ಬಸವಜಯಂತಿ ಉತ್ಸವ ಸಂಬಂಧದಲ್ಲಿ ಕೋಮುವಾರು ಹೊಡೆದಾಟವಾಗಿ 30 ಜನರಿಗೆ ಗಾಯು ಗಳಾಗಿವೆ 40 ಜನರ ಬಂಧನವಾಗಿವೆ. 3 ಮಸೀದಿ ಗಳಿಗೆ ಆಪಾಯ ಸಂಬವಿಸಿದೆ

ಬ್ರಿಟಿಷ್ ಮಂತ್ರಿಮಂಡಲದ ಆರೋಗ್ಯ ಕಟ್ಟಿನೆಯಂತೆ

ಕಳೆದ ೩೦ನೆಯ ತಾರೀಖಿನ ದಿನ ಲಂಡನ್ನಿನ ಲಾರ್ಡ್ಸ್ ಸಭೆಯಲ್ಲಿ ಲಾರ್ಡ್ ಸ್ಯಾಮ್ಯೂಲಿಯವರು, ಸರ್ಕಾರದ ವರು ಯುದ್ಧದ ವಿಚಾರದಲ್ಲಿ ಅನುಸರಿಸುತ್ತಿರುವ ನಡ ತೆಯ ವಿಷಯದಲ್ಲಿಯೂ, ಮುಖ್ಯವಾಗಿ ನಾರ್ವೆಯ ವಿಚಾರದಲ್ಲಿ ಅನುಸರಿಸಿದ ಕಾರ್ಯಕ್ರಮದ ವಿಷಯದ ಲ್ಲಿಯೂ ಮಾತನಾಡುತ್ತಾ "ಸರ್ಕಾರದವರು ಸಂಗ್ರಾಮ ವಿಷಯದಲ್ಲಿ ಅನುಸರಿಸುತ್ತಿರುವ ರೀತಿನೀತಿಗಳು ಜನ ರಲ್ಲಿ ಬಹಳ ಅನಮಾಧಾನ ಹುಟ್ಟಿಸಿವೆಯೆಂದೂ, ಸರ್ಕಾರ ದವರು ತಮ್ಮ ಈಗಿನ ಕಾರ್ಯಕ್ರಮವನ್ನೂ ತಿದ್ದಿಕೊಳ್ಳು ವರೋ, ಅಥವಾ ಇನುವರಿಗೆ ಮಾಡಿದಂತೆಯೇ ಮುಂದೆ ಯೂ ಮಾಡುವರೋ ಎಂಬ ವಿಚಾರವು ಒಹಳ ಆತಂಕಕ್ಕೆ ಕಾರಣವಾಗಿದೆಯೆಂದೂ, ನಾರ್ವೆಯಲ್ಲಿ ಬ್ರಿಟಿಷ್‌ಸರ್ಕಾರ ದವರು ಕೈಗೊಂಡ ಕಾರ್ಯಕ್ರಮವನ್ನು ಪರಿಶೀಲಿಸುವಿಕೆ ಮಂತ್ರಿ ಮಂಡಲದ ಬುದ್ಧಿಯು ರೋಗಗ್ರಸ್ತ ವಾಗಿರು ವಂತಿದೆಯೆಂದೂ, ಅವಕ್ಕೆ ತೀಳ್ಳಿ ತಕ್ಕ ಚಿಕಿತ್ಸೆ ಮಾಡ ಬೇಕೆಂದೂ, ಇಲ್ಲವಿದ್ದರೆ ರೋಗವು ಉಗ್ರರೂಪವನ್ನು ತಾಳುವುದೆಂದೂ" ಎಚ್ಚರಿಸಿದರು

ಬೆಲ್ಜಿಯಂ ಸರ್ಕಾರವು ಸಹಾಯವನ್ನು ಬೇಡಿದೆ'

ಜರ್ಮನರು ಬೆಲ್ಜಿಯಂ ದೇಶವನ್ನು ಸ್ವಾನ್ನಿಸಿಂದ ಪ್ರತ್ಯೇಕಿಸುವ ಪ್ರಯತ್ನವನ್ನು ಮಾಡಿರುತ್ತಾರೆ ಇದ ಕ್ಕಾಗಿ ಜರ್ಮನ್ ಸೈನ್ಯಕ್ಕೂ ಮುಂದೆ ನುಗ್ಗುತ್ತಿವೆ. ಬೆಲ್ಜಿಯಂ ಸರ್ಕಾರವು ಶತ್ರುಗಳಕ್ಕೆದುರಿಸಲು ಫ್ರೆಂಚ್ ಮತ್ತು ಬ್ರಿಟನ್ನಿಗಳನ್ನು ತನ್ನ ಸಹಾಯಕ್ಕಾಗಿ ವಿನ್ನಿ ಸಿಕೊಂಡಿದೆ

ಇಟಲಿಯ ಯುದ್ಧಸಿದ್ಧತೆ

ಇಟಲಿಯು ತನ್ನ ಗಡಿ ಪ್ರದೇಶಗಳನ್ನೆಲ್ಲಾ ಭದ್ರಪ ಡಿಸಿಕೊಳ್ಳುವ ಕಾರ್ಯಕ್ರಮವನ್ನು ಕೈಗೊಂಡಿದೆ ಬ್ರಿಟಿಷ್ ಮತ್ತು ಫ್ರೆಂಚರು ನೆಜೆಯಿರುತ್ತಿರುವ ಒಳಸಂಜೇ ಈ ಸಿದ್ಧತೆಗಳಿಗೆ ಕಾರಣವೆಂದು ಸೀನಾರ್ ಗಯನ್ನಾರವರು ಹೇಳುತ್ತಿದ್ದಾರೆ

ಸ್ವೀಕಾರ.

ರಾಯಚೂರು ಡಿಸ್ಟ್ರಿಕ್ಟ್ ಬಿಜ್ಜಾಲಿ ಗ್ರಾಮವ ಶ್ರೀ ಸಾವಿರ ದೇವರ ಮಠದಲ್ಲಿ ಶ್ರೀಮಜ್ಞಾಂತೇಶ್ವರ ರವೀಂದ್ರಸ್ವಾಮಿಗಳವರು ನೆರವೇರಿದ ಸಮಯದಲ್ಲಿ ತನ್ನವಾಧಿಕಾರಿತಗಾವಾದ ತರ್ಕ ರತ್ನ ಶ್ರೀ ಚೆನ್ನವೀರಶಿವಾಚಾರ್ಯಸ್ವಾಮಿಗಳವರು ಪ್ರಭಾಷ್ಯಾಪಣಕ್ಕೊಡ್ಡರ 2-೫-೦ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಪುರುಷರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಮೆಂದು ಹಾರೈಸುತ್ತೇವೆ

ಶ್ರೀ ಶಾಸ್ತ್ರಿಗಳವನ ಶರೀರವಲ್ಲಿ ಆರೋಗ್ಯವಿಲ್ಲ.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಶರೀರದಲ್ಲಿ ಈಗ್ಗೆ ೧ ವಾರದಿಂದಲೂ ಆರೋಗ್ಯವಿರುವುದಿಲ್ಲ ಮಲೇ ರಿಯಾ ಜ್ವರವು ಬಾಧಿಸುತ್ತಲಿದೆ. ನಾನಾಕಡೆಯವರು ಅವರಿಗೆ ಅನೇಕ ಮಹತ್ವವಿಷಯಗಳ ಬಗ್ಗೆ ಪತ್ರಗಳನ್ನು ಬರೆಯತೊಂಡಿರುವರು ಆರೋಗ್ಯವಾದಮೇಲೆ ಎಲ್ಲರಿಗೂ ಉತ್ತರವನ್ನು ಬರೆಯುವರೆಂಬ ವಿಷಯವನ್ನೂ ಈ ಮೂಲಕ ತಿಳಿಸಿಸಿವೆ.

ಮ್ಯಾನೇಜರ್

[೩ ನೆಯ ಪುಟದಿಂದ ಮುಂದುವರೆದುದು]

ತ್ತವೆ ಆ ನೀರು ಅವಿಯಾಗಿಯೋ ಅಥವ ಹೀಗೆ ಕೊಂಡೋ ಹೋದಮೇಲೆ ಮಿಕ್ಕ ಪದಾರ್ಥಗಳು ಒಣಗಿ ಚರ್ಮದ ಮೇಲೆ ಒಂದು ಪೊರೆಯಾಗಿ ಅಂಟಿಕೊಂಡಿರುತ್ತವೆ ಈ ಪೊರೆಯನ್ನು ಆಗಾಗ್ಗೆ ತೆಗೆದುಹಾಕದಿದ್ದಲ್ಲಿ ಅದು ಮುಂದೆ ಶರೀರದ ಕೆಲ್ಸ ಹೊರಗೆ ಬರಲು ಅಡಚಣೆ ಮಾಡುವುದಲ್ಲದೆ, ಕೊಳೆ ಮತ್ತು ಕ್ರಿಮಿಗಳ ವಾಸಕ್ಕೆ ತೌರುಮನೆಯಂತೆ ಆಗುತ್ತದೆ ಆದ್ದರಿಂದ ನಾವು ಈ ಪೊರೆಯನ್ನು ಆಗಾಗ್ಗೆ ತೆಗೆದುಹಾಕುವುದಕ್ಕೆ ಇಷ್ಟಪಡುತ್ತೇನೆ ಮೊದಲನೆಯದಾಗಿ ಸಮಾಜದಲ್ಲಿ ಸೇರುವುದಕ್ಕೊಸ್ಕರ ನಮ್ಮ ಚರ್ಮವನ್ನು ಶುಚಿಯಾಗಿ ದುರ್ವಾಸನೆ ಹೊರಡದಂತೆ ಇಟ್ಟುಕೊಳ್ಳುತ್ತೇನೆ

ಎರಡನೆಯದಾಗಿ ಕೊಳಕು, ಕ್ರಿಮಿಗಳು ಸೇರಿಕೊಂಡು ಚರ್ಮವ್ಯಾಧಿ ಮೊದಲಾದ ರೋಗಗಳು ಬಾರದಂತೆ ಆರೋಗ್ಯಕ್ಕಾಗಿ ಶುಚಿಯಾಗಿಟ್ಟುಕೊಂಡಿರುತ್ತೇವೆ ಈ ಕೊಳಕು ಪೊರೆಯನ್ನು ಯಾವ ವಿಧದಿಂದ ಸಂಪೂರ್ಣವಾಗಿ ತೆಗೆದುಹಾಕಬಹುದೆಂಬ ಪ್ರಶ್ನೆಗೆ ಒಂದೇ ಉತ್ತರ--- ಸ್ನಾನ ಮಾಡುವುದರಿಂದ ಕನಿಷ್ಟಪಕ್ಷವೆಷ್ಟಾದರೂ ದೇಶದಲ್ಲಿ ದಿನಕ್ಕೊಮ್ಮೆ ಸಲವಾದರೂ ಸ್ನಾನ ಮಾಡಬೇಕು ಇಂದು ಸ್ನಾನವನ್ನು ಸಾಬೂನು ಅಥವ ಸೀಗೆಕಾಯಿ ಮುಂತಾದ ಪುಡಿಗಳನ್ನು ಉಪಯೋಗಿಸಿ ಸ್ನಾನ ಮಾಡಿದರೆ ಇನ್ನೂ ಶ್ರೇಷ್ಠ ವಿಶೇಷ್ಕವೆಂದರೆ ಇವು ಜೀವಸಿಲ್ಲದಿರುವ ಚರ್ಮದ ಜಿಡ್ಡನ್ನು ಕರಗಿಸಿ, ಅಪನ್ನೂ ಎಂಟಿಕೊಂಡಿರುವ ಕಲ್ಮಷವನ್ನೂ ಸ್ನಾನಮಾಡಿದ ನೀರಿನ ಜೊತೆಯಲ್ಲಿ ಹೋಗುವಂತೆ ಮಾಡುತ್ತವೆ ಹೀಗೆ ಸ್ನಾನಮಾಡಿದನಂತರ ಒಳ್ಳೆಯ ಶುಚಿಯಾದ ವಸ್ತ್ರದಿಂದ ಮೈ ಒರಿಸಿದ್ದೇ ಆದರೆ ಆಮೈಮೇಲಿನ ನೀರನ್ನು ಹೀರುವುದಲ್ಲದೆ, ಮತ್ತೇನಾದರೂ ಕೊಳೆ ಅಂಟಿಕೊಂಡಿದ್ದಲ್ಲಿ ಅದನ್ನು ಹೋಗಲಾಡಿಸಿ ಮಾಂಸಖಂಡಗಳಿಗೂ ಬಲ ಕೊಡುತ್ತೆ ಇದೆಲ್ಲಾ ಸರಿ ಆದರೆ ಸ್ನಾನಕ್ಕೆ ಒಳ್ಳೆಯದು ತಣ್ಣೀರೇ ಅಥವಾ ಬಿಸಿನೀರೆ ಎಂಬ ಪ್ರಶ್ನೆ ಬರುತ್ತೆ ಬಿಸಿನೀರು ಕೆಟ್ಟುಬೆಲ್ಲದಿದ್ದರೂ ಸ್ನಾನಕ್ಕೆ ಅಗತ್ಯವಾಗಿ ಬೇಕಾಗಿಲ್ಲ. ತಣ್ಣೀರಿನಲ್ಲಿ ಸ್ನಾನಮಾಡಿದರೆ ಶೀತ ಎಂಬುದಾಗಿ ಕೆಲವರ ತಿಳಿವಳಿಕೆ ಇದು ತಪ್ಪು ಶೀತಕ್ಕೆ ಬಿಸಿಯಾದ ಆವರಣದಿಂದ ತಣ್ಣಗಿರುವ ಆವರಣಕ್ಕೆ ಘಟಕ್ಕನೆ ಬದಲಾಯಿಸುವುದೇ ಸಾಧಾರಣವಾದ ಕಾರಣವು ಆದ್ದರಿಂದ ಸ್ನಾನವನ್ನು ಬಿಸಿನೀರಿನಲ್ಲಾಗಲಿ ಅಥವ ತಣ್ಣೀರಿನಲ್ಲಾಗಲಿ ಮಾಡಬಹುದು.

ದಿನಕ್ಕೊಂದು ಸ್ನಾನವೆಂಬುದು, ಒಂದು ಸಾಧಾರಣ ದಿನದ ತಿಳಿವಳಿಕ್ಕೊಂದಾಗಿರಬೇಕೇ ವಿನಃ ಅದೊಂದು ದೊಡ್ಡ ವಿಶೇಷ ಸಂಗತಿಯಾಗಿರಬಾರದು

ಶುಭ್ರವಾದ ಬಟ್ಟೆಗಳು

ಸ್ನಾನಾನಂತರ ಶುಭ್ರವಾದ ಬಟ್ಟೆಗಳನ್ನು ಧರಿಸಬೇಕು. ಮೇಲೆ ವಿವರಿಸಿದಂತೆ ನಾವು ಧರಿಸುವ ಬಟ್ಟೆಗಳು ಆದರಲ್ಲೂ ಬನೀನು, ಚಡ್ಡಿ, ಹಂಚೆ ಇಂಥಾವುಗಳು ಚರ್ಮದ ಜೊತೆನ್ನು ಹೀರುತ್ತಿರುತ್ತವೆ ಅವುಗಳನ್ನು ಒಗೆದು ಮಡಿಮಾಡಿದ್ದರೆ, ಬೆವರು ತಂಬಿಕೊಂಡು ಮುಂದೆ ಬೆವಸ್ನೇ ಹೀರುವುದಕ್ಕಾಗದಷ್ಟು ಜಿಡ್ಡಾಗಿ ಹೋಗುತ್ತವೆ ಹೀಗೆ ಬಟ್ಟೆಗಳ ಒಳಭಾಗವು ಕೊಳಕಾಗುತ್ತದೆ. ಹೊರಭಾಗದಲ್ಲಿ ಕೊಳಕಾಗುವುದಂತೂ ತಿಳಿದೇ ಇದೆ. ಈ ಹೊರಭಾಗದ ಕೊಳಕೆನ್ನೇ ಆಸಕ್ಕಿ ಒಂದಲ್ಲದಿದ್ದರೆ ಆರೋಗ್ಯವಾಗಿರುವುದಕ್ಕೆ ಒಂದು ದೊಡ್ಡ ಅಡಚಣೆಯಾಗಿ ಪರಣಮಿಸುತ್ತದೆ ಆದುದರಿಂದ ಪ್ರತಿದಿನದ ಸ್ನಾನಾನಂತರ, ಒಗೆದು ಮಡಿಮಾಡಿದ ಬಟ್ಟೆಗಳನ್ನೇ ಧರಿಸಬೇಕು ಹಾಗೆ ಒಗೆಯುವ ಬಟ್ಟೆಗಳನ್ನು ನೋಪು, ಸೋಪು, ಮುಂತಾದುವುಗಳನ್ನು ಉಪಯೋಗಿಸಿ ಒಗೆದರೆ, ಮೇಲೆ ವಿವರಿಸಿರುವ ಕಾರಣದಿಂದ ಬಟ್ಟೆಯಲ್ಲಿರುವ ತೊಳಕು ಚೆನ್ನಾಗಿ ಹೋಗಿ, ಹೆಚ್ಚು ಶುಭ್ರವಾಗುವುದು

ಚರ್ಮವ್ಯಾಧಿಗಳಿಂದ ನರಳುತ್ತಿರುವವರ ಬಟ್ಟೆಬರೆಗಳಲ್ಲಿ ವ್ಯಾಧಿ ಕ್ರಿಮಿಗಳು ಅಂಟಿಕೊಂಡಿರುವುವು ಅಂಥವರ ಬಟ್ಟೆಗಳನ್ನು ಕುದಿಯುವ ನೀರಿನಲ್ಲಿ ನೆನೆಸಿ, ಒಗೆದುಮೇಲೆ ಉಪಯೋಗಿಸುವುದಕ್ಕೆ ಅರ್ಹವಾಗುವುದು ಕೆಲವು ಸಮಯಗಳಲ್ಲಿ ನವ್ಯ ಕಠಪಸ್ಪಗಳು ಬಟ್ಟೆಯಾಗಿರುವುದಿಲ್ಲ ಹತ್ತಿ, ದೊಡ್ಡ ಅಪಕ್ಷುಗಳನ್ನೂ ತಂದು ಒಡ್ಡುವುದು ಆದ್ದರಿಂದ ನಾವು ಉಪಯೋಗಿಸುವ ಎಲ್ಲಾ ಬಟ್ಟೆಗಳೂ ಶುಭ್ರವಾಗಿರಬೇಕಾದ್ದು ಪರಮಾವಶ್ಯಕ

ಹಲ್ಲು, ಉಗುರು, ಕೂದಲು ಇವುಗಳ ಶುಚಿ

ಹಲ್ಲುಗಳು— ಪ್ರತಿ ಊಟವಾದ ಮೇಲೂ ಹಲ್ಲುಗಳನ್ನು ಒಂದು ಸಲ ಶುಚ್ಯಮಾಡಬೇಕು ಸುಲಗ ಪ್ರಬಲವಾಗಿ ಮಂಚೆಯೂ, ಮಲಗಿ ಎದ್ದಾಗಲೂ ಶುಚ್ಯಮಾಡುವುದಂತು ಆತ್ಯಾವಶ್ಯಕ ಹಾಗೆ ಶುಚ್ಯಮಾಡುವುದಕ್ಕೆ ಸಾದೆಯ ಬೂದಿಯ ಸ್ನಾಗಲಿ, ರಂಗೋಲೆ ಪುಡಿಯ ಸ್ನಾಗಲಿ ಉಪಯೋಗಿಸಬಾರದು ಏಕೆಂದರೆ ಅಂತಾ ಪದಾರ್ಥಗಳಲ್ಲಿ ಇರತಕ್ಕ ಗಂಧಕ ಪಸ್ತುವು ಹಲ್ಲಿನ ಸಂದುಗಳನ್ನು ಸಟ್ಟು ಅವುಗಳು ಸಡಿಲಾಗಿ ಸಣ್ಣಾಪುಟ್ಟ ಚಿಲ್ಲುಗಳಾಗುವುವು ಈ ಚಿಲ್ಲುಗಳಲ್ಲಿ ವಿಷಪ್ರಾಯಗಳು ಸೇರಿಕೊಳ್ಳಲು ಎಕಕಾಶವಾಗಿ, ಹಲ್ಲುಬಾಧ್ಯಗಳನ್ನೂ ಉಂಟುಮಾಡಿಬಿಡುವುವು ಹಲ್ಲುಗಳ ಶುಚಿತ್ವಕ್ಕೂ ನಮ್ಮ ದೇಹಾರೋಗ್ಯಕ್ಕೂ ಬಹಳ ಸಂಬಂಧವಿರುವುದರಿಂದ ಹಲ್ಲುಗಳನ್ನು ಶುಭ್ರವಾಗಿಡಬೇಕು

ಉಗುರುಗಳು

ಆಗಿಂದಾಗ್ಗೆ ಉಗುರುಗಳನ್ನು ಕತ್ತರಿಸಿ ಬೆಸ್ಟ್ ಆದರೆ, ಆ ಉಗುರು ಸಂದುಗಳಲ್ಲಿ ಕೂಳಿ ಸೇರಿಕೊಂಡು ಕೈ ತೊಳೆಯುವಾಗ ಹೋಗದೆ, ನಾವು ಊಟಮಾಡಿದರೆ ಹೊಟ್ಟೆಗೂ, ಇತರರಿಗೆ ಬಡಿಸಿದರೆ ಅವರ ಹೊಟ್ಟೆಗೂ ಪೋಗಿ ಅನಾರೋಗ್ಯಕ್ಕೆ ಕಾರಣವಾಗುವುದು ಆದುದರಿಂದ, ಆಗ್ಗೆ ಉಗುರುಗಳನ್ನು ಕತ್ತರಿಸಿ ಕೊಳೆ ಸೇರದಂತೆ ನೋಡಿಕೊಳ್ಳಬೇಕು

ಕೂದಲು

ತಲೆಯ ಕೂದಲನ್ನು ಅಗಿಂದಾಗ್ಗೆ ಸಾಬೂನು, ಸೀಗೆಕಾಯಿಪುಡಿ ಮುಂತಾದವುಗಳಿಂದ ತೊಳೆಯುತ್ತಿರಬೇಕು ಒಬ್ಬರು ಉಪಯೋಗಿಸಿದ ಬಾಚಣಿಗೆಯನ್ನು ಮತ್ತೊಬ್ಬರು ಉಪಯೋಗಿಸಬಾರದು ಈ ವಿಷಯವನ್ನು ಗಮನಿಸಬೇಕಿದ್ದಕ್ಕೆ, ಹೇಸು ತುಂಬಕೊಂಡು, ಕಜ್ಜಿಯೇ ಮುಂತಾದ ರೋಗಗಳಿಗೆ ಅವಕಾಶವಾಗುವುದು

ಹೀಗೆ ತನ್ನ ಶರೀರವನ್ನು, ಉಡುಪುಗಳನ್ನು ತೊಳೆದು ಶುಚಿಯಾಗಿಟ್ಟುಕೊಂಡಿರುವುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವೆಂದು ತಿಳಿಯಬೇಕು ಹೀಗೆ ಮಾಡಿದ್ದೇ ಆದರೆ, ಅವನ ಆತ್ಮಸ್ಥನೆ ಅವನ ಸಂತಾನಕ್ಕೆ ಸೇವೆ, ಅವನ ನೆರೆಹೊರೆಯವರಿಗೆ ಸೇವೆ ಮತ್ತು ಅವನ ದೇಶಕ್ಕೂ ಸೇವೆಮಾಡಿದಂತಾಗುವುದು

ಆರೋಗ್ಯ ಅಭ್ಯಾಸಗಳು

ಒಬ್ಬ ಮನುಷ್ಯನ ಜೀವಮಾನದಲ್ಲಿ ಚಿಕ್ಕಂದಿನಿಂದಲೂ ಆಚರಿಸಿಕೊಂಡು ಬಂದ ಅಭ್ಯಾಸಗಳು ಎಷ್ಟರ ಮಟ್ಟಿಗೆ ಪ್ರಯೋಜನಕಾರಿ ಎಂಬ ಅಂಶವು ಸಾಮಾನ್ಯವಾಗಿ ನಮಗೆ ತಿಳಿಯುವುದಿಲ್ಲ ಈ ಅಭ್ಯಾಸಗಳು ಸ್ವಲ್ಪ ಹೆಚ್ಚು ಕಮ್ಮಿ ಸ್ವಭಾವವಾಗಿ ಪರಿಣಮಿಸಿ ತ್ರಾಸಿಲು ಅಸಾಧ್ಯವಾಗುವುದು. ಆರೋಗ್ಯ ದೃಷ್ಟಿಕಾಯ ರಾಗಿರಲು ಊಟ, ಆಟಪಾಟ, ವಿಶ್ರಾಂತಿ, ಮಲಮೂತ್ರ ವಿಸರ್ಜನೆ ಮುಂತಾದ ವಿಷಯಗಳಲ್ಲಿ ಕೆಲವು ಒಳ್ಳೆ ಅಭ್ಯಾಸಗಳು ಅತ್ಯವಶ್ಯಕವಾಗಿರುತ್ತೆ

ಕಾಲಪ್ರವರ್ತಿ

ಪ್ರತಿಯೊಬ್ಬ ಮನುಷ್ಯನೂ ದಿನವಹಿ ತಪ್ಪದೆ, ಬೆಳಿಗ್ಗೆ ಹಾಸಿಗೆಯಿಂದ ಎದ್ದ ಕೂಡಲೆ ಕಾಲಪ್ರವರ್ತಿ ಸಮರ್ಪಕವಾಗಿ ಆಗುವಂತೆ ಅಭ್ಯಾಸಮಾಡಬೇಕು ಹೀಗೆ ಮಾಡದೇ ಇಪ್ಪದ್ದಲ್ಲಿ ಮಲಬದ್ಧತೆಗೆ ಕಾರಣವಾಗುವುದು

ಊಟ

' ಊಟಬಲ್ಲವನಿಗೆ ರೋಗವಿಲ್ಲ " ಎಂಬ ನಾಡಿಯು ಅಕ್ಷರಶಃ ಸತ್ಯವಾದುದು ನಾವು ತೆಗೆದುಕೊಳ್ಳುವ ಆಹಾರವು ಪುಷ್ಟಿಕರವಾಗಿಯೂ, ದೇಹಾರೋಗ್ಯಕ್ಕೆ ಅವಶ್ಯಕವಾಗಿ ಬೇಕಾಗಿರುವ ಸತ್ವಗಳನ್ನು ಒಳಗೊಂಡಿರುವಂಥಾದ್ದು ಆಗಿರಬೇಕು ಊಟದ ವಿಷಯದಲ್ಲಿ ಈ ಕೆಳಗೆ ಕಂಡ ನಿಯಮಗಳನ್ನು ಮರೆಯಬಾರದು —

೧ ಪ್ರತಿದಿನವೂ ಒಂದು ನಿರ್ದಿಷ್ಟ ಕಾಲಕ್ಕೆ ಸರಿಯಾಗಿ ಊಟಮಾಡುವ ಅಭ್ಯಾಸವಾಗಿರಬೇಕು. ಆದರೆ ಆ ಕಾಲಕ್ಕೆ ಹಸಿವಾಗದಿದ್ದಲ್ಲಿ ಊಟಮಾಡಬಾರದು.

೨ ಮಿತವಾಗಿ ಊಟಮಾಡಬೇಕು ಹೊಟ್ಟೆಗೆ ಹೆಚ್ಚು ಬಾರ ಹೊರಿಸಕೂಡದು

೩ ಆಹಾರವನ್ನು ಬಲವಂತವಾಗಿ ನುಂಗಬಾರದು

೪ ಆಹಾರವನ್ನು ಚೆನ್ನಾಗಿ ಅಗಿದು ನುಂಗಬೇಕು

೫ ಊಟಮಾಡುವಾಗ, ಹಿದ ಪುದಾಗಲೀ, ಕೋಸ ಗೊಳ್ಳುವುದಾಗಲೀ, ಅಥವಾ ಯೋಚನಾಪರರಾಗಿರ ವುದಾಗಲೀ ಕೂಡದು

ಪಾನೀಯ

ಸಾಧ್ಯವಾದ ಮಟ್ಟಿಗೂ ಊಟಮಾಡುತ್ತಿರುವಾಗ ನೀರನ್ನು ಕುಡಿಯುವ ಅಭ್ಯಾಸವನ್ನು ತ್ಯಜಿಸಬೇಕು ಊಟಾನಂತರವೇಳೆಯಾಗಲೀ ಅವಶ್ಯ ಮುಂಚೆಕಾಯಾಗಲೀ ಬೇಕಾದಷ್ಟು ನೀರು ಕುಡಿಯಬಹುದು

ವಿಶ್ರಾಂತಿ ಮತ್ತು ನಿದ್ರೆ

ಪ್ರತಿಯೊಂದು ಪ್ರಾಣಿಗೂ ವಿಶ್ರಾಂತಿ ಅವಶ್ಯಕವಾಗಿ ಬೇಕು ಸುಖನಿದ್ರೆಯೊಂದೇ ಮನಸ್ಸಿಗೂ ಮತ್ತು ದೇಹಕ್ಕೂ ಸುಖವನ್ನು ಕೊಡುವ ಅತ್ಯುತ್ತಮವಾದ ಮಾರ್ಗ " ಜಾಗ್ರತೆ ಮಲಗಾ ಜಾಗ್ರತೆ ಏಳು " ಎಂಬಾದಿ ಆರೋಗ್ಯ ನಿಯಮವು ಕಸುಬು, ವಯಸ್ಸಿಗೂ, ದೇಹಸ್ಥಿತಿಗೂ ಅನುಗುಣವಾಗಿರಬೇಕು ಸಣ್ಣ ಮಕ್ಕಳಿಗೆ ಹೆಚ್ಚು ಕಾಲ ನಿದ್ರೆಬೇಕು. ವಯಸ್ಸು ಹೆಚ್ಚಿದಹಾಗೆಲ್ಲಾ, ನಿದ್ರೆಯಕಾಲವು ಕಡಮೆಯಾಗುವುದು ದೊಡ್ಡವರಿಗೆ ಸಾಮಾನ್ಯವಾಗಿ ದಿನವಹಿ ಏಳು ಘಂಟೆ ಕಾಲ ನಿದ್ರೆಯು ಬೇಕಾಗಿರುವುದು

ವ್ಯಾಯಾಮ

ಯಾವುದಕ್ಕೂ ಆಂಜ ಸೂರ ನಿಲ್ಲುವುದು ಚರ್ಚಿಲ್ಲರ ಸ್ವಭಾವವೇ ಅಲ್ಲ. ಚೇಂಬರ್ಲೇನರಂತೆ ಗಂಡಾಂತರ ಗಳನ್ನು ಮುಂಜಾಕಾಳ ಮನೋವೈತ್ತಿಯವರೂ ಅಲ್ಲ. ಅವನ್ನು ಕಂಡುಹಿಡಿದು ಶಕ್ತಿಸಾಮರ್ಥ್ಯದಿಂದ ಅವುಗಳನ್ನು ಜಯಿಸಿ ನೋಲೆ ಬರುವ ಸಾಹಸಿ. ಉತ್ಕೃಷ್ಟ ಲೇಖಕರಾಗಿ ತಮ್ಮ ಆತ್ಮವೃತ್ತಿಯನ್ನು ಬರೆದಿರುವರು. ಮಾತುಗಾರಿಕೆಯಿಂದ ಜನರನ್ನು ಮಂತ್ರ ಮುಗ್ಧರನ್ನಾಗಿ ಮಾಡಬಲ್ಲರು. ಚುಟುಕು ಮಾತುಗಳಿಂದ ಎದುರಾಳಿಗಳು ಬೆಚ್ಚಿಬೀಳುವಂತೆ ಮಾಡಬಲ್ಲರು. ನಗೆಮಾತು, ವಿನೋದೋಕ್ತಿಗಳಿಂದ ಎಂಥಹ ಬಿಂಕದವರನ್ನಾದರೂ ನಗಿಸಿಬಿಡಬಲ್ಲರು. ನಾಜಿಗಳು ಪುಂಡಾಟಿಕೆಯಲ್ಲಿ ನೋಡು ನೋಡು ಮಾತಾಡಿದರೆ, ಅವರನ್ನು ತುಂಡು ತುಂಡು ಮಾಡಿ ಖಂಡಿಸಿಬಿಡುವ ಗಂಡು ಶೈಲಿಯ ಉತ್ತರ ಕೊಡಬಲ್ಲರು. ಹಿಟ್ಲರನನ್ನು ಬೆದರಿಸಲು ಚರ್ಚಿಲ್ಲರು; ಚರ್ಚಿಲ್ಲರನ್ನು ಎದುರಿಸಲು ಹಿಟ್ಲರು. ಹಿಟ್ಲರ ಮಾತಿನ ಮರ್ಮ ಚರ್ಚಿಲ್ಲರಿಗೆ ತಿಳಿದಂತೆ ಚರ್ಚಿಲ್ಲರ ಉತ್ತರವು ಹಿಟ್ಲರ ಮನಮುಟ್ಟುವುದು. ಚರ್ಚಿಲ್ಲರು ನಾಜಿಗಳ ಬೂಟಾಟಿಕೆಯನ್ನು ಹಾರಿಸಬಲ್ಲರು. ಚರ್ಚಿಲ್ಲರ ಭಾಷಣ ವೆಂದರೆ ನಾಜಿಗಳ ಎದೆ ಕಂಪಿಸುವುದು. ೬೫ ವರ್ಷ ವಯಸ್ಸು ಮಿಕ್ಕಿದ್ದರೂ ಅವರು ಹೆರೆಯದ ಹುಡುಗರಂತೆ ಕೆಲಸ ಮಾಡುವರು.

ನಿಳೆಂಟು ತಿಂಗಳ ಮೊದಲು ಯಾವ ಪಕ್ಷದ ಬೆಂಬಲವೂ ಇಲ್ಲದೆ, ತಾವೇ ತಾವಾಗಿದ್ದ ಚರ್ಚಿಲ್ಲರು ಇಂದು ಇಡೀ ರಾಷ್ಟ್ರದ ಬೆಂಬಲವನ್ನು ಸಡೆದು ಪ್ರಧಾನಮಂತ್ರಿ ಗಳಾಗಿರುವರು. ಕೂಡಲೇ ತಮ್ಮ ರಾಷ್ಟ್ರದ ಆಡಳಿತ ಮತ್ತು ಭೋರೆಗೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಮಾಡಿಬಿಟ್ಟಿರುವರು. ಪ್ರತಿಗಾಮಿಯಾದವರೂ ಅತ್ಯಂತ ತೀವ್ರಗಾಮಿ. ಸರ್ ಸ್ಟಾಫರ್ಡ್ ಕ್ರಿಪ್ಸು ರನ್ನು ಬ್ರಿಟನ್ನಿನ ರಾಯಭಾರಿಯಾಗಿ ರಷ್ಯಾಕ್ಕೆ ಕಳುಹಿಸಿ ಅದನ್ನೊಲಿಸಿಕೊಳ್ಳಲ್ಪತ್ನಿಸಿರುವರು. ಹಿಟ್ಲರು ಇಂಗ್ಲೆಂಡಿನ ಹೃದಯದಂತಿರ್ದ ಫ್ರಾನ್ಸನ್ನು ಪುಡಿಪುಡಿಮಾಡಿ ಯೂರೋಪಿನಲ್ಲೆಲ್ಲಾ ತಮ್ಮ ವಿಜಯಪತಾಕೆಯನ್ನೆರಿಸಿಬಿಟ್ಟಿರುವರು. ಎಳ್ಳೆಲ್ಲಿಯೂ ಕಗ್ಗತ್ತಲೆಯೇ ಹೆಚ್ಚು ದಾರಿಕಾಣದಾಗಿರುವುದು. ಇಂತಹ ಪರಿಸ್ಥಿತಿಯಲ್ಲಿಯೂ ಸ್ವಲ್ಪವೂ ಎದೆಗುಂದದೆ "ಇನ್ನೆ ಮುಂದೆ ಇಂಗ್ಲೆಂಡೊಂದೇ ಕಾದಾಡುವುದು. ಇಂಗ್ಲೆಂಡಿನ ಯುದ್ಧವಿಧೀಗ ಆರಂಭವಾಗಿರುವುದು. ಹಿಟ್ಲರ್‌ಶಾಹಿಯನ್ನು ಗೆದ್ದವರು ಇಡೀ ಲೋಕವನ್ನೇ ಗೆಲ್ಲುವರು. ಬ್ರಿಟಿಷ್ ಹೆಡಗು ಪಡೆಯನ್ನೆದುರಿಸುವ ಶಕ್ತಿಯೇ ಇಲ್ಲ ಹಿಟ್ಲರಿಗೆ. ಅವರ ವಿಮಾನ ಧಾಳಿಯನ್ನು ತಡೆಗಟ್ಟಲು ಇಂಗ್ಲೆಂಡಿನಲ್ಲಿ ಸಾಕಷ್ಟು ವಿಮಾನಗಳಿವೆ. ಗಾಳಿಕೊಡೆಗಳ ಮೂಲಕ ಜರ್ಮನರು ಇಳಿದರೆ ಕ್ಷಣಮಾತ್ರದಲ್ಲಿ ಅವರಿಗೆ ಗತಿತೋರಿಸಲು ಬೇರೆ ದಾರಿಯಿದೆ. ಇಂಗ್ಲೆಂಡಿನಲ್ಲಿಗಲ ೧೫ ಲಕ್ಷ ಸುಸಜ್ಜಿತ ಸೈನ್ಯವಿದೆ. ಇನ್ನು ೧೦ಲಕ್ಷ ತಯಾರಾಗುತ್ತಿದೆ. ಅಮೇರಿಕವು ಇಂಗ್ಲೆಂಡಿನ ಬೆಬಲಕ್ಕೆ ನಿಂತಿದೆ. ಹಿಟ್ಲರ್ ಶಾಹಿಯನ್ನು ನಿರ್ನಾಮಮಾಡುವುದೇ ನಿಜ್ಜ." ಎಂಬ ವೈರಿಯ ಎದೆಯು ಕಂಪಿಸುವಂತೆ ಉದ್ಯೋಪಿಸಿ ಇಡೀ ಜಗತ್ತಿನೆಲ್ಲೇ ಆಕ್ರೋಶವನ್ನುಟ್ಟುಮಾಡಿಯವರು. ಇಂತಹ ತೇಜಸ್ವೀ ಪುರುಷಸಿಂಹನು ಇಂಗ್ಲೆಂಡಿನ ಅದೃಷ್ಟಜಾಲಕ್ಕನಾಗಿ ಬಂದುದೊಂದು ಸುದೈವವೇ ಸರಿ.

ಬ್ರಿಟಿಷ್ ಮಹಾಪ್ರಧಾನರ ಯುದ್ಧದ ವರದಿ.

ಬ್ರಿಟಿಷ್ ಮಹಾಪ್ರಧಾನರು ಆಕಾಶವಾಣಿಯ ಮೂಲಕ ಈ ಕೆಳಗೆ ಕಂಡಂತೆ ಯುದ್ಧದ ಸಮಯವನ್ನು ವಿವರಿಸಿದರು.

ನೌಕಾಬಲ

ಕಳೆದ 15 ದಿನಗಳಲ್ಲಿ ಬ್ರಿಟನ್ನಿನ ನೌಕಾಬಲವು ಜರ್ಮನಿಯು ಅಳಿದುಳಿದ ನೌಕಾಬಲವನ್ನು ಬೆನ್ನಟ್ಟಿರುವುದಲ್ಲದೆ ಫ್ರಾನ್ಸಿನ ನೌಕಾಬಲವನ್ನು ಅಪ್ರಯೋಜಕವನ್ನಾಗಿ ಮಾಡುವ ಕರ್ತವ್ಯವನ್ನು ನಿರ್ವಹಿಸಬೇಕಾಯಿತು. ಕ್ಯಾಂಪಿನ ಆರಣ್ಯದ ಬೈಲ್ಲೆ ಕೋಟೆಸಲ್ಲಿ ರುಜು ಹಾಕಲ್ಪಟ್ಟ ಒಪ್ಪಂದದ ಪ್ರಕಾರ ಫ್ರಾನ್ಸಿನ ನೌಕಾಬಲವು ಜರ್ಮನಿಯ ಕೈವಶವಾಗಿದ್ದರೆ ಬ್ರಿಟನ್ನಿನ ಮತ್ತು ಅಮೆರಿಕಾದೇಶಗಳ ಭದ್ರತೆಗೇ ವಿಪತ್ತು ಬರುತ್ತಿತ್ತು. ಆದುದರಿಂದ ನೌಕಾಬಲವು ಶತ್ರುಗಳ ಕೈವಶವಾಗದಂತೆ ಮಾಡುವ ಮಾರ್ಗದ ಹೊರತು ನಮಗೆ ಬೇರೆ ದಾರಿಯೇ ಇರಲಿಲ್ಲ. ತೊಂದರೆಯನ್ನುಂಟುಮಾಡುವಂತಹ ಈ ಕೆಲಸವು ಮುಗಿಯಿತು. 'ಜೀನ್ ಬಾರ್ಟ್' ನೌಕೆಯ ನಿರ್ಮಾಣ ಕಾರ್ಯವು ಇನ್ನೂ ಮುಗಿಯದೆ ಇದ್ದರೂ ಮೊರಾಕೊ ಬಂದರಿನಲ್ಲಿ ಅದು ನಿಂತಿದೆ. ಟೂಲಾನ್‌ನಲ್ಲಿ ಅನೇಕ ಫ್ರೆಂಚ್ ಸಂಗ್ರಾಮ ನೌಕೆಗಳು ಇವೆ. ಅಲ್ಲದೆ ಜಗತ್ತಿನ ಅನೇಕ ಬಂದರುಗಳಲ್ಲಿಯೂ ಫ್ರಾನ್ಸಿನ ನೌಕೆಗಳು ಇವೆ. ಆದರೆ ಈ ನೌಕಾಬಲದಿಂದ ನಮ್ಮ ನೌಕಾಬಲದ ಶಕ್ತಿಗೆ ಕುಂದೇನೂ ಆಗುವುದಿಲ್ಲ. ಆ ನೌಕಾಬಲಗಳು ಜರ್ಮನಿಗಾಗಲೀ ಇಟಲಿಗಾಗಲೀ ಹಿಂದಿರುಗದೆ ಇರುವವರೆಗೂ ಬ್ರಿಟನ್ನಿನ ನೌಕಾಬಲಕ್ಕೆ ತೊಂದರೆ ಏನೂ ಇರುವುದಿಲ್ಲ. ನಾವು ಆ ನೌಕೆಗಳ ತಂಟೆಗೂ ಹೋಗುವುದಿಲ್ಲ. ಇನ್ನು ಆ ವಿಚಾರವನ್ನು ನಿಲ್ಲಿಸಿ ಭವಿಷ್ಯದ ಕಡೆಗೆ ತಿರುಗೋಣ.!

ಫ್ರಾನ್ಸಿನ ಹುಟ್ಟಿದ ದಿನಸ

ಇಂದು ಜುಲೈ ೧೪ ನೇ ತಾರೀಖು ಫ್ರಾನ್ಸಿನ ರಾಷ್ಟ್ರೀಯ ಹುಟ್ಟಿದ ದಿನ. ಕಳೆದ ವರ್ಷ ಇದೇ ದಿನ ನಾನು ಪ್ಯಾರಿಸ್ ನಗರದಲ್ಲಿ ಫ್ರೆಂಚ್ ಸೈನ್ಯಬಲದ ಅದ್ಭುತ ವೈಭವನ್ನು ನೋಡಿದೆನು. ಆದರೆ ಒಂದು ವರ್ಷದಲ್ಲಿ ಇಂತಹ ಘಟನಾವಳಿಗಳು ನಡೆದುಹೋಗುವ ವೆಂಬುದನ್ನು ಯಾರುತಾನೇ ನಿರೀಕ್ಷಿಸಿದ್ದರು? ಮುಂದೆ ಬರುವ ವರ್ಷಗಳು ಎಂತಹ ಘಟನೆಗಳನ್ನು ತೆಗೆದು ಕೊಂಡು ಬರುವವೆಂಬುದನ್ನು ಯಾರುತಾನೇ ಹೇಳಬಲ್ಲರು? ಮಾನವನ ಹಣೆಬರಹವು ಹೇಗಿದ್ದರೂ, ದೇವರು ನಂಬಿಕೆಯನ್ನು ಕೊಟ್ಟಿದ್ದಾನೆ. ಅದೇ ನಮಗೆ ಸಹಾಯ ಮಾಡುವುದು. ಫ್ರಾನ್ಸು ಸ್ವತಂತ್ರವಾಗಿ ಸಂತೋಷ ಪಡುವ ಜುಲೈ ೧೪ ನೇ ತಾರೀಖಿನ ಸುದಿನವನ್ನು ನೋಡುವವರೆಗೂ ನಮ್ಮಲ್ಲಿ ಕೆಲವರು ಜೀವಿಸಿರುವರೆಂಬುದನ್ನು ನಾನು ಈಗಲೇ ಹೇಳಬಯಸುತ್ತೇನೆ. ಆಮೆಫ್ರೆ ಒಬ್ಬರನ್ನು ಜರೆಯುವುದಕ್ಕಾಗಲೀ ಬಯ್ಯುವುದಕ್ಕಾಗಲೀ ನಾವು ನಮ್ಮ ಉಸಿರನ್ನು ನಿಷ್ಪತಿಸದೆ ಇರೋಣ! ನಿಮ್ಮ ಸ್ನೇಹಿತರೊಡನೆ ಸೇರಿ, ದೊಡ್ಡ ಹೋರಾಟವನ್ನು ನಡೆಯಿಸಿದಾಗ, ನಿನ್ನ ಸ್ನೇಹಿತನಿಗೆ ದೊಡ್ಡ ಪೆಟ್ಟು ಬಿದ್ದಾಗ ಆ ಸ್ನೇಹಿತನ ಕೈಯಿಂದ ಅಯುಧವು ಶತ್ರುವಿನ ವಶವಾಗಿ ನಿಮಗೆ ವಿಪತ್ತು ಸಂಭವಿಸದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯ.

ಆದರೆ ನೀವು ನಿಮ್ಮ ಸ್ನೇಹಿತರು ಆಪತ್ತಿನ ಸಮಯದಲ್ಲಿ ಬಯ್ಯುತ್ತಿದ್ದರೆ ನೀವು ದ್ವೇಷವನ್ನಿಟ್ಟುಕೊಳ್ಳಬೇಕಾದ ಸಂದರ್ಭವಿಲ್ಲ. ಆತನ ನೊಂದಿರುವ ಮನಸ್ಸಿಗೆ ಮತ್ತಷ್ಟು ಯಾತನೆಯನ್ನುಂಟುಮಾಡಬೇಕಾದುದಿಲ್ಲ. ಆತನು ಜೇತರನ್ನಿಸಿಕೊಳ್ಳುವುದಕ್ಕೆ ನೀವು ಸಹಾಯ ಮಾಡಬೇಕು. ಬ್ರಿಟನ್ನಿಗೂ ಫ್ರಾನ್ಸಿಗೂ ವಿಶೇ ಜಿತವಿರುವುದು. ಏಕೋದ್ದೇಶವಿರುವುದು. ನಮ್ಮ ಜಯದ ಮಾರ್ಗಕ್ಕೆ ವಿಘ್ನ ಬಂದೊದಗಿದೆ. ಆದರೆ ನಮ್ಮ ಕರ್ತವ್ಯದಿಂದ ನಾವು ವಿಮುಖರಾಗುವುದಿಲ್ಲ. ಫ್ರೆಂಚ್ ಸರ್ಕಾರಕ್ಕೆ ಎಷ್ಟು ಸಾಧ್ಯವೋ ಅಷ್ಟು ಸಹಾಯವನ್ನು ನೀಡಲಾಗುವುದು. ಫ್ರಾನ್ಸಿನ ಅಧೀನವಾಗದೆ ಇರುವ ಮತ್ತು ನಾವು ನಡೆಸುತ್ತಿರುವ ಉಗ್ರತೆರನಾದ ಸಂಗ್ರಾಮಕ್ಕೆ ಸಿಕ್ಕದೆ ಇನ್ನೂ ಸ್ವತಂತ್ರವಾಗಿರುವ ಫ್ರೆಂಚ್ ಸಾಮ್ರಾಜ್ಯದ ಇತರ ದೇಶಗಳಿಗೆ ಆದಷ್ಟು ಮಟ್ಟಿಗೆ ಸಹಾಯವನ್ನು ನೀಡುವೆವು. ಫ್ರಾನ್ಸಿನ ಎಲ್ಲಾ ಪ್ರಜೆಗಳ ಹೃದಯವೂ ಸಂತೋಷದಿಂದಲೂ ಕೃತಜ್ಞತೆಯಿಂದಲೂ ಹೊರಹೊಮ್ಮುವಂತಹ ರೀತಿಯಲ್ಲಿ ನಾವು ನಮ್ಮ ಯುದ್ಧವನ್ನು ಮುಂದುವರಿಸುವೆವು. ಫ್ರಾನ್ಸಿನ ಬಿಡುಗಡೆ ಮಾತ್ರವಲ್ಲ ಯೂರೋಪಿನ ಇತರ ದೇಶಗಳ ಸ್ವಾತಂತ್ರ್ಯಕ್ಕಾಗಿಯೂ ನಾವು ಹೋರಾಟ ನಡೆಸುವೆವು ನಾವು ಜಯಿಸುವ ಪ್ರತಿಯೊಂದು ಅನಕಾಶವೂ ಗುಲಾಮಗಿರಿಯ ಬಂಧನದಿಂದ ವಿಮುಕ್ತವಾಗಬೇಕಾಗಿರುವ ರಾಷ್ಟ್ರಗಳ ಆಕ್ರೋತ್ಪರಗಳನ್ನು ಹೆಚ್ಚಿಸುವುದಕ್ಕೆ ಉಪಯೋಗಿಸಲ್ಪಡಲಿ.

ಇಂದಿನ ಪರಿಸ್ಥಿತಿಯನ್ನು ವಿಮರ್ಶಿಸಿದರೆ ಸಂಗ್ರಾಮವು ಉಗ್ರಸ್ವರೂಪವನ್ನು ತಾಳುವುದೆಂದೂ ದೀರ್ಘವಾಗಿ ನಡೆಯುವುದೆಂದೂ ಹೇಳಬಹುದು. ಅದು ಮತ್ತೆ ಲ್ಲಿಗೆ ವ್ಯಾಪಿಸುವುದೆಂಬುದನ್ನು ಈಗಲೇ ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಒಂದಂತೂ ಸೂಕ್ಷ್ಮ ಸ್ವಪ್ನಪಡುವುದು. ಗೆಸ್ಟಪೋ ಪ್ರಭುತ್ವಕ್ಕೆ ಯೂರೋಪು ದೀರ್ಘಕಾಲ ಗುರಿಯಾಗುವುದಿಲ್ಲ. ಹಿಟ್ಲರನ ಧ್ವೇಷಭಾವನೆ ತತ್ವವನ್ನು ಯೂರೋಪು ಅಪೇಕ್ಷಿತಕಾಲ ಅಂಗೀಕರಿಸುವುದಿಲ್ಲ. ಶತ್ರುವಿನ ಹೊಡೆತವನ್ನು ಇಂದು ನಾವೊಬ್ಬರೇ ಪ್ರತಿಭಟಿಸಬೇಕಾಗಿದೆ. ಬಲಯುತವಾದ ಶತ್ರುವು ಕೊಡಬಹುದಾದ ಪೆಟ್ಟುಗಳೆಲ್ಲವನ್ನೂ ನಾವೊಬ್ಬರೇ ಇಂದು ಸಹಿಸಿಕೊಳ್ಳಬೇಕಾಗಿದೆ. ಅದನ್ನು ದೇವರ ಸಹಾಯದಿಂದ ಕಡೆದುಕೊಳ್ಳುತ್ತೇನೆ. ಶತ್ರುಗಳು ನಮ್ಮ ದೇಶವನ್ನು ಅಕ್ರಮಿಸಿಕೊಳ್ಳುವುದಕ್ಕೆ ನಡೆಯಿಸುವ ಪ್ರಯತ್ನವನ್ನು ನಾವು ಪ್ರತಿಭಟಿಸುತ್ತೇವೆ. ಇಂದು ನಾವೊಬ್ಬರೇ ಹೋರಾಟ ನಡೆಯಿಸುತ್ತಿದ್ದೇವೆ. ಮಾನವ ಕೋಟಿಯ ಪ್ರಗತಿಯ ಕುರುಹೆನಿಸಿದ ಮತ್ತು ಜಗತ್ತಿನ ನಾಗರಿಕ ದೇಶಗಳಿಗೆ ಪ್ರಿಯನೆನಿಸಿರುವ, ಈ ಮಹಾನಗರದಲ್ಲಿ ನಾವಿಂದು ಶತ್ರುಗಳ ಆಕ್ರಮಣವನ್ನು ನಿರೀಕ್ಷಿಸುತ್ತಿದ್ದೇನೆ. ಆ ಆಕ್ರಮಣವು ಇಂದು ನಡೆಯಬಹುದು, ಇನ್ನೊಂದು ವಾರದಲ್ಲಿ ನಡೆಯಬಹುದು, ನಡೆಯದೆ ಇರಬಹುದು. ಅವರೀಕ್ಷಿತವಾದ ಮತ್ತು ಅತ್ಯಗ್ರವಾದ ಆಕ್ರಮಣಪ್ರಯತ್ನವನ್ನು ಪ್ರತಿಭಟಿಸುವುದಕ್ಕೆ ನಾವು ಸಿದ್ಧರಾಗಿರಬೇಕು. ಅಥವಾ ಆದಕ್ಕಿಂತಲೂ ಕಷ್ಟತಮವೆನಿಸಿದ, ದೀರ್ಘಕಾಲ ಕಾಯುವ ಪ್ರಯತ್ನಕ್ಕೆ ಸಿದ್ಧರಾಗಿರಬೇಕು. ವಿನಾದರೂ ಪರಿಸ್ಥಿತಿ ಬಂದೊದಗಲಿ, ನಾವು ಎಲ್ಲದಕ್ಕೂ ಸಿದ್ಧರಾಗಿರಬೇಕು. ಶಾಂತಿಗಾಗಲಿ ಕ್ಷಮೆಬೇಡುವುದಕ್ಕಾಗಲಿ ನಾವು ಸಿದ್ಧರಾಗಿಲ್ಲ. ದಯೆತೋರಬೇಕೆಂದು ನಾವೆಂದಿಗೂ ಕೇಳುವುದಿಲ್ಲ.

ಬ್ರಿಟನ್ನಿನ ಬಲ

ಹಿಟ್ಲರನ ಬಲಯುತವಾದ ಸಂಗ್ರಾಮದ ಆಯುಧದಿಂದ ಯೂರೋಪಿನ ಹಲವು ದೇಶಗಳು ನಾಶವಾಗಿರುವುದನ್ನು ನೋಡುತ್ತಿರುವ ಅಟ್ಲಾಂಟಿಕ್ ಸಾಗರದಾಚೆ ಇರುವ ದೇಶಗಳೂ ಯೂರೋಪಿನ ಇತರ ದೇಶಗಳೂ, ನಮ್ಮ ದೇಶದ ಉಳಿವಿಕೆಯ ವಿಷಯದಲ್ಲಿ ಸಂದೇಹ ಪಡುತ್ತ ಸಹಾನುಭೂತಿ ದೃಷ್ಟಿಯಿಂದ ನಮ್ಮನ್ನು ನೋಡುತ್ತಿರುವುದು ನಮಗೆ ಅರ್ಥವಾಗಿದೆ. ಆದರೆ ಹಿಟ್ಲರು ತನ್ನ ಬಲಕ್ಕೆ ಸಮವಾದ ಇನ್ನೊಂದು ಬಲ ದೊಡನೆ ಇದುವರೆಗೆ ಹೋರಾಟ ನಡೆಸಿಲ್ಲ. ಅವನ ಪಾಶವೀಬಲಕ್ಕೆ ತುತ್ತಾಗಿರುವ ದೇಶಗಳಲ್ಲಿ ಅನೇಕವು, ಸಂಖ್ಯಾಬಲಕ್ಕೆ ಮುಂಚೆಯೇ ನಡೆಸಲ್ಪಟ್ಟು ಸಿತುರಿ, ಮೋಸ, ವಂಚಕತನ ಇವುಗಳಿಗೆ ತುತ್ತಾಗಿ ದುರ್ಬಲವಾಗಿದ್ದ ನಾಜಿ ಪ್ರಚಾರಕ್ಕೆ ತುತ್ತಾಗುವುದಕ್ಕೆ ಮುಂಚಿತವಾಗಿಯೇ ಆ ದೇಶಗಳಲ್ಲಿ ಒಳಗೆ ಸಿತೂರಿಸಿದೆವು ಮಹಾ ಸಂಕಟಕ್ಕೆ ಗುರಿಯಾಗಿದ್ದವು. ಫ್ರಾನ್ಸಿಗೂ, ಆದರ ಪ್ರಜೆಗಳಿಗೂ ಆದರ ನಾಯಕರುಗಳಿಗೂ ಉಂಟಾದ ಗತಿಗೆ ಬೇರೆ ಕಾರಣವನ್ನೇನು ಕೊಡಲು ಸಾಧ್ಯ? ನಮ್ಮ ದೇಶದಲ್ಲಿ ನಾವು ಈ ಬಗೆಯ ಹುಸಿ ಕಾರಣಾಗಳಿಗೆ ಗುರಿಯಾಗಿಲ್ಲ. ಆರೋಗ್ಯದಿಂದ ಕೂಡಿ ದವರಾಗಿದ್ದೇವೆ. ಜರ್ಮನಿಯ ಅಕ್ರಮಕ್ಕೆ ದೇಶಗಳನ್ನು ನಾಶಮಾಡುವುದಕ್ಕೆ ಎಷ್ಟರಮಟ್ಟಿಗೆ ಶಾಸ್ತ್ರೀಯವಾಗಿ ಹಿಟ್ಲರನು ಸಿದ್ಧಮಾಡಿಕೊಂಡಿದ್ದನೆಂಬುದನ್ನು ನಾವು ನೋಡಿದ್ದೇವೆ. ಹಾಲೆಂಡ್, ನಾರ್ವೆ, ಬೆಲ್ಜಿಯಂ ಮುಂತಾದ ದೇಶಗಳನ್ನು ಜಯಿಸುವುದಕ್ಕೆ ಹಿಟ್ಲರನು ಬಹಳ ಎಚ್ಚರಿಕೆಯಿಂದ ಕೂಡಿ ಪ್ಲಾನನ್ನು ಸಿದ್ಧಮಾಡಿಟ್ಟುಕೊಂಡಿದ್ದನು. ಫ್ರಾನ್ಸಿನ ಪ್ರಜೆಗಳನ್ನು ಹೇಗೆ ನಾಶಗೊಳಿಸಿದನೆಂಬುದನ್ನು ನಾವು ನೋಡಿದ್ದೇವೆ. ಅದುವರಿಂದ ಗ್ರೇಟ್‌ಬ್ರಿಟನ್ನನ್ನು ಕೂಡ ನಾಶಪಡಿಸುವುದಕ್ಕಾಗಿ ಅನೇಕ ವರ್ಷಗಳಿಂದ ಸಿದ್ಧಗೊಳಿಸಿಟ್ಟುಕೊಂಡಿರುವ ಒಂದು 'ಪ್ಲಾನು' ಇರಬಹುದೆಂದು ನಾವು ನಂಬಬಹುದು. ಹಿಟ್ಲರನ ಮುಖ್ಯ ಶತ್ರುವೆಂದರೆ ಈಗ ಬ್ರಿಟನ್ ಒಂದೇ. ಆದರೆ ೨ ತಿಂಗಳ ಕೆಳಗೆ ಬ್ರಿಟನ್ ಮುತ್ತುವುದಕ್ಕಾಗಿ ಸಿದ್ಧಪಡಿಸಿಟ್ಟುಕೊಂಡಿದ್ದ ಪ್ಲಾನನ್ನು ಇಂದಿನ ಪರಿಸ್ಥಿತಿಯನ್ನು ಗಮನಿಸಿ ಹಿಟ್ಲರನು ಬದಲಾಯಿಸಬೇಕಾಗಿರುವುದೆಂದು ನಾನು ಹೇಳಬಲ್ಲೆನು.

ಎರಡು ತಿಂಗಳ ಕೆಳಗೆ ನಮ್ಮ ಪ್ರಮುಖ ಸೈನ್ಯ ಪಡೆಗಳನ್ನು ಫ್ರಾನ್ಸಿನಲ್ಲಿಡುವುದೇ ನಮ್ಮ ಮುಖ್ಯ ಉದ್ದೇಶವಾಗಿತ್ತು. ನಮ್ಮ ಸೈನ್ಯ ಪಡೆಗಳಲ್ಲಿ ಮುಖ್ಯ ರೀತಿಗಳನ್ನೂ ಹೆಚ್ಚು ಅಯುಧ ಸಾಮಗ್ರಿಗಳನ್ನೂ ವಿಮಾನ ಬಲವನ್ನೂ ಫ್ರಾನ್ಸಿನಲ್ಲಿ ಇಡಬೇಕಾಗಿತ್ತು. ಈಗ ಅವುಗಳೆಲ್ಲವೂ ಬ್ರಿಟನ್ನಿನಲ್ಲಿ ನಮ್ಮ ರಕ್ಷಣೆಗಾಗಿ ಇರಲ್ಪಟ್ಟಿವೆ. ಸಧ್ಯ, ೧೫ ಲಕ್ಷ ಜನ ಯೋಧರು ಬ್ರಿಟನ್ನಿನಲ್ಲಿ ಯುದ್ಧ ಸನ್ನದ್ಧರಾಗಿ ಕಾದಿದ್ದಾರೆ. ಜೂನ್ ಮತ್ತು ಜುಲೈ ತಿಂಗಳಿನ ಪ್ರತಿಯೊಂದು ವಾರದಲ್ಲೂ ಈ ಬಲವು ಸರ್ವತೋಭದ್ರವಾಗಿ ಮತ್ತಷ್ಟು ಬಲಗೊಳ್ಳುತ್ತಿರುವುದು ವೃತ್ತಪಟ್ಟಿದೆ. ಇಷ್ಟು ಸ್ವಲ್ಪ ಕಾಲದಲ್ಲಿ ಇಷ್ಟು ಮುಂದಕ್ಕೆ ತಂದುದಕ್ಕಾಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಎಷ್ಟು ಅಭಿನಂದಿಸಿದರೂ ಸಾಲದು. 'ರೆಗ್ಯುಲರ್' ಸೈನ್ಯ ಪಡೆಗಳ ಜೊತೆಗೆ ಶತ್ರುಗಳು 'ಪ್ಯಾರಾಷೂಟ್' ಗಳ ಮುಖಾಂತರ ಬಂದಿಳಿದರೆ ಅವರನ್ನು ನಾಶಮಾಡುವುದಕ್ಕೆ ದೇಶ ವ್ಯವಸ್ಥೆಯೊಂದಿದೆ. ೧೦ ಲಕ್ಷಕ್ಕಿಂತಲೂ ಹೆಚ್ಚಾಗಿ ಬ್ರಿಟನ್ನಿನಲ್ಲಿ ಸ್ವಯಿಚ್ಛೆಯ ರಕ್ಷಣೆಗೆ ಸ್ವಯಂ ಸೇವಕರಿದ್ದಾರೆ. ಇವರಲ್ಲಿ ಕೆಲವರು ಕಳೆದ ಸಂಗ್ರಾಮದಲ್ಲಿ ಭಾಗವಹಿಸಿದವರು. ಇವರೆಲ್ಲ ಶತ್ರುಗಳೊಡನೆ ಹೋರಾಟ ನಡೆಸಲು ತವಕಪಡುತ್ತಿದ್ದಾರೆ. ಶತ್ರುಗಳು ಒಂದು ವೇಳೆ ನಮ್ಮ ದೇಶವನ್ನು ಮುತ್ತಿದರೂ, ನಾವು ಸುಮ್ಮನೆ ಕುಳಿತುಕೊಂಡು ಶಸ್ತ್ರಾಸ್ತ್ರಗಳನ್ನು ಕೆಳಕ್ಕೆ ಇಡುವುದಿಲ್ಲ. ಇತರ ದೇಶಗಳಲ್ಲಿ ವರ್ತಿಸಿದಂತೆ ವರ್ತಿಸುವುದಿಲ್ಲ.

ನಾವು ಪ್ರತಿಯೊಂದು ಊರನ್ನೂ ನಗರವನ್ನೂ, ರಷ್ಟಿಯನ್ನೂ ಸುತ್ತಿದ್ದೇವೆ. ಈ ಮಹಾ ನಗರವಿಸ್ತಾರವಾದ ಲಂಡನ್ ನಗರವನ್ನು ಕೂಡ ಬೀದಿಬೀದಿಗಳಲ್ಲಿ ಹೊಡೆದಾಡಿ ಕಚ್ಚಿಸಿದ್ದೇವೆ. ಲಂಡನ್ ನಗರವು ನಾಶವಾದರೂ ಚಿಂತೆಯಿಲ್ಲ. ಅದನ್ನು ಕಟ್ಟುಗಳಿಗೆ ಒಪ್ಪಿಸಿ ಗುಜಾಮಗಿರಿಯಲ್ಲಿ ಮುಳಿಗಿಸಿಕೊಡಬಹುದು. ಈ ಅಂಶವನ್ನು ನಾವು ಪ್ರತ್ಯಕ್ಷವಾಗಿ ತಿಳಿಸುವುದಕ್ಕೆ ಕಾರಣವಿಷ್ಟೆ! ನಮ್ಮ ಉದ್ದೇಶವು ನಮ್ಮ ಪ್ರಜೆಗಳಿಗೆ ತಿಳಿದು ಅವರು ನಮ್ಮ ವಿಚಾರದಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಲೆಂಬುದು. ಈ ವಾರದಲ್ಲಿ ನಮ್ಮ ವಿಮಾನಗಳಿಗೆ ಕಡಲ ಬಹಳ ಹೆಚ್ಚು. ನಮ್ಮ ವಿಮಾನವು ಒಂದು ನಾಶವಾದರೆ ಜರ್ಮನಿಯ ೫ ವಿಮಾನಗಳು ನಾಶವಾಗಿವೆ. ಈಗ ನಡೆದಿರುವ ಹೋರಾಟಗಳೆಲ್ಲ ಪ್ರಾರಂಭ ದಿನೆಯಲ್ಲಿ ನಡೆಯುವ ಹೋರಾಟಗಳು. ಇನ್ನು ಮುಂದೆ ಭಯಂಕರವಾದ ಹೋರಾಟಗಳು ನಡೆಯಲಿರುವುದಾಗಿವೆ. ಈಗ ನಡೆದಿರುವ ಹೋರಾಟಗಳಿಂದ ವ್ಯಕ್ತ ಪಡುವ ಫಲಿತಾಂಶಗಳಿಂದ ನಾವು ಕಳವಳಪಡಬೇಕಾದ ಕಾರಣವಿಲ್ಲ. ಎಲ್ಲವೂ ನಮ್ಮ ನೌಕಾಬಲದ ಮೇಲೆ ನಿಂತಿರುವುದು. ಸಾವಿರಕ್ಕೆ ಮೇಲ್ಪಟ್ಟ ನಮ್ಮ ನೌಕಾಬಲವು ಜಗತ್ತಿನ ನಾನಾ ಸಮುದ್ರಗಳಲ್ಲಿ ಸಂಚರಿಯುತ್ತ, ರಕ್ಷಿಸುತ್ತದೆ. ಸಾಮ್ರಾಜ್ಯದ ನಾನಾ ಭಾಗಗಳನ್ನು ಕಾಯುತ್ತಿದೆ. ಜಗತ್ತಿನ ಎಲ್ಲಾ ಭಾಗಗಳಿಗೂ ಹೋಗಿ ಬರುವುದಕ್ಕೆ ದಾರಿಯನ್ನು ಸುಗಮವಾಗಿಟ್ಟಿದೆ.

ನಮ್ಮ ಸಿದ್ಧತೆಗಳು

"೧೦ ತಿಂಗಳಕಾಲ 'ಯೂ-ಬೋಟ್'ಗಳ ಮತ್ತು ವಿಮಾನ ಬಾಂಬಳಯು ಎಡಬಿಡದೆ ನಡೆದಿದ್ದರೂ, ನಮ್ಮ ಆಹಾರ ಸಾಮಗ್ರಿಗಳು ಇನ್ನೂ ಕೆಟ್ಟಾಗಿರುವುದು ವಿಪರ್ಯಾಯಾಗಿ ಆಶ್ಚರ್ಯಕರವಾಗಿದೆ. ನಮ್ಮ ಹಡಗುಗಳ ತೂಕದಲ್ಲೂ ಕೂಡ ವಿಸ್ತಾರ ಕಡಿಮೆಯಾಗಿಲ್ಲ. ಅಲ್ಲದೆ ಸಂಗ್ರಾಮದ ಆರಂಭದಲ್ಲಿ ನಮ್ಮ ದೇಶದ ಹಡಗುಗಳೊಡನೆ ಇತರ ದೇಶದ ನೂರಾರು ಹಡಗುಗಳೂ ಸೇರಿವೆ. ಈ ಅಂಕೆ ಅಂಕಗಳನ್ನು ನಾನು ತಿಳಿಸುವಾಗ, ನಮ್ಮ ಜಾಗೂಕತೆಯ ದೃಷ್ಟಿಯಲ್ಲಿ ಸ್ವಲ್ಪಾ ದರೂ ಕಡಿಮೆ ಮಾಡಬೇಕೆಂದು ನನ್ನ ಉದ್ದೇಶ ವಲ್ಲ. ನಮ್ಮ ಜಾಗರೂಕತೆಯನ್ನು ಇದಕ್ಕೆ ದ್ವಿಗುಣಿತ ಮಾಡಬೇಕು. ಈವರ್ಷದ ಚೈತ್ರಿಗೆ, ಮುಂದಿನ ಚಳಗಾಲ, ಮಾತ್ರವಲ್ಲ ೧೯೪೨ನೇ ವರ್ಷಕ್ಕೂ ನಾವು ಸಿದ್ಧತೆಗಳನ್ನು ಮಾಡಿಟ್ಟುಕೊಂಡಿರಬೇಕು. ಆಗ ಈಗಿನ ಸಂಗ್ರಾಮುತಿಯ ಸ್ವರೂಪವು ಅತ್ಯಕ್ಷ ರಕ್ಷಣೆ ಪ್ರಯತ್ನದ ಬದಲಾವಣೆಯನ್ನು ಹೊಂದುವುದೆಂದು ನಾನು ನಿರೀಕ್ಷಿಸುತ್ತೇನೆ. ನಾನು ಮೇಲೆ ಸೂಚಿಸಿದ ಅಂಕೆ ಅಂಕಗಳನ್ನು ತೂಚಿಸುವ ಕಾರಣವು ಬೇರೆಯಾಗಿದೆ. ಒಳ್ಳೆಯ ಉದ್ದೇಶವು ಜೀವಿಸಬಲ್ಲದೆಂಬುದನ್ನೂ ಅದಕ್ಕೆ ಎಲ್ಲರ ಬೆಂಬಲವೂ ಇರುವುದೆಂಬುದನ್ನೂ ತೋರಿಸಿ ಕೊಡುವುದೇ ಆದರ ಉದ್ದೇಶ. ಶತ್ರುಬೆಳೆಯೆಲ್ಲಿ ನಾವೆಂದು ನಡೆಯುತ್ತಿದ್ದರೂ ಕಣ್ಣಿನೆಯಿಂದಾಚೆಗೆ ಬೆಳಕನ್ನು ಕಾಣುತ್ತಿದ್ದೇ ನೆ. ಇಂದು ನಾನು ರಾಷ್ಟ್ರದ ಎಲ್ಲ ಪಕ್ಷಗಳ ಪ್ರಾತಿನಿಧ್ಯಗಳನ್ನೊಳಗೊಂಡ ಪ್ರಭುತ್ವದ ಪ್ರತಿನಿಧಿಗಳಾಗಿದ್ದೇನೆ. ನಮ್ಮ ಪುರಾತನ ರಾಜಮನೆತನದ ಪ್ರತಿನಿಧಿಗಳ ಆಶ್ರಯದಲ್ಲಿಯೂ ನಾವು ಕೆಲಸಮಾಡುತ್ತಿದ್ದೇವೆ. ಸ್ವತಂತ್ರವಾದ ಪಾರ್ಲಿಮೆಂಟ್, ಸ್ವತಂತ್ರವಾದ ವೃತ್ತಪತ್ರಿಕೆಗಳು ನಾವುಗಳ ಬೆಂಬಲ ಪಡೆದು ಇಂದು ನಾವು ಕೆಲಸಮಾಡುತ್ತಿದ್ದೇವೆ. ಆದರೆ ಇವೆಲ್ಲಕ್ಕಿಂತಲೂ ಹೆಚ್ಚಾಗಿ ಇನ್ನೊಂದು ಅಂಶವು ನಮ್ಮೆಲ್ಲರನ್ನೂ ಒಂದುಗೂಡಿಸಿದೆ. ಎಷ್ಟೋ ಕಷ್ಟ ಪರಿಶ್ರಮ, ಎಷ್ಟೋ ವಿಪತ್ಪರಂಪರೆಗಳು ಸಂಭವಿಸಲಿ, ಅವುಗಳನ್ನು ಸಹಿಸಿ ಮುಂದುವರಿಯಬೇಕೆಂಬುದೇ ಆ ಅಂಶ. ಅಂಶವು ಇಂದು ನಮ್ಮೆಲ್ಲರನ್ನು ಬಲವತ್ತರವಾಗಿ ಒಂದುಗೂಡಿಸಿದೆ.

ದೇಶಗಳು ತಮ್ಮ ಸ್ವಾತಂತ್ರ್ಯವನ್ನೆ ಕಾವಾಡಿಕೊಳ್ಳಲಾರದೆ ಮತ್ತು ತಮಗೆ ಒಪ್ಪಿಸಿದ ಕೆಲಸವನ್ನು ನಿರ್ವಹಿಸಲಾರದೆ ಇಂತಹ ಸಂದರ್ಭದಲ್ಲಿಯೇ. ಆದರೆ ಇಂದು ಬ್ರಿಟಿಷ್ ಜನಾಂಗದಮೇಲೆ ಆ ಹೊರೆಯು ಬಿದ್ದಿದೆ. ಇಗ ಶ್ರೀನ ಎಲ್ಲಾ ಭಾಗಗಳಲ್ಲಿರುವ ಬ್ರಿಟಿಷ್ ಪ್ರಜೆಗಳೂ ಇಂದು ನಮ್ಮ ಈ ಪ್ರಯತ್ನಕ್ಕೆ ಬೆಂಬಲಕೊಟ್ಟು ತಮ್ಮ ಕರ್ತವ್ಯವನ್ನು ತಾವು ನಿರ್ವಹಿಸಬೇಕು. ಇದು ನಕೇಂದ್ರರು, ಇಲ್ಲ ನೇ ಒಂದು ಪಂಗಡದ ಹೊಡೆದಾಟವಲ್ಲ. ರಾಷ್ಟ್ರೀಯ ಅಶೀತ್ಕರಗಳಿಗಾಗಿ ಪಡೆಯುತ್ತಿರುವ ಯುದ್ಧವಿದಲ್ಲ. ಪ್ರಜೆಗಳಾಗಿ ಮತ್ತು ಅವರ ಉದ್ದೇಶಗಳಿಗಾಗಿ ನಡೆಸಲ್ಪಡುತ್ತಿರುವ ಯುದ್ಧವಿದು. ಯುದ್ಧಕ್ಕಾಗಿ ಆಪಾರಮಿತವಾದ ಸೇನೆಯನ್ನು ಸಲ್ಲಿಸುವ ವಕ್ಕೆ ಈ ದೇಶದಲ್ಲಿರುವ ಇತರ ದೇಶಗಳಲ್ಲಿಯೂ ಅಸಂಖ್ಯಾತ ಪ್ರಜೆಗಳಿದ್ದಾರೆ. ಅದರೂ ಅವರು ನಡೆಸುವ ಕೆಲಸಗಳನ್ನೂ ಸಲ್ಲಿಸುವ ಸೇವೆಗಳನ್ನೂ ರಿಕಾರ್ಡ್ ಮಾಡುವುದಿಲ್ಲ. ಆಪಾಮಧೇಯ ಯೋಧರ ಯುದ್ಧವದು. ಆದರೆ ಆ ಯುದ್ಧವನ್ನು ನಡೆಸುವಾಗ ನಾವು ನಮ್ಮ ಕರ್ತವ್ಯದಿಂದ ವಿಮುಖರಾಗಿರೋಣ! ನಮ್ಮ ನಂಬಿಕೆಯಲ್ಲಿ ಅವಿಶ್ವಾಸಪಡದೆ ಇರೋಣ! ಆ ರೀತಿ ಮಾಡಿದ್ದೇ ಆದರೆ ಹಿಟ್ಲರನೇಂಬ ತಾಪದಿಂದ ನಮ್ಮ ಯುಗವು ವಿಮುಕ್ತವಾಗುವುದು.

ಶ್ರೀ ಜಗದ್ಗುರು ಶ್ರೀ ಶೈಂಪೀಠದ ಪಟ್ಟಾಭಿಷೇಕ ಮಹೋತ್ಸವ, ಗುಂತಕಲ್ಲು.

ತಾ|| ೭-೭-೧೯೪೦ನೆ ಭಾನುವಾರ ಪ್ರಾತಃಕಾಲ ೧೫ ಘಂಟೆಗೆ ಶ್ರೀಶೈಲ ಜಗದ್ಗುರು ಸೀರದ ಪಟ್ಟಾಭಿಷೇಕ ಮಹೋತ್ಸವವು ಗುಂತಕಲ್ಲಿನಲ್ಲಿ ವೈಭವದಿಂದ ನೆರವೇರಿತು. ಶ್ರೀ ಜಗದ್ಗುರು ನಾಗಲೂಟಿ ಭಿಕ್ಷಾನಿರ್ತಿ ಶಿವಾಚಾರ್ಯರಮಹಾಸ್ವಾಮಿಗಳವರು, ವಿಶೇಷ ಆಹ್ವಾನಿಯಿಂದ ಆವಶಸಲ್ಪಟ್ಟವರಾದುದರಿಂದ ಪಟ್ಟಾಭಿಷೇಕ ವನ್ನು ಶಿವಮ್ಮನವರಾಗಿ ನಾಂಗಗೊಳಿಸಿದರು.

ಈ ಮಹಾಕಾರ್ಯಕ್ಕೆ ಬೆಂಗಳೂರು, ಬೀರೂರು, ದಾವಣಗೆರೆ, ಹರಿಹರ, ಚ್ಯಾಮಗಿ, ಹಾವೇರಿ, ಹುಬ್ಬಳ್ಳಿ, ಬಾಸೆಲ್, ಸಿಕಂದರಾಬಾದು, ಬಳ್ಳಾರಿ, ಹೊಸಪೇಟೆ, ಆದವಾನಿ, ಸೊಂಡೂರು, ಕಡಕೊಳ್ಳ, ಸತ್ಯಿಗೇರಿ, ಹರೇಹಾಳು, ಹೊಳಲಗುಂದಿ, ಮೋಕೆ ಮೊದಲಾದ ಗ್ರಾಮಗಳ ಪ್ರಮುಖ ಭಕ್ತಮಾಹೇಶ್ವರರು, ಕಂಡಿತರು, ಸ್ವಾಮಿಗಳು ಆಗಮಿಸಿದ್ದರು. ಸಮಾಪದ ಗ್ರಾಮಗಳಿಂದ ಜನಗಳು ಅಧಿಕವಾಗಿ ಸೇರಿದ್ದರು. ದೊರದಿಂದ ಬರಲಾರದಿದ್ದ ಅನೇಕ ಶ್ರಮುಖರು ತಂತಿಮೂಲಕವೂ ಪತ್ರಗಳ ಮೂಲಕವೂ ತಮ್ಮ ಸಂದೇಶವನ್ನು ವ್ಯಕ್ತಪಡಿಸಿದ್ದರು. ಪಟ್ಟಾಭಿಷೇಕದ ವೈದಿಕ ಕ್ರಮವನ್ನು ಸೀ|| ಚಿ|| ಮಲ್ಲಿವೇಗಿ ವೀರಭದ್ರಶಾಸ್ತ್ರಿಗಳವರು, ಬೆಂಗಳೂರು ವೇ|| ಗುರುಲಿಂಗಶಾಸ್ತ್ರಿಗಳು, ಒಳ್ಳಾರಿ ವೇ|| ಬಸಪ್ಪಯ್ಯಶಾಸ್ತ್ರಿಗಳು ನೆಸಿದ್ದರು. ಶ್ರೀ ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರರಾದ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳವರ ಆಧಿಪತ್ಯದಲ್ಲಿ ಈ ಪಟ್ಟಾಭಿಷೇಕ ಕಾರ್ಯವು ವೈಭವದಿಂದ ನೆರವೇರಿತು.

ಪಟ್ಟಾಭಿಷೇಕ ಸಮಯದಲ್ಲಿ ಉಜ್ಜಯಿನೀ ಶ್ರೀಜಗದ್ಗುರುಗಳವರು ನೂತನಾಧಿಕಾರಿಗಳಿಗೆ "ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ" ರೆಂದು ನಾಮಕರಣ ಮಾಡಿದರು. ಅದಿನ ಮಧ್ಯಾಹ್ನ ಗಣಾರಾಧನೆಯು ನಡೆಯಿತು. ಸಾಯಂಕಾಲ ೪ ಘಂಟೆಗೆ ಸರಿಯಾಗಿ ಭವ್ಯವಾದ ಮಂಟಪದಲ್ಲಿ ರಚಿಸಿದ ಸಿಂಹಾಸನದ ಮೇಲೆ ನೂತನ ಜಗದ್ಗುರುಗಳು, ಉಜ್ಜಯಿನೀ ಜಗದ್ಗುರುಗಳು ಮೂರ್ತಗೊಂಡರು. ಶ್ರೀ ಜಗದ್ಗುರು ಸಂಚಾಚಾರ್ಯರ ಜಯಘೋಷವಾದ ಬಳಿಕ ಬಳ್ಳಾರಿ ಗುರುನಿವಾಸ ಸಂಸ್ಥೆಯ ವಿದ್ಯಾರ್ಥಿಗಳು ಆಚಾರ್ಯ ಸ್ತೋತ್ರವನ್ನು ಹಾಡಿದರು. ಬಳಿಕ ಸರ್ವರ ಅಪೇಕ್ಷೆಯ ಮೇರೆಗೆ ನೂತನ ಜಗದ್ಗುರುಗಳವರು ತಮ್ಮ ದಿವ್ಯ ಸಂದೇಶವನ್ನು ಅಪ್ಪಣೆ ಕೊಡಿಸಿದರು. ಅಮೇಲೆ ನೂತನ ಜಗದ್ಗುರುಗಳವರಿಗೆ ಕಾಣಿಕಾ ಸಮರ್ಪಣ ಕಾರ್ಯವು ನಡೆಯಿತು. ಶ್ರೀಜಗದ್ಗುರು ರಂಭಾಪುರೀ ಮಹೀಪಾಲ ಆಹಿರು ಸಮೀಕ ನೂತನಾಧಿಕಾರಿಗಳಿಗೆ ಸಂದೇಶವು ಬಂದಿದ್ದು ಅದನ್ನು ಬೆಂಗಳೂರು ದೇಶದೆಶಿಷ್ಟ ಸಿದ್ಧಬಸಪ್ಪ ಕೆಟ್ಟಿರು ಸಮರ್ಪಿಸಿದರು. ಬಳಿಕ ಉಜ್ಜಯಿನೀ ಸಂಸ್ಥಾನದ ಆಹಿರು ಒಪ್ಪಿಸಲ್ಪಟ್ಟಿತು. ಬೆಂಗಳೂರಿನ ಮಿ|| ರಾ|| ಸರಾಫ್ ಬಸಪ್ಪನವರು ಕೀಲಿ ವಾಗ್ದಾನ, ಹುಣಸಮಾರನಳ್ಳಿ ಶ್ರೀಷಟ್ಟಪ್ಪಸ್ವಾಮಿಗಳವರು ೧೫೦೦ ರೂಪಾಯಿ ಬೆಳ್ಳಿ ಪೂಜಾ ಸಾಮಾನುಗಳು, ಬೆಂಗಳೂರು ಎಸ್. ರುದ್ರಯ್ಯನವರು ಬೆಳ್ಳಿಕಮಂಡಲು ವಾಗ್ದಾನ, ಕೋಡಿಕುಂದಿ ರೇವಣಿ ನಾಗಯ್ಯನವರು ೧ ಬೆಳ್ಳಿ ಲೋಟು, ೫ ರೂಪಾಯಿ, ಆದವಾನಿ ಅಂಡಿ ಯ್ಯನವರು ೧ ಬೆಳ್ಳಿಲೋಟ ೫ ರೂಪಾಯಿ, ಕೋಡಿಕುಂದಿ ಶಿವಾಮಠದ ಶ್ರೀ ಪಟ್ಟದ ಸ್ವಾಮಿಗಳು ೧ ಬೆಳ್ಳಿ ಲೋಟು ೧ ಬೆಳ್ಳಿ ಆಳ್ಯರ್ದ ಸೆಟ್ಟು ಶಿಲ್ಪಿಸಲಲ್ಯ, ಹಸುಗೋಡು ಶ್ರೀರುದ್ರಮುನಿ ಶಿವಾಚಾರ್ಯರು, ಮದ್ದಿಕೆರೆ ಶ್ರೀಮಂತ ಬಂಡೇಗೌಡರು, ಗುಂತಕಲ್ಲು ಹಾಟೇಲ್ ಸಣ್ಣತಿಮ್ಮಾರೆಡ್ಡಿಯವರು, ಸೊಂಡೂರು ಭೋಜ ಪಣ್ಣುಮಪ್ಪನವರು, ಗುಂತಕಲ್ಲು ವಲ್ಲಂ ಸುಬ್ಬರಾಮಯ್ಯ ನವರು. ಕಡಕೊಳ್ಳದ ಶ್ರೀ ಪಟ್ಟದಸ್ವಾಮಿಗಳವರು, ಸತ್ಯಿಗೇರಿ ಶ್ರೀಪಟ್ಟದಸ್ವಾಮಿಗಳವರು, ಪಿ. ಐ. ಹಿರೇಮಠ, ಹೈಕೋರ್ಟು ವಕೀಲರು ಹುಬ್ಬಳ್ಳಿ, ಕೋಡಿಕುಂದಿ ಯಾಡ್ಡಿಮಠದ ಬಸವಯ್ಯನವರು, ಹುಬ್ಬಳ್ಳಿ ಬೆಳ್ಳಿಳೃತೀರ್ಥಪ್ಪನವರು, ಕೋಡಿಕುಂದಿ ಸೊಂಡೂರು ಬಸವಯ್ಯನವರು, ಮದ್ದಿಕೆರೆ ಮಠದಮರಿಯಯ್ಯನವರು, ಕೋಡಿಕುಂದಿ ರೇವಣಿ ಶಿವಲಿಂಗಪ್ಪನವರು, ತಿಮ್ಮನಗೌಡರ ಮರಿಯಪ್ಪನವರು, ಕೋಡಿಕುಂದಿ ಶಿಲಾಮಠದ ಪರಮೇಶ್ವರಯ್ಯನವರು, ಸ್ಯಾಪಲಿಮಠದ ಕಾಕರಿಯ್ಯನವರು, ಕೋಡಿಕುಂದಿ ಸಿದ್ಧಾಂತಿ ಹಂಪಯ್ಯನವರು, ಇವರೇ ನೊದಲಾದವರು ಕಾಣಿಕೆಯನ್ನರ್ಪಿಸಿದರು.

ಕಾಣಿಕಾ ಸಮರ್ಪಣ ಮುಗಿದನಂತರ ಸೀ|| ಚಿ|| ಮಲ್ಲಿ ವೀರಭದ್ರಶಾಸ್ತ್ರಿಗಳವರು ನೂತನ ಜಗದ್ಗುರುಗಳ ವರ ಪೂರ್ಣ ಪರಿಚಯವನ್ನು ವಿವರಿಸುತ್ತಾ ವೀರದ ವಿಷಯವನ್ನು ಹೇಳಿ ಸರ್ವರನ್ನೂ ಆನಂದಗೊಳಿಸಿದರು. ಸೀ|| ಶಂಕರಶಾಸ್ತ್ರಿಗಳವರು ವಿಶಾಚಾರ್ಯರ ಲಕ್ಷಣ ಎಂಬ ವಿಚಾರವಾಗಿ ಸರ್ವರಿಗೂ ಬೋಧವಾಗುವಂತೆ ಭಾಷಣಮಾಡಿದರು. ಹುಬ್ಬಳ್ಳಿ ಹೈ|| ವಕೀಲರಾದ ವೇ|| ಪಿ. ಐ. ಹಿರೇಮಠ ಇವರು ಸಂಪುಟಪತ್ರ ವಿಷಯ ವಮೇಲೆ ವ್ಯಾಖ್ಯಾನಮಾಡುತ್ತ ಮೊದಲೇ ತಯಾರಿಟ್ಟ ಸಂಪುಟ ಪತ್ರಿಕೆಗೆ ಸರ್ವರ ಹಸ್ತಾಕ್ಷರಗಳನ್ನು ತೆಗಿಯಿಸಿದರು. ಬಳಿಕ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು.

ಮರುದಿನ ತಾ|| ೮-೭-೧೦೪೦ ಸೋಮವಾರ ೬ ಘಂಟೆಗೆ ನೂತನ ಜಗದ್ಗುರುಗಳವರ ಅಶ್ವಪಲ್ಲಕ್ಕಿ ಮಹೋತ್ಸವವು ಗುಂತಕಲ್ಲು ತಿಮ್ಮನಗೌಡರ ಜಂಕ್ಷನ್ ಇವುಗಳ ಮುಖ್ಯ ಬೀದಿಗಳಲ್ಲಿ ವಿಜಯಾಕಾಶ ಸಹಿತವಾಗಿ ಅತ್ಯಂತ ವಿಜೃಂಭಣೆಯಿಂದ ಜರುಗಿತು. ಈ ಮಹೋತ್ಸವದಲ್ಲಿ ಸುಮಾರು ೩-೪ ಸಾವಿರ ಜನಗಳು ಭಾಗಿಗಳಾಗಿದ್ದರು. ಉತ್ಸವದ ಶಿಸ್ತನ್ನು ಕಾಪಾಡುವುದಕ್ಕೋಸ್ಕರ ಪೋಲೀಸ್ ಇನಸ್ಪೆಕ್ಟರ್‌ರವರು ತಮ್ಮ ಪರಿವಾರ ಸಮೇತ ಆಗಮಿಸಿ ಉತ್ಸವವನ್ನು ಕಾಂತವಾಗಿ ನೆರವೇರಿಸಿದರು. ಉತ್ಸವವು ಸಂಸ್ಥಾನಮಠಕ್ಕೆ ತಲ್ಪುವವರೆಗೂ ಗಾಗಿ ರಾತ್ರಿ ೧೧ ಘಂಟೆಯಾಯಿತು. ಜಗದಾಚಾರ್ಯರ ಜಯಘೋಷದೊಡನೆ ಉತ್ಸವದ ಕಾರ್ಯವು ಸಮಾಪ್ತಿಗೊಂಡಿತು. ಪೂರ್ವದ ಜಗದ್ಗುರುಗಳವರು ಸದ್ಯಃ ಆರೋಗ್ಯವಾಗಿದ್ದಾರೆಂದು ತಿಳುಸಿಸಲು ಸಂತೋಷ ವೆನಿಸುತ್ತೆದೆ.

ಓರ್ವ ಉತ್ಸವಭಾಗಿ.

ಪಂಚಾಚಾರ್ಯಪ್ರಭಾ.

೬೩ ೮೬೭—

೧೯೪೦ನೆಯ ಜುಲೈ ತಾ|| ೨೨ನೆಯ ಸೋಮವಾರ

ಶ್ರೀಚಿದ್ಬನಶಿವಾಚಾರ್ಯರ್.

ಈ ಮಹಾತ್ಮನು ಈಗ್ಗೆ ಸುಮಾರು ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ದ್ರಾವಿಡದೇಶದೊಳಗೆ ವಿರಾಜಿಸುತ್ತಿರುವ ಧರ್ಮವತಿಯೆಂಬ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ತೋಳಮಂಡಲವನ್ನು ಆಳುತ್ತಿದ್ದ ಸತ್ಯೇಂದ್ರಚೋಳನೆಂಬ ವೀರಶೈವಚಕ್ರವರ್ತಿಗೆ ಗುರುವಾಗಿದ್ದನು. ಈ ಮಹಾತ್ಮನು ಶಿವಯೋಗಪ್ರಬಲವಿಂದ ಮಹಾಮಹಿಮಾಶಾಲಿಯೆನಿಸಿ ದ್ವಿತೀಯಪರಶಿವನಂತೆ ಪ್ರಕಾಶಿಸುತ್ತಿದ್ದನು ಸತ್ಯೇಂದ್ರಚೋಳಚಕ್ರವರ್ತಿಯು ಈ ಗುರುವುಗನನಲ್ಲಿ ಅಪಾರಶ್ರದ್ಧಾ ಭಕ್ತಿಯಿಂದ ಅತ್ಯಾದರವಾದ ಭಕ್ತಿಯನ್ನಿಟ್ಟು ಪರಿಪಾಲಿಸುತ್ತಿದ್ದನು ಈ ಚಕ್ರವರ್ತಿಗೆ ಅಮೃತವತಿಮಹಾದೇವಿಯೆಂಬ ಧರ್ಮಪತ್ನಿಯಿದ್ದಳು ಇವರಿಗೆ ಪುತ್ರಸಂತಾನವಿಲ್ಲದಿದ್ದುದರಿಂದ ಈ ದಂಪತಿಗಳು ಮಹಾಗುರುಭಕ್ತಿಯಿಂದ ಈ ಮಹಾತ್ಮನನ್ನು ಸೇವಿಸುತ್ತಿರುಲು ಈ ಮಹಾತ್ಮನು ಉಪದೇಶಿಸಿದ ಶಿವಪಂಚಾಕ್ಷರಮಹಾಮಂತ್ರ ಪ್ರಭಾವದಿಂದ ಈ ದಂಪತಿಗಳಿಗೆ ಪುತ್ರರತ್ನವು ಉತ್ಪನ್ನವಾಯಿತು ಆಗ್ಗೆ ಈ ಮಹಾತ್ಮನು ವೀರಶೈವಸಂಸ್ಕಾರವನ್ನು ಮಾಡಿಸಿ ಆ ಶಿಶುವಿಗೆ ಲಿಂಗಧಾರಣ ಭಸ್ಮಧಾರಣ ಪಂಚಾಕ್ಷರಮಂತ್ರೋಪದೇಶರೂಪವಾದ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿ ಆತೀವ್ರಾದಿಯಾಗಿ ಚಿದ್ಬನಶಿವನೆಂದು ನಾಮಕರಣವನ್ನು ಮಾಡಿಸಿದನು ಈ ವಿಷಯವನ್ನು ಜ್ಞಾಪಿಸುತ್ತಿರುವ ಶಾಸನವು ತಮಿಳುಭಾಷೆಯಲ್ಲಿ ಕೆತ್ತಲ್ಪಟ್ಟಿರುವುದು ಈ ಶಾಸನವು ಸುಮಾರು ೨೦೦ ವರ್ಷಗಳ ಹಿಂದಿನದಾಗಿರುವುದು ಈ ಶಾಸನವು ಈಗ ಮದ್ರಾಸ್ ಮ್ಯೂಸಿಯಮ್ಮಿನಲ್ಲಿ ಇರುವುದು ಈ ಶಾಸನದ ಪ್ರತಿಯನ್ನು ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರು ಪ್ರಕಟಿಸಿರುವರು ಈ ಶಾಸನದ ಪ್ರತಿಯನ್ನು ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟಿನ ಡೈರೆಕ್ಟರ್ ಆಗಿದ್ದ ಶ್ರೀಯುತ ಆರ್. ನರಸಿಂಹಾಚಾರ್ಯರವರು ಪರಿಶೋಧಿಸಿ ಪ್ರಕಟಿಸಿರುವರು ಈ ಶಾಸನದಲ್ಲಿ ಚಿದ್ಬನಶಿವನು ಸಕಲವಿದ್ಯಾಪಾರಂಗತನಾಗಿ ಸಕಲಶಾಸ್ತ್ರಪುರಾಣಾಗಮಾದಿಗಳನ್ನು ಕರತಲಾಮಲಕವಾಗಿ ತಿಳಿದವನಾಗಿ ಸಕಲಲೋಕಾಚಾರ್ಯನಾಗಿ ಸಕಲಜನಪೂಜ್ಯನಾಗಿ ಸಕಲಜಗದ್ಗುರುವಾಗಿ ಸಕಲಜಗದುದ್ಧಾರಕನಾಗಿ ಸಕಲಜಗತ್ಪಾವನನಾಗಿ ಸಕಲಜಗನ್ಮಂಗಳಕರನಾಗಿ ಸಕಲಜಗತ್ಕಲ್ಯಾಣಕರನಾಗಿ ಸಕಲಜಗದ್ರಕ್ಷಕನಾಗಿ ಸಕಲಜಗದ್ವಂದ

ವ್ಯಾಂಡೈ ಹಡಗು ಮುಳುಗಿತು.

೨೫೦೦ ಟನ್ ತೂಕದ ವ್ಯಾಂಡೈಕ್ ಎಂಬ ಬ್ರಿಟಿಷ್ ನೌಕೆಯು ವಿಮಾನ ಮುತ್ತಿಗೆಯಿಂದ ನಾರ್ವೇ ತೀರ ಪ್ರದೇಶದಲ್ಲಿ ಜೂನ್ 10 ನೆಯ ತಾರೀಖಿನ ದಿವಸ ಮುಳುಗಿತೆಂದು ಪ್ರಕಟವಾಗಿದೆ ಈ ನೌಕೆಯೊಡನೆ 4 ಮಂದಿ ನಾವಿಕರೂ ಇಬ್ಬರು ಅಧಿಕಾರಿಗಳೂ 132 ಮಂದಿ ನಾವಿಕರೂ ಬಂದಿತರಾಗಿದ್ದಾರೆ

ಬ್ರಿಟಿಷ್ ನೌಕೆಯು ಮುಳುಗಿತು

ಇನೋಜೆ ಎಂಬ ಬ್ರಿಟಿಷ್ ಡಿಸ್ಟ್ರಾಯರ್ ನೌಕೆಯು ಮಂಜಿನಲ್ಲಿ ದಾರಿಗಾಣದೆ ಡಿಕ್ಕಿ ಹೊಡೆದು ಪ ಲುಗಿತೆಂದು ಅಧಿಕಾರಿಯುತನಾಗಿ ತಿಳಿದುಬಂದಿದೆ ಒಬ್ಬ ಅಧಿಕಾರಿಗೂ 10 ಮಂದಿ ನಾವಿಕರಿಗೂ ಗಾಯುಗಳಾದವು ಒಬ್ಬ ನಾವಿಕನು ವ್ಯಾಣಬಿಟ್ಟನು 17 ಜನರ ಪತ್ತೆಯಿಲ್ಲ ಬಹುಶಃ ಅವರೆಲ್ಲರೂ ಮುಳುಗಿಹೋಗಿರಬಹುದೆಂದು ಊಹಿಸಲಾಗಿದೆ

ಭಯಂಕರ ವಿಮಾನ ಯುದ್ಧ

೧೪ ನೇ ತಾರೀಖಿನ ದಿವಸ ಇಂಗ್ಲೆಂಡಿನ ದಕ್ಷಿಣ ತೀರದಲ್ಲಿ ಕಡಲ್ಗಾಲುವೆಯ ಮೇಲೆ ಭಯಂಕರ ವಿಮಾನ ಯುದ್ಧವು ನಡೆಯಿತು ಶತ್ರುಗಳ ಅನೇಕ ವಿಮಾನಗಳ ಆ ದಿನ ಬ್ರಿಟನ್ನಿನ ತೀರ ಪ್ರದೇಶದ ಮೇಲೆ ಬಂದಾಗ ವಿಮಾನ ಧ್ವಂಸಕ ಫಿರಂಗಿಗಳು ಗುಂಡ ಗಳನ್ನು ಹಾರಿಸಿದವು ಬ್ರಿಟನ್ನಿನ ಹೋರಾಟದ ವಿಮಾನಗಳು ಹೋರಾಟದಲ್ಲಿ ಭಾಗವಹಿಸಿದ್ದವು ಶತ್ರುಗಳ ಕೆಲವು ವಿಮಾನ ಗಳನ್ನು ಕೆಳಕ್ಕೆ ಉರುಳಿಸಲಾಯಿತು

ಜಿಬ್ರಾಲ್ಟರನ್ನು ಬರಿದುಮಾಡಬೇಕು

ನೈಋತ್ಯ ದಕ್ಷಿಣದ ಕೊನೆಮೂಲ ಮೆಡಿಟರೇನಿಯ್ ಸಮುದ್ರಕ್ಕೆ ಬಾಗಿಲಂತಿರುವ ಬ್ರಿಟಿಷರಿಗೆ ಸೇರಿದ ಜಿಬ್ರಾಲ್ಟರ್‌ನಿಂದ 17 ವರ್ಷಗಳೊಳಗಿನ ಎಲ್ಲ ಮಕ್ಕಳನ್ನೂ ಮತ್ತು ಎಲ್ಲ ಹೆಂಗಸರನ್ನೂ ಬೇರೆ ಕಡೆಗೆ ವರ್ಗಾಯಿಸಿರುವುದಾಗಿ ಪ್ರಕಟವಾಗಿದೆ ಇದೆಲ್ಲದೆ 60 ವರ್ಷಗಳಿಗೆ ಮೀರಿದ ಪುರುಷರೂ ಮತ್ತು ದುರ್ಬಲರೂ ಸಹ ಹೊರಟುಹೋಗಬೇಕಾಗಿದೆ ಅವಶ್ಯಕತೆಲಸಗಳಿಗೆ ನೇಮಿಸಲ್ಪಟ್ಟಿರುವವರು ಮಾತ್ರ ಅಲ್ಲೇ ಇರಬೇಕು

ಸ್ಕಾಟ್ಲೆಂಡ್-ವೇಲ್ಸ್‌ಗಳಮೇಲೆ ದಾಳಿ!

ಕಳೆದ 18 ನೆಯ ತಾರೀಖಿನ ಬೆಳಗ್ಗೆ ಜರ್ಮನಿ ವಿಮಾನಗಳು ಸ್ಕಾಟ್ಲೆಂಡಿನ ಈಕಾನ್ಯ ತೀರಪ್ರದೇಶದಲ್ಲಿ ಮುತ್ತಿಗೆ ನಡೆಯಿಸಿ ಬಾಂಬುಗಳನ್ನು ಚೆಲ್ಲಿದವು ವೆಸ್ಟರ್ನ್ ವೇಲ್ಸ್ ನ ವೇಲಿಯ ಬಾಂಬುಗಳು ಬಿದ್ದವು ಆದರೆ ಯಾರಿಗೂ ಹೆಚ್ಚು ಅಪಾಯವಾಗಲಿಲ್ಲ ಅದೇ ದಿನ ಸಾಯಂಕಾಲ ಪೂರ್ವ ಸ್ಕಾಟ್ಲೆಂಡಿನ ಅನೇಕ ಜಿಲ್ಲೆಗಳ ಮೇಲೆ ಜರ್ಮನಿ ವಿಮಾನಗಳು ಭಯಂಕರ ಸ್ಫೋಟನೆ ಮಾಡುವ ಬಾಂಬುಗಳನ್ನು ಚೆಲ್ಲಿದವು ನಗರದ ಅನೇಕ ಕಡೆಗಳಿಗೆ ಅಪಾಯ ಕಟ್ಟಿತು ಅನೇಕರಿಗೆ ಗಾಯುಗಳಾದವು ಕೆಲವು ಪ್ರಾಣ ಬಿಟ್ಟರು

ರೀಚ್ ಮಹಾಸಭೆಯಲ್ಲಿ ಹಿಟ್ಲರರ ಭಾಷಣ.

ಹೆರ್ ಹಿಟ್ಲರರು ಈ ತಿಂಗಳು ೧೯ ನೆಯ ತಾರೀಖಿನ ದಿವಸ ರೀಚ್ ಮಹಾಸಭೆಯಲ್ಲಿ ದೀರ್ಘವಾದ ಭಾಷಣಮಾಡಿದರು ಅದರಲ್ಲಿ ಮುಖ್ಯವಾದ ಅಂಶ ಗಳವು

'ಜರ್ಮನಿಯ ವಾಯುಬಲದ ಕರ್ತವ್ಯಗಳು ಆವಾಗ ವಾಗಿವೆ ಶತ್ರುಗಳ ವಿಮಾನಬಲಗಳನ್ನು ನಾಶಮಾಡು ವುದು ಮೊದಲನೆಯದು ಶತ್ರುಗಳ ವಾರ್ತಾ ಮತ್ತು ಸ್ಪರ್ಧಾಣ ಸೌಕರ್ಯಗಳನ್ನು ನ ಶಮಾಡುವುದು ಎರಡ ನೆಯದು ' ಪ್ಯಾರಾಚ್ಯೂಟ್ ' ಮುಖಾಂತರ ಸೈನಿಕ ರನ್ನ ಕೆಳಕ್ಕೆ ಇಳಿಸುವುದು ಮೂರನೆಯದು ಈ ಮೂರು ಸ್ವಯತ್ನಗಳಲ್ಲಿಯೂ ಜಯವು ಲಭ್ಯವಾಗಬೇಕಾಗಿದ್ದರೆ ಸೈನ್ಯಬಲದ ಬೆಂಬಲವೂ ಅತ್ಯವಾಗಿದೆ ಆದರೆ ಒಳ ನಾಡಿನ ರಂಗವು (ಹೋಂಫ್ರಂಟ್) ಸರಿಯಾಗಿಲ್ಲದೆ ಹೋಗಿದ್ದರೆ, ನ್ಯಾಷನಲ್ ಸೋಷಿಯಲಿಸ್ಟ್ ಪಕ್ಷದ ಚಟುವಟಿಕೆಗಳು ಚುರುಕಾಗಿ ನಡೆಯದೆ ಹೋಗಿದ್ದರೆ ಈ ಜಯವು ಲಭ್ಯವಾಗುತ್ತಿರಲಿಲ್ಲ

ನಮಗೆ ಶಸ್ತ್ರಾಸ್ತ್ರಗಳು ನಷ್ಟವಾಗಿರುವುದು ಕೇವಲ ಸ್ವಲ್ಪ ಆ ನಷ್ಟವನ್ನು ಉತ್ಪೇಕ್ಷೆಮಾಡಬಹುದು ಸೈನ್ಯ ಬಲಗಳಿಗೂ ವಿಮಾನ ಬಲಗಳಿಗೂ ಈಗ ಸರಬರಾಯಿ ಮಾಡುತ್ತಿರುವುದು ೪ ದಲ್ಲಿ ಸಂಗ್ರಾಮವು ಆರಂಭ ವಾದಾಗ ಸರಿಯಾಗಿ ಮಾಡುತ್ತಿರುವುದಕ್ಕಿಂತ ಹೆಚ್ಚಾ ಗಿದೆ ಜರ್ಮನಿಯು ಸಹಿಸಬೇಕಾಗಿ ಬರ ವುದೆಂಬ ಏರಿ ಕ್ಷೀಣತೆಯಿಂದ ಇದರ ಜೊತೆಗೆ ಈಗ ಪರಿಪೂರ್ಣ ಕಾರ್ಯಕ್ರಮವನ್ನು ಕೈ ಗೊಂಡ ಪ್ರಯತ್ನವು ಇದ ಸಾಧ್ಯವಾಗಿಸಿತು ಅತ್ಯಂತ ಮುಖ್ಯವಾದ ಅಪೂರ್ಣ ವಸ್ತುಗಳನ್ನಿಸಿದ ಕಬ್ಬಿಣ ಮತ್ತು ಕಲ್ಲಿದ್ದಲು ಇವುಗಳನ್ನು ನ ಪು ಮಿತಿಯ ಲ್ಲದಂತೆ ಪಡೆದಿದ್ದೇವೆ ಇದರ ಜೊತೆಗೆ ಈಗ ಪರಪಡಿಸಿಕೊಂಡಿರುವ ದೇಶಗಳ ಸಾಧನ ಸಂಪತ್ತುಗಳನ್ನು ಸೂರೆಗೊಳ್ಳುವುದಕ್ಕೆ ಆವಕಾಶವಿರುವುದರಿಂದಲೂ ನಾಶುಮಾಡಿದಾಗ ಹಿಂದೆ ಬಿಟ್ಟುಹೋದ ವಸ್ತುಗಳನ್ನು ವಶಪಡಿಸಿಕೊಂಡಿರುವುದರಿಂದಲೂ ಸಾಮಾನುಗಳಿಗೆ ಕೊರತೆ ಏನೂ ಇಲ್ಲವಾಗಿದೆ ಜನು ಸಿಯಲ್ಲಿ ೨೦ ಕೋಟಿ ಪ್ರಜೆಗಳಿದ್ದಾರೆ ಸಕಾಲದಲ್ಲಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದರಿಂದ ಕ್ತ ಸಂಗ್ರಾಮವು ಎಷ್ಟು ವರ್ಷ ಕಾಲ ನಡೆದರೂ ಆಹಾರವಸ್ತುಗಳಿಗೇನೂ ಕೊರತೆಯಿಲ್ಲದಂತಾಗಿದೆ

ಬ್ರಿಟನ್ನಿಗೆ ಉತ್ತರ.

ಕೆಲವು ವಾರಗಳ ಕೆಳಗೆ ಶ್ರೀ ಚರ್ಚಿಲ್ಲರು ತಮಗೆ ಸಂಗ್ರಾಮವು ಬೇಕೆಂದು ಭಾಷಣಮಾಡಿದರು ಮಿಲಿಟರಿ ಕ್ಷೇತ್ರಗಳ ಮೇಲೆ ಬಾಂಬ್ ಗಳನ್ನು ಹಾಕುವ ನೆಪದಿಂದ ಜರ್ಮನಿಯ ಸಿವಿಲ್ ಪ್ರಜೆಗಳ ಮೇಲೆ ಮಾಯುಮುತ್ತಿಗೆ ಗನ್ನು ನಡೆಸಲು ಅವರು ಆರಂಭಿಸಿದರು ಅದಕ್ಕೆ ತಕ್ಕ ಪ್ರತೀಕಾರ ನಡೆಸಬೇಕೆಂದು ಇನ್ನೂ ನಾನು ಆಜ್ಞೆ ಮಾಡಿಲ್ಲ ಇದರಿಂದ ಅದೇ ಪ್ರತ್ಯುತ್ತರನೆಂದು ಭಾವಿಸ ಬಾರದು ನವ್ಯ ಉತ್ತರವು ಒಂದು ದಿನ ಬರುವುದು ಆಗ ಪ್ರಜೆಗಳಿಗೆ ಭಯಂಕರವಾದ ಆನರ್ಥವೂ ಕಷ್ಟ ಪರಂಪರೆಗಳೂ ಸಂಭವಿಸುವುವು ಆದರೆ ಶ್ರೀ ಚರ್ಚಿಲ್ ರವರಿಗೆ ಅವು ಸಂಭವಿಸುವುದಿಲ್ಲ ಏಕೆಂದರೆ ಆಗ ಅವರು ಕೆನಡಾದಲ್ಲಿ ಸುರಕ್ಷಿತವಾಗಿರ ವರು ಬ್ರಿಟಿಷ್ ಸಾಮ್ರಾಜ್ಯವನ್ನು ನಾಶಪಡಿಸಲಾಗುವುದೆಂದು ನಾನು ಹೇಳುವಾಗ ಅದಕ್ಕೆ ನೀ ರನವ್ನು ಕಂಡೊಡ್ಡುವ ಭಾವನೆ ಇಲ್ಲ ವೆ ಬದನ್ನು ಶ್ರೀ ಚರ್ಚಿಲ್‌ರವರು ಒಂದುಸಾರಿಯಾದರೂ ನಂಬಬೇಕೆಂದು ನಾನು ಸೂಚಿಸುತ್ತೇನೆ ಈ ಹೋರಾಟ ವು ಇನ್ನು ಮುಂದೆಯೂ ಮುಂದುವರಿದೆ ನಮ್ಮಬ್ಬರಲ್ಲಿ ಒಬ್ಬರು ನಾಶವಾಗುವುದು ಖಂಡಿತವೆಂದು ನಾನು ನಂಬಿದ್ದೇನೆ ಜರ್ಮನಿಯು ನಾಶವಾಗುವುದೆಂದು ಶ್ರೀ ಚರ್ಚಿ ಲ್ಲರು ನಂಬಿದ್ದಾರೆ ಬ್ರಿಟನ್ ನಾಶವಾಗುವುದೆಂದು ನಾನು ನಂಬಿದ್ದೇನೆ ಸೂಕ್ತು ಪರಕಾಗವಾದವನಂತೆ ನಾನು ಮಾತನಾಡುವದಿಲ್ಲ ಜಯಭೇರಿ ಹೊಡೆದವನಂತೆ ಮಾತ ನಾಡುತ್ತಿದ್ದೇನೆ ಈ ಹೋರಾಟವು ಇನ್ನು ಮುಂದುವರಿ ಯುವುದೆ ಕಾಳಜನೇನೂ ಇಲ್ಲವೆಂದೇ ನನ್ನ ಭಾವನೆ ಲಕ್ಷಾಂತರ ಪ್ರಜೆಗಳನ್ನು ಬಲಿಕೊಡುವುದನ್ನು ತಪ್ಪಿಸ ಬೇಕೆಂಬುದೇ ನನ್ನ ಇಷ್ಟ ಹೆದರಿಕೊಂಡು ಈ ರೀತಿ ಮಾತನಾಡುತ್ತಿದ್ದಾನೆ ಜಯದ ಅಲಿಯು ಆತನಲ್ಲಿಲ್ಲ' ಎಂಬುದಾಗಿ ಶ್ರೀ ಚರ್ಚಿಲ್‌ರವರು ಭಾವಿಸಿ ಈ ನನ್ನ ಹೇಳಿಕೆಯನ್ನು ಮೂಲೆಗೆ ತಳ್ಳುವರೇ ? ಹಾಗಾದಪಕ್ಷ ದಲ್ಲಿ, ಮುಂದೆ ಸಂಭವಿಸುವ ಘಟನೆಗಳ ವಿಚಾರದಲ್ಲಿ ನನ್ನ ಮನಸ್ಸಿಗೆ ವ್ಯಾಕುಲವಿರುವುದಿಲ್ಲ" ಎಂದು ಹೇಳಿ ತನ್ನ ಭಾಷಣವನ್ನು ಮುಕ್ತಾಯಗೊಳಿಸಿದರು

ವಾಯುಮುತ್ತಿಗೆಯಿಂದ ಜರ್ಮನರಿಗೆ ಅಪಾರ ನಷ್ಟ!

೧೩ ನೆಯ ತಾರೀಖಿನ ದಿವಸ ಬ್ರಿಟಿಷ್ ವಿಮಾನಗಳು ಬೈಮನಸ್ಥಲದಿರುವ ನೌಕಾ ನಿರ್ಮಾಣ ಕಾರ್ಖಾನೆಯ ಮೇಲೂ ವಿಮಾನ ಫ್ಯಾಕ್ಟರಿಯ ಮೇಲೂ ೧ ಘಂಟೆಯಕಾಲ ವಾಯುಮುತ್ತಿಗೆಯನ್ನು ನಡೆಯಿಸಿ ಭಯಂಕರ ರೀತಿಯಲ್ಲಿ ಸ್ಫೋಟವಾಗುವ ಬಾಂಬು ಗಳನ್ನು ಎಸೆದವು ಇದರಿಂದ ಡಾಕ್ ಭವನ ಗಳೂ ರೈಲ್ವೆ ಲೈನುಗಳು ನಷ್ಟಕ್ಕೆ ಒಳಗಾದವು ಡೀಚ್‌ಸ್ ಹಾಹ್ನ್ ಎಂಬಲ್ಲಿರುವ ವಿಮಾನ ಫ್ಯಾಕ್ಟರಿಯ ಮೇಲೆ ಬಾಂಬುಗಳನ್ನು ಸುರಿಸಿದವು ನೋಹ್ಮ್‌ನಲ್ಲಿರುವ 'ಮಿನರಲ್ ಆಯಿಲ್' ಕಂಪನಿಯ ಮೇಲೆಯೂ, ಎಣ್ಣೆ ಟ್ಯಾಂಕುಗಳ ಮೇಲೆಯೂ, ಹ್ಯಾಂಬರ್ಗ್‌ನಲ್ಲಿರುವ ಸಕ್ಕರೆ ವಸ್ತುಗಳ ನಿರ್ಮಾಣ ಕಾರ್ಖಾನೆಯಮೇಲೂ, ಕೈಗಾರಿಕೆ ಕೇಂದ್ರಗಳಸಿದ ಸ್ಥಳಗಳಲ್ಲಿರುವ ರೈಲ್ವೆ ಜಂಕ್ಷನ್‌ಗಳ ಮೇಲೂ ಬಾಂಬುಗಳನ್ನು ಸುರಿಸಿದವು ಸೋಯಸ್ಟ್ ಎಂಬಲ್ಲಿ ಬ್ರಿಟಿಷ್ನಿನ ವಿಮಾನಗಳು ಮೊದಲು ವಾಯು ಮತ್ತಿಗೆಯನ್ನು ನಡೆಸಿದ ಪ್ರಯುಕ್ತ ೪೫ ಕಡೆಗಳಲ್ಲಿ ಬೆಂಕಿಹತ್ತಿಕೊಂಡು ಉರಿಯ ಲಾರಂಭಿಸಿತು ಆನೆ ಲೆಬಂಎ ಆರ್ ಎಫ್ ವಿಮಾನಗಳು ಇದನ್ನು ನೋಡಿ ಮತ್ತೆ ಬಾಂಬುಗಳನ್ನು ಎಸೆಯು ವುದರಿಂದ ಫಲವಿಲ್ಲವೆಂದು ಭಾವಿಸಿ ಹಿ ದಿರುಗಿದವು

ಒಂದುಕಾಸಿನ ಪೋಸ್ಟ್‌ಸ್ಟ್ಯಾಂಪು

ಬರ್ಮಾ ಸರ್ಕಾರದನರು ಒಂದು ಕಾಸಿನ ಪೋಸ್ಟ್ ಸ್ಟ್ಯಾಂಪುಗಳನ್ನು ಇದೇ ಆಗಸ್ಟ್ ಒಂದನೆಯ ತಾರೀಖಿ ನಿಂದ ಆಚರಣೆಗೆ ತರುವವರಾಗಿದ್ದಾರೆ ಪ್ರಸಂಚದ ಫ್ಲೈಟ್ಲಾ ಇಷ್ಟು ಕಡಿಮೆಬೆಲೆಯ ಸ್ಟ್ಯಾಂಪೇ ಇಲ್ಲವೆಂದು ಹೇಳಲಾಗಿದೆ ೬ ತೊಲ ತೂಕಕ್ಕಿಂತ ಕಡಿಮೆ ಇರುವ ಪತ್ರಪತ್ರಿಕೆಗಳಿಗೆ ೧ ಕಾಸಿನ ಸ್ಟ್ಯಾಂಪು ಹಚ್ಚಬೇಕೆಂದು ನಿರ್ಧರಿಸಿದುದೇ ಈ ಹೊಸ ಸ್ಟ್ಯಾಂಪುಗಳನ್ನು ತಯಾರಿ ಸಲು ಕಾರಣವೆಂದು ತಿಳಿದುಬರುತ್ತದೆ

ಶ್ರೀ ಶೈಲ ಸೂರ್ಯಸಿಂಹಾಸನದ ನೂತನ ಜಗದ್ಗುರು ಮಹಾಸ್ವಾಮಿಯವರು ತಮ್ಮ ಅಧಿಕಾರ ಸಮಯದಲ್ಲಿ ಅಪ್ಪಣೆ ಕೊಡಿಸಿದ ಭಾಷಣ

ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿಯ ಅಳವಟ್ಟಫಲವೆನೆಯು ಅರ್ಜನೀಯವಾದುದು. ಪಂಡಿತಾರಾಧ್ಯ ಜಗದ್ಗುರುವಿನ ಮಹಿಮೆಯು ಜಗದ್ವಿದಿತವಾದುದು ದೈವಬಲವು ತೆರೆಯ ಮರೆಯಲ್ಲಿರುವ ಸೂತ್ರಧಾರಿಯಂತೆ ಗೌಣ್ಯವಾಗಿದ್ದ ಒಬ್ಬಿಲೆ ಹೊರಬಿದ್ದು ಸರ್ವರಿಗೂ ಆಶ್ಚರ್ಯವನ್ನುಂಟುಮಾಡಿರುವುದು ಅವರ ಆಗುಹೋಗುಗಳು ಹೀಗೆಯೇ ಎಂದು ನಿರ್ಣಯಿಸಲು ಸಾಧ್ಯವಿಲ್ಲ ಅಂತಹ ಯೋಗವೇ ಈಗ ನಪ್ಪನ್ನು ಆವರಿಸಿದೆ

೧೯೩೩ ನೆಯ ಇಸ್ವಿಯಲ್ಲಿ ಈ ಪೀಠಾರೋಹಣ ಕ್ಕಾಗಿ ಜಗದ್ಗುರ್ವಾಜ್ಞೆ ಯೋಗೀಶ್ವರರಾದ ಉಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ನಮ್ಮ ನಾಮನಿರ್ದೇಶನವನ್ನು ಮಾಡಿ ಆಗಲೇ ಅಧಿಕಾರ ನಡೆಯು ಸಚೇಕಾಯಿ ಬಹಳವಾಗಿ ಯತ್ನಿಸಿದರು ಆದರೆ ನಾವು ಆಗ್ಗೆ ಕೇವಲ ಸಾಹಿತ್ಯಮಧ್ಯಮ ಪರೀಕ್ಷೆಯ ಲ್ಲಿ ಮಾತ್ರ ತೇರ್ಗಡೆಯಾಗಿದ್ದುದರಿಂದ ಪಂಡಿತಾರಾಧ್ಯ ಪೀಠಕ್ಕೆ ಬೇಕಾಗಿ ವ ಪಾಂಡಿತ್ಯವು ನಮ್ಮಲ್ಲಿಲ್ಲವೆಂದು ಅಧಿಕಾರ ಸ್ಥೆ ಒಪ್ಪಲಿಲ್ಲ ಈ ವಿಷಯವು ಶ್ರೀಗುರುವರಿಗೆ ಒಪ್ಪಿಗೆಯಾಗಲಿಲ್ಲ ಆದುದರಿಂದ ನುಡಿದ ಪಂಡಿತರಾದ ಮೇಲಾ ದರೂ ತಮ್ಮ ವಚನವನ್ನು ಪಾಲಿಸುವಂತೆ ಒಪ್ಪಿಸಿಕೊಂ ಡರು ಇದು ಬಾರ್ಸಿಯಲ್ಲಿ ಹಂ|| ಶ್ರೀ ಕಾಶೀನಾಥ ಶಾಸ್ತ್ರಿಗಳವರ ಸಮಕ್ಷಮದಲ್ಲಿ ನಡೆದ ವಿಷಯ ಆ ಮಹಿಮರು ಕೃಪಾವಿಶೇಷದಿಂದ ನಮ್ಮ ೩ ಪಂಡಿತ ಪರೀಕ್ಷೆಗಳು ನಿರಾಯಾಸವಾಗಿ ತೇರ್ಗಡೆಯಾಗುವಲ್ಲದೆ ನಮಗೆಇನೇ ಆರ್ಷರ್ಯವನ್ನೆಂಟುಮಾಡುವ ಕಾವ್ಯ ಲೇಖನ ಕರ್ಷಕ್ಕೆ ಶಕ್ತಿಯೂ ಶೀಘ್ರವಾಗಿ ಲಭಿಸಿತು ೧೯೩೬ ನೆಯ ಇಸ್ವಿಯ ಭಾದ್ರಪದ ಗಣೇಶ ಚತುರ್ದಿಗೆ ಸರಿಯಾಗಿ ಕಾಶಿಯಿಂದ ಹುಬ್ಬಳ್ಳಿಗೆ ಬಂದುಮುಟ್ಟಿದೆವು ದೇಶಕ್ಕೆ ಬಂದುಮ. ಪೈದಮೇಲೆ ನಮ್ಮ ಕಾರ್ಯಕ್ರಮಗ ಳನ್ನು ಬೇರೆ ನಿಧವಾಗಿ ಜರುಗಿಸಬೇಕಾಗಿ ಬಂದಿತು ಆ ಕಾರ್ಯವು ಅಖಂಡ ವೀರಶೈವ ಸಮಾಜದ ಉನ್ನತಿ ಹಾಗೂ ಕರ್ನಾಟಕ ಸಾಹಿತ್ಯ ಸೇವೆಗೆ ಸಂಬಂಧಪಟ್ಟಿದ್ದು. ಆ ಕಾರ್ಯದ ಫಲಸ್ವರೂಪವಾಗಿ ಹರಿಹರದಲ್ಲಿ "ಶ್ರೀವೀರಶೈವ ಧರ್ಮಾಲಯ" ಎಂಬ ಸಂಸ್ಥೆಯು ಏರ್ಪಟ್ಟಿತು ಅಲ್ಲದೆ "ಧರ್ಮರಾಜ್ಯ ಪ್ರಿಂಟಿಂಗ್ ಪ್ರೆಸ್" ಸ್ಥಾಪನೆಯಾಯಿತು. ಇದು ತಾ|| ೨೭-೧೦-೧೯೩೯ ನೆಯ ಇಸ್ವಿಯಲ್ಲಿ ಆರಂಭವಾಯಿತು "ಧರ್ಮರಾಜ್ಯ" ವೆಂಬ ಮಾಸಪತ್ರಿಕೆಯು ಈ ಸಂಸ್ಥೆಯಿಂದಲೇ ಹೊರ ಹತ್ತಲಿದೆ ಈ ಕಾರ್ಯವಲ್ಲಿ ತತ್ಪರರಾಗಿರುವುದರಿಂದ ಶ್ರೀ ಶೈಲಸಿಂಹಾಸನವು ನಮ್ಮನ್ನು ವಿಶ್ರಾಂತಿಗೊಸುಗ ಬಿಡಬಹುದೆಂದೂ ಬೇರೆ ವಟುವನ್ನು ಸ್ವೀಕರಿಸಬಹು ದೆಂದೂ ಪೂರ್ಣವಾಗಿ ನಂಬಿದ್ದೆವು. ಆದರೆ ಆ ನಂಬಿ ಗೆಯು ಗತಿಸಿದ ಉಜ್ಜಯಿನೀ ಜಗದ್ಗುರುಗಳವರಿಗೂ ಶ್ರೀಶೈಲ ಮಲ್ಲಿಕಾರ್ಜುನನಿಗೂ ಜಗದ್ಗುರು ಪಂಡಿತಾ ರಾಧ್ಯನಿಗೂ ಒಪ್ಪಿಗೆಯಾಗಿಲ್ಲವೆಂದು ತೋರುತ್ತದೆ. ಗತಿಸಿದ ಉಜ್ಜಯಿನೀ ಶ್ರೀ ಜಗದ್ಗುರುಗಳವರೇ ಎರಡ ನೆಯ ಅವತಾರದಿಂದ ಬಂದು ಈ ಅಧಿಕಾರವನ್ನು ನಮಗೇ ಮಹಸಚೇಕೆಂದು ಸಂಕಲ್ಪಿಸಿದ್ದರೋ ಎಂಬಂತೆ ಅವರ ಉತ್ತರಾಧಿಕಾರವನ್ನು ವಹಿಸಿರುವ ಉಜ್ಜಯಿನೀ ಶ್ರೀ ೧೦೮ ಜಗದ್ಗುರು ಸಿದ್ಧೇಶ್ವರ ಶಿವಾಚಾರ್ಯ ಮಹಾ ಸ್ವಾಮಿಗಳವರು ಈ ಕಾರ್ಯಭಾರವನ್ನು ವಹಿಸಿ ನಮಗೆ ನಮ್ಮ ಪೀಠಾಚಾರ್ಯರಾದ ಶ್ರೀ ೧೦೮ ಜಗದ್ಗುರು ನಾಗಲೂಟಿ ಫೆಟ್ಟಿವೃತ್ತಿ ಶಿವಾಚಾರ್ಯ ಮಹಾಸ್ವಾಮಿ ಗಳವರಿಂದ ಅಧಿಕಾರವನ್ನು ಕೊಡಿಸಿ ನಮ್ಮ ಮೇಲೆ ಸಮಾಜದ ದೊಡ್ಡ ಭಾರವನ್ನು ಹೊರಸಿದರೆಂಬುದು ಸರ್ವರಿಗೂ ವೇದ್ಯವಾದ ಅಂಶವೇ ಆಗಿದೆ.

ಕನ್ನಡ ನಾಡಿನಲ್ಲಿ ಈ ಪೀಠದ ವಿಚಾರವಾಗಿ 'ಏರ್ಪಡದ ವಿಷಮ್ಯ" ಎಂದು ಪ್ರತೀತಿಯುದೆ. ವಿಚಾರ ಮಾಡಿ ನೋಡಿದರೆ ಈ ಪ್ರತೀತಿಯು ಬಹು ಭಾಗದಿಂದ ಸತ್ಯವೆಂತಲೇ ತೋರುವುದು ಹೀಗಾಗಲು ಕಾರಣವೇನೆಂದು ಹುಡುಕಹೊರಟರೆ ಅವರ ಮೂಲವೇ ತೋರದಂತಾದೂ ಇಪ್ಪನ್ನು ಮಾತ್ರ ಹೇಳಬಹುದು —ಈ ಪೀಠವು ಸಕಲ ಭಾಷೆಗಳ ಪ್ರಾಂತದವರೊಡನೆ ತೆಲಕಾಲ ವಿಂವಿಟಿಗೆ ಸಮರಸವಾಗಿ ನಡೆಯಲು ಪ್ರಯತ್ನಿಸದಿರು ವಿಕೆ ಇದೊಂದು ಮಾತ್ರ ಒಡೆದು ತೋರುವುದು. ಪರ್ವತದ ವಿಷತ್ತು ಎಂಬ ಪ್ರತೀತಿಯಂತೂ ಈ ಪೀಠಕ್ಕೆ ಸಂದಿತೋ ತಿಳಿಯದಾಗಿದ ಶ್ರೀಶೈಲ ಮಲ್ಲಿಕಾ ರ್ಜುನನ ಭಕ್ತರು ತಮ್ಮ ಪೀಠಕ್ಕೆ ಬಂದಿರುವ ಈ ಅಪವಾ ದವನ್ನು ಕಾರ್ಯತಃ ಅಡಗಿಸಲು ಸಮರ್ಥರಿದ್ದಾರೆಂಬುದು ಜಗತ್ಪ್ರಸಿದ್ಧವಾಗಿದೆ ಈ ಸ್ಯಯತ್ನದಲ್ಲಿ ಮುಖ್ಯವಾಗಿ ಭಾಗವಹಿಸಲೋಸುಗವಾಗಿ ನೀವೆಲ್ಲರೂ ಸಲಿ ಇಂದು ನಮಗೆ ಕಂಕಣಧಾರಣವನ್ನು ಮಾಡಿದ್ದೀರಿ. ಇಂದು ನಿಂದ ಅಹೋರಾತ್ರವೂ ಪೀಠದ ಕೀರ್ತಿಗೆ ದುಡಿಯ ಬೇಕಾಗುವುದೆಂಬುದನ್ನು ನಾವು ಪೂರ್ಣವಾಗಿ ತಿಳಿದು ಕೊಂಡಿದ್ದೇವೆ

ಈ ಪೀಠಾಧಿಕಾರವನ್ನು ವಹಿಸುವ ವಿಚಾರವಾಗಿ ಇಷ್ಟು ಅವಸರವಾಗುವುದೆಂದು ಯಾರೂ ಭಾವಿಸಿದ್ದಿಲ್ಲ. ಶ್ರೀಜಗದ್ಗುರುಗಳವರಿಗೆ ಅಧಿಕತಾದ ಕಾಯಿಲೆಯುಂಟಾ ಗಿರುವುದೇ ಇಷ್ಟು ಅವಸರಕ್ಕೆ ಕಾರಣವಾಯಿತೆಂಬುದು ತಮ್ಮೆಲ್ಲರಿಗೂ ಗೊತ್ತಿದೆ ಶ್ರೀಗುರು ಮಲ್ಲಿಕಾರ್ಜುನನು ನಮ್ಮ ಜಗದ್ಗುರುಗಳವರಿಗೆ ಶಿಘ್ರವಾಗಿ ಆರೋಗ್ಯವ ಸ್ಪಿತ್ತ ಇನ್ನೂ ಕೆಲವುಕಾಲ ಜೀವಿಸುವಂತೆ ಮಾಡಿ ಈ ಸಂಸ್ಥಾನದ ಅನೇಕ ವಿಷಯಗಳ ಅನುಭವವು ಅವರಿಂದ ದೊರಯುವಂತಾಗಲೆಂದು ಆ ಪರಮಾತ್ಮನನ್ನು ಬೇಡಿ ಕೊಳ್ಳುತ್ತೇನೆ

ಪಂಚಪೀಠಗಳಲ್ಲಿ ನಮ್ಮ ಈ ಶ್ರೀಶೈಲ ಪೀಠವು ಬಹಳ ಹಿಂದುಳಿದಿದೆ ಎಂದೂ ಇದನ್ನು ಇತರ ಪೀಠಗ ಳಂತೆ ಶೀಘ್ರವಾಗಿ ಮುಂದಕ್ಕೆ ತರಬೇಕೆಂದೂ ಈ ಪೀಠ ದಮೇಲೆ ಭಕ್ತಿಯುಳ್ಳ ಸಜ್ಜನಿಕ ಜುನನ ಭಕ್ತರನೇಕರು ಅಪೇಕ್ಷಿಸುತ್ತಿರುವುದು ಸರಿಯಷ್ಟೆ ! ಹಾಗೆಯೇ ಇತರ ಪೀಠಗಳ ಆಚಾರ್ಯರೂ ಅಪೇಕ್ಷಿಸುತ್ತಿದ್ದರು ಈಗ ಈ ಪೀಠದ ಮೇಲೆ ನೂತನಾಧಿಕಾರಿಗಳು ಒಂದು ಅಲಂಕರಿ ಸಿದರೆಂದಮಾತ್ರಕ್ಕೆ ಅವರ ಆ ಬಯಕೆಯು ಫಲಿಸಿ ದಂತಾಗಲಿಲ್ಲ ಆ ನೆಮ್ಮ ಪೀಠಕ್ಕೆ ಇರತಕ್ಕ ಕುಂದುಕೊರತೆಗಳೇನು ? ವಾರ್ಷಿಕ ಆದಾಯ ವ್ಯಯ ಗಳೇನು ? ಚರಸ್ಥಿರಾಸ್ತಿಗಳ ವಿವರ ಮುಂತಾದವುಗಳೆಲ್ಲ ವನ್ನೂ ಕೂಲಂಕಷವಾಗಿ ತಿಳಿದು ಸರ್ವವಿಧದಲ್ಲಿಯೂ ಚಿಕ್ಕವರಾದ ನೆಮಗೆ ಸಹಾಯಕರಾಗಿ ಫಿಂತು ಬೆಂಬಲ ವಿತ್ತರೆ ಮಾತ್ರ ಶ್ರೀಶೈಲ ಪೀಠೋದ್ಧಾರ ವಿಷಯದಲ್ಲಿ ಇವರುಗಳು ಬಯಸಿದಿಗಳಿಂದ ತೋರಿಸುತ್ತಿರುವ ಆಸೆ ಕ್ಷೆಯು ಫಲಿಸಬಹುದೆಂದು ನಾವು ಭಾವಿಸುತ್ತೇವೆ. ಈ ವಿಚಾರವಾಗಿ ಚತುರಾಚಾರ್ಯರು ಬಹಳವಾಗಿ ಕಷ್ಟ ಪಡುವ ಕಾರಣವಿಲ್ಲ. ಕೇವಲ ಇವರುಗಳು ಜೊತ್ತ ಮನಸ್ಸುಮಾಡಿ ಸಹಾಯಕರಾದರೆ ಸಾಕು. ಇದರ ನಿದ ಕಾನನಾಗಿ ಈಗ ಉಜ್ಜಯಿನೀ ಪೀಠದ ಜಗದ್ಗುರುಗಳ ವರು ತಮ್ಮ ಕಷ್ಟಸಹ್ಯಗುಸ್ಟೆಲ್ಲಾ ಸಹಿಸಿಕೊಂಡು ಇಲ್ಲಿಗೆ ಆಗಮಿಸಿ ಬದ್ಧಕಂಕಣರಾಗಿ ಮಹಾಕಾರ್ಯವನ್ನು ಪೂ ರೈಸಿ ಮಹಾತೀರ್ಥರಾಯನ್ನು ಸಂಸಾದಿಸಿರುವಂತೆ ಬೇರೆ ಹೇಳಬೇಕಾಗಿಲ್ಲ. ರಂಭಾಪುರೀ ಜಗದ್ಗುರುಗಳವರು ಶುಭಾಶೀರ್ವಾದವನ್ನು ಕೋರಿದ್ದಾರೆ ಕಾಶೀ ಹಾಗೂ ಕೇದಾರಪೀಠಗಳ ಜಗದ್ಗುರುಗಳವರು ಇಲ್ಲಿಗೆ ಬಹಳ ದೂರವಾಗಿರುವುದಿಂದ ಅವರುಗಳು ದಯಮಾಡಿಸಲು ಸಾಧ್ಯವಾಗಿಲ್ಲವೆಂಬಂಶವು ಸರ್ವರಿಗೂ ತಿಳಿಮಷ್ಟಾಗಿದೆ.

ಅಖಿಲ ಭಾರತ ವೈವ-ವೀರಶೈವ ಧರ್ಮಸಿಂಹಾಸನ ಪಂಚಪೀಠಾಧಿಪತಿಗಳು ಸಾರ್ವಭೌಮರಾಗಿದ್ದಾರೆ. ಇವರ ತತ್ತ್ವಗಳೆಲ್ಲಾ ಎಂದಿಗೂ ಒಂದೇ ವಿಧವಾಗಿವೆ. ಧರ್ಮ ಸಾಮ್ರಾಜ್ಯದ ಸಾರ್ವಭೌಮರಾದ ಪಂಚಾಚಾರ್ಯರು ಎಂದಿಗೂ ವಿಕಾಭಿಪ್ರಾಯದಿಂದ ಸಾಗಿ ಕಾರ್ಯಗಳನ್ನು ನಡೆಯಸಬೇಕಾಗಿದೆ.

ಇದಕ್ಕಾಗಿಯೇ ಈ ಹಿಂದೆ ಪಂಚಾಚಾರ್ಯ ಸಮ್ಮೇ ಲನವನ್ನು ನಡೆಯಿಸಿರುದು ಎಂಬಾನು ಸರ್ವರಿಗೂ ತಿಳಿದ ವಿಷಯವಾಗಿದೆ. ಗತಿಸಿದ ಈ ಯಿಪೀ ಜಗದ್ಗುರುಗ ಳವರು ಸದರಿ ಪೀಠದಲ್ಲಿ ಈ ಸಮ್ಮೇಲನವನ್ನು ಮತ್ತೆ ಕೂಡಿಸಬೇಕೆಂದು ಸಂಕಲ್ಪಿಸಿದ್ದರು. ದೈವಗತಿಯು ಅದಕ್ಕೆ ಸಹಾನುಭೂತಿಯನ್ನು ಕೊಡಲಿಲ್ಲ. ಆ ಸಂಕಲ್ಪ ವನ್ನು ಈಗಿನ ಜಗದ್ಗುರುಗಳವರು ಪೂರ್ಣಗೊಳಿಸಬೇ ಕೆಂದು ಯತ್ನಿಸುತ್ತಿದ್ದಾರೆ.

ಪೀಠಾಧಿಪತ್ಯವನ್ನು ವಹಿಸುವುದು ಆರಂಭದಲ್ಲಿ ಬಹು ಸುಲಭವೆಂದು ತೋರಿದರೂ ಆ ಅಧಿಪತ್ಯದ ಉಪಯೋ ಗವನ್ನು ಕಾರ್ಯತಃ ಮಾಡಿ ತೋರಿಸುವಾಗ ಬಹಳ ಕಠಿಣವೆನಿಸುವುದು ಆಚಾರ್ಯನ ಸತ್ಪರೀಕ್ಷೆಯ ಕಾಲ ವೆ ಅದೇ ಎಂದು ಹೇಳಬಹುದು. ಹೀಗೆ ಅತ್ಯಂತ ಜವಾಬ್ದಾರಿಯುಳ್ಳ ಪದವಿಗೆ ಉಭಯ ಜಗದ್ಗುರುಗಳವರು ನಮ್ಮನ್ನು ವಿಕಕಾಲದಲ್ಲಿ ವಿರಿಸಿದ್ದಾರೆ. ಶ್ರೀಜಗದ್ಗುರು ಪಂಡಿತಾರಾಧ್ಯರ ಆಶೀರ್ವಾದ ಬಲದಿಂದ ಪೀಠದ ಉನ್ನತಿಯು ಆಗಬೇಕಾಗಿದೆ.

ನಮ್ಮ ಈ ಪೀಠವಿರವ ಆಂಧ್ರಪ್ರಾಂತವೂ ಕೂಡ ಬಹು ರೀತಿಯಿಂದ ಹಿಂದುಳಿದಿದೆ. ಇಲ್ಲಿಯೂ ವಿದ್ಯಾ ಪ್ರಚಾರವನ್ನು ಮೊಟ್ಟಮೊದಲು ಕೈಗೊಳ್ಳಬೇಕಾಗು ವುದು. ಆರಂಭದಲ್ಲಿ ಸಾಗುವ ಕಾರ್ಯವು ವಿದ್ಯಾ ರೂಪವಾಗಿದ್ದರೂ ಇದರ ಮೂಲಕ ಯತ್ನಿಸಬೇಕಾದ ಮಹತ್ಕಾರ್ಯಗಳು ಅನಂತವಾಗಿವೆ ಎಂಬುದನ್ನು ತಾವೆ ಲ್ಲರೂ ತಿಳಿದಿದ್ದೀರಿ ಈ ಮಹೋದ್ಯಮದಲ್ಲಿ ನಾವೆಲ್ಲರೂ ಏಕೀಭವಿಸಿ ಕಾರ್ಯಗಳನ್ನು ಮಾಡಿ ಪಂಚಪೀಠಗಳ ಹಾಗೂ ಅವುಗಳಿಗೆ ಸಂಬಂಧಿಸಿರುವ ಮುಖ್ಯಸ್ಥೀತ್ರಗಳ ಕೀರ್ತಿಯು ಅಚಂದ್ರಾರ್ಕವಾಗಿ ನೆಲೆಗೊಳ್ಳುವಂತೆ ಯತ್ನಿಸಿ ಧರ್ಮ-ರಾಷ್ಟ್ರ-ಭಾಷೆ ಇವುಗಳ ಸೇವೆಯನ್ನು ಮಾಡಲು ಸಿದ್ಧರಾಗೋಣ ! ಸರ್ವಜ್ಞ ಸಮಸ್ತಪ್ರಪಂಚ ವನ್ನೇ ದುಃಖಸಮುದ್ರದಲ್ಲಿ ಮುಳುಗಿಸಿರುವ ಭಯಂಕರ ಯುದ್ಧವು ಕೊನೆಗೊಂಡು ಸರ್ವಭೌಮರಿಗೆ ಜಯವಾಗಿ ಸರ್ವರೂ ಸುಖಿಗಳಾಗುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಹಾರೈಸಿ ನಮ್ಮ ಸಂದೇಶವನ್ನು ಮುಗಿಸುವೆವು.

ಪೋಲೆಂಡಿನ ಹೃದಯದ್ರಾವಕಸ್ಥಿತಿ.

ಅಮೆರಿಕೆಯ ವೈವಸಾಯಶಾಖೆಗೆ ಬಂದ ಸುದ್ದಿಯ ಪ್ರಕಾರ ಪೋಲೆಂಡಿನಲ್ಲಿ ೩॥ ಕೋಟಿ ಪ್ರಜೆಗಳು ಆಹಾರ ವಿಲ್ಲದೆ ಸಂಕಟಕ್ಕೊಳಗಾಗುವ ಸ್ಥಿತಿಯು ಪ್ರಾಪ್ತವಾಗಿರು ವದು. ಜರ್ಮನಿಯಂದ ಅಕ್ರಮಿಸಲ್ಪಟ್ಟಿರುವ ಕ್ಷೇತ್ರಗಳ ಲ್ಲಿ ೭॥ ಕೋಟಿ ಜನರಿಗೆ ಪೂರ್ಣ ಆಹಾರ ದೊರೆಯು ವಂತಿಲ್ಲ. ಇದಲ್ಲದೆ ೧॥ ಕೋಟಿ ಜನರು ಈ ಚಳಿಗಾಲ ದಲ್ಲಿ ಹೊಟ್ಟೆ ಬಟ್ಟೆಗಳಿಲ್ಲದೆ ತಾಪತ್ರಯಪಡಬೇಕಾಗಿದೆ ಈ ವರ್ಷ ಗೋಧಿಯ ಬೆಳೆಯು ಕಡಿಮೆಯಾಗಿರುವ ದಲ್ಲದೆ ಹೊರಗಿನಿಂದ ಬರುತ್ತಿದ್ದ 1240 ಲಕ್ಷ ಡಾಲರು ಗಳಷ್ಟು ಗೋಧಿಯು ಬರದಂತಾಗಿದೆ. ರಷ್ಯವು ಅಮೆರಿಕೆ ಯಿಂದ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಗೋಧಿ ಯನ್ನು ಕೊಂಡು-ಕೊಂಡಿರುವದನ್ನು ನೋಡಿದರೆ ರಷ್ಯ ದಲ್ಲಿಯೂ ಗೋಧಿಯ ಬೆಳೆಯು ಕಡಿಮೆಯಾಗಿದೆಯೆಂದು ಹೇಳಲೇಕಾಗಿದೆ

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪತ್ರಿಯೊಂದು ಗುರುವರ್ಗದ ಮಕ್ಕಳಿಗಾದರೂ ಶಿಷ್ಯರ ಮನೆಗಳಿರುತ್ತವೆ. ಆ ಮಹಾಧಿಕಾರಿಗಳು ಏಮವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರಲ್ಲಿ ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯ ಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು. ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ಕಷ್ಟ ಶಿಷ್ಯರ ಮನೆಗೇ ಗೊತ್ತಿಲ್ಲದೆ ಹೋಗಿವೆ. ಇವನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸ ರಾಗಿ ಮುದ್ರಣಗೊಳಿಸಿದ್ದೇನೆ. ಇವರಲ್ಲಿ ಬರೆಯುವ ವಿಷಯಗಳ ವಿವರವು ಚೆನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಪ್ರತಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅವರಲ್ಲಿರುವಂತೆ ವಿವರವನ್ನೆಲ್ಲಾ ಬರೆದು ಜಂಜಾಟರಹಿತವನ್ನಾಗಿ ಬಂದ ತಮ್ಮ ಶಿಷ್ಯರನ್ನು ಕಾಣುತಿರಬೇಕೆಂದು ಇವರಿಗೆ ಸಲಹೆ ಕೊಡುವುದಕ್ಕಿಂತ ಕಾಣಿಕೆಗಳನ್ನು ಹಲವಾರು ಸಲ ತೆಗೆದುಕೊಳ್ಳುವಂತೆ ಸುಲಭವಾದ ಮತ್ತು ಭದ್ರವಾದ ಬೈಂಡಿನ್ನು ಮಾಡಿಸಿದೆ.

ಬೆಲೆ ೦ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಾಸ್ತ್ರೋಕ್ತ ದಿವ್ಯೌಷಧಗಳು.

ಶ್ರೀ ಜಗದ್ಗುರು ಕೇದಾರಸಂಸ್ಥಾನದ ರಸಾಯನ ಶಾಲೆಯಲ್ಲಿ ತಯಾರಾಗತಕ್ಕ ರಸಾಯನ ಔಷಧಿಗಳು ಅತಿ ಸುಲಭ್ಯರುಯವಲ್ಲಿ ದೊರೆಯುವವು

ಔಷಧಿ ಹೆಸರು	ತೊಲಿ	ಮೂಲ್ಯ
ಅಭ್ರಕಭಸ್ಮ	೧	೩—೦—೦
ಮುಕ್ತಾಭಸ್ಮ	೧	೪೦—೦—೦
ಪ್ರವಾಲಭಸ್ಮ	೧	೦—೮—೦
ಸ್ವರ್ಣಮಕರಧ್ವಜ	೧	೩೦—೦—೦
ಸ್ವರ್ಣಚಂದ್ರೋದಯ	೧	೧೦—೦—೦
,, ತಿನೇ ಸಂಬರ್	೧	೮—೦—೦
ರಸಸಿಂಧೂರ	೧	೩—೦—೦
ಮಲ್ಲಸಿಂಧೂರ	೧	೪—೦—೦
ತಾಲಸಿಂಧೂರ	೧	೪—೦—೦
ಶಿಲಾಸಿಂಧೂರ	೧	೪—೦—೦
ಸ್ವರ್ಣವಂಗ	೧	೩—೦—೦
ತ್ರಿವಂಗ	೧	೧—೦—೦

ಭಸ್ಮಗಳು.

ಸ್ವರ್ಣಭಸ್ಮ	೧	೪೦—೦—೦
ರಜತಭಸ್ಮ	೧	೪—೦—೦
ತಾಮ್ರಭಸ್ಮ	೧	೦—೪—೦
ಲೋಹಭಸ್ಮ	೧	೦—೧೫—೦
ವಂಗಭಸ್ಮ	೧	೦—೪—೦
ನಾಗಭಸ್ಮ	೧	೦—೮—೦
ಹಿತ್ತಾಳೆಭಸ್ಮ	೧	೦—೪—೦
ಕಂಚಿನಭಸ್ಮ	೧	೦—೪—೦
ಜಸ್ತಭಸ್ಮ	೧	೦—೪—೦
ಮಂಡೂರಭಸ್ಮ	೧	೦—೪—೦
ಸ್ವರ್ಣಮಕ್ಷಿಕಾಭಸ್ಮ	೧	೦—೧೫—೦

ನೋಟ್—ಈ ಔಷಧಾಲಯದಲ್ಲಿ ಸರ್ವಪ್ರಕಾರದ ಲೇಹ, ಚೂರ್ಣ, ಗುಟಿಕಾ, ತೈಲ, ಘೃತ, ಗುಗ್ಗುಳಾದಿ ಔಷಧಿಗಳು ಸರ್ವತೋಗಳಿಗೆ ದೊರೆಯುವುವು

ವಿಳಾಸ—ಮ್ಯಾನೇಜರ,

ಆಯುರ್ವೇದ ರಸಾಯನಶಾಲಾ,

ಪೋಸ್ಟ್ ಓಫೀಮಕ, ಜಿಲ್ಲಾ ಗಢವಾಲ್ ಯು.ಪಿ.

ವೈದಿಕ ಶಿವಪೂಜಾವಿಧಿ.

ವೀರಶೈವರಿಗೆ ಮುಖ್ಯವಾಗಿ ಬೇಕಾಗಿರುವ ಈ ಮೇಲ್ಕಂಡ ಗ್ರಂಥವು ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರಿಂದ ವೈದಿಕಸಂಪ್ರದಾಯಾನುಸಾರವಾಗಿ ವಿರಚಿತವಾಗಿದ್ದು, ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಾಲಯದಲ್ಲಿ ಬಹು ಮುದ್ದಾಗಿ ಮುದ್ರಿತವಾಗಿದೆ. ಇಲ್ಲಿಯವರೆಗೆ ಅನೇಕ ಕಡೆಗೆ ಶಿವಪೂಜಾವಿಧಿಗಳು ಮುದ್ರಿಸಲ್ಪಟ್ಟಿವೆ ಆದರೆ ಮುದ್ರಾಪಕರಿಗೆ ವೈದಿಕಸಂಪ್ರದಾಯವು ಗೊತ್ತಿಲ್ಲದಿರುವುದರಿಂದ ಅನೇಕ ಕಡೆಗೆ ಮಂತ್ರಗಳು ಅಶುದ್ಧವಾಗಿ ಬಿದ್ದಿವೆ! ಅನೇಕರು ಆ ಅಶುದ್ಧ ಮಂತ್ರಗಳನ್ನೇ ಪರಿಸುತ್ತಿರುವರು. ಇದು ಅತ್ಯಂತ ವ್ಯಸನಕರವಾದ ವಿಷಯವಾಗಿದೆ ಆಲ್ಲದೆ ವೇದಮಂತ್ರಗಳನ್ನು ವೈದಿಕ ಸ್ವರಸಹಿತವಾಗಿ ಉಚ್ಚರಿಸಲೇಕಲ್ಲದೆ ಸ್ವರರಹಿತವಾಗಿ ಉಚ್ಚರಿಸುವಾರದಲ್ಲ! ಇಲ್ಲಿಯವರೆಗೆ ಮುದ್ರಿತಗಳಾಗಿರುವ ಯಾವ ಶಿವಪೂಜಾವಿಧಿಯಲ್ಲಿಯೂ ವೇದಮಂತ್ರಗಳಿಗಾಗಲಿ, ಶ್ರೀರುದ್ರಾಧ್ಯಾಯ-ಚಮಕಾಧ್ಯಾಯ-ಪುರುಷಸೂಕ್ತಗಳಿಗಾಗಲಿ ವೈದಿಕಸ್ವರಗಳು ಹಾಕಲ್ಪಟ್ಟಿಲ್ಲ ಮತ್ತು ಪವಮಾನವಿಭಾಗವೂ ಮಾಡಲ್ಪಟ್ಟಿಲ್ಲ-ಈ ಶಿವಪೂಜಾವಿಧಿಯಲ್ಲಿ ಈ ಕೊರತೆಯು ದೂರಮಾಡಲ್ಪಟ್ಟಿದೆ ಇದಕ್ಕಾಗಿ ಪಂಡಿತರು ಬಹು ಶ್ರಮವನ್ನು ವಹಿಸಿ ಋಗ್ವೇದ-ಯಜುರ್ವೇದಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲಿಸಿ ವೀರಶೈವಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದ್ದಾರೆ. ಈ ಪೂಜಾವಿಧಿಯಲ್ಲಿರುವ ವೈದಿಕಮಂತ್ರಗಳು ಯಾವ ವೇದದ ಯಾವ ಭಾಗದಲ್ಲಿರುವುದೆಂಬುದನ್ನು ಪಂಡಿತರು ವಿವರವಾಗಿ ತೋರಿಸಿದ್ದಾರೆ ಪ್ರತ್ಯಕ್ಷವಾಗಿ ನೋಡಿದ ಮೇಲೆ ಈ ಗ್ರಂಥವ ಮಹತ್ವವ್ಯತ ಕಂಡುಬರುವುದು. ಅಲ್ಲದೆ ಈ ಪೂಜಾವಿಧಿಯ ಅಂತ್ಯದಲ್ಲಿ—ಶಿವಸಹಸ್ರನಾಮಾವಳಿ, ಶಿವಾಷ್ಟೋತ್ತರ ಶತನಾಮಾವಳಿ, ಶಿವಕಗಚಿ, ಪಾರ್ವತೀದೇವೀನಾಮಾವಳಿ, ವೀರಭದ್ರನಾಮಾವಳಿ, ಭದ್ರಕಾಳೀದೇವೀನಾಮಾವಳಿ ಷಣ್ಮುಖಸ್ವಾಮಿನಾಮಾವಳಿ, ಶ್ರೀ ಪಂಚಾಚಾರ್ಯರ ನಾಮಾವಳಿಗಳು, ನಾನಾವಿಧ ಶಿವಸ್ತೋತ್ರಗಳು, ನಾನಾವಿಧ ದೇವೀಸ್ತೋತ್ರಗಳು, ನಾನಾವಿಧ ಗುರುಸ್ತೋತ್ರಗಳು ಮುದ್ರಿಸಲ್ಪಟ್ಟಿವೆ. ಒಟ್ಟಗೆ ಈ ಶಿವಪೂಜಾವಿಧಿಯು ಸರ್ವಾಂಗಸುಂದರವಾಗಿದ್ದು ಸರ್ವತೋಮುಖವಾಗಿ ಸ್ತುತ್ಯವಾಗಿದೆ. ಆದುದರಿಂದ ಪ್ರತಿಯೊಬ್ಬ ವೀರಶೈವರೂ ಈ ಪೂಜಾವಿಧಿಯನ್ನು ತರಿಸಿಕೊಂಡು ಇದರಲ್ಲುಕ್ತವಾಗಿರುವಂತೆ ಶಿವಪೂಜೆಯನ್ನು ಮಾಡಿ ಧನ್ಯರಾಗಬೇಕೆಂದು ಕೋರಿಕೆ ಬೆಲೆ ೧೨ ಆಣೆ. ವಿ ಪಿ. ಚಾರ್ಜು ಪ್ರತ್ಯೇಕ

ಮ್ಯಾನೇಜರ್,

ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಶಿವಾದ್ವೈತಮಂಜರಿ.

ಈ ಗ್ರಂಥವು ವೀರಶೈವಮತಗ್ರಂಥಗಳಲ್ಲೆಲ್ಲ ಶಿಖಾರತ್ನವೆಂತೊಪ್ಪುತ್ತಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಈ ಗ್ರಂಥವನ್ನು ಕಾಶ್ಮೀರದೇಶದ ಸ್ವಪ್ರಭಾನಂದ ಶಿವಾಚಾರ್ಯರೆಂಬ ಸ್ವಾಚೀನಾಚಾರ್ಯರು ರಚಿಸಿದ್ದಾರೆ ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಸಿದ್ಧಾಂತದ ರಹಸ್ಯವು ಬಹು ಹೃದಯಂಗಮವಾಗಿ ಪ್ರತಿಪಾದಿ ಸಲ್ಪಟ್ಟಿದೆ. ಈ ಗ್ರಂಥದ ಸರಣಿಯು ಬಹುಕಠಿನವಿದ್ದುದರಿಂದ ಇದರ ರಹಸ್ಯವನ್ನು ತಿಳಿಯಲು ಪಂಡಿತಜನ ಗಳಿಗೂ ಕೂಡ ಅಸಾಧ್ಯವಾಗಿತ್ತು. ಈ ಕೊರತೆಯನ್ನು ದೂರಮಾಡಿ ಇದರ ರಹಸ್ಯವ ಪ್ರತಿಯೊಬ್ಬರಿಗೂ ತಿಳಿಯಲೆಂಬ ಸದುದ್ದೇಶದಿಂದ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥಕ್ಕೆ ಬಹು ವಿಕಾಲವಾಗಿ ಕನ್ನಡ ಟೀಕೆಯನ್ನು ಬರೆಯಿಸಿದ್ದಾರೆ. ಈ ಮೂಲ ಗ್ರಂಥವು ಕೇವಲ ೩೮ ಪುಟಗಳಿಂದ ಕೂಡಿದ್ದರೂ ಇದಕ್ಕೆ ಕನ್ನಡ ಟೀಕೆಯು ೧೩೨೩ ಪುಟಗಳಷ್ಟಾಗಿದೆ. ಈ ಮಹಾಗ್ರಂಥಮುದ್ರಣಾರ್ಥವಾಗಿ ಪಂಡಿತರು ವಿಶೇಷ ದ್ರವ್ಯವನ್ನು ವ್ಯಯಮಾಡಿದ್ದಾರೆ ಇಂಥ ಮೊಹ್ಮದ್ಧಿದ್ಧಾಂತಗ್ರಂಥವು ಇಂದಿನವರೆಗೆ ಕನ್ನಡಭಾಷೆಯಲ್ಲಿ ಎಲ್ಲಿಯೂ ಮುದ್ರಿತವಾಗಿಲ್ಲವೆಂದು ಘೇಂಟಾಘೋಷವಾಗಿ ಹೇಳಬಹುದಾಗಿದೆ. ನಮ್ಮನ್ನಾಳುವ **ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಗ್ರಂಥದ ಯೋಗ್ಯತೆಯನ್ನು ಕಂಡು ಡಿಡಿಕೇಷನ್ನಿಗೆ ಅಪ್ಪಣೆಯನ್ನಿತ್ತಿರುವರಲ್ಲದೆ, ಈ ಗ್ರಂಥದಲ್ಲಿ ಶಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭುವಚಿತ್ರವನ್ನು ಸಹ ದಯಪಾಲಿಸಿರುವರು. ಇದರಿಂದ ಈ ಗ್ರಂಥದ ಯೋಗ್ಯತೆಯು ಎಷ್ಟರಮಟ್ಟಿಗಿರಬೇಕೆಂಬ ವಿಷಯವನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ಅಮೂಲ್ಯವಾದ ವೀರಶೈವಸಿದ್ಧಾಂತಗ್ರಂಥವನ್ನು ಪ್ರತಿಯೊಬ್ಬ ವೀರಶೈವರೂ ಅವಶ್ಯವಾಗಿ ತರಿಸಿಕೊಂಡು ಅದರಲ್ಲಿರುವ ಸಿದ್ಧಾಂತ ವಿಷಯಗಳನ್ನು ತಿಳಿದುಕೊಂಡು ಧನ್ಯರಾಗ ಬೇಕೆಂದು ಕೋರಿಕೆ. ಒಟ್ಟು ಈ ಮಹಾಗ್ರಂಥವು ೧೩೮೪ ಪುಟಗಳಿಂದ ಕೂಡಿದ್ದು ಒಳ್ಳೆ ಬೆಲೆಯುಳ್ಳ ಕಾಗದದಲ್ಲಿ ಮುದ್ರಿಸಲ್ಪಟ್ಟಿರುವದಲ್ಲದೆ ಬಹುಸುಂದರವಾದ ಬೈಂಡಿನಿಂದೊಡಗೂಡಿದೆ. ಪವಿತ್ರವಾದ ವೀರಶೈವ ಸಿದ್ಧಾಂತದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬರೂ ದುಡ್ಡಿನಕಡೆಗೆ ದೃಷ್ಟಿಯನ್ನಿಡದೆ ಈ ಗ್ರಂಥರತ್ನವನ್ನು ತರಿಸಿ ಕೊಂಡೇ ತೀರಬೇಕು ಈ ಮಹಾಗ್ರಂಥದ ಬೆಲೆ ಆ ರೂಪಾಯಿ. ಒಂದುರೂಪಾಯಿಗೆ ನಾಲ್ಕಾಣೆಯಂತೆ ಕಮಿಷನ್ ವಜಾ ಹೋಗಲಾಗಿ ೩ ರೂ. ಗೆ ದೊರೆಯುವುದು. ವಿ. ಪಿ. ಚಾರ್ಜು ೧ ರೂ. ೫ ಆಣೆ ಪ್ರತ್ಯೇಕ.

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.**

ಸ್ಯಾಲಸ್ಬ್ಯೂನಿನಮೇಲೆ ವಿಮಾನಧಾಳಿ

ಕಳೆದ 13ನೆಯ ತಾರೀಖಿನ ದಿವಸ ಹೈದ್ರಾಬಾದ್‌ದೇಶದ ಮೇಲೆ ಶತ್ರುಗಳು ಮೊದಲನೆಯದಾಗಿ ವಿಮಾನಧಾಳಿಯನ್ನು ನಡೆಯಿಸಿ 20 ಬಾಂಬುಗಳನ್ನು ಬೆಳ್ಳಿದರು ಇದರಿಂದ ಇಬ್ಬರಿಗೆ ತೀವ್ರಗಾಯಗಳಾದವು ಅವರಲ್ಲೊಬ್ಬ ಬ್ರಿಟಿಷ್ ವ್ಯಕ್ತಿಯಾದನು ಹಲವರಿಗೆ ಒಳ್ಳ ಸ್ವಲ್ಪ ಗಾಯಗಳಾಗಿವೆ.

ಬ್ರಿಟನ್ನಿಗೆ ಚಿಯಾಂಗ್ ಕೈಷೇಕ್‌ರ ಎಚ್ಚರಿಕೆ

ಚೀನಾಮಹಾಪ್ರಧಾನರಾದ ಚಿಯಾಂಗ್ ಕೈಷೇಕ್ ರವರು ಬ್ರಿಟನ್ನು ಬರ್ಮಾ ರಸ್ತೆಯವಿಚಾರವನ್ನು ಚೀನಾ ಜಪಾನ್ ಶಾಂತಿಯ ವಿಚಾರವನ್ನು ಒಂದುಗೂಡಿಸಿ ವಿಚಾರಿಸುವುದಾದರೆ ಬ್ರಿಟನ್ನು ಚೀನಾದ ವೈತ್ರಿಯನ್ನು ಕಳೆದುಕೊಳ್ಳುವೆದಲ್ಲದೆ, ಪೂರ್ವದೇಶಗಳಲ್ಲಿ ಅದಕ್ಕಿರುವ ಗೌರವಸ್ಥಾನವನ್ನು ಕಳೆದುಕೊಳ್ಳುವನೆಂದೂ, ಬರ್ಮಾ ರಸ್ತೆಯನ್ನುಮುಚ್ಚುವರಿಂದ ಪೂರ್ವದೇಶದ ಯುದ್ಧವು ಬಹಳಕಾಲ ನಡೆಯುವಂತೆ ತಡೆಯಬಹುದೆಂದು ತಿಳಿಸಿ ಕೊಂಡಿದ್ದರ ಅದು ತಪ್ಪೆದೂ, ಅದಕ್ಕೆ ಬದಲು ಈ ಕಾರ್ಯವು ಯುದ್ಧವನ್ನು ಇನ್ನೂ ಹೆಚ್ಚುಕಾಲ ನಡೆಯುವಂತೆ ಮಾಡುವುದೆಂದೂ, ಚೀನಾ ದೇಶವು ಯಾವ ಉದ್ದೇಶ ಸಾಧನೆಗಾಗಿ ಹೋರಾಡುತ್ತಿದೆಯೋ ಕಷ್ಟ ನಷ್ಟಗಳನ್ನು ಅನುಭವಿಸುತ್ತಿದೆಯೋ ಆ ಉದ್ದೇಶವನ್ನು ಸಾಧಿಸುವವರೆಗೆ ಶತ್ರುವನ್ನು ಕೆಳಗಿಡುವುದಿಲ್ಲವೆಂದೂ ತಿಳುಸಿಸಿದ್ದಾರೆ

ಮೆಡಿಟರೇನಿಯನ್ ಸಮುದ್ರದಲ್ಲಿ ನೌಕಾಯುದ್ಧ.

ಮೆಡಿಟರೇನಿಯನ್ ಸಮುದ್ರದಲ್ಲಿ ಇಟಲಿ ನೌಕೆಗಳಲಗೂ ಬ್ರಿಟಿಷ್ ನೌಕೆಗಳಗೂ ಯುದ್ಧವು ನಡೆಯಿತು ಇದರಲ್ಲಿ ಒಂದು ಒಲಯುತವಾದ ಇಟಲಿ ನೌಕಾಪಡೆಗೆ ನಷ್ಟವಾಯಿತು ಬ್ರಿಟಿಷ್ ನೌಕೆಗಳಿಗೆ ಅಪಾಯವಾಗಿಲ್ಲ ಇಟಲಿಯ ಪ್ರಕಟಣೆಯಂತೆ ಇಟಲಿಯಕಡೆಗೆ 29 ಮಂದಿ ಸತ್ತರೆಂದೂ, 69 ಜನರು ಗಾಯಗೊಂಡರೆಂದೂ, ಒಂದು ಇಟಲಿಯ ಲಿಸ್ಯಾಯರ್ ನೌಕೆಯು ಮುಳುಗಿ ಹೋಯಿತೆಂದೂ, ಒಂದು ಇಟಲಿಯ ಸಬ್‌ಮೇರಿನ್ ಹಿಂದಿರುಗಲಿಲ್ಲವೆಂದೂ, ತಿಳಿಸಬರುತ್ತಿದೆ

ಬ್ರಿಟನ್ನಿನ ಮಕ್ಕಳ ರಕ್ಷಣಾ ವ್ಯವಸ್ಥೆ

ಬ್ರಿಟನ್ನಿನ ಮಕ್ಕಳನ್ನು ರಕ್ಷಿಸಲು ಬೇರೆಕಡೆಗಳಿಗೆ ಕಳುಹಿಸಿಕೊಡುವ ವಿಷಯವಾಗಿ ಕಾಮನ್ಸ್ ಸಭೆಯಲ್ಲಿ ಬಂದ ಪ್ರಶ್ನೆಗೆ ಶ್ರೀ ಚರ್ಚಿಲ್‌ರು ಉತ್ತರಕೊಡುತ್ತ— "ಪರದೇಶಗಳಿಗೆ ಇಲ್ಲಿಂದ ಬತಕ ಮಕ್ಕಳುಗಳನ್ನು ಕಳುಹಿಸಿಕೊಡುವುದು ಅಷ್ಟು ಅಪೇಕ್ಷಣೀಯವಲ್ಲವೆಂದೂ, ನನ್ನ ಸ್ನೇಹ ಸರಿಸಿತಿಲ. ದೃಷ್ಟಿಯಿಂದ ನೋಡಿದರೆ ಮಕ್ಕಳನ್ನು ಕಳುಹಿಸುವುದಕ್ಕೆ ಕಾರಣವಿಲ್ಲವೆಂದೂ, ಒಂದು ವೇಳೆ ಮಕ್ಕಳನ್ನು ಕಳುಹಿಸಬೇಕಾಗಿ ಬಂದರೆ ಆಗ ಬಡವರು ಒಬ್ಬರಂಬ ಬೇವನ್ನು ಇಟ್ಟುಕೊಳ್ಳುವ ವಜ್ಜಿಲ್ಲವೆಂದೂ ಈ ಕಾರ್ಯಕ್ರಮವನ್ನು ಪ್ರಯೋಜನವರಿ ಸಲಾಗಿವರ್ಯೆಂದೂ, ಆಪತ್ತಿಗೆ ಸಿಕ್ಕಿದ ಪ್ರತ್ಯು ದೊನ್ನೆನಿರ್ಯ ಸರ್ಕಾರಗಳು ಮಕ್ಕಳನ್ನು ಕಳುಹಿಸಿ ಕೊಡಬೇಕೆಂದು ಮಾಡಿರುವ ಸೂಚನೆಗಳಿಗೆ ಕೃತಜ್ಞತೆಯನ್ನು ಸಮರ್ಪಿಸುವೇತಾಗಿರೆಯೆಂದೂ ಹೇಳಿದರು

ಸುಳ್ಳು ಸುದ್ದಿ ಹರಡಿದರೆ ದಂಡ

ಬ್ರಿಟಿಷ್ ಸರ್ಕಾರದ ಪ್ರಕಟನಶಾಖೆಯವರು ಬ್ರಿಟನ್ನಿನ ಸಮಸ್ತಪ್ರಜೆಗಳೂ ಈಗಿನ ಯುದ್ಧದ ವಿಷಯವಾಗಿ ನಿರಾಧಾರವಾದ, ಭಯೋತ್ಪಾದಕವಾದ ಸುಳ್ಳು ಸುದ್ದಿಗಳನ್ನು ಜನರಲ್ಲಿ ಹರಡದಂತೆಯೂ, ಅವರು ವಿನೇ ಚನೆಯಿಲ್ಲದೆ ಸಿಕ್ಕಿದೆಡೆ ಹೆಂಟಿ ಕೊಚ್ಚ್ಚದಂತೆಯೂ ತಡೆಯಲು ಕೆಲವು ಉಪಾಯಗಳನ್ನು ಹೊಡಿ ಅವುಗಳನ್ನು ಕಳೆದ 12 ನೆಯ ತಾರೀಖಿನಿಂದ ಆಚರಣೆಗೆ ತಂದಿದ್ದಾರೆ. ಹೋಟಲು, ಕ್ಲಬ್ಬು, ಸಂಘ ಮತ್ತು ಸಮಾಜಗಳಲ್ಲಿ ಒಂದು ಗೋಲಕವನು ಸ್ಥಾಪಿಸಿದ್ದಾರೆ. ಯಾರಾದರೂ ವಿನೇಚನೆಯಿಲ್ಲದೆ ಯುದ್ಧ ಸಮಾಚಾರಗಳನ್ನು ಕುರಿತು ಮಾತನಾಡಿದಲ್ಲಿ ಅಂಥವರಿಂದ ದಂಡವನ್ನು ಮೊಲಲ್ಯಾಡಿ ಗೋಲಕಕ್ಕೆ ಹಾಕಿಸುತ್ತಾರೆ ಈ ರೀತಿ ಶೇಖರವಾದ ಹಣವನ್ನು ಧರ್ಮಕಾರ್ಯಕ್ಕೆ ಉಪಯೋಗಿಸುತ್ತಾರೆ

ಸ್ವೀಕಾರ.

ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಉಚ್ಚಂಗಿದುರ್ಗದ ಮರುಳಸಿದ್ಧೇಶ್ವರ ಮಠಾಧಿಪತಿಗಳಾದ ಶ್ರೀ ಮ ಹಾ ರು ದ್ರ ಮು ನೀ ಶ್ವ ರ ಸ್ವಾಮಿಗಳವರಿಗೆ ಹರೇಮ್ಯಾಗಳ ಗೌರಿ ಶ್ರೀರುದ್ರೇಶ್ವರ ವೈದಿಕ ಜ್ಯೋತಿಷ ಧರ್ಮಾರ್ಥ ಪಾಠಶಾಲಾ ಸ್ಥಾಪಕರಾದ ಶ್ರೀನೀಲಕಂಠ ಶಿವಾಚಾರ್ಯರಿಂದ ಗರ್ಭಾಧ್ಯನ ಲಿಂಗಧಾರಣವನ್ನು ಮಾಡಿಸಿದ ಸಮಯದಲ್ಲಿ ಪ್ರಭುಲಿಂಗಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ನೇಲ್ಮಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಲಪ್ಪತಲಿಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ೦—೩—೦

ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕಕಲ್ಯಾಣಾರ್ಥ ಅಗಸ್ತ್ಯ, ಪಥಿತಿ, ವ್ಯಾಸ, ಸಾನಂದ, ಮಾರ್ಕಂಡ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪಟಿಸಿಸುವ ಫೋಟೋ ಸೈಜು ೧೦×೧೪ ಬೆಲೆ ೦—೧೦—೬

ಸದ್ಯ: ಸೀಡಾಪೋಸ್ಟದಮೂಲಿರಕ್ಕೆ ಇವರು ಆಚಾರ್ಯರು ಒಂದರಲ್ಲಿದ್ದೇ ಇರುವ ಫೋಟೋ ಸೈಜು ೨೪×೧೦ ಬೆಲೆ ೦—೧೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೦ ೦—೦—೬

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೪ ಬೆಲೆ ೧೪ ೦—೦—೪

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತಾರಿರುವ ಫೋಟೋ ೦—೨—೯

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೦—೯

ಶ್ರೀ ರೇಣುಕಾಚಾರ್ಯರು ನಿಧಿಕಣಜ ಸ್ಯಾರ್ಥವಾನುಷಾಠಾನಿಗಿ ಪಶ್ಚಾತ್ತಾಪದಲ್ಲಿರುವ ಸಮಯದಲ್ಲಿ ಸುಮಾರುಕೋಟಿ ಗುರುರೂಪವನ್ನು ಧಾರಣಮಾಡಿ ಮೂರುಕೋಟಿ ಶಿವರೂಪಗಳನ್ನು ಪ್ರತಿಷ್ಠಿಸುವ ಫೋಟೋ ೧೪ ೦—೨—೯

ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಸೂಲಿಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೯

ಶ್ರೀಚಾಕ್ಷೇತ್ರಸಿಂಹಾಸನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂರ್ತಿಗಳಿಗೆ ಪೂಜೆ ಮಾಡುವ ಫೋಟೋ ೦—೮—೯

ಶ್ರೀ ಕಾಶೀ ಸಿಂಹಾಸನಾಧಿಷ್ಠಿತ ಶ್ರೀ ಜಗದ್ಗುರು ಪಂಚಾಕ್ಷರ ಶಿವಾಚಾರ್ಯರ ಫೋಟೋ ೦—೨—೯

ಶ್ರೀಮಜ್ಜಯಣೀ ಸಿಂಹಾಸನಾಧಿಷ್ಠಿತ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೨—೯

ಶ್ರೀಮದ್ರಂಭಾಪುರೀ ಸಿಂಹಾಸನಾಧಿಷ್ಠಿತ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೦—೯

ಶ್ರೀಮ ಜ್ಜಯಣೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪದೇಶಿಸುವ ಫೋಟೋ ೦—೦—೯

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ ಬೆಲೆ ೧೫ ೦—೦—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪ ೦—೦—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ ೦—೦—೬

ಶ್ರೀ ಜಗದ್ಗುರು ಕೇದಾರನಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೦—೬

ಹಿಮಾವೃತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ ೦—೦—೬

ಶ್ರೀರಂಭಾವ್ಯರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರು ವಿರಾಜಿಸುತ್ತಿರುವ ಫೋಟೋ ೦—೦—೬

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನಿರ್ಮಿಸಿರುವ ರಂಭಾಪುರೀ ಜಗದ್ಗುರುಗಳ ಅದ್ಭುತವಾದ ಮಹಾಮಂದಿರದ ಫೋಟೋ ೦—೦—೬

೪ ದೊಪಾಡುಗಳ ಮೇಲೆ ತರಿಸಿಕೊಳ್ಳುವವರಿಗೆ ೧ ರೂ ೧೫ ಆಣೆಯಾಂ ಕಮಿಷನ್ ಕೊಡಲಾಗುವುದು

ಸ್ಥಾನೀಯರ್—ಶ್ರೀ ಹೆಬ್ಬಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಹಾರ್ಟ್ ಜಿ. ಬಿ. ಯವರ

ಸುಗಂಧ ನಶ್ಯದಪುಡಿ

ತೋಕ್ಷಪ್ರಭಾವವಾದ ಈ ಸುಗಂಧ ನಶ್ಯದಪುಡಿಯು ಕಂಡುಹಿಡಿಯಲ್ಪಟ್ಟು, ಸಾವಿರಾರುಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರುಗಳಾಗಿ, ರೋಗ್ಯ ತಾಪತ್ರಯಗಳನ್ನು ಕೊಟ್ಟುಕೊಂಡಿರುವ ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾದಿಗಳು ಯಾವವೆಂದರೆ —ಸೀನಶಿ, ಒಂಟಿ ತಲೆನೋವು, ತಲೆಯಲ್ಲಿಯ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ನವೆಮ್ಯಾದಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ಕಂಠಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಸಹ ಹೆಚ್ಚುಮಾಡುತ್ತದೆ ಮೂರುಬೆಟ್ಟುಗಳ ಸಾಧಾರಣ ನಶ್ಯದ ನಂಗತ ಈ ಸುಗಂಧ ನಶ್ಯದಪುಡಿಯಲ್ಲಿ ಒಂದು ಚಿಟಿಕೆಯಷ್ಟು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವುದು. ಇವನ್ನು ಆನೇಕಪ್ರಭುಗಳು ಉಪಯೋಗಿಸುತ್ತಾರೆ ಮಾದರಿ ಸೀಸೆ ಫ್ರೀ ಬುಡ್ಡಿ ಒಂದಕ್ಕೆ ೪ ಆಣೆ ಡಜನ್ ಒಂದಕ್ಕೆ ಕ್ರಯ ರೂ. ೨-೮-೦ ವಿ.ಪಿ ಆ ಆಣೆ

ನಿಮ್ಮ ಆಜ್ಞೆಸ್ಸನ್ನು ತಿಲಯುವಂತೆ ಬರೆಯಿರಿ.

ಗುರುಬಸವ ಅಂಡ್ ಕಂಪೆನಿ ಲಿಮಿಟೆಡ್.

[11] ಫೋ. ಟಾ ೫೧೧, ಮದರಾಸು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಸಂಜಾಚಾರ್ಯ ಎಲೆಕ್ಟ್ರಿಕ್ ಪ್ರೆಸ್‌ನಲ್ಲಿ ಸಂಪಾದಕಳಾದ ಮೇಗಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಲೋಜನಸ್ಯುರು ಪಂಚಾಚಾರ್ಯಾಣಾಂ ಪ್ರಭೀಯಂತು ॥ REGISTERED No. M. 2266

ಪಂಚಾಚಾರ್ಯ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯನಸಂಜಾತಪಂಚಿಕರ್ ಪಂಚಾಸ್ಯಸೀರಾಧಿಪರ್ । ಪಂಚಕ್ಲೇಪವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಾಯಾಮಕರ್ ಪರಿಲಸತ್ಪಂಚಾಕ್ಷರೀಮೋಪಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೧ ರೂ. ೧೯ ಆಣೆ ಬಿಡಿ ಪ್ರತಿ ೧೪ಕ್ಕೆ ೬ ಪೈ ಪರಸ್ಥಳದವರಿಗೆ ೨ ರೂ ೪ ಆಣೆ ವಿ ಪಿ ಚಾರ್ಜು ಪ್ರತ್ಯೇಕ.

ಸಂಪುಟ ೧೪] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಜುಲೈ ೧೯೪೦ [ಸಂಚಿಕೆ ೧೩

ಜಪಾನಿನಲ್ಲಿ ಹಾರಾಡುವ ಸಬ್ ಮೆರಿನ್‌ಗಳು

ಕಳೆದ ಒಂದು ವರ್ಷದಿಂದ ಜಪಾನಿನಲ್ಲಿ ಆಕಾಶದಲ್ಲಿ ಹಾರಾಡುವ ಸಬ್‌ಮೆರಿನ್ಸಿನ ಪರೀಕ್ಷೆಯು ನಡೆಯುತ್ತ ದೆ ಆತಿ ಚಿಕ್ಕದಾದ ಈ ಯಂತ್ರವು ಪರಾಮರ್ಶಕರಿಗೆ ಬಹುದೊಂದು ಆಲೋಚನೆಯನ್ನು ಜಪಾನಿನಲ್ಲಿ ಹುಟ್ಟಿಸಿದ ಇದು ತೇಲಲು ೬-೭ ಗಜ ಉದ್ದವಿದ್ದು, ಸೀನಿನಲ್ಲಿ ಬೇಕಾದಷ್ಟ ತಪ್ಪಿಸಿಕೊಂಡು ಸಂಚರಿಸುವುದು

ಇದು ಜಪಾನಿನವರ ಹತ್ತಿರ ಇಂತಹ ೧೦ ಸಬ್ ಮೆರಿನ್‌ಗಳಿವೆ ಇವುಗಳ ಶಕ್ತಿಯು ಅಕಾರಾಗಿರುವದು ಇದು ಇಡೀ ಹಡಗು ಪಡೆಯನ್ನೇ ನಾಶಪಡಿಸಬಲ್ಲುದು ಇದು ಕೂಡಲೆ ಜನರನ್ನರ ಕೈಗೆ ೨೪೦೦ ಭಳವಿಲ್ಲ ವಿಕೆಂದರೆ—ಇದು ಜಪಾನಿಯರ ಕೋದ!

ಇತ್ತೀಚೆಗೆ ೧೫ ಮಂದಿ ಚಾಣಾಕ್ಷ ಇಂಜಿನಿಯರರಿಗೆ ಈ ಹೊಸ ಸಬ್‌ಮೆರಿನ್ಸಿನ ವಿವಿಧ ಸಾಹಸಗಳನ್ನೂ, ಆಟಗಳನ್ನೂ ತೋರಿಸಲಾಯಿತು ಇದು ನೀರಿನ ಆಡಿಯಲ್ಲಿ ಇತರ ಸಬ್‌ಮೆರಿನ್‌ಗಳಂತೆ ಹೋಗಬಲ್ಲುದಲ್ಲದೆ, ವಿಮಾನದಂತೆ ಆಕಾಶದಲ್ಲಿ ಹಾರಾ ಬಲ್ಲದು.

ಈ ಹೊಸ ಶೋಧವನ್ನು ನಡೆಯಿಸಿದ ಸಿ ಇ ಮಿಸೊನೊಮಾ ಎಂಬಾತನು ಮಿಸಿನಾಕ್ಕತಿಮ ಈ ಯಂತ್ರವನ್ನು ತಾನೇ ನಡೆಯಿಸಿ ಇದರ ಸಾಹಸವನ್ನು ತೋಡಬಂದವರ ಸಮಕ್ಷಮ ನೀರಿನಲ್ಲಿ ಮುಳುಗಿ ಮಾಯವಾದನು ಸುಮಾರು ಹತ್ತು ನಿಮಿಷಗಳಮೇಲೆ ಸಬ್‌ಮೆರಿನ್ ನೀರ ಮೇಲಕ್ಕೆ ಬಂದಿತು ಇದರ ಮೆಲ್ಬಾದಿಯಿಂದ ಮೊದಲು ನಾಲ್ಕು ಕೈಗಳು ಕಾಣಿಸಿಕೊಂಡವು ಆಗ ಇಡೀ ಸಬ್‌ಮೆರಿನ್ನೇ ನೀರಿನಿಂದ ಮೇಲಕ್ಕೆ ಏರಲು ಆರಂಭಿಸಿತು. ಸಬ್‌ಮೆರಿನ್ ನೀರ ಮೇಲಕ್ಕೆ ಬಂದ ಕೂಡಲೆ ಜಪಾನಿಯಲ್ಲಿಯೇ ಆಕಾಶದಲ್ಲಿ ಹಾರಾಡಹತ್ತಿತು

ಈ ಹಾರಾಡುವ ಮೀನು, ಅಪಾಯವಿಲ್ಲದೆ, ನೀರ ಕಡಿಯಲ್ಲೇ ೧೦೦-೧೫೫ ಮೈಲಿಗಳ ದೂರ ಹೋಗಬಲ್ಲದು. ಆಕಾಶದಲ್ಲಿ ಹಾರಲು ಉದಕ್ಕಮಿಸಿದರೆ, ತಾಸಿಗೆ ೬೦೦ ಮೈಲಿಗಳ ವೇಗದಲ್ಲಿ ಹೋಗುವುದು ಇದು ತನ್ನೊಳಗೆ ನಾಲ್ಕು ಟಾರ್ಪೆಡೋಗಳನ್ನು ಹೊರಬಲ್ಲದು. ಅದ ಶತ್ರು ಅತ್ಯಶಕ್ತಿಯ ಮೂರು ಇಂಜಿನುಗಳಿರುವ ಈ ಸಬ್‌ಮೆರಿನ್ ಹಗುರವಾದ ಲೋಹಿಹೆಂದ ತಯಾರಿಸಲ್ಪಟ್ಟಿದೆ. ಇದರ ಗರಿಗಳು ರೇಷ್ಮೆಯಿಂದ ತಯಾರಿಸಲ್ಪಟ್ಟಿರುವವು ಯುದ್ಧದ ಹಡಗಿನ ಮುಂದೆ ಇದು ಸೊಳ್ಳೆಯಂತೆ ಕಾಣಬಹುದು. ಆದರೆ ಈ ಸೊಳ್ಳೆ ಭಯಂಕರವಾದುದು ಹಡಗುಗಳ ಕುಲವನ್ನೇ ನಾಶಪಡಿಸಬಲ್ಲದು.

ಹಿಟ್ಲರನ ವ್ಯತಾಪ

ಹಿಟ್ಲರನು ತನ್ನ ಭಾಷಣದಲ್ಲಿ "ಜರ್ಮನರು ಮತ್ತು ಇಟಲಿಯನ್ನರು ಸೇರಿ ೨೦ ಕೋಟಿ ಜನರು ಯುದ್ಧ ಕ್ಕಾಗಿ ಸಿದ್ಧರಾಗಿರುವೆವೆಂದೂ, ಇವರಲ್ಲಿ ೬ ಕೋಟಿ ಜನರು ಮುಮ್ಮುಗುಂಡುಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ಹೊಡಿರುವರೆಂದೂ, ೧೩ ಕೋಟಿ ಜನರು ಸೈನಿಕರಾಗಿ ಯುದ್ಧದಲ್ಲಿ ಹೋರಾಡುವರೆಂದೂ, ಯುದ್ಧವು ಎಷ್ಟು ದಿವಸಗಳವರೆಗೆ ನಡೆದರೂ ಆಹಾರಸಾಮಗ್ರಿಗಳು ಸಿದ್ಧ ವಾಗಿರುವವೆಂದೂ, ಯುದ್ಧ ಸಾಮಗ್ರಿಗಳಂತೂ ಹೇರಳ ವಾಗಿರುವವೆಂದೂ" ಪ್ರತಾಪವನ್ನು ಕೊಚ್ಚಿಕೊಂಡಿರುವನೆ. ಜರ್ಮನಿ ಮತ್ತು ಇಟಲಿದೇಶಗಳ ಜನಸಂಖ್ಯೆ ೨೦ ಕೋಟ್ಯಂತರವೆಂಬ ? ಇವರಲ್ಲಿ ಯುದ್ಧಕ್ಕೆ ಬಲಯೋಗ್ಯವಾಗದ ಬಾಲಕಬಾಲಿಕೆಯರೆಷ್ಟು ? ಸ್ತ್ರೀಯರೆಷ್ಟು ? ವೃದ್ಧ ರೆಷ್ಟು ? ಎಂಬ ಶುದ್ಧವೆಯ್ದಿದೆ ಮಾತನಾಡಿರುವ ವಿಷಯ ವನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ ಇವನ್ನು ಯಾರಾದರೂ ನಂಬಬಹುದೇ ? ಹೀಗೆ ಹೇಳಿರುವುದು ವೃದ್ಧಪ್ರತಾಪವಲ್ಲದೆ ಬೇರೆಯಲ್ಲವೆನ್ನುವುದು ಕುರಲರಿಗೆ ತಿಳಿಯದೆ ಇರದು

ಹಿಟ್ಲರನ ಜಾತಕಫಲ

ಆಜ್ಯೂರ ಜ್ಯೋತಿಷ್ಯರೊಬ್ಬರು ಹಿಟ್ಲರನ ಜಾತಕ ದಂತೆ ಈ ತಿಂಗಳ 27ನೆಯ ತಾರೀಖಿನಿಂದ ಅವನಿಗೆ ಶನಿಕಾಟ ಪ್ರಾರಂಭವಾಗುವದೆಂದೂ ಅಲ್ಲಿಂದ ಮುಂದೆ ಅವನಿಗೆ ದಿನದಿನಕ್ಕೆ ಆಪಜಯವಾಗುತ್ತ ನಡೆದು ಆಗಸ್ಟ್ 9 ರಿಂದ 19 ರೊಳಗೆ ಅವನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಪಡುವನೆಂದೂ, ಈ ಪ್ರಯ ತ್ನದಲ್ಲೂ ಅವನು ನಿಷ್ಫಲನಾಗಿ ನೆಪೋಲಿಯನ್ನನಂತೆ ಬ್ರಿಟಿಷರ ಬಂದಿಯಾಗಿ ಯಾವುದೋ ದ್ವೀಪದಲ್ಲಿ ಜನ್ಮ ನೀಗುವನೆಂದೂ ಪ್ರಕಟಿಸಿರುತ್ತಾರೆ ಹಿಟ್ಲರನು ಹುಟ್ಟಿ ದುದು ತಾ॥ 20-4-1889 ನೆಯ ಸಾಯಂಕಾಲ 6½ ಘಂಟೆಯಂತೆ! ನೋಡಬೇಕು ಜ್ಯೋತಿಷ್ಯರ ಫಲವನ್ನ ?

ಶತ್ರುವಿಮಾನಗಳ ನಾಶ

ಕಳೆದ ೨೬ನೆಯ ಶುಕ್ರವಾರದಿನದವಸ ಬ್ರಿಟನ್ನಿನ ಅಗ್ನೇಯ ದಿಕ್ಕಿನ ಸಮುದ್ರ ತೀರದಲ್ಲಿ ಶತ್ರುಗಳ ೨ ವಿಮಾನಗಳನ್ನು ಹೊಡೆದುರುಳಿಸಲಾಯಿತು ಅವುಗಳಲ್ಲಿ 4 ವಿಮಾನ ಗಳನ್ನು ಬ್ರಿಟಿಷ್ ಫೈಟರ್ ವಿಮಾನಗಳು ಕೆಡವಿದವು. ಒಂದು ವಿಮಾನವು ವಿಮಾನಧ್ವಂಸಕ ಬಿರಂಗಿಗಳ ಬಿಟಿಗೆ ಸಿಲುಕಿ ನಾಶವಾಯಿತು. ಇತರ ಸಮುದ್ರ ತೀರ ಗಳಲ್ಲೂ 4 ಶತ್ರುವಿಮಾನಗಳು ಕೆಡವಲ್ಪಟ್ಟವು.

ಭಾರತದಲ್ಲಿ ವಿಮಾನ ಮುತ್ತಿಗೆ ಎಚ್ಚರಿಕೆ.

ಇಟಲಿಯು ಯುನ್ಯಾಂಟ್ಸ ಮಾಡಿದ್ದರಿಂದ ಯುದ್ಧ ಕ್ಷೇತ್ರವು ಭರತಖಂಡಕ್ಕೆ ಸಮಾಸಿಸಿದಂತಾಯಿತೆಂದು ಭಾವಿಸಿ ಇಂಡಿಯಾ ಸರ್ಕಾರದವರು ಸ್ಥಾನೀಯ ಸರ್ಕಾರ ಗಳ ಸಹಾಯದಿಂದ ವಿಮಾನ ಮುತ್ತಿಗೆ ಎಚ್ಚರಿಕೆ ಕಾರ್ಯ ಕ್ರಮಗಳನ್ನು ವಿಸ್ತರಿಸುತ್ತಿದ್ದಾರೆ ಮುತ್ತಿಗೆ ನಡೆಯ ಬಹುದಾದ ಸ್ಥಳಗಳಲ್ಲೆಲ್ಲಾ ತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ ಸೈನ್ಯಾಧಿಕಾರಿಗಳಿಗೂ ಮತ್ತು ಸಿವಿಲ್ ಅಧಿಕಾರಿಗಳಿಗೂ ಶತ್ರುವಿಮಾನಗಳ ಆಗಮನದ ಸುದ್ದಿ ಯನ್ನು ಮುಟ್ಟಿಸಲಾಗುವುದು ಈ ವ್ಯವಸ್ಥೆಯನ್ನು ಬ್ರಿಟನ್ನಿನಲ್ಲಿರುವಂತೆಯೇ ರಚಿಸಲಾಗಿದೆ. ಇದಕ್ಕಾಗಿ ಸಾವಿರಾರು ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗು ವದು

ಸ್ವೀಕಾರ.

ಬೆಳಾವಲಿ ತಾ॥ ಅರಕಲಗೂಡುಮಂಡಲದ ಶ್ರೀ ರೇಣುಕ ವಾಚನಾಲಯವನ್ನು ಸ್ಥಾಪಿಸಿದ ಸಮಯದಲ್ಲಿ, ಸ್ಥಾಪಕ ರಾದ ಶ್ರೀ ಚಿಕ್ಕವೀರೆಗೌಡಾಚಾರ್ಯಸ್ವಾಮಿಗಳವರು ಪ್ರಭಾ ಸ್ತೋಷಣಕ್ಕೋಸ್ಕರ] ರೂ ಯನ್ನು ತೆಗೆಯಿಸಿ ಕಳುಹಿ ಸಿದ್ದಾರೆ.

ರಾಯಚೂರು ಡಿ॥ ಕನಕಗಿರಿ ಹಿರಿಯಮಠದ ಶ್ರೀ॥ ಸಿದ್ಧರಾಮಯ್ಯನವರ ಪುತ್ರ ಚಿ॥ ವೀಹಾಂತಯ್ಯನಿಗೆ ಕಂದಗಲ್ಲು ಶಿಲಾನಂತರ ಸ.ರವ ಶ್ರೀ ಚನ್ನವೀರಶಾಸ್ತ್ರಿ ಗಳ ಪುತ್ರಿ ಚಿ॥ ಸೌ॥ ಹಂಪಮ್ಮನವ್ವನ್ನು ಕೊಟ್ಟು ನಡೆಯಿ ಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ] ರೂ. ಯ ವೀರಶೈವ ವಾಚನಾಲಯದ ಸೆಕ್ರೆಟರಿ ಮಿ॥ ರಾ॥ ಸಜ್ಜನರ ಸಂಗಪ್ಪನವರ ದ್ವಾರಾ ಕಳಿಸಿರುತ್ತದೆ.

ಶಿಕಾರಿಪುರ ತಾ॥ ಕಡೆನಂದಿಹಳ್ಳಿಯಲ್ಲಿರುವ ಮಿ॥ ರಾ॥ ಬಿ. ಹಂಪಪ್ಪನವರ ಪತ್ನಿಯವರಿಗೆ ಪ್ರಾಪ್ತವಾಗಿದ್ದ ಪ್ರಾಣಾಪಾಯದ ಬಾಣಂತಿ ಕಾಯಿಲೆಯು ಜಗದಾಚಾರ್ಯರ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ] ರೂ ಯನ್ನು ತೆಗೆಯಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಿಯಲೆಂದು ಹಾರೈಸುತ್ತೇವೆ.